ಟಿಪ್ಪು ಸುಲ್ತಾನ್ ಹಾಗೂ ಫ್ರೆಂಚರು: ಮಿಲಿಟರಿ ಮತ್ತು ರಾಜಕಾರಣ ನೆಲೆಯ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ
ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ವಿಶ್ವನಾಥ್ ಕೆ.ಎಸ್.

ಮಾರ್ಗದರ್ಶಕರು
ಡಾ. ಕೆ. ಮೋಹನ್‌ಕೃಷ್ಣ ರೈ
ಪ್ರಾಧ್ಯಾಪಕರು
ಚರಿತ್ರೆ ವಿಭಾಗ

ಚರಿತ್ರೆ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೬

769

ಟಿಪ್ಪು ಸುಲ್ತಾನ್ ಹಾಗೂ ಫ್ರೆಂಚರು:
ಮಿಲಿಟರಿ ಮತ್ತು ರಾಜಕಾರಣ ನೆಲೆಯ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ
ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ವಿಶ್ವನಾಥ್ ಕೆ.ಎಸ್.

ಮಾರ್ಗದರ್ಶಕರು

ಡಾ. ಕೆ. ಮೋಹನ್‌ಕೃಷ್ಣ ರೈ

ಪ್ರಾಧ್ಯಾಪಕರು

ಚರಿತ್ರೆ ವಿಭಾಗ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೧೭

ಮಾರ್ಗದರ್ಶಕರ ದೃಢೀಕರಣ ಪತ್ರ

ವಿಶ್ವನಾಥ್ ಕೆ.ಎಸ್. ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ಟಿಪ್ಪು ಸುಲ್ತಾನ್ ಹಾಗೂ ಫ್ರೆಂಚರು: ಮಿಲಿಟರಿ ಮತ್ತು ರಾಜಕಾರಣ ನೆಲೆಯ ಅಧ್ಯಯನ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಚರಿತ್ರೆ ವಿಭಾಗಕ್ಕೆ** ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ. ಕೆ. ಮೋಹನ್‌ಕೃಷ್ಣ ರೈ
ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೨೦.೦೨.೨೦೧೨

ಸಂಶೋಧಕರ ಘೋಷಣಾ ಪತ್ರ

ಟಿಪ್ಪು ಸುಲ್ತಾನ್ ಹಾಗೂ ಫ್ರೆಂಚರು: ಮಿಲಿಟರಿ ಮತ್ತು ರಾಜಕಾರಣ ನೆಲೆಯ ಅಧ್ಯಯನ ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ, ಚರಿತ್ರೆ ವಿಭಾಗದ ಪ್ರಾಧ್ಯಾಪಕರಾದ **ಡಾ. ಕೆ. ಮೋಹನ್‌ಕೃಷ್ಣ ರೈ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ವಿಶ್ವನಾಥ್ ಕೆ.ಎಸ್.
ಪಿಎಚ್.ಡಿ.ಸಂಶೋಧನ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ : 20/02/2017

ಪರಿವಿಡಿ

ಅಧ್ಯಾಯ ಒಂದು

ಪ್ರಸ್ತಾವನೆ

ಅಧ್ಯಾಯ ಒಂದು

ಪ್ರಸ್ತಾವನೆ

ಚರಿತ್ರೆಯ ವಸ್ತು ವಿಷಯವು ಮಾನವನ ಬದುಕಿನ ಚಿತ್ರಣವಾದ್ದರಿಂದ ಅದು ಸದಾ ಜೀವಂತ. ಮಾನವ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ನಡೆಸುವ ಹೋರಾಟ, ಹೊಂದಾಣಿಕೆ ಹಾಗೂ ಒಪ್ಪಂದಗಳು ಆಯಾ ಕಾಲಘಟ್ಟದ ಚರಿತ್ರೆಯಾಗಿ ರೂಪುತಳೆದವು. ಚರಿತ್ರೆ ನಿರಂತರ ಪ್ರಕ್ರಿಯೆಯಾಗಿದ್ದು, ಕ್ರಿಯಾಶೀಲವೂ, ಚಲನಶೀಲವೂ ಆಗಿದೆ. ಚರಿತ್ರೆ ರಚನೆಯನ್ನು ಪ್ರಶ್ನಿಸಿಕೊಂಡಾಗ ಯಾರು, ಹೇಗೆ, ಯಾಕಾಗಿ ಚರಿತ್ರೆಯನ್ನು ಬಳಸಿದರು ಎನ್ನುವುದಕ್ಕೆ ಚರಿತ್ರೆಯುದ್ದಕ್ಕೂ ನಡೆದು ಬಂದ ಸಾಂಸ್ಕೃತಿಕ ರಾಜಕಾರಣದ ಸ್ವಾರ್ಥ ವೇದ್ಯವಾಗುತ್ತದೆ. ಚಾರಿತ್ರಿಕ ಸನ್ನಿವೇಶಗಳನ್ನು ಯಥಾವತ್ತಾಗಿ ತಿಳಿಸದೆ ಒಂದು ಸೀಮಿತ ಪರಿಧಿಗೆ ಒಳಪಡಿಸಿದರೆ ಅದು ಆಯಾಕಾಲದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳನ್ನು ಪ್ರತಿಪಾದಿಸುವಲ್ಲಿ ಸೋಲಬೇಕಾಗುತ್ತದೆ. ಸಮಾಜ ಬದಲಾಗುತ್ತಿದೆ, ಮಾನವ ಬದಲಾಗುತ್ತಿದ್ದಾನೆ, ಪ್ರಾಪಂಚಿಕ ವಿದ್ಯಮಾನಗಳು ಬದಲಾಗುತ್ತಿವೆ ಎಂದರೆ ಚರಿತ್ರೆಯ ವಸ್ತು ವಿಷಯವೂ ಬದಲಾಗುತ್ತಿದೆ ಎಂದೇ ಗ್ರಹಿಸಬೇಕು. ಚಾರಿತ್ರಿಕ ಸನ್ನಿವೇಶಗಳನ್ನು ಪತ್ತೆ ಹಚ್ಚುವ, ಬದಲಾವಣೆಗಳನ್ನು ಗ್ರಹಿಸುವ ಸೂಕ್ಷ್ಮ ಸಂವೇದನೆಯು ಚರಿತ್ರೆ ಸಂಶೋಧಕರಿಗೆ ಇರಬೇಕು.

ಪ್ರಸ್ತುತ ಚರಿತ್ರೆಯ ಅಧ್ಯಯನದಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಚರಿತ್ರೆಯ ಜ್ಞಾನಶಿಸ್ತು ತನ್ನದೆ ಆದ ಹೊಸ ಆಯಾಮಗಳೊಂದಿಗೆ ತನ್ನನ್ನು ತಾನು ಅನಾವರಣಗೊಳಿಸುತ್ತಿರುವ ಸನ್ನಿವೇಶ ಈ ಹೊತ್ತಿನದು. ಪ್ರಸ್ತುತ ಸಂದರ್ಭದಲ್ಲಿ ಸಮಾಜವಿಜ್ಞಾನಗಳಲ್ಲಿ ಹೊಸ ಆಲೋಚನ ಕ್ರಮಗಳಿಗೆ ಹಿಂದೆಂದಿಗಿಂತಲೂ ಇಂದು ಹೆಚ್ಚಿನ ಒಲವುಗಳು ಕಾಣಿಸಿಕೊಳ್ಳುತ್ತಿವೆ. ಏಕೆಂದರೆ ಚರಿತ್ರೆ ಅಧ್ಯಯನ ಕ್ಷೇತ್ರದಲ್ಲಿ ಆಗುತ್ತಿರುವ ಹೊಸ ವಿಶ್ಲೇಷಣಾ ಕ್ರಮಗಳು, ಹೊಸ ಬಗೆಯ ಸಂಶೋಧನಾ ವಿಧಿ-ವಿಧಾನಗಳು ಚರಿತ್ರೆ ರಚನೆಯಲ್ಲಿ ಕಂಡುಬರುತ್ತಿವೆ. ಚರಿತ್ರೆಯಂಥ ಜ್ಞಾನ

ಶಾಖೆ ಕೇವಲ ಕೆಲವು ತೀರ್ಮಾನಗಳನ್ನು ನೀಡಿ ಮುಗಿಸುವ ಹಂತವನ್ನು ಮೀರಿ ಬಹಳ ಮುಂದಕ್ಕೆ ಸಾಗಿದೆ. ಒಂದು ಕಾಲಕ್ಕೆ ಗತವನ್ನು ಒಪ್ಪಿಕೊಳ್ಳುವ, ವೈಭವೀಕರಿಸುವ ಹಂತಕ್ಕೆ ಮಾತ್ರ ಅಧ್ಯಯನಗಳು ನೆಲೆನಿಂತಿದ್ದವು. ಆದರೆ ಇಂದು ಹೊಸ ಅನುಭವ, ಅನುಭೂತಿಗಳನ್ನು ಅಭಿವ್ಯಕ್ತಿಸುತ್ತಿರುವ ಜ್ಞಾನಶಾಖೆಯಾಗಿದೆ.

ವಸಾಹತು ಸನ್ನಿವೇಶದಲ್ಲಿ ಬ್ರಿಟಿಷ್ ಮತ್ತು ಪಾಶ್ಚಾತ್ಯ ಸೈದ್ಧಾಂತಿಕತೆಗಳಿಗೆ ಒಳಗಾದ ಮನೋಚಿಂತನೆಗಳು ಇಂದಿಗೂ ಅವುಗಳಿಂದ ಮುಕ್ತಗೊಂಡಿಲ್ಲ. ಚರಿತ್ರೆ ಎಂದರೇನು? ಎನ್ನುವ ಪ್ರಶ್ನೆಗೆ ಉತ್ತರವಾಗಿ ವಿಭಿನ್ನ ನೆಲೆಗಳಿಂದ ನೂರಾರು ವ್ಯಾಖ್ಯಾನಗಳು ಹುಟ್ಟಿಕೊಂಡವು. ಆದರೆ ಸಾಮಾನ್ಯವಾಗಿ ಚರಿತ್ರೆಯು ಅರಸುಮನೆತನಗಳಿಗಷ್ಟೇ ಸೀಮಿತಗೊಳಿಸಿ ಅದೊಂದು ನಡೆದುಹೋದ ಘಟನೆ ಎನ್ನುವ ತೀರ್ಮಾನವನ್ನು ಕೊಡುವ ಅಧ್ಯಯನಗಳ ಸಂಖ್ಯೆಯೇ ಹೆಚ್ಚಿನದು. ರಾಜ್ಯವನ್ನು ರಾಜಮನೆತನದ ಖಾಸಗಿ ಚಟುವಟಿಕೆ ಎಂಬರ್ಥದಲ್ಲಿ ನೋಡಲಾಯಿತೇ ಹೊರತು ಸಾಮಾಜಿಕ ಪ್ರಕ್ರಿಯೆಯ ಸಾವಯವ ಅಂಗವಾಗಿ ನೋಡಲಿಲ್ಲ. ಹೀಗಾಗಿ ಚರಿತ್ರೆಯೆಂಬುದು ರಾಜರ ಚರಿತ್ರೆ ಅಥವಾ ರಾಜಕೀಯ ಚರಿತ್ರೆ ಎನ್ನುವ ಸೀಮಿತ ಅರ್ಥವನ್ನು ಪಡೆದುಕೊಂಡಿತ್ತು. ರಾಜ್ಯ ಎನ್ನುವುದು ಒಂದು ನಿರ್ದಿಷ್ಟ ಭೌಗೋಳಿಕ ಸೀಮೆಗೆ ಸಂಬಂಧಿಸಿದ್ದಾಗಿದೆ. ಅದರಲ್ಲಿ ರಾಜ, ಮಂತ್ರಿ, ಅಧಿಕಾರಿಗಳು, ಪ್ರಜೆಗಳು ಎಲ್ಲರೂ ಇರುತ್ತಾರೆ. ಇವರ ಪರಸ್ಪರ ಸಂಬಂಧಗಳು ಪೂರಕವಾಗಿರುತ್ತವೆ. ರಾಜ ಅಥವಾ ರಾಜಮನೆತನಗಳ ಚರಿತ್ರೆ ಒಂದು ಭಾಗ ಮಾತ್ರ. ಅದೇ ಚರಿತ್ರೆಯಾಗಲು ಸಾಧ್ಯವಿಲ್ಲ. ಹೀಗಾಗಿ ವ್ಯಕ್ತಿಕೇಂದ್ರಿತ ಚರಿತ್ರೆಗಿಂತ ರಾಜ್ಯ ಜನಕೇಂದ್ರಿತ ಚರಿತ್ರೆ ರಚನೆಯಾಗಬೇಕಾಗಿದೆ. ಯಾವುದೇ ಪೂರ್ವಕಲ್ಪಿತ ವಿಷಯಗಳು ಪ್ರಭಾವಿಸುವಂತಿರಬಾರದು. ಏಕೆಂದರೆ ಗತದ ಸನ್ನಿವೇಶಗಳಿಗೂ ವರ್ತಮಾನದ ಸನ್ನಿವೇಶಗಳಿಗೂ ವ್ಯತ್ಯಾಸಗಳಿರುತ್ತವೆ. ಪೂರ್ವಗ್ರಹ ಪೀಡಿತರಾಗಿ ಚರಿತ್ರೆಯ ಘಟನೆಗಳನ್ನು ದಾಖಲಿಸಿದರೆ ಅದು ವರ್ತಮಾನದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ಮೇಲೆ ವಿರೋಧಾಭಾಸ ಗಳನ್ನು ಉಂಟು ಮಾಡುತ್ತದೆ. ರಾಜಕೀಯ ಸ್ವಾರ್ಥ ಇಚ್ಛಾಶಕ್ತಿಗೆ ಅದು ಬಳಕೆಯಾಗುವ ಅಪಾಯವು ಇದೆ.

ವ್ಯಕ್ತಿನಿಷ್ಠವಾದ, ಪೂರ್ವಗ್ರಹ ಪೀಡಿತವಾದ ಹಾಗೂ ಮೊದಲೇ ಸಿದ್ಧಪಡಿಸಿದ ಪರಿಮಿತಿಯ ಒಳಗೆ ವ್ಯವಹರಿಸುತ್ತಿರುವ ಚಾರಿತ್ರಿಕ ಗ್ರಹಿಕೆ ಚರಿತ್ರೆಯನ್ನು ತನಗೆ ಬೇಕಾದಂತೆ ನಿರ್ವಚಿಸುತ್ತಿರುತ್ತದೆ. ತನಗೆ ಸರಿ ಎನಿಸಿದ್ದನ್ನು ಚರಿತ್ರೆಯ ಮೂಲಕ ಮಾನ್ಯ ಮಾಡಿಸುವ ಹಾಗೂ ತನ್ನ ಅಸ್ತಿತ್ವಕ್ಕೆ ಅಪಾಯಕಾರಿ ಎಂದು ಕಂಡುಬಂದುದ್ದನ್ನು ಚರಿತ್ರೆಯುದ್ಧಕ್ಕೂ ಅಪಾಯಕಾರಿಯಾಗಿತ್ತು ಎಂಬುದಾಗಿ ಬಿಂಬಿಸುವ ಪ್ರಯತ್ನವನ್ನು ಮಾಡುತ್ತಿರುತ್ತದೆ. ಕೆಲವೊಂದು ಸಂಘ-ಸಂಸ್ಥೆಗಳು, ಸಂಘಟನೆಗಳು ಚಾರಿತ್ರಿಕ ಸಂದರ್ಭಗಳನ್ನು ಧರ್ಮ, ಜಾತಿಯ ಸೂಕ್ಷ್ಮ ವಿಚಾರಗಳಿಗೆ ಬಳಸಿಕೊಳ್ಳುತ್ತಿವೆ. ಈ

ಮೂಲಕ ರಾಜಕೀಯ ಒತ್ತಾಸೆಗಳನ್ನು ಈಡೇರಿಸಿಕೊಳ್ಳುವ, ಅಧಿಕಾರವನ್ನು ಭದ್ರಪಡಿಸಿಕೊಳ್ಳುವ ಹುನ್ನಾರಗಳು ನಡೆಯುತ್ತಿವೆ. ಚರಿತ್ರೆಯನ್ನು ಅಚಾರಿತ್ರಿಕವಾಗಿ ಬಿಂಬಿಸುತ್ತಿರುವ ಪರಿಣಾಮವೇ ಇಂದು ಹೆಮ್ಮರವಾಗಿ ಬೆಳೆದು ನಿಂತಿರುವ ಕೋಮುವಾದ, ಹಿಂಸೆ ಹಾಗೂ ಭಯೋತ್ಪಾದನೆ. ಚರಿತ್ರೆ ವರ್ತಮಾನವನ್ನು ಗಟ್ಟಿಗೊಳಿಸುವಂತಿರಬೇಕೇ ಹೊರತು ಛಿದ್ರಗೊಳಿಸುವಂತಿರಬಾರದು, ಐಕ್ಯತೆಯನ್ನು ಬಲಗೊಳಿಸುವ ಹಾಗೂ ರಾಜ್ಯ ಮತ್ತು ರಾಷ್ಟ್ರದ ಏಕತೆಗೆ, ಸಾರ್ವಭೌಮತ್ವಕ್ಕೆ ಮತ್ತು ಸಹಬಾಳ್ವೆಗೆ ಧಕ್ಕೆ ಉಂಟಾಗದ ರೀತಿಯಲ್ಲಿ ಚರಿತ್ರೆ ರಚನೆಗೊಳ್ಳಬೇಕಾಗಿದೆ. ಚರಿತ್ರೆಯು ಇಂದು ಜಾಗತಿಕ ಮಟ್ಟದಲ್ಲಿ ಹೆಚ್ಚು ಚರ್ಚೆಗೆ ಗ್ರಾಸವಾಗುತ್ತಿದೆ. ವರ್ತಮಾನದ ಹಲವು ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುವ ಶಕ್ತಿಯಾಗಿ ಬೆಳೆದು ನಿಂತಿದೆ.

ವಸಾಹತೀಕರಣಕ್ಕೊಳಪಟ್ಟ ಇಲ್ಲಿನ ವಿದ್ವಾಂಸರು ಚರಿತ್ರೆಯನ್ನು ನೋಡುವ ದೃಷ್ಟಿಕೋನ ಬದಲಾಯಿತು. ಪ್ರಸ್ತುತ ರಾಷ್ಟ್ರೀಯ ನೆಲೆಗಟ್ಟಿನಿಂದಲೇ ಚರಿತ್ರೆಯನ್ನು ನೋಡಬೇಕೆನ್ನುವ ಬರವಣಿಗೆ ಮಾದರಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಇಂದು ಮಾರ್ಕ್ಸ್‌ವಾದಿ ಬರವಣಿಗೆಗಳು, ಸಬಾಲ್ಟ್ರನ್ ಚರಿತ್ರೆ ಅಧ್ಯಯನಗಳು ಹೆಚ್ಚು ಪ್ರಾಮುಖ್ಯತೆ ಪಡೆಯುತ್ತಿವೆ. ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ನೋಡುವಂತಹ ಮಾದರಿಯು ರಾಷ್ಟ್ರೀಯವಾದಿ ನೆಲೆಗಟ್ಟಿನಿಂದ ಚರಿತ್ರೆಯನ್ನು ನೋಡುವ ಕ್ರಮವನ್ನು ಪ್ರಶ್ನಿಸಿದರೂ ಬಹುತೇಕ ರಾಷ್ಟ್ರೀಯವಾದಿ ಚರಿತ್ರೆ ಬರವಣಿಗೆ ಹಾಕಿಕೊಟ್ಟ ಚೌಕಟ್ಟಿನೊಳಗೇ ಚರ್ಚೆಗಳಾದವು. ಮಾರ್ಕ್ಸ್‌ವಾದಿ ಚರಿತ್ರೆಯ ಯುನಿವರ್ಸಲ್ ಮಾದರಿಗಳನ್ನು ನವ ಮಾರ್ಕ್ಸ್‌ವಾದಿಗಳು ಪ್ರಶ್ನಿಸುವುದರೊಂದಿಗೆ ಅದರೊಳಗೂ ಹೊಸ ಆಲೋಚನಾ ಕ್ರಮಗಳು ಹುಟ್ಟಿಕೊಂಡವು. ಭಾರತದಲ್ಲಿ ಕಳೆದ ಎರಡೂವರೆ ದಶಕಗಳಿಂದ ಸಬಾಲ್ಟ್ರನ್ ಅಧ್ಯಯನ ಮಾದರಿಗಳು ಮತ್ತು ಚಿಂತನೆಗಳು ಪ್ರಚಲಿತದಲ್ಲಿರುವುದನ್ನು ಕಾಣಬಹುದು. ಕರ್ನಾಟಕದಲ್ಲಿ ಈ ಮಾದರಿಯ ಬರವಣಿಗೆಗಳು ಇತ್ತೀಚೆಗೆ ಕಂಡುಬರುತ್ತಿವೆ. ಈ ದೃಷ್ಟಿಯಿಂದ ಸ್ಥಳೀಯ ಚರಿತ್ರೆ ಸಂಶೋಧಕರಿಗೆ ಮುಖ್ಯವೆನಿಸಿದೆ.

ವಿನ್ಸೆಂಟ್ ಸ್ಮಿತ್, ಜೇಮ್ಸ್ ಮಿಲ್, ಲೇನ್‌ಪೂಲ್, ಮಾರ್ಕ್ಸ್‌ವಿಲ್ಕ್ಸ್ ಮುಂತಾದ ಸಾಮ್ರಾಜ್ಯಶಾಹಿ ಚರಿತ್ರೆಕಾರರು ದೋಷಿತ ಮನೋಚಿಂತನೆ ವ್ಯಕ್ತಮಾಡಿದರು. ಭಾರತೀಯರು ಚಾರಿತ್ರಿಕ ಜ್ಞಾನ ಇಲ್ಲದವರು, ಸ್ವಯಂ ಆಡಳಿತದ ಅನುಭವವಿಲ್ಲದವರು, ಸ್ವಾತಂತ್ರ್ಯಕ್ಕೆ ಅನರ್ಹರು ಎಂಬುದಾಗಿ ಹೇಳಿ ಬ್ರಿಟಿಷ್‌ರ ಆಡಳಿತವನ್ನು ಎತ್ತಿ ಹಿಡಿಯುವ ಪ್ರಯತ್ನ ಮಾಡಿದರು. ಭಾರತದ ಚರಿತ್ರೆಯನ್ನು ಹಿಂದು, ಮುಸ್ಲಿಂ, ಬ್ರಿಟಿಷ್ ಎಂಬುದಾಗಿ ವಿಂಗಡಣೆ ಮಾಡಿ ಕೋಮುವಾದಿ ಭಾವನೆಗಳು ಮೂಡುವಂತೆ ಪ್ರೇರೇಪಿಸುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡಿದರು. ಪೌರಾತ್ಯವಾದಿಗಳು ಮತ್ತು ಸಾಮ್ರಾಜ್ಯಶಾಹಿ ಚರಿತ್ರೆಕಾರರು ತಮ್ಮ ಪೂರ್ವಗ್ರಹ ಚಿಂತನೆಗಳನ್ನು ಅನುಷ್ಠಾನಕ್ಕೆ ತರಲು ಪೂರ್ವದ ಚರಿತ್ರೆಯನ್ನು ಮಾಧ್ಯಮವನ್ನಾಗಿ ಬಳಸಿಕೊಂಡರು. ವಸಾಹತುಶಾಹಿ

ಹಿನ್ನೆಲೆಯಿಂದ ರಚನೆಗೊಂಡ ಕೃತಿಗಳು ಹಾಗೂ ಮೂಡಿಬಂದ ಭಾವನೆಗಳನ್ನು ಸಮರ್ಥವಾಗಿ ಎದುರಿಸಲು ರಾಷ್ಟ್ರೀಯವಾದಿ ಚರಿತ್ರಕಾರರ ವಿರೋಧಿ ಗುಂಪೊಂದು ಸಿದ್ಧವಾಯಿತು. ಆದರೆ ಈ ಪಂಥವು ಸಾಮ್ರಾಜ್ಯಶಾಹಿ ಚರಿತ್ರಕಾರರನ್ನು ವಿರೋಧಿಸುವ ನೆಪದಲ್ಲಿ ಅವರ ಹಲವಾರು ಅಭಿಪ್ರಾಯಗಳನ್ನು ತನ್ನ ಸಿದ್ಧಾಂತದೊಳಗೆ ಸೇರಿಸಿಕೊಂಡಿತು. ಹಿಂದು, ಮುಸ್ಲಿಂ, ಬ್ರಿಟಿಶ್ ಎನ್ನುವ ವರ್ಗೀಕರಣವನ್ನು ರಾಷ್ಟ್ರೀಯವಾದಿ ಚರಿತ್ರಕಾರರು ಒಪ್ಪಿಕೊಂಡು ಚರಿತ್ರೆ ನಿರ್ಮಿಸಿದರು. ಇವರು ಅರಸಕೇಂದ್ರಿತ ಚರಿತ್ರೆ ರಚಿಸಿದರು. ಇದರಲ್ಲಿ ಪ್ರಭುತ್ವಗಳ ವೈಭವೀಕರಣ ಕಂಡುಬಂದಿತು. ಆರ್.ಸಿ.ಮಜುಂದಾರ್, ಕೆ.ಪಿ.ಜಯಸ್ವಾಲ್, ಕೆ.ಎ.ನೀಲಕಂಠಶಾಸ್ತ್ರಿ, ಆರ್.ಜಿ.ಭಂಡಾರ್ಕರ್, ಹೇಮಚಂದ್ರರಾಯ್ ಮುಂತಾದ ಚರಿತ್ರಕಾರರು ಭಾರತದ ಚರಿತ್ರೆಯನ್ನು ಹೊಸದಾಗಿ ರಚಿಸುವ ಕೆಲಸ ಮಾಡಿದರು. ಇವರೆಲ್ಲರೂ ಹೆಚ್ಚಾಗಿ ಅರಸಕೇಂದ್ರಿತ ಮತ್ತು ಧರ್ಮಕೇಂದ್ರಿತ ಚಿಂತನೆಗಳಿಗೆ ಮಹತ್ವ ಕೊಟ್ಟರು.

ಏಕಮುಖವಾಗಿ ಅಥವಾ ಏಕಪಕ್ಷೀಯವಾಗಿ ಸಾಗುತ್ತಿದ್ದ ಭಾರತದ ಚರಿತ್ರೆ ಬರವಣಿಗೆ ದಿಕ್ಕನ್ನು ಬದಲಾಯಿಸಿದವರಲ್ಲಿ ಡಿ.ಡಿ.ಕೊಸಾಂಬಿ, ಆರ್.ಎಸ್.ಶರ್ಮ, ರೋಮಿಲಾ ಥಾಪರ್, ಡಿ.ಎನ್.ಝಾ, ಇರ್ಫಾನ್ ಹಬೀಬ್, ಬಿಪನ್ ಚಂದ್ರ, ಸುಮಿತ್ ಸರ್ಕಾರ್ ಮುಂತಾದವರು ಪ್ರಮುಖರು. ಇವರು ರಾಜಕೀಯದಿಂದ ದೂರವಾದ ಚರಿತ್ರೆಯತ್ತ ಒಲವು ತೋರಿದರು. ಜನರ ಅಧ್ಯಯನ ಇವರಿಂದ ಆರಂಭಗೊಂಡಿತು. ಚರಿತ್ರೆಯನ್ನು ಸಾಮಾಜಿಕ ಮತ್ತು ಆರ್ಥಿಕ ನೆಲಗಟ್ಟಿನಿಂದ ನಿರ್ಮಿಸುವ ಪ್ರಯತ್ನವು ಅಲಕ್ಷಿತ ವರ್ಗದ ಜನರಿಗೆ ನ್ಯಾಯವನ್ನು ಒದಗಿಸುವತ್ತ ಸಾಗಿತ್ತು. ರಾಜ್ಯದ ಏಳಿಗೆಗಾಗಿ ದುಡಿದ ಶ್ರಮಿಕವರ್ಗದ ಕೊಡುಗೆಗಳನ್ನು ಗುರುತಿಸುವ ಪ್ರಯತ್ನ ಇದಾಗಿತ್ತು.

ಮಾರ್ಕ್ಸ್‌ವಾದಿ ಮತ್ತು ಸಬಾಲ್ಟ್ರನ್ ಪಂಥದ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಕರ್ನಾಟಕದ ಚರಿತ್ರೆಯನ್ನು ಅಧ್ಯಯನ ನಡೆಸಿದ ಪ್ರಮುಖರೆಂದರೆ ಎಸ್.ಶೆಟ್ಟರ್, ಬಿ.ಸುರೇಂದ್ರರಾವ್, ಎಸ್. ಚಂದ್ರಶೇಖರ್, ಸೆಬಾಸ್ಟಿಯನ್ ಜೋಸೆಫ್, ಆರ್.ಎನ್.ನಂದಿ, ರಾಜಾರಾಮ ಹೆಗ್ಡೆ, ಅಶೋಕ ಶೆಟ್ಟರ ಇವರುಗಳ ಚರಿತ್ರೆ ಬರವಣಿಗೆಗಳು ಹಾಗೂ ಆಲೋಚನಾ ಕ್ರಮ ಅಲಕ್ಷಿತ ಸಮುದಾಯ, ಕೆಳಸ್ತರದ ಜನರ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಚರ್ಚಿತಗೊಂಡಿವೆ.

ಸಬಾಲ್ಟ್ರನ್ ಪಂಥವು ಇದುವರೆಗಿನ ಚರಿತ್ರೆಯ ಅಧ್ಯಯನವನ್ನು ನಿಜವಾದ ಚರಿತ್ರೆಯ ಕೇವಲ ಒಂದು ಭಾಗವಾಗಿದೆಯೆಂದು ಪರಿಗಣಿಸುತ್ತದೆ. ಸಮಾಜದ ಕೆಳಸ್ತರದ ಬಹುಸಂಖ್ಯಾತ ಜನರ ಚರಿತ್ರೆಯು ನಿಜವಾದ ಚರಿತ್ರೆಯಾಗಿದ್ದು, ಅದು ಶೋಷಣೆಗೆ ಒಳಗಾಗಿದೆ ಎನ್ನುವುದು ಅಂಟೋನಿಯೋ ಗ್ರಾಂಸ್ಸಿಯ ಅಭಿಪ್ರಾಯ. ರಣಜಿತ್‌ಗುಹಾ, ಪಾರ್ಥ ಚಟರ್ಜಿ, ಗ್ಯಾನೇಂದ್ರ ಪಾಂಡೆ, ಡೇವಿಡ್ ಅರ್ನಾಲ್ಡ್, ದಿಪೇಶ್ ಚಕ್ರವರ್ತಿ ಮುಂತಾದವರು ಸಬಾಲ್ಟ್ರನ್ ಪಂಥವು ಭಾರತದಲ್ಲಿ ಹೆಚ್ಚು ಪ್ರಚಾರ ಪಡೆಯುವಂತೆ ಮಾಡಿದರು.

ಟಿಪ್ಪು ಸುಲ್ತಾನನ ಮುಖ್ಯ ಸಾಧನೆಗಳಲ್ಲಿ ಅತ್ಯಂತ ಗಮನಾರ್ಹವಾದುದು ಆಕರಗಳ ಸಂಗ್ರಹ. ಇವನೇ ಹಲವಾರು ಆಕರಗಳನ್ನು ರಚಿಸಿದ್ದ. ಇತರರಿಗೆ ಆಕರಗಳನ್ನು ರಚಿಸಿ ಮತ್ತು ಸಂಗ್ರಹಿಸಲು ಆಸ್ಪದ ಮಾಡಿಕೊಟ್ಟಿದ್ದ. ಇದರಿಂದಾಗಿ ಇವನ ಕುರಿತು ಹಲವು ಭಾಷೆಗಳಲ್ಲಿ ಆಕರಗಳು ರಚನೆಯಾಗಿವೆ. ಈ ಆಕರಗಳು ಟಿಪ್ಪುವಿನ ಆಡಳಿತ ಕ್ರಮ, ವ್ಯಾಪಾರ–ವಾಣಿಜ್ಯ, ಸೈನಿಕ ಪದ್ಧತಿ, ಅಂತರ್ದೇಶಿ ಸಂಬಂಧ, ರಾಜಕೀಯ ವ್ಯವಹಾರ, ಧಾರ್ಮಿಕ ಧೋರಣೆ, ಆರ್ಥಿಕ ಆವಿಷ್ಕಾರಗಳು ಮೊದಲಾದ ವಿಚಾರಗಳನ್ನು ಒಳಗೊಂಡಿದೆ. ಈ ಆಕರಗಳೆಲ್ಲಾ ಇಂಗ್ಲೆಂಡ್, ಫ್ರಾನ್ಸ್, ಟರ್ಕಿ ಮತ್ತು ಭಾರತದ ಹಲವು ಪತ್ರಾಗಾರಗಳು ಮತ್ತು ಗ್ರಂಥಾಲಯಗಳಲ್ಲೂ ಇವೆ.

ಪ್ರಸ್ತುತ ಅಧ್ಯಯನಕ್ಕೆ ಸರ್ಕಾರದ ಗೆಜೆಟಿಯರ್, ಕರ್ನಾಟಕ ಚರಿತ್ರೆ ಸಂಪುಟಗಳು, ಸಂಶೋಧನ ಪ್ರಬಂಧಗಳು, ಎನ್‌ಸೈಕ್ಲೋಪಿಡಿಯಾಗಳು, ದಖನ್‌ನಲ್ಲಿ ಫ್ರೆಂಚರ ಚಾರಿತ್ರಿಕ ಸಂಬಂಧಗಳ ಬಗ್ಗೆ ವಿವರಗಳಿರುವ ದಾಖಲೆಗಳು, ಪತ್ರಗಳು, ನಿಯತಕಾಲಿಕೆಗಳು, ಲೇಖನಗಳು, ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳು, ಬೆಂಗಳೂರು, ಮೈಸೂರು, ಮಂಗಳೂರು, ಪಾಂಡಿಚೇರಿ, ಮದ್ರಾಸ್ ಮುಂತಾದ ಪತ್ರಾಗಾರ ಇಲಾಖೆಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ದೈನಂದಿನ ಪತ್ರಿಕೆಗಳು, ವ್ಯಕ್ತಿಸಂದರ್ಶನ ಮತ್ತು ಸ್ಥಳ ಸಂದರ್ಶನಗಳ ಮೂಲಕ ಮಾಹಿತಿ ಪಡೆಯಲಾಗಿದೆ. ಕರ್ನಾಟಕ ಇತಿಹಾಸ ಕಾಂಗ್ರೆಸ್ ಮತ್ತು ಇಂಡಿಯನ್ ಹಿಸ್ಟರಿ ಕಾಂಗ್ರೆಸ್‌ಗಳ ವಾರ್ಷಿಕ ಸಮ್ಮೇಳನಗಳಲ್ಲಿ ಮಂಡಿಸಲಾದ ಪ್ರಬಂಧಗಳ ಅಧ್ಯಯನ ನಡೆಸಲಾಗಿದೆ. ಹಲವಾರು ರಾಜ್ಯ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳಲ್ಲಿ ಭಾಗವಹಿಸಿ ವಿಷಯ ಸಂಗ್ರಹಿಸಲಾಗಿದೆ. ಇತ್ತೀಚೆಗೆ ಟಿಪ್ಪುವಿನ ಕುರಿತು ವಿಭಿನ್ನ ಧೋರಣೆಗಳನ್ನು ದೃಶ್ಯಮಾಧ್ಯಮಗಳಲ್ಲಿ ನಾಡಿನ ವಿದ್ವಾಂಸರು, ಚರಿತ್ರೆಕಾರರು, ಪ್ರಗತಿಪರ ಚಿಂತಕರುಗಳು, ರಾಜಕೀಯ ವಿಶ್ಲೇಷಕರು, ಸಾಹಿತಿಗಳು ನಡೆಸುವ ವಾದ–ವಿವಾದಗಳಲ್ಲಿ ವಿಷಯ ಸಂಗ್ರಹಿಸಲಾಗಿದೆ. ಲಾವಣಿಗಳು, ಕಥೆ, ಕಾದಂಬರಿ, ನಾಟಕ ಮತ್ತು ಜಾನಪದ ಸಾಹಿತ್ಯದಲ್ಲಿ ಟಿಪ್ಪು ಹೇಗೆ ಬಿಂಬಿತವಾಗಿದ್ದಾನೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ಟಿಪ್ಪುವಿನ ಕುರಿತಾದ ಮಾಹಿತಿಗಳು ದೇಶಿಯ ಮತ್ತು ವಿದೇಶಿಯ ಗ್ರಂಥ ಭಂಡಾರಗಳಲ್ಲಿ ಅಡಕವಾಗಿವೆ. ಇದುವರೆಗೆ ಹಲವಾರು ಸಂಶೋಧಕರು ಈ ಚಾರಿತ್ರಿಕ ದಾಖಲೆಗಳನ್ನು ಅಧ್ಯಯನಿಸಿ ವಿಶ್ಲೇಷಿಸುವ ಕೆಲಸ ಮಾಡಿದ್ದಾರೆ. ಟಿಪ್ಪುವಿನ ಮೂಲ ದಾಖಲೆಗಳು ಇಂಗ್ಲಿಷ್, ಫ್ರೆಂಚ್, ಅರೆಬಿಕ್, ಪರ್ಶಿಯನ್, ಡಚ್ ಮುಂತಾದ ವಿದೇಶಿಯ ಭಾಷೆಯಲ್ಲಿವೆ. ಕೆಲವೊಂದು ಆಕರಗಳು ಕನ್ನಡ ಭಾಷೆಗೆ ಭಾಷಾಂತರಗೊಂಡಿವೆ. ಫ್ರೆಂಚ್ ಭಾಷೆಯ ದಾಖಲೆಗಳು, ಪತ್ರಗಳು ಇಂಗ್ಲಿಷಿಗೆ ತರ್ಜುಮೆಯಾಗಿವೆ. ಟಿಪ್ಪುವಿನ ಕಾಲದ ಅನೇಕ ದಾಖಲೆಗಳನ್ನು ಬ್ರಿಟಿಷರು ಇಂಗ್ಲೆಂಡಿಗೆ ಕೊಂಡೊಯ್ದರು. ಅವು ಅಲ್ಲಿನ ಪತ್ರಾಗಾರ ಮತ್ತು ಗ್ರಂಥಾಲಯಗಳಲ್ಲಿವೆ. ಲಂಡನ್ನಿನ ಇಂಡಿಯಾ

ಆಫೀಸ್ ಲೈಬ್ರರಿ, ಬ್ರಿಟಿಷ್ ಮ್ಯೂಸಿಯಂ, ಲಂಡನಿನ ಪಬ್ಲಿಕ್ ರೆಕಾರ್ಡ್ ಆಫೀಸ್, ಫ್ರಾನ್ಸಿನ ಆರ್ಕೈವ್ಸ್ ನ್ಯಾಷನಲ್ಸ್ ಮತ್ತು ಬಿಬ್ಲಿಥೆಕ್ ನ್ಯಾಷನಲ್ಸ್ ಮೊದಲಾದ ಕಡೆ ಟಿಪ್ಪುವಿನ ದಾಖಲೆಗಳು ಅಡಕವಾಗಿವೆ. ಭಾರತದಲ್ಲಿ ದಿಲ್ಲಿಯ ದಿ ನ್ಯಾಷನಲ್ ಆರ್ಕೈವ್ಸ್ ಆಫ್ ಇಂಡಿಯಾ, ಮದ್ರಾಸಿನ ಗೌವರ್ನಮೆಂಟ್ ರೆಕಾರ್ಡ್ ಆಫೀಸ್, ಕಲ್ಕತ್ತ ಮತ್ತು ಪಾಂಡಿಚೇರಿ ಗ್ರಂಥ ಭಂಡಾರಗಳಲ್ಲಿ ಹಲವು ದಾಖಲೆಗಳಿವೆ. ಇಂತಹ ದಾಖಲೆಗಳಿಂದ ಸಂಶೋಧನೆಯ ಶೀರ್ಷಿಕೆಗೆ ಪೂರಕ ಮಾಹಿತಿ ಪಡೆದುಕೊಳ್ಳಲಾಗಿದೆ.

ಅತ್ಯಂತ ವಿವಾದಗ್ರಸ್ಥ ಚಾರಿತ್ರಿಕ ವ್ಯಕ್ತಿಗಳಲ್ಲಿ ಟಿಪ್ಪು ಒಬ್ಬ. ಆತನ ಆಡಳಿತ ವಿವರಗಳನ್ನೊಳಗೊಂಡ ದೇಶಿ–ವಿದೇಶಿ ಆಧಾರಗಳು ಈ ಬಗ್ಗೆ ವಿರೋಧಾತ್ಮಕ ಪ್ರತಿಮೆಗಳನ್ನು ಕೊಟ್ಟು ಗೊಂದಲಗೊಳಿಸುತ್ತದೆ. ಟಿಪ್ಪುವಿನ ಈ ಪ್ರತಿಮೆ ಒಂದು ಕಡೆ ಮಹಾಪುರುಷನಂತೆ ಕಂಡರೆ ಇನ್ನೊಂದು ಕಡೆ ನಿರ್ದಯ ಎಂದು ಬಿಂಬಿತವಾಗಿದೆ. ಬಹುತೇಕ ಪಾಶ್ಚಿಮಾತ್ಯ ವಸಾಹತುವಾದಿಗಳು ಮತ್ತು ಭಾರತದ ರಾಷ್ಟ್ರೀಯವಾದಿಗಳು, ಕರ್ನಾಟಕದ ಬರಹಗಾರರನ್ನೊಳಗೊಂಡು ಆತನನ್ನು ಕ್ರೂರಿ, ಸರ್ವಾಧಿಕಾರಿ, ಮತಾಂಧನೆಂದು ಚಿತ್ರಿಸಿದೆ. ಕೆಲವರು ಕ್ರಾಂತಿಕಾರಿ, ಆಧುನಿಕ ಪ್ರಜಾ ಪ್ರಭುತ್ವವಾದಿ, ಸ್ವಾತಂತ್ರ್ಯ ಹೋರಾಟಗಾರ, ಜಾತ್ಯಾತೀತನೆಂದು ಬಣ್ಣಿಸಿದ್ದಾರೆ. ಕೆಲವರು ಟಿಪ್ಪು ಸಮಾಜವಾದಿ, ಜನಪರ ಎಂದು ಹೊಗಳಿದ್ದಾರೆ.

ಟಿಪ್ಪುವಿನ ಸ್ವಭಾವ ಆಡಳಿತ ಕ್ರಮ, ಇತರರೊಂದಿಗೆ ರಾಜಕೀಯ ಸಂಬಂಧಗಳು ಹಾಗೂ ಅಂದಿನ ರಾಜಕೀಯ ಸಂದರ್ಭ ಜಗತ್ತಿನ ನಾನಾ ಭಾಷೆಗಳಲ್ಲಿ ಆ ಬಗ್ಗೆ ಆಧಾರಗಳನ್ನು ಸೃಷ್ಟಿಸಿತ್ತು. ಇಲ್ಲಿಯವರೆಗೆ ಇಂಗ್ಲಿಷ್ ಭಾಷೆಯಲ್ಲಿರುವ ಆಕರ ಸಾಮಗ್ರಿಗಳು ಅವನ ಬಗ್ಗೆ ವಿಕೃತ ಚಿತ್ರಣ ಕೊಡುತ್ತವೆ. ಬ್ರಿಟಿಷರನ್ನು ಉಗ್ರವಾಗಿ ಪ್ರತಿಭಟಿಸಿ ಯುದ್ಧ ಮಾಡಿದ ಕೊನೆಯ ಪ್ರಬಲರೆಂದರೆ ಹೈದರಾಲಿ ಮತ್ತು ಟಿಪ್ಪು. ಆದ್ದರಿಂದ ವಸಾಹತುಶಾಹಿ ಬರಹಗಾರರು ಈ ಸುಲ್ತಾನರ ಬಗ್ಗೆ ವಿಷಕಾರಿದ್ದಾರೆ. ಇಂಗ್ಲಿಷ್ ಬಿಟ್ಟು ಉಳಿದ ಆಕರ ಗ್ರಂಥಗಳು ಅಂದರೆ ಫ್ರೆಂಚ್, ಡಚ್, ಪೋರ್ಚುಗೀಸ್, ಪರ್ಶಿಯನ್, ಅರೆಬಿಕ್, ಟರ್ಕಿ, ತೆಲುಗು, ಕನ್ನಡ, ತಮಿಳು ದಾಖಲೆಗಳು ಸ್ಥಳೀಯ ಲಾವಣಿಗಳು, ಐತಿಹ್ಯ ಮತ್ತು ಜಾನಪದ ಸಾಮಗ್ರಿಗಳು ವಸ್ತುನಿಷ್ಠೆಗೆ ಒತ್ತು ನೀಡಿವೆ.

ಪ್ರಸ್ತುತ ಅಧ್ಯಯನವು ಟಿಪ್ಪು ಫ್ರೆಂಚರೊಡನೆ ಹೊಂದಿದ್ದ ಮಿಲಿಟರಿ ಹಾಗೂ ರಾಜಕಾರಣ ಸಂಬಂಧಗಳ ನೆಲೆಯ ಹಿನ್ನೆಲೆಯಲ್ಲಿ ಪ್ರಧಾನವಾಗಿ ಚರ್ಚಿತಗೊಂಡಿದೆ. ಬ್ರಿಟಿಷರ ರಾಜಕೀಯ ಹುನ್ನಾರಗಳನ್ನು ನಿಯಂತ್ರಿಸಲು ಅವನು ನಡೆಸಿದ ಮೇಲ್ಮಟ್ಟದ ಸೇನಾ ಕೌಶಲ್ಯ ಕುರಿತ ವಿಚಾರವನ್ನು ವಿಶ್ಲೇಷಿಸಲಾಗಿದೆ. ಹೊರಜಗತ್ತಿನೊಂದಿಗೆ ಟಿಪ್ಪುವಿನ ಸಂಬಂಧದ ಫಲಿತಗಳನ್ನು ಕಂಡುಕೊಳ್ಳಲಾಗಿದೆ. ವಿದೇಶಿ ಸಂಪರ್ಕಗಳಿಂದ ನಿರೀಕ್ಷಿತ ಫಲಗಳು ದೊರೆಯದಿದ್ದರೂ ಕೊನೆಯ

ಪಕ್ಷ ತನ್ನ ರಾಜ್ಯದ ವ್ಯಾಪಾರ, ವಾಣಿಜ್ಯ ಹಾಗೂ ಕೈಗಾರಿಕೆಗಳ ಬೆಳವಣಿಗೆಗೆ ದೊರಕಿದ ಸಹಾಯವನ್ನು ಗುರುತಿಸಲಾಗಿದೆ.

೧.೧. ಅಧ್ಯಯನದ ಉದ್ದೇಶ

ಆಧುನಿಕ ಸಂದರ್ಭದಲ್ಲಿ ಬೃಹತ್ ಸಾಮ್ರಾಜ್ಯಗಳನ್ನು ಕುರಿತಾದ ಅಧ್ಯಯನ ಮಾಡುವುದರ ಬದಲು ಸ್ಥಳೀಯ ಪ್ರದೇಶಗಳ ಚರಿತ್ರೆಯನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ. ಇದನ್ನು ಸ್ಥಳೀಯ ಚರಿತ್ರೆ ಅಧ್ಯಯನವೆಂದು ಕರೆಯಲಾಗಿದೆ. ಇಂದು ಇಂತಹ ಚರಿತ್ರೆ ಹೆಚ್ಚು ಜನಪ್ರಿಯತೆ ಪಡೆಯುತ್ತಿದೆ. ಆದರೆ ಅದು ನಿಜಾರ್ಥದಲ್ಲಿ ಸ್ಥಳೀಯ ಚರಿತ್ರೆಯಾಗಿ ರೂಪುಗೊಳ್ಳುತ್ತಿಲ್ಲ. ಚಾರಿತ್ರಿಕ ಘಟನೆಗಳು ಮತ್ತು ವ್ಯಕ್ತಿಗಳನ್ನು ಇಂದಿನ ಕಲಹ ಹಾಗೂ ವ್ಯಾಜ್ಯಗಳ ಸಾಕ್ಷಿದಾರರಾಗಿ ಹಾಗೂ ಲಾಂಛನವಾಗಿ ಬಳಸಲಾಗುತ್ತಿದೆ. ಚರಿತ್ರೆಯಲ್ಲಿ ಬರುವ ವ್ಯಕ್ತಿಗಳನ್ನು ಧರ್ಮ ಮತ್ತು ಭಾಷಿಕ ನೆಲೆಯಿಂದಲೂ ನೋಡುವ, ತೀರ್ಮಾನಿಸುವ ಕೆಲಸಗಳು ನಡೆಯುತ್ತಿವೆ. ಅವರಲ್ಲಿ ಕೆಲವರು ನಮ್ಮವರು, ನಮ್ಮ ಕಣ್ಮಣಿಗಳು, ನಮ್ಮ ಹೆಮ್ಮೆಯ ಸಾಮ್ರಾಜ್ಯದ ದ್ಯೋತಕವಾಗಿರುವವರು, ಇನ್ನು ಕೆಲವರು ವೈರಿಗಳು, ನಿಕೃಷ್ಟರು, ನಿಂದಾಯೋಗ್ಯರು ಈ ವಾದಗಳನ್ನು ಇತಿಹಾಸ ಸತ್ಯವಾಗಿ ಪ್ರತಿಪಾದಿಸುವ ಪ್ರಯತ್ನಗಳು ಕಡಿಮೆಯೇನಲ್ಲ. ಇದೇ ಸಾಲಿಗೆ ಹೈದರಾಲಿ ಮತ್ತು ಟಿಪ್ಪು ಸುಲ್ತಾನರೂ ಸೇರಿ ಹೋಗಿದ್ದಾರೆ. ಬ್ರಿಟಿಷರನ್ನು ಭಾರತದಿಂದಲೇ ಹೊರದೂಡುವ ಪ್ರಯತ್ನದಲ್ಲಿ ಇವರು ನಿರಂತರ ಹೋರಾಟ ನಡೆಸಿದರು. ಅಂದಿನ ರಾಜಕಾರಣದ ಹಲವು ವೈರುಧ್ಯಗಳ ನಡುವೆಯೂ ತಮ್ಮ ಸೇನಾ ಕೌಶಲ್ಯ ತೋರಿದರು. ಕೊನೆಗೆ ಯುದ್ಧ ಭೂಮಿಕೆಯಲ್ಲೇ ಹುತಾತ್ಮರಾದರು. ಈ ಇಬ್ಬರು ಸುಲ್ತಾನರು ಬ್ರಿಟಿಷರನ್ನು ಸೆಣಸಲು ಸ್ಥಳೀಯ ಭಾರತೀಯ ಅರಸರ ಸಹಾಯ ಕೋರಿದರೂ ಮರಾಠರಾಗಲಿ, ಹೈದರಾಬಾದಿನ ನಿಜಾಮನಾಗಲಿ ಇನ್ನಾವುದೇ ನಾಯಕರಾಗಲಿ ನಿರೀಕ್ಷಿತ ಮಟ್ಟದಲ್ಲಿ ಸಹಾಯ ಮಾಡಲಿಲ್ಲ. ಹೈದರ್ ಮತ್ತು ಟಿಪ್ಪುವಿನ ಆಶಯಗಳನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾದರು. ತಮ್ಮ ಸ್ವಾರ್ಥ ಅಧಿಕಾರದ ಮತ್ತಿನಲ್ಲಿದ್ದ ಇವರು ಬ್ರಿಟಿಷರೊಂದಿಗೆ ಕೈ ಜೋಡಿಸಿದರು. ಅನಿವಾರ್ಯವಾಗಿ ಟಿಪ್ಪುವು ಹೊರಜಗತ್ತಿನೊಂದಿಗೆ ಸಂಪರ್ಕ ಹೊಂದಲು ತೀರ್ಮಾನಿಸಿದನು. ಈ ಹಿನ್ನೆಲೆಯಲ್ಲಿ ಟರ್ಕಿ, ಅಫಘಾನಿಸ್ತಾನ, ಇರಾನ್ ಹಾಗೂ ಫ್ರೆಂಚರೊಂದಿಗೆ ಸಂಬಂಧಗಳನ್ನು ಬೆಳೆಸಿದನು. ಇದರಲ್ಲಿ ವ್ಯಾಪಾರ–ವಾಣಿಜ್ಯದ ಅಭಿವೃದ್ಧಿ ಕೈಗಾರಿಕಾ ಬೆಳವಣಿಗೆ ಹಾಗೂ ಬ್ರಿಟಿಷರೊಂದಿಗೆ ಹಗೆತನ ತೀರಿಸಿಕೊಳ್ಳುವ ಇರಾದೆಯೂ ಸೇರಿತ್ತು.

ಟಿಪ್ಪುವು ಅನೇಕ ರಾಜಕೀಯ ಶಕ್ತಿಗಳಿಗೆ ಸ್ಪಂದಿಸಿದ್ದಾನೆ. ಮೈಸೂರು ಒಡೆಯರ ಮನೆತನದ ಅಧಿಕಾರವನ್ನು ಕಸಿದುಕೊಂಡ ಅಪಾದನೆಯನ್ನು ತೀರಾ ಅಲ್ಲಗಳೆಯದಿದ್ದರೂ ಬ್ರಿಟಿಷ್

ವಸಾಹತುಶಾಹಿ ಶಕ್ತಿಯನ್ನು ಪ್ರಬಲವಾಗಿ ಪ್ರತಿರೋಧಿಸಿದ ಕರ್ನಾಟಕದ ಪ್ರಮುಖ ರಾಜ ಎನ್ನುವುದು ಚಾರಿತ್ರಿಕ ಸತ್ಯ. ಇನ್ನೊಂದು ಆಲೋಚನೆಯಲ್ಲಿ ಆತ ಒಬ್ಬ ಮುಸ್ಲಿಂ ಎಂಬ ಸಂಕೀರ್ಣತೆಗೆ ಒಳಗಾದವನು. ಕರ್ನಾಟಕದಲ್ಲಿ ಅವನು ಇಸ್ಲಾಂ ಧರ್ಮದ ಹಿರಿಮೆಯ ದ್ಯೋತಕ ವಾಗಿ ಚಿತ್ರಿಸಲ್ಪಟ್ಟಿದ್ದಾನೆ. ಟಿಪ್ಪು ಒಬ್ಬ ಸ್ವಧರ್ಮಿ, ಹಿಂದೂ ವಿರೋಧಿ, ಮತಾಂಧ, ದೇಶದ್ರೋಹಿ, ಕನ್ನಡ ಭಾಷಾ ವಿರೋಧಿ ಎಂಬ ಹೇಳಿಕೆಗಳು ಹುಟ್ಟಿಕೊಂಡವು. ಇಂದಿನ ವರ್ತಮಾನದಲ್ಲಿ ಟಿಪ್ಪುವಿನ ಆಡಳಿತ ಮತ್ತು ವ್ಯಕ್ತಿತ್ವದ ಬಗ್ಗೆ ಹಲವು ಚರ್ಚೆಗಳನ್ನು, ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಪರ-ವಿರೋಧ ವಾದಗಳು ನಡೆಯುತ್ತಿದೆ. ಟಿಪ್ಪು ಮತಾಂಧ ಮತ್ತು ದೇಶದ್ರೋಹಿ ಎಂಬ ವಾದವನ್ನು ಆಕ್ರೋಶಭರಿತವಾಗಿ ಮುಂದಿಡಲಾಗಿದೆ. ಈ ವಾದವನ್ನು ಖಂಡಿಸಿ ಟಿಪ್ಪು ಒಬ್ಬ ಧರ್ಮ ಸಹಿಷ್ಣು, ಸ್ವಾತಂತ್ರ್ಯ ವೀರ, ಆಧುನಿಕತೆಯನ್ನು ಮೈಗೂಡಿಸಿಕೊಂಡ ಸುಲ್ತಾನ, ದೇಶವನ್ನು ಪರಕೀಯರಿಂದ ಮುಕ್ತಗೊಳಿಸುವ ಉದ್ದೇಶದಿಂದಲೇ ಹೋರಾಡಿ ಅಂತ್ಯಕಂಡವನು ಎಂಬ ವಾದವೂ ಗಟ್ಟಿಯಾಗಿಯೇ ಇದೆ. ಈ ವೈರುಧ್ಯಗಳನ್ನು ಕುರಿತು ವಿಶ್ಲೇಷಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವೂ ಆಗಿದೆ.

ಭಾರತದ ಇತಿಹಾಸದಲ್ಲಿ ಟಿಪ್ಪು ಸುಲ್ತಾನ್ ಒಂದು ಉತ್ತಮವಾದ ವ್ಯಕ್ತಿತ್ವವನ್ನು ಹೊಂದಿದ್ದನು. ಅವನ ಆಳ್ವಿಕೆ ಕಾಲಾವಧಿ ಅತ್ಯಲ್ಪವಾದರೂ ದೂರದೃಷ್ಟಿತ್ವವನ್ನು ಹೊಂದಿದ್ದ ಅವನ ಆಡಳಿತವು ಅನೇಕ ದೃಷ್ಟಿಕೋನಗಳಿಂದ ಮಹತ್ವದ್ದಾಗಿದೆ. ಈತನು ಆಳ್ವಿಕೆಯುದ್ದಕ್ಕೂ ಬ್ರಿಟಿಷರಿಗೆ ಪ್ರಬಲವಾದ ವಿರೋಧವನ್ನು ಒಡ್ಡಿ ಭಾರತದಿಂದ ಹೊರಗಟ್ಟಲು ತನ್ನೆಲ್ಲ ಸಾಧನ ಸಂಪತ್ತು, ಶಕ್ತಿ ಸಾಮರ್ಥ್ಯಗಳನ್ನು ಬಳಸಿದನು. ನರಿಯಂತೆ ನೂರುವರ್ಷ ಬದುಕಿರುವುದಕ್ಕಿಂತ ಸಿಂಹದಂತೆ ಒಂದೇ ದಿವಸ ಬದುಕುವುದು ಉತ್ತಮ ಎಂದೇ ಭಾವಿಸಿದನು. ಭಾರತೀಯ ಆಳರಸರಲ್ಲಿದ್ದ ಅನೈಕ್ಯತೆ, ಬ್ರಿಟಿಷರ ಉಚ್ಚಮಟ್ಟದ ರಾಜತಾಂತ್ರಿಕತೆ, ಸೇನಾಕೌಶಲ್ಯಗಳು ಅವನಲ್ಲಿ ನಮ್ಮ ಸ್ವಾತಂತ್ರ್ಯ ಎಂತಹ ವಿಪತ್ತಿಗೆ ಒಳಗಾಗಿದೆ ಎಂಬ ಅರಿವನ್ನುಂಟು ಮಾಡಿತು. ಬ್ರಿಟಿಷರನ್ನು ಇಲ್ಲಿಂದ ಕಾಲ್ತೆಗೆಸಲು ಹೋರಾಟದ ಮಾರ್ಗೋಪಾಯಗಳನ್ನು ರೂಪಿಸಿದನು. ಬ್ರಿಟಿಷರ ವಿರುದ್ಧ ನಡೆದ ಯುದ್ಧಗಳ ಮಧ್ಯೆ ಹೊರಜಗತ್ತಿ ನೊಂದಿಗೆ ರಾಜತಾಂತ್ರಿಕ ಸಂಬಂಧ ಬೆಳೆಸಿದನು. ಅವುಗಳಲ್ಲಿ ಈಜಿಪ್ಟ್, ಟರ್ಕಿ, ಪರ್ಶಿಯಾ, ಅಫ್ಘಾನಿಸ್ತಾನ, ಅರೇಬಿಯಾ, ಫ್ರಾನ್ಸ್ ಪ್ರಮುಖವಾದವು. ಇವುಗಳಲ್ಲಿ ಮುಖ್ಯವಾಗಿ ಫ್ರಾನ್ಸ್ ಚಕ್ರವರ್ತಿಗಳಾದ ಹದಿನಾರನೆಯ ಲೂಯಿ ಮತ್ತು ನೆಪೋಲಿಯನ್ ಬೋನಾಪಾರ್ಟೆಯೊಂದಿಗೆ ಪತ್ರವ್ಯವಹಾರ ನಡೆಸಿದನು. ಅವರೊಂದಿಗೆ ರಾಯಭಾರ ಸಂಬಂಧಗಳನ್ನು ಏರ್ಪಡಿಸಿಕೊಂಡನು. ಇದರಿಂದ ದೊರಕಿದ ಫಲಿತಗಳ ಬಗ್ಗೆಯೂ ಚರ್ಚಿಸಲಾಗಿದೆ.

ಟಿಪ್ಪು ಬ್ರಿಟಿಷರೊಂದಿಗೆ ಹೋರಾಡುವುದರ ಜೊತೆಗೆ ತನ್ನ ರಾಜ್ಯದಲ್ಲಿ ಅತ್ಯಂತ ಮುಂದುವರಿದ ಹಾಗೂ ಆಧುನಿಕ ವಿಧಾನಗಳನ್ನು ಒಳಗೊಂಡ ಆಡಳಿತವನ್ನು ನೆಲೆಗೊಳಿಸಿದ್ದ.

ರಾಜ್ಯದ ಪ್ರಗತಿಗೆ ಪಾಶ್ಚಾತ್ಯ ಮಾದರಿಗಳನ್ನು ಅಳವಡಿಸಿದ. ಐರೋಪೀಕರಣ ಪ್ರಕ್ರಿಯೆಗೆ ಒಳಪಡಿಸಿದ ಹಲವು ಹೊಸ ಪ್ರಯೋಗಗಳಿಗೆ ಚಾಲನೆ ನೀಡಿದ. ಕೃಷಿ, ವ್ಯಾಪಾರ–ವಾಣಿಜ್ಯ, ಕೈಗಾರಿಕೆ, ಕರಕುಶಲತೆ, ಮಿಲಿಟರಿ ಮುಂತಾದ ವಲಯಗಳನ್ನು ಐರೋಪ್ಯ ತಾಂತ್ರಿಕತೆಗೆ ಒಳಪಡಿಸಿ ಶೀಘ್ರಗತಿಯಲ್ಲಿ ಪ್ರಗತಿ ಹೊಂದಲು ಕ್ರಮಕೈಗೊಂಡನು. ರಾಜ್ಯದಲ್ಲಿ ಅನೇಕ ಪ್ರಥಮಗಳನ್ನು ಸಾಧಿಸಿದ್ದ. ಸಾಮಾಜಿಕ ಅಸಮಾನತೆ, ಅನ್ಯಾಯ, ಶೋಷಣೆಗಳನ್ನು ಕಾನೂನುಬಾಹಿರಗೊಳಿಸಿದ್ದ. ಪಾನನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದ. ಮೋಜಿಗಾಗಿ ಪ್ರಾಣಿಗಳನ್ನು ಶಿಕಾರಿ ಮಾಡುವವರನ್ನು ಶಿಕ್ಷಿಸಿದ. ಪ್ರವಾಸಿ ಸೌಲಭ್ಯಗಳನ್ನು ನೀಡಿ ತಂಗುದಾಣಗಳನ್ನು ನಿರ್ಮಿಸಿದ. ನಾಲ್ಕು ಮೈಲಿಗೊಂದರಂತೆ ಶಾಲೆಗಳನ್ನು ಸ್ಥಾಪಿಸಿ ಶಿಕ್ಷಣಕ್ಕೆ ಆದ್ಯತೆ ನೀಡಿದ. ಮೊದಲಿಗೆ ಮೈಸೂರು ಸಂಸ್ಥಾನದಲ್ಲಿ ಗಂಧದೆಣ್ಣೆಯ ಕಾರ್ಖಾನೆ ಸ್ಥಾಪಿಸಿದನು. ರೇಷ್ಮೆ ಉದ್ಯಮಕ್ಕೆ ತಳಹದಿ ಹಾಕಿದನು. ಕಡಲಿನ ಮುತ್ತುಗಳ ಮಾರಾಟಕ್ಕೆ ವಾಣಿಜ್ಯ ಕಚೇರಿಗಳನ್ನು ದೂರದ ಕಚ್, ಓರ್ಮುಜ್, ಏಡನ್, ಬಸ್ರಾ, ಜಿದ್ದಾ ಮುಂತಾದ ಕಡೆಗೆ ಸ್ಥಾಪಿಸಿದ. ಸುಧಾರಿತ ತಳಿಗಳ ಹಣ್ಣುಗಳನ್ನು ಬೆಳೆಯುವಂತೆ ರೈತರಿಗೆ ರಿಯಾಯಿತಿ ನೀಡಿ ಪ್ರೋತ್ಸಾಹಿಸಿದ. ಪಾಶ್ಚಾತ್ಯ ಸೇನಾ ಕೌಶಲ್ಯ ಹೊಂದಲು ಶಸ್ತ್ರಾಸ್ತ್ರಗಳನ್ನು ಆಧುನೀಕರಿಸಲು ಬೇಕಾದ ವ್ಯವಸ್ಥೆ ಮಾಡಿದ. ಫ್ರಾನ್ಸ್‌ನಿಂದ ಕರಕುಶಲ ಕಲೆ ಮತ್ತು ಶಸ್ತ್ರಾಸ್ತ್ರ, ನೌಕಾ ತಯಾರಕರು ಮುಂತಾದ ತಂತ್ರಜ್ಞರನ್ನು ರಾಜ್ಯಕ್ಕೆ ಆಹ್ವಾನಿಸಿದ. ಹೊಸ ಹೊಸ ಐರೋಪ್ಯ ಮಾದರಿಗಳನ್ನು ರಾಜ್ಯದ ಎಲ್ಲಾ ವಲಯಗಳಲ್ಲಿ ಅಳವಡಿಸಿ ಫ್ರೆಂಚ್ ಮಾದರಿ ಆಧುನೀಕರಣಕ್ಕೆ ಒತ್ತು ನೀಡಿದ. ಈ ಹಿನ್ನೆಲೆಯಲ್ಲಿ ಟಿಪ್ಪು ಮಾಡಿದ ಆರ್ಥಿಕ ಮತ್ತು ಮಿಲಿಟರಿ ಪ್ರಯೋಗಗಳನ್ನು ವಿಶ್ಲೇಷಿಸುವ ಉದ್ದೇಶವು ಈ ಅಧ್ಯಯನದಲ್ಲಿದೆ.

೧.೨. ಅಧ್ಯಯನದ ವ್ಯಾಪ್ತಿ

ಪ್ರತಿಯೊಂದು ಜ್ಞಾನಶಿಸ್ತಿಗೆ ಅದರದೇ ಮೇರೆಗಳಿರುತ್ತವೆ. ಇದರಿಂದ ವಿಷಯವನ್ನು ಸಮಗ್ರವಾಗಿ ವಿವರಿಸಲು ಸಾಧ್ಯ ಮತ್ತು ಅರ್ಥೈಸಲು ಸುಲಭವಾಗುತ್ತದೆ. ಪ್ರಸ್ತುತ ಅಧ್ಯಯನವನ್ನು ಭಾರತಕ್ಕೆ ಫ್ರೆಂಚರ ಪ್ರವೇಶದಿಂದ ಹಿಡಿದು ಮೈಸೂರು ರಾಜ್ಯದಲ್ಲಿ ಹೈದರಾಲಿ ಮತ್ತು ಟಿಪ್ಪುವಿನ ಅಧಿಕಾರ ಸ್ಥಾಪನೆ, ಬ್ರಿಟಿಷರ ವಸಾಹತುಶಾಹಿ ವಿರುದ್ಧ ಹೋರಾಟಗಳ ವ್ಯಾಪ್ತಿಯಲ್ಲಿ ಚರ್ಚಿಸಲಾಗಿದೆ. ಬ್ರಿಟಿಷರ ಸಾಮ್ರಾಜ್ಯಶಾಹಿ ಧೋರಣೆ, ಪ್ರಭುತ್ವ ಸ್ಥಾಪನೆಗಾಗಿ ಬ್ರಿಟಿಷರು ಮತ್ತು ಫ್ರೆಂಚರ ನಡುವಿನ ಪೈಪೋಟಿ, ದಖನ್ ಸಾರ್ವಭೌಮತ್ವಕ್ಕಾಗಿ ನಡೆದ ಕರ್ನಾಟಿಕ್ ಯುದ್ಧಗಳು, ಸಮಕಾಲೀನ ಸಂದರ್ಭದಲ್ಲಿ ಯುರೋಪಿನಲ್ಲಿ ನಡೆಯುತ್ತಿದ್ದ ಶಕ್ತಿರಾಜಕಾರಣ, ಸಪ್ತವಾರ್ಷಿಕ ಯುದ್ಧ, ಒಪ್ಪಂದಗಳು ಭಾರತದ ಮೇಲೆ ಅವುಗಳ ಪರಿಣಾಮಗಳು ಕುರಿತು ವಿಶ್ಲೇಷಿಸಲಾಗಿದೆ. ಹೈದರ್ ಮತ್ತು ಟಿಪ್ಪು ಸುಲ್ತಾನರು ಬ್ರಿಟಿಷರ ವಿರುದ್ಧ ನಡೆಸಿದ ಯುದ್ಧಗಳು ಮತ್ತು ಒಪ್ಪಂದಗಳು, ಭಾರತೀಯ

ಅರಸರ ಒಕ್ಕೂಟ ರಚನೆ, ಮರಾಠರು, ನಿಜಾಮ, ಅರ್ಕಾಟಿನ ನವಾಬರು, ಪಾಳೆಯಗಾರ ಮೊದಲಾದ ದೇಶೀಯ ಶಕ್ತಿಗಳನ್ನು ಒಟ್ಟುಗೂಡಿಸಿ ಬ್ರಿಟಿಷರನ್ನು ಎದುರಿಸಲು ನಡೆಸಿದ ಪ್ರಯತ್ನಗಳು, ಅದರ ವೈಫಲ್ಯತೆ, ಭಾರತೀಯ ಅರಸರ ರಕ್ತಗತ ದೌರ್ಬಲ್ಯಗಳು ಹಾಗೂ ರಾಷ್ಟ್ರೀಯ ಗಂಡಾಂತರಗಳು ಎದುರಾದಾಗಲೂ ಒಗ್ಗಟ್ಟಾಗಿ ಸೇರಲು ವಿಫಲರಾಗುವ ಅವರ ಪರಿಸ್ಥಿತಿ ಇದರಿಂದಾಗಿ ಟಿಪ್ಪು ಹೊರಜಗತ್ತಿನೊಂದಿಗೆ ಸಂಪರ್ಕ ಸಾಧಿಸಲು ಪ್ರಯತ್ನಿಸಿದ್ದು ಮುಂತಾದ ವಿಚಾರಗಳು ಅಧ್ಯಯನ ವ್ಯಾಪ್ತಿಯೊಳಗೆ ಸೇರಿವೆ.

ಹೈದರಾಲಿ ಮತ್ತು ಟಿಪ್ಪುವಿನ ಆಳ್ವಿಕೆಗಳು ಯುದ್ಧಗಳಿಂದಲೇ ಆರಂಭವಾಗಿ ಯುದ್ಧಗಳಿಂದಲೇ ಮುಕ್ತಾಯವಾದವು. ೧೭೬೭ರಲ್ಲಿ ಹೈದರ್ ಮತ್ತು ಇಂಗ್ಲಿಷರೊಂದಿಗೆ ಆರಂಭಗೊಂಡ ಯುದ್ಧಗಳು ೧೭೯೯ರಲ್ಲಿ ಟಿಪ್ಪುವಿನ ಅವಸಾನದೊಂದಿಗೆ ಮುಗಿದವು. ೧೮ನೆಯ ಶತಮಾನದ ಉತ್ತರಾರ್ಧದಲ್ಲಿ ಇವರಿಬ್ಬರು ಭಾರತದ ರಾಜಕಾರಣದಲ್ಲಿ ಪ್ರಮುಖ ಪಾತ್ರವಹಿಸಿದರು. ಭಾರತದ ವಸಾಹತುಶಾಹಿ ಶಕ್ತಿಗಳ ಹಿಡಿತದಿಂದ ಮುಕ್ತಗೊಳಿಸಲು ಪ್ರಬಲ ಹೋರಾಟ ನಡೆಸಿದರು. ಟಿಪ್ಪು ಬ್ರಿಟಿಷರನ್ನು ಎದುರಿಸಲು ಫ್ರೆಂಚರ ನೆರವು ಪಡೆಯಲು ಪ್ರಯತ್ನಿಸಿದ. ಫ್ರಾನ್ಸಿನ ಚಕ್ರವರ್ತಿ ಹದಿನಾರನೆಯ ಲೂಯಿ ಮತ್ತು ನೆಪೋಲಿಯನ್ ಬೋನಾಪಾರ್ಟೆ ಇವರೊಂದಿಗೆ ರಾಯಭಾರ ಸಂಬಂಧ ಏರ್ಪಡಿಸಿಕೊಂಡನು. ಪತ್ರವ್ಯವಹಾರ ನಡೆಸಿದನು. ಈ ಹಿನ್ನೆಲೆಯಲ್ಲಿ ಟಿಪ್ಪು ಹಾಗೂ ಫ್ರೆಂಚರ ನಡುವಿನ ಮಿಲಿಟರಿ ಮತ್ತು ರಾಜಕಾರಣ ನೆಲೆಯ ಅಧ್ಯಯನ ನಡೆಸಲಾಗಿದೆ. ಟಿಪ್ಪು ರಾಜ್ಯದ ಪ್ರಗತಿಗಾಗಿ ನಡೆಸಿದ ಆರ್ಥಿಕ ಆವಿಷ್ಕಾರಗಳು, ಧರ್ಮ ಮತ್ತು ಭಾಷಿಕವಾಗಿ ಟಿಪ್ಪುವಿನ ತೀರ್ಮಾನಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಟಿಪ್ಪುವಿನ ಆಳ್ವಿಕೆಯನ್ನು ಕುರಿತು ವರ್ತಮಾನದಲ್ಲಿ ಎದ್ದಿರುವ ಪ್ರಶ್ನೆಗಳು ಪರ–ವಿರುದ್ಧವಾದಗಳು ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿವೆ.

ಟಿಪ್ಪು ಬ್ರಿಟಿಷರನ್ನು ಭಾರತದಿಂದ ಕಾಲ್ತೆಗೆಸುವ ಸ್ಪಷ್ಟ ನಿರ್ಧಾರದಿಂದಲೇ ಸೈನ್ಯವನ್ನು ಸಮರ್ಥವಾಗಿ ಸಜ್ಜುಗೊಳಿಸಿದ. ಬ್ರಿಟಿಷರು ದೇಶಿಯ ರಾಜರುಗಳನ್ನು ಟಿಪ್ಪುವಿನ ವಿರುದ್ಧ ಎತ್ತಿ ಕಟ್ಟುವ ಹುನ್ನಾರಗಳನ್ನು ನಡೆಸಿದರು. ಬ್ರಿಟಿಷರ ಒಡೆದು ಆಳುವ ನೀತಿಗೆ ಟಿಪ್ಪು ಪ್ರತಿರೋಧ ಒಡ್ಡಿದ. ಬ್ರಿಟಿಷರ ವಸಾಹತುಶಾಹಿಯ ವಿಸ್ತರಣೆ, ವ್ಯಾಪಾರ ನೀತಿಗೆ ಕಡಿವಾಣ ಹಾಕಿದ. ಬ್ರಿಟಿಷರು ಸೈನಿಕವಾಗಿ ಮುಂದುವರಿದ ಯುದ್ಧತಂತ್ರಗಾರಿಕೆ ಅಳವಡಿಸಿಕೊಂಡಿದ್ದರು. ಇಂಥ ಬಲಾಢ್ಯ ಶಕ್ತಿಯನ್ನು ಮಣಿಸುವುದು ಸುಲಭದ ಮಾತಾಗಿರಲಿಲ್ಲ. ಇದಕ್ಕೆ ಟಿಪ್ಪು ತಕ್ಕ ತಯಾರಿಗಳನ್ನು ನಡೆಸಿದ. ದೇಶಿಯ ರಾಜರುಗಳು, ಪಾಳೆಯಗಾರರೊಂದಿಗೆ ಒಪ್ಪಂದಗಳನ್ನು ಏರ್ಪಡಿಸಿಕೊಳ್ಳಲು ಹಲವು ಪ್ರಯತ್ನಗಳನ್ನು ನಡೆಸಿದ. ಇದು ಫಲಕಾರಿಯಾಗದಿದ್ದಾಗ ವಿದೇಶಿಯ ಶಕ್ತಿಗಳ ನೆರವು ಪಡೆದುಕೊಳ್ಳಲು ಕಾರ್ಯಪ್ರವೃತ್ತನಾದನು. ಇದರ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲಾಗಿದೆ.

೧.೩. ಅಧ್ಯಯನದ ಸಮೀಕ್ಷೆ

ಹೈದರ್-ಟಿಪ್ಪು ಸುಲ್ತಾನ್ ದಕ್ಷಿಣ ಭಾರತದ ವಿಶಾಲ ಭೂ ಭಾಗಗಳನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡರು. ಇದು ಅವರ ಅಧಿಕಾರದ ಮಹತ್ವಾಕಾಂಕ್ಷೆಯ ಸ್ವಭಾವದ ಪರಿಣಾಮವೆಂದು ವ್ಯಾಖ್ಯಾನಿಸಲಾಗಿದೆ. ಅದೇ ರೀತಿ ಅವರ ಧೋರಣೆಗಳು ಮತ್ತು ಸ್ವಭಾವದಲ್ಲಿದ್ದ ಪರಸ್ಪರ ವಿಷಮ ಮಿಶ್ರಣದ ಫಲವೆಂದು ಸಮರ್ಥಿಸಲಾಗಿದೆ. ಟಿಪ್ಪು ಸ್ವಭಾವವನ್ನು ಧರ್ಮ ಮತ್ತು ರಾಜಕಾರಣ ಎನ್ನುವ ನೆಲೆಯಿಂದಲೆ ಚರಿತ್ರೆಕಾರರು ಚಿತ್ರಿಸಿದ್ದಾರೆ. ಟಿಪ್ಪು ಉದಾರವಾದಿ ನೀತಿಯನ್ನು ಅನುಸರಿಸಿದನು ಎಂಬರ್ಥದಲ್ಲಿ ಅವನ ಸ್ವಭಾವವೇ ಅಂಥದ್ದಾಗಿತ್ತು ಎಂದು ದಾಖಲಿಸಲಾಗಿದೆ. ಕೋಮುವಾದಿಗಳು ಮತ್ತು ರಾಷ್ಟ್ರೀಯವಾದಿಗಳು ಹೀಗೆಯೇ ಚರಿತ್ರೆಯನ್ನು ತಪ್ಪಾಗಿ ವ್ಯಾಖ್ಯಾನಿಸಿದ್ದಾರೆ. ಟಿಪ್ಪು ಅನುಸರಿಸಿದ ಉದಾರವಾದಿ ಧಾರ್ಮಿಕ ಧೋರಣೆಯು ಅವನ ವೈಯಕ್ತಿಕ ಉದಾರವಾದಿ ಮನೋಧರ್ಮದ ಫಲವಾಗಿತ್ತು ಎನ್ನುವುದನ್ನು ಒಮ್ಮೆ ಒಪ್ಪಿಕೊಂಡರೆ ಅದಕ್ಕೆ ತಕ್ಕಂಥ ನಿರೂಪಣೆಯು ಅನಿವಾರ್ಯವಾಗುತ್ತದೆ.

ಚಾರಿತ್ರಿಕ ಘಟನೆಗಳನ್ನು ಅರಸಕೇಂದ್ರಿತ ದೃಷ್ಟಿಕೋನದಲ್ಲಿ ಚರ್ಚಿಸುವಾಗ ಉದಾರವಾದಿ ಹಾಗೂ ಸಂಪ್ರದಾಯವಾದಿ ಪರಿಕಲ್ಪನೆಗಳು ಪ್ರವೇಶಿಸುತ್ತವೆ. ಅಂಥ ಸನ್ನಿವೇಶಗಳು, ಘಟನೆಗಳು ಆ ಅರಸನ ಉದಾರವಾದಿ ಅಥವಾ ಧರ್ಮಾಂಧತೆಯ ಪರಿಣಾಮವಷ್ಟೆ ಆಗಿರದೆ ಅವು ಆ ಸಂದರ್ಭದ ಸ್ಪಷ್ಟ ರಾಜಕೀಯ ಪರಿಸ್ಥಿತಿಯ ಒತ್ತಡದ ಫಲವಾಗಿದ್ದವು. ಕೋಮುವಾದಿ ಚರಿತ್ರೆಕಾರರು, ಬರಹಗಾರರು ಟಿಪ್ಪುವಿನ ಉದಾರ ನೀತಿಯನ್ನು ಹೊಗಳಿದ್ದಾರೆ. ಏಕೆಂದರೆ ಇವರಿಗೆ ಇತರ ರಾಜರನ್ನು ಧರ್ಮಾಂಧರೆಂದು ಜರಿಯಲು ಸ್ವಾತಂತ್ರ್ಯ ದೊರೆಯುತ್ತದೆ. ನಿಜವಾಗಿ ಟಿಪ್ಪು ಜಾತ್ಯಾತೀತ ರಾಷ್ಟ್ರೀಯ ಅರಸನೆಂದು ಗುರುತಿಸುವುದು ಅಚಾರಿತ್ರಿಕ. ೧೮ನೇ ಶತಮಾನದ ಭಾರತದ ಯಾವುದೇ ರಾಜ್ಯವು ತನ್ನ ಸ್ವರೂಪದಿಂದಾಗಿಯೇ ಜಾತ್ಯಾತೀತವಾಗಿರಲು ಸಾಧ್ಯವಿರಲಿಲ್ಲ. ಜಾತ್ಯಾತೀತ ಎಂಬ ಪರಿಕಲ್ಪನೆಯೇ ಇತ್ತೀಚಿನದು. ಟಿಪ್ಪುವಿನ ಆಳ್ವಿಕೆ ಜಾತ್ಯಾತೀತವೆಂದು ಸಮರ್ಥಿಸಿಕೊಂಡರೆ ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಆಳ್ವಿಕೆ ಮಾಡಿದ ದಕ್ಷಿಣ ಭಾರತವನ್ನು ಬಿಟ್ಟು ಉಳಿದ ಕಾಲದಲ್ಲೆಲ್ಲ ರಾಜ್ಯವು ಜಾತ್ಯಾತೀತವಾಗಿರಲಿಲ್ಲ ಎಂಬರ್ಥ ಬರುವುದು ಸಹಜ.

ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಆಳ್ವಿಕೆಯನ್ನು ಕುರಿತಾದ ಬರವಣಿಗೆಗಳಲ್ಲಿ ಭಿನ್ನ ಧೋರಣೆಗಳು ವ್ಯಕ್ತವಾಗಿವೆ. ಟಿಪ್ಪು ಪ್ರಸ್ತುತ ಹೆಚ್ಚು ಚರ್ಚೆಗೆ ಗ್ರಾಸವಾಗಿದ್ದಾನೆ. ಇದರ ಹಿನ್ನೆಲೆಯನ್ನು ಗಮನದಲ್ಲಿರಿಸಿಕೊಂಡು ಅಧ್ಯಯನ ನಡೆಸಲಾಗಿದೆ. ಟಿಪ್ಪು ಮತ್ತು ಫ್ರೆಂಚರ ನಡುವಿನ ಮಿಲಿಟರಿ ಮತ್ತು ರಾಜಕಾರಣ ಸಂಬಂಧಗಳ ಅಧ್ಯಯನದಲ್ಲಿ ವಿಷಯಕ್ಕೆ ಪೂರಕ ಗ್ರಂಥಗಳನ್ನು ಪರಾಮರ್ಶಿಸಿ ದಾಖಲಿಸಲಾಗಿದೆ.

ಅಧ್ಯಯನ ಸಮೀಕ್ಷೆ ಇಂತಿದೆ: ಮಾರ್ಕ್‌ವಿಲ್ಕ್ಸ್, ಹಿಸ್ಟಾರಿಕಲ್ ಸ್ಕೆಚಸ್ ಆಫ್ ದಿ ಇಂಡಿಯನ್ ಇನ್ ಆ್ಯನ್ ಅಂಟೆಮ್ಟ್ಸ್ ಟು ಟ್ರೇಸ್ ದಿ ಹಿಸ್ಟರಿ ಆಫ್ ಮೈಸೂರ್, ಸಂಪುಟ ೩, ಬೌರಿಂಗ್ ಲೆವಿನ್‌ಬಿ ಹೈದರ್ ಅಂಡ್ ಟಿಪ್ಪು ಸುಲ್ತಾನ್, ಹಯವದನರಾವ್ ಸಿ., ಹಿಸ್ಟರಿ ಆಫ್ ಮೈಸೂರು ಸಂಪುಟ ೩, ಹುಸೇನ್ ಅಲಿಖಾನ್ ಕಿರ್ಮಾನಿ, ಹಿಸ್ಟರಿ ಆಫ್ ದಿ ರೀಜನ್ ಆಫ್ ಟಿಪ್ಪು ಸುಲ್ತಾನ್, ಹಿಸ್ಟರಿ ಆಫ್ ಸುಲ್ತಾನ್ ಡಾಡ್ವೆಲ್ ಎಚ್.ಎಚ್. ಕೇಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ, ಬ್ರೌನ್ ಸಿ.ಪಿ. ಮೆಮೊರೀಸ್ ಆಫ್ ಹೈದರ್ ಆ್ಯಂಡ್ ಟಿಪ್ಪು, ಫ್ರಾನ್ಸಿಸ್ ಬುಕಾನನ್, ಎ ಜರ್ನಿ ಫ್ರಂ ಮದರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರಾ ಆ್ಯಂಡ್ ಮಲಬಾರ್, ಗ್ಲೀಗ್ ಜಿ.ಆರ್., ದಿ ಲೈಫ್ ಥಾಮಸ್ ಮನ್ರೋನ ೨ ಸಂಪುಟಗಳು, ಮೊಹಿಬುಲ್ ಹಸನ್‌ಖಾನ್, ಹಿಸ್ಟರಿ ಆಫ್ ದಿ ಟಿಪ್ಪು ಸುಲ್ತಾನ್, ಮುತ್ತಣ್ಣ ಐ.ಎಂ., ಟಿಪ್ಪು ಸುಲ್ತಾನ್ ಎಕ್ಸ್‌ರೇಯ್ಡ್, ಹುಸೇನ್ ಆಲಿ ಖಾನ್ ಕಿರ್ಮಾನಿ, ಹಿಸ್ಟರಿ ಆಫ್ ಟಿಪ್ಪು ಸುಲ್ತಾನ್, ಭಗವಾನ್ ಎಸ್.ಗಿದ್ವಾವಾನಿ(ಮೂಲ) ರಂಗನಾಥ್ ಎಸ್.ಬಿ., ಟಿಪ್ಪು ಸುಲ್ತಾನನ ಖಡ್ಗ, ಜವಾಹರ ಲಾಲ ನೆಹರು, ದಿ ಡಿಸ್ಕವರಿ ಆಫ್ ಇಂಡಿಯಾ, ತಾರಾಚಂದ್ ಎಸ್., ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಆಫ್ ಇಂಡಿಯಾ, ಷೇಕ್ ಅಲಿ ಬಿ., ಟಿಪ್ಪು ಸುಲ್ತಾನ್ ಎ ಸ್ಟಡಿ ಇನ್ ಡಿಪ್ಲೊಮಸಿ ಆ್ಯಂಡ್ ಕನ್‌ಫ್ರಾಂಟೇಶನ್, ಟಿಪ್ಪು ಸುಲ್ತಾನ್ ಎ ಗ್ರೇಟ್ ಮಾರ್ಟಿಯರ್, ಕರ್ನಾಟಕ ಚರಿತ್ರೆ ಸಂಪುಟ ೫, ಟಿಪ್ಪು ಸುಲ್ತಾನ್, ಟೇಲರ್ ಜಿ.ಪಿ., ದಿ ಕಾಯಿನ್ಸ್ ಆಫ್ ಟಿಪ್ಪು ಸುಲ್ತಾನ್, ಚಿದಾನಂದಮೂರ್ತಿ ಎಂ., ಮೂಲ ದಾಖಲೆಗಳಲ್ಲಿ ಹುದುಗಿದ್ದ ಟಿಪ್ಪು, ಗೌರಿ ಸುಂದರ್, ಟಿಪ್ಪು ಸುಲ್ತಾನ ಕನ್ನಡ ದ್ರೋಹಿಯೇ?, ಚನ್ನಬಸಪ್ಪ ಕೋ., ಟಿಪ್ಪು ಸುಲ್ತಾನ್, ಅಪ್ರತಿಮ ದೇಶಭಕ್ತ ಟಿಪ್ಪು ಸುಲ್ತಾನ್, ಬಾರ್ಕೂರು ಉದಯ, ಹೈದರಾಲಿ–ಟಿಪ್ಪು: ಇತಿಹಾಸ ಕಥನ, ಚಂದ್ರಶೇಖರ್ ಎಸ್., ವಸಾಹತುಕಾಲೀನ ಕರ್ನಾಟಕ, ಇರ್ಫಾನ್ ಹಬೀಬ್‌ರ ಕರೆಸ್ಪಾಂಡಿಂಗ್ ಕಲೋನಿಯಾಲಿ ಸಮ್ ರೆಸಿಟೆನ್ಸ್ ಆ್ಯಂಡ್ ಮಾಡ್ರನೈಜೆಷನ್ ಅಂಡರ್ ಹೈದರಾಲಿ, ಸ್ಟೇಟ್ ಆ್ಯಂಡ್ ಡಿಪ್ಲೊಮಸಿ ಅಂಡರ್ ಟಿಪ್ಪು ಸುಲ್ತಾನ್, ಶರ್ಮ ಎಚ್.ಡಿ., ಟಿಪ್ಪು ನಿಜ ಸ್ವರೂಪ, ವಿಲಿಯಂ ಇರ್ವಿನ್, ದಿ ಆರ್ಮಿ ಆಫ್ ದಿ ಇಂಡಿಯನ್ಸ್ ಮೊಗಲ್ಸ್, ಮೊಹಿಬುಲ್ ಹಸನ್, ಟಿಪ್ಪು ಸುಲ್ತಾನನ ಇತಿಹಾಸ, ಬುರುನ್ ಡೇ, ಸಮ್ ಸೋಶಿಯೋ ಪೊಲಿಟಿಕಲ್ ಇಂಡಿಕೇಷನ್ಸ್ ಆಫ್ ದಿ ಕೂಗ್‌ನೊಮೆನ್ಸ್ ಟಿಪ್ಪು ಸುಲ್ತಾನ್, ಗುರುರಾಜ ಬಿ., ಟಿಪ್ಪು! ಚಾರಿತ್ರಿಕ ಕಾದಂಬರಿ, ಲಿಂಗದೇವರು ಹಳೇಮನೆ, ಟಿಪ್ಪು ಲಾವಣಿಗಳು, ಕೊರಟಿ ಶ್ರೀನಿವಾಸರಾವ್ ಹೈದರ್–ಟಿಪ್ಪು, ಮೋಹನ್‌ಕೃಷ್ಣ ರೈ ಕೆ., ಚರಿತ್ರೆ ಅಧ್ಯಯನ ಸಂಪುಟ ೩, ಗೋವಿರಾಜು ಸಿ., ಚರಿತ್ರೆ ಅಧ್ಯಯನ ಸಂಪುಟ ೭, ವಿಜಯ್‌ಪೂಣಚ್ಚ ತಂಬಂಡ, ಚರಿತ್ರೆ ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನ, ವಿರೂಪಾಕ್ಷಿ

ಪೂಜಾರಹಳ್ಳಿ, ಚರಿತ್ರೆ ಅಧ್ಯಯನ ಸಂಪುಟ ೪, ಕಿರ್ಕ್‌ಪ್ಯಾಟ್ರಿಕ್, ಸಿಲೆಕ್ಟ್ ಲೆಟರ್ಸ್ ಆಫ್ ಟಿಪ್ಪು ಸುಲ್ತಾನ್, ಸುರೇಂದ್ರನಾಥ ಸೇನ್, ಸ್ಟಡೀಸ್ ಇನ್ ಇಂಡಿಯನ್ ಹಿಸ್ಟರಿ, ಪ್ರತಾಪಸಿಂಹ, ಟಿಪ್ಪು ಸುಲ್ತಾನ್ ಸ್ವಾತಂತ್ರ್ಯ ವೀರನಾ? ಕರ್ನಾಟಕ ವಿಮೋಚನಾ ರಂಗ, ಮೆಕೆನ್ಜಿಡ್ ರೋಡ್ರಿಕ್, ಸ್ಕೆಚ್ ಆಫ್ ದಿ ವಾರ್ ವಿಥ್ ಟಿಪ್ಪು ಸುಲ್ತಾನ್, ಎಡ್ವರ್ಡ್‌ಮೂರ್, ಎ ನರೇಟಿವ್ ಆಫ್ ದಿ ಆಪರೇಷನ್ಸ್ ಆಫ್ ದಿ ಕ್ಯಾಪ್ಟನ್ ಲಿಟ್ಸ್ ಡಿಸ್ ಪ್ಯಾಚ್‌ಮೆಂಟ್ಸ್, ಜಾನ್ ಮಾಲ್ಕೋಂಮ್, ದಿ ಪೊಲಿಟಿಕಲ್ ಹಿಸ್ಟರಿ ಆಫ್ ಇಂಡಿಯಾ, ಅಲೆಗ್ಸಾಂಡರ್ ಡಿ ರೋಮ್ಸ್, ನರೇಟಿವ್ ಆಫ್ ದಿ ಕ್ಯಾಂಪೇನ್ಸ್ ಇನ್ ಇಂಡಿಯಾ ವಿಚ್ ಟರ್ಮಿನೇಟೆಡ್ ದಿ ವಾರ್ ವಿಥ್ ಟಿಪ್ಪು ಸುಲ್ತಾನ್ ೧೭೯೨, ಗೋವಿಂದರಾಜು(ಪ್ರ.ಸಂ.), ಮೋಹನ್‌ಕೃಷ್ಣರೈ ಕೆ.(ಲೇ), ಚಾರಿತ್ರಿಕ ಕರ್ನಾಟಕ, ಖಾನ್ ಎಂ.ಎಚ್., ತಾರೀಖ್-ಇ- ಹಮೀದ್‌ಖಾನಿ, ಫಜುಲುಲ್ ಹಸನ್, ಟಿಪ್ಪು ಸುಲ್ತಾನ, ಶಿವರಾಮಯ್ಯ, ಟಿಪ್ಪು ಸುಲ್ತಾನ್, ಟಾರೆನ್ಸ್, ಟಿಪ್ಪುಸಾಹೀಬ್, ನಂಬಿಯರ್ ಓ.ಕೆ., ದಿ ಮೈಸೂರ್ ನೇವಿ, ಶಾಸ್ತ್ರಿ ಎನ್.ಕೆ., ಫ್ರೆಂಚ್ ಪಾಲಿಸಿ ಇನ್ ಇಂಡಿಯಾ ಇತ್ಯಾದಿ

ಮೈಸೂರ್ ಆರ್ಕಿಯಾಲಾಜಿಕಲ್ ರಿಪೋರ್ಟ್, ಮದ್ರಾಸ್ ಆರ್ಕೈವ್ಸ್, ಪಾಂಡಿಚೇರಿ ಆರ್ಕೈವ್ಸ್, ಕರ್ನಾಟಕ ರಾಜ್ಯ ಪತ್ರಾಗಾರ, ವಿಧಾನಸೌಧ, ಬ್ರಿಟಿಷ್ ಗೌರ್‍ನರ್ ಜನರಲ್ಸ್, ಅಧಿಕಾರಿಗಳು ನಡೆಸಿದ ಪತ್ರವ್ಯವಹಾರಗಳು, ಸುಮನ್ ವೆಂಕಟೇಶ್, ದಿ ಕರೆಸ್ಪಾಂಡೆಸ್ ಆಫ್ ದಿ ಫ್ರೆಂಚ್ ಡ್ಯೂರಿಂಗ್ ದಿ ರೀಜನ್ ಆಫ್ ಹೈದರಾಲಿ ಆ್ಯಂಡ್ ಟಿಪ್ಪು ಸುಲ್ತಾನ್, ವ್ಯಾಲೂಮ್ ೩, ಕರ್ನಾಟಕ ಹಿಸ್ಟರಿ ಕಾಂಗ್ರೆಸ್ ಪ್ರೊಸಿಡಿಂಗ್ಸ್, ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಪ್ರೊಸಿಡಿಂಗ್ಸ್, ಕರ್ನಾಟಕ ಇತಿಹಾಸ ಅಕಾಡೆಮಿ ವಾರ್ಷಿಕ ಸಂಚಿಕೆಗಳು, ಪ್ರಜಾವಾಣಿ, ಕನ್ನಡ ಪ್ರಭ, ವಿಜಯ ಕರ್ನಾಟಕ, ಇಂಡಿಯನ್ ಎಕ್ಸ್‌ಪ್ರೆಸ್, ಮಂಗಳೂರು ಸಮಾಚಾರ್, ಸಂಯುಕ್ತ ಕರ್ನಾಟಕ, ಪ್ರಬುದ್ಧ ಕರ್ನಾಟಕ ಇತ್ಯಾದಿ ದಿನಪತ್ರಿಕೆಗಳು, ಪ್ರಜಾಮತ, ಕರ್ಮವೀರ, ಸುಧಾ, ಹೊಸತು, ಲಂಕೇಶ್, ಅಗ್ನಿ, ಶೂದ್ರ ಇತ್ಯಾದಿ ವಾರಪತ್ರಿಕೆಗಳು, ಸಂಕ್ರಮಣ, ಸಾಧನೆ, ಚರಿತ್ರೆ ಅಧ್ಯಯನ, ಜರ್ನಲ್ ಆಫ್ ಹಿಸ್ಟಾರಿಕಲ್ ರಿಸರ್ಚ್ ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ ಇತ್ಯಾದಿ ನಿಯತಕಾಲಿಕೆಗಳನ್ನು ಅಧ್ಯಯನ ಮಾಡಿ ಅಗತ್ಯ ಕಂಡುಬಂದಲ್ಲಿ ಬಳಸಿಕೊಳ್ಳಲಾಗಿದೆ.

೧.೪. ಅಧ್ಯಯನದ ವಿಧಾನ

ಟಿಪ್ಪು ಸುಲ್ತಾನ್ ಹಾಗೂ ಫ್ರೆಂಚರ ನಡುವಿನ ಮಿಲಿಟರಿ ಮತ್ತು ರಾಜಕಾರಣ ಸಂಬಂಧಗಳ ನೆಲೆಯ ಈ ಅಧ್ಯಯನವು ಚರಿತ್ರೆ ಸಂಶೋಧನೆಯ ವಿಧಿ-ವಿಧಾನಗಳನ್ನು ಒಳಗೊಂಡಿದೆ. ಇಲ್ಲಿ ಲಭ್ಯವಿರುವ ಪ್ರಾಥಮಿಕ ಮತ್ತು ಇತರ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಚರಿತ್ರೆ ಬರವಣಿಗೆ

ಇತ್ತೀಚೆಗೆ ಹೊಸ ಆಯಾಮಗಳಿಂದ ರಚನೆಯಾಗುತ್ತಿದೆ. ವಸಾಹತುಶಾಹಿ ಮತ್ತು ರಾಷ್ಟ್ರೀಯವಾದಿ ಚರಿತ್ರೆಕಾರರು ರೂಪಿಸಿದ ಚರಿತ್ರೆಗಿಂತ ಭಿನ್ನವಾಗಿಯೇ ಚರಿತ್ರೆಯನ್ನು ನೋಡುವ, ವ್ಯಾಖ್ಯಾನಿಸುವ ಹಾಗೂ ದಾಖಲಿಸುವ ಕೆಲಸ ನಡೆಯುತ್ತಿದೆ. ಬಹು ಹಿಂದಿನಿಂದಲೂ ಚರಿತ್ರೆಯು ಅರಸಕೇಂದ್ರಿತವಾಗಿತ್ತು. ಅದು ಬದಲಾಗಿ ಜನಮುಖಿ ಕೇಂದ್ರಿತ ಚರಿತ್ರೆ ರಚನೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಚಾರಿತ್ರಿಕ ಘಟನೆಗಳನ್ನು ಸೈದ್ಧಾಂತಿಕ, ವೈಧಾನಿಕ ನೆಲೆಗಟ್ಟಿನಿಂದ ನೋಡುವ ಪ್ರಯತ್ನ ಮಾಡಲಾಗಿದೆ. ವ್ಯಕ್ತಿನಿಷ್ಠ ಚರಿತ್ರೆಗಿಂತ ವಸ್ತುನಿಷ್ಠ ಚರಿತ್ರೆಯನ್ನು ದೃಷ್ಟಿಕೋನದಲ್ಲಿರಿಸಿಕೊಂಡು ಅಧ್ಯಯನ ನಡೆಸಲಾಗಿದೆ. ಲಭ್ಯವಿರುವ ಆಕರ ಗ್ರಂಥಗಳನ್ನು ತೌಲನಿಕವಾಗಿ ಅಭ್ಯಸಿಸಿ ದಾಖಲಿಸಲಾಗಿದೆ. ತಪ್ಪು ನಿರೂಪಣೆಗಳು ಚರಿತ್ರೆಯ ಘಟನೆಗಳಿಗೆ ಅಚಾರಿತ್ರಿಕತೆಯ ಅಪಾಯವನ್ನು ತರುತ್ತವೆ. ಅದು ಸಮಾಜದ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಬೀರಬಹುದು. ಈ ಸೂಕ್ಷ್ಮತೆಗಳನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ.

ಇತ್ತೀಚೆಗೆ ಬದಲಾದ ಸನ್ನಿವೇಶದಲ್ಲಿ ಚಾರಿತ್ರಿಕ ಘಟನೆಗಳು ಮತ್ತು ವ್ಯಕ್ತಿಗಳನ್ನು ರಾಜಕಾರಣದ ಲಾಭಕ್ಕೆ ಬಳಸಿಕೊಳ್ಳುವ ಅಪಾಯವು ಬಂದೊದಗಿದೆ. ಹೈದರ್ ಮತ್ತು ಟಿಪ್ಪು ಚರಿತ್ರೆಯು ಇದಕ್ಕೆ ಹೊರತಾಗಿಲ್ಲ. ಟಿಪ್ಪುವಿನ ಆಳ್ವಿಕೆಯನ್ನು ಕುರಿತು ಪ್ರಸ್ತುತ ಕಾಲಘಟ್ಟದಲ್ಲಿ ಹೆಚ್ಚು ಚರ್ಚೆಗಳು ಹುಟ್ಟಿಕೊಂಡಿವೆ. ಪರ–ವಿರುದ್ಧ ವಾದ–ವಿವಾದಗಳು ನಡೆಯುತ್ತಿವೆ. ಧರ್ಮ ಮತ್ತು ಭಾಷಿಕ ನೆಲೆಯಿಂದಲೇ ಇಡೀ ಟಿಪ್ಪುವಿನ ಆಳ್ವಿಕೆಯನ್ನು ನೋಡುವ ವೈರುಧ್ಯವು ಬಂದೊದಗಿದೆ. ಇಂಥ ಸನ್ನಿವೇಶದಲ್ಲಿ ಟಿಪ್ಪುವಿನ ವ್ಯಕ್ತಿತ್ವ ಮತ್ತು ಆಳ್ವಿಕೆಯ ಕಾಲಘಟ್ಟದ ರಾಜಕಾರಣ, ಆರ್ಥಿಕಾಭಿವೃದ್ಧಿ, ಧರ್ಮ ಮತ್ತು ಭಾಷಿಕ ವಿಚಾರಗಳನ್ನು ಸೂಕ್ಷ್ಮವಾಗಿಯೇ ಅವಲೋಕಿಸ ಬೇಕಾಗುತ್ತದೆ. ವಸಾಹತುಶಾಹಿ, ರಾಷ್ಟ್ರೀಯವಾದಿ, ಮಾರ್ಕ್ಸ್‌ವಾದಿ ಹಾಗೂ ಪ್ರಗತಿಪರ ಚಿಂತಕರ ಬರವಣಿಗೆಯ ಒಲವುಗಳನ್ನು ಕಂಡುಕೊಳ್ಳಲಾಗಿದೆ. ಹೈದರ್ ಮತ್ತು ಟಿಪ್ಪು ಸುಲ್ತಾನರನ್ನು ಕೇವಲ ಮೈಸೂರು ರಾಜ್ಯ ಮತ್ತು ರಾಜಕಾರಣಕ್ಕೆ ಸೀಮಿತಗೊಳಿಸದೆ ಇಡೀ ದಕ್ಷಿಣ ಭಾರತದ ರಾಜಕಾರಣದಲ್ಲಿ ಟಿಪ್ಪುವನ್ನು ಒಬ್ಬ ರಾಜನನ್ನಾಗಿ ಹೇಗೆ ನೋಡಬಹುದು ಎನ್ನುವ ಹಿನ್ನೆಲೆಯಾಗಿ ಇಟ್ಟುಕೊಂಡು ಮಹಾಪ್ರಬಂಧವನ್ನು ರಚಿಸಲಾಗಿದೆ.

೧.೫. ಅಧ್ಯಯನದ ಸ್ವರೂಪ

ಈ ಅಧ್ಯಯನವು ಟಿಪ್ಪು ಸುಲ್ತಾನ್ ಹಾಗೂ ಫ್ರೆಂಚರು: ಮಿಲಿಟರಿ ಮತ್ತು ರಾಜಕಾರಣ ನೆಲೆಯ ಅಧ್ಯಯನ ಎನ್ನುವ ಶೀರ್ಷಿಕೆಯನ್ನು ಹೊಂದಿದ್ದು, ವಿಶ್ಲೇಷಣಾತ್ಮಕ ಅಧ್ಯಯನದ ಸ್ವರೂಪವನ್ನು ಹೊಂದಿದೆ. ಇದರಲ್ಲಿ ಒಂಬತ್ತು ಅಧ್ಯಾಯಗಳಿದ್ದು ಅವುಗಳ ವಿಸ್ತೃತ ಸ್ವರೂಪವನ್ನು ಚರಿತ್ರೆಯ ದಾಖಲೆಗಳ ಮೂಲಕವೇ ವಿಶ್ಲೇಷಿಸಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಚರಿತ್ರೆ

ಅಧ್ಯಯನದ ವಿಧಿ-ವಿಧಾನಗಳು. ಚರಿತ್ರಕಾರರ ದೃಷ್ಟಿಕೋನ, ಆಯಾಮಗಳು, ಸೈದ್ಧಾಂತಿಕ ನಿಲುವುಗಳನ್ನು ವಿಶ್ಲೇಷಿಸಲಾಗಿದೆ. ಪ್ರಸ್ತಾವನೆ, ಅಧ್ಯಯನದ ಉದ್ದೇಶ, ಅಧ್ಯಯನದ ವಿಧಾನ, ಅಧ್ಯಯನದ ಸಮೀಕ್ಷೆ, ಅಧ್ಯಯನದ ಸ್ವರೂಪ, ಅಧ್ಯಯನದ ವ್ಯಾಪ್ತಿ ಈ ಹಂತಗಳಲ್ಲಿ ಚರ್ಚಿಸಲಾಗಿದೆ. ಚಾರಿತ್ರಿಕ ಘಟನೆಗಳನ್ನು ವಿವರಿಸುವ ದಾಖಲೆಗಳನ್ನು ಬರೆದವರು ಯಾರು? ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. ಅಂದಿನ ಕಾಲಘಟ್ಟದ ರಾಜಕೀಯ, ಆರ್ಥಿಕ, ಧಾರ್ಮಿಕ ಹಾಗೂ ಸಾಮಾಜಿಕ ವ್ಯವಸ್ಥೆಗಳನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಚಾರಿತ್ರಿಕ ಪುರಾವೆಗಳನ್ನು ಅಧ್ಯಯನ ಮಾಡುವಾಗ ಇದು ಪೂರ್ವಾಗ್ರಹವೇ, ವ್ಯಕ್ತಿನಿಷ್ಠವೇ ಅಥವಾ ವಸ್ತುನಿಷ್ಠವೇ ಎಂಬುದನ್ನು ಸೂಕ್ಷ್ಮತೆಯಿಂದ ಗ್ರಹಿಸಬೇಕಾಗುತ್ತದೆ. ಗತದ ವಿಚಾರಗಳನ್ನು ವರ್ತಮಾನದಲ್ಲಿ ಹೇಗೆ ನೋಡಲಾಗುತ್ತಿದೆ, ಹೇಗೆ ಬಳಸಲಾಗುತ್ತಿದೆ ಎಂಬ ಚರ್ಚೆಗಳು ಈ ಅಧ್ಯಾಯದಲ್ಲಿ ಸೇರಿವೆ. ಭಾರತದ ಚರಿತ್ರೆಯನ್ನು ಹಲವು ದೇಶಿಯ ಮತ್ತು ವಿದೇಶಿಯ ಚರಿತ್ರಕಾರರು, ಬರಹಗಾರರು, ತಮ್ಮ ಸೈದ್ಧಾಂತಿಕ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಕೆಲವು ವಾದಗಳು ವಾಸ್ತವ ನೆಲೆಗಟ್ಟಿನಿಂದ ಕೂಡಿದ್ದರೆ ಮತ್ತೆ ಕೆಲವರ ಧೋರಣೆಗಳು ಅವಾಸ್ತವಿಕತೆಯಿಂದ ಕೂಡಿವೆ. ಜನಮುಖಿ ಅಧ್ಯಯನಕ್ಕಿಂತ ಅರಸಕೇಂದ್ರಿತ ಬರವಣಿಗೆಗಳು ಹೆಚ್ಚು ಹುಟ್ಟಿಕೊಂಡಿವೆ. ಇವು ವಾಸ್ತವ ಸ್ಥಿತಿಗತಿಗಳನ್ನು ಪೂರ್ಣವಾಗಿ ತಿಳಿಸಲು ವಿಫಲವಾಗಿವೆ. ಚರಿತ್ರೆ ಬರವಣಿಗೆಯಲ್ಲಿ ವಿವಿಧ ಪಂಥಗಳು ಹುಟ್ಟಿಕೊಂಡಿವೆ. ವಸಾಹತುಶಾಹಿ, ಸಾಮ್ರಾಜ್ಯಶಾಹಿ, ರಾಷ್ಟ್ರೀಯವಾದಿ, ಮಾರ್ಕ್ಸ್‌ವಾದಿ, ಸಬಾಲ್ಟರ್ನ್ ಮುಂತಾದ ಪಂಥಗಳ ಚರಿತ್ರಕಾರರು ತಮ್ಮ ಸೈದ್ಧಾಂತಿಕ ಹಿನ್ನೆಲೆಯಲ್ಲಿ ಚರಿತ್ರೆ ರಚಿಸಿದ್ದಾರೆ.

ಎರಡನೆಯ ಅಧ್ಯಾಯದಲ್ಲಿ ಟಿಪ್ಪುವಿನ ರಾಜ್ಯಾಡಳಿತ, ಅವನ ಹೋರಾಟಗಳು, ಒಪ್ಪಂದಗಳು ಹಾಗೂ ವ್ಯಕ್ತಿತ್ವವನ್ನು ಚರಿತ್ರಕಾರರ ಸೈದ್ಧಾಂತಿಕ ನಿಲುವುಗಳ ಮೂಲಕ ವಿವರಿಸಲಾಗಿದೆ. ವಸಾಹತುಶಾಹಿ ಬರಹಗಾರರು ಟಿಪ್ಪುವಿನ ವ್ಯಕ್ತಿತ್ವವನ್ನು, ಧರ್ಮ ಮತ್ತು ಭಾಷಿಕ ನೆಲೆಯಿಂದಲೇ ನೋಡಿದ್ದಾರೆ. ಟಿಪ್ಪು ಬ್ರಿಟಿಷ್ ವಿರೋಧಿ ಮನೋಭಾವ ಹೊಂದಿದ್ದು, ವಸಾಹತುಶಾಹಿತ್ವದ ಪ್ರಬಲ ವಿರೋಧಿಯಾಗಿದ್ದ. ಬ್ರಿಟಿಷ್ ಚರಿತ್ರಕಾರರು, ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಗಳು ಟಿಪ್ಪು ಒಬ್ಬ ಹಿಂದೂ ವಿರೋಧಿ, ಮತಾಂಧ, ಇಸ್ಲಾಮೀಕರಣಕ್ಕೆ ಹೆಚ್ಚು ಒತ್ತು ನೀಡಿದ, ಪರ್ಶಿಯನ್ ಭಾಷೆಯನ್ನು ಪ್ರೋತ್ಸಾಹಿಸಿದ, ಮತಾಂತರಗೊಳಿಸಿದ, ಕ್ರೂರನೀತಿ ಅನುಸರಿಸಿದ ಎಂದೆಲ್ಲ ಬಿಂಬಿಸಿದ್ದಾರೆ. ಚರಿತ್ರೆಯಲ್ಲಿ ಕೋಮುವಾದವನ್ನು ಹುಟ್ಟುಹಾಕಿದ್ದಾರೆ, ವಸಾಹತುಶಾಹಿ ಬರಹಗಾರರ ಧೋರಣೆಗಳಂತೆಯೇ ರಾಷ್ಟ್ರೀಯವಾದಿಗಳ ಬರವಣಿಗೆಗಳು ಇದ್ದವು. ಹಲವು ರಾಷ್ಟ್ರೀಯವಾದಿಗಳು ಟಿಪ್ಪು ಮತಾಂಧ, ಸ್ವಧರ್ಮಿಷ್ಠ, ದೇಶದ್ರೋಹಿ, ಕನ್ನಡ ಭಾಷಾ ವಿರೋಧಿ ಎಂಬ ವಾದಗಳನ್ನೆ ಮುಂದಿಟ್ಟಿದ್ದಾರೆ. ಇನ್ನು ಮಾರ್ಕ್ಸ್‌ವಾದಿಗಳು ರಾಜ್ಯಾಡಳಿದ ಅವನ ಪ್ರಗತಿಪರ ನಿಲುವುಗಳನ್ನು ವಿಶ್ಲೇಷಿಸಿದ್ದಾರೆ. ರಾಜ್ಯದ ಎಲ್ಲ ಜನಾಂಗದ ಜನರ ಭಾವನೆಗಳಿಗೆ

ಟಿಪ್ಪುವಿನ ಸ್ಪಂದನೆ ಹೇಗಿತ್ತು, ಬ್ರಿಟಿಷರನ್ನು ಭಾರತದಿಂದಲೇ ಹೊರದೂಡುವಲ್ಲಿ ಅವನ ರಾಜಕಾರಣ, ರಾಜ್ಯದ ಪ್ರಗತಿಗೆ ತೆಗೆದುಕೊಂಡ ಕ್ರಮಗಳು, ಆರ್ಥಿಕ ಪ್ರಯೋಗಗಳು ಈ ಹಿನ್ನೆಲೆಯಲ್ಲಿ ಈ ಪಂಥದ ಬರಹಗಾರರು ವಿವರಿಸಿದ್ದಾರೆ. ಪ್ರಗತಿಪರರು ಟಿಪ್ಪುವಿನ ಬಗ್ಗೆ ತಳೆದ ಧೋರಣೆಗಳ ಕುರಿತು ಚರ್ಚಿಸಲಾಗಿದೆ. ಟಿಪ್ಪುವಿನ ಆಡಳಿತ ನೀತಿ ಮತ್ತು ಧಾರ್ಮಿಕ ಹಾಗೂ ಭಾಷಾ ನೀತಿ ವಿಚಾರವಾಗಿ ಪರ-ವಿರುದ್ಧ ವಾದಗಳು ಹುಟ್ಟಿಕೊಂಡವು. ಇದರಲ್ಲಿ ಸಾಹಿತಿಗಳು ತಮ್ಮ ಅಭಿಪ್ರಾಯಗಳನ್ನು ಪ್ರತಿಪಾದಿಸಿದರು. ಇದು ಈ ಅಧ್ಯಾಯದಲ್ಲಿ ಚರ್ಚಿತಗೊಂಡಿದೆ. ವರ್ತಮಾನದಲ್ಲಿ ಟಿಪ್ಪುವಿನ ವಿಚಾರಗಳು ಹೆಚ್ಚು ಹೆಚ್ಚು ಚರ್ಚೆಗೆ ಒಳಗಾಗುತ್ತಿದೆ.

ಮೂರನೆಯ ಅಧ್ಯಾಯವು ಹೈದರಾಲಿ ಮತ್ತು ಟಿಪ್ಪುವಿನ ಆಡಳಿತ ಸ್ವರೂಪವನ್ನು ತಿಳಿಸುವಂತಹದು. ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಮೈಸೂರು ರಾಜಕಾರಣದಲ್ಲಿ ಹೇಗೆ ಪ್ರವೇಶ ಪಡೆದರು, ಮೈಸೂರು ಒಡೆಯರ ಮನೆತನದ ಆಂತರಿಕ ವ್ಯವಹಾರಗಳು, ದಳವಾಯಿಗಳ ರಾಜಕೀಯ ತಂತ್ರಗಾರಿಕೆ, ಅರಮನೆಯ ರಾಜಕಾರಣ, ಬ್ರಿಟಿಷರ ಬೋಧನೋಪಾಯ ನೀತಿಗಳು, ಮೈಸೂರು ರಾಜ್ಯಾಡಳಿತವನ್ನು ಕಸಿದುಕೊಳ್ಳಲು ಅವರು ನಡೆಸಿದ ರಾಜಕೀಯ ಹುನ್ನಾರಗಳು ಕುರಿತು ವಿವರಿಸಲಾಗಿದೆ. ಹೈದರಾಲಿ ಮತ್ತು ಟಿಪ್ಪುವಿನ ಆಡಳಿತ ನೀತಿಗಳು, ಪ್ರಗತಿಪರ ಕಾರ್ಯಕ್ರಮಗಳು, ಐರೋಪೀಕರಣ ಪ್ರಕ್ರಿಯೆ ಇತ್ಯಾದಿ ಆಡಳಿತಾತ್ಮಕ ಸುಧಾರಣೆಗಳು ಚರ್ಚಿವಾಗಿವೆ. ಟಿಪ್ಪುವಿನ ಧಾರ್ಮಿಕ ಧೋರಣೆ ಮತ್ತು ಭಾಷಾನೀತಿಯ ಬಗ್ಗೆ ವಿಶ್ಲೇಷಿಸಲಾಗಿದೆ. ಇತ್ತೀಚೆಗೆ ಈ ಎರಡೂ ವಿಚಾರಗಳು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಹೆಚ್ಚು ಚರ್ಚೆಗೆ ಗ್ರಾಸವಾಗಿದೆ. ಇಂದಿನ ರಾಜಕಾರಣದಲ್ಲಿ ಟಿಪ್ಪುವಿನ ಧಾರ್ಮಿಕ ಮತ್ತು ಭಾಷಿಕ ನೀತಿಗಳು ಬೆಸೆದುಕೊಂಡಿವೆ. ಚುನಾವಣೆಯ ಸಂದರ್ಭದಲ್ಲಿಯು ರಾಜಕೀಯ ಲಾಭಕ್ಕೆ ಇದನ್ನು ಬಳಸಿಕೊಳ್ಳಲಾಗುತ್ತಿದೆ. ಟಿಪ್ಪು ಒಬ್ಬ ರಾಷ್ಟ್ರಪ್ರೇಮಿ, ಸ್ವತಂತ್ರವೀರ ಎನ್ನುವ ವಾದಗಳಿಗೆ ವಿರುದ್ಧ ವಾದಗಳು ಹುಟ್ಟಿಕೊಂಡು ಹಲವು ಬಾರಿ ಸಂಘರ್ಷದ ಸಂದರ್ಭವನ್ನು ಸೃಷ್ಟಿಸಿವೆ. ಕೋಮುವಾದಕ್ಕೆ ದಾರಿಮಾಡಿಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಚರ್ಚಿಸಿರುವುದನ್ನು ಈ ಅಧ್ಯಾಯ ಒಳಗೊಂಡಿದೆ.

ನಾಲ್ಕನೆಯ ಅಧ್ಯಾಯವು ಬ್ರಿಟಿಷ್ ವಿರೋಧಿ ನೀತಿಯ ಹಿನ್ನೆಲೆಯನ್ನು ಒಳಗೊಂಡಿದೆ. ಬ್ರಿಟಿಷರನ್ನು ಸಮರ್ಥವಾಗಿ ವಿರೋಧಿಸಲು ಟಿಪ್ಪು ಫ್ರೆಂಚರ ನೆರವನ್ನು ಯಾಚಿಸುತ್ತಾನೆ. ಈ ವಿವರಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ವಿವರಿಸಲಾಗಿದೆ. ಟಿಪ್ಪುವು ಬ್ರಿಟಿಷರ ವ್ಯಾಪಾರದ ಮೇಲೆ ನಿಯಂತ್ರಣ ಸಾಧಿಸಲು ಪ್ರಯತ್ನಿಸಿದ. ರಾಜ್ಯದಲ್ಲಿ ಏಕಸ್ವಾಮ್ಯ ಸ್ಥಾಪಿಸಲು ಬೇಕಾದ ವ್ಯಾಪಾರ-ವಾಣಿಜ್ಯ ನೀತಿಗಳನ್ನು ಜಾರಿಗೆ ತಂದನು. ರಪ್ತು ವ್ಯಾಪಾರಕ್ಕೆ ಹೆಚ್ಚು ಉತ್ತೇಜನ ನೀಡಿದನು. ಟರ್ಕಿ, ಇರಾನ್, ಆಫ್ಘಾನಿಸ್ತಾನ, ಫ್ರಾನ್ಸ್ ಇತ್ಯಾದಿ ದೇಶಗಳೊಂದಿಗೆ ವ್ಯಾಪಾರ ಒಪ್ಪಂದಗಳನ್ನು ಏರ್ಪಡಿಸಿಕೊಂಡನು. ಬ್ರಿಟಿಷರ ವ್ಯಾಪಾರ-ವಾಣಿಜ್ಯದ ನೀತಿಗಳನ್ನು ಬಲವಾಗಿ ವಿರೋಧಿಸಿದನು.

ಅವರ ಲಾಭಕೋರತನಕ್ಕೆ ಕಡಿವಾಣ ಹಾಕಿದನು. ಆರ್ಥಿಕ ವಲಯದಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ನಡೆಸಿದನು. ಕೃಷಿ, ಕೈಗಾರಿಕೆ, ನೀರಾವರಿ ಇವುಗಳ ಅಭಿವೃದ್ಧಿಗೆ ಒತ್ತು ನೀಡಿದನು. ಪಾಶ್ಚಾತ್ಯ ತಾಂತ್ರಿಕತೆಯನ್ನು ಮೈಸೂರು ರಾಜ್ಯಕ್ಕೆ ಪರಿಚಯಿಸಿದನು. ಬ್ರಿಟಿಷರನ್ನು ಭಾರತದಿಂದಲೇ ಹೊರದೂಡುವ ಕಾರ್ಯದಲ್ಲಿ ನಡೆಸಿದ ಆಂಗ್ಲೋ-ಮೈಸೂರು ಯುದ್ಧಗಳು ಹಾಗೂ ಬ್ರಿಟಿಷರೊಂದಿಗಿನ ಒಪ್ಪಂದಗಳ ಕುರಿತು ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಟಿಪ್ಪು ರಾಜ್ಯದ ಶೀಘ್ರ ಪ್ರಗತಿಗಾಗಿ ಕೈಗೊಂಡ ಆರ್ಥಿಕ ಕಾರ್ಯಕ್ರಮಗಳನ್ನು ಕುರಿತು ಚರ್ಚಿಸಲಾಗಿದೆ. ಟಿಪ್ಪು ಫ್ರೆಂಚರೊಂದಿಗೆ ವ್ಯಾಪಾರ-ವಾಣಿಜ್ಯ ಸಂಪರ್ಕ ಹೊಂದಲು ಪತ್ರವ್ಯವಹಾರ ಮತ್ತು ರಾಯಭಾರ ಸಂಬಂಧಗಳನ್ನು ಏರ್ಪಡಿಸಿಕೊಂಡನು. ಮೈಸೂರು ರಾಜ್ಯದಲ್ಲಿ ಫ್ರೆಂಚ್ ಮಾದರಿಯ ಆಧುನೀಕರಣಕ್ಕೆ ಚಾಲನೆ ನೀಡಿದನು. ಕೃಷಿ, ವಾಣಿಜ್ಯ, ಕೈಗಾರಿಕೆ, ಶಸ್ತ್ರಾಸ್ತ್ರ, ಮಿಲಿಟರಿ ಹಾಗೂ ನೌಕಾಪಡೆಯ ಆಧುನೀಕರಣಕ್ಕೆ ಒತ್ತು ನೀಡಿದನು. ಈ ಆದ್ಯತಾ ವಲಯದಲ್ಲಿ ಪರಿಣಿತರಾದ ತಂತ್ರಜ್ಞರನ್ನು ರಾಜ್ಯಕ್ಕೆ ಆಹ್ವಾನಿಸಿದನು. ಯುರೋಪಿನ ಮಾದರಿಗಳನ್ನು ರಾಜ್ಯದಲ್ಲಿ ಅಳವಡಿಸಿದನು.

ಆರನೆಯ ಅಧ್ಯಾಯದಲ್ಲಿ ಟಿಪ್ಪು ಹೊರ ಜಗತ್ತಿನೊಡನೆ ಸಂಪರ್ಕ ಬೆಳೆಸಿದ ವಿಚಾರಗಳನ್ನು ಚರ್ಚಿಸಲಾಗಿದೆ. ಫ್ರಾನ್ಸ್, ಟರ್ಕಿ, ಆಫ್ಘಾನಿಸ್ತಾನ ಇರಾನ್ ಮೊದಲಾದ ನೆರೆಹೊರೆಯ ರಾಷ್ಟ್ರಗಳೊಂದಿಗೆ ಸಂಬಂಧ ಬೆಳೆಸಿದನು. ಇದರಲ್ಲಿ ವಾಣಿಜ್ಯೋದ್ಯಮ, ಕೈಗಾರಿಕೋದ್ಯಮ ಅಭಿವೃದ್ಧಿಪಡಿಸುವುದು, ಬ್ರಿಟಿಷರನ್ನು ಎದುರಿಸಲು ಬೇಕಾದ ಮಿಲಿಟರಿ ಶಕ್ತಿಯನ್ನು ಬಲಪಡಿಸುವುದು. ಸೈನಿಕ ಸಹಾಯ ಪಡೆದುಕೊಳ್ಳುವ ಧ್ಯೇಯವಿತ್ತು. ಈ ಅಂತರ್ದೇಶಿ ಸಂಬಂಧಗಳಿಂದ ಟಿಪ್ಪುವಿಗೆ ಆದ ಲಾಭವೆಷ್ಟು ಹಾಗೂ ಅದರ ಪರಿಣಾಮಗಳ ಕುರಿತು ವಿವರಿಸಲಾಗಿದೆ.

ಏಳನೆಯ ಅಧ್ಯಾಯವು ಟಿಪ್ಪು ಮತ್ತು ಫ್ರೆಂಚರ ರಾಜಕೀಯ ಸಂಬಂಧಗಳ ಬಗೆಯನ್ನು ವಿವರಿಸುವುದಾಗಿದೆ. ಬ್ರಿಟಿಷರನ್ನು ಭಾರತದಿಂದ ಹೊರಹಾಕಲು ಟಿಪ್ಪು ಸ್ಥಳೀಯ ಶಕ್ತಿಗಳ ಒಕ್ಕೂಟ ರಚನೆಗೆ ಯತ್ನಿಸಿದನು. ಟಿಪ್ಪುವಿನ ಧ್ಯೇಯಗಳು ಇಲ್ಲಿನ ಹಲವು ರಾಜರುಗಳಿಗೆ, ಪಾಳೆಯಗಾರರಿಗೆ ಅರ್ಥವಾಗಲಿಲ್ಲ. ಮರಾಠರು, ಹೈದರಾಬಾದಿನ ನಿಜಾಮ ಟಿಪ್ಪುವಿನೊಂದಿಗೆ ಸಖ್ಯ ಬೆಳೆಸಲು ಇಚ್ಛಿಸಲಿಲ್ಲ. ತಮ್ಮ ಅಧಿಕಾರ ವಿಸ್ತರಣೆ ಮತ್ತು ಸಂಪತ್ತಿನ ವ್ಯಾಮೋಹ ಅವರನ್ನು ಹಾಗೆ ಮಾಡಿತು. ಟಿಪ್ಪು ಪ್ರಬಲಗೊಳ್ಳುವುದನ್ನು ಅವರು ಸಹಿಸಲಿಲ್ಲ. ಮೈಸೂರು ರಾಜ್ಯವನ್ನು ಆಕ್ರಮಿಸುವ ಹುನ್ನಾರಗಳನ್ನು ನಡೆಸುತ್ತಿದ್ದರು. ಬ್ರಿಟಿಷರೊಂದಿಗೆ ಮಿಲಿಟರಿ ಸಹಾಯಕ ಒಪ್ಪಂದ ಮಾಡಿಕೊಂಡರು. ಟಿಪ್ಪು ಒಬ್ಬನೆ ಬ್ರಿಟಿಷರ ಒಕ್ಕೂಟ ಶಕ್ತಿಯನ್ನು ಎದುರಿಸಲು

ಸಾಧ್ಯವಿರಲಿಲ್ಲ. ಆದರಿಂದಲೇ ಫ್ರಾನ್ಸಿನ ನೆರವು ಪಡೆಯಲು ಇಚ್ಛಿಸಿದ. ಫ್ರಾನ್ಸ್ ಮತ್ತು ಇಂಗ್ಲೆಂಡ್ ಯುರೋಪಿನಲ್ಲಿ ಪರಸ್ಪರ ಕಾದಾಡುತ್ತಿದ್ದರು. ಫ್ರಾನ್ಸಿಗೆ ಇಂಗ್ಲೆಂಡ್ ಶತ್ರುವಾಗಿ ಪ್ರತಿಸ್ಪರ್ಧೆ ನಡೆಸುತ್ತಿತ್ತು. ಅಲ್ಲಿ ಯಾವುದೇ ಯುದ್ಧ ನಡೆದರೆ ಅದರ ಬಿಸಿ ಭಾರತಕ್ಕೂ ತಟ್ಟುತ್ತಿತ್ತು. ಇಂತಹ ಸಂದರ್ಭವನ್ನು ಅರ್ಥಮಾಡಿಕೊಂಡ ಟಿಪ್ಪು ಫ್ರಾನ್ಸಿನ ಚಕ್ರವರ್ತಿ ಹದಿನಾರನೆಯ ಲೂಯಿಯ ಆಸ್ಥಾನಕ್ಕೆ ತನ್ನ ರಾಯಭಾರ ನಿಯೋಗ ಕಳುಹಿಸಿದ. ಪತ್ರವ್ಯವಹಾರ ನಡೆಸಿದ. ಇದರ ಮೂಲಕವೇ ಫ್ರಾನ್ಸಿನೊಂದಿಗೆ ಉತ್ತಮ ಬಾಂಧವ್ಯ ಸಂಪಾದಿಸಲು ಪ್ರಯತ್ನಿಸಿದ. ಬ್ರಿಟಿಷರೊಂದಿಗೆ ನಡೆಸುವ ಯುದ್ಧಗಳಲ್ಲಿ ಸೈನಿಕ ನೆರವು ನೀಡುವಂತೆ ಕೋರಿದ. ಫ್ರಾನ್ಸಿನ ರಾಜಕಾರಣದ ಬದಲಾದ ಸನ್ನಿವೇಶದಲ್ಲಿ ಫ್ರಾನ್ಸ್ ಮಹಾಕ್ರಾಂತಿಯ ನಂತರ ಅಧಿಕಾರ ಚುಕ್ಕಾಣಿ ಹಿಡಿದ ನೆಪೋಲಿಯನ್ ಬೋನಾಪಾರ್ಟೆ ಯೊಂದಿಗೆ ತನ್ನ ಪತ್ರವ್ಯವಹಾರ ಮತ್ತು ರಾಯಭಾರ ಸಂಬಂಧವನ್ನು ಮುಂದುವರಿಸಿದ. ನೆಪೋಲಿಯನ್ ಒಂದು ಹಂತದಲ್ಲಿ ಟಿಪ್ಪುವಿಗೆ ಸೈನಿಕ ನೆರವು ನೀಡುವ ಭರವಸೆಯನ್ನೂ ನೀಡಿದ. ಆದರೆ ಅದು ಫಲಕಾರಿಯಾಗಲಿಲ್ಲ. ಟಿಪ್ಪು ಫ್ರಾನ್ಸಿನ ಜಾಕೋಬಿನ್ ಕ್ಲಬ್‌ನ ಕಾರ್ಯವೈಖರಿಯನ್ನು ಶ್ಲಾಘಿಸಿದ. ಅದರ ಶಾಖೆಯು ಶ್ರೀರಂಗಪಟ್ಟಣದಲ್ಲಿ ಸ್ಥಾಪಿತವಾಗಲು ಅನುಮತಿಸಿದ. ಈ ಹಂತದಲ್ಲಿ ಟಿಪ್ಪುವು ಫ್ರೆಂಚರೊಂದಿಗೆ ವ್ಯವಹರಿಸಿದ್ದರಿಂದ ದೊರೆತ ಲಾಭವೆಷ್ಟು, ಫ್ರೆಂಚರು ಯಾಕೆ ನಿರೀಕ್ಷಿತ ಪ್ರಮಾಣದಲ್ಲಿ ನೆರವು ನೀಡಲು ಸಾಧ್ಯವಾಗಲಿಲ್ಲ. ಅವರ ರಾಜಕೀಯ ಧೋರಣೆಗಳು ಏನು ಈ ಎಲ್ಲ ವಿಚಾರಗಳ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಟಿಪ್ಪು ಸುಲ್ತಾನನು ಫ್ರೆಂಚರೊಂದಿಗೆ ಹೊಂದಿದ್ದ ಮಿಲಿಟರಿ ಸಂಬಂಧಗಳ ಬಗ್ಗೆ ಅಧ್ಯಯನ ನಡೆಸಲಾಗಿದೆ. ಫ್ರಾನ್ಸಿನೊಂದಿಗೆ ಟಿಪ್ಪು ಮಾಡಿಕೊಂಡ ಮಿಲಿಟರಿ ಒಪ್ಪಂದಗಳು, ಸೈನಿಕರ ನೇಮಕಾತಿ, ಮಿಲಿಟರಿ ಕಾಯಿದೆಗಳು, ಶಸಾಸ್ತ್ರಗಳಲ್ಲಿ ಬದಲಾವಣೆ, ಸೈನಿಕ ಠಾಣೆಗಳು, ಸೈನಿಕ ಆಡಳಿತ ಕುರಿತು ಚರ್ಚಿಸಲಾಗಿದೆ. ಟಿಪ್ಪು ತನ್ನ ಸೈನಿಕ ಬಲವನ್ನು ಹೆಚ್ಚಿಸಲು ಮುಂದಾದನು. ಫ್ರೆಂಚ್ ಮಾದರಿಯಲ್ಲಿ ಸೈನ್ಯವನ್ನು ತರಬೇತಿಗೊಳಿಸಲು ಅಗತ್ಯ ಕ್ರಮ ಕೈಗೊಂಡನು. ಯುರೋಪಿನ ಯುದ್ಧಕಲೆಯನ್ನು ತನ್ನ ಸೈನಿಕರಿಗೆ ಕಲಿಸಲು ಫ್ರೆಂಚ್ ತಂತ್ರಜ್ಞರನ್ನು ಆಹ್ವಾನಿಸಿದನು. ಸೈನ್ಯದಲ್ಲಿ ಶಿಸ್ತು ತರಲು ಮಿಲಿಟರಿ ಕಾಯಿದೆಗಳನ್ನು ಜಾರಿಗೆ ತಂದನು. ಶಸ್ತ್ರಾಸ್ತ್ರಗಳನ್ನು ಯುರೋಪ್ ಮಾದರಿಯಲ್ಲೆ ಆಧುನೀಕರಿಸಲು ಬೇಕಾದ ವ್ಯವಸ್ಥೆ ಮಾಡಿದನು. ಈ ಎಲ್ಲ ವಿಚಾರಗಳು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿತವಾಗಿವೆ.

ಕೊನೆಯ ಅಧ್ಯಾಯದಲ್ಲಿ ಸಂಶೋಧನಾ ವಿಷಯದ ಒಟ್ಟು ಫಲಿತಗಳ ಬಗ್ಗೆ ವಿವರಿಸಲಾಗಿದೆ. ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಬ್ರಿಟಿಷರ ವಸಾಹತು ನೀತಿಗೆ ಶಾಶ್ವತವಾಗಿ ಕಡಿವಾಣ

See page 311

ಹಾಕಲು ಪ್ರಯತ್ನಿಸಿದರು. ಬ್ರಿಟಿಷರನ್ನು ಎದುರಿಸುವುದು ಸುಲಭವಾಗಿರಲಿಲ್ಲ. ಆ ಕಾಲಕ್ಕೆ ಅವರದ್ದು ಮುಂದುವರಿದ ರಾಷ್ಟ್ರವಾಗಿತ್ತು. ಸೈನಿಕವಾಗಿಯು ಬಲಿಷ್ಠರಾಗಿದ್ದರು. ಜಗತ್ತಿನ ಹಲವು ಭಾಗಗಳಲ್ಲಿ ವಸಾಹತುಗಳನ್ನು ಸ್ಥಾಪಿಸಿದ್ದರು. ನೌಕಾ ಸಮರದಲ್ಲಿ ಪ್ರಥಮ ಸ್ಥಾನದಲ್ಲಿದ್ದರು. ಆಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದ್ದರು ಸೈನವು ಉತ್ತಮವಾದ ಸಮರಕೌಶಲ್ಯ ಹೊಂದಿತ್ತು. ಇಂತಹ ಸನ್ನಿವೇಶದಲ್ಲಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಬ್ರಿಟಿಷರನ್ನು ವಿರೋಧಿಸಿ ಹೋರಾಟಕ್ಕಿಳಿದರು. ಭಾರತೀಯ ಉಳಿದ ಅರಸರು ಇವರಿಗೆ ಕೈ ಜೋಡಿಸಲಿಲ್ಲ. ಅದರೂ ಹೈದರ್ ಮತ್ತು ಟಿಪ್ಪು ಅವುಡುಕಚ್ಚಿ ಸೆಣಸಾಡಿದರು. ಸ್ವಾತಂತ್ರ್ಯದ ಹಣತೆ ಹಚ್ಚಲು ಶ್ರಮಿಸಿದರು. ಯುದ್ಧ ಮಾಡುತ್ತಲೆ ಮಡಿದರು. ಈ ಎಲ್ಲ ಫಲಿತಗಳ ಬಗ್ಗೆ ಚರ್ಚಿಸಲಾಗಿದೆ.

ಅಧ್ಯಾಯ ಎರಡು

ಚರಿತ್ರೆ ಬರವಣಿಗೆಯಲ್ಲಿ ಟಿಪ್ಪುಸುಲ್ತಾನ್

ಅಧ್ಯಾಯ ಎರಡು

ಚರಿತ್ರೆ ಬರವಣಿಗೆಯಲ್ಲಿ ಟಿಪ್ಪುಸುಲ್ತಾನ್

ಚರಿತ್ರೆ ರಚನೆಯು ನಿರಂತರವಾಗಿ ಬದಲಾವಣೆಯ ಸ್ವರೂಪ ಪಡೆಯುತ್ತಿರುತ್ತದೆ. ವರ್ತಮಾನದಲ್ಲಿ ಚರಿತ್ರೆಯು ಹೆಚ್ಚು ವಿಮರ್ಶೆಗೆ ಒಳಗಾಗುತ್ತಿದೆ. ಚರಿತ್ರೆಯ ಮರುವ್ಯಾಖ್ಯಾನ, ಪುನರ್‌ರಚನೆ, ಮರು ಓದು ಇತ್ಯಾದಿ ಆಯಾಮಗಳಿಂದ ಚಲನಶೀಲೆಯಿಂದ ಕೂಡಿದೆ. ಚರಿತ್ರೆ ರಚನೆಯಲ್ಲಿ ಮುಖ್ಯವಾಗಿ ಎರಡು ಮಾದರಿಗಳಿವೆ. ಒಂದು ನೈಜ ಚರಿತ್ರೆ ಮತ್ತೊಂದು ಪೂರ್ವಗ್ರಹ ಪೀಡಿತ ವ್ಯಕ್ತಿನಿಷ್ಠ ಚರಿತ್ರೆ, ಭಾರತದ ಚರಿತ್ರೆಯನ್ನು ರಚಿಸಿದ ಬಹುತೇಕ ಚರಿತ್ರೆಕಾರರು ವ್ಯಕ್ತಿನಿಷ್ಠ ನೆಲೆಯಲ್ಲೇ ಚರಿತ್ರೆಯನ್ನ ಬರೆದರು. ಇಂಥ ವಿಶ್ವಾಸಾತ್ಮಕ ಮಾದರಿಗಳು ಹಾಗೂ ವೈಭವದ ನಿರೂಪಣೆಗಳು ಚರಿತ್ರೆ ಒಳಗಿನ ಹಲವು ನೈಜ ಸತ್ಯಗಳನ್ನು ಮರೆಮಾಚಿ ಸ್ವಾರ್ಥ ರಾಜಕಾರಣದ ನೆಲೆಯಲ್ಲಿ ಚರಿತ್ರೆಯನ್ನು ಪ್ರಭುತ್ವದ ವಿಚಾರಿಗಳಿಗೆ ಸೀಮಿತಗೊಳಿಸಿ ಜನಕೇಂದ್ರಿತ ಕೊಂಡಿಗಳನ್ನು ಕಳಚಿದವು. ಹೀಗಾಗಿ ಚರಿತ್ರೆ ರಚನೆಯ ವಿವಿಧ ಆಯಾಮಗಳು ಅನಾವರಣಗೊಳ್ಳದೆ ಏಕಮುಖವಾಗಿ ರಚನೆಗೊಳ್ಳಬೇಕಾದ ಸಂದರ್ಭ ಸೃಷ್ಟಿಯಾಯಿತು.

ಭಾರತದ ಪ್ರಾಚೀನದಿಂದ ಹಿಡಿದು ಆಧುನಿಕ ಚರಿತ್ರೆವರೆಗಿನ ರಚನೆಗಳು ರಾಜ್ಯಕೇಂದ್ರಿತ, ಅರಸಕೇಂದ್ರಿತ ಹಾಗೂ ಸಾಂಸ್ಕೃತಿಕ ಕೇಂದ್ರಿತ ಮಾದರಿಗಳಲ್ಲೇ ರಚನೆಯಾದವು. ಸಮಾಜಕೇಂದ್ರಿತ ಹಾಗೂ ಜನಕೇಂದ್ರಿತ ಚರಿತ್ರೆ ರಚನೆಯ ಮಾದರಿಗಳು ಎಲ್ಲಿಯೂ ಸ್ಥಾನ ಪಡೆಯಲಿಲ್ಲ. ರಾಜನ ವೈಭವೀಕರಣಕ್ಕೆ ಹೆಚ್ಚು ಒತ್ತು ನೀಡಲಾಯಿತು. ಚರಿತ್ರೆಯಲ್ಲಿ ವ್ಯಕ್ತಿ ಮತ್ತು ಘಟನೆಯನ್ನು ಬಹುತ್ವದ ನೆಲೆಯಲ್ಲೆ ನೋಡಲಾಯಿತು. ಇಲ್ಲಿ ಕೆಳಸ್ತರದ ಶ್ರಮಿಕ ವರ್ಗವು ಚರಿತ್ರೆಯ ಬರವಣಿಗೆಯಲ್ಲಿಯೂ ಅಲಕ್ಷಿತವಾಗಿ ಉಳಿದುಕೊಂಡಿತು. ಇಂಥ ಪೂರ್ವಗ್ರಹ ಪೀಡಿತ ಬರವಣಿಗೆಗಳು ಒಪ್ಪಿತವಾದ ಮೊದಲೇ ಸಿದ್ದಪಡಿಸಿದ ಮಾದರಿಗಳು ಇವು ಇಡೀ ಸಮಾಜದ ಅರೆಕೊರೆಗಳನ್ನು ಬಿಂಬಿಸುವುದಿಲ್ಲ. ಕೇವಲ ಪ್ರಭುತ್ವದ ವೈಭವೀಕರಣದ ಸೀಮಿತ ಪರಿಧಿಗೆ ಒಳಪಟ್ಟಿರುತ್ತದೆ. ಇದಕ್ಕೆ ಹೈದರ್ ಮತ್ತು ಟಿಪ್ಪುವಿನ ಚರಿತ್ರೆ ಹೊರತಾಗಿಲ್ಲ.

ಚರಿತ್ರೆಯನ್ನು ಒಂದು ಅಖಂಡ ನಿರೂಪಣೆಯಾಗಿ ನೋಡುವ ಪ್ರಯತ್ನಗಳೇ ಹೆಚ್ಚಾಗಿ ನಡೆದವು. ಅಖಂಡ ನಿರೂಪಣೆಯೆಂದರೆ ಕೇವಲ ಜಾಗತಿಕ ಚರಿತ್ರೆ ರಚನೆಗೆ ಮಾತ್ರ ಸಂಬಂಧಿಸಿದ್ದಲ್ಲ. ಖಂಡ, ದೇಶ, ರಾಜ್ಯ ಮತ್ತು ಜಿಲ್ಲೆಗಳ ಚರಿತ್ರೆ ರಚನೆ ಸಂದರ್ಭದಲ್ಲೂ ಇದೇ ಮಾದರಿಯನ್ನು ಹೆಚ್ಚಾಗಿ ಅನುಕರಿಸಲಾಯಿತು. ಆಯಾ ಪ್ರದೇಶಗಳಲ್ಲಿ ಪ್ರಧಾನವಾಗಿ ಕಂಡುಬರುವ ರಾಜಕೀಯ ಮತ್ತು ಸಾಂಸ್ಕೃತಿಕ ವಿಚಾರಗಳು ಚರಿತ್ರೆ ರಚನೆಯ ಸಂದರ್ಭದಲ್ಲಿ ನಿರ್ಧಾರವಾಗಿಯೇ ಕಾಣಿಸಿಕೊಂಡವು.[1] ದಕ್ಷಿಣ ಭಾರತದ ಚರಿತ್ರೆಯು ಈ ಮಾದರಿಯಿಂದ ಹೊರತಾಗಿಲ್ಲ. ಸ್ಥಳೀಯ ಚರಿತ್ರೆ ಹಾಗೂ ಮೌಖಿಕ ಚರಿತ್ರೆಗಳಿಗೆ ಅಷ್ಟು ಮಹತ್ವ ನೀಡಲಿಲ್ಲ. ಬಹುಸಂಖ್ಯಾತ ಪ್ರಜಾವರ್ಗವನ್ನು ಊಹಿಸಿ ಚರಿತ್ರೆಯನ್ನು ರಚಿಸಲಾಯಿತು. ಇದರಲ್ಲಿ ಶ್ರಮಿಕರು ಮತ್ತು ಅಲಕ್ಷಿತ ಸಮುದಾಯಗಳಿಗೆ ಸ್ಥಾನ ಸಿಗಲಿಲ್ಲ.

ಪ್ರಸ್ತುತ ಹೊಸ ಬಗೆಯ ಸಂಶೋಧನಾ ವಿಧಿ-ವಿಧಾನಗಳು ಚರಿತ್ರೆ ಅಧ್ಯಯನವನ್ನು ವರ್ತಮಾನದ ಆದ್ಯತೆಗಳಿಗೆ ಅನುಸಾರವಾಗಿ ಮುಖಾಮುಖಿಗೊಳಿಸುತ್ತಿವೆ. ನಡೆದು ಹೋದ ಘಟನೆಗಳ ಜೊತೆಗೆ ನಡೆಯುತ್ತಿರುವ ಘಟನೆಗಳೊಂದಿಗೂ ಸಹ ಕೆಲವು ಪ್ರಶ್ನೆಗಳನ್ನು, ಸವಾಲುಗಳನ್ನು ಚರಿತ್ರೆಕಾರರು ಎತ್ತುತ್ತಿದ್ದಾರೆ. ಹೀಗಾಗಿ ಈ ಹೊತ್ತಿನ ಅಧ್ಯಯನಗಳು ವರ್ತಮಾನದ ಸಂದರ್ಭಗಳಿಗೆ ಸ್ಪಂದಿಸುವ ದಿಸೆಯಲ್ಲಿ ಮುಂದುವರೆದಿವೆ. ಇಲ್ಲವಾದಲ್ಲಿ ಚರಿತ್ರೆಯ ಅಧ್ಯಯನಗಳು, ಚರಿತ್ರೆಕಾರರು ಪರಿಮಿತಿಗಳಿಗೆ ಒಳಗಾಗಬೇಕಾದ ಸಾಧ್ಯಗಳೇ ಹೆಚ್ಚು ಈ ಬಗೆಯ ಎಚ್ಚರಗಳು ಕೇವಲ ಜಾಗತಿಕ ಮಟ್ಟದಲ್ಲಿ ಮಾತ್ರವಲ್ಲ ದೇಶ, ನಾಡಿನ ಸಂದರ್ಭದಲ್ಲಿಯೂ ಚರಿತ್ರೆಕಾರರನ್ನು ಗುರುತಿಸುವಂತೆ ಮಾಡಿದೆ.[2] ಚರಿತ್ರೆಕಾರರಿಗೆ ಗತಿಸಿದ ಘಟನೆಗಳ ಒಳವುಗಳನ್ನು ಅರ್ಥಮಾಡಿಕೊಳ್ಳುವ ಗ್ರಹಿಕೆ ಇರಬೇಕು. ಇಲ್ಲವಾದಲ್ಲಿ ನೈಜ ಚರಿತ್ರೆಯ ರಚನೆಯು ದೂರವೇ ಉಳಿಯುತ್ತದೆ.

ಚರಿತ್ರೆಯೆಂದರೆ ನಡೆದ ಘಟನೆಗಳ ದಾಖಲೆ ಮಾತ್ರವಲ್ಲ ಆಯಾ ವರ್ಗಗಳು ತಮ್ಮ ತಮ್ಮ ವರ್ಗಗಳ ಹಿತಾಸಕ್ತಿಗಳಿಗೆ ಅನುಗುಣವಾಗಿ ಕಟ್ಟಿಕೊಳ್ಳುವ ಚಿತ್ರಣವೂ ಕೂಡ ಆಗಿದೆ ಎಂದು ಚರಿತ್ರೆಕಾರ ಇ ಹೆಚ್ ಕಾರ್ ಹೇಳುತ್ತಾರೆ. ಆದರೆ ಆಳುವ ವರ್ಗಗಳ ಚಿಂತನೆಯ ಪ್ರಭಾವಕ್ಕೆ ಇಡೀ ಸಮಾಜವೇ ಒಳಗಾಗಿರುವುದರಿಂದ ಆಳುವ ವರ್ಗಗಳು ಬಿತ್ತರಿಸುವ ಸ್ವಹಿತಾಸಕ್ತ ಇತಿಹಾಸವೇ ಅಧಿಕೃತ ಚರಿತ್ರೆಯಾಗಿ ಚಲಾವಣೆಯಾಗಿ ಬಿಡುತ್ತದೆ. ಹೀಗಾಗಿ ಶೋಷಕ ವರ್ಗಗಳ ವಿರುದ್ಧ ಹೋರಾಡುತ್ತಾ ತಮ್ಮದೇ ಆದ ಶೋಷಣಾ ರಹಿತ ಭವಿಷ್ಯ ಕಟ್ಟಿಕೊಳ್ಳ ಬಯಸುವ ಶೋಷಿತ ಜನಸಮುದಾಯ ಪೊಳ್ಳು ಚರಿತ್ರೆಯ ಪರದೆ ಹರಿದು ನೈಜ ಚರಿತ್ರೆಯನ್ನು ಅರಿಯ ಬೇಕಾಗುತ್ತದೆ.[3] ಚರಿತ್ರೆಯ ಘಟನೆಯಲ್ಲಿ ಅಡಕವಾಗಿರುವ ವಿಚಾರಗಳನ್ನು ಪುನರ್ ವಿಮರ್ಶೆಗೆ ಒಡ್ಡಬೇಕು ಹಾಗೂ ಚರಿತ್ರೆಕಾರ ಅವುಗಳನ್ನು ಪುನರ್ ಅನುಭವಿಸಬೇಕು ಎನ್ನುವ ಕಾಲಿಂಗ್‌ವುಡ್

ಚರಿತ್ರೆ ಅಧ್ಯಯನದಲ್ಲಿ ವಿಶ್ಲೇಷಣೆಗೆ ಹೆಚ್ಚು ಮಹತ್ವ ನೀಡಿದ್ದಾರೆ. ಚರಿತ್ರೆಯ ಘಟನೆಗಳನ್ನು ಅರ್ಥೈಸಿಕೊಳ್ಳುವುದು ಕಷ್ಟದ ಕೆಲಸ ಏಕೆಂದರೆ ಅವು ಘಟನೆಗಳನ್ನು ಸೃಷ್ಟಿಸಿದ ಜನರ ಮನಸ್ಸುಗಳನ್ನು ಒಳಗೊಂಡಿರುತ್ತವೆ. ಚರಿತ್ರೆಕಾರ ತಾನು ಅಧ್ಯಯನ ಮಾಡುತ್ತಿರುವ ವಸ್ತುವಿನ ಅಥವಾ ಜನಸಮುದಾಯದ ಮನೋಸ್ಥಿತಿಗಳನ್ನು ಗ್ರಹಿಸುವುದು ವರ್ತಮಾನದಲ್ಲಿ. ಹಿಂದಿನ ಚರಿತ್ರೆಯನ್ನು ಅರಿಯಲು ವರ್ತಮಾನದ ಬದುಕು ಚರಿತ್ರೆಕಾರನಿಗೆ ಮಾನದಂಡವಾಗಿರುತ್ತದೆ ಎನ್ನುವುದು ಕಾಲಿಂಗ್‌ವುಡ್‌ರ ವಾದವಾಗಿದೆ.[೪] ಟಿಪ್ಪುವಿನ ಆಳ್ವಿಕೆ ಕುರಿತಾದ ಚರಿತ್ರೆ ಇಂದು ಈ ಬಗೆಯ ವಿಶ್ಲೇಷಣೆಗಳಿಗೆ ಒಳಗಾಗುತ್ತಿದೆ.

ಚರಿತ್ರೆಯ ಘಟನೆಗಳನ್ನು ಯಾರು? ಯಾಕಾಗಿ ಬಳಸಿದರು ಎನ್ನುವ ಪ್ರಶ್ನೆಗಳನ್ನು ಹಾಕಿಕೊಂಡಾಗ ಚರಿತ್ರೆಯುದ್ದಕ್ಕೂ ನಡೆದುಬಂದ ಸಾಂಸ್ಕೃತಿಕ ರಾಜಕಾರಣದ ಸ್ವಾರ್ಥ ಬಯಲಾಗುತ್ತದೆ. ಪೂರ್ವಾಗ್ರಹ ಪೀಡಿತವಾದ ಹಾಗೂ ಮೊದಲೇ ಸಿದ್ದಪಡಿಸಿದ ಚೌಕಟ್ಟಿನೊಳಗೆ ವ್ಯವಹರಿಸುತ್ತಿರುವ ಚಾರಿತ್ರಿಕ ಗ್ರಹಿಕೆ ಚರಿತ್ರೆಯನ್ನು ತನಗೆ ಬೇಕಾದ ಹಾಗೇ ನಿರ್ವಚಿಸುತ್ತದೆ. ತನಗೆ ಸರಿ ಎನ್ನಿಸಿದನ್ನು ಚರಿತ್ರೆಯ ಮೂಲಕ ಮಾನ್ಯ ಮಾಡಿಸುವ ಹಾಗೂ ತನ್ನ ಅಸ್ತಿತ್ವಕ್ಕೆ ಧಕ್ಕೆಯಾಗುತ್ತದೆಂದು ಕಂಡುಬಂದದ್ದನ್ನು ಚರಿತ್ರೆಯುದ್ದಕ್ಕೂ ಅಪಾಯಕಾರಿಯಾಗಿತ್ತು ಎಂಬುದಾಗಿ ಬಿಂಬಿಸುವ ಪ್ರಯತ್ನವನ್ನು ಮಾಡುತ್ತಿರುತ್ತದೆ. ಕೆಲವೊಂದು ಸಂಸ್ಥೆಗಳು, ಸಂಘಟನೆಗಳು ಕೆಲವು ಸಂದರ್ಭಗಳಲ್ಲಿ ರಾಜ್ಯದ ಚರಿತ್ರೆಯನ್ನು ಅಚಾರಿತ್ರಿಕವಾಗಿ ಮಂಡಿಸುತ್ತಿರುವುದನ್ನು ಕಾಣಬಹುದಾಗಿದೆ. ಇದರ ಫಲವೇ ಇಂದು ಹೆಮ್ಮರವಾಗಿ ಬೆಳೆದು ನಿಂತಿರುವ ಕೋಮುವಾದ, ಹಿಂಸೆ ಹಾಗೂ ಭಯೋತ್ಪಾದನೆ, ಚರಿತ್ರೆಯು ಯಾವತ್ತಿಗೂ ವರ್ತಮಾನದ ಸಮಾಜವನ್ನು ಗಟ್ಟಿಗೊಳಿಸುವಂತಿರಬೇಕೆ ಹೊರತು ಛಿದ್ರಗೊಳಿಸುವಂತಿರಬಾರದು.[೫]

ಇವತ್ತಿನ ವರ್ತಮಾನದ ಸಂದರ್ಭದಲ್ಲಿ ಚರಿತ್ರೆಕಾರರ ಬರವಣಿಗೆಗಳಲ್ಲಿ ವ್ಯಕ್ತಿನಿಷ್ಠ ಅಂಶಗಳು ಪ್ರಬಲವಾಗಿರುವುದನ್ನು ಕಾಣಬಹುದು. ಇಂಥ ಬರವಣಿಗೆಗಳಲ್ಲಿ ಸ್ವಾರ್ಥದ ಧರ್ಮ ಮತ್ತು ರಾಜಕಾರಣದ ಹಿತಾಸಕ್ತಿಗಳು ಅಡಕವಾಗಿವೆ. ಈ ಬಗೆಯ ಚರಿತ್ರೆಕಾರರು ಗತದಲ್ಲಿ ಏನು ನಡೆದಿತ್ತೊ ಅದನ್ನು ವಸ್ತುನಿಷ್ಠವಾಗಿ ಬರೆಯಲಿಲ್ಲ. ಆದರೆ ಏನು ಜರುಗಬೇಕೆಂದು ಬಯಸಿದ್ದರೋ ಅದನ್ನು ಕಲ್ಪಿಸಿಕೊಂಡು ವ್ಯಕ್ತಿನಿಷ್ಠವಾಗಿ ಬರೆದರು. ಇಂಥ ವರ್ಗಕ್ಕೆ ಸೇರಿದ ಚಿಂತಕರು ಹದಿನೆಂಟನೆಯ ಶತಮಾನದಲ್ಲಿ ಮೈಸೂರನ್ನು ಆಳಿದ ಹೈದರಾಲಿ ಮತ್ತು ಟಿಪ್ಪು ಸುಲ್ತಾನರನ್ನು ಟೀಕಿಸುವ ನೆಪದಲ್ಲಿ ಅವರಿಗೆ ಧರ್ಮಾಂಧರೆಂಬ ಹಣೆಪಟ್ಟಿ ಕಟ್ಟಿ ಅವರು ಹಿಂದೂ ಪ್ರಜೆಗಳ ಬಗೆಗೆ ಯಾವುದೇ ಸಹನೆಯ ಭಾವನೆ ಹೊಂದಿಲ್ಲದವರನ್ನಾಗಿ ಚಿತ್ರಿಸಲಾಗಿದೆ. ರಾಜಕೀಯವಾಗಿ ಅವರಿಬ್ಬರೂ ಪ್ರಮುಖರಾಗಿದ್ದ ಕೆಲವು ಹಿಂದೂ ವ್ಯಕ್ತಿಗಳನ್ನು ಅಥವಾ ಅವರ ಕುಟುಂಬಗಳನ್ನು

ಮುಸ್ಲಿಂ ಧರ್ಮಕ್ಕೆ ಮತಾಂತರಗೊಳಿಸಲು ಯತ್ನಿಸಿದರೆಂಬುದು ನಿಜ. ಆದರೆ ಇದನ್ನ ಸಾಮಾಜಿಕ ಮಟ್ಟದಲ್ಲಿ ಹಿಂದೂಗಳನ್ನು ಮುಸ್ಲಿಮರನ್ನಾಗಿ ಮತ್ತಾಂತರಗೊಳಿಸಲು ನಡೆಸಿದ ಪಿತೂರಿಯೆಂದು ಈ ವರ್ಗದ ಚರಿತ್ರೆಕಾರರು ಬಣ್ಣಿಸಿದ್ದಾರೆ.[೬]

ಇತ್ತೀಚಿನವರೆಗೂ ಭಾರತದ ಚರಿತ್ರೆ ಬರವಣಿಗೆಯು ಬಹುಮಟ್ಟಿಗೆ ಪ್ರಭುತ್ವಕೇಂದ್ರಿತವಾಗಿತ್ತು. ಅರಸನೊಬ್ಬನ ಕಾಲದಲ್ಲಿ ಉದ್ಭವಿಸುತ್ತಿದ್ದ ಎಲ್ಲಾ ಚಾರಿತ್ರಿಕ ವಿದ್ಯಮಾನಗಳೂ ಅವನ ವೈಯಕ್ತಿಕ ಸಂಕಲ್ಪ ಹಾಗೂ ಸ್ವಭಾವಗಳಿಂದಲೇ ಉಂಟಾಗುತ್ತಿದ್ದವೆಂದು ಭಾವಿಸಲಾಗಿತ್ತು. ಹೈದರ್ ಮತ್ತು ಟಿಪ್ಪು ದಕ್ಷಿಣ ಭಾರತದ ವಿಶಾಲ ಭೂಭಾಗಗಳನ್ನು ಗೆದ್ದುಕೊಂಡರು. ಇದನ್ನು ಅವರ ಮಹತ್ವಾಕಾಂಕ್ಷೆಯ ಸ್ವಭಾವದ ಪರಿಣಾಮವೆಂದು ವ್ಯಾಖ್ಯಾನಿಸಲಾಗಿದೆ. ಅದೇ ರೀತಿ ಅದರ ಧೋರಣೆಗಳು ಅವರ ಸ್ವಭಾವದಲ್ಲಿದ್ದ ಪರಸ್ಪರ ವಿರೋಧ ಗುಣಗಳ ವಿಷಮ ಮಿಶ್ರಣ ಫಲವೆಂದು ಸಮರ್ಥಿಸಲಾಗಿದೆ. ಹಾಗೆಯೆ ಟಿಪ್ಪು ಸುಲ್ತಾನನು ಉದಾರವಾದಿ ಧಾರ್ಮಿಕ ನೀತಿ ಅನುಸರಿಸಿದ ನೇಕೆಂದರೆ ಅವನ ಸ್ವಭಾವವೇ ಅಂಥದ್ದಾಗಿತ್ತು ಎಂದೂ ಭಾವಿಸಲಾಗಿದೆ. ಕೋಮುವಾದಿಗಳು ಮತ್ತು ರಾಷ್ಟ್ರೀಯವಾದಿಗಳು ಹೀಗೆಯೇ ಭಾರತದ ಚರಿತ್ರೆಯ ಹಲವು ಘಟನೆಗಳನ್ನು ತಪ್ಪಾಗಿಯೇ ಅರ್ಥೈಸಿದ್ದಾರೆ. ಟಿಪ್ಪು ಅನುಸರಿಸಿದ ಉದಾರವಾದಿ ಧಾರ್ಮಿಕತೆಯು ಅವನ ವೈಯಕ್ತಿಕ ಉದಾರವಾದಿ ಮನೋಧರ್ಮದ ಫಲವಾಗಿದ್ದಿತು ಎನ್ನುವುದನ್ನು ಒಮ್ಮೆ ಒಪ್ಪಿಕೊಂಡರೆ ಅದಕ್ಕೆ ತಕ್ಕಂಥ ತೀರ್ಮಾನವು ಅನಿವಾರ್ಯವಾಗುತ್ತದೆ.[೭] ಬಹುತ್ವದ ಸಂಸ್ಕೃತಿಯು ಆಚರಣೆಯಲ್ಲಿದ್ದ ಸಂದರ್ಭದ ಚರಿತ್ರೆಯ ಘಟನೆಗಳನ್ನು ಅಧ್ಯಯನ ಮಾಡುವಾಗ ಜನಸಮುದಾಯಗಳ ನಡುವಿನ ಸಂದರ್ಭಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ವ್ಯಾಖ್ಯಾನಿಸುವ ಚಾರಿತ್ರಿಕ ಪ್ರಜ್ಞೆ ಚರಿತ್ರೆಕಾರರಿಗೆ ಇರಬೇಕು ಇಲ್ಲವಾದರೆ ಅಚಾರಿತ್ರಿಕ ವಿಷಯಗಳು ಪ್ರವೇಶ ಪಡೆಯುತ್ತವೆ. ಇಂಥ ಅದೆಷ್ಟೋ ತಪ್ಪುಗಳು ಟಿಪ್ಪುವಿನ ಚರಿತ್ರೆ ರಚನೆಯ ಸಂದರ್ಭದಲ್ಲೂ ಆಗಿವೆ.

ಭಾರತೀಯರಿಗೆ ಇತಿಹಾಸ ಪ್ರಜ್ಞೆ ಇರಲಿಲ್ಲ ಎಂಬ ಮಾತನ್ನು ಅಲ್ಬೆರೂನಿ ಆದಿಯಾಗಿ ಅನೇಕರು ಅಭಿಪ್ರಾಯಿಸಿದ್ದಾರೆ. ಭಾರತೀಯರಿಗೆ ಇತಿಹಾಸ ಪ್ರಜ್ಞೆ ಇತ್ತೋ–ಇಲ್ಲವೋ ಎಂಬುದನ್ನು ಪರಿಶೀಲಿಸಬೇಕಿದೆ. ಈವರೆಗಿನ ಅನೇಕ ಚರಿತ್ರೆಕಾರರು, ಸಂಶೋಧಕರಲ್ಲದೆ ಭಾರತೀಯರು ಇಂಥ ವಾದವನ್ನು ಮೌನವಾಗಿ ಒಪ್ಪಿರುತ್ತಾರೆ. ಏಕೆಂದರೆ "ಭಾರತೀಯ ಪರಂಪರೆಯಲ್ಲಿ ಪುರಾಣ ಪ್ರಜ್ಞೆ, ತಮ್ಮ ಸಾಮಾಜಿಕ ಪ್ರಜ್ಞೆ, ಧಾರ್ಮಿಕ ಪ್ರಜ್ಞೆ, ಶೈಕ್ಷಣಿಕ ಪ್ರಜ್ಞೆ ಇತರ ಕ್ಷೇತ್ರಗಳಲ್ಲಿ ಸಹ ಜಾಗೃತಿ ಪ್ರಜ್ಞೆ ಇರುವುದನ್ನು ಅಲ್ಲಗಳೆಯುವಂತಿಲ್ಲ."[೮] ತತ್ವಜ್ಞಾನಿಗಳು, ದಾರ್ಶನಿಕರು, ವೈಜ್ಞಾನಿಕ ಚಿಂತನೆಯ ಹರಿಕಾರರು ಹೀಗೆ ಹಲವು ಬಗೆಯಲ್ಲಿ ಭಾರತದ ಬೌದ್ಧಿಕ ವಲಯ ಬೆಳೆಯುತ್ತಲೇ ಬಂದಿದೆ. ಆದರೆ ಚರಿತ್ರೆ ದೃಷ್ಟಿಕೋನವನ್ನು ಯಾಕೆ ಕಟ್ಟಿಕೊಡಲಿಲ್ಲವೆನ್ನುವುದು

ಪ್ರಶ್ನೆ? ಭಾರತೀಯ ಅಲೌಕಿಕ ಬದುಕಿನ ಪ್ರಭಾವ ಇದಕ್ಕೆ ಕಾರಣವಾದಂತೆ ತೋರುತ್ತದೆ. ಭಾರತೀಯರು ಪುರಾಣಪ್ರಿಯರಾಗಿದ್ದು ವಾಸ್ತವವನ್ನೂ ಪುರಾಣೀಕರಣಗೊಳಿಸುವ ಮನೋಧರ್ಮದ ಕಾರಣದಿಂದಲೇ ಪಶ್ಚಿಮದವರಂತೆ ಚರಿತ್ರೆಯನ್ನು ನೋಡುವ ಕ್ರಮ ಇರಲಿಲ್ಲ. ಧಾರ್ಮಿಕ ವಿಚಾರಗಳಿಗೆ, ಕಥನಗಳಿಗೆ ಚರಿತ್ರೆಯನ್ನು ಕೃತ, ತ್ರೇತ್ರಾ, ದ್ವಾಪರ ಹಾಗೂ ಕಲಿಯುಗಗಳನ್ನು ಯುಗಗಳ ಪರಿಕಲ್ಪನೆಯಲ್ಲಿ ಅರ್ಥೈಸಿಕೊಂಡರು.[೯]

ಕ್ರಿ.ಶ.೧೮೯೦-೧೯೦೦ ಸುಮಾರಿಗೆ ರಾಬರ್ಟ್ ಸಿವೆಲ್ 'ಇಂಡಿಯಾ ಬಿಪೋರ್ ದಿ ಇಂಗ್ಲೀಷ್' ಕೃತಿಯಲ್ಲಿ ಭಾರತೀಯರು ಪುರಾಣಪ್ರಿಯರು, ಚರಿತ್ರೆ ಸಂಗತಿಗಳೇ ಅವರಿಗೆ ತಿಳಿದಿಲ್ಲ. ಪ್ರತಿಯೊಂದು ಘಟನೆಗೂ ಕಥನಗಳನ್ನು ನಿರೂಪಿಸುತ್ತಾರೆ ಎಂಬಂತೆ ಭಾರತೀಯರ ಚಾರಿತ್ರಿಕ ಪ್ರಜ್ಞೆಯನ್ನು ಪ್ರಶ್ನಿಸಿದ್ದಾನೆ. ವಿದೇಶಿಯರು ನೋಡುವಂಥ ಇತಿಹಾಸ ಪ್ರಜ್ಞೆ ಭಾರತೀಯರಿಗೆ ಇಲ್ಲದೆ ಇರಬಹುದು. ಭಾರತೀಯರಿಗೆ ತಮ್ಮದೇ ಆದ ಸಂಸ್ಕೃತಿ, ಪುರಾಣಗಳೊಂದಿಗಿನ ಚಾರಿತ್ರಿಕ ಪ್ರಜ್ಞೆ ಇತ್ತು. ವಿದೇಶಿಯರು ಹೇಳುವ ಸಾಕ್ಷ್ಯಾಧಾರಿತ, ವೈಜ್ಞಾನಿಕ ಇತಿಹಾಸ ರಚನೆಯ ಎದುರು ದೇಶಿಯ ಚರಿತ್ರೆಯ ರಚನಾಕ್ರಮ ಮೌಖಿಕ ಹಾಗೂ ಬಹುಮುಖಿಯಿಂದ ಕೂಡಿದ್ದಿತು. ಬ್ರಿಟಿಷರು ಒಡೆದು ಆಳುವ ನೀತಿಯಿಂದ ಇಲ್ಲಿನ ಜನರ ನಡುವೆ ಕಂದರ ಸೃಷ್ಟಿಸಿದ್ದು ನಿಜ. ಭಾರತೀಯರಿಗೆ ಸಾತ್ವಿಕ ಇತಿಹಾಸ ಇತ್ತೇ ಹೊರತು ದುಷ್ಟತೆ ಇರುವ ಇತಿಹಾಸ ಕಥನವಾಗಲಿ ಇರಲಿಕ್ಕೆ ಸಾಧ್ಯವಿಲ್ಲ. ಬ್ರಿಟಿಷ್ ಇತಿಹಾಸಕಾರ ಜೇಮ್ಸ್ ಮಿಲ್ ತನ್ನ ಕೃತಿ 'ಬ್ರಿಟಿಷ್ ಹಿಸ್ಟರಿ ಆಫ್ ಇಂಡಿಯಾ'ದಲ್ಲಿ ಹಿಂದೂಯುಗ, ಮುಸ್ಲಿಂಯುಗ ಮತ್ತು ಸಾಮ್ರಾಜ್ಯಶಾಹಿ ಬ್ರಿಟಿಷ್‌ಯುಗಗಳಾಗಿ ವಿಂಗಡಿಸಿದ್ದು ಪೂರ್ವಗ್ರಹಪೀಡಿತವಾಗಿದ್ದು, ಹಿಂದು ವೈಭವದ ಯುಗವಾಗಿ ಮುಸ್ಲಿಂ ಬರ್ಬರ ಆಳ್ವಿಕೆ ಅಂಧಕಾರಯುಗವಾಗಿ ಬ್ರಿಟಿಷ್‌ಯುಗ ಆದರ್ಶದ ಯುಗವಾಗಿ ಚಿತ್ರಿಸಿದ್ದಾನೆ. ಇವನು ಭಾರತೀಯರು ಇತಿಹಾಸ ಪ್ರಜ್ಞೆಯನ್ನು ಹೊಂದಿರಲಿಲ್ಲವೆಂದು ಅಭಿಪ್ರಾಯಿಸಿದ್ದಾನೆ.

"ಭಾರತೀಯ ಸಂಸ್ಕೃತಿ-ಪರಂಪರೆಯನ್ನು ರಕ್ಷಿಸುವ ಪ್ರಕಟಿಸುವ ಹಾಗೂ ಪ್ರಸಾರಗೊಳಿಸುವ ಸಲುವಾಗಿ ೧೭೫೪ರಲ್ಲಿ ಸರ್.ವಿಲಿಯಂ ಜೋನ್ಸ್ 'ರಾಯಲ್ ಏಷಿಯಾಟಿಕ್ ಸೊಸೈಟಿ' ಸ್ಥಾಪಿಸಿದನು. ಭಾರತದ ಚಾರಿತ್ರಿಕ ಸಂಗತಿಗಳನ್ನು ಜರ್ನಲ್ ಆಫ್ ದಿ ರಾಯಲ್ ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್(೧೮೭೪) ಪ್ರಕಟಿಸಿದಾಗ ಭಾರತೀಯರಿಗೆ ಚರಿತ್ರೆ ಅಧ್ಯಯನದ ಬಗ್ಗೆ ಕಾಳಜಿ ಬಂದಿತು. ಭಾರತದ ಬ್ರಿಟಿಷ್ ವೈಸ್ರಾಯಿ ಲಾರ್ಡ್ ಕರ್ಜನ್ ೧೯೦೪ರಲ್ಲಿ ಪ್ರಾಚೀನ ಸ್ಮಾರಕಗಳ ರಕ್ಷಣೆ ಕಾಯ್ದೆಯನ್ನು ಜಾರಿಗೆ ತಂದನು. ಚಾರಿತ್ರಿಕ ಪ್ರಜ್ಞೆ ಭಾರತೀಯರಲ್ಲಿ ಭಿನ್ನವಾಗಿ ಅಡಕವಾಗಿತ್ತು. ಸಾಹಿತ್ಯ, ಸಂಸ್ಕೃತಿ, ರೂಢಿ, ಸಂಪ್ರದಾಯ, ಧರ್ಮ ಇತರ ಕ್ಷೇತ್ರಗಳ ಬಗ್ಗೆ ಅಧ್ಯಯನ ಮಾಡುವಾಗ ಭಾರತೀಯರು ಯಾವುದರಲ್ಲೂ ಕಡಿಮೆ ಇರಲಿಲ್ಲ. ಖಗೋಳ,

ಭೌತಶಾಸ್ತ್ರ, ರಸವಿಜ್ಞಾನ, ತತ್ವಶಾಸ್ತ್ರ, ಜ್ಯೋತಿಷ್ಯಶಾಸ್ತ್ರ ಆಧ್ಯಾತ್ಮ ಕ್ಷೇತ್ರಗಳಲ್ಲಿ ಭಾರತೀಯರು ನಿಷ್ಣಾತರಾಗಿದ್ದರೆ ಹೊರತು ಇತಿಹಾಸ ರಚಿಸಲಿಲ್ಲ ಎಂದು ಬ್ರಿಟಿಷರು ಆಪಾದಿಸಿದರು."[೧೦]

"ಪ್ರಾಚೀನ ಭಾರತದ ಚರಿತ್ರೆಯನ್ನು ಅರ್ಥೈಸಿಕೊಳ್ಳಲು ಬೇಕಾದ ಸಂಶೋಧನಾ ಮಾರ್ಗವನ್ನು ಇನ್ನೂ ಕಟ್ಟಿಕೊಳ್ಳಬೇಕಾಗಿದೆ. ಅಂದರೆ ಭಾರತಕ್ಕೆ ಸಂಬಂಧಿಸಿದಂತೆ ದಾಖಲೆಗಳಿಲ್ಲವೆಂದಲ್ಲ. ಹೆಚ್ಚು ದಾಖಲೆಗಳು, ಗ್ರಂಥಗಳು ಇವೆ. ಪ್ರಾಚೀನ ಕಾಲದಲ್ಲಿ ಸಂಸ್ಕೃತ, ಪಾಲಿ, ಪ್ರಾಕೃತ, ತಮಿಳು, ಕನ್ನಡ ಮುಂತಾದ ಭಾರತೀಯ ಭಾಷೆಗಳಲ್ಲಿ ಗ್ರಂಥಗಳು ರಚನೆಯಾದವು. ವಿದೇಶಿ ಯಾತ್ರಿಕರಾದ ಹ್ಯೂಯನ್‌ತ್ಸಾಂಗ್, ಆಲ್‌ಬರೂನಿ ಮುಂತಾದವರು ಇಲ್ಲಿ ಪತ್ರಾಗಾರಗಳಿದ್ದವು ಎಂದು ತಿಳಿಸಿದ್ದಾರೆ. ಜಗತ್ತಿನ ಯಾವುದೇ ನಾಗರಿಕತೆಯಲ್ಲೂ ಇಷ್ಟೊಂದು ಪ್ರಮಾಣದ ಗ್ರಂಥಗಳು ರಚನೆಯಾಗಲಿಲ್ಲ. ಆದರೆ ಅವುಗಳನ್ನು ಚರಿತ್ರೆಗ್ರಂಥಗಳೆಂದು ಹೇಳಲಾಗುವುದಿಲ್ಲ."[೧೧] "ಕಲ್ಹಣನ ರಾಜತರಂಗಿಣಿಯೆ ನಾವು ಕಾಣುವ ಪ್ರಮುಖ ಚರಿತ್ರೆ ಗ್ರಂಥ. ಅದರಂತೆ ಬಿಲ್ಹಣನ ವಿಕ್ರಮಾಂಕದೇವ ಚರಿತ, ಇವುಗಳಲ್ಲಿ ಭಾರತೀಯರ ಜನ ಜೀವನ, ಸಂಸ್ಕೃತಿ, ಪರಂಪರೆಯನ್ನು ಬಿಂಬಿಸಲಾಗಿದೆ. ಇವುಗಳನ್ನು ಬ್ರಿಟಿಷರು ಸಮರ್ಪಕವಾಗಿ ಅಧ್ಯಯನ ಮಾಡಲಿಲ್ಲ."[೧೨]

ಭಾರತೀಯರ ಚಾರಿತ್ರಿಕ ಪರಂಪರೆಯಲ್ಲಿ ವಂಶಾವಳಿಗಳನ್ನು ದಾಖಲಿಸುವ ಪ್ರಧಾನ ಗುಣವಿದೆ. ಅದು ರಾಜವಂಶಗಳಿಗೆ ಸಂಬಂಧಿಸಿದ್ದು, ಭಾರತದ ಪುರಾಣಗಳಲ್ಲಿ ವಂಶಗಳ ಕುರಿತು ವಿವರಗಳಿವೆ. ವಾಯು ಪುರಾಣ, ಬ್ರಹ್ಮನಂದ, ಹರಿವಂಶ, ಮತ್ಸ್ಯಕ ಮತ್ತು ವಿಷ್ಣು ಪುರಾಣಗಳು ಶಿಶುನಾಗರು, ನಂದರು, ಮೌರ್ಯರು, ಶುಂಗರು, ಕಣ್ವರು ಮತ್ತು ಆಂಧ್ರರ ಬಗೆಗೆ ವಂಶಾವಳಿಗಳನ್ನು ತಿಳಿಸುತ್ತವೆ. ಮಹಾಭಾರತ ಕಾಲದಿಂದ ಜೈನ ಮತ್ತು ಬೌದ್ಧ ಧರ್ಮಗಳ ಏಳಿಗೆಯ ಕಾಲದವರೆಗೆ ಚರಿತ್ರೆ ರಚನೆಗೆ ಅಮೂಲ್ಯ ದಾಖಲೆಗಳಾಗಿವೆ. ಬೌದ್ಧ ಧರ್ಮಕ್ಕೆ ಸೇರಿದ ರಾಜವಂಶ, ದೀಪವಂಶ ಮತ್ತು ಮಹಾವಂಶ, ಜೈನಧರ್ಮದ ಹರಿವಂಶ ವೈದಿಕ ಪರಂಪರೆಯ ರಘುವಂಶ, ಕಲ್ಹಣನ ರಾಜತರಂಗಿಣಿ ಮುಂತಾದವು ವಂಶಾವಳಿ ದಾಖಲೆಗಳನ್ನು ಹೊಂದಿವೆ. ಚಾರಿತ್ರಿಕ ಪ್ರಜ್ಞೆ ಭಾರತದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು ಬಳಕೆಯಾಯಿತು.

ಪುರಾಣಗಳ ಮುಂದುವರಿದ ಭಾಗವಾಗಿ ಕಾವ್ಯಾತ್ಮಕ ಜೀವನ ಚರಿತ್ರೆಗಳು ರಚನೆಯಾದವು. ಅಶ್ವಘೋಷನ ಬುದ್ಧ ಚರಿತವೇ ಈ ಪ್ರಕಾರದ ಮೊದಲ ಕೃತಿ. ಬಾಣಭಟ್ಟನ ಹರ್ಷಚರಿತೆ ಮೊದಲ ಚಾರಿತ್ರಿಕ ಕೃತಿ ಎಂದು ಭಾವಿಸಲಾಗಿದೆ. ಹರ್ಷನ ಜೀವನ ಚರಿತ್ರೆ, ಆಡಳಿತ ವಿವರಗಳು ಇದರಲ್ಲಿವೆ.

ದಕ್ಷಿಣ ಭಾರತದಲ್ಲೂ ಚರಿತ್ರೆ ಕುರಿತ ದೃಷ್ಟಿಕೋನಗಳು ಇದ್ದವು ಎಂಬುದಕ್ಕೆ ಹಲವು ಸಾಹಿತ್ಯ ಕೃತಿಗಳು ಸಾಕ್ಷಿ. ಕರ್ನಾಟಕದ ಸಂದರ್ಭದಲ್ಲಿ ಹನ್ನೆರಡನೆಯ ಶತಮಾನದ ವಚನಕಾರರ

ಸಾಹಿತ್ಯ ಪ್ರಮುಖವಾದುದು. ಇದರ ಹಿಂದೆಯೇ ಬಂದ ದಾಸ ಸಾಹಿತ್ಯ ಪರಂಪರೆ ಕೂಡ ಚರಿತ್ರೆಯ ಪ್ರತಿಫಲಗಳೇ. ತಮಿಳು ನಾಡಿನಲ್ಲಿ ಸಂಗಮ್ ಸಾಹಿತ್ಯ ಐತಿಹಾಸಿಕ ಕಥನಗಳನ್ನು ಒಳಗೊಂಡಿದೆ. ಕನ್ನಡ ಪ್ರದೇಶಗಳಲ್ಲಿ ವಚನ ಸಾಹಿತ್ಯವನ್ನು ಚರಿತ್ರೀಕರಿಸಿ ನೋಡುವ ಪ್ರಯತ್ನಗಳು ನಡೆದಿವೆ. ಹನ್ನೆರಡನೆಯ ಶತಮಾನದ ಸಾಮಾಜಿಕ ಸಂಘರ್ಷಗಳು, ಹೆಣ್ಣು ಗಂಡಿನ ಸಂಬಂಧಗಳ ತಾತ್ವಿಕ ನೆಲೆಗಟ್ಟುಗಳು ಮುಂತಾದ ಅಂಶಗಳ ಬಗೆಗೆ ತಿಳಿಸುತ್ತವೆ. ಗದ್ಯವನ್ನೇ ಕಾವ್ಯಾತ್ಮಕವಾಗಿ ದುಡಿಸಿಕೊಂಡು ವಚನಕಾರರು ತಮ್ಮ ಕಾಲದ ಸಾಮಾಜಿಕ ಚಲನಶೀಲತೆಯ ಆಯಾಮಗಳನ್ನು ಕಟ್ಟಿಕೊಟ್ಟಿದ್ದಾರೆ. ವಚನಕಾರರು ಸಾಮಾಜಿಕ ಆಯಾಮಗಳ ಬಗೆಗೆ ಭಿನ್ನ ಸಂವೇದನೆಗಳನ್ನು ಪ್ರಕಟಿಸುತ್ತಾರೆ. ಅವೆಲ್ಲವೂ ಮನುಷ್ಯಮುಖಿ ನೆಲೆಗಳಿಂದ ರೂಪುಗೊಂಡಿವೆ. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಜೇಡರ ದಾಸಿಮಯ್ಯ, ಮಾದಾರ ಚೆನ್ನಯ್ಯ ಮುಂತಾದ ವಚನಕಾರರು ಈ ಮೂಲಕ ಶೋಷಣೆಯ ಎಲ್ಲ ಆಯಾಮಗಳನ್ನು ವಿರೋಧಿಸಿದ್ದಾರೆ.

ದಾಸಕೂಟ ಪಂಥದ ಕಾವ್ಯ ಪರಂಪರೆ ಚಾರಿತ್ರಿಕ ಕಥನಗಳನ್ನು ಒಳಗೊಂಡಿವೆ. ಕನಕದಾಸ ಮತ್ತು ಪುರಂದರ ದಾಸರ ಕೀರ್ತನೆಗಳು ಆ ಕಾಲದ ಧಾರ್ಮಿಕ ಮತ್ತು ಸಾಮಾಜಿಕ ಆಯಾಮಗಳನ್ನು ಚಿತ್ರಿಸಿವೆ. ಕನಕದಾಸರು ಕೀರ್ತನೆಗಳ ಜೊತೆಗೆ ಹರಿಭಕ್ತಿಸಾರ, ಮೋಹನ ತರಂಗಿಣಿ, ರಾಮಧಾನ್ಯ ಚರಿತೆ ಮತ್ತು ನಳಚರಿತೆ ಕೃತಿಗಳನ್ನು ರಚಿಸಿದರು. ಸಂಗಮ್ ಸಾಹಿತ್ಯ, ವಚನ ಸಾಹಿತ್ಯ, ದಾಸಸಾಹಿತ್ಯ ದಕ್ಷಿಣ ಭಾರತದ ಚರಿತ್ರೆಯ ಪುನಾರಚನೆಗೆ ಅಮೂಲ್ಯ ಸಾಮಗ್ರಿಗಳನ್ನು ಒದಗಿಸಿವೆ.

ಜೀವನ ಚರಿತ್ರೆಗಳ ವೈಭವೀಕರಣ ಪ್ರಾಚೀನ ಭಾರತ ಲೇಖನ ಪರಂಪರೆಯ ಪ್ರಮುಖ ಲಕ್ಷಣವಾಗಿದೆ. ತಮ್ಮ ಆಶ್ರಯದಾತರ ದಿಗ್ವಿಜಯಗಳು, ಖಾಸಗಿ ಬದುಕು, ರಾಜ ವೈಭವ ಮುಂತಾದ ಅಂಶಗಳ ಸುತ್ತ ಈ ಬರಹಗಳು ಕೇಂದ್ರೀಕರಿಸುತ್ತವೆ. ಈ ಬರಹಗಳಲ್ಲಿ ಕಾಲಗಣನಾ ಶಾಸ್ತ್ರಕ್ಕೆ ಆದ್ಯತೆಯಿಲ್ಲ. ಏಕೆಂದರೆ ಈ ಲೇಖಕರು ಚರಿತ್ರೆ ಬರವಣಿಗೆಯಲ್ಲಿ ಘಟನೆಗಳ, ವ್ಯಕ್ತಿಗಳ ಬಗೆಗಿನ ನಿಜವನ್ನು ಕಟ್ಟಿಕೊಡಬೇಕೆಂದು ಬಯಸಿದವರಲ್ಲ. ವೈಭವೀಕರಣದ ಭಾಗವಾಗಿ ಕಾಲ್ಪನಿಕ ಕತೆಗಳು ಚರಿತ್ರೆಯೊಳಗೆ ಸೇರಿವೆ. ಕರ್ಮಸಿದ್ಧಾಂತ ಪುನರ್‌ಜನ್ಮದ ನಂಬಿಕೆಗಳು, ಮಾನವ ಬದುಕನ್ನು ದೈವವೇ ನಿರ್ಧರಿಸುತ್ತದೆ ಎಂಬಂಥ ಕಲ್ಪನೆಗಳು ಚರಿತ್ರೆ ಬರವಣಿಗೆಯನ್ನು ನಿಯಂತ್ರಿಸುತ್ತಿವೆ.

ಮಧ್ಯಕಾಲೀನ ಭಾರತದ ಚರಿತ್ರೆ ಲೇಖನ ಪರಂಪರೆಯನ್ನು ಎರಡು ಹಂತದಲ್ಲಿ ನೋಡಬಹುದು. ಅವು ದೆಹಲಿ ಸುಲ್ತಾನರ ಕಾಲ ಮತ್ತು ಮೊಗಲರ ಕಾಲ. ಪ್ರಾಚೀನ ಭಾರತೀಯ ಚರಿತ್ರೆ ಲೇಖನ ಪರಂಪರೆಯಲ್ಲಿ ಕಾಣದ ಒಂದು ವಿಶೇಷತೆಯನ್ನು ಇದರಲ್ಲಿ ಕಾಣಬಹುದು.

ಅದು ಕಾಲಗಣನೆಗೆ ನೀಡಿರುವ ಮಹತ್ವ. ಮುಸ್ಲಿಂಮರಲ್ಲಿ ಚರಿತ್ರೆಯನ್ನು ನೋಡುವ ದೃಷ್ಟಿಕೋನದಲ್ಲಿ ಒಂದು ಗುಣಾತ್ಮಕ ಬದಲಾವಣೆ ಬಂದಿತು. ಇಸ್ಲಾಂ ಚರಿತ್ರೆ ಬರವಣಿಗೆಯಲ್ಲಿ ಮುಬಾರಕ್ ಷಾ ಬರೆದ(೧೨೦೬) ಶಾಜಾರ್‍ಯ-ಅರ್ನನಸಾಬ್-ಐ-ಮುಬಾರಕ್ ಷಾಹಿ, ಮಿನ್‌ಹಜ್ ಅಸ್ ಸಿರಾಜ್ ಜುಸ್ವಾನಿ ಬರೆದ ತಬಕತ್-ಐ-ನಸಿರಿ ಕೃತಿಗಳು ದೆಹಲಿ ಸುಲ್ತಾನರ ಚರಿತ್ರೆ ಪರಂಪರೆಯ ಪ್ರಮುಖವಾದವು. ಇಸಾಮಿ ರಚಿಸಿದ ಪೂತೂಹುಸಲಾತೀನ್ ಈ ಚರಿತ್ರೆ ಪರಂಪರೆ ಮತ್ತೊಂದು ಕೃತಿ ಇದರಲ್ಲಿ ಘಜ್ನಿ ಮಹಮದನ ಕಾಲದಿಂದ ತೊಘಲಕ್‌ರ ಕಾಲದವರೆಗಿನ ರಾಜಕೀಯ ಚರಿತ್ರೆಯನ್ನು ದಾಖಲಿಸುವ ಪ್ರಯತ್ನ ಮಾಡಿದ್ದಾನೆ. ದೆಹಲಿಸುಲ್ತಾನರು, ತೈಮೂರ್ ಷಾ ಮೊದಲಾದ ಸುಲ್ತಾನರುಗಳ ಹೋರಾಟದ ಬಗೆಗೆ ವಿವರಿಸುವ ತಾರೀಖ್-ಎ-ಮಹಮದಿ ಮಹಮದ್ ಬಿಹಾದ್‌ಖಾನ್‌ನಿಂದ ರಚಿಸಲ್ಪಟ್ಟಿತು.

ಈ ಕಾಲದ ಚರಿತ್ರೆ ಲೇಖನ ಪರಂಪರೆಯಲ್ಲಿ ಆತ್ಮ ಚರಿತ್ರೆಗಳು ಮತ್ತು ವಸಿಯತ್‌ನಾಮಗಳು ಪ್ರಮುಖವಾದವು. ಜೀವನ ಚರಿತ್ರೆ ಮತ್ತು ವಂಶಾವಳಿ ಚರಿತ್ರೆಯ ಕ್ರಮ ವ್ಯಾಪಕವಾಗಿ ಚಾಲ್ತಿಯಲ್ಲಿತ್ತು. ಸೂಫಿಸಂತರು ಮತ್ತು ಕವಿಗಳ ಕುರಿತಾದ ಗ್ರಂಥಗಳು ಪರ್ಶಿಯನ್ ಭಾಷೆಯಲ್ಲಿ ರಚಿತವಾದವು. ಸೂಫಿ ಸಾಹಿತ್ಯ ಬೆಳೆಯಲು ಕಾರಣವಾದವು. ಬಾಬಾ ಪರೀದನ, ಅಸ್ರಾರುಲ್ ಜಾಲಿಯಾ, ನಿಜಾಮುದ್ದೀನ್ ಜೌಲಿಯಾನ ಮಲ್‌ಪೂಜತ್, ಹಮೀದ್ ಖಲಿಂದರನ, ಬೈರುತ್ ಮಜಾಲೀಸ[೧೩] ಮುಂತಾದವು ಪ್ರಮುಖವಾದವು.

ಮಧ್ಯಕಾಲೀನ ಭಾರತದ ಚರಿತ್ರೆ ಲೇಖನ ಪರಂಪರೆಯಲ್ಲಿ ಕಾವ್ಯಾತ್ಮಕ ಪ್ರಕಾರದ ಸಾಹಿತ್ಯ ರೂಪವೂ ಚಾಲ್ತಿಯಲ್ಲಿತ್ತು. ಹಸನ್ ನಿಜಾಮಿಯ, ತಾಜ್ ಅಸ್‌ಮಾ ಈ ಪ್ರಕಾರದ ಮೊದಲ ಕೃತಿ. ಅಮೀರ್ ಖುಸ್ರು ಕಾವ್ಯಾತ್ಮಕ ಚರಿತ್ರೆ ಪ್ರಕಾರದ ಬಹುದೊಡ್ಡ ಪ್ರತಿಭೆ. ಇವನು ೧೨೮೫ರಲ್ಲಿ ಖಿರಾಮಸ್ ಸಾದೈನ್ ಕೃತಿಯನ್ನು ರಚಿಸಿದನು. ಮಿಫಗತಾಹ್ ಮತ್ಹ, ಅಶಿಕಾ ಕೃತಿಗಳು ಜಲಾಲುದ್ದೀನ್ ಮತ್ತು ಅಲ್ಲಾವುದ್ದಿನ್ ಖಿಲ್ಜಿ ಕಾಲದ ಘಟನೆಗಳನ್ನು ತಿಳಿಸುತ್ತವೆ. ಅಮಿರ್ ಖುಸ್ರುವಿನ ಗ್ರಂಥಗಳಲ್ಲಿ ಚರಿತ್ರೆಗಿಂತ ಸಾಹಿತ್ಯಕ ಮೌಲ್ಯಗಳಿಗೆ ಹೆಚ್ಚು ಬೆಲೆಯಿದೆ. ೧೪ನೆ ಶತಮಾನದ ಆದಿಭಾಗದ ಉತ್ತರ ಭಾರತದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಗ್ರಹಿಸಲು ಇವನ ಕೃತಿಗಳು ಸಹಾಯಕವಾಗಿವೆ. ಜಿಯಾ ಅಲ್-ದಿನ್-ಬರನೀ ದೆಹಲಿ ಸುಲ್ತಾನ ಕಾಲದ ಮತ್ತೊಬ್ಬ ಪ್ರಮುಖ ಚರಿತ್ರಕಾರ ತಾರೀಖ್-ಇ-ಫಿರೋಜ್‌ಷಾಹಿ ಇವನ ಪ್ರಮುಖ ಕೃತಿ. ಬರನೀ ಚರಿತ್ರೆಯಿಂದ ಆಗುವ ಪ್ರಯೋಜನಗಳನ್ನು ಪಟ್ಟಿ ಮಾಡಿದ್ದಾನೆ.[೧೪] ದೆಹಲಿ ಸುಲ್ತಾನರ ಕಾಲದ ಚರಿತ್ರೆ ಲೇಖನ ಪರಂಪರೆಗೆ ಮೇಲಿನ ಚರಿತ್ರೆಕಾರರಂತೆ ಹಲವು ಚರಿತ್ರೆಕಾರರು ಕೊಡುಗೆ ನೀಡಿದ್ದಾರೆ.

ಮೊಗಲ ಕಾಲದಲ್ಲಿ ಚರಿತ್ರ ಲೇಖನ ಕಲೆಯು ಗುಣಾತ್ಮಕ ಬದಲಾವಣೆಗೆ ಒಳಗಾಯಿತು. ತಾಂತ್ರಿಕವಾಗಿ ಚರಿತ್ರೆಯನ್ನು ನೋಡುವ ಕ್ರಮಗಳು ಬೆಳೆಯತೊಡಗಿದವು. ಚರಿತ್ರೆ ಒಂದು ಶಿಸ್ತಾಗಿ ವ್ಯಾಪಕ ಆಯಾಮಗಳನ್ನು ಪಡೆದುಕೊಂಡಿತು. ಆತ್ಮ ಚರಿತ್ರೆಗಳು ಮೊಗಲ್ ಸಾಮ್ರಾಟರು ನೀಡಿದ ವಿಶೇಷ ಕೊಡುಗೆಗಳು ಮೊಗಲ್ ಸಾಮ್ರಾಜ್ಯ ಸ್ಥಾಪಿಸಿದ ಬಾಬರನು ಬಾಬರ್‌ನಾಮ(ತುಜರ್) ರಚಿಸಿದನು. ಇದರಲ್ಲಿ ಘಟನೆಗಳು ನಡೆದ ಹಾಗೆ ಅನಾವರಣಗೊಳಿಸಿದ್ದಾನೆ. ಸಾಮಾಜಿಕ ನಡವಳಿಕೆಗಳು, ಹವಾಗುಣ, ಮಾನವ ಸಂಪತ್ತು, ಅರ್ಥಸಂಪತ್ತು ಮುಂತಾದ ವಿಷಯಗಳನ್ನು ಚಿತ್ರಿಸುತ್ತದೆ. ಜಹಾಂಗೀರನು ರಚಿಸಿದ ತುಜುಕಿ ಜಹಾಂಗೀರಿ, ಗುಲ್‌ಬದನ್ ಬೇಗಂ ಬರೆದ ಹುಮಾಯೂನ್ ನಾಮ ಕೃತಿಗಳು ಪ್ರಮುಖವಾಗಿವೆ. ಚರಿತ್ರೆ ಬರವಣಿಗೆಯು ಮತ್ತಷ್ಟು ಸಂಕೀರ್ಣ ಮತ್ತು ವಿಸ್ತೃತವಾಗಿದ್ದು ಅಕ್ಬರನ ಕಾಲದಲ್ಲಿ ಈ ಕಾಲದಲ್ಲಿ ರಚನೆಯಾದ ಅಬ್ದುಲ್‌ಫಜಲನ ಅಕ್ಬರ್‌ನಾಮ, ತಾರೀಖಿ ಅಲ್‌ಫಿ ನಿಜಾಮುದ್ದೀನ್ ಮಹಮದನ, ತಬಕ್ಷತ್ ಐ ಅಕ್ಬರಿ, ಅಬ್ದುಲ್ ಕ್ವಾದಿಕ್ ಬದೋನಿಯ ಮುತಖಬ್ ಉತ್–ತವಾರಿಕ್ ಕೃತಿಗಳು ಪ್ರಮುಖವಾದವು.[೧೫] ಜಹಾಂಗೀರ್, ಷಹಜಹಾನ್ ಮತ್ತು ಔರಂಗಜೇಬನ ಕಾಲದಲ್ಲಿ ಚರಿತ್ರೆ ಲೇಖನ ಕೃಷಿ ಮುಂದುವರೆಯಿತು. ಷಹಜಹಾನ್‌ನ ಕಾಲದ ಹಮೀದ್ ಲಾಹೋರಿ, ಬಾದ್‌ಷಾನಾಮ ಗ್ರಂಥ ರಚಿಸಿದ ಇದರಲ್ಲಿ ೧೬೩೦–೩೨ರಲ್ಲಿ ಭೀಕರ ಕ್ಷಾಮ ದಕ್ಷಿಣ ಭಾರತದ ಮತ್ತು ಗುಜರಾತನ್ನು ಹೇಗೆ ಬಲಿತೆಗೆದುಕೊಂಡಿತು ಎಂಬುದರ ಬಗ್ಗೆ ತಿಳಿಸಿದ್ದಾನೆ. ಔರಂಗಜೇಬನು ಚರಿತ್ರೆ ಬರೆಯವುದನ್ನು ಪ್ರೋತ್ಸಾಹಿಸಲಿಲ್ಲ.[೧೬] ಇವನ ಆಳ್ವಿಕೆಯ ದ್ವಿತೀಯಾರ್ಧದಲ್ಲಿ ಮೊಗಲ್ ಸಾಮ್ರಾಜ್ಯವು ಅವನತಿ ಹಾದಿ ಹಿಡಿಯಿತು.

ಮೊಗಲರ ಅಂತ್ಯ ಮತ್ತು ಬ್ರಿಟಿಷರ ಸಾಮ್ರಾಜ್ಯಶಾಹಿಯ ಆರಂಭದ ಹಂತವನ್ನು ಹುಸೇನ್ ಸಲೀಂ, ಸೈಯದ್‌ಗುಲಾಮ್, ಹುಸೇನ್ ಖಾನ್, ತಬತಬಾಯ್ ಮತ್ತು ಸಲೀಮ್ ವುಲ್ಲಾ ಮುಂತಾದವರು ಕಟ್ಟಿಕೊಟ್ಟಿದ್ದಾರೆ. ಯುರೋಪಿಯನ್ನರು ಭಾರತವನ್ನು ಪ್ರವೇಶಿಸಿದ ಮೇಲೆ ಭಾರತೀಯ ಚರಿತ್ರೆ ಬರವಣಿಗೆಯಲ್ಲಿ ಆಧುನಿಕ ದೃಷ್ಟಿಕೋನಗಳು ಸೇರ್ಪಡೆಯಾದವು. ಬ್ರಿಟಿಷರು ಭಾರತದಲ್ಲಿ ಪ್ರಭುತ್ವ ಸ್ಥಾಪನೆಯನ್ನು ದೃಷ್ಟಿಕೋನದಲ್ಲಿರಿಸಿಕೊಂಡು ಭಾರತದ ಚಾರಿತ್ರಿಕ ಘಟನೆಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ರಚಿಸತೊಡಗಿದರು. ತಮ್ಮ ಒಡೆದು ಆಳುವ ನೀತಿಯನ್ನು ಅನ್ವಯಿಸಲು ಬೇಕಾದ ಅಂಶಗಳನ್ನು ಚರಿತ್ರೆಯಲ್ಲಿ ವೈಭವೀಕರಿಸಿದರು. ಇದಕ್ಕೆ ಕರ್ನಾಟಕ ಚರಿತ್ರೆಯೂ ಹೊರತಲ್ಲ.

ಭಾರತೀಯ ಇತಿಹಾಸವನ್ನು ಪಾಶ್ಚಾತ್ಯ ಚರಿತ್ರೆ ಲೇಖನ ಸ್ವರೂಪದಲ್ಲಿ ಬರೆಯುವ ಪ್ರಕ್ರಿಯೆ ಪ್ರಾರಂಭವಾಯಿತು. ತದನಂತರ ಇಲ್ಲಿಯವರೆಗೂ ನಾವು ಈ ಸಂಪ್ರದಾಯದಲ್ಲಿ

ಕೆಲವು ಮುಖ್ಯ ಘಟ್ಟಗಳನ್ನು ಗುರುತಿಸಬಹುದು. ಅವೆಂದರೆ, ೧. ವಸಾಹತುಶಾಹಿ ಚರಿತ್ರೆ ಲೇಖನ, ೨. ರಾಷ್ಟ್ರೀಯವಾದಿ ಚರಿತ್ರೆ ಲೇಖನ, ೩. ಎಡಪಂಥಿಯ ಚರಿತ್ರೆ ಲೇಖನ.[೧೭] ಪಾಶ್ಚಾತ್ಯ ಚರಿತ್ರೆ ಲೇಖನದಲ್ಲಿ ಪ್ರಾಧಾನ್ಯತೆ ಪಡೆದ ಚಿಂತನೆಗಳು ಮತ್ತು ವಿಧಾನಗಳು ಭಾರತದ ಆಧುನಿಕ ಚರಿತ್ರೆ ಲೇಖನದಲ್ಲಿ ಅಂತರ್ಗತವಾಗಿವೆ. ಆ ಕಾಲದಲ್ಲಿ ಪಾಶ್ಚಾತ್ಯರಲ್ಲಿ ಪ್ರಮುಖವಾಗಿ ಎರಡು ಚಿಂತನಾ ಸಂಪ್ರದಾಯಗಳು ಪ್ರಭಾವಿಸಿದವು. ಮೊದಲನೆಯದು ಜ್ಞಾನಪೂರ್ವದ ಚಿಂತನೆಗಳು ಹಾಗೂ ರೊಮ್ಯಾಂಟಿಸ್ಟ್ ಚಿಂತನೆಗಳು. ಚರಿತ್ರೆಯೂ ಒಂದು ವಿಜ್ಞಾನ ಎಂದು ಸಾರಿದ ಇವರು ಚರಿತ್ರೆಯ ಮಾಹಿತಿಗಳನ್ನು ಆಕರಗಳಿಂದ ತೆಗೆಯುವ ವಿಮರ್ಶಾಪದ್ಧತಿಗಳನ್ನು ವೈಜ್ಞಾನಿಕವಾಗಿ ಬೆಳೆಸಿದರು. ಚರಿತ್ರೆಯ ಜ್ಞಾನ ಮಾನವ ಚರಿತ್ರೆಯ ಅಂತರ್ಗತ ನಿಯಮಗಳನ್ನು ದರ್ಶನ ಮಾಡಿಸಬೇಕು ಹಾಗೂ ವಿಜ್ಞಾನದಂತೇ ಚರಿತ್ರೆ ಕೂಡ ಭವಿಷ್ಯವನ್ನು ರೂಪಿಸಲು ಅನುಕೂಲವಾದ ಸತ್ಯಗಳನ್ನು ಕಂಡುಹಿಡಿಯಬೇಕು ಎಂದು ವಾದಿಸಿದರು.

ಭಾರತದ ಕುರಿತು ಚರಿತ್ರೆಯನ್ನು ಕಟ್ಟಿದವರಲ್ಲಿ ರೊಮ್ಯಾಂಟಿಸ್ಟ್ ಸಂಪ್ರದಾಯದವರು ಪ್ರಾರಂಭದಿಂದಲೂ ಪ್ರಧಾನವಾಗಿ ಕಾಣಿಸಿಕೊಳ್ಳುತ್ತಾರೆ. ೧೭೮೪ರಲ್ಲಿ ವಾರ್ನ್ ಹೇಸ್ಟಿಂಗ್ಸ್ ಅವರು ರಾಯಲ್ ಏಶಿಯಾಟಿಕ್ ಸೊಸೈಟಿ ಸ್ಥಾಪಿಸಿದರು. ಏಶಿಯಾ ದೇಶಗಳ ವಿಜ್ಞಾನ, ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಗಳನ್ನು ಕುರಿತು ಅಭ್ಯಾಸಿಸುವುದು ಇದರ ಉದ್ದೇಶವಾಗಿತ್ತು. ಈ ಕಾಲದಲ್ಲೆ ಕಾಳಿದಾಸನ ಶಾಕುಂತಲವು ಯುರೋಪಿನ ಹಲವು ಭಾಷೆಗಳಿಗೆ ಅನುವಾದವಾಗಿ ರೋಮ್ಯಾಂಟಿಸ್ಟ್‌ರ ಮೆಚ್ಚುಗೆಗೆ ಪಾತ್ರವಾಯಿತು. ಇವರು ಭಾರತೀಯ ಪ್ರಾಚೀನ ಸಾಹಿತ್ಯದಲ್ಲಿ ಖಗೋಳಶಾಸ್ತ್ರ, ಗಣಿತಶಾಸ್ತ್ರ ಮುಂತಾದ ವಿಜ್ಞಾನಗಳಲ್ಲಿ ಆಧುನಿಕ ಯುರೋಪಿನ ವೈಜ್ಞಾನಿಕ ಜ್ಞಾನದ ಅನೇಕ ಅಂಶಗಳನ್ನು ಗುರುತಿಸಲಾಯಿತು. ಭಾರತೀಯ ಸಂಸ್ಕೃತಿ ಕುರಿತು ಕುತೂಹಲ ಮತ್ತು ಮೆಚ್ಚುಗೆ ತೋರಿದರೂ ಆಧುನಿಕ ಐರೋಪ್ಯರಿಗೆಲ್ಲರಿಗೂ ಇದ್ದ ಗ್ರಹಿಕೆಗಳಿಗೆ ಇವರು ಹೊರತಲ್ಲ. ಭಾರತೀಯ ಸಮಾಜ ಮತ್ತು ಚರಿತ್ರೆ ಮಾನವ ಜನಾಂಗದ ಬಾಲ್ಯಾವಸ್ಥೆ ವ್ಯಕ್ತಪಡಿಸುತ್ತದೆ ಹಾಗೂ ಐರೋಪ್ಯದ ಆಧುನಿಕ ನಾಗರೀಕತೆಗಿಂತ ಕೆಳಗಿನ ಅವಸ್ಥೆ ಎಂದು ಈ ಚರಿತ್ರೆಕಾರರು ಪರಿಭಾವಿಸಿದ್ದರು. ಜರ್ಮನ್ನರು ಭಾರತೀಯ ವೈದಿಕ ಸಾಹಿತ್ಯಗಳನ್ನು ಓದಿ, ಅನುವಾದಿಸಿ ಐರೋಪ್ಯರಿಗೆ ತಾವೊಂದು ವಿಶೇಷ ಸೇವೆ ಸಲ್ಲಿಸುತ್ತಿದ್ದೇವೆ ಎಂದು ಭಾವಿಸಿದರು. ಮ್ಯಾಕ್ಸ್ ಮುಲ್ಲರ್ ಹಾಗೂ ವಿಲಿಯಮ್ ಜೋನ್ಸ್, ಚಾರ್ಲರ್ ವಿಲಿಯಮ್ಸ್, ಬ್ಲೂಮ್‌ಫೀಲ್ಡ್ ಮುಂತಾದ ವಿದ್ವಾಂಸರು ವೈದಿಕ ಸಾಹಿತ್ಯದಲ್ಲಿ ಜ್ಞಾನರಾಶಿ ಇದೆ ಎಂದು ಪ್ರತಿಪಾದಿಸಿದರು. ಇಂಥ ಅಭಿಪ್ರಾಯಗಳು ಭಾರತದ ಚರಿತ್ರೆ ವೈಭವೀಕರಣಕ್ಕೆ ಒಳಗಾಗಲು ಕಾರಣವೂ ಆಯಿತು.

ಭಾರತ ಕುರಿತ ವೈಭವೀಕೃತ ಚಿತ್ರಗಳು ಅಪ್ರಸ್ತುತ ಮತ್ತು ಅನುಕೂಲಕರವಾಗಿ ಪರಿಣಮಿಸಿದವು. ಈ ಹಂತದಲ್ಲಿ ಬ್ರಿಟಿಷ್ ವಿಗ್‌ಲಿಬರಲ್ ಚರಿತ್ರೆ ಸಂಪ್ರದಾಯವು ವಸಾಹತು ಆಳ್ವಿಕೆಗೆ ತಾತ್ವಿಕ

ಸಮರ್ಥನೆಗಳನ್ನು ಒದಗಿಸಿತು. ಈ ಸಂಪ್ರದಾಯದ ಜೇಮ್ಸ್ ಮಿಲ್ ಎಂಬ ಅಧಿಕಾರಿ ೧೮೧೭ರಲ್ಲಿ 'ಎ ಹಿಸ್ಟರಿ ಆಫ್ ಬ್ರಿಟಿಷ್ ಇಂಡಿಯಾ' ಎಂಬ ಗ್ರಂಥ ರಚಿಸಿದ. ಮಿಲ್ ತನ್ನ ಇತಿಹಾಸ ಕಥನವನ್ನು ಯುರೋಪಿನ ಚರಿತ್ರೆಯನ್ನು ಮಾದರಿಯಾಗಿಟ್ಟುಕೊಂಡು ರಚಿಸಿದನು. ಇಲ್ಲಿಯೂ ಮೂರು ಐತಿಹಾಸಿಕ ಯುಗಗಳು ಗುರುತಿಸಲ್ಪಟ್ಟವು. ಅವೆಂದರೆ ಹಿಂದೂಯುಗ, ಮೊಹಮದನ್‌ಯುಗ ಹಾಗೂ ಬ್ರಿಟಿಷ್‌ಯುಗ ಈ ರೀತಿಯ ವಿಂಗಡನೆ ಚರಿತ್ರೆ ಮತೀಯ ಚರಿತ್ರೆಯಾಗಿ ಪರಿವರ್ತನೆಯಾಗುವುದಕ್ಕೆ ಕಾರಣವಾಯಿತು. ಈ ಇತಿಹಾಸ ಭಾವನೆಯ ಚೌಕಟ್ಟಿನಿಂದ ಹೊರಬರಲು ಭಾರತೀಯರಿಗೆ ಇನ್ನೂ ಸಾಧ್ಯವಾಗಿಲ್ಲ. ಭಾರತವನ್ನು ಒಂದು ನಾಗರಿಕ ಪ್ರಪಂಚವಾಗಿ ಮಾಡುವಲ್ಲಿ ಬ್ರಿಟಿಷ್ ಆಳ್ವಿಕೆಯಿಂದ ಮಾತ್ರ ಸಾಧ್ಯ. ಭಾರತವು ಜಡವಾದ, ಚಲನೆಯನ್ನು ಕಳೆದುಕೊಂಡ ಸಮಾಜವಾಗಿದ್ದು ದೀರ್ಘಕಾಲ ನಿರಂಕುಶ ಪ್ರಭುತ್ವಕ್ಕೆ ಒಳಪಟ್ಟು, ಯಾವುದೇ ಲಿಬರಲ್ ಮೌಲ್ಯಗಳೂ ಈ ಜನತೆಗೆ ಗೊತ್ತಿರುವುದು ಸಾಧ್ಯವಿಲ್ಲ. ಹಾಗಾಗಿ ಬ್ರಿಟಿಷ್ ಆಳ್ವಿಕೆ ತನ್ನ ಐತಿಹಾಸಿಕ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಬೇಕು ಎಂಬ ಆಶಯವನ್ನು ಮಿಲ್ ವ್ಯಕ್ತಪಡಿಸಿದ ಈ ಮೂಲಕ ವಸಾಹತುಶಾಹಿ ವ್ಯವಸ್ಥೆ(ಬ್ರಿಟಿಷ್) ಭಾರತದಲ್ಲಿ ಸ್ಥಾಪನೆಯನ್ನು ಸಮರ್ಥಿಸುವಂತೆ ಅವನ ಬರವಣಿಗೆ ಮೂಡಿಬಂದಿದೆ. ವಸಾಹತುಶಾಹಿ ಚರಿತ್ರೆಕಾರರಲ್ಲಿ ವಿನ್ಸೆಂಟ್ ಸ್ಮಿತ್ ಅವನ ಸ್ಥಾನ ವಿಶಿಷ್ಟವಾದುದು. ಭಾರತ ರಾಷ್ಟ್ರೀಯ ಚರಿತ್ರೆಕಾರರ ಮೇಲೆ ಅವರು ಅಗಾಧ ಪ್ರಭಾವವನ್ನು ಮೂಡಿಸಿದನು. ೧೯೦೪ರಲ್ಲಿ ಅವರ ಅರ್ಲಿ ಹಿಸ್ಟರಿ ಆಫ್ ಇಂಡಿಯಾ ರಚನೆಯಾಯಿತು. ಇದರಲ್ಲೆ ಪ್ರಾಚೀನ ಇತಿಹಾಸ ಅಥವಾ ಹಿಂದೂ ಭಾರತ ಚರಿತ್ರೆಗತಿಯನ್ನು ನಿರೂಪಿಸಲಾಯಿತು. ಭಾರತವು ವೈವಿಧ್ಯತೆ ಹೊಂದಿದ್ದರೂ 'ಮನುಕುಲದ ಸಾಮಾಜಿಕ ಮತೀಯ ಹಾಗೂ ಜ್ಞಾನದ ಇತಿಹಾಸದ ಒಂದು ಘಟಕ ಎಂಬ ವಾದವನ್ನು ಇಟ್ಟರು. ಈ ವಾದವು ರಾಷ್ಟ್ರವಾದಿ ಚರಿತ್ರೆಕಾರರ 'ವಿವಿಧತೆಯಲ್ಲಿ ಏಕತೆ' ಎಂಬ ಘೋಷಣೆಗೆ ಪೂರ್ವಬಾವಿಯಾಗಿದೆ. ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಭಾರತದ ರಾಷ್ಟ್ರೀಯವಾದಿ ಚರಿತ್ರೆ ಬರವಣಿಗೆಗಳನ್ನು ವಿಮರ್ಶೆಗೊಂಡಿದ್ದ ಕ್ರೇಂಬಿಡ್ಜ್ ಇತಿಹಾಸಕಾರ ಹೊಸಪಂಥ ಉದಯಿಸಿತು.[೧೮] ಈ ಪಂಥವು ಭಾರತದ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಅದರ ನೇತಾರರು ನಡೆಸಿದ ಹೋರಾಟದ ಒಳನೋಟಗಳನ್ನು ಚಿತ್ರಿಸಿದ್ದಾರೆ. ಸ್ವಾರ್ಥ ಅಧಿಕಾರ ಲಾಲಸೆಯು ಭಾರತೀಯ ನಾಯಕರದ್ದಾಗಿತ್ತು. ಅವರು ಭಾರತೀಯರನ್ನೆಲ್ಲ ಪ್ರತಿನಿಧಿಸುವುದಿಲ್ಲ ಎಂಬ ವಾದವನ್ನು ಮುಂದಿಟ್ಟರು.

ಭಾರತೀಯ ರಾಷ್ಟ್ರೀಯ ಚಳುವಳಿಯ ವಾದಗಳನ್ನು ಮೈಗೂಡಿಸಿಕೊಂಡ ಚರಿತ್ರೆ ಲೇಖನವನ್ನು ರಾಷ್ಟ್ರೀಯವಾದಿ ಚರಿತ್ರೆ ಲೇಖನ ಎಂದು ಗುರುತಿಸಲಾಗುತ್ತದೆ. ರಾಷ್ಟ್ರೀಯವಾದಿ ಚರಿತ್ರೆಕಾರರು ವಸಾಹತುಶಾಹಿಯ ಬ್ರಿಟಿಷ್ ಲಿಬರಲ್ ಇತಿಹಾಸ ದೋರಣೆಗಳ ಕುರಿತು ವಿಮರ್ಶೆಯನ್ನು

ನಡೆಸಿ ಸ್ವಸಮರ್ಥನೆಗಳನ್ನು ಬೆಳೆಸಿಕೊಂಡಿದ್ದರು ರಾಷ್ಟ್ರೀಯವಾದಿ ಚರಿತ್ರೆಯ ಮಾದರೀಕರಣ ಮೊದಲು ಆರ್.ಸಿ.ಮಜುಂದಾರ್, ನೆಹರು ಮುಂತಾದವರಿಂದ ನಡೆಯಿತಾದರೂ ೧೯೦೦ ನಂತರ ಹೆಚ್ಚು ಸಂಶೋಧನೆಗಳು ಆರಂಭವಾದವು. ಕೆ.ಪಿ.ಜಯಸ್ವಾಲ್ ಅವರ "ಹಿಂದೂ ಪಾಲಿಟಿ" ಕೃತಿ ಮೂಲಕ ಭಾರತೀಯರಿಗೂ ಬ್ರಿಟಿಷರಿಗಿಂತ ಮೊದಲೇ ಗಣತಂತ್ರ ವ್ಯವಸ್ಥೆ ತಿಳಿದಿತ್ತು ಎಂಬ ವಾದವನ್ನು ಮುಂದಿಟ್ಟಿದ್ದಾರೆ. ಆರ್.ಕೆ.ಮುಖರ್ಜಿಯವರು ಭಾರತ ವೈವಿಧ್ಯತೆ ಹೊಂದಿಯೂ ಅಖಂಡ ಸಾಂಸ್ಕೃತಿಕ ಏಕತೆಯನ್ನು ಪ್ರಾಚೀನ ಕಾಲದಿಂದಲೂ ಹೊಂದಿತ್ತು ಎಂಬ ವಾದವನ್ನು ಮಂಡಿಸಿದ್ದಾರೆ.

ಮಧ್ಯಕಾಲದ ಕುರಿತು ಹಿಂದೂ ಚರಿತ್ರೆಕಾರರು ಅಷ್ಟಾಗಿ ಆಸ್ಥೆಯಿಂದ ಬರೆಯಲಿಲ್ಲ. ಜಾದುನಾಥ ಸರ್ಕಾರ್ ಅವರು ಮೊಗಲ್ ಕಾಲದ ಚರಿತ್ರೆಯಲ್ಲಿ ಪ್ರಕಾಂಡ ಪಂಡಿತರಾಗಿದ್ದು ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಅವರು ಮುಸ್ಲಿಮ್ ಅರಸರು ಹಿಂದೂಗಳ ಕುರಿತು ದಮನಕಾರಿ ನೀತಿ ಅನುಸರಿಸಿದರು ಎಂಬ ನಿಲುವು ತಳೆದಿದ್ದಾರೆ. ಬ್ರಿಟಿಷರು ಭಾರತೀಯ ಚರಿತ್ರೆಯಲ್ಲಿ ದಾಖಲಿಸಿದ ಮತೀಯ ವಿಭಾಗಗಳು ರಾಜಕೀಯ ಶಕ್ತಿಗಳಾಗಿ ಮತ್ತು ರಾಷ್ಟ್ರಗಳಾಗಿ ಅವತರಿಸಿದವು. ರಾಷ್ಟ್ರೀಯವಾದಿ ಚರಿತ್ರೆಕಾರರಲ್ಲಿ ತಾರಾಚಂದ್‌ರಂಥವರು ಹಿಂದೂ ಮುಸ್ಲಿಮ್ ಸಾಂಸ್ಕೃತಿಕ ಸಮನ್ವಯದ ಚರಿತ್ರೆಯನ್ನು ಕಟ್ಟಿದರು. ರಾಷ್ಟ್ರೀಯವಾದಿ ಚರಿತ್ರೆಕಾರರು ಪ್ರಾಚೀನ ರಾಜಮನೆಗಳ ಆಳ್ವಿಕೆಯನ್ನು ವೈಭವೀಕರಣಕ್ಕೆ ಒಳಪಡಿಸಿದರು. ಗುಪ್ತರ ಕಾಲವನ್ನು 'ಸುವರ್ಣಯುಗ' ಎಂದು ವರ್ಣಿಸಿದರು.[೧೯] ಇವರ ಬರವಣಿಗೆಗಳಲ್ಲಿ ರಾಜ, ರಾಜತ್ವದ ವಿಚಾರಗಳೇ ಪ್ರಧಾನವಾಗಿವೆ. ಅಂದರೆ ಅರಸ ಕೇಂದ್ರಿತಗೊಂಡಿವೆ ಜನಸಾಮಾನ್ಯರು ಅಲಕ್ಷಿತಗೊಂಡಿದ್ದಾರೆ.

ಮಾರ್ಕ್ಸ್‌ವಾದವು ಚರಿತ್ರೆಲೇಖನ ಕಲೆಯಲ್ಲಿ ಮತ್ತೊಂದು ಆಯಾಮವಾಗಿದೆ. ಮಾರ್ಕ್ಸ್‌ವಾದ ಎಂದರೆ ೧೯ನೇ ಶತಮಾನದ ಉತ್ತರಾರ್ಧದಲ್ಲಿ ಕಾರ್ಲ್‌ಮಾರ್ಕ್ಸ್ ಶೋಷಿತ ವರ್ಗದ ಧ್ವನಿಯಾಗಿ ಮಂಡಿಸಿದ ಸಿದ್ಧಾಂತವಾಗಿದೆ. ಮಾರ್ಕ್ಸ್‌ವಾದವನ್ನು ಇಂದು 'ಆರ್ಥಿಕ ನಿರ್ಣಾಯಕತೆ' ಎಂದು ಇಂದಿನ ಮಾರ್ಕ್ಸ್‌ವಾದಿಗಳು ನಿರೂಪಣೆ ಮಾಡಿದ್ದಾರೆ. ಮಾರ್ಕ್ಸ್‌ವಾದಿ ಚರಿತ್ರೆ ಲೇಖನ ಕ್ರಮವು ಭಾರತೀಯ ಎಡಪಂಥೀಯ ಚರಿತ್ರೆಕಾರರಲ್ಲಿ ಮಾದರಿಯಾಗಿತ್ತು.[೨೦] ಭಾರತದಲ್ಲಿ ಮಾರ್ಕ್ಸ್‌ವಾದದ ಹಿನ್ನೆಲೆಯಲ್ಲಿ ರಚನೆಯಾದ ಪ್ರಥಮ ಗ್ರಂಥವೆಂದರೆ ಎಸ್.ಎ.ಡಾಂಗೆ ಅವರ 'ಇಂಡಿಯಾ ಫ್ರಮ್ ಪ್ರಿಮಿಟಿವ್ ಕಮ್ಯುನಿಸಂ ಟು ಸ್ಲೇವರಿ' ೧೯೫೦ರ ದಶಕದಲ್ಲಿ ಭಾರತೀಯ ಚರಿತ್ರೆ ಲೇಖನವನ್ನು ಪ್ರಕಟಿಸಲು ತೊಡಗಿದ ಡಿ.ಡಿ.ಕೊಸಾಂಬಿ ಅವರು ಪ್ರಮುಖವಾಗಿ ಎರಡು ಸಂಪ್ರದಾಯಗಳನ್ನು ಪರಿಷ್ಕರಿಸುತ್ತಿದ್ದರು. ಅವೆಂದರೆ ರಷ್ಯನ್ ಮಾರ್ಕ್‌ವಾದಿ ಚರಿತ್ರೆ ಲೇಖನ ಹಾಗೂ ಭಾರತೀಯ ರಾಷ್ಟ್ರೀಯತಾವಾದಿ ಚರಿತ್ರೆ ಲೇಖನ. ಕೊಸಾಂಬಿಯವರು ಭಾರತೀಯ

ಚರಿತ್ರೆ ಕೂಡ ಸಾಮಾಜಿಕ ವಿಕಾಸವನ್ನು ಕಂಡಿದೆ ಎಂಬ ತಮ್ಮ ಮೊದಲ ಕೃತಿ 'ಇಂಟ್ರಡಕ್ಷನ್ ಟು ಇಂಡಿಯನ್ ಹಿಸ್ಟರಿ'ಯಲ್ಲಿ ಪ್ರಸ್ತಾಪಿಸಿದ್ದಾರೆ. ಇವರು ರಷ್ಯನ್ ಮಾರ್ಕ್ಸ್‌ವಾದಿಗಳ ಗ್ರಹಿಕೆಯನ್ನು ಅಲ್ಲಗಳೆದು ಭಾರತೀಯ ಚರಿತ್ರೆಗೆ ಸ್ವಂತಿಕೆಯನ್ನು ನೀಡಲು ಪ್ರಯತ್ನಿಸಿದರು.[೨೧] ದೇವಿಪ್ರಸಾದ ಚಟ್ಟೋಪಾಧ್ಯಾಯ, ಡಿ.ಎನ್.ಝಾ ಆರ್.ಎನ್.ನಂದಿ, ದೇವಾಂಗೂ ದೇಸಾಯಿ, ರೋಮಿಲಾ ಥಾಪರ್ ಮುಂತಾದ ಚರಿತ್ರೆಕಾರರು ಭಾರತೀಯ ಮಾರ್ಕ್ಸ್‌ವಾದಿ ಚರಿತ್ರೆಕಾರರಲ್ಲಿ ಪ್ರಮುಖರು. ಬಿಪನ್‌ಚಂದ್ರ ಅವರ ಕಾಲದ ಎಡಪಂಥೀಯ ಆಧುನಿಕ ಚರಿತ್ರೆ ಲೇಖನವು ರಾಷ್ಟ್ರೀಯವಾದಿಯಾಗಿ ಪರಿವರ್ತನೆ ಹೊಂದಿತು. ಕೆ.ಎನ್. ಪಣಿಕ್ಕರ್, ಸುಮಿತ್ ಸರ್ಕಾರ್ ಸರ್ವಪಳ್ಳಿ ಗೋಪಾಲ ಮುಂತಾದವರು ಈ ವರ್ಗಕ್ಕೆ ಸೇರಿದವರಾಗಿದ್ದರು.

ಭಾರತೀಯ ಎಡಪಂಥೀಯ ಚರಿತ್ರೆಕಾರರು ೧೯೮೦ರ ನಂತರ ಭಾರತದಲ್ಲಿ ಹಿಂದೂ ರಾಷ್ಟ್ರವಾದವು ಪ್ರಬಲವಾಗುತ್ತಿದ್ದಂತೆ ಸೆಕ್ಯುಲರ್ ವಾದವನ್ನು ಚರಿತ್ರೆ ಮೂಲಕ ಕಟ್ಟಿಕೊಡುವ ಪ್ರಯತ್ನ ನಡೆಸಿದರು. ಇವರು ಭಾರತೀಯ ಸಂಸ್ಕೃತಿಯು ಹೇಗೆ ಹಿಂದೂ ರಾಷ್ಟ್ರೀಯವಾದಿ ನಿರೂಪಣೆಗೆ ಒಗ್ಗುವುದಿಲ್ಲ ಎಂಬುದನ್ನು ಒಂದು ರಾಜಕೀಯ ಬದ್ಧತೆಗಾಗಿ ಆದ್ಯತೆ ನೀಡಿ ವಾದಿಸಿದರು.[೨೨]

ಭಾರತೀಯ ಚರಿತ್ರೆ ಲೇಖನದಲ್ಲಿ ೧೯೮೦–೯೦ ದಶಕದಲ್ಲಿ ಸಬಾಲ್ಟರ್ನ್ ಅಧ್ಯಯನ ಮಹತ್ವ ಪಡೆದಿದೆ. ರಣಜಿತ್ ಗುಹಾ, ಪಾರ್ಥ ಚಟರ್ಜಿ ಮುಂತಾದ ಚರಿತ್ರೆಕಾರರು ಈ ಲೇಖನ ಪಂಥದ ವಕ್ತಾರರು. ಸಬಾಲ್ಟರ್ನ್ ಎಂದರೆ ಕೆಳಸ್ತರದ ಸಮುದಾಯಗಳ ಚರಿತ್ರೆಯಾಗಿದೆ. ವಿಶ್ವದಲ್ಲಿ ಮೊದಲಬಾರಿಗೆ ಈ ಪರಿಕಲ್ಪನೆಯನ್ನು ಹುಟ್ಟು ಹಾಕಿದವನು ಇಟಲಿಯ ಮಾರ್ಕ್ಸ್‌ವಾದಿ ಚಿಂತಕ ಅಂಟೋನಿಯೋ ಗ್ರಾಂಸಿ. ಅವನು ರಚಿಸಿದ ಸೆರೆಮನೆ ಟಿಪ್ಪಣಿಗಳು ಎಂಬ ಸಂಗ್ರಹದಿಂದ ಆಯ್ದುಕೊಳ್ಳಲಾಗಿದೆ. ಈ ಪಂಥವು ಪ್ರಭುತ್ವಕೇಂದ್ರಿತ ಚರಿತ್ರೆ ರಚನೆಯ ವಿರುದ್ಧವಾಗಿ ಕೆಳಸ್ತರದ ಜನರ ಧ್ವನಿಯಾಗಿ ಮೂಡಿದೆ. ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಲೋಕದೃಷ್ಟಿ ಕೂಡ ಪ್ರಭುತ್ವ ಕೇಂದ್ರಿತ ದೃಷ್ಟಿಕೋನದಿಂದಲೇ ಆಗಿದೆ. ಬ್ರಿಟಿಷರ ವಸಾಹತುಶಾಹಿ ದಬ್ಬಾಳಿಯ ಪ್ರಭುತ್ವವನ್ನು ವಿರೋಧಿಸಿದ ರಾಷ್ಟ್ರೀಯವಾದಿ ಚಿಂತಕರು ಅವರು ಪ್ರಭುತ್ವವನ್ನು ಅಂತರ್ಗತ ಮಾಡಿಕೊಂಡು ಅದನ್ನು ತಾವೇ ಪಡೆಯಲು ಹೋರಾಟ ನಡೆಸಿದರು. ಅವರ ಹೋರಾಟಗಳಿಗೆ ರೈತರು ಮತ್ತು ಕೆಳಸ್ತರದ ಬುಡಕಟ್ಟು ಸಮುದಾಯಗಳನ್ನು ಬಳಸಿಕೊಂಡರು ಎಂಬ ವಾದವನ್ನು ಸಬಾಲ್ಟರ್ನ್ ಚರಿತ್ರೆಕಾರರು ಮುಂದಿಟ್ಟರು. ೧೯೮೦–೯೦ರ ದಶಕದಲ್ಲಿ ರಚನೆಯಾದ ಸಬಾಲ್ಟರ್ನ್ ಚರಿತ್ರೆ ಬರವಣಿಗೆಗಳು ಬಹುತೇಕ ಸಮಾಜವಾದಿ ಚಿಂತನೆಯ ಮಾರ್ಕ್ಸ್‌ವಾದಿ ಸೈದ್ಧಾಂತಿಕ ಚೌಕಟ್ಟಿನೊಳಗೆ ಹೊಂದಿಕೊಂಡಂತೆ ರಚನೆಯಾದವು.[೨೩] ಅನಂತರ ಅವು ತಮ್ಮ ಬರವಣಿಗೆಗಳಲ್ಲಿ ಆಧುನಿಕೋತ್ತರ ಚಿಂತನೆಯನ್ನು ವ್ಯಕ್ತಪಡಿಸಿದವು.

ಟಿಪ್ಪುವಿನ ಆಳ್ವಿಕೆಯನ್ನು ಕುರಿತಾದ ಚರ್ಚೆಗಳು ಇಂದು ಹೆಚ್ಚಾಗಿ ನಡೆಯುತ್ತವೆ. ಚಾರಿತ್ರಿಕ ಘಟನೆಗಳನ್ನು ವ್ಯಾಖ್ಯಾನಿಸುವ ಹಲವು ಪಂಥಗಳೇ ಹುಟ್ಟಿಕೊಂಡಿವೆ. ವಸಾಹತುಶಾಹಿ, ರಾಷ್ಟ್ರೀಯವಾದಿ, ಮಾರ್ಕ್ಸ್‌ವಾದಿ ಹಾಗೂ ಪ್ರಗತಿಪರ ಚಿಂತನೆಯ ಹಿನ್ನೆಲೆಯಿಂದ ಕೂಡಿದ ಸಾಕಷ್ಟು ಅಧ್ಯಯನಗಳು ನಡೆದಿವೆ. ಇವು ವಾದ ಪ್ರತಿವಾದದ ರೂಪದಲ್ಲಿವೆ. ಇವುಗಳಿಂದಾಚೆ ಟಿಪ್ಪುವನ್ನು ನೋಡಲು ಸಾಧ್ಯವಾಗುವುದು ಜನಪದರ ಮೌಖಿಕ ರಚನೆಗಳ ಮೂಲಕ. ಟಿಪ್ಪು ಸುಲ್ತಾನನ ಬಗೆಗಿರುವ ಲಾವಣಿಗಳು ಜನಪದರು ಟಿಪ್ಪುವನ್ನು ಯಾವ ನೆಲೆಯಿಂದ ನೋಡಿದರು ಎನ್ನುವ ಅಂಶವನ್ನು ತಿಳಿಸುತ್ತವೆ. ಚರಿತ್ರೆಕಾರ ಈ ಬಗೆಯ ಮೌಖಿಕ ರಚನೆಗಳಿಗೆ ಮುಖಾಮುಖಿ ಯಾದಾಗ ಅಥವಾ ಅವುಗಳೊಂದಿಗೆ ಅನುಸಂಧಾನ ನಡೆಸಿದಾಗ ನೈಜ ಚರಿತೆಯೆಂದು ನಾವು ಯಾವುದನ್ನು ಕರೆಯುತ್ತೇವೆಯೋ ಅದಕ್ಕೆ ಸಮೀಪಿಸಲು ಸಾಧ್ಯ. ಟಿಪ್ಪು ಕುರಿತು ಬಂದಿರುವ ಲಿಖಿತ ಮತ್ತು ಮೌಖಿಕ ಆಕರಗಳೆರಡನ್ನು ತುಲನಾತ್ಮಕವಾಗಿ ನೋಡಿದಾಗ ಹಾಗೂ ಆ ಸಂದರ್ಭದ ರಾಜಕಾರಣದ ಸಂಕೀರ್ಣತೆಯನ್ನು ಗ್ರಹಿಸಿಕೊಂಡಾಗ ನಮಗೆದುರಾಗುವುದು ಟಿಪ್ಪುವಿನ ಆಳ್ವಿಕೆಯ ನಿಜಸ್ವರೂಪ. ಇದು ಟಿಪ್ಪುವಿಗಷ್ಟೆ ಸಂಬಂಧಪಡದೆ ಎಲ್ಲ ಅರಸರಿಗೂ ಹಾಗೂ ಬ್ರಿಟಿಷರ ವಿರುದ್ಧ ಹೋರಾಡಿದ ಸ್ವಾತಂತ್ರ್ಯ ಹೋರಾಟಗಾರರೆಲ್ಲರಿಗೂ ಅನ್ವಯಿಸುತ್ತದೆ.[೨೪]

ಭಾರತದ ಚಾರಿತ್ರಿಕ ಘಟನೆಗಳನ್ನು ಅವಲೋಕಿಸಿದರೆ, ಹಲವು ಕಾಲಘಟ್ಟದಲ್ಲಿ ಬಂದಿರುವ ಚರಿತ್ರೆ ಬರವಣಿಗೆಗಳು ವೈಭವದ ಮೇರುಸಾಮ್ರಾಜ್ಯ, ಸುವರ್ಣಯುಗ ಹಾಗೂ ಕೆಲವು ಅಂದಕಾರದ ಯುಗವಾಗಿತ್ತು ಎನ್ನುವ ಹಿನ್ನಲೆಯಿಂದಲೇ ಬಂದಿದೆ. ಪ್ರಾಚೀನ ರಾಜಮನೆತನಗಳಾದ ಮೌರ್ಯ, ಶಾತವಾಹನ, ಕುಶಾನ, ವರ್ದನರು, ಗುಪ್ತರು, ಚಾಲುಕ್ಯ, ರಾಷ್ಟ್ರಕೂಟ, ಚೋಳ, ಚೇರ, ಪಲ್ಲವ ಇತ್ಯಾದಿ ರಾಜ್ಯ ಮತ್ತು ರಾಜರುಗಳನ್ನು ವೈಭವದ ನೆಲೆಯಲ್ಲೆ ಚಿತ್ರಿಸಲಾಗಿದೆ. ಹಾಗೆಯೇ ಮಧ್ಯಕಾಲೀನ ಸಂದರ್ಭದ ವಿಜಯನಗರ ಸಾಮ್ರಾಜ್ಯವು ವೈಭವೋಪೇತ ಮಹಾಸಾಮ್ರಾಜ್ಯವಾಗಿತ್ತು ಎನ್ನುವ ಬರವಣಿಗೆಗಳು ಹೆಚ್ಚು. ದೆಹಲಿ ಸುಲ್ತಾನರು, ಮೊಗಲ್‌ರ ಕಾಲ ಅಂದಕಾರದ ಕಾಲ ವಾಗಿತ್ತು ಎನ್ನುವ ನೆಲೆಯಲ್ಲೆ ಅಧ್ಯಯನಗಳಾಗಿವೆ. ಇಲ್ಲಿಯೂ ಧರ್ಮ ಮತ್ತು ರಾಜಕಾರಣದ ಪೂರ್ವಗ್ರಹ ಪೀಡಿತ ಗ್ರಹಿಕೆಗಳು ಅಡಕವಾಗಿವೆ. ಟಿಪ್ಪುವಿನ ಚರಿತ್ರೆಯು ಇದಕ್ಕೆ ಹೊರತಾಗಿಲ್ಲ.

ಟಿಪ್ಪುವಿನ ಚರಿತ್ರೆಯು ಸಮಕಾಲೀನ ಸಂದರ್ಭದಲ್ಲಿ ಹೆಚ್ಚು ಚರ್ಚೆಗೆ ಗ್ರಾಸವಾಗಿದೆ. ಟಿಪ್ಪುವಿನ ಆಡಳಿತದ ಸ್ವರೂಪ ಮತ್ತು ವ್ಯಕ್ತಿತ್ವ ಕುರಿತು ವಿಭಿನ್ನ ನೋಟಗಳು ಪರ-ವಿರುದ್ಧ ಎಂಬ ಅಭಿಪ್ರಾಯಗಳಿಗೆ ಎಡೆಮಾಡಿಕೊಟ್ಟಿದೆ. ಟಿಪ್ಪು ಕ್ರೂರಿಯಾಗಿ, ಮತಾಂಧನೂ, ಹಿಂದೂ ಧರ್ಮ ವಿರೋಧಿಯೂ, ಸ್ವಧರ್ಮಪ್ರೇಮಿ, ದೇಶದ್ರೋಹಿ, ಭಾಷಾವಿರೋಧಿ ಆಗಿದ್ದನೆಂಬ ಪ್ರತಿವಾದಗಳು ಹುಟ್ಟಿಕೊಂಡಿವೆ. ಟಿಪ್ಪು ಕ್ರೂರಿ, ಮತಾಂಧ, ಪರಮತ ದ್ವೇಷಿ, ರಾಷ್ಟ್ರದ್ರೋಹಿ

ಎಂದೆಲ್ಲ ಬರೆದವರು ಯಾರು? ಯಾವ ಸಂದರ್ಭದಲ್ಲಿ ಬರೆದರು? ಆಗಿನ ಪರಿಸ್ಥಿತಿ ಹೇಗಿತ್ತು? ಎಂಬ ವಿವೇಕಪೂರ್ಣ ಜ್ಞಾನವಿರಬೇಕು. ಟಿಪ್ಪು ಮತ್ತು ಹೈದರ್ ಪರಮತ ದ್ವೇಷಿಗಳಲ್ಲ. ಹಿಂದೂ ಧರ್ಮದ ವಿರೋಧಿಗಳಲ್ಲ, ಭಾಷಾ ವಿರೋಧಿಗಳಲ್ಲ, ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನಿಜವಾದ ರಾಷ್ಟ್ರಪ್ರೇಮಿಗಳು ಎಂದೂ ಬರೆದವರು ಇದ್ದಾರೆ. ಅವರ ಬರಹಗಳ ಸೂಕ್ಷ್ಮತೆಯನ್ನು ಗಮನಿಸಬೇಕು. ಇಂದಿನ ಸಮಕಾಲೀನ ರಾಜಕಾರಣವನ್ನು ಹಲವು ಸಂದರ್ಭಗಳಲ್ಲಿ ನಾವು ಇತಿಹಾಸದಲ್ಲಿ ಪ್ರತಿಪಾದಿಸುವುದು ಐತಿಹಾಸಿಕ ವ್ಯಕ್ತಿ ಚಿತ್ರಣಗಳ ಮೂಲಕ. ಇಂದಿನ ಕಲಹ ವ್ಯಾಜ್ಯಗಳ ಲಾಂಚನವಾಗಿಯೂ, ಸಾಕ್ಷೀದಾರರನ್ನಾಗಿ ಅವರನ್ನು ಸಮೀಕರಿಸುವ ಪ್ರಯತ್ನ ನಡೆದಿದೆ.[೨೫] ಇದು ತಪ್ಪು ತೀರ್ಮಾನಗಳಿಗೆ ದಾರಿ ಮಾಡಿಕೊಡುತ್ತದೆ.

ಚಾರಿತ್ರಿಕ ವ್ಯಕ್ತಿಗಳ ಬಗೆಗೆ ಬರೆಯುವಾಗ ಕೆಲವರು ನಮ್ಮವರು, ನಮ್ಮ ಕಣ್ಮಣಿಗಳು, ನಮ್ಮ ನಾಡಿನ ಹೆಮ್ಮೆಯ ದ್ಯೋತಕವಾಗಿರುವವರು, ಇನ್ನೂ ಕೆಲವರು ವೈರಿಗಳು, ನಿಕೃಷ್ಟರು ನಿಂದಾಯೋಗ್ಯರು ಎಂಬ ಪೂರ್ವಗ್ರಹ ಪೀಡಕ ಚಿತ್ರಣಗಳನ್ನು ನೀಡಿದ್ದಾರೆ. ಈ ಚಿತ್ರಣಗಳನ್ನು ಇತಿಹಾಸ ಸತ್ಯವಾಗಿ ಪ್ರತಿಪಾದಿಸುವುದರಲ್ಲಿ ನಡೆದ ಪ್ರಯತ್ನಗಳು ಕಡಿಮೆಯೇನಲ್ಲ. ಇದೇ ಸಾಲಿಗೆ ಹೈದರ್ ಮತ್ತು ಟಿಪ್ಪು ಸೇರಿಹೋಗಿದ್ದಾರೆ. ಬ್ರಿಟಿಷ್‌ರೊಡನೆ ಅವುಡುಕಚ್ಚಿ ಸೆಣಸಿದವರು ಇವರು ಎಂಬುದು ನಿರ್ವಿವಾದ. ಬ್ರಿಟಿಷರನ್ನು ಭಾರತದಿಂದಲೇ ಹೊರಹಾಕುವ ಕಠಿಣ ಹೋರಾಟದಲ್ಲಿ ಕೊನೆಗೂ ಟಿಪ್ಪು ಸೋಲುಂಡವನು. ಸೋತು ಗೆದ್ದವನೂ ಎಂದೂ ವಿಶ್ಲೇಷಿಸಬಹುದು. ಬ್ರಿಟಿಷರೊಡನೆ ನಡೆದ ಯುದ್ಧಗಳನ್ನು ಸ್ವಾತಂತ್ರ್ಯ ಹೋರಾಟದೊಂದಿಗೆ ಸಮೀಕರಿಸಿದಾಗ ಟಿಪ್ಪುವಿನ ಸೋಲಿಗೆ ಒಂದು ಬಗೆಯ ದಿವ್ಯತೆ ಪ್ರಾಪ್ತವಾಗುತ್ತದೆ. ಆದರೆ ಬ್ರಿಟಿಷ್ ವಸಾಹತುಶಾಹಿ ಬರಹಗಾರರು ಅವನೊಬ್ಬ ಕ್ರೂರಿ, ಮತಾಂಧ, ಪ್ರಜಾಪೀಡಕ, ರಾಷ್ಟ್ರದ್ರೋಹಿ ಎಂಬ ಪರಿಕಲ್ಪನೆಗಳನ್ನು ಹುಟ್ಟುಹಾಕಿದರು. ಅವನ ಅಂತ್ಯವನ್ನು ಬ್ರಿಟಿಷರು ಪ್ರಜಾಹಿತವನ್ನು ಸಾಧಿಸಲು ನಡೆಸಿದ ಪ್ರಯತ್ನ ಎಂಬ ಅಭಿಪ್ರಾಯಗಳು ಮೂಡುವ ಹಾಗೆ ಬಿಂಬಿಸಲಾಗಿದೆ.[೨೬] ಭಾರತದಲ್ಲಿ ಬ್ರಿಟಿಷರ ಪ್ರಭುತ್ವ ಸ್ಥಾಪನೆ ಮತ್ತು ವಿಸ್ತರಣೆಗೆ ಬಲವಾದ ತಡೆಯಾಗಿದ್ದ ಟಿಪ್ಪುವನ್ನು ಹಣಿಯಲು ಬ್ರಿಟಿಷ್ ಬರಹಗಾರರರು ಪ್ರಯತ್ನಿಸಿದರು ಎಂಬುದು ನಿರ್ವಿವಾದ ಸಂಗತಿಯಾಗಿದೆ.

ಟಿಪ್ಪು ಸುಲ್ತಾನ್ ಭಾರತದ ಮೊದಲ ಸ್ವಾತಂತ್ರ್ಯ ಹೋರಾಟಗಾರ ಎನ್ನುವುದನ್ನು ಒಪ್ಪುವುದು ಕೆಲವರಿಗೆ ಅಪಥ್ಯದ ವಿಚಾರ. ಬಹುಶಃ ಹದಿನೆಂಟನೆಯ ಶತಮಾನದಲ್ಲಿ ಸ್ವಾತಂತ್ರ್ಯದ ಕಲ್ಪನೆ ಈ ಶತಮಾನದಲ್ಲಿರುವಂಥ ವ್ಯಾಪಕ ಅರ್ಥವಿರಲಿಲ್ಲ ಎನಿಸುತ್ತದೆ. ಭಾರತವು ಆಗಿನ್ನೂ ಅಖಂಡವಾಗಿ ಒಂದು ರಾಷ್ಟ್ರವೆನ್ನುವ ಭಾವನೆಯೂ ಮೂಡಿರಲಿಲ್ಲ. ಏಕೆಂದರೆ ಅಂದಿನ

ರಾಜಪ್ರಭುತ್ವ ಪ್ರತ್ಯೇಕ ರಾಜ್ಯಗಳನ್ನು ಸ್ವಾಯತ್ತವೆಂಬಂತೆ ಆಳುತ್ತಿದ್ದ ಅರಸರುಗಳ ಒಂದು ವಿಭಿನ್ನ ಭೌಗೋಳಿಕ ಪ್ರದೇಶವಾಗಿತ್ತು. ಟಿಪ್ಪು ವಿದೇಶಿಯರೊಡನೆ ಹೋರಾಡಿದ್ದು ತಾನು ಗದ್ದು ಆಳುತ್ತಿದ್ದ ಭೂಭಾಗಗಳನ್ನು ಸಂರಕ್ಷಿಸಿಕೊಳ್ಳಲು ಮಾತ್ರ ಎಂಬ ತರ್ಕ ಕೆಲವರದು. ಅರ್ಧಕ್ಕೂ ಹೆಚ್ಚು ಹಿಂದೂಸ್ಥಾನವನ್ನು ಅಂಕೆಗೆ ತೆಗೆದುಕೊಂಡಿದ್ದ ಇಂಗ್ಲಿಷರೊಡನೆ ಹೋಲಿಕೆಯಲ್ಲಿ ಚಿಕ್ಕ ಸಂಸ್ಥಾನವೊಂದರ ದೊರೆ ಸಿಂಹಸ್ವಪ್ನವಾಗಿದ್ದುದು ಐತಿಹಾಸಿಕ ಸತ್ಯವಾಗಿದೆ. ಕೊನೆಗಳಿಗೆಯಲ್ಲಿ ಉಪಾಯದಿಂದ ಪಾರಾಗುವ ಅವಕಾಶಗಳಿದ್ದರೂ ಹಾಗೆ ಮಾಡದೆ ಆಪತ್ಕಾಲದಲ್ಲಿ ಅವನ ಅನೇಕ ಸೇನಾಧಿಪತಿಗಳು ಕೈಬಿಟ್ಟು ಹೋದರೂ ಕಡುಗಲಿಯಂತೆ ಹೋರಾಡಿ ಮಡಿದ ಏಕೈಕ ರಾಜನೆಂದರೆ ಟಿಪ್ಪು.[೨೭]

ಟಿಪ್ಪು ಒಬ್ಬ ಕ್ರೂರಿಯೆಂದು ಬಣ್ಣಿಸಿರುವ ಆಗಿನ ಚರಿತ್ರೆಕಾರರು ಅವನು ಪರಧರ್ಮಿಯ ಸ್ತ್ರೀಯರನ್ನು ಅಗೌರವಿಸಿ ಅವಮಾನಿಸಿದ್ದನ್ನಾಗಲಿ, ಅವರ ಮೇಲೆ ಅತ್ಯಾಚಾರವೆಸಗಿದ್ದಾಗಲಿ ಎಲ್ಲೂ ಉಲ್ಲೇಖಿಸಿಲ್ಲ.[೨೮] ಆದರೂ ವಸಾಹತುಶಾಹಿ ಬರಹಗಾರರು, ಭಾರತದ ಕೆಲವು ರಾಷ್ಟ್ರೀಯ ವಾದಿ ಚರಿತ್ರೆಕಾರರು ಪೂರ್ವಕಲ್ಪಿತ ಅಂಶಗಳಿಗೆ ಮಹತ್ವ ನೀಡಿ ಟಿಪ್ಪು ಸುಲ್ತಾನ್ ಚರಿತ್ರೆ ಬರವಣಿಗೆಯಲ್ಲಿ ತೊಡಗಿರುವುದು ವಿಪರ್ಯಾಸ. ಟಿಪ್ಪುವಿನ ಆಗಿನ ಸಂದರ್ಭದ ಭಾರತದ ಅಖಂಡತೆಗೆ ಅವನು ರೂಪಿಸಿದ ಯೋಜನೆಗಳು, ರಾಜಕೀಯ ನಿರ್ಧಾರಗಳು, ಆರ್ಥಿಕ ಚಿಂತನೆಗಳಿಗೆ ಇವರುಗಳ ಬರವಣಿಗೆಯಲ್ಲಿ ಸ್ಥಾನವಿಲ್ಲ. ಭಾರತದ ರಾಜರುಗಳು ತಮ್ಮ ಸ್ವಹಿತಾಸಕ್ತಿಗಾಗಿ ಒಳಜಗಳ ನಡೆಸುತ್ತಿದ್ದುದು ಈ ಅನೈಕ್ಯತೆ ಸನ್ನಿವೇಶವನ್ನು ಬ್ರಿಟಿಷರು ತಮ್ಮ ಪ್ರಭುತ್ವ ಬಲಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಅರಿವು ಟಿಪ್ಪುವಿಗಿತ್ತು. ಬೇರೆ ಅರಸರಿಗೆ ಅದರ ಆಲೋಚನೆ ಇರಲಿಲ್ಲ. ಅಂದಿನ ಆಳರಸರು, ಪಾಳೆಯಗಾರರು ಬ್ರಿಟಿಷರ ಸಖ್ಯವಹಿಸುವುದನ್ನು ಟಿಪ್ಪು ಖಂಡಿಸಿದ. ಅಂಥ ರಾಜರುಗಳ ವಿರುದ್ಧ ಕಠಿಣ ರಾಜಕೀಯ ಮತ್ತು ಸೈನಿಕ ನಿರ್ಧಾರಗಳನ್ನು ತೆಗೆದುಕೊಂಡ ಇದರಲ್ಲಿ ರಾಷ್ಟ್ರದ ಹಿತ ಮುಖ್ಯವಾಗಿತ್ತೇ ವಿನಃ ಯಾವುದೇ ಸ್ವಾರ್ಥವಿರಲಿಲ್ಲ. ಮಲಬಾರ್ ಪ್ರದೇಶದಲ್ಲಿ ಟಿಪ್ಪು ಇಸ್ಲಾಂ ಧರ್ಮಕ್ಕೆ ಬಲವಂತವಾಗಿ ಮತಾಂತರಿಸಿದ ಎಂಬ ವಾದಗಳನ್ನು ಮುಂದಿಟ್ಟು ಅನ್ಯಮತ ದ್ವೇಷಿ, ಸ್ವಧರ್ಮಿ, ಹಿಂದೂ ವಿರೋಧಿ ಎಂಬ ವಿರೋಧಾ ಭಾಸದ ಬರವಣಿಗೆಗಳು ಹುಟ್ಟಿಕೊಂಡವು. ಆದರೆ ಟಿಪ್ಪು ಇಂಥ ಕಠಿಣ ನಿರ್ಧಾರ ತೆಗೆದುಕೊಳ್ಳಲು ಇದ್ದ ಪ್ರಮುಖ ಕಾರಣವನ್ನು ಗೌಣವಾಗಿಸಿ ಮತಾಂಧತೆಯ ಅಂಶಕ್ಕೆ ಒತ್ತು ನೀಡುವ ಪ್ರಯತ್ನ ವಸಾಹತುಶಾಹಿ ಚರಿತ್ರೆಕಾರರು ಮತ್ತು ರಾಷ್ಟ್ರೀಯವಾದಿ ಚರಿತ್ರೆಕಾರರಿಂದ ನಡೆದಿದೆ. ಪ್ರಗತಿಪರ ಚಿಂತಕರು, ಸಾಹಿತಿಗಳು, ಸೆಕ್ಯೂಲರ್ ಚರಿತ್ರೆಕಾರರು ಟಿಪ್ಪುವಿನ ನಿಜಸ್ವರೂಪ ಅರಿಯುವ ಪ್ರಯತ್ನ ನಡೆಸಿದರು.

೨.೧. ವಸಾಹತುಶಾಹಿಗಳು

ಬ್ರಿಟಿಷ್ ವಸಾಹತು ಚರಿತ್ರೆಕಾರರು ಟಿಪ್ಪುವನ್ನು ಕ್ರೂರಿ, ಮತಾಂಧ, ದೇಶ ದ್ರೋಹಿ ಎಂಬಂತೆ ತಮ್ಮ ಬರವಣಿಗೆಗಳಲ್ಲಿ ಚಿತ್ರಿಸಿದ್ದಾರೆ. ಇದಕ್ಕೆ ಕಾರಣ ಟಿಪ್ಪು ಬ್ರಿಟಿಷರ ವಸಾಹತುಶಾಹಿ ಪ್ರಭುತ್ವ ಸ್ಥಾಪನೆಗೆ ಭಾರತದಲ್ಲಿ ಕಡಿವಾಣ ಹಾಕಲು ಪ್ರಯತ್ನಿಸಿದ್ದು. ಡಾಡ್‌ವೆಲ್-ಕ್ಯೇಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ ಕೃತಿಯಲ್ಲಿ ಟಿಪ್ಪು ಕುರಿತು; ಅವನು ಕ್ರೂರ ಭಾವೋದ್ರೇಕಗಳ ಹಾಗೂ ಗಗನಗಾಮಿ ಮಹಾತ್ವಾಕಾಂಕ್ಷೆಗಳ ವ್ಯಕ್ತಿಯಾಗಿದ್ದ, ತನ್ನ ಅಧಿಕಾರ ಬಲದ ಬಗೆಗೆ ತನ್ನದೇ ಆದ ಅಂದಾಜುಗಳಿಗೆ ಅವನ ಸಾಮರ್ಥ್ಯಗಳು ಸರಿದೊರೆಯಾಗಿರಲಿಲ್ಲ. ಅವನು ದೃಢನಂಬಿಕೆಯ ಮುಸಲ್ಮಾನನಾಗಿ ಹಿಂದೂಗಳ ಜನಸಮುದಾಯಗಳ ಮೇಲೆ ಆಳ್ವಿಕೆ ನಡೆಸಿದ. ಅವರ ಸಾರ್ವಭೌಮರನ್ನು ಹೈದರಾಲಿ ಅಧಿಕಾರ ವಂಚಿತರನ್ನಾಗಿಸಿದ. ಅವರನ್ನು ಕ್ರೂರವಾಗಿ ಹಿಂಸಿಸಿದ್ದ. ಮೈಸೂರಿನ ಸುತ್ತಮುತ್ತಲಿನ ಪ್ರದೇಶದ ಜನರು ಅವನ ವಿಷಯದಲ್ಲಿ ಅಸಹ್ಯಪಟ್ಟುಕೊಳ್ಳುತ್ತಿದ್ದರು. ಅವನ ರಾಜ್ಯದಲ್ಲಿ ಬ್ರಿಟಿಷರು ಸಂಮೃದ್ಧಿಯ ಲಕ್ಷಣಗಳನ್ನು ಕಂಡಿದ್ದರಾದರೂ ಅವು ಖಂಡಿತವಾಗಿಯೂ ಅವನ ಪ್ರೇರಣೆಯ ಫಲವಾಗಿ ಅದಂಥವೇನೂ ಆಗಿರಲಿಲ್ಲ. ಅವನ ತಂದೆ ಬುದ್ಧಿವಂತನೂ, ಸಹಿಷ್ಣತೆ ಗುಣವುಳ್ಳವನೂ ಆಗಿದ್ದ ಇವನ ಸ್ವಭಾವ ಅವನದ್ದಕ್ಕೆ ತದ್ವಿರುದ್ಧವಾಗಿತ್ತು.[೯]

ಕರ್ನಲ್ ಮಾರ್ಕ್‌ವಿಲ್ಕ್ಸ್ ಕೂಡ ಟಿಪ್ಪುವನ್ನು ಮತದ್ವೇಷಿ ಎಂಬ ದೃಷ್ಟಿಕೋನದಿಂದಲೇ ತನ್ನ ಬರವಣಿಗೆಯಲ್ಲಿ ಚಿತ್ರಿಸಿದ್ದಾನೆ. ಕರಾಳನೂ, ಅಸಹಿಷ್ಣುವೂ ಆದ ಧರ್ಮಾಂಧತೆ, ನಿಜವಾದ ಆಸ್ತಿಕರನ್ನು ಹೊರತುಪಡಿಸಿ ಉಳಿದವರೆಲ್ಲರನ್ನು ಟಿಪ್ಪುವಿನ ಆಯ್ಕೆಯಿಂದ ಹೊರಗುಳಿಸಿತು. ಮಿತಿಯೇ ಇಲ್ಲದ ಹಿಂಸಾಚಾರ ಅವನ ಆಳ್ವಿಕೆಯ ಬಗೆಗಿನ ಜಿಗುಪ್ಸೆಯಲ್ಲಿ ಅವನ ಪ್ರಾಂತದಲ್ಲಿನ ಎಲ್ಲ ಹಿಂದೂಗಳನ್ನು ಒಂದುಗೂಡಿಸಿತು. ಹಿಂದೂಗಳು ಎಷ್ಟೇ ಪ್ರತಿಭಾವಂತರಾದರೂ ಅವನ ಕೃಪೆಗೆ ಅದು ರಹದಾರಿಯಾಗುತ್ತಿರಲಿಲ್ಲ; ಮುಸಲ್ಮಾನರು ಯಾವುದೇ ಅಪರಾಧವೆಸಗಿದರೂ ಅವನ ಅವಕೃಪೆಗೆ, ಅಸಂತೋಷಗಳಿಗೆ ಪಾತ್ರರಾಗುತ್ತಿರಲಿಲ್ಲ. ಹೈದರನಲ್ಲಿ ಏನೇ ಅರೆಕೊರೆಗಳಿದ್ದರೂ ಯಾವುದೇ ಧರ್ಮದ ಅನುಯಾಯಿ ಆದರೂ ಅವರನ್ನು ಸಹಿಷ್ಣುತೆಯ ಒಂದು ಮಾದರಿಯನ್ನಾಗಿ ಪರಿಗಣಿಸಬಹುದಾಗಿತ್ತು. ಚರಿತ್ರೆಯಲ್ಲಿ ಹಿಂಸಾಚಾರ ಮಾತ್ರವೇ ಉಳಿದುಕೊಂಡಿದ್ದಂಥ ಅವಧಿಯಲ್ಲಿ ಟಿಪ್ಪು ಅದರ ಅತ್ಯಂತ ಘೋರ ಸ್ವರೂಪ ಪುನರುಜ್ಜೀವನಗೊಳ್ಳುವಂತೆ ಮಾಡಿದ. ಉತ್ತಮ ಭಾವನೆ ಬೀಡು ಬಿಟ್ಟಿದಂಥ ಸುದೀರ್ಘ ಅವಧಿ ನಂತರದಲ್ಲಿ ಕಾಣಿಸಿಕೊಂಡು, ಕತ್ತಿಯ ಅಲುಗಿನ ಆಧಾರದ ಮೇಲೆ ಧರ್ಮಪ್ರಸಾರ ಮಾಡಿದ ಕೊನೆಯ ಮುಸ್ಲಿಮ್ ಅವನಾಗಿದ್ದ.[೧೦]

ಲೆವಿನ್-ಬಿ ಬೌರಿಂಗ್ 'ಹೈದರಾಲಿ ಅಂಡ್ ಟಿಪ್ಪುಸುಲ್ತಾನ್' ಎಂಬ ಪುಸ್ತಕದಲ್ಲಿ ಟಿಪ್ಪು ಸ್ವಭಾವ ಕುರಿತು ವಿವರಿಸಿದ್ದಾನೆ. ಧಾರ್ಮಿಕ ಅಂದಾಭಿಮಾನ, ಅಂತರಾಳದ ಕ್ರೌರ್ಯ ಮತ್ತು

ನಿರಂಕುಶ ಪ್ರಭುತ್ವ ಇವುಗಳ ಒತ್ತಡಕೊಳಗಾಗಿ ತನ್ನ ಉಜ್ವಲ ಉತ್ಸಾಹ ಮತ್ತು ಸೇಡಿನ ಬಾವನೆಗಳಿಗಾಗಿ ಸಾವಿರಾರು ಜೀವಗಳನ್ನು ಬಲಿಕೊಡುವ ಬಗ್ಗೆ ಅಷ್ಟಾಗಿ ಯೋಚಿಸದೆ ಹೋದ ದೊರೆಯ ಸ್ವಭಾವ ತೋರಿಸುವ ಸಲುವಾಗಿ ಸಾಕಷ್ಟು ಮಾತುಗಳನ್ನು ಹೇಳಿಯಾಗಿದೆ. ಈ ವಿಷಯದಲ್ಲಿ ಅವನು ಘಜ್ನಿ ಮಹಮದ್, ನಾದಿರ್ ಷಾ ಮತ್ತು ಲೂದಿ ಎಂಬ ಉಪನಾಮ ಹೊಂದಿದ್ದ. ದೆಹಲಿಯ ಪಠಾಣ ಚಕ್ರವರ್ತಿ ಅಲ್ಲಾ-ಉದ್-ದೀನ್ ಅವರಿಗೆ ಪ್ರತಿಸ್ಪರ್ಧಿಯೇ ಆಗಿದ್ದ. ಇವರೆಲ್ಲ ತಮ್ಮ ಅಪ್ಪಣೆಯಿಂದ ನಡೆಸಲಾದ ನಾಸ್ತಿಕರ ಕಗ್ಗೊಲೆಯ ಸಂಖ್ಯೆಯಿಂದಾಗಿ ಪ್ರಸಿದ್ಧರಾಗಿದ್ದಾರೆ. ಅವನು ನಡೆಸಿದ ಹಿಂಸಾಚಾರಗಳ ಫಲವಾಗಿ ಕ್ರೌರ್ಯವೇನೇ ಆಗಿರಲಿ ಧರ್ಮಕ್ಕಾಗಿ ಟಿಪ್ಪು ಸುಲ್ತಾನನ ಹೆಸರನ್ನು ಬಹುಕಾಲದಿಂದಲೂ ಗೌರವದಿಂದ ಸ್ಮರಿಸುತ್ತಾ ಇದ್ದಾರೆ. ತಮ್ಮ ಚೀತ್ಕಾರದಿಂದ ಗಗನವನ್ನು ತುಂಬಿರುವಂಥ ಅಪರಾಧಗಳನ್ನೂ ತಾನು ನಂಬಿರುವ ಧರ್ಮವನ್ನು ಪ್ರಸಾರ ಮಾಡುವ ಪ್ರಾಮಾಣಿಕ ಅಭೀಪ್ಸೆಯಿಂದ ಚೋದಿತನಾಗಿ ಆ ವ್ಯಕ್ತಿ ಅಂಥ ಅಪರಾಧಗಳನ್ನು ಎಸಗಿರಬಹುದು ಎಂಬ ಭಾವನೆಯಿಂದ ಅದೆಷ್ಟು ಸುಲಭವಾಗಿ ಕ್ಷಮಿಸಿಬಿಡಲಾಗುತ್ತದೆ ಎಂಬುದಕ್ಕೆ ಇದು ಸಾಕ್ಷ್ಯಾಧಾರವಾಗಿದೆ.[೩೦]

ಟಿಪ್ಪುವಿನ ಬಗೆಗೆ ಬರೆದ ಬ್ರಿಟಿಷ್ ಚರಿತ್ರೆಕಾರರಲ್ಲಿ ಮಾರ್ಕ್ಸ್ ವಿಲ್ಕ್ಸ್ ಮೊದಲನೆಯವನು. ಅದು 'ಹಿಸ್ಟಾರಿಕಲ್ ಸ್ಕೆಚ್ಚಸ್ ಆಫ್ ಸೌತ್ ಇಂಡಿಯಾ ಇನ್ ಆ್ಯನ್ ಅಟೆಮ್ಟ್ ಟು ಟ್ರೇಸ್ ದಿ ಹಿಸ್ಟರಿ ಆಫ್ ಮೈಸೂರ್' ಎಂಬ ಕೃತಿ ಮೂರು ಸಂಪುಟಗಳಲ್ಲಿ ಟಿಪ್ಪುವನ್ನು ಕಟುವಾಗಿ ಟೀಕಿಸಿ ಟಿಪ್ಪು ವಿರೋಧಿ ನಿಲುವನ್ನು ಪ್ರಕಟಿಸಿದೆ. ನಂತರ ಅವನ ಬರಹಗಳೇ ಅನೇಕ ಬರಹ ಗಾರರಿಗೆ ಮಾದರಿಯಾದವು. ತಮ್ಮನ್ನು ವಿರೋಧಿಸಿದವರ ಬಗೆಗಿನ ವಸಾಹತುಶಾಹಿ ಪೂರ್ವಾಗ್ರಹ ಮತ್ತು ಆಕ್ರೋಶಗಳು ಈ ಬರಹಗಳಲ್ಲಿ ಪ್ರತಿಫಲಿಸಿವೆ. ಬಿಟ್ಸನ್, ಬೌರಿಂಗ್ ಬುಕಾನನ್, ಪುಲ್ಲರ್‌ಟನ್, ಮೆಕೆಂಜಿ, ಸ್ಟೀವರ್ಡ್, ಕ್ಯಾಂಪ್‌ಬೆಲ್, ಎಚ್.ಜಿ.ವೇಲ್ಸ್, ಮಾರ್ಟಿನ್ಯೂ, ಗ್ಲಿಗ್, ಹೆಂಡರ್‌ಸನ್, ಬಿ.ಎಲ್. ರೈಸ್, ಮನ್ರೋ, ಸಿ.ಎ.ಎಚ್.ಫಿಲಿಪ್ಸ್, ರಾಬ್ಸನ್ ಮುಂತಾದ ಅನೇಕ ಬ್ರಿಟಿಷ್ ವಸಾಹತುಶಾಹಿ ಬರಹಗಾರರು ಟಿಪ್ಪುವನ್ನು ಮತಾಂಧ, ಮೂಲಭೂತವಾದಿ ಕ್ರೂರಿಯೆಂದು ಬಣ್ಣಿಸಿದ್ದಾರೆ. ಡಿರೋಮ್, ಜಾನ್‌ಮುಲ್ಕನ್, ಮೂರ್, ಗುಡಾಲ್, ಕಿರ್ಕ್‌ಪ್ಯಾಟ್ರಿಕ್ ಇವರುಗಳು ಸಾಮಾನ್ಯವಾಗಿ ಟಿಪ್ಪು ಮತ್ತು ಭಾರತದ ವಿರೋಧಿ ಧೋರಣೆ ತಳೆದರು ಆತನನ್ನು ಸಮರ್ಥ ಆಡಳಿತಗಾರ ಎಂಬ ನಿಲುವು ವ್ಯಕ್ತಪಡಿಸಿದ್ದಾರೆ. ಆದರೆ ಹೆಚ್ಚು ವಸಾಹತುಶಾಹಿ ಬರವಣಿಗೆಗಳು ಟಿಪ್ಪುವಿನ ಧೋರಣೆಗಳನ್ನು ಖಂಡನಾರ್ಹ ಎಂಬ ನಿಲುವು ಹೊಂದಿವೆ.

ಕರ್ನಲ್ ಮಾರ್ಕ್‌ವಿಲ್ಕ್ಸ್ ಮತ್ತು ಹುಸೇನ್ ಅಲಿ ಕಿರ್ಮಾನಿ ಅವರ ಗ್ರಂಥಗಳ ಉದ್ಧರಣಗಳನ್ನು ಕೊಡದೆ ಹೈದರ್ ಮತ್ತು ಟಿಪ್ಪೂ ಅವರ ಬಗ್ಗೆ ಬರೆಯುವುದು ಕಷ್ಟ.

ಅವರಿಬ್ಬರೂ ಟಿಪ್ಪುವಿನ ಸಮಕಾಲೀನರಾಗಿದ್ದು ವ್ಯಕ್ತಿಗಳ ಮತ್ತು ಘಟನೆಗಳ ವೈಯಕ್ತಿಕ ಅರಿವಿನ ಆಧಾರದ ಮೇಲೆ ತಮ್ಮ ಕೃತಿಗಳನ್ನು ರಚಿಸಿದ್ದಾರೆ. ಹಯವದನರಾವ್ ಹೇಳಿರುವಂತೆ "ಮೈಸೂರಿಗೆ ಸಂಬಂಧಿಸಿದ ಯಾವ ಐತಿಹಾಸಿಕ ಕೃತಿಯೂ ವಿಲ್ಕ್ಸ್‌ನ ಮಹತ್ತರವಾದ ಕೃತಿಗೆ ತಾನು ಬಹುವಾಗಿ ಋಣಿಯಾಗಿದ್ದೇನೆಂದು ಹೇಳಿಕೊಂಡಿದ್ದಾರೆ.

ಡೆನ್ನಿ ಫಾರ್ರೆಸ್ಟ್ ಅವರ 'ಟೈಗರ್ ಆಫ್ ಮೈಸೂರ್(೧೯೭೦) ಬ್ರಿಟಿಷ್ ಲೇಖಕ ಬರೆದಿರುವ ಟಿಪ್ಪುವಿನ ಜೀವನ ಚರಿತ್ರೆಯಲ್ಲಿ ಬ್ರಿಟಿಷರ ನಿಷ್ಪಕ್ಷಪಾತ ದೃಷ್ಟಿ ಇದರಲ್ಲಿ ಎದ್ದು ಕಾಣುತ್ತದೆ. ಆದರೆ ಬ್ರಿಟಿಷ್ ಸೇನಾನಿಗಳನ್ನು ಮತ್ತು ಯೋಧರುಗಳನ್ನು ಕುರಿತ ವಿವರಗಳು ಸ್ವದೇಶದ ಓದುಗರಿಗೆ ಪ್ರಿಯವಾದಂತೆ ಭಾರತೀಯ ಓದುಗರಿಗೆ ಪ್ರಿಯವಾಗಲಾರವು. ಎಡ್ವರ್ಡ್‌ಮೂರ್ ಟಿಪ್ಪು ಬಗೆಗೆ ಚಿತ್ರಿಸುತ್ತ ಅಪರಿಚಿತನೊಬ್ಬನು ಈ ರಾಜ್ಯದಲ್ಲಿ ಹೋಗುತ್ತಿರುವಾಗ ಒಳ್ಳೆಯ ಕೃಷಿಯನ್ನೂ, ಸದಾ ಚಟುವಟಿಕೆಗಳಿಂದ ಕೂಡಿದ ನಿವಾಸಿಗಳಿಂದ ತುಂಬಿರುವುದನ್ನು, ಏಳುತ್ತಿರುವ ಹೊಸ ನಗರಗಳನ್ನೂ, ವಾಣಿಜ್ಯ ವಿಸ್ತರಣವನ್ನೂ, ಬೆಳೆಯುತ್ತಿರುವ ನಗರಗಳನ್ನೂ ಕಂಡಾಗ ಅವನು ಸ್ವಾಭಾವಿಕವಾಗಿ ಪ್ರಜೆಗಳ ಮನಸ್ಸಿಗೆ ಹಿತಕರವಾದ ಒಂದು ಸರಕಾರದಲ್ಲಿದ್ದೇವೆಂಬ ತೀರ್ಮಾನಕ್ಕೆ ಬರುತ್ತಾನೆ. ಅವನ ಸರ್ಕಾರದಲ್ಲಿನ ನಮ್ಮ ಗೌರವವನ್ನು ಹೀಗೆ ಕೊನೆಗೊಳಿಸುತ್ತೇವೆಂದು ಎಡ್ವರ್ಡ್‌ಮೂರ್ ಬಣ್ಣಿಸಿದ್ದಾನೆ.

೨.೨. ರಾಷ್ಟ್ರೀಯವಾದಿಗಳು

ಟಿಪ್ಪು ಕುರಿತಾದ ರಾಷ್ಟ್ರೀಯವಾದಿ ಬರಹಗಾರರು ಪರ-ವಿರೋಧ ಹಾಗೂ ವಾಸ್ತವ ಅಂಶಗಳ ನೆಲೆಗಟ್ಟಿನಲ್ಲಿ ಚಿತ್ರಿಸಿದ್ದಾರೆ. ಕೆಲವು ರಾಷ್ಟ್ರೀಯವಾದಿಗಳು ಬ್ರಿಟಿಷ್ ಬರಹಗಾರರ ಧೋರಣೆಗಳನ್ನೆ ನಿಜಸ್ವರೂಪ ಎಂದು ನಂಬಿ ತಮ್ಮ ಬರವಣಿಗೆಗಳಲ್ಲಿ ಅದೇ ಅಂಶಗಳನ್ನು ಪುನರಾವರ್ತಿಸಿದ್ದಾರೆ. ಸಿ.ಹಯವದನರಾವ್ ಅವರು 'ಹಿಸ್ಟರಿ ಆಫ್ ಮೈಸೂರು ಎಂಬ ಮೂರು ಸಂಪುಟಗಳನ್ನು ರಚಿಸಿದ್ದಾರೆ. ಇವು ೧೯೪೬ರಲ್ಲಿ ಪ್ರಕಟಗೊಂಡಿವೆ. ಹಯವದನರಾವ್ ಟಿಪ್ಪು ಬಗೆಗೆ ಈ ಕೃತಿಯಲ್ಲಿ ಸಮಗ್ರ ನಿರೂಪಣೆ ಮಾಡಿದ್ದಾರೆ. ತನಗೆ ಶರಣು ಬಂದವರೊಡನೆ ಏರ್ಪಡಿಸಿಕೊಂಡಿದ್ದ ಕರಾರು ನಾಮೆಗಳ ಮತ್ತು ಗಂಭೀರವಾದ ಸಂದಿಯ ಷರತ್ತುಗಳನ್ನು ಟಿಪ್ಪು ವ್ಯವಸ್ಥಿತವಾಗಿ ಉಲ್ಲಂಘಿಸುತ್ತ ಬಂದಿದ್ದು ಉನ್ನತ ರಾಜಕೀಯ ಮತ್ತು ನೈತಿಕ ಸಹಜ ಪ್ರವೃತ್ತಿಗಳಿಗೆ ಅಸಹ್ಯವುಂಟು ಮಾಡುವ ವಿಚಾರವೇ ಆಗಿದೆ. ಅವನ ಧಾರ್ಮಿಕ ದುರಾಭಿಮಾನಕ್ಕೆ ಸಾಕ್ಷಿಯಾಗಿ ಮೈಸೂರು ಮತ್ತು ಇತರ ಪ್ರದೇಶಗಳಲ್ಲಿ ವಿಶೇಷವಾಗಿ ಮಲಬಾರ್‌ನಲ್ಲಿ ಅದರಲ್ಲಿಯೂ ಕೊಡಗಿನಲ್ಲಿ ಅವನು ಎಸಗಿದ ಅತ್ಯಾಚಾರಗಳು ಎಂದಿಗೂ ನಿಂದ್ಯವಾಗಿದೆ. ಇಷ್ಟರ ಮಟ್ಟಿನ ಛೀಮಾರಿಗಿಂತ ಹೆಚ್ಚಿನ ಛೀಮಾರಿ ಅಗತ್ಯವಾಗಿರುವಂಥ ಬೇರಾವುದೇ ಮುಖ ಅವನ ಸ್ವಭಾವದಲ್ಲಿ

ಇಲ್ಲ. ಅವನ ಧರ್ಮಾಂಧತೆ ಎಷ್ಟು ತೀವ್ರವಾಗಿತ್ತೆಂದರೆ ಅದು ಧಾರ್ಮಿಕ ಮತ್ತು ಸಾಮಾಜಿಕ ವಿಚಾರಗಳಲ್ಲಿ ಇತರ ಭಾವನೆಗಳ ಬಗೆಗೆ ಸಹಿಷ್ಣತೆಯನ್ನು ತೋರುವ ಎಲ್ಲ ಆಲೋಚನೆಗಳನ್ನು ಹೊರಗಿಟ್ಟು ಬಿಟ್ಟಿತು. ಅವನು ಶೃಂಗೇರಿ ಗುರುಗಳ ಜೊತೆಯಲ್ಲಿ ಪತ್ರವ್ಯವಹಾರ ಮುಂದುವರೆಸಿಕೊಂಡು ಬಂದಿದ್ದ. ಅದು ಅವರಿಗೆ ತಮ್ಮ ಧಾರ್ಮಿಕ ಚಟುವಟಿಕೆಗಳನ್ನು ಕಿರುಕುಳವಿಲ್ಲದೆ ಮುಕ್ತವಾಗಿ ನಡೆಸಿಕೊಂಡು ಹೋಗಲು ಅವಕಾಶ ಮಾಡಿಕೊಡುವುದಕ್ಕಿಂತಲೂ ಹೆಚ್ಚಾಗಿ ಅದರಿಂದ ತನಗೆ ಲಾಭವಿರಬಹುದೆಂದು ಅವನು ನಿರೀಕ್ಷಿಸಿದ್ದ. ರಾಜಕೀಯ ಲಾಭಗಳನ್ನೆ ದೃಷ್ಟಿಯಲ್ಲಿರಿಸಿಕೊಂಡಿದ್ದ ಯಾವುದೇ ಕಾಲದಲ್ಲಿ ಇಂಥ ಇನ್ನೊಂದು ನಿದರ್ಶನ ಇತಿಹಾಸದಲ್ಲಿ ದಾಖಲಾಗಿಲ್ಲ.

ರಾಜ್ಯದ ಯಾವ ಕಾನೂನುಬದ್ಧ ಪ್ರಭುಗಳಿಗೆ ತಾವು ವಿಧೇಯ ಸೇವಕರೆಂದು ಹೇಳಿಕೊಳ್ಳುವ ನಾಟಕವನ್ನು ಅವನು ಮತ್ತು ಅವನ ತಂದೆ ಆಡುತ್ತ ಬಂದಿದ್ದರೊ ಆ ರಾಜನ ವಿಷಯದಲ್ಲಿ ಟಿಪ್ಪು ನಡೆದುಕೊಂಡ ರೀತಿಯೂ ಅಷ್ಟೇ ಕ್ರೂರವಾದುದು. ಅರಮನೆಯನ್ನು ಅವನು ಮತ್ತೆ ಮತ್ತೆ ಕೊಳ್ಳೆ ಹೊಡೆದದ್ದು, ರಾಜಮನೆತನದ ಸದಸ್ಯರನ್ನು ಅಪಮಾನಗಳಿಗೆ ಗುರಿಯಾಗಿಸಿದ್ದು ಇದು ಅವನಲ್ಲಿದ್ದ ನೀತಿಯ ಎಳೆ ದುರ್ಬಲಗೊಳ್ಳುತ್ತ ಹೋಗಿತ್ತು ಎಂಬುದನ್ನು ಸೂಚಿಸುತ್ತದೆ. ಯಾವ ಗದ್ದುಗೆ ಮತ್ತು ಸ್ಥಾನಮಾನಗಳನ್ನು ತಾನೇ ಪಡೆದುಕೊಳ್ಳಲು ಅವನು ಪ್ರಯತ್ನಿಸುತ್ತಿದ್ದನೋ ಅದರ ಬಗೆಗಿನ ಅವನ ಈ ವರ್ತನೆ ಅದಕ್ಕೆ ವಗ್ಗುವಂಥದಾಗಿರಲಿಲ್ಲ. ಈ ಒಂದು ಅಪವಾದ ಪಡೆದುಕೊಂಡ ಕುಖ್ಯಾತಿ ಜನರ ಮನಸ್ಸಿನ ಮೇಲೆ ಎಂಥ ಪ್ರಭಾವ ಬೀರಿತೆಂದರೆ ಅವನು ಹೊರಿಸಿದ್ದ ಭಯಂಕರ ನೊಗವನ್ನು ಕಿತ್ತೊಗೆಯಲು ಜನರು ಮತ್ತೆ ಅನೇಕ ಪ್ರಯತ್ನಗಳನ್ನು ನಡೆಸಿದರು ಎಂಬುದನ್ನು ವಿಹಿತ ರೀತಿಯಲ್ಲಿ ಒಪ್ಪಿಕೊಳ್ಳಬೇಕಾಗಿದೆ. ಟಿಪ್ಪುವಿನ ಸಾವಿನ ಬಳಿಕ ಅವನಿಗೆ ಪ್ರಿಯವಾಗಿದ್ದ ಆ ಕಾರ್ಯದ ಸೌಧ ಸಂಪೂರ್ಣವಾಗಿ ಕುಸಿದುಬಿತ್ತು. ತನ್ನ ಸಹ ಧರ್ಮಿಯರ ಮೇಲಾಗಲಿ, ತಾನು ಸತತವಾಗಿ ಕ್ರೌರ್ಯಕ್ಕೆ ಗುರಿಯಾಗಿಸಿದ್ದ ಹಿಂದೂಗಳ ಮೇಲಾಗಲಿ ಅವನಿಗೆ ಯಾವುದೇ ಹಿಡಿತ ಇರಲಿಲ್ಲವೆಂಬುದನ್ನು ಈ ಪ್ರಸಂಗ ತೋರಿಸುತ್ತದೆ. ತನ್ನ ಪ್ರಜೆಗಳ ಮನಸ್ಸಿನಲ್ಲಿ ಜಯದ ಬೀಜವನ್ನು ಬಿತ್ತುವುದರ ಮೂಲಕ ಟಿಪ್ಪು ರಾಜ್ಯಾಧಿಕಾರವನ್ನು ತನ್ನ ಕೈಯಲ್ಲಿ ಹಿಡಿದುಕೊಂಡಿದ್ದ. ತನ್ನ ಆಡಳಿತ ಕ್ರೌರ್ಯದಿಂದ ಅವರು ತಲೆಬಾಗಿಕೊಂಡಿರುವಂತೆ ಮಾಡಿದ್ದ. ತನ್ನ ಪ್ರಜೆಗಳ ಬಗೆಗೆ ಸೈನಿಕ ಜವಬ್ದಾರಿಯ ಎಳೆಯಿಂದ ಬಂಧಿತನಾಗಿರುವ ಅನುಭವ ಅವನಿಗೆ ಆಗಿರಲಿಲ್ಲ. ತಾವು ಅವನಿಗೆ ವಿಧೇಯರಾಗಿರಬೇಕು ಎಂಬ ಭಾವನೆ ಪ್ರಜೆಗಳ ಮನಸ್ಸಿನಲ್ಲಿ ಮೂಡಿರಲಿಲ್ಲ. ಅವನ ಮತ್ತು ಮೈಸೂರು ಜನಗಳ ನಡುವೆ ರಾಜ ಮತ್ತು ಪ್ರಜೆಗಳ ನಡುವಣ ಹಾರ್ದಿಕ ಸಂಬಂಧ ಇರಲೇ ಇಲ್ಲ. ಯಾವ ಪ್ರಜೆಗಳನ್ನು ಮತ್ತೆ ಮತ್ತೆ ಯುದ್ಧಗಳಲ್ಲಿ ಮತ್ತು ಅವುಗಳಿಂದಾಗುವ ಅಸಹನೀಯ ಕ್ಲೇಶ ಸಂಕಟಗಳಲ್ಲಿ ಸಿಲುಕಿಸಿ ಕೊಂಡಿದ್ದನೋ;

ಮನಬಂದಂತೆ ಯಾರನ್ನು ಬಿಡಿಬಿಡಿಯಾಗಿ ಕೊಳ್ಳೆ ಹೊಡೆದನೋ; ಅದುವರೆಗೆ ಆ ನಾಡಿನಲ್ಲಿ ಯಾರೂ ಕಂಡು ಕೇಳಿರದಂತ ಅನ್ಯಾಯ–ಅಪಮಾನಗಳಿಗೆ ಕಾರಣವಾಗಿ ಅಥವಾ ಅನುಚಿತವಾಗಿ ಯಾರನ್ನು ಗುರಿಪಡಿಸಿದ್ದನೋ ಆ ಪ್ರಜೆಗಳ ವಿಷಯದಲ್ಲಿ ತಾನು ನಿರ್ವಹಿಸಬೇಕಾಗಿರುವ ಜವಾಬ್ದಾರಿಗಳೂ ಇವೆ ಎಂದು ಟಿಪ್ಪು ಯೋಚಿಸಲೇ ಇಲ್ಲ ಎಂದೂ ಹಯವದನರಾವ್ ವಿಶ್ಲೇಷಿಸಿದ್ದಾರೆ.

ಟಿಪ್ಪುವಿನ ಸ್ವಭಾವದಲ್ಲಿ ಇದ್ದ ಇನ್ನೊಂದು ದೌರ್ಬಲ್ಯ ಆಡಳಿತಾತ್ಮಕ ವಿಚಾರಗಳಲ್ಲಿ ಸ್ಥಿರವಾದಂಥ ನಿಲುವೇ ಇಲ್ಲದೇ ಹೋಗಿದುದು ತನ್ನ ಸೇನಾಪತಿಗಳ ವಿಷಯದಲ್ಲಿ ಅಪನಂಬಿಕೆ. ಮಾನವ ಸ್ವಭಾವದ ಬಗೆಗೆ ಅರಿವು ಇಲ್ಲದುದು ಅವನ ಅಪರಿಪೂರ್ಣ ರಾಜಕೀಯ ವಿವೇಕ ಇವು ಅವನ ಸ್ವಭಾವದಲಿದ್ದ ಮೂಲಭೂತ ದೋಷಗಳು. ಸನ್ನಿವೇಶ ಮೂಲಾಂಶಗಳನ್ನು ಗ್ರಹಿಸುವಲ್ಲಿ ಅವನು ಅಸಮರ್ಥ. ಅವನ ಒಣ ಹೆಮ್ಮೆ ಬಡಾಯಿ ಕೊಚ್ಚಿಕೊಳ್ಳುವ ಪ್ರವೃತ್ತಿ, ಸಂದಿಗ್ಧ ಸನ್ನಿವೇಶದಲ್ಲಿ ಎದುರಿಸಬೇಕಾದ ಕ್ಷಣಗಳಲ್ಲಿ ಅವನು ತೋರುತ್ತಿದ್ದ ಅಸಿದ್ಧತೆ ಅಥವಾ ಅಂಜುಕುಳಿತ್ವ ಇವು ಟಿಪ್ಪು ಸ್ವಭಾವದ ವೈಲಕ್ಷಣಗಳಾಗಿದ್ದವು. ಇಷ್ಟಾಗಿಯೂ ಇವುಗಳಲೆಲ್ಲಾ ಹೀನಾಯವಾಗಿದ್ದ ದೋಷವೆಂದರೆ ಸತ್ಯದ ಬಗೆಗೆ ಉಪೇಕ್ಷೆ. ಬ್ರಿಟಿಷರ ವಿಷಯದಲ್ಲಿ ಅವನು ಅನುಸರಿಸಿದ ವಂಚನೆ ರೀತಿ ನರಗುಂದ ವಿಷಯದಲ್ಲಿ ನಡೆದುಕೊಂಡ ಬಗೆ ಅವನ ಸ್ವಭಾವದ ವೈಲಕ್ಷಣಗಳನ್ನು ನಿರ್ದೇಶಿಸುತ್ತವೆ. ಮಿತ್ರ ಪಕ್ಷವಾಗಿ ಅಪ್ರಮಾಣಿಕ ನೆರೆಯವನಾಗಿ ಅವಿಶ್ವಾಸಾರ್ಹ ಹಾಗೂ ಯುದ್ಧದಲ್ಲಿ ನಂಬಲಾಗದವನು ಎಂಬ ಮುದ್ರೆಯನ್ನು ಅವನ ವ್ಯಕ್ತಿತ್ವದ ಮೇಲೆ ಒತ್ತಿ ಬಿಟ್ಟಿತು.

ಟಿಪ್ಪುವಿನ ಸ್ವಭಾವದ 'ಉದ್ಧಾರಕ ಲಕ್ಷಣಗಳಲ್ಲಿ' ದಣಿವರಿಯದ ಚೈತನ್ಯ ಒಂದಾಗಿದೆ ಎಂಬುದನ್ನು ಹಯವದನರಾವ್ ಎತ್ತಿ ಹಿಡಿದಿದ್ದಾರೆ. ೧೭೯೨ರ ಅಪಜಯಗಳಿಗೆ ಮುನ್ನ ಅವನು ಅವಿಶ್ರಾಂತವಾಗಿ ಒಂದು ವಿಜಯದಿಂದ ಮತ್ತೊಂದು ವಿಜಯಕ್ಕೆ ಒಂದು ರಣರಂಗದಿಂದ ಇನ್ನೊಂದು ರಣರಂಗಕ್ಕೆ ಮುನ್ನಡೆಯುವಂತೆ ಮಾಡುತ್ತಿತ್ತು. ರಾವ್ ಅವರ ಪ್ರಕಾರ ಟಿಪ್ಪು ಸ್ವಭಾವದ ಇನ್ನೊಂದು ಇತ್ಯಾತ್ಮಕ ಲಕ್ಷಣವೆಂದರೆ ತನ್ನ ತಾಯಿ ಬಗ್ಗೆ ಇರಿಸಿಕೊಂಡಿದ್ದ ಗೌರವ, ಆಕೆಯ ಸಲಹೆಯನ್ನು ಅಗೌರವಿಸುತ್ತಿರಲಿಲ್ಲ. ಇಸ್ಲಾಮ್ ಬಗೆಗೆ ಅವನ ಹಠೋತ್ಸಾಹವನ್ನು ತಾಯಿ ಬದಲಾಯಿಸಲಾರದೆ ಹೋದಳು. ಇದಕ್ಕೆ ಅವನು ಬಾರಿ ಬೆಲೆ ತೆರಬೇಕಾಯಿತು.[೨]

ಟಿಪ್ಪು ಸಮಕಾಲೀನ ಚರಿತ್ರೆಕಾರ ಹುಸ್ಸೇನ್ ಅಲಿಖಾನ್ ಕಿರ್ಮಾನಿ ಬರೆಯುತ್ತ ಟಿಪ್ಪು ಮಾತುಕತೆ ಮತ್ತು ರೀತಿ ನೀತಿಗಳು ಸಂತೋಷಕರವಾಗಿದ್ದವು. ವಿದ್ವಾಂಸರ ಸ್ವಭಾವವನ್ನು ಅಳೆದು ನೋಡುವಲ್ಲಿ ತುಂಬಾ ವಿಚಕ್ಷಣವಾಗಿದ್ದ ಮುಸಲ್ಮಾನರ ಸಮುದಾಯಕ್ಕೆ ಪ್ರೋತ್ಸಾಹ

ಮತ್ತು ತಿಳುವಳಿಕೆ ನೀಡುವ ಸಲುವಾಗಿ ಅವನು ತುಂಬಾ ಶ್ರದ್ಧೆಯಿಂದ ದುಡಿದ ಇತರ ಧರ್ಮಗಳಿಗೆ ಸೇರಿದ ವ್ಯಕ್ತಿಗಳ ವಿಷಯದಲ್ಲಿ ಅವನಿಗೆ ಪ್ರೀತಿ ಇರಲಿಲ್ಲ ಅಥವಾ ಅಸಹ್ಯ ಭಾವನೆ ಇತ್ತು. ಇಸ್ಲಾಮ್ ಧರ್ಮಕ್ಕೆ ಹಾಗೂ ಸುನ್ನಿ ಸಂಪ್ರದಾಯದ ಧಾರ್ಮಿಕ ಸೂತ್ರಗಳಿಗೆ ಅಥವಾ ಕಟ್ಟುಪಾಡುಗಳಿಗೆ ಪ್ರೋತ್ಸಾಹ ಮತ್ತು ರಕ್ಷಣೆ ನೀಡುವುದೇ ಅವನ ಮುಖ್ಯ ಧ್ಯೇಯವಾಗಿತ್ತು. ನಿಷೇಧಿತ ಆಚರಣೆಗಳಿಂದ ಸ್ವತಃ ಅವನು ಹಿಂದೆ ಸರಿಯುತ್ತಿದ್ದುದು ಮಾತ್ರವಲ್ಲ ಅಂಥ ಕಾರ್ಯಗಳನ್ನು ಎಸಗದಂತೆ ತನ್ನ ಸೇವಕರಿಗೆ ಅವನು ಕಟ್ಟಪ್ಪಣೆ ಮಾಡಿದ.[೩೩] ಕಿರ್ಮಾನಿ ಅವರ ನಿಶಾನ್–ಇ–ಹೈದರಿ ಕೃತಿಯನ್ನು ಕರ್ನಲ್ ಡಬ್ಲ್ಯು ವೇಲ್ಸ್ ಇಂಗ್ಲಿಷ್ ಭಾಷೆಗೆ ಅನುವಾದಿಸಿ "ಹಿಸ್ಟರಿ ಆಫ್ ಹೈದರ್‌ನಾಯ್ಕ್ ಮತ್ತು ದಿ ಹಿಸ್ಟರಿ ಆಫ್ ದಿ ರಿಜನ್ ಅಪ್ ಟಿಪ್ಪು ಸುಲ್ತಾನ್ ಎಂಬ ಎರಡು ಸಂಪುಟಗಳಲ್ಲಿ ಹೊರತಂದಿದ್ದಾರೆ.

ಜವಾಹರಲಾಲ ನೆಹರು ತಮ್ಮ 'ಡಿಸ್ಕವರಿ ಆಫ್ ಇಂಡಿಯಾ ಕೃತಿಯಲ್ಲಿ ಹದಿನೆಂಟನೆಯ ಶತಮಾನದ ಭಾರತದ ಸ್ಥಿತಿಗತಿಗಳನ್ನು ಚಿತ್ರಿಸುತ್ತ ಹೈದರ್–ಟಿಪ್ಪು ಬಗೆಗೆ ತಿಳಿಸಿದ್ದಾರೆ. ಅವರ ಅಭಿಪ್ರಾಯದಂತೆ ಹೈದರ್ ಮತ್ತು ಟಿಪ್ಪು ಇಬ್ಬರೂ ಬ್ರಿಟಿಷರ ವಸಾಹತುಶಾಹಿ ವಿರುದ್ಧ ಹೋರಾಡಿ ಈಸ್ಟ್ ಇಂಡಿಯಾ ಕಂಪನಿ ಸ್ಥಾಪಿಸ ಹೊರಟ ಪ್ರಭುತ್ವವನ್ನು ಸಂಪೂರ್ಣ ನಿರ್ನಾಮ ಮಾಡುವ ಹಂತಕ್ಕೆ ತಲುಪಿ ಬ್ರಿಟಿಷರಿಗೆ ವಿಪರೀತವಾದ ಯಾತನೆ ತಂದೊಡ್ಡಿದರು. ಭಾರತದ ಚರಿತ್ರೆಯಲ್ಲಿ ಹೈದರಾಲಿ ಅಸಮಾನ್ಯ ವ್ಯಕ್ತಿಯಾಗಿ ಸ್ಥಾನ ಅಲಂಕರಿಸುತ್ತಾನೆ. ಅವನು ಒಂದು ರೀತಿಯ ರಾಷ್ಟ್ರೀಯ ಧ್ಯೇಯಗಳೊಂದಿಗೆ ಮುಂದಾಲೋಚನೆ ಹೊಂದಿದ್ದ. ಆ ಕಾಲದ ಒಬ್ಬ ಪ್ರಬುದ್ಧ ರಾಜ. ಅವನ ಕಾಲದಲ್ಲಿ ಭಾರತದ ಇನ್ನುಳಿದ ಭಾಗವನ್ನಾಳಿದ ರಾಜರುಗಳಿಗೆ ಹೋಲಿಸಿದರೆ ಮೈಸೂರು ಬ್ರಿಟಿಷರ ನೌಕಾಪಡೆಯಿಂದ ಬಂದೊದಗಬಹುದಾದ ಬೆದರಿಕೆಯನ್ನು ತಡೆಗಟ್ಟಲು ಸ್ವಂತ ನೌಕಾನೆಲೆಯನ್ನು ಕರಾವಳಿ ತೀರದಲ್ಲಿ ಸ್ಥಾಪಿಸುವ ಪ್ರಾಮುಖ್ಯತೆಯ ಬಗ್ಗೆ ಆಲೋಚಿಸಿದ್ದನು. ಇವನು ಸ್ಥಾಪಿಸಿದ ನೌಕಾದಳದ ಶಕ್ತಿಯನ್ನು ಅವನ ಮಗ ಟಿಪ್ಪು ಮತ್ತಷ್ಟು ವೃದ್ಧಿಸಿದ. ಅವನು ಬ್ರಿಟಿಷರಿಂದ ಒದಗಿಬರುವ ಬೆದರಿಕೆಯ ಸ್ವರೂಪವನ್ನು ರಾಯಬಾರಿಗಳ ಮೂಲಕ ನೆಪೋಲಿಯನ್ ಬೋನಾಪಾರ್ಟೆ ಮತ್ತು ಕಾನ್‌ಸ್ಟಾಂಟಿನೊಪಲ್ ಸುಲ್ತಾನನಿಗೂ ತಲುಪಿಸಿದ.[೩೪]

ತಾರಾಚಂದ್ ೧೯೬೫ರಲ್ಲಿ ಬರೆದ 'ಹಿಸ್ಟರಿ ಆಫ್ ಫ್ರೀಡಮ್ ಮೂವ್‌ಮೆಂಟ್ ಆಫ್ ಇಂಡಿಯಾ' ಕೃತಿಯಲ್ಲಿ ನೆಹರು ಅಭಿಪ್ರಾಯಗಳನ್ನು ಉದಾಹರಿಸುತ್ತ ತನ್ನ ಚಿಂತನೆಗಳನ್ನೂ ಪ್ರತಿಪಾದಿಸಿದ್ದಾರೆ. ಹೈದರ್ ಮತ್ತು ಟಿಪ್ಪು ಸುಲ್ತಾನರು ಕನ್ನಡ ನಾಡಿನ ಉಳುವಿಗಾಗಿ ಹೋರಾಡಿ ತಮ್ಮ ಶಕ್ತಿ ಪ್ರದರ್ಶಿಸಿದರು. ಬ್ರಿಟಿಷರು ಮತ್ತು ಅವರ ಸ್ನೇಹಿತರನ್ನು ಬೇಧಿಸಿದರು. ಅವರೊಂದಿಗೆ

ನಾಲ್ಕು ಮೈಸೂರು ಯುದ್ಧಗಳನ್ನು ನಡೆಸಿದರು. ನಾಲ್ಕನೆಯ ಯುದ್ಧದಲ್ಲಿ ಟಿಪ್ಪು ತನ್ನ ಶಕ್ತಿಯನ್ನು ಯಶಸ್ವಿಯಾಗಿ ಪ್ರದರ್ಶಿಸಿದ. ಅವನ ಮಂತ್ರಿಗಳೇ ಅವನಿಗೆ ಮೋಸ ಮಾಡಿದರು. ಆದರೂ ಟಿಪ್ಪು ಶರಣಾಗಲು ಒಪ್ಪದೇ ಧೈರ್ಯದಿಂದ ಶ್ರೀರಂಗಪಟ್ಟಣ ಕೋಟೆಯನ್ನು ಉಳಿಸಿಕೊಳ್ಳಲು ಕೊನೆವರೆಗೂ ಹೋರಾಡುತ್ತಲೇ ರಣರಂಗದಲ್ಲಿ ಹುತಾತ್ಮನಾದನು.[೨೫]

ಸೂರ್ಯನಾಥ ಕಾಮತ್ ಅವರು ತನ್ನ ಟಿಪ್ಪು ಕನ್ನಡ ಪ್ರೇಮಿಯೆ? ಎಂಬ ಲೇಖನದಲ್ಲಿ ಟಿಪ್ಪುವಿನ ಆಡಳಿತ ವೈಖರಿ, ಧಾರ್ಮಿಕ ಮತ್ತು ಭಾಷಾನೀತಿ ಕುರಿತು ಉದ್ಧರಣಗಳನ್ನು ನೀಡುವ ಮೂಲಕ ತಮ್ಮ ಧೋರಣೆಯನ್ನು ವ್ಯಕ್ತಮಾಡಿದ್ದಾರೆ. ಟಿಪ್ಪುವಿನ ರಾಜ್ಯದಲ್ಲಿದ್ದ ೩೩ ಪ್ರಾಂತ್ಯಾಧಿಕಾರಿಗಳಲ್ಲಿ ಒಬ್ಬ ಹಿಂದೂ ಇರಲಿಲ್ಲ. ಮುಸಲ್ಮಾನರಿಗೆ ಮನೆ ತೆರಿಗೆ ಮಾಫಿ ಮಾಡಿದ್ದ. ಮತಾಂತರ ಹೊಂದಿವರಿಗೆ ಕಂದಾಯ ಮಾಫಿ ಮಾಡುವ ವ್ಯವಸ್ಥೆ ಜಾರಿ ಮಾಡಿದ. ರಾಜ್ಯದಲ್ಲಿ ಊರುಗಳ ಮತ್ತು ನಗರಗಳ ಹೆಸರುಗಳನ್ನು ಬದಲಿಸಿ ಪರ್ಶಿಯನ್ ಪದಗಳನ್ನು ಬಳಸಿದ. ಉದಾಹರಣೆಗೆ ಮೈಸೂರು ನಜರಾಬಾದ್, ಚಿತ್ರದುರ್ಗ ಪಕ್ರೂಕಬಾದ್, ಪಾವಗಡ ಕರೀಮಗಡ, ದೇವನಹಳ್ಳಿ ಯೂಸೂಪಾಬಾದ್, ಮಡಿಕೇರಿ ಜಫರಾಬಾದ್, ದಿಂಡಿಗಲ್ ಖಲೀಕಾಬಾದ್, ಕಲ್ಲಿಕೋಟೆ ಇಸ್ಲಾಮಾಬಾದ್, ಗುತ್ತಿ ಫೈಜ್‌ಹಿಸ್ಸಾರ್ ಇಂಥ ಹಲವು ನಗರ ಮತ್ತು ಹಳ್ಳಿಗಳ ಹೆಸರುಗಳನ್ನು ಬದಲಿಸಿದ. ಟಿಪ್ಪುವಿನ ಸ್ವಧರ್ಮ ಪ್ರೇಮ ಅವನ ಇಂಥ ಕ್ರಮಗಳಿಗೆ ಕಾರಣ. ಅವನನ್ನು ಮಹಾತ್ಮ ಗಾಂಧಿಯಂತೆ ಜಾತ್ಯಾತೀತನೆಂದು ಹೇಳಲು ಸಾಧ್ಯವೆ? ಎಂಬ ಪ್ರಶ್ನೆ ಎತ್ತಿದ್ದಾರೆ. ನನ್ನ ಜಯಕ್ಕಾಗಿ ಜಪಮಾಡಿ, ಶತಚಂಡಿಯಾಗ ಮಾಡಿ ಎಂದು ಶೃಂಗೇರಿ ಶ್ರೀಗಳಿಗೆ ಬರೆದ ಪತ್ರಗಳು, ಶ್ರೀರಂಗಪಟ್ಟಣದಲ್ಲಿ ಒಂದು ದೇವಾಲಯ ಕೆಡವಿ ಮಸೀದಿಯನ್ನು ಕಟ್ಟಿಸಿದ ಎಂದು ಕಿರ್ಮಾನಿ ಹೇಳಿದ್ದಾನೆ. ಮೇಲುಕೋಟೆ, ನಂಜನಗೂಡು ಮುಂತಾದ ದೇವಾಲಯಗಳನ್ನು ಬಿಟ್ಟರೆ ಉಳಿದ ದೇವಾಲಯಗಳ ಆದಾಯ ಕಸಿದುಕೊಂಡನು. ಶ್ರೀರಂಗಪಟ್ಟಣದ ಅರಮನೆ ಗ್ರಂಥರಾಶಿಗಳನ್ನು, ಓಲೆಗರಿಯ ಕಡತಗಳನ್ನು ಕುದುರೆಲಾಯಕ್ಕೆ ಕಳುಹಿಸ ಹೇಳಿ ಅವುಗಳನ್ನು ಹುರುಳಿ ಬೇಯಿಸಲು ಬಳಸುವಂತೆ ಆಜ್ಞಾಪಿಸಿದ. ಇಂಥ ಗ್ರಂಥ ನಾಶವು ಟಿಪ್ಪು ಕನ್ನಡ ಪ್ರೇಮವೇ? ಎಂಬ ಪ್ರಶ್ನೆ ಲೇಖಕರದ್ದು.

ಟಿಪ್ಪು ಬ್ರಿಟಿಷರ ವಿರುದ್ಧ ಹೋರಾಡಿದ ಸ್ವಾತಂತ್ರ್ಯ ಯೋಧನಾದರೆ ಬಂಗಾಳದ ಸಿರಾಜ್ ಉದೌಲ, ಪಂಜಾಬಿನ ರಣಜಿತ್‌ಸಿಂಹ, ಪುಣೆಯ ಪೇಶ್ವೆ ಇಮ್ಮಡಿ ಬಾಜೀರಾಯರೂ ಸ್ವಾತಂತ್ರ್ಯ ಯೋಧರಾಗುತ್ತಾರೆ. ಟಿಪ್ಪು ಗಣ್ಯ ವಿಚಾರವಂತ, ಸಾಹಸಿ, ಆಡಳಿತದಲ್ಲಿ ಸುಧಾರಣೆಗಳನ್ನು ತಂದ. ರೇಷ್ಮೆ, ಕೃಷಿ, ಸಕ್ಕರೆ, ಕಾಗದ ಮುಂತಾದ ವಲಯಗಳಿಗೆ ಆದ್ಯತೆ ನೀಡಿದ. ರಾಕೆಟ್ ಆವಿಷ್ಕಾರ ಮಾಡಿದ. ಆದರೆ ಅವನಲ್ಲಿ ಇಲ್ಲದ ಸದ್ಗುಣಗಳನ್ನು ಅವನ ಮೇಲೆ ಆರೋಪಿಸಬೇಕೆ?[೨೬]

ಹೈದರ್ ಮತ್ತು ಟಿಪ್ಪು ಸುಲ್ತಾನರ ಜೀವನ, ವ್ಯಕ್ತಿತ್ವ ಮತ್ತು ಹೋರಾಟಗಳ ಕುರಿತು ಹೆಚ್ಚು ಅಧ್ಯಯನ ನಡೆಸಿರುವ ಬಿ ಷೇಕ್‌ಅಲಿ ಅವರು ಕರ್ನಾಟಕ ಚರಿತ್ರೆ, ಸಂಪುಟ ೫ರಲ್ಲಿ ಇಬ್ಬರು ಸುಲ್ತಾನರ ಸಾಧನೆಗಳನ್ನು ಕುರಿತು ವಸ್ತುನಿಷ್ಠ ಚಿತ್ರಣ ನೀಡುವ ಪ್ರಯತ್ನ ಮಾಡಿದ್ದಾರೆ. ಟಿಪ್ಪು ಬ್ರಿಟಿಷರ ವಿಸ್ತರಣವನ್ನು ತಡೆಗಟ್ಟುವುದರಲ್ಲಿ ಅವನ ನಿರ್ಧಾರ ಹೆಚ್ಚು ಬಲವಾಗಿತ್ತು. ಅವನು ಬ್ರಿಟಿಷರ ಕಡು ಶತ್ರುವಾದುದಕ್ಕೆ ಅದೇ ಕಾರಣ. ಟಿಪ್ಪು ಬ್ರಿಟಿಷರೊಡನೆ ರಾಜೀ ಮಾಡಿಕೊಳ್ಳಲಿಲ್ಲ. ಅವರನ್ನು ದೂಳೀಪಟ ಮಾಡಬೇಕೆಂಬ ತನ್ನ ಧ್ಯೇಯದಿಂದ ವಿಚಲಿತನಾಗಲಿಲ್ಲ. ಆ ಕಾಲದಲ್ಲಿ ಬ್ರಿಟಿಷರಿಂದ ಭಾರತದ ಸ್ವಾತಂತ್ರ್ಯಕ್ಕೆ ಬಾರಿ ಅಪಾಯವಿದೆ ಎಂದು ಮನಗಂಡ ಏಕೈಕ ಅರಸ ಟಿಪ್ಪು. ಬ್ರಿಟಿಷರ ಉದ್ದೇಶಗಳನ್ನು ಭಗ್ನಗೊಳಿಸಲು ತನ್ನ ಸರ್ವಶಕ್ತಿಯನ್ನು ಉಪಯೋಗಿಸಿದ. ಅವನ ಜೀವನಸೂತ್ರ ನೂರುವರ್ಷ ಗುಲಾಮನಾಗಿ ಬದುಕುವುದಕ್ಕಿಂತ ಒಂದೇ ಒಂದು ದಿನ ಸ್ವತಂತ್ರನಾಗಿ ಬದುಕುವುದು ಮೇಲು. ನೂರುವರ್ಷ ನರಿಯಂತೆ ಬದುಕಿರುವುದಕ್ಕಿಂತ ಒಂದು ದಿನ ಸಿಂಹವಾಗಿ ಬದುಕಿರುವುದು ಲೇಸು. ಈ ಸೂತ್ರದಂತೆ ಮುನ್ನಡೆದನು.

ಭಾರತದ ಸ್ವಾತಂತ್ರ್ಯದ ಹೋರಾಟದ ಭಾವನೆಯನ್ನು ಉದ್ಘಾಟಿಸಿದವನು ಟಿಪ್ಪು ಎಂಬುದನ್ನು ಚರಿತ್ರೆಯಲ್ಲಿ ದಾಖಲಿಸಬೇಕಾಗಿದೆ. ತನ್ನ ರಾಜ್ಯವನ್ನು ಆಧುನೀಕರಿಸಲು ಅವನು ಕೈಗೊಂಡ ಪ್ರಯತ್ನಗಳು ಕೃಷಿಯನ್ನು ಅಭಿವೃದ್ಧಿಪಡಿಸಲು, ವ್ಯಾಪಾರ–ವಾಣಿಜ್ಯ ಸುಧಾರಿಸಲು, ಕೈಗಾರಿಕೆಗಳನ್ನು ಸ್ಥಾಪಿಸಲು ಅವನು ಗಾಢವಾದ ಆಸಕ್ತಿ ತೋರಿದನು. ಸಮರ್ಥ ಆಡಳಿತ ವ್ಯವಸ್ಥೆ ರೂಪಿಸಿದನು. ಅನೇಕ ಸುಧಾರಕ ಅಂಶಗಳಿಂದ ಮೈಸೂರನ್ನು ಮಹತ್ವದ ಅಭಿವೃದ್ಧಿ ಚಟುವಟಿಕೆಗಳಿಂದ ಸದಾ ಗಿಜಿಗುಟ್ಟುವ ರಾಜ್ಯವನ್ನಾಗಿ ಮಾಡಿದನು. ಕೆಲವು ವೈಯಕ್ತಿಕ ದೋಷಗಳು ಟಿಪ್ಪುವಿನಲ್ಲಿದ್ದವು. ಹೈದರನ ವಿವೇಕವಾಗಲಿ, ನಾನರಿಗೆ ಇದ್ದ ರಾಜಕಾರಣ ಕೌಶಲವಾಗಲಿ ಅವನಲ್ಲಿರಲಿಲ್ಲ. ಅವನ ನೀತಿ ದಿಟ್ಟವಾಗಿತ್ತು. ಕಲ್ಪನಾ ಸಾಮರ್ಥ್ಯದಿಂದ ಕೂಡಿತ್ತು. ಆದರೆ ಅದಕ್ಕೆ ಪೂರ್ವ ಯೋಜನೆಯಿರುತ್ತಿರಲಿಲ್ಲ. ಜಾಗರೂಕತೆಯಿಂದ ಕಾರ್ಯಗತಗೊಳಿಸುತ್ತಿರಲಿಲ್ಲ. ಅಪಾರ ಶಕ್ತಿಯನ್ನು, ಧೈರ್ಯವನ್ನು ಪ್ರದರ್ಶಿಸಿದನು. ಅದರಲ್ಲಿ ಜಾಣ್ಮೆ ಮತ್ತು ಸೂಕ್ಷ್ಮ ಪರಿಜ್ಞಾನವಿರಲಿಲ್ಲ, ಹೊಂದಾಣಿಕೆ ಮಾಡಿಕೊಳ್ಳುತ್ತಿರಲಿಲ್ಲ. ಆತುರದ ತೀರ್ಮಾನ ಕೈಗೊಳ್ಳುತ್ತಿದ್ದ. ತಿರುವಾಂಕೂರು ರಕ್ಷಣಾ ಗೋಡೆ ಕೆಡವಿಸಿದ್ದೆ ಮೂರನೆಯ ಮೈಸೂರು ಯುದ್ಧಕ್ಕೆ ಕಾರಣ. ಅವನಿಗೆ ನಿರ್ಣಯ ಶಕ್ತಿಯ ಅಭಾವವಿತ್ತು. ಫ್ರೆಂಚ್ ಸಾಹಸಿ ರಿಪಾಡ್‌ನನ್ನು ಬಲವಾಗಿ ನಂಬಿ ನಿಯೋಗ ಕಳುಹಿಸಿದ್ದೆ ಮುಂದೆ ಅವನಿಗೆ ಮಾರಕವಾಯಿತು.

ಜಾತ್ಯಾತೀತ ನೀತಿ ಟಿಪ್ಪುವಿನ ಮತ್ತೊಂದು ಗುಣ. "ಟಿಪ್ಪು ಹಿಂದೂ–ಮುಸ್ಲಿಮ್ ವ್ಯಕ್ತಿಯ ಪ್ರತಿರೂಪ" ಎಂದು ಗಾಂಧೀಜಿ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಬರೆದರು. ಶೃಂಗೇರಿ

ಮಠಕ್ಕೆ ಟಿಪ್ಪು ಬರೆದ ಪತ್ರಗಳೇ ಆತ ಹಿಂದೂ ಧಾರ್ಮಿಕ ಸಂಸ್ಥೆಗಳ ಬಗ್ಗೆ ತಾಳಿದ್ದ ಗೌರವ ತಿಳಿಯುತ್ತದೆ. ಶಾರದ ದೇವಾಲಯದಲ್ಲಿ ಮೂರ್ತಿಸ್ಥಾಪನೆ, ದನಸಹಾಯ, ದತ್ತಿ ನೀಡಿದನು. ಶ್ರೀರಂಗಪಟ್ಟಣದ ರಂಗನಾಥ ದೇವಾಲಯದ ಗಂಟಾನಿನಾದ ಮತ್ತು ಮಸೀದಿ ಪ್ರಾರ್ಥನೆ ಘೋಷವನ್ನು ಸಮಾನ ಭಕ್ತಿ ಭಾವದಿ ಆಲಿಸುತ್ತಿದ್ದ. ಉನ್ನತ ಅಧಿಕಾರ ಸ್ಥಾನಕ್ಕೆ ಅನೇಕ ಹಿಂದೂಗಳನ್ನು ನೇಮಕ ಮಾಡಿದ. ಇವೆಲ್ಲವೂ ಆತನ ಬಗೆಗಿರುವ ಮತೀಯವಾದಿ ಎಂಬ ಭಾವನೆಯನ್ನು ತೊಡೆದು ಹಾಕುತ್ತವೆ. ಮಲಬಾರ್‌ನ ನಾಯರ್‌ಗಳು, ಮಂಗಳೂರಿನ ಕ್ರೈಸ್ತರು, ಕೊಡಗಿನ ರಾಜರು, ಬ್ರಿಟಿಷರ ಜೊತೆ ಮೈತ್ರಿಯಿಂದ ಇದ್ದುದ್ದರಿಂದ ರಾಜಕೀಯ ಕಾರಣಗಳಿಂದಾಗಿ ಅವರ ವಿರುದ್ಧ ಕ್ರೂರವಾಗಿ ವರ್ತಿಸಿದ. ಶಾಂತಿ ಮತ್ತು ಶಿಸ್ತು ಪಾಲನೆಗಾಗಿ ಆತ ಮುಸಲ್ಮಾನ ಮಾಪಿಳ್ಳೆ ಮತ್ತು ಮಹಮದೀಯರ ವಿರುದ್ಧವೂ ಅಷ್ಟೇ ಕಠಿಣವಾಗಿ ವರ್ತಿಸಿದ. ಆತನ ರಾಜ್ಯದಲ್ಲಿ ಸರ್ವರೂ ಸಮಾನರು, ಜಾತಿ, ಮತ, ಭಾಷೆ, ತಾರತಮ್ಯಕ್ಕೆ ಅವಕಾಶವಿರಲಿಲ್ಲ. ಆಡಳಿತದಲ್ಲಿ ಅಲಸ್ಯ, ವೈಭವ, ಮತಾಂಧತೆ, ಸಂಪ್ರದಾಯದ ಹಸ್ತಕ್ಷೇಪವಿರಲಿಲ್ಲ.

ಚಿಂತನೆ ಮತ್ತು ಕ್ರಿಯೆಯಲ್ಲಿ ಟಿಪ್ಪು ಕ್ರಾಂತಿಕಾರಿ ಸ್ವಭಾವದವನಾಗಿದ್ದ. ಹೇಡಿತನ, ಅನ್ಯಾಯ ಮತ್ತು ಅಜ್ಞಾನಗಳ ವಿರುದ್ಧ ತನ್ನ ಜೀವನದುದ್ದಕ್ಕೂ ಹೋರಾಟ ನಡೆಸಿದ. ಅವನ ಜಾಗೃತ ಮನಸ್ಸು ಸದಾ ಹೊಸದನ್ನೆ ಚಿಂತಿಸುತ್ತಿತ್ತು. ಮನುಷ್ಯರ ಗ್ರಹಿಕೆಯ ವೇಗಕ್ಕಿಂತ ಕ್ಷಿಪ್ರವಾಗಿ ಬೇಧಿಸಲು ಯತ್ನಿಸುತ್ತಿದ್ದ. ಆಧುನೀಕರಣದ ಬಗ್ಗೆ ಒಲವು, ಹೊಸದನ್ನು ಅಳವಡಿಸುವಲ್ಲಿ ಉತ್ಸಾಹ ಆತನ ವಿರೋಧಿಗಳೂ ಅವನ ದಾರ್ಶನಿಕ ಗುಣಗಳನ್ನು ಕೊಂಡಾಡಿದ್ದಾರೆ.[೩೭]

ಎಚ್.ಎಸ್.ಗೋಪಾಲರಾವ್ ಚರಿತ್ರೆಯಲ್ಲಿ ಟಿಪ್ಪು ಸ್ಥಾನ-ಮಾನದ ಬಗ್ಗೆ ತಮ್ಮ ಆಶಯವನ್ನು ವ್ಯಕ್ತಮಾಡಿದ್ದಾರೆ. ಕೆಲವು ವ್ಯಕ್ತಿಗಳು ಸತ್ತ ಮೇಲೂ ಕಾಡುತ್ತಾರೆ. ಕೆಲವು ವ್ಯಕ್ತಿಗಳನ್ನು ಸಾವಿನ ನಂತರವೂ ನಾವೇ ಜೀವಂತವಾಗಿಡುತ್ತೇವೆ. ಕೆಲವರು ಗತ ಕಾಲದ ಶ್ರೇಷ್ಠರಾಗಿ ಅಥವಾ ಕನಿಷ್ಠರಾಗಿ ಕಾಡುತ್ತಲೇ ಇರುತ್ತಾರೆ. ಇಂದು ಚರಿತ್ರೆಯಲ್ಲಿ ಟಿಪ್ಪುವು ಈ ಭಾವನೆಗಳಿಗೆ ಒಳಗಾಗಿದ್ದಾನೆ. ಅನೇಕ ಚರಿತ್ರೆಕಾರರು, ಸಾಹಿತಿಗಳು, ಪ್ರಗತಿಪರ ಚಿಂತಕರು, ಓದುಗರನ್ನು ಕಾಡುತ್ತಲೇ ಇದೆ. ಟಿಪ್ಪುವಿನ ಬಗ್ಗೆ ಅನೇಕ ನಂಬಿಕೆ ಮತ್ತು ಅಪನಂಬಿಕೆಗಳು ಉಳಿದುಕೊಂಡೇ ಬಂದಿವೆ. ಅವನ ಬಗ್ಗೆ ಚರ್ಚೆ ನಿಂತ ದಿನ ಟಿಪ್ಪುವಿಗೂ ಸಮಾಧಾನ ನಮಗೂ ಸಮಾಧಾನ. ಟಿಪ್ಪುವಿನ ಒಂದು ಸ್ಪಷ್ಟ ಚಿತ್ರ ಎಂದಿಗೂ ದೊರೆಯಲಾರದು ಎಂಬ ಅಪನಂಬಿಕೆ ಕೆಲವು ಇತಿಹಾಸಕಾರರಿಗಾದರೂ ಇದ್ದರೆ ಆಶ್ಚರ್ಯವೇನಿಲ್ಲ. ಟಿಪ್ಪುವನ್ನು ಕುರಿತಾಗಿ ಈವರೆಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವ ಎಲ್ಲರಿಗೂ ತಮ್ಮ ತಮ್ಮ ಅಭಿಪ್ರಾಯಗಳಲ್ಲಿ ನಂಬಿಕೆ ಇದೆ. ಟಿಪ್ಪುವನ್ನು ಅನುಮಾನಿಸಿ ಪ್ರಶ್ನಿಸುವ ಜನರೂ ಇದ್ದಾರೆ. ಅವರಿಗೂ ತಮ್ಮ ಅನುಮಾನಗಳಲ್ಲಿ ವಿಶ್ವಾಸವಿದೆ. ಪ್ರಶ್ನೆ ಮಾತ್ರ ಉಳಿದಿದೆ ಚರ್ಚೆ ನಿರಂತರವಾಗಿ ಮುಂದುವರೆದಿದೆ.[೩೮]

ಗೋಪಾಲರಾವ್ ಅವರು ಟಿಪ್ಪುವಿನ ಸ್ವಭಾವ ಕುರಿತು ಚರ್ಚಿಸುವಾಗ ಟಿಪ್ಪುವಿನ ಸೆರೆಯಾಳುಗಳಾಗಿದ್ದ ವ್ಯಕ್ತಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿ ಅವನ ಸ್ಥಾನಮಾನ ಕುರಿತು ನಿಲುವು ವ್ಯಕ್ತ ಮಾಡಿದ್ದಾರೆ. ಟಿಪ್ಪುವಿನ ಕ್ರೌರ್ಯ ಎಷ್ಟಿತ್ತು ಎನ್ನುವುದನ್ನು ಟಿಪ್ಪು ಖೈದಿ ಜೇಮ್ಸ್ ಸ್ಕೂರಿ ಹೀಗೆ ತಿಳಿಸಿದ್ದಾರೆ. ಟಿಪ್ಪು ಅವರಿವರ ಮುಖ ನೋಡದೆ ಸಣ್ಣಪುಟ್ಟ ತಪ್ಪು ಮಾಡಿದವರಿಗೂ ಶಿಕ್ಷೆ ವಿಧಿಸುತ್ತಿದ್ದ. ಅವನ ಕಛೇರಿಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದ ಹದಿನೈದು ಜನ ಬ್ರಾಹ್ಮಣರು ಲೆಕ್ಕ ಬರೆಯುವುದರಲ್ಲಿ ತಪ್ಪು ಮಾಡಿದರು ಎಂದು ಅವರ ಹೆಬ್ಬೆರಳು ಮತ್ತು ತೋರುಬೆರಳುಗಳನ್ನು ಕತ್ತರಿಸಿದ. ಸ್ಕೂರಿ ಹೇಳಿರುವ ಈ ಮಾತುಗಳಲ್ಲಿ ನಿಜವೇ ಆಗಿದ್ದರೆ ಟಿಪ್ಪು ಮತ್ತು ಅವನ ಕಾಲದ ಹಿಂಸಾವಿಧಾನಗಳನ್ನು ಅನಾಗರೀಕ, ಅಮಾನವೀಯ ಎಂದು ಹೇಳದೆ ವಿಧಿಯಿಲ್ಲ. ಒಬ್ಬ ವ್ಯಕ್ತಿ ತನ್ನ ಬಂಧನಕ್ಕೆ ಕಾರಣವಾದ[೩೯] ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳುತ್ತಾನೆಯೆಂದು ನಿರೀಕ್ಷಿಸುವುದು ಸರಿಯಲ್ಲ. ಈ ಕಾರಣದಿಂದ ಸ್ಕೂರಿ ಹೇಳಿದ ಎಲ್ಲವೂ ಸತ್ಯ ಅಲ್ಲದಿರಬಹುದು. ಆದರೆ ಸ್ಕೂರಿಯ ಮಾತುಗಳನ್ನು ಸುಲಭವಾಗಿ ಅಲ್ಲಗಳೆಯಲೂ ಸಾಧ್ಯವಿಲ್ಲ[೪೦] ಎಂಬ ವಾದವನ್ನು ಈ ಚರಿತ್ರೆಕಾರರು ನೀಡಿದ್ದಾರೆ.

ಟಿಪ್ಪುವಿನ ಜೀವನ ಚರಿತ್ರೆ ಕುರಿತು ಐತಿಹಾಸಿಕ ಕಾದಂಬರಿ ರಚಿಸಿದ ಭಗವಾನ್ ಎಸ್. ಗಿದ್ವಾನಿ ಅವರು ಟಿಪ್ಪುವಿನ ಅರೆ–ಕೊರೆಗಳನ್ನು, ಆಡಳಿತ ವ್ಯವಸ್ಥೆ ಕೌಶಲ್ಯ ಕುರಿತು ಚಿತ್ರಿಸಿದ್ದಾರೆ. ಸಮಕಾಲೀನ ಚರಿತ್ರೆಯನ್ನು ಅರಿಯಬೇಕಾದರೆ ಭೂತಕಾಲದೊಳಕ್ಕೆ ಅನ್ವೇಷಣಾಯಾನ ಹೋಗುವುದು ಅಗತ್ಯವೆಂಬುದು ಸ್ವತಃ ಟಿಪ್ಪುವಿಗೆ ತಿಳಿದಿತ್ತು.[೪೧] ಅವನ ಈ ನತದೃಷ್ಟ ದೇಶದ ಗತೀತಿಹಾಸವು ಅವನಿಗೆ ಕಲಿಸಿದ ಒಂದು ಬಹುಮುಖ್ಯ ಪಾಠವೆಂದರೆ ಭಾರತವು ಹೆಚ್ಚು ದುರ್ಬಲಗೊಂಡಿದ್ದು ಬಾಹ್ಯ ಶಕ್ತಿಗಿಂತ ನಮ್ಮೊಳಗಿನ ಆಂತರಿಕ ಗಂಡಾಂತರದಿಂದ ಎಂಬುದು. ನಮ್ಮೊಳಗಿನ ಅಂತರಿಕ ದೌರ್ಬಲ್ಯ, ಅನೈಕ್ಯಮತ್ಯದಿಂದ ತನ್ನ ಪ್ರೀತಿಯ ದೇಶವು ಅಸ್ವಾಭಾವಿಕ ಸಾವನಪ್ಪುವ ಅಪಾಯದಲ್ಲಿದೆ[೪೨] ಎಂಬ ಅರಿವು ಟಿಪ್ಪುವಿಗಿತ್ತು.

ಎಂ.ಚಿದಾನಂದಮೂರ್ತಿ ಅವರು ಚರಿತ್ರೆ ಬರವಣಿಗೆಯಲ್ಲಿ ಟಿಪ್ಪುವಿನ ಸ್ಥಾನ–ಗೌರವ ಹಾಗೂ ಇವತ್ತಿನ ಚರ್ಚೆಗಳಿಗೆ ತನ್ನ ನಿಲುವು ವ್ಯಕ್ತಪಡಿಸಿದ್ದಾರೆ. ಟಿಪ್ಪು ತನ್ನ ಆಡಳಿತಾವಧಿಯಲ್ಲಿ ಸುಲ್ತಾನ್ ಎಂಬ ಬಿರುದನ್ನು ತನ್ನ ಹೆಸರಿನ ಜೊತೆಗೆ ಸೇರಿಸಿಕೊಂಡಿದ್ದ.[೪೩] ಅವನು ಉತ್ಸಾಹಶಾಲಿ, ಧೈರ್ಯಶಾಲಿ ಆದರೆ ಒರಟ ಮತ್ತು ತಾಳ್ಮೆರಹಿತ. ತನ್ನ ತಂದೆಯಂತೆಯೇ ಅವನು ಇಂಗ್ಲಿಷರ ಮೇಲೆ ದ್ವೇಷ ಸಾಧಿಸಿ ಅವರನ್ನು ಸೋಲಿಸಿ ರಾಜ್ಯದಿಂದ ಹೊರಹಾಕಲು ನಿರ್ಧರಿಸಿದ. ಇಂಗ್ಲೀಷರನ್ನು ದ್ವೇಷಿಸುತ್ತಿದ್ದ ಫ್ರೆಂಚರ ಸಹಾಯವನ್ನು ಕೇಳಿದ್ದ. ಯುದ್ಧದಿಂದ ಆರಂಭಗೊಂಡ ಅವನ ಆಳ್ವಿಕೆ ಯುದ್ಧದಿಂದಲೇ ಕೊನೆಗೊಂಡಿತು. ಅವನು ಒಬ್ಬ ನಿರ್ಭೀತ ಹೋರಾಟಗಾರ

ನಾಗಿದ್ದರೂ, ದುರ್ಬಲ ಆಡಳಿತಗಾರನಾಗಿದ್ದ. ಮುಂದಾಲೋಚನೆಯ ಸ್ವಭಾವ, ತಂತ್ರಗಾರಿಕೆ, ಇಲ್ಲದ್ದರಿಂದ ಅವನೇ ಶತ್ರುಗಳನ್ನು ಸೃಷ್ಟಿಸಿಕೊಂಡ. ಅವನು ಮತಾಂಧನಾಗಿದ್ದರೂ ತನ್ನ ರಾಜ್ಯವನ್ನು ಉತ್ತಮಪಡಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿದ. ರಸ್ತೆಗಳು, ಕೆರೆಗಳು, ಅಣೆಕಟ್ಟುಗಳನ್ನು ನಿರ್ಮಿಸಿ ಯುರೋಪ್ ಮಾದರಿಯಲ್ಲಿ ಸೈನ್ಯವನ್ನು ಕಟ್ಟಿದ. ಹಲವು ಕಾರ್ಖಾನೆಗಳನ್ನು ಆರಂಭಿಸಿ, ಒಮಾನ್, ಪರ್ಷಿಯಾ, ಟರ್ಕಿ ದೇಶಗಳಿಗೆ ವ್ಯಾಪಾರಿ ಪ್ರತಿನಿಧಿಗಳನ್ನು ಕಳುಹಿಸಿದ.

ಹೈದರ್-ಟಿಪ್ಪು ಸುಲ್ತಾನರ ಏಳು ಎಷ್ಟು ಕ್ಷಿಪ್ರವೋ ಬೀಳು ಅಷ್ಟೇ ಕ್ಷಿಪ್ರವಾಯಿತು.[೪೪] ಟಿಪ್ಪುವಿನ ಯುದ್ಧಗಳು ಕರ್ನಾಟಕದ ಐಕ್ಯವನ್ನು ಭಂಗಗೊಳಿಸಿದವು. ಅದು ಹೈದರಬಾದಿನ ನಿಜಾಮ, ಮರಾಠರು ಮತ್ತು ಬ್ರಿಟಿಷರ ವಶವಾಯಿತು. ಆಯಾ ರಾಜರಿಗೆ ವಿತರಣೆಯಾಗಿದ್ದ ಕರ್ನಾಟಕ ಒಡೆಯರು, ಕನ್ನಡಿಗರೂ ಛಿದ್ರಛಿದ್ರವಾದರು. ಈ ವಿಭಜನೆ ಕನ್ನಡಿಗರ ಮೇಲೆ ಮಾರಕ ಪ್ರಭಾವವುಂಟುಮಾಡಿತು. ಪ್ರಾಚೀನ ಕಾಲದಿಂದ ತನ್ನದೇ ಸ್ವಾತಂತ್ರ್ಯ, ವ್ಯಕ್ತಿತ್ವವನ್ನು ಹೊಂದಿ ಉದಾತ್ತ ಪರಂಪರೆ, ಸಂಸ್ಕೃತಿಯನ್ನು ಬೆಳೆಸಿದ್ದ ಕರ್ನಾಟಕ ಯಾವುದೇ ಒಳ್ಳೆಯ ಧ್ಯೇಯವಿಲ್ಲದೆ ವಿಭಜನೆಯಾಯಿತು. ಉತ್ತರದಲ್ಲಿ ಮಹಾರಾಷ್ಟ್ರದ ಅಧೀನದಲ್ಲಿದ್ದ ಕನ್ನಡಿಗರು ತನ್ನ ಅಸ್ಮಿತೆಯನ್ನು ಕಳೆದುಕೊಂಡರೆ ನಿಜಾಮನ ವಶದಲ್ಲಿದ್ದ ಕನ್ನಡಿಗರು ಮುಸ್ಲಿಂ ಭಾಷೆ, ಸಂಸ್ಕೃತಿ, ಸಂಪ್ರದಾಯಗಳ ಕಾಲ್ತುಳಿತಕ್ಕೆ ಒಳಗಾದರು. ಮೈಸೂರು ಪ್ರದೇಶವು ಕರಾವಳಿ ಪ್ರದೇಶದ ಅನುಕೂಲತೆಗಳಿಂದ ವಂಚಿತವಾಯಿತು. ವಿದೇಶಿ ವ್ಯಾಪಾರ ತಪ್ಪಿತು. ಸುಂದರ ವನಸಿರಿಯ ಕೊಡಗು ಬ್ರಿಟಿಷರ ವಶವಾಯಿತು. ಕನ್ನಡ ನಾಡು ಕೇವಲ ಒಂಬತ್ತು ಜಿಲ್ಲೆಗಳಿಗೆ ಸೀಮಿತವಾಯಿತು.[೪೫]

೨.೩. ಸಾಹಿತಿಗಳು

ಸಮಕಾಲೀನ ಸಂದರ್ಭದಲ್ಲಿ ಹೆಚ್ಚು ಚರ್ಚೆಗೆ ಗ್ರಾಸವಾಗಿರುವ ಟಿಪ್ಪುಸುಲ್ತಾನನನ್ನು ಕುರಿತು ಸಾಹಿತಿಗಳು ಮತ್ತು ಪ್ರಗತಿಪರ ಚಿಂತಕರು ತಮ್ಮ ಅಭಿಪ್ರಾಯಗಳನ್ನು ನೀಡಿದ್ದಾರೆ. ಚರಿತ್ರೆಯಲ್ಲಿ ಟಿಪ್ಪುವನ್ನು ಪರ-ವಿರೋಧದ ನೆಲೆಯಲ್ಲಿ ಚಿತ್ರಿಸಿರುವುದು ಇಂದಿಗೂ ಟಿಪ್ಪು ವ್ಯಕ್ತಿತ್ವ ಮತ್ತು ಆಡಳಿತ ವ್ಯವಸ್ಥೆ ಕುರಿತಾದ ಚರ್ಚೆಗೆ ಕಾರಣವಾಗಿದೆ. ಟಿಪ್ಪು ಸ್ವಧರ್ಮಿ, ಹಿಂದೂ ವಿರೋಧಿ, ಕನ್ನಡ ಭಾಷಾ ವಿರೋಧಿ, ಜನಪೀಡಕ, ಕ್ರೂರಿ ಮುಂತಾದ ಹೇಳಿಕೆಗಳು ದಿನೇ ದಿನೇ ಹೆಚ್ಚು ಚರ್ಚೆಗೆ ಒಳಗಾಗುತ್ತಿವೆ. ಇಂಥ ಅಭಿಪ್ರಾಯಗಳಿಗೆ ಉತ್ತರ ಎಂಬಂತೆ ಅನೇಕ ಸಾಹಿತಿಗಳು ಟಿಪ್ಪು ಬಗೆಗೆ ತಮ್ಮ ಒಳಧ್ವನಿಗಳನ್ನು ಎತ್ತಿದ್ದಾರೆ. ಚರಿತ್ರೆಯಲ್ಲಿ ಟಿಪ್ಪು ಕುರಿತು ದಾಖಲಾಗಿರುವ ಅಸತ್ಯಗಳನ್ನು ಪ್ರಶ್ನಿಸುವ ಎದೆಗಾರಿಕೆ ಇವರದು. ಬ್ರಿಟಿಷ್ ವಸಾಹತುಶಾಹಿ

ಬರಹಗಾರರು ಮತ್ತು ಭಾರತದ ಕೆಲವು ರಾಷ್ಟ್ರೀಯವಾದಿ ಚರಿತ್ರೆಕಾರರು ಟಿಪ್ಪು ಬಗೆಗೆ ಮಾಡಿರುವ ಆರೋಪಗಳಿಗೆ ಸಮರ್ಥ ಉತ್ತರ ನೀಡುವ ಪ್ರಯತ್ನ ನಡೆದಿದೆ.

ಕನ್ನಡ ಸಾಹಿತ್ಯ ವಲಯದಲ್ಲಿ ಟಿಪ್ಪು ಬಗ್ಗೆ ಹೆಚ್ಚು ಚರ್ಚೆಗಳು ಮತ್ತು ವಿಮರ್ಶೆಗಳು ನಡೆದಿವೆ. ಕಯ್ಯಾರ ಕಿಞ್ಞಣ್ಣರೈ ಟಿಪ್ಪು ಕುರಿತು ತಮ್ಮ ಅಭಿಪ್ರಾಯ ಮುಂದಿಟ್ಟಿದ್ದಾರೆ. ಟಿಪ್ಪು ಮೈಸೂರು ರಾಜ್ಯವನ್ನು ಆಳುತ್ತಿದ್ದಾಗ ಇಂದಿನಂತೆ ಅಲ್ಲಿ ಕನ್ನಡ ಸಾಹಿತ್ಯ ಸ್ಥಿತಿಗಳು ಸಮೃದ್ಧವಾಗಿ ಇದ್ದವು ಎಂಬುದನ್ನು ತಿಳಿದುಕೊಂಡರೆ ಟಿಪ್ಪು ಸಂಕುಚಿತ ಮತಿಯಾದ ಭಾಷಾಭಿಮಾನಿಯಲ್ಲ ಎಂದು ಅರಿತುಕೊಳ್ಳಬಹುದು. ಮೈಸೂರನ್ನು ಮುಸ್ಲಿಂ ಮತೀಯ ಸುಲ್ತಾನರು ಆಳುತ್ತಿದ್ದ ಕಾಲದಲ್ಲಿ ಹಿಂದೂ ಧರ್ಮಿಯರಿಗೆ ಅದರಲ್ಲೂ ರಾಜ್ಯದ ಅಧಿಕ ಸಂಖ್ಯಾತರಾದ ಕನ್ನಡಿಗರಿಗೆ ಅನ್ಯಾಯ ಮಾಡಲಿಲ್ಲ ಎಂಬುದಕ್ಕೆ ಶ್ರೀರಂಗಪಟ್ಟಣದ ಒಂದು ದೃಶ್ಯವೇ ಸಾಕ್ಷಿಯಾಗಿದೆ. ಪ್ರಾಚೀನ ಶ್ರೀರಂಗನಾಥ ಸ್ವಾಮಿ ದೇವಾಲಯವು ಹಿಂದೂಗಳ, ಕನ್ನಡಿಗರ ಪವಿತ್ರ ಸ್ಥಳ. ಈ ದೇವಾಲಯದ ಮುಂಭಾಗದಲ್ಲಿ ಟಿಪ್ಪು ಜನರು ವಿಶ್ರಾಂತಿ ಪಡೆಯಲು ಸುಂದರ ಭವನ ನಿರ್ಮಾಣ ಮಾಡಿದ.[೬೭] ಅವನು ಭಿನ್ನ ಜಾತಿ ಹಾಗೂ ಮತೀಯನಾದರೂ ಎಂದೆಂದೂ ಭಾರತೀಯರಿಗೆ, ಕನ್ನಡಿಗರಿಗೆ ದ್ರೋಹ ಬಗೆಯಲಿಲ್ಲ ಎಂಬ ಸಮರ್ಥನೆ ಈ ಲೇಖಕರದ್ದು.

ಕೆ.ಎಸ್.ಭಗವಾನ್ ತಮ್ಮ 'ಟಿಪ್ಪು ಪ್ರಜಾಪರ ಆದರೆ ಕನ್ನಡ ಪರನಲ್ಲ' ಎಂಬ ಲೇಖನದಲ್ಲಿ ಟಿಪ್ಪು ಬಗೆಗೆ ಭಿನ್ನ ನೋಟಗಳನ್ನು ಚಿತ್ರಿಸಿದ್ದಾರೆ. ಚರಿತ್ರೆಯ ಸಂಗತಿಗಳನ್ನು ಪರ ಅಥವಾ ವಿರೋಧಿ ನೆಲೆಯಿಂದ ನೋಡುವುದು ವಿಹಿತವಲ್ಲ. ಆದರೆ ಅದು ಇಂದಿಗೂ ಪ್ರಭಾವ ಬೀರುತ್ತಿದೆ. ಅದನ್ನು ಪರೀಕ್ಷಿಸಬೇಕಾಗುತ್ತದೆ. ಯಾವುದೇ ದೊರೆಯ ಆಡಳಿತ ಎಷ್ಟರ ಮಟ್ಟಿಗೆ ದೇಶಾಭಿವೃದ್ಧಿಗೆ ಮತ್ತು ಜನರ ಕಲ್ಯಾಣಕ್ಕಾಗಿ ನಿರತವಾಗಿತ್ತು ಎಂದು ಓರೆ ಹಚ್ಚುವುದು ಅವನಿಗೆ ನ್ಯಾಯ ಒದಗಿಸುವ ಕೆಲಸವಾಗುತ್ತದೆ.[೬೭] ಟಿಪ್ಪು ತಾನಿದ್ದ ನೆಲವನ್ನು ಸ್ವತಂತ್ರವಾಗಿ ಇಡಬೇಕೆಂಬ ವಾಂಛೆಯಿಂದ ಇದ್ದರೂ ಈ ನೆಲದ ಭಾಷೆಯನ್ನು ಬಳಸದೆ ಹೋದುದರಿಂದ ಆತ ಈ ನೆಲಕ್ಕೆ ಪರಕೀಯನಾದ. ನುಡಿಯ ಮೇಲೆ ನಾಡು ನಿಂತಿದೆ. ನುಡಿಗೆ ಪೂರಕವಾಗದವರು ನಾಡಿಗೆ ಪೂರಕವಾಗಲಾರರು.

ಟಿಪ್ಪು ಸಂಪ್ರದಾಯ ಶರಣನಾಗಿದ್ದರೂ ಅವನಿಗೆ ಹಿಂದೂಗಳ ವಿಷಯವಾಗಿ ಸಹನೆ ಇತ್ತು ಎಂದು ಹೇಳುವಾಗ ಇತಿಹಾಸಕಾರರು ಆತ ಹಿಂದೂ ದೇವಾಲಯಗಳಿಗೆ ದಾನ-ದತ್ತಿ ಕೊಡುತ್ತಿದ್ದನೆಂದು ತಿಳಿಸಿ ಅವನ ಅರಮನೆಗೆ ಕೇವಲ ನೂರು ಗಜಗಳ ದೂರದಲ್ಲಿ ಪ್ರಖ್ಯಾತ ಶ್ರೀರಂಗನಾಥ ದೇವಾಲಯವಿತ್ತು ಎಂದು ಬರೆದಿರುವುದು ಸತ್ಯಕ್ಕೆ ದೂರವಿದೆ. ಏಕೆಂದರೆ ಈ ದೇವಾಲಯ ಟಿಪ್ಪು ಅರಮನೆ ದರಿಯಾ ದೌಲತ್‌ನಿಂದ ೨ ಕಿ.ಮೀ. ದೂರದಲ್ಲಿದೆ. ಟಿಪ್ಪು

ಮೇಲೆ ಅಸಮತೋಲನ ಮೆಚ್ಚಿಕೆಯಿಂದ ಇಂಥ ತಪ್ಪು ಮಾಡುತ್ತಾರೆ. ಕಣ್ಣಿಗೆ ಕಪ್ಪು ಬಟ್ಟೆ ಧರಿಸಿರುವ ನ್ಯಾಯದೇವತೆಯಂತೆ ಚರಿತ್ರಕಾರರು ಮತ್ತು ಲೇಖಕರು ಸತ್ಯ ಸಂಗತಿಗಳನ್ನು ದಾಖಲಿಸುವುದು[೪೮] ಸೂಕ್ತ ಎಂಬ ಅಭಿಪ್ರಾಯ ಲೇಖಕರದು. ಚಾರಿತ್ರಿಕ ಸಂಗತಿಗಳನ್ನು, ಆಯಾಯ ಸಮಕಾಲೀನ ಸಂದರ್ಭವನ್ನು ಪರ್ಯಾಲೋಚಿಸಿ ಬರೆಯುವುದು ಸೂಕ್ತ ಎನ್ನುವುದು ಈ ಲೇಖಕರ ಆಶಯ.

ದ್ರೋಹಿಪಟ್ಟದ ಹಿಂದೆ ಮತೀಯ ಕಾರಣ ಇರಬಹುದೆ? ಎಂಬ ಪ್ರಶ್ನೆಯನ್ನು ಹಾಕಿಕೊಂಡು ನಾ.ಡಿಸೋಜ ಟಿಪ್ಪು ಬಗ್ಗೆ ಚರ್ಚಿಸಿದ್ದಾರೆ. ಟಿಪ್ಪುವನ್ನು ಅನೇಕ ಜನರು ಮೆಚ್ಚಿಕೊಳ್ಳುವುದು ಆತ ಬ್ರಿಟಿಷರ ವಿರುದ್ಧ ಯುದ್ಧಸಾರಿದ ಎಂಬ ಕಾರಣಕ್ಕೆ. ನಮ್ಮಲ್ಲಿ ಸ್ವಾತಂತ್ರ್ಯ ಹೋರಾಟ ಪ್ರಾರಂಭವಾದ ನಂತರ, ಮತ್ತೆ ಯಾರು ಯಾರು ಬ್ರಿಟಿಷರನ್ನು ಈ ದೇಶದಿಂದ ಹೊರಹಾಕಲು ಪ್ರಯತ್ನಿಸಿದರೆಂದು ಪಟ್ಟಿ ಮಾಡಿದ ನಾವು ಝಾನ್ಸಿರಾಣಿ ಲಕ್ಷ್ಮಿಬಾಯಿ, ಕಿತ್ತೂರು ಚೆನ್ನಮ್ಮ ಮುಂತಾದವರ ಸಾಲಿಗೆ ಟಿಪ್ಪುವನ್ನು ಸೇರಿಸಿ ಗೌರವ ಸ್ಥಾನ ನೀಡಿಲಾಗಿದೆ. ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ ತುಂಬಾ ಜನಪ್ರಿಯವಾಗಿದ್ದ ಲಾವಣಿ ಮತ್ತು ನಾಟಕ ಪ್ರಕಾರಗಳಲ್ಲಿ ಟಿಪ್ಪುವಿನ ಕಥನವನ್ನು ಸೇರಿಸಿ ಚಳುವಳಿಗೆ ಪ್ರಚೋದನೆ ನೀಡಲಾಯಿತು.

ಟಿಪ್ಪು ನಮ್ಮ ವೈರಿಗಳ ವೈರಿಯಾಗಿದ್ದ ಈಗಲೂ ಅವನು ನಮಗೆ ವೈರಿಯಾಗಿರಬೇಕೆ? ಎಂಬ ಪ್ರಶ್ನೆ ನಮ್ಮ ಮುಂದಿದೆ. ಅವನು ಮುಸ್ಲಿಂ ದೊರೆಯಾಗಿದ್ದ. ಬ್ರಿಟಿಷರ ಅಕ್ರಮಣವಾಗದೇ ಇದ್ದಲ್ಲಿ ಅವನ ವಂಶಪರಂಪರ್ಯ ಆಡಳಿತ ಇಲ್ಲೂ ಮುಂದುವರೆಯುತ್ತಿತ್ತು. ಇದಕ್ಕೆ ಬೇಕಾದ ಒಂದು ಭದ್ರಬುನಾದಿಯನ್ನು ಆತ ಹಾಕಿದ್ದ.[೪೯] ಟಿಪ್ಪು ಒಂದು ವಿಚಿತ್ರ ಪರಿಸ್ಥಿತಿಯಲ್ಲಿ ಜನರ ವಿಶ್ವಾಸ, ಗೌರವಕ್ಕೆ ಪಾತ್ರನಾದ. ತನ್ನ ಮಕ್ಕಳನ್ನು ಬ್ರಿಟಿಷರಿಗೆ ಒಪ್ಪಿಸಿ ನಮ್ಮ ಅನುಕಂಪಕ್ಕೆ ಗುರಿಯಾದ. ಒಂದು ಕಡೆ ಧರ್ಮಾಂಧ ಅನ್ನಿಸಿಕೊಂಡ, ಮತ್ತೊಂದು ಕಡೆ ಪರಧರ್ಮ ಸಹಿಷ್ಣು ಎಂಬ ಹೆಸರು ಪಡೆದ. ಬ್ರಿಟಿಷ್ ಇತಿಹಾಸಕಾರರು ಮತ್ತು ಉಳಿದ ಚರಿತ್ರೆಕಾರರು ಹಾಗೂ ದಂತ ಕಥೆಗಳು ಟಿಪ್ಪು ದ್ವಿಮುಖ ವ್ಯಕ್ತಿತ್ವ ಕುರಿತು ಬಹಳಷ್ಟನ್ನು ಹೇಳುತ್ತ ಬಂದಿವೆ.[೫೦]

ಹೈದರ್ ಮತ್ತು ಟಿಪ್ಪು ಇಬ್ಬರದೂ ಹದಿನೆಂಟನೆಯ ಶತಮಾನದ ಅತ್ಯಂತ ಆಕರ್ಷಕ ವ್ಯಕ್ತಿತ್ವ, ಅವರ ಜೀವನದ ಮುಖ್ಯಗುರಿಯೇ ಭಾರತದಲ್ಲಿ ವಸಾಹತು ವಿಸ್ತರಣೆ ತಡೆಯುವುದು. ರಾಜ್ಯವನ್ನು ಆಧುನೀಕರಿಸುವುದು, ಹೊರಜಗತ್ತಿನೊಂದಿಗೆ ಸಂಬಂಧಗೊಳಿಸುವುದು. ರಾಜ್ಯದಲ್ಲಿ ಬಲವಾದ ಮತ್ತು ಕಾರ್ಯಕ್ಷಮತೆಯುಳ್ಳ ಸರಕಾರವನ್ನು ಬೆಳೆಸುವುದು. ರಾಜ್ಯದ ಗಡಿಗಳನ್ನು ವಿಸ್ತರಿಸುವುದು. ಎಲ್ಲ ದಿಕ್ಕುಗಳಿಂದ ಪ್ರಗತಿಪರ ವಿಚಾರಗಳು ಸೇರಿಕೊಳ್ಳುವುದು.[೫೧]

ಟಿಪ್ಪು ಕನ್ನಡ ದ್ರೋಹಿ ಎಂಬುದು ಎಷ್ಟು ಸರಿ? ಇದು ಇತ್ತೀಚಿನ ಆಪಾದನೆ. ಕನ್ನಡದ ಬಗ್ಗೆ ಆವೇಶಭರಿತ ಮಾತನಾಡಲು ಆರಂಭಿಸಿ ೧೦೦ ವರ್ಷ ಆಗಿರಬಹುದು. ಕರ್ನಾಟಕ ಏಕೀಕರಣ, ಕನ್ನಡ ಭಾಷೆ ಅಭಿವೃದ್ಧಿ, ಕನ್ನಡ ಆಡಳಿತ ಭಾಷೆ, ಕನ್ನಡ ಮಾಧ್ಯಮ, ಕನ್ನಡ ಚಳುವಳಿ, ಒಂದೇ ಕರ್ನಾಟಕ ಎಂಬ ಹಲವು ಘೋಷಣೆಗಳು ಕೇಳುತ್ತಿವೆ. ಕನ್ನಡದ ಈ ಮಂಪರಿಗೆ ಒಳಗಾದ ನಾವು ಟಿಪ್ಪುವನ್ನು ಕನ್ನಡ ತಕ್ಕಡಿಯಲ್ಲಿ ಇರಿಸಿ ತೂಗುವುದು ಎಷ್ಟು ಸರಿ. ಟಿಪ್ಪುವನ್ನು ಕನ್ನಡ ದ್ರೋಹಿ ಎನ್ನುವ ಹಿಂದೆ ಒಂದು ಮತೀಯ ಕಾರಣವೂ ಅಡಗಿದೆ.[೫೨] ಇದು ವಿಭಜಿತ ಮನಸ್ಸುಗಳ ಪ್ರಯತ್ನವೂ ಇದೆ ಎಂಬ ಅಭಿಪ್ರಾಯವೂ ಬರುತ್ತದೆ.

ಮೈಸೂರು ಹುಲಿ ಕಾಣಾ ಎಂಬ ಕವಿತೆ ಮೂಲಕ ಡಾ.ದೊಡ್ಡರಂಗೇಗೌಡರು ಟಿಪ್ಪುವಿನ ಪ್ರಗತಿಪರ ಚಿಂತನೆಗಳ ಕುರಿತು ತಿಳಿಸಿದ್ದಾರೆ. ಈ ಕವಿತೆಯಲ್ಲಿ ಟಿಪ್ಪು ಹೆಣ್ಣು ಮಕ್ಕಳ ಮಾನ ರಕ್ಷಣೆಗೆ ಕ್ರಮಕೈಗೊಂಡ, ಮೇಲುಹೊದಿಕೆ ತೊಡಬಾರದೆಂಬ ಮನುವಾದಿಗಳ ನಿರ್ಬಂಧವನ್ನು ಧಿಕ್ಕರಿಸಿದ. ರಾಜ್ಯದಲ್ಲಿ ಬೊಕ್ಕಸ ಖಾಲಿಯಾಗಿ ಜನರು ಬಡತನಕ್ಕೆ ಒಳಗಾದಾಗ ತನ್ನ ಮಕ್ಕಳನ್ನೆ ಒತ್ತೆ ಇಟ್ಟು ಹಣ ತಂದ ಮಾನವತಾವಾದಿ. ರಾಜ್ಯದಲ್ಲಿ ರೇಷ್ಮೆ ಕೃಷಿ ಪರಿಚಯಿಸಿದ. ಪ್ರತಿ ಹಳ್ಳಿಗಳಲ್ಲಿ ಕೆರೆ-ಕಟ್ಟೆಗಳನ್ನು ನಿರ್ಮಾಣ ಮಾಡಿಸಿ ನೀರಾವರಿಗೆ ಆದ್ಯತೆ ನೀಡಿದ. ರೈತರಿಗೆ ಭೂಮಿಯನ್ನು ಹಂಚಿ ಉಳಿಗಮಾನ್ಯ ಪದ್ಧತಿ ನಿರ್ಮೂಲನ ಮಾಡಿದ. ಜೀತಪದ್ಧತಿ, ಮಕ್ಕಳ ಮಾರಾಟ ನಿಷೇಧಿಸಿದ. ಕೈಗಾರಿಕೆಗಳನ್ನು ಸ್ಥಾಪಿಸಿ ರಾಜ್ಯವನ್ನು ಪ್ರಗತಿಯ ಕಡೆ ಮುಖ ಮಾಡಿ ನಿಲ್ಲಿಸಿದ. ಪರಕೀಯರ ದಾಳಿಯನ್ನು ಹುಲಿಯಂತೆ ಬೆನ್ನತ್ತಿದ ಕಲಿ ಅವನು. ರಾಜ್ಯ ಮತ್ತು ದೇಶದ ಉಳಿವಿಗಾಗಿ ಆಂಗ್ಲರ ವಿರುದ್ಧ ಹೋರಾಡಿ ದುಡಿದು ಹುತಾತ್ಮನಾದ. ಟಿಪ್ಪು ಜನಮನದಲ್ಲಿ ಚಿರಕಾಲ ಉಳಿಯುವಂತವನು.[೫೩] ಅವನು ಪ್ರಗತಿಪರನೂ, ಜಾತ್ಯಾತೀತನೂ ಆಗಿದ್ದ ಎಂಬ ನಿಲುವು ಇವರದು.

ಟಿಪ್ಪು: ಸತ್ಯವೆಷ್ಟು ಮಿಥ್ಯೆಯೆಷ್ಟು? ಎಂಬ ಲೇಖನದಲ್ಲಿ ಗೋವಿಂದ ಮೂರ್ತಿ ದೇಸಾಯಿ ಟಿಪ್ಪುವಿನ ಪ್ರಗತಿಪರ ಚಿಂತನೆಗಳು, ಚರಿತ್ರೆ ಬರವಣಿಗೆಯಲ್ಲಿ ಟಿಪ್ಪು ಕುರಿತು ವ್ಯಕ್ತವಾಗಿರುವ ಪರ-ವಿರುದ್ಧದ ನಿಲುವುಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ತಮ್ಮ ಅಭಿವ್ಯಕ್ತತೆ ಮುಂದಿಟ್ಟಿದ್ದಾರೆ. “ಟಿಪ್ಪು ಶ್ರೇಷ್ಠ ಯೋಧ, ಚಾಣಾಕ್ಷ ಆಡಳಿತಗಾರ, ವಿಶ್ವದಲ್ಲಿ ಕ್ಷಿಪಣಿ ಬಳಸಿದವರಲ್ಲಿ ಪ್ರಥಮಿಗ. ಕಚ್ಛ್, ಕರಾಚಿ, ಪರ್ಶಿಯಾದಲ್ಲಿ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿದ. ಕರ್ನಾಟಕ ರೇಷ್ಮೆ ಉದ್ದಿಮೆ ಬೆಳೆಸಿದವನೇ ಆತ. ಚೀನಾದವರನ್ನು ಕರೆತಂದು ಸಕ್ಕರೆ ಉದ್ದಿಮೆ ವೃದ್ಧಿಸಿದ. ಶ್ರೀರಂಗಪಟ್ಟಣದಲ್ಲಿ ಕಾಗದ ಉತ್ಪಾದಿಸಲು ಶ್ರಮಿಸಿದ. ಬ್ರಿಟಿಷರೊಡನೆ ಹೋರಾಡಿ ಅವರಿಂದಲೇ

ಹತನಾದ. ಇವೆಲ್ಲ ಟಿಪ್ಪುವಿನ ಒಳ್ಳೆ ಗುಣಗಳೇ. ಆದರೆ ಅವನು ದೇಶಭಕ್ತ, ಪರಧರ್ಮಸಹಿಷ್ಣು ಎಂದೆಲ್ಲ ಇತ್ತೀಚಿನ ಚರಿತ್ರೆಕಾರರು ವಾದಿಸುವುದು ಅಸಂಗತ."[೫೪]

ಟಿಪ್ಪುವನ್ನು ಹೊಗಳುವವರು ಅವನು ಔರಂಗಜೇಬನಂತೆ ಹಿಂದೂಗಳ ಮೇಲೆ ಜಜಿಯಾಕರ ಹೇರಲಿಲ್ಲ. ಘಜ್ನಿ ಮಹಮದನಂತೆ ಹಿಂದೂ ವಿಗ್ರಹಗಳನ್ನು ಭಂಜಿಸಲಿಲ್ಲ. ದೇವಾಲಯಗಳನ್ನು ಧ್ವಂಸಗೊಳಿಸಿ ಮಸೀದಿಗಳನ್ನು ಕಟ್ಟಲಿಲ್ಲ. ಮುಖದ ಮೇಲೆ ಧಾರ್ಮಿಕ ಚಿಹ್ನೆಗಳನ್ನು ಧರಿಸುವ ಅಥವಾ ಯಜ್ಞಯಾಗಗಳನ್ನು ಮಾಡುವಲ್ಲಿ ನಂಬಿಕೆ ಇರಲಿಲ್ಲ. ನಿಜಾಮನಂತೆ ತನ್ನ ಆಡಳಿತವನ್ನು ಮುಸಲ್ಮಾನರಿಗಷ್ಟೇ ಒಪ್ಪಿಸಿರಲಿಲ್ಲ. ಅಪ್ಪಾಜಿರಾಮ, ಶ್ರೀನಿವಾಸರಾವ್ ಟಿಪ್ಪುವಿನ ವಿದೇಶಾಂಗ ನೀತಿಯನ್ನು ನಿಭಾಯಿಸುತ್ತಿದ್ದರು. ಖಜಾನೆ ಮುಖ್ಯಸ್ಥ ಬ್ರಾಹ್ಮಣ ಸುಬ್ಬರಾವ್. ತೋಶಖಾನದ ಮುಖ್ಯಸ್ಥ ಪೂರ್ಣಯ್ಯ ಆದರೆ ಸೈನ್ಯದ ಮುಖ್ಯ ಹುದ್ದೆಗಳಲ್ಲಿ ಮುಸಲ್ಮಾನರನ್ನೇ ನೇಮಿಸಿಕೊಂಡಿದ್ದ. ಬ್ರಾಹ್ಮಣರಿಗೆ ದಾನ-ದತ್ತಿ ನೀಡಿದ. ಟಿಪ್ಪುವಿಗೆ ಬಾದಶಾಹನಾಗುವ ಹುಚ್ಚಿತ್ತು.[೫೫] ಶೃಂಗೇರಿಯ ಬ್ರಾಹ್ಮಣ ಜೋತಿಷಿಗಳು ಯಥೇಚ್ಚ ದಾನ ಮಾಡಲು ಹೇಳಿದ್ದರಿಂದ ಮಾಡಿದನೇ ವಿನಃ ಹಿಂದೂಗಳ ಮೇಲಿನ ಪ್ರೀತಿಯಿಂದಲ್ಲ ಎಂದೂ ಗೋವಿಂದಮೂರ್ತಿಯವರು ತಮ್ಮ ನಿಲುವು ವ್ಯಕ್ತಪಡಿಸಿದ್ದಾರೆ.

ಟಿಪ್ಪು ಮೇಲೆ ಕ್ಷ-ಕಿರಣ ಗ್ರಂಥ ರಚಿಸಿದ ಐ.ಎಂ. ಮುತ್ತಣ್ಣನವರು ಟಿಪ್ಪು ಫ್ರೆಂಚರಿಗೆ ೧೭೯೭, ಏಪ್ರಿಲ್ ೨೧ರಂದು ಬರೆದ ಪತ್ರದಲ್ಲಿ ಫ್ರೆಂಚರನ್ನು ಹಿಂದೂಸ್ತಾನಕ್ಕೆ ಆಹ್ವಾನಿಸಿದ್ದು ದೇಶದ್ರೋಹ ಎಂದು ಉಲ್ಲೇಖಿಸಿದ್ದಾರೆ. ಟಿಪ್ಪು ತನ್ನ ಹಾದಿಯ ಮುಳ್ಳಾಗಿದ್ದ ಬ್ರಿಟಿಷರನ್ನು ಈ ದೇಶದಿಂದ ಹೊರ ಹಾಕಲು ಇನ್ನೊಬ್ಬ ವಿದೇಶಿ ಶತ್ರುವನ್ನು ಆಹ್ವಾನಿಸುವುದು ದೇಶಪ್ರೇಮವೇ? ದೇಶ ದ್ರೋಹವೆ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ವಿಲಕ್ಷಣವೆಂದರೆ ಟಿಪ್ಪು ತನ್ನೆಲ್ಲ ದುಷ್ಕೃತ್ಯಗಳನ್ನು ಹೆಚ್ಚಾಗಿ ಎಸಗಿದ್ದು ಮಂಗಳೂರಿನಿಂದ ಕೇರಳದವರೆಗೆ. ಮಲಬಾರಿನಲ್ಲಿ ಕ್ರಿಶ್ಚಿಯನ್ನರು ನಂತರ ಕೇರಳದ ನಾಯರ ಸಮಾಜದ ಮೇಲೆ ಅವನು ಎಸಗಿದ ದ್ರೋಹ ಚರಿತ್ರೆಗೆ ಕಪ್ಪು ಮಸಿ ಬಳಿದಿದೆ.[೫೬]

ಜಿ.ಎಸ್.ಸಿದ್ದಲಿಂಗಯ್ಯ ಅವರು ಟಿಪ್ಪು ಕುರಿತು ತಮ್ಮ ಅಭಿಪ್ರಾಯ ಮುಂದಿಟ್ಟಿದ್ದಾರೆ. ಟಿಪ್ಪು ಕುರಿತು ಬರೆದಿರುವ ಚರಿತ್ರೆ ವಸ್ತುನಿಷ್ಠವಾಗಿ ಉಳಿದಂತೆ ಇಲ್ಲ. ಬ್ರಿಟಿಷರು ರಚಿಸಿದ ಚರಿತ್ರೆ ಅವರ ಮನೋಧರ್ಮಕ್ಕೆ ತಕ್ಕಂತಿದೆ. ಫ್ರೆಂಚರದು ಅದೇ. ಇನ್ನು ಕನ್ನಡ ಇತಿಹಾಸವನ್ನು ಹುಡುಕಬೇಕು ಎಂದರೆ ನಮಗೆ ಲಭ್ಯವಾಗುವ ಮಾಹಿತಿಗಳು ಸಾಕಷ್ಟು ಲಭ್ಯವಿಲ್ಲ. ದೊರೆತ ಆಧಾರಗಳ ನೆರವಿನಿಂದ ಚರಿತ್ರೆ ರಚಿಸುವಾಗ ಹುಷಾರು ತಪ್ಪುವ ಸಂದರ್ಭವೇ ಹೆಚ್ಚು. ಅದಕ್ಕೆ ಕಾರಣ ನಮ್ಮ ಎದುರಿಗೆ ಹಿಂದುವನ್ನು ನಿಷ್ಠೂರವಾಗಿ ಬರೆದ ಚರಿತ್ರೆ ಎಂಬುದು ಕಟು ಸತ್ಯವಾಗಿದೆ.[೫೭]

ಟಿಪ್ಪು ಕೇವಲ ಜಿಛಟಿನ ಪ್ರಶ್ನೆಯೂ ಅಲ್ಲ, ಕಟ್ಟಿನ ಪ್ರಶ್ನೆಯೂ ಅಲ್ಲ. ಶೃಂಗೇರಿ, ನಂಜನಗೂಡು ದೇವಾಲಯಗಳಿಗೆ ದತ್ತಿಯಿತ್ತನು. ನಂಜನಗೂಡಿನ ನಂಜುಂಡೇಶ್ವರನನ್ನು ಹಕೀಮ ನಂಜುಂಡ ಎಂದನು. ನೆಪೋಲಿಯನನ್ನು ಸೋಲಿಸಿದ ವೆಲ್ಲಿಂಗ್‌ಟನ್ ಅನ್ನು ಸೋಲಿಸಿದನು. ಆಡಳಿತದಲ್ಲಿ ಉರ್ದು ಮತ್ತು ಪರ್ಶಿಯನ್ ಅನ್ನು ಬಳಕೆಗೆ ತಂದನು. ಯುದ್ಧ ತಂತ್ರದಲ್ಲಿ ರಾಕೆಟುಗಳನ್ನು ಬಳಸಿದನು. ಈ ಸಂಗತಿಗಳು ನಿಜವೇ. ಆದರೆ ಹಿಂದಿದ್ದುದೇನು? ನಮಗೆ ತಿಳಿದಿಲ್ಲ[೩೯] ಎಂಬ ಪ್ರಶ್ನೆ ಈ ಲೇಖಕರದ್ದು. ಅವನ ಕುರಿತು ಸ್ಪಷ್ಟ ಇತಿಹಾಸ ರಚನೆಯಾಗಬೇಕು ಎಂಬುದು ಈ ಕವಿಯ ಆಶಯವೂ ಆಗಿದೆ.

ಕಲ್ಕುಳಿ ವಿಠಲ್ ಹೆಗಡೆ ಅವರು ಟಿಪ್ಪು ಸುಲ್ತಾನನ ಕಾರ್ಯಯೋಜನೆಗಳ ಹಿನ್ನೆಲೆಯಲ್ಲಿ ಚರಿತ್ರೆಯಲ್ಲಿ ಅವನ ಸ್ಥಾನ–ಗೌರವಗಳನ್ನು ಕುರಿತು ಚರ್ಚಿಸಿದ್ದಾರೆ. ಟಿಪ್ಪು ಎರಡು ನೂರು ವರ್ಷಗಳ ಹಿಂದೆ ಜಾರಿಗೆ ತಂದ ಕಡ್ಡಾಯ ಶಿಕ್ಷಣ, ಸಂಪೂರ್ಣ ಪಾನನಿಷೇಧ, ವೇಶ್ಯಾಟಿಕೆ ನಿರ್ಮೂಲನೆ, ಪಾಳೆಗಾರಿಕೆ ಮತ್ತು ಜಮೀನ್ದಾರಿ ಪದ್ಧತಿ ರದ್ದು, ಭೂ ಸುಧಾರಣೆ, ಬಿಟ್ಟಿ ಚಾಕರಿ ರದ್ದು, ದಲಿತರಿಗೆ ಮತ್ತು ಸೈನಿಕರಿಗೆ ಭೂಮಿ ಇನ್ನೂ ಹಲವು ಪ್ರಗತಿಪರ ಯೋಜನೆಗಳು ಇಂದಿಗೂ ಜಾರಿಗೆ ಬಂದಿಲ್ಲ.[೫೯] ಇಂಥ ಆದರ್ಶಮಯ ಕಾರ್ಯಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತಂದನು.

ಟಿ. ಆನಂದರಾಮನ್ ಅವರು ಟಿಪ್ಪು ವ್ಯಕ್ತಿತ್ವದ ಚರ್ಚೆಯಲ್ಲಿ ತಮ್ಮ ಅಭಿವ್ಯಕ್ತತೆ ನೀಡಿದ್ದಾರೆ. ಟಿಪ್ಪು ಮತಾಂಧನೂ ಆಗಿದ್ದ. ಅನೇಕ ಹಿಂದೂ ದೇವಾಲಯಗಳಿಗೆ ನೀಡಿದ ದತ್ತಿ ಶಾಸನಗಳು, ಶೃಂಗೇರಿ ಮಠಕ್ಕೆ ಬರೆದಿರುವ ಪತ್ರಗಳು ಕನ್ನಡದಲ್ಲಿವೆ. ಇದು ಅವನ ಕನ್ನಡ ಪ್ರೇಮದಿಂದ ಬರೆದುದ್ದಲ್ಲ. ಬ್ರಿಟಿಷರಿಂದ ತನ್ನನ್ನು ರಕ್ಷಿಸಿಕೊಳ್ಳಲು ಶೃಂಗೇರಿ ಜಗದ್ಗುರುಗಳ ಆಶೀರ್ವಾದ ಪಡೆಯಲು ನಡೆಸಿದ ತಂತ್ರ. ಬ್ರಿಟಿಷರನ್ನು ಭಾರತದಿಂದ ಓಡಿಸಿ ಸ್ವಾತಂತ್ರ್ಯ ಪಡೆಯುವುದೇ ಏಕೈಕ ಗುರಿಯಾಗಿದ್ದ ಸಂದರ್ಭದಲ್ಲಿ ಟಿಪ್ಪು ಅವರೊಡನೆ ಧೀರೋತ್ತರವಾಗಿ ಯುದ್ಧ ಮಾಡಿದ. ಆದರೆ ಅದರಲ್ಲಿ ಸೋತು ಕಪ್ಪ ಕಾಣಿಕೆ ನೀಡಿದನು. ತನ್ನ ಮಕ್ಕಳನ್ನೆ ಅವರೊಂದಿಗೆ ಕಳುಹಿಸಿದ ಪ್ರಕರಣ ಮಹತ್ವವಾಗಿ ಕಂಡಿತು. ರಾಜ್ಯದ ಜನತೆ ಹಾಡಿ ಹೊಗಳಿತು. 'ಮೈಸೂರು ಹುಲಿ' ಎಂದು ಕರೆಯಿತು. ಇನ್ನೊಂದು ಮುಖವಾದ ದೇವಾಲಯಗಳ ನಾಶ, ಕನ್ನಡದ ಬದಲು ಪರ್ಶಿಯನ್ ಜಾರಿಗೆ ತಂದನು. ನಗರಗಳ ಹೆಸರುಗಳನ್ನು ಪಾರಸೀಕರಣ ಮಾಡಿದ್ದು, ಅಂದಿನ ಸಂದರ್ಭದಲ್ಲಿ ಗೌಣವಾಗಿ ಬೆಳಕಿಗೆ ಬರಲೇ ಇಲ್ಲ.

ಒಬ್ಬ ವ್ಯಕ್ತಿಯ ಒಳ್ಳೆ ಗುಣಗಳನ್ನು ಒಪ್ಪಿಕೊಳ್ಳುವಂತೆಯೇ ಅವನ ಅವಗುಣಗಳನ್ನು ಸ್ವೀಕರಿಸಬೇಕು. ಇತಿಹಾಸ ಇರುವುದೇ ಹಿಂದಿನ ಆಗು–ಹೋಗುಗಳ ವಿಮರ್ಶೆಗಾಗಿ. ಯಾವುದೇ

ರಾಜಕೀಯ ಉದ್ದೇಶದಿಂದ ಯಾರನ್ನೂ ವೈಭವೀಕರಿಸದೆ ಚರಿತ್ರೆಯ ನಿಜ ಸಂಗತಿಗಳನ್ನು ತಿಳಿದುಕೊಂಡು ಹಿಂದಿನ ಅನಾಹುತಗಳು ಪುನರಾವರ್ತನೆಯಾಗದಂತೆ ನೋಡಿಕೊಳ್ಳುವುದು ಸೂಕ್ತ. ಟಿಪ್ಪು ಒಬ್ಬ ಮುಸ್ಲಿಂ ಜನಾಂಗದವನಾದ್ದರಿಂದ ಅವನ ಬಗೆಗಿನ ಟೀಕೆ ಮುಸ್ಲಿಂ ಜನಾಂಗದ ಬಗ್ಗೆ ಟೀಕೆ, ಅವಮಾನ, ವಿರೋಧ ಎಂದು ಭಾವಿಸಬಾರದು.[೬೦] ಅದು ಚರಿತ್ರೆಯಲ್ಲಿ ನಡೆದಿರಬಹುದಾದ ಒಂದು ಘಟನೆ ಎಂದು ಮಾತ್ರ ತಿಳಿಯಬೇಕು.

ಎಂ.ಆರ್.ನರಸಿಂಹನ್ ಟಿಪ್ಪು ಕುರಿತು ಪರಕೀಯರ ಅಧಿಕಾರ ಶಾಹಿಯನ್ನು ಪ್ರತಿಭಟಿಸಿದ ಮಾತ್ರಕ್ಕೆ ಆತ ಸ್ವದೇಶ ಪ್ರೇಮವೆಂದು ಹೇಗೆ ಪರಿಗಣಿಸಲು ಸಾಧ್ಯ? ತನ್ನ ಸ್ವಂತ ಲಾಭಕ್ಕೆ ಮತ್ತು ಬ್ರಿಟಿಷರ ಬಲವನ್ನು ಮುರಿಯುವ ಉದ್ದೇಶಕ್ಕಾಗಿ ಮಾತ್ರವೇ ಟಿಪ್ಪು ಮತ್ತೊಂದು ವಿದೇಶಿ ಶಕ್ತಿಗಳಾಗಿದ್ದ ಫ್ರೆಂಚರ ಸಹಾಯ ಪಡೆಯಲಿಲ್ಲವೇ? ಫ್ರೆಂಚರು ತಮ್ಮ ಆಳ್ವಿಕೆಯನ್ನು ಭಾರತದ ಮೇಲೆ ಹೇರಲು ತಾನೇ ಇಲ್ಲಿ ಸ್ವಾಸ್ಥ್ಯಗಳನ್ನು ಸ್ಥಾಪಿಸಿಕೊಂಡಿದ್ದು. ಹೀಗಿರುವಾಗ ಟಿಪ್ಪು ವಿದೇಶಿ ಶಕ್ತಿಗಳಿಗೆ ವಿರೋಧಿ ಆಗಿದ್ದ ಎಂದು ಹೇಗೆ ಪ್ರಗತಿಪರರು, ಇತಿಹಾಸಕಾರರು, ಮತೀಯವಾದಿಗಳು ನಿರ್ಧರಿಸುತ್ತಾರೆ.

ದೇಶದಲ್ಲಿ ಇಸ್ಲಾಮಿಕ್ ಪ್ರಭುತ್ವ ಸ್ಥಾಪಿಸಲು ಹೆಣಗಿದ. ಅದನ್ನು ಸಾಧಿಸಲು ಮೊದಲಿಗೆ ಬ್ರಿಟಿಷರನ್ನು ಸೋಲಿಸಬೇಕಾಗಿದ್ದರಿಂದ ಆತ ಮುಸಲ್ಮಾನ್ ರಾಷ್ಟ್ರಗಳಾದ ಪರ್ಷಿಯ, ಅಫ್ಘಾನಿಸ್ಥಾನ, ತುರ್ಕಿ, ಇರಾನ್ ರಾಷ್ಟ್ರಗಳ ಸಹಾಯ ಕೇಳಿದ. ತನಗೆ ಶರಣಾದ ಆಶ್ರಯಿಸಿದ ಕೊಚ್ಚಿಯ ರಾಜನನ್ನಾಗಲಿ, ಇತರರನ್ನಾಗಲಿ ಟಿಪ್ಪು ಆಪ್ತರಂತೆ ನಡೆಸಿಕೊಂಡ ಮಾತ್ರಕ್ಕೆ ಆತ ಹಿಂದೂಗಳ ಮಿತ್ರನಾಗಿದ್ದನೆಂದು ಭಾವಿಸುವುದು ತಪ್ಪಲ್ಲವೆ?

ಟಿಪ್ಪು ಮತಾಂಧ, ಕ್ರೂರಿ, ಮತದ್ವೇಷಿ ಎಂದೆಲ್ಲ ಹೇಳುವುದನ್ನು ಇತ್ತೀಚಿನ ಚರಿತ್ರೆಕಾರರು, ರಾಜಕಾರಣಿಗಳು ಅಲ್ಲಗಳೆಯುತ್ತಾ, ಆತ ಪರಮತ ಸಹಿಷ್ಣು, ಸ್ವಾತಂತ್ರ್ಯ ಯೋಧ ಎಂದೆಲ್ಲ ಪ್ರಶಂಸಿಸಲು ತೊಡಗಿದ್ದಾರೆ? ನಿಜಕ್ಕೂ ಆತ ಜನಪ್ರಿಯ ಆಡಳಿತಗಾರನಾಗಿದ್ದರೆ ಬಾಬರ್, ಅಕ್ಬರ್, ಹುಮಾಯೂನ್, ಷಹಜಹಾನ್, ಆದಿಲ್‌ಶಾಹಿ ಮುಂತಾದವರಂತೆ ಎಂದೋ ಚರಿತ್ರೆಯಲ್ಲಿ ಗೌರವದಿಂದ ಉಲ್ಲೇಖಿಸಲ್ಪಡುತ್ತಿದ್ದ? ಹೈದರಾಲಿ ಮುಸಲ್ಮಾನ ತಾನೇ ಅವನನ್ನೇಕೆ ಟಿಪ್ಪುವಿನಂತೆ ಕೆಟ್ಟವನೆಂದು ಇತಿಹಾಸಕಾರರು ದೂರಿಲ್ಲ. ಏಕೆಂದರೆ ಅವನ ಗುಣ–ನಡತೆಗಳು ಟಿಪ್ಪುವಿನಷ್ಟು ಹೀನಾಯವಾಗಿರಲಿಲ್ಲ. ಹಿಂದೂ ರಾಜ್ಯದ ಅಧಿಪತಿಯಾಗಿ ಹಿಂದೂಗಳನ್ನು ಹೀನಾಯವಾಗಿ ನಡೆಸಿಕೊಳ್ಳಲಿಲ್ಲ ತೆರಿಗೆ ವಿಧಿಸಲಿಲ್ಲ. ಟಿಪ್ಪುವಿನಂತೆ ರಾಜದ್ರೋಹಿಯಾಗಿರಲಿಲ್ಲ. ಟಿಪ್ಪು ಕೆಟ್ಟವನು ಎಂಬ ಆರೋಪ ಆತ ಮುಸಲ್ಮಾನ ಎನ್ನುವುದಕ್ಕಲ್ಲ. ಅವನು ಎಸಗಿದ ಕೃತ್ಯಗಳಿಗಾಗಿ ಎನ್ನುವುದನ್ನು ಯಾರೂ ಒಪ್ಪತಕ್ಕ ವಿಚಾರ[೬೧] ಎಂಬ ನಿಲುವು ಈ ಲೇಖಕರದು.

ಲಿಂಗದೇವರು ಹಳೇಮನೆ ಅವರು ತಮ್ಮ ಜನಪದರು ಕಂಡಂತೆ ಟಿಪ್ಪು, ಲಾವಣಿಗಳಲ್ಲಿ ಟಿಪ್ಪುವಿನ ಕಾರ್ಯವಿಶ್ಲೇಷಣೆ ಮಾಡಿದ್ದಾರೆ. ಚರಿತ್ರೆಕಾರರು ಟಿಪ್ಪುವನ್ನು ಕಂಡುಕೊಂಡ ರೀತಿ ಮತ್ತು ಜನಪದರು ತಮ್ಮ ಲಾವಣಿಗಳಲ್ಲಿ ಟಿಪ್ಪುವನ್ನು ಅರ್ಥೈಸಿದ ರೀತಿಯನ್ನು ಲೇಖಕರು ದಾಖಲಿಸಿದ್ದಾರೆ. ಟಿಪ್ಪುವಿನ ಚರಿತ್ರೆ ಲಿಖಿತ ರೂಪದಲ್ಲಿರುವುದು ವಿಚಿತ್ರವಾಗಿದೆ. ಅವನನ್ನು ದುಷ್ಟನೆಂದೂ, ರಾಕ್ಷಸನೆಂದೂ ಕೆಲವರು ಬಣ್ಣಿಸಿದರೆ, ರಾಷ್ಟ್ರೀಯವಾದಿ, ಆದರ್ಶ ಪುರುಷನೆಂದೂ ಕೆಲವರು ಬಣ್ಣಿಸಿದ್ದಾರೆ. ಬ್ರಿಟಿಷರು ತಾವು ಹೋದಲ್ಲೆಲ್ಲಾ ತಮ್ಮನ್ನು ವಿರೋಧಿಸಿದವರನ್ನು ದೈಹಿಕವಾಗಿ ಮುಗಿಸುವುದರ ಜೊತೆಗೆ ಸಾಂಸ್ಕೃತಿಕವಾಗಿಯೂ ಮುಗಿಸುತ್ತಾ ಬಂದಿದ್ದಾರೆ. ಅವರು ಎಲ್ಲೆಲ್ಲಿ ಸಾಮ್ರಾಜ್ಯ ವಿಸ್ತರಣೆಗಾಗಿ ಹೋರಾಡುತ್ತಿದ್ದರೊ ಅಲ್ಲೆಲ್ಲಾ ಕಾರಕೂನರನ್ನು ಕರೆದುಕೊಂಡು ಹೋಗುತ್ತಿದ್ದರು. ಈ ಕಾರಕೂನರುಗಳು ತಮ್ಮ ದಣಿಯ ಇಷ್ಟದಂತೆ ಬರೆಯುತ್ತಿದ್ದರು. ಕಾರಕೂನರು ಇಲ್ಲದ ಕಡೆ ಕರ್ನಲ್‌ಗಳೇ ಆ ಕೆಲಸ ಮಾಡುತ್ತಿದ್ದರು. ಅವರೆಲ್ಲಾ ಪ್ರಸಿದ್ಧ ಚರಿತ್ರೆಕಾರರಾಗಿ ಬಿಡುತ್ತಿದ್ದರು. ಟಿಪ್ಪುವಿನ ಬಗ್ಗೆ ಬರೆದ ಬೀಟ್‌ಸನ್, ಕಿರ್ಕ್‌ಪ್ಯಾಟ್ರಿಕ್, ಕರ್ನಲ್ ಮೆಕೆಂಜಿ, ಕರ್ನಲ್ ಮಾರ್ಕ್ ವಿಲ್ಕ್ಸ್ ಮುಂತಾದವರು ಚರಿತ್ರೆಕಾರರೆನಿಸಿದರು. ಇವರು ಟಿಪ್ಪುವನ್ನು ಕುರಿತು ಬರೆದ ಬರವಣಿಗೆಗಳು ವಸ್ತುನಿಷ್ಠವಾಗಿರದೆ ಬ್ರಿಟಿಷ್ ವಸಾಹತುಶಾಹಿ ಪರವಾಗಿಯೇ ಬರೆದಂತಿವೆ. ಅವನನ್ನು ಕ್ರೂರಿ, ದುಷ್ಟ, ಮತಾಂಧ ಎಂಬಂತೆ ಬಣ್ಣಿಸಿವೆ. ಆದರೆ ಲಾವಣಿಗಳು ಟಿಪ್ಪುವಿನ ನಿಜ ಸ್ವರೂಪವನ್ನು ಬಿಂಬಿಸುತ್ತವೆ. ಟಿಪ್ಪುವನ್ನು ಒಬ್ಬ ರಾಷ್ಟ್ರಪ್ರೇಮಿಯಾಗಿ, ಜನಾನುರಾಗಿಯಾಗಿ ಬಣ್ಣಿಸಿವೆ.

ಗಿರೀಶ್ ಕಾರ್ನಾಡ್ ಅವರಂಥ ಚಿಂತಕರೂ ಟಿಪ್ಪು ಸುಲ್ತಾನನ ವ್ಯಕ್ತಿತ್ವ ಕುರಿತು ನಡೆಯುತ್ತಿರುವ ನಿರಂತರ ವಾದ-ವಿವಾದದ ಚರ್ಚೆಗಳಲ್ಲಿ ತಮ್ಮದೇ ಅಭಿಪ್ರಾಯ ನೀಡಿದ್ದಾರೆ. ಟಿಪ್ಪು ಏನೇನು ಮಾಡಿದ ಎಂಬ ಶೀರ್ಷಿಕೆಯಡಿಯಲ್ಲಿ ಟಿಪ್ಪುವಿನ ರಾಷ್ಟ್ರಪ್ರೇಮ, ಸ್ವಾತಂತ್ರ್ಯ ಪ್ರಿಯತೆ, ಅಭಿವೃದ್ಧಿ ಚಿಂತನೆಗಳನ್ನು ಬಿಂಬಿಸಿದ್ದಾರೆ. ಕೃಷಿವಲಯ, ಕೈಗಾರಿಕೆ, ವ್ಯಾಪಾರ-ವಾಣಿಜ್ಯ ಅಂತರ್ದೇಶಿ ಸಂಬಂಧಗಳನ್ನು ಪ್ರಧಾನವಾಗಿ ಚರ್ಚಿಸಿದ್ದಾರೆ. ಮಲಬಾರಿ ರೇಷ್ಮೆ ಕೃಷಿ ಮೈಸೂರಿಗೆ ಪರಿಚಯಿಸಿದ. ಕೈಗಡಿಯಾರ, ಕತ್ತರಿ ಮುಂತಾದ ಸಲಕರಣೆಗಳ ಕಾರ್ಖಾನೆಗಳನ್ನು ಸ್ಥಾಪಿಸಿದ. ರಾಕೆಟ್ ಬಳಕೆ ಸಾಧ್ಯತೆಗಳನ್ನು ಆತ ಪರೀಕ್ಷಿಸಿ ಪ್ರಯೋಗಿಸಿದ. ರಾಜ್ಯದಲ್ಲಿ ನೆಡುತೋಪುಗಳನ್ನು ಕಾರ್ಯರೂಪಕ್ಕೆ ತಂದ. ಪ್ರಾನ್ಸಿಗೆ ರಾಯಬಾರ ನಿಯೋಗ ಕಳುಹಿಸಿ ಅವರೊಂದಿಗೆ ಒಬ್ಬ ವೈದ್ಯ, ಶಸ್ತ್ರ ಚಿಕಿತ್ಸಕ, ಬಡಗಿ, ನೇಕಾರ, ಅಕ್ಕಸಾಲಿಗ ಮುಂತಾದ ಕುಶಲಕರ್ಮಿಗಳನ್ನು ಕರೆತರುವಂತೆ ಆಜ್ಞಾಪಿಸಿದ. ಇಂಥ ಹೊಸ ಆವಿಷ್ಕಾರಗಳನ್ನು ನಡೆಸಿದ ಟಿಪ್ಪು ರಾಜ್ಯವನ್ನು ಅಭಿವೃದ್ಧಿ ಕಡೆಗೆ ಕೊಂಡೊಯ್ದ.[೬೩] ಆದರೂ ಕೆಲವು ಚರಿತ್ರೆಕಾರರೂ ಟಿಪ್ಪುವನ್ನು ಮತದ್ವೇಷಿ, ಕ್ರೂರಿ, ದೇಶದ್ರೋಹಿ ಎಂದು ಸಮರ್ಥಿಸಲು ಹೊರಟಿರುವುದು ಆಕ್ಷೇಪಾರ್ಹ ಸಂಗತಿ ಹಾಗೂ ತೇಜೋವಧೆ ಕೂಡ.

ನಮ್ಮ ಬುದ್ಧಿಜೀವಿಗಳು, ನಾಟಕಕಾರರು ಪೂರ್ವಗ್ರಹ ಪೀಡಿತರಾಗಬಾರದು. ನಮ್ಮ ನಾಟಕಕಾರರು ಟಿಪ್ಪುವಿನ ಬಗ್ಗೆ ಅನೇಕ ಪುಸ್ತಕ ಓದಿರುವುದಾಗಿ ಹೇಳಿದ್ದಾರೆ. ಆದರೆ ಟಿಪ್ಪುವಿನ ಜನಪರ ಯೋಜನೆಗಳು, ಮತಸಹಿಷ್ಣುತೆ, ಸ್ವಾತಂತ್ರ್ಯ ಪ್ರೇಮ ಮೊದಲಾದ ಅಂಶಗಳು ಗಮಕ್ಕೆ ಬರಲಿಲ್ಲವೆ? ಟಿಪ್ಪುವಿನ ಚಿತ್ರಣ ನೀಡುವಾಗ ಪೂರ್ವಾಗ್ರಹ ಪೀಡಿತರಾಗದೆ ಸಂಗತಿಗಳನ್ನು ನಾಲ್ಕು ಕಡೆಯಿಂದ ದೃಷ್ಟಿಸಿ ಮೌಲ್ಯಮಾಪನ ಮಾಡಿ ಚರಿತ್ರೆಯನ್ನು ದಾಖಲಿಸಬೇಕು ಎನ್ನುವುದು ಕಾರ್ನಾಡರ ನಿಲುವು.

೨.೪. ಪ್ರಗತಿಪರರು

ಟಿಪ್ಪು ಸುಲ್ತಾನನ ಚರಿತ್ರೆ ಮತ್ತು ಅವನ ವ್ಯಕ್ತಿತ್ವ ಕುರಿತು ಇತ್ತೀಚೆಗೆ ಸಾಕಷ್ಟು ಚರ್ಚೆಗಳು ಹುಟ್ಟಿಕೊಂಡಿವೆ. ಟಿಪ್ಪು ಮತಾಂಧ, ಸ್ವಧರ್ಮಿ, ಕನ್ನಡ ವಿರೋಧಿ ಮುಂತಾದ ವಿಚಾರಗಳನ್ನು ಕುರಿತು ಚರ್ಚೆಗಳು ನಡೆಯುತ್ತಲೇ ಇವೆ. ಟಿಪ್ಪು ಚರಿತ್ರೆ ಮತ್ತು ವ್ಯಕ್ತಿತ್ವ ಕುರಿತು ಚರಿತ್ರೆಕಾರರು, ಸಾಹಿತಿಗಳು, ಪ್ರಗತಿಪರ ಚಿಂತಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ನೀಡಿದ್ದಾರೆ. ಟಿಪ್ಪುವಿನ ಪರ–ವಿರೋಧ ಎಂಬಂತೆ ಅಭಿವ್ಯಕ್ತತೆಗಳು ಮೂಡಿಬಂದಿವೆ. ಟಿಪ್ಪು ದೇಶದ್ರೋಹಿ, ಭಾಷಾ ವಿರೋಧಿ, ಧರ್ಮಾಂಧ, ಹಿಂದೂ ವಿರೋಧಿ, ಸ್ವಾತಂತ್ರ್ಯವೀರ ಮುಂತಾದ ನೆಲೆಯಲ್ಲಿಯೇ ಹೆಚ್ಚು ಚರ್ಚೆಗಳು ನಡೆಯುತ್ತಿವೆ. ಇಂಥ ಚರ್ಚೆಯಲ್ಲಿ ಪ್ರಗತಿಪರ ಚಿಂತಕರುಗಳು ತಮ್ಮ ಸೂಕ್ಷ್ಮ ಗ್ರಹಿಕೆಗಳನ್ನು ಹೊರಗೆಡಹಿದ್ದಾರೆ.

ರಹಮತ್ ತರೀಕೆರೆ ಅವರು ಟಿಪ್ಪು ಮತ್ತು ಕನ್ನಡ ದ್ರೋಹ ಎಂಬ ಶೀರ್ಷಿಕೆಯಡಿ ಬರೆದ ಲೇಖನದಲ್ಲಿ ಟಿಪ್ಪು ಕುರಿತು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಟಿಪ್ಪು ಬ್ರಿಟಿಷರ ವಿರುದ್ಧ ಮಾಡಿದ ಹೋರಾಟಗಳು, ಮಕ್ಕಳನ್ನು ಒತ್ತೆಯಿಟ್ಟಿದ್ದು, ರಣರಂಗದಲ್ಲಿ ಮಡಿದಿದ್ದು ಅವನು ಮಾಡಿದ ಭೂಸುಧಾರಣೆಗಳು; ಆಧುನಿಕ ರಾಜ್ಯವನ್ನು ಕಟ್ಟಲು ಇಟ್ಟುಕೊಂಡಿದ್ದ ಯೋಜನೆಗಳೂ, ಪೇಶ್ವೆಗಳು ಶೃಂಗೇರಿ ಮಠವನ್ನು ಲೂಟಿ ಮಾಡಿದಾಗ ಟಿಪ್ಪು ದತ್ತಿಗಳನ್ನು ಕೊಡಮಾಡಿದ್ದು ಗುರುಗಳಿಗೆ ಬರೆದ ಪತ್ರ, ನಂಜನಗೂಡಿನಲ್ಲಿ ಪಂಚಲಿಂಗವನ್ನು ಸ್ಥಾಪಿಸಿದ್ದು ಅವನ ಅಧಿಕಾರಿಗಳಲ್ಲಿ ದಿವಾನ ಪೂರ್ಣಯ್ಯ ಸೇರಿ ಬಹುತೇಕ ಉನ್ನತ ಅಧಿಕಾರಿಗಳು ಹಿಂದೂಗಳ ಕೈಯಲ್ಲಿದ್ದುದು. ತನ್ನ ಶತ್ರುಗಳನ್ನು ಅವರು ಮುಸ್ಲಿಮರಾಗಿದ್ದರೂ ಕ್ರೂರವಾಗಿ ಶಿಕ್ಷಿಸುತ್ತಿದ್ದುದು ಅವನು ಹೊರಡಿಸಿದ ಕನ್ನಡದಲ್ಲಿರುವ ನೂರಾರು ಫರ್ಮಾನುಗಳು. ಟಿಪ್ಪುವಿನ ಈ ಕಾರ್ಯವಿಧಾನಗಳ ಮೂಲಕ ಉತ್ತರ ಕೊಟ್ಟರೂ ಅದು ಟಿಪ್ಪುವಿನ ಸಮರ್ಥನೆಯ ದಾಟಿಯಾಗುತ್ತದೆ. ಸಂಘ ಪರಿವಾರಕ್ಕೆ ಸಮಾಧಾನ ಕೊಡುವುದಿಲ್ಲ. ಅವರು ಚರಿತ್ರೆಯನ್ನು ಇನ್ನೂ ಅಳಕ್ಕೆ ಅಗೆದು ಟಿಪ್ಪುವಿನ ದುಷ್ಟತನದ ಬಗ್ಗೆ ಮತ್ತಷ್ಟು ನಿದರ್ಶನಗಳನ್ನು ಹೆಕ್ಕಿ ಮುಂದಿಡುತ್ತಾರೆ.[೬೪]

ಸುರೇಂದ್ರ ದಾನಿ ಅವರು ಟಿಪ್ಪು ಚರ್ಚೆ ಪ್ರಸ್ತುತವೇ? ಎಂಬ ಪ್ರಶ್ನೆಯನ್ನು ಹಾಕಿಕೊಂಡು ಟಿಪ್ಪುವಿನ ವ್ಯಕ್ತಿತ್ವದ ಚಿತ್ರಣ ಮುಂದಿಟ್ಟದ್ದಾರೆ. ಟಿಪ್ಪು ಕನ್ನಡ ಅಭಿಮಾನಿಯಾಗಿದ್ದನೇ? ಇಲ್ಲವೇ? ಕನ್ನಡ ದ್ರೋಹಿಯೇ? ಈ ವಿಚಾರಗಳನ್ನು ಕುರಿತು ಇಂದು ಚರ್ಚಿಸುವುದು ತೀರ ಅಪ್ರಸ್ತುತ. ಎರಡುವರೆ ಶತಮಾನಗಳು ಹಿಂದೆ ಹೋಗಿರುವುದನ್ನು ಇಂದಿನ ಅಳತೆಗೋಲಿನಿಂದ ಅಳೆಯುವುದು ಮತ್ತು ತೀರ್ಮಾನ ಕೊಡುವುದು ಮಹಾ ಅನ್ಯಾಯ? ಅವನು ಕನ್ನಡ ದ್ರೋಹಿ ಎಂಬ ಹಣೆಪಟ್ಟಿಗೆ ಯೋಗ್ಯನಾಗುವನೇ? ಅದಕ್ಕೂ ಪ್ರಜಾರಾಜ್ಯ, ಜನರ ಆಡಳಿತ ಸಾಮಾನ್ಯರ ಭಾಷೆ ಇದೆಲ್ಲ ಮಾತು ಮತ್ತು ವಿಚಾರಗಳು ತೀರಾ ಇತ್ತೀಚಿನದು. ಹಿಂದೆಲ್ಲ ರಾಜಸತ್ತೆಯೇ ಎಲ್ಲ ಕಡೆಗೂ ರೂಢಿಯಲ್ಲಿತ್ತು. ಟಿಪ್ಪು ಕೆಲವರಿಗೆ ಉರ್ದುವಿನಲ್ಲಿ ಪತ್ರ ಬರೆದರೆ ಇನ್ನೂ ಕೆಲವರಿಗೆ ಕನ್ನಡದಲ್ಲಿ ಬರೆದ ಅವನಿಗೆ ತನ್ನ ಕೆಲಸವಾಗುವ ಪ್ರಶ್ನೆ ಮಹತ್ವದ್ದಾಗಿತ್ತೇ ಹೊರತು ತನ್ನ ಭಾಷಾಭಿಮಾನ ಅಲ್ಲ.

ಟಿಪ್ಪು ಕನ್ನಡ ಅಭಿಮಾನಿಯಾಗಿದ್ದನೋ, ದ್ರೋಹಿಯಾಗಿದ್ದನೋ ಎಂಬ ವಿಚಾರಗಳಿಂದ ಕನ್ನಡದ ಭವಿಷ್ಯದ ಮೇಲೆ ಯಾವುದೇ ಪರಿಣಾಮ ಉಂಟಾಗಬೇಕಿಲ್ಲ. ಅದು ಪ್ರಚಲಿತ ವಿಚಾರ ಪ್ರಣಾಲಿಯ ಸ್ವರೂಪವನ್ನು ಅನಾವಶ್ಯಕವಾಗಿ ಕೆಡಿಸಲು ಮಾತ್ರ ನೆರವಾಗಬಹುದು.[೬೫]

ನೀಲತ್ತಹಳ್ಳಿ ಕಸ್ತೂರಿ ಎಂಬ ಪ್ರಗತಿಪರ ಚಿಂತಕರು ಟಿಪ್ಪುವಿನ ಚರ್ಚೆ ಕುರಿತು ಟಿಪ್ಪು ಕನ್ನಡ ದ್ರೋಹಿಯೂ ಅಲ್ಲ ಕನ್ನಡ ಪರನೂ ಅಲ್ಲ, ಕೇವಲ ಅಧಿಕಾರ ಲಾಲಾಸೆಯಿದ್ದ ಒಬ್ಬ ದೊರೆ. ಅಧಿಕಾರದ ಉಳಿವಿಗಾಗಿ ಎಲ್ಲ ತಂತ್ರ ಮಾಡುತ್ತಿದ್ದ.[೬೬] ಎಲ್ಲ ಅರಸರೂ ಮಾಡಿದ್ದೇ ಇವನೂ ಮಾಡಿದ ಎಂದಿದ್ದಾರೆ.

ಸಿ.ಎನ್.ರಾಮಚಂದ್ರನ್ ಅವರು ಟಿಪ್ಪು ಕುರಿತು ಕನ್ನಡ, ಇಂಗ್ಲಿಷ್ ಮತ್ತು ಇತರ ಭಾಷೆಗಳಲ್ಲಿ ಟಿಪ್ಪು ಬಗೆಗೆ ಹಲವು ನಾಟಕ, ಕಾದಂಬರಿಗಳು, ಚರಿತ್ರೆಗಳು, ಆತ್ಮಕಥನಗಳು ಪ್ರಕಟವಾಗಿವೆ. ಟಿಪ್ಪು ವ್ಯಕ್ತಿತ್ವದ ಬಗೆಗೆ ಇದಮಿತ್ಥಂ ಎಂಬ ಗ್ರಹಿಕೆ ಸಾಧ್ಯವಾಗಿಲ್ಲ. ಈಗ ನಾವು ವಿದ್ವಾಂಸರು ಒಪ್ಪುವ ಸಂಗತಿಗಳನ್ನು ದಾಖಲಿಸಿ ಅನಂತರ ಮುಂದುವರೆಯುತ್ತೇವೆ. ಟಿಪ್ಪು ಅಸಾಮಾನ್ಯ ವೀರ ಮತ್ತು ರಣನೀತಿಯಲ್ಲಿ ಪಾರಂಗತ. ಅವನ ರಣನೀತಿ ಎಷ್ಟು ಪ್ರಬಲವಾಗಿತ್ತೆಂದರೆ "ತನ್ನ ಸೈನ್ಯದ ಶೀಘ್ರ ಚಲನೆಯಿಂದ ಮತ್ತು ಹಠಾತ್ತನೆ ಯುದ್ಧ ಭೂಮಿಯನ್ನು ತನ್ನ ಚಾತುರ್ಯದಿಂದ ಬ್ರಿಟಿಷ್ ಸೇನಾಪತಿಗಳನ್ನು ದಿಗ್ಭ್ರಮೆಗೊಳಿಸುತ್ತಿದ್ದ. ಅವನಿಗೆ ಸಮಕಾಲೀನ ಯುರೋಪಿನಲ್ಲಾಗುತ್ತಿದ್ದ ಸಂಶೋಧನೆ ಮತ್ತು ಆವಿಷ್ಕಾರಗಳನ್ನು ಕುರಿತು ಅಪಾರ ಆಸಕ್ತಿಯಿತ್ತು. ಎಲ್ಲವನ್ನು ಪ್ರಯೋಗ ಮಾಡಿ ನೋಡುವ ವೈಜ್ಞಾನಿಕ ದೃಷ್ಟಿಕೋನವಿತ್ತು.[೬೭] ಅಕ್ಬರ್‌ನನ್ನು ನೆನಪಿಸುವ ಕುತೂಹಲ ಮತ್ತು ಚಿಕಿತ್ಸಕ ಬುದ್ಧಿ ಅವನಿಗಿತ್ತು ಎನ್ನುತ್ತಾರೆ.

ಜಿ.ರಾಮಕೃಷ್ಣ ಅವರು ಟಿಪ್ಪು ಕುರಿತು ಸತ್ಯಶೋಧನೆ ಮತ್ತು ವ್ಯಗ್ರತೆಯ ಅಭಿವ್ಯಕ್ತಿ ಎಂಬ ಲೇಖನದಲ್ಲಿ ಟಿಪ್ಪುವಿನ ವಿಚಾರಪರತೆ, ಧಾರ್ಮಿಕ ಮನೋಭಾವ, ಭಾಷಾಭಿಮಾನ, ಅಭಿವೃದ್ಧಿ ಪರವಾದ ಚಿಂತನೆ, ರಾಜ್ಯದ ಸ್ವಾತಂತ್ರ್ಯದ ಅಭೀಪ್ಸೆ ಮುಂತಾದ ವಿಚಾರಗಳನ್ನು ಕುರಿತು ಚರ್ಚಿಸಿದ್ದಾರೆ. ದೆಹಲಿಯ ರಾಷ್ಟ್ರೀಯ ಪತ್ರಾಗಾರದಲ್ಲಿ ಅಂದಿನ ಮೈಸೂರು ಸೀಮೆಯ ಕಾಡುಗಳಲ್ಲಿ ಬ್ರಿಟಿಷರು ಮರಗಳನ್ನು ಮನಬಂದಂತೆ ಕೆಡವಕೂಡದೆಂಬ ನಿರ್ಬಂಧ ಹೇರುವ ಒಪ್ಪಂದದ ಪ್ರತಿಯನ್ನು ಉದಾರಿಸುತ್ತ ಇಂಥ ಒಪ್ಪಂದದ ವಿಧಿಗಳನ್ನು ರೂಪಿಸಿ ಅನುಷ್ಠಾನಗೊಳಿಸಿದವನು ಟಿಪ್ಪುಸುಲ್ತಾನ್. ಹಡಗುಗಳ ನಿರ್ಮಾಣಕ್ಕೆಂದು ಮನಬಂದಂತೆ ಕಾಡುಗಳನ್ನು ಕಡಿದು ಹಾಕುವುದು ಬ್ರಿಟಿಷರ ಹುನ್ನಾರವಾದರೆ ಕಾವೇರಿ ನದಿಯ ಇಕ್ಕೆಲಗಳಲ್ಲಿ ಎಲ್ಲೂ ಮರಗಳನ್ನು ಕಡಿಯಕೂಡದೆಂದು ಟಿಪ್ಪು ಸುಲ್ತಾನ್ ಆಜ್ಞಾಪಿಸಿದನೆಂದು ಹೇಳಲಾಗಿದೆ.[೬೮] ಕನ್ನಡ ನಾಡಿನ ಸಂಪತ್ತು ಪರರು ಕೊಳ್ಳೆ ಹೊಡೆಯಲು ಸಾಧ್ಯವಾಗಕೂಡದೆಂಬ ತಿಳುವಳಿಕೆ ಅವನಲ್ಲಿತ್ತು.

ಟಿಪ್ಪು ಕನ್ನಡನಾಡಿನ ಎಲ್ಲೆಗಳನ್ನು ವಿಸ್ತರಿಸಿದನೆಂದು ಹೆಮ್ಮೆ ಪಟ್ಟುಕೊಳ್ಳುವುದು ನನಗೆ ಅಪಥ್ಯವೆನಿಸುತ್ತದೆ ಎಂಬ ಅಭಿಪ್ರಾಯ ಲೇಖಕರದು. ಅದಕ್ಕೆ ಉತ್ತರವೆಂಬಂತೆ ಹೊಸ ಪ್ರದೇಶಗಳ ಜನ ಇದನ್ನು ಸ್ವಾಗತಿಸಲಾರರು. ಬೇರೆ ರಾಜ್ಯಗಳ ರಾಜಪಟುಗಳನ್ನು ರಾಜಕೀಯ ಮತ್ತು ಹಣದ ಕಾರಣಗಳಿಗೆ ಮತ್ತು ರಾಜ್ಯದಿಂದ ರಾಜ್ಯಸಭೆಗೆ ಚುನಾಯಿಸಿ ಕಳುಹಿಸುವ ನಾವು ಟಿಪ್ಪು ಬಗ್ಗೆ ಅಸಹ್ಯ ಪಡುವಂಥದ್ದು ಕನ್ನಡ ಹಾಗೂ ಕನ್ನಡ ಜನರ ಬಗೆಗಿನ ಪ್ರೀತಿಯ ದ್ಯೋತಕ ವಾಗುವುದಿಲ್ಲ. ಟಿಪ್ಪುವಿನ ಪತನವು ಬ್ರಿಟನ್ನಿನ ಆಡಳಿತವನ್ನು ಸುಗಮಗೊಳಿಸಿದೆ. ಅಧಿಪತ್ಯವು ಭದ್ರವಾದ ನೆಲೆಯಲ್ಲಿ ಬೇರೂರಿದೆ. ಟಿಪ್ಪು ಬ್ರಿಟಿಷರಿಗೆ ಶರಣಾಗಿದ್ದರೆ ಕನ್ನಡ ನಾಡನ್ನು ಮಾತ್ರವಲ್ಲದೆ ಅವನು ಗೆದ್ದಿದ್ದ ಪ್ರದೇಶಗಳನ್ನೂ ಆಳಿಕೊಂಡು ನೂರ್ಕಾಲ ಬದುಕ ಬಹುದಾಗಿತ್ತು. ಕನ್ನಡ ನಾಡಿನ ಅಬ್ಬಕ್ಕ, ಕಿತ್ತೂರುರಾಣಿ ಚೆನ್ನಮ್ಮ ಇವರ ಸಮಕ್ಕೆ ನಿಲ್ಲಬಲ್ಲ[೬೯] ವ್ಯಕ್ತಿ ಟಿಪ್ಪು ಸುಲ್ತಾನ್.

ಮಹಮದ್ ಷೌಕತ್ ಆಲಿ ಅವರು ಟಿಪ್ಪು ಕುರಿತು ಬದ್ಧದ್ವೇಷಿಗಳಾದ ಬ್ರಿಟಿಷ್ ಚರಿತ್ರೆಕಾರರು ದೇಶೀಯ ರಾಜರುಗಳ ಮೇಲೆ ಹೇರಿದ ಅಪವಾದಗಳ ಬಲಿಗೆ ಸಿಲುಕಿದವರಲ್ಲಿ ಟಿಪ್ಪು ಸುಲ್ತಾನನು ಪ್ರಮುಖ ಎಂದಿದ್ದಾರೆ. ಅವರನ್ನೂ ಕ್ರೂರಿ, ಮತಾಂಧನೆಂದೂ ಬಣ್ಣಿಸಲಾಗಿದೆ. ಆದರೆ ಟಿಪ್ಪು ಸುಲ್ತಾನರ ಹೃದಯದಲ್ಲಿ ಪ್ರತಿಯೊಂದು ಧರ್ಮ ಮತ್ತು ಜನಾಂಗದ ಬಗ್ಗೆ ಗೌರವವಿತ್ತು. ಶ್ರೀರಂಗಪಟ್ಟಣ ಮತ್ತು ಬೆಂಗಳೂರಿನಲ್ಲಿರುವ ಟಿಪ್ಪು ಅರಮನೆಗಳಿಗೆ ಹೆಚ್ಚು ಕಡಿಮೆ ಅಂಟಿಕೊಂಡೇ ಅನೇಕ ದೇವಾಲಯಗಳಿವೆ. ಶ್ರೀರಂಗಪಟ್ಟಣದ ಶ್ರೀರಂಗನಾಥ ಸ್ವಾಮಿ, ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಾಲಯಗಳಿಗೆ ಅತ್ಯಮೂಲ್ಯ ಚಿನ್ನ, ಬೆಳ್ಳಿಯ ಆಭರಣ,

ಪೂಜೋಪಕರಣ, ಪಾತ್ರೆಗಳನ್ನು ದಾನ ಮಾಡಿದರು. ಟಿಪ್ಪುವಿನ ಸರಕಾರವು ಮಸೀದಿ, ದರ್ಗಾ ಮುಂತಾದ ಇಸ್ಲಾಮಿಕ್ ಧಾರ್ಮಿಕ ಸಂಸ್ಥೆಗಳಿಗಿಂತ ಹಿಂದೂ ಧಾರ್ಮಿಕ ಸಂಸ್ಥೆಗಳಿಗೆ ಹೆಚ್ಚು ಸಹಾಯ ಮಾಡುತ್ತಿತ್ತು. ಹಿಂದೂಗಳಿಗೆ ಉನ್ನತ ಹುದ್ದೆಗಳನ್ನು ನೀಡಲಾಗಿತ್ತು. ಪೂರ್ಣಯ್ಯ ಸುಲ್ತಾನರ ಆರ್ಥಿಕ ಮಂತ್ರಿಯಾಗಿದ್ದರು. ಅಂಚೆ ಶಾಮಯ್ಯ ಅಂಚೆ ಇಲಾಖೆ ಮುಖ್ಯಾಧಿಕಾರಿಯಾಗಿದ್ದರು. ಒಡೆಯರ ಗೌರವ–ಸ್ಥಾನ, ಸನ್ಮಾನಗಳನ್ನು ಹಾಗೆ ಉಳಿಸಿಕೊಂಡು ಬಂದವರು ಸುಲ್ತಾನರು.[೨೦]

ಟಿಪ್ಪು ಶೃಂಗೇರಿ ಮಠದ ಶ್ರೀ ಶಂಕರಾಚಾರ್ಯರಿಗೆ ಬರೆದ ಪತ್ರಗಳು ಕನ್ನಡದಲ್ಲಿವೆ. ಸ್ವಾಮಿಗಳ ಪತ್ರಗಳಿಗೆ ಉತ್ತರ ಕೊಡುತ್ತಾ ತನ್ನ ದೇಶಕ್ಕೊಂದೇ ಅಲ್ಲದೇ ಇಡೀ ಲೋಕಕಲ್ಯಾಣಕ್ಕಾಗಿ ದೇವರನ್ನು ಕುರಿತು ತಪಸ್ಸು ಮಾಡಬೇಕೆಂದು ಬೇಡಿಕೊಂಡನು. ಟಿಪ್ಪು ದೊಡ್ಡ ದಾನಶೂರನಾಗಿ ಹಿಂದೂ ದೇವಾಲಯಗಳಿಗೆ ಜಹಗೀರುಗಳನ್ನು ಉಡುಗೊರೆಯಾಗಿ ನೀಡಿದನು ಇದು ಸುಲ್ತಾನನ ಪರಧರ್ಮ ಸಹಿಷ್ಣತೆಗೆ ಸಾಕ್ಷಿಯಾಗಿದೆ. ಟಿಪ್ಪು ರಾಷ್ಟ್ರಕ್ಕಾಗಿ ಅಸುನೀಗಿದ ಒಬ್ಬ ಹುತಾತ್ಮ. ಭಾರತವು ಇವರಂತಹ ಒಬ್ಬ ಉನ್ನತ ಹುತಾತ್ಮನನ್ನು ಆ ಹಿಂದೆ ಎಂದೂ ಪಡೆದಿರಲಿಲ್ಲ.[೨೧] ಅವನು ಸ್ವಾತಂತ್ರ್ಯಕ್ಕಾಗಿ ಖಡ್ಗ ಹಿಡಿದು ಹೋರಾಡಿ ವೀರಮರಣವಪ್ಪಿದ. ವಿದೇಶಿ ಶತ್ರುವಿನ ಒಡೆತನವನ್ನು ಅಂಗೀಕರಿಸಲು ಸ್ಪಷ್ಟವಾಗಿ ನಿರಾಕರಿಸಿದ.

ವಿ.ಸತ್ಯನಾರಾಯಣ ಎಂಬ ಪ್ರಗತಿಪರ ಚಿಂತಕರು ಟಿಪ್ಪುವಿನ ವ್ಯಕ್ತಿತ್ವ ಆಡಳಿತ ಪ್ರಯೋಗ ಗಳನ್ನು ಚರ್ಚಿಸಿದ್ದಾರೆ. ಟಿಪ್ಪುವಿನ ದೇಶಭಕ್ತಿ ಅತ್ಯಂತ ಅಮೂಲ್ಯವಾದುದು. ಮೈಸೂರಿನ ರಾಜಕೀಯ ಗಗನದಲ್ಲಿ ಇವನು ದ್ರುವತಾರೆಯಂತೆ. ಅವನ ಆಡಳಿತದ ಅವಧಿ ಅಲ್ಪವಾದರೂ ಕೈಗೊಂಡ ಪ್ರಗತಿಪರ ಯೋಜನೆಗಳು ಬಹು ಶ್ಲಾಘನೀಯವಾದವು. ನೆಪೊಲಿಯನ್‌ಗೆ ಬರೆದ ಒಂದು ಪತ್ರದಲ್ಲಿ ಟಿಪ್ಪು ತನ್ನನ್ನು ಇಂಡಿಯಾ ಗಣರಾಜ್ಯದ ಪ್ರಥಮ ಪ್ರಜೆಯೆಂದು ಬರೆದುಕೊಂಡಿದ್ದಾನೆ. ಕೊನೆಗೆ ಮೃತ್ಯುಮುಖದಲ್ಲಿ ಹೆದರದೆ ನಿಂತು ಹೋರಾಟ ನಡೆಸಿದನು. ಈ ಘಟನೆಗಳು ಅವನ ಉತ್ತಮ ರಾಜಕಾರಣ, ದೇಶಭಕ್ತಿ, ದೂರದೃಷ್ಟಿಯ ಸಂಕೇತಗಳಾಗಿವೆ.

ಟಿಪ್ಪುವಿಗೆ ಹಿಂದೂ ಧರ್ಮದ ಮೇಲೆ ಅಪಾರ ಗೌರವವಿತ್ತೆಂಬುದಕ್ಕೆ ಟಿಪ್ಪು ಮೂರನೇ ಶ್ರೀ ಸಚ್ಚಿದಾನಂದ ಭಾರತಿಗಳ ನಡುವಿನ ಪತ್ರಗಳ ವಿನಿಮಯ ಸಾಕ್ಷಿಯಾಗಿವೆ. ಶಿವಗಂಗಾ ಮಠಕ್ಕೆ ಟಿಪ್ಪುವಿನ ಕೊಡುಗೆಗಳೇ ಸಾಕ್ಷಿ. ಶಿವಗಂಗಾ ಮಠದ ಜಗದ್ಗುರುಗಳಾದ ಶ್ರೀ ಗಂಗಾಧರ ಭಾರತಿ(ಕ್ರಿ.ಶ.೧೭೩೮–೮೪) ಅವರನ್ನು ಟಿಪ್ಪು–ಶ್ರೀರಂಗಪಟ್ಟಣಕ್ಕೆ ಆಹ್ವಾನಿಸಿದ್ದ. ಹೈದರಾಬಾದಿನ ನಿಜಾಮ ಮತ್ತು ಮರಾಠರು ಟಿಪ್ಪುವನ್ನು ಸೋಲಿಸಲು ಸದಾ ಪ್ರಯತ್ನಿಸುತ್ತಿದ್ದರು. ಟಿಪ್ಪುವಿಗೆ ದೈವೀ ಕೃಪೆಯ ಅವಶ್ಯವಿತ್ತು. ಇದಕ್ಕಾಗಿ ಅವನು ಶೃಂಗೇರಿಯ ಶ್ರೀ ಶಾರದಾಂಬೆಯ ಕೃಪೆಯು

ಅವಶ್ಯವಿತ್ತು. ಅವನು ಶೃಂಗೇರಿಯ ಶ್ರೀ ಶಾರದಾಂಬೆಯ ಪ್ರಸಾದ ಮತ್ತು ಮಂತ್ರಾಕ್ಷತೆಯನ್ನು ಕಳುಹಿಸುವಂತೆ ಗುರುಗಳಲ್ಲಿ ಬೇಡಿಕೊಂಡು[೬೨] ತಾನು ಉಡುಗೊರೆ ನೀಡಿದ. ಟಿಪ್ಪು ತಾನು ದೇವರ ದಯೆ, ಜಗದ್ಗುರುಗಳ ಆಶೀರ್ವಾದ ಹಾಗೂ ಶಸ್ತ್ರಾಸ್ತ್ರಗಳ ಸಾಮರ್ಥ್ಯ ಈ ಮೂರು ಶಕ್ತಿಗಳ ಮೇಲೆ ಅವಲಂಬಿತನಾಗಿದ್ದೇನೆ ಎಂದು ಶೃಂಗೇರಿ ಜಗದ್ಗುರುಗಳಿಗೆ ಪತ್ರ ಬರೆದಿದ್ದಾನೆ.[೬೩] ಟಿಪ್ಪುವಿಗೆ ಹಿಂದೂ ಧರ್ಮ ಮತ್ತು ಸಂಸ್ಕೃತಿ ಬಗೆಗೆ ಅಪಾರ ಔದಾರ್ಯ ಮತ್ತು ನಂಬಿಕೆಯಿತ್ತು ಎಂಬುದು ಸ್ಪಷ್ಟ ಎಂಬ ವಾದ ಈ ಲೇಖಕರದ್ದು.

ಟಿಪ್ಪುವಿನ ವ್ಯಕ್ತಿತ್ವ ಕುರಿತು ಎತ್ತಿರುವ ಇವತ್ತಿನ ಪ್ರಶ್ನೆಗಳಿಗೆ, ಸವಾಲುಗಳಿಗೆ ಪ್ರಗತಿಪರ ಚಿಂತಕರೂ, ಸಾಹಿತಿಗಳೂ ಆದ ಕೋ. ಚೆನ್ನಬಸಪ್ಪ ಅವರು ಹಿಂದೂ ಧರ್ಮರಕ್ಷಕ, ಅಪ್ರತಿಮ ದೇಶಭಕ್ತ ಟಿಪ್ಪು ಸುಲ್ತಾನ್ ಎಂಬ ಶೀರ್ಷಿಕೆಯಡಿ ಸಮರ್ಥನೆ ನೀಡಲು ಪ್ರಯತ್ನಿಸಿದ್ದಾರೆ. ಟಿಪ್ಪು ಮತಾಂಧ, ಪರಮತ ದ್ವೇಷಿ, ಕ್ರೂರಿ ಇತ್ಯಾದಿಯಾಗಿ ಬರೆದವರು ಯಾರು? ಅವರು ಬರೆದದ್ದು ಸರಿಯೇ? ಸತ್ಯವೇ? ಎಂಬುದನ್ನು ಅವಲೋಕಿಸುವುದು ಸಮಂಜಸ. ಆಂಗ್ಲರ ಪರಮ ವೈರಿಯಾಗಿದ್ದ ಟಿಪ್ಪು ಬಗೆಗೆ ಅವರು ನಿರ್ಮಲ, ನಿಷ್ಪಕ್ಷಪಾತ ದೃಷ್ಟಿಯಿಂದ ಬರೆದಿದ್ದಾರೆಯೇ? ಬ್ರಿಟಿಷ್ ವಸಾಹತುಶಾಹಿಗಳು ಬರೆಸಿದ ದಾಖಲೆಗಳು ಟಿಪ್ಪು ಬಗ್ಗೆ ಈ ದೇಶದವರ ಮನಸ್ಸಿನಲ್ಲಿ ದ್ವೇಷ ಹುಟ್ಟಿಸುವ ಅವನ ವಿರುದ್ಧ ಎತ್ತಿಕಟ್ಟುವ ಉದ್ದೇಶ ಇದ್ದಿರಲಾರದೆ? ಅಂಥವರ ಇತಿಹಾಸವನ್ನು ಕೇಸರೀಕರಣಗೊಂಡವರು ನಂಬುತ್ತಾರೆ, ಟಿಪ್ಪುವನ್ನು ದ್ವೇಷಿಸುತ್ತಾರೆ.[೬೪]

೨.೫. ಸೆಕ್ಯೂಲರ್ ಚರಿತ್ರೆ ಬರವಣಿಗೆಗಳು

ಟಿಪ್ಪು ಸುಲ್ತಾನನನ್ನು ಸೆಕ್ಯೂಲರ್ ನೆಲೆಯಲ್ಲಿ ಗುರುತಿಸಿ ಸಂಶೋಧನೆ ನಡೆಸಿದ ಚರಿತ್ರೆಕಾರರ ಸಂಖ್ಯೆ ಕಡಿಮೆಯೇನಲ್ಲ. ಮಾರ್ಕ್ಸ್‌ವಾದಿ, ಸಬಾಲ್ಟ್ರನ್ ಹಾಗೂ ನವ ಚಾರಿತ್ರಿಕವಾದ ಸಿದ್ಧಾಂತಗಳಿಂದ ಪ್ರಭಾವಿತರಾದ ಚರಿತ್ರೆ ವಿದ್ವಾಂಸರು ಟಿಪ್ಪುವನ್ನು ಒಬ್ಬ ರಾಜನನ್ನಾಗಿ ನೋಡುವ ಪ್ರಯತ್ನವನ್ನು ಮಾಡಿದರು. ರಾಷ್ಟ್ರಪ್ರೇಮಿ ಹಾಗೂ ರಾಷ್ಟ್ರದ್ರೋಹಿ ಎನ್ನುವ ನಿಲುವುಗಳನ್ನು ತಿರಸ್ಕರಿಸುವ ಹಾಗೂ ಟಿಪ್ಪುವನ್ನು ಅವನ ಆಳ್ವಿಕೆಯ ಸಂದರ್ಭದ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಪೂರ್ವಗ್ರಹಪೀಡಿತರಾಗದೆ ಸೆಕ್ಯೂಲರ್ ಧೋರಣೆಯೊಂದಿಗೆ ನೋಡುವ ಪ್ರಯತ್ನವನ್ನು ಈ ಬಗೆಯ ಚರಿತ್ರೆ ಬರವಣಿಗೆಯಲ್ಲಿ ಕಾಣಬಹುದಾಗಿದೆ.

ಇರ್ಫನ್ ಹಬೀಬ್ ಅವರ ಅಭಿಪ್ರಾಯದಂತೆ ಟಿಪ್ಪು ಕುರಿತು ಬ್ರಿಟಿಷರ ವಿರುದ್ಧ ಟಿಪ್ಪುವು ನಿರ್ಣಾಯಕವಾಗಿ ಹೋರಾಡಿದ ರಾಜ್ಯದ ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯಗಳಿಗೆ ಧಕ್ಕೆ ಬರುವುದನ್ನು ಅವನು ಎಂದೂ ಸಹಿಸಲಿಲ್ಲ. ಬ್ರಿಟಿಷರ ಸೈನಿಕ ಸಾಮರ್ಥ್ಯಗಳನ್ನು ಬಹುಬೇಗ

ಅರಿತುಕೊಂಡನು. ಅವರನ್ನು ಸಮರ್ಥವಾಗಿ ಎದುರಿಸಲು ಫ್ರೆಂಚರ ನೆರವು ಕೇಳಿದನು. ಇದರ ಹಿಂದೆ ಎರಡು ಧ್ಯೇಯಗಳಿದ್ದವು. ಒಂದು ಮಿಲಿಟರಿ ನೆರವು ಪಡೆದುಕೊಳ್ಳುವುದು, ಎರಡನೆಯದು ಫ್ರಾನ್ಸಿನ ಹೊಸ ತಂತ್ರಜ್ಞಾನವನ್ನು ರಾಜ್ಯದ ಪ್ರಗತಿಗಾಗಿ ಬಳಸಿಕೊಳ್ಳುವುದು ಹಾಗೂ ರಾಜ್ಯವನ್ನು ಆಧುನಿಕತೆಯತ್ತ ಕೊಂಡ್ಯೊಯುವ ಆಲೋಚನೆ ಟಿಪ್ಪುವಿನದಾಗಿತ್ತು.[೭೫] ಟಿಪ್ಪು ಆಧುನಿಕತೆಯ ಪರವಾಗಿದ್ದ ಎಂಬುದು ಇವರ ಬರವಣಿಗೆಯಲ್ಲಿ ಕಂಡುಬರುತ್ತದೆ.

ಅನಿರುದ್ಧರೇ ಅವರು ಟಿಪ್ಪು ಕುರಿತು ವಿಶ್ಲೇಷಣಾತ್ಮಕ ವಿವರಣೆಗಳನ್ನು ನೀಡಿದ್ದಾರೆ. ಟಿಪ್ಪು ಸ್ಥಳೀಯ ರಾಜ್ಯಗಳ ಅರಸರು ನೆರವು ನೀಡದಿದ್ದು ಅವನು ಹೊರಜಗತ್ತಿನ ನೆರವು ಪಡೆಯುವ ಅನಿವಾರ್ಯತೆಯನ್ನು ಸೃಷ್ಟಿಸಿತು. ರಾಜ್ಯದ ಸ್ವಾತಂತ್ರ್ಯ ರಕ್ಷಣೆ ಮತ್ತು ಆರ್ಥಿಕ ಅಭಿವೃದ್ಧಿ ಈ ಎರಡು ದೃಷ್ಟಿಕೋನಗಳನ್ನಿಟ್ಟುಕೊಂಡು ಬ್ರಿಟಿಷರಷ್ಟೇ ಪ್ರಬಲರಾದ ಫ್ರೆಂಚರ ನೆರವು ಯಾಚಿಸಿದ. ಫ್ರಾನ್ಸಿಗೆ ತನ್ನ ರಾಯಭಾರಿ ನಿಯೋಗವನ್ನು ಕಳುಹಿಸಿದ ಹಾಗೂ ಪತ್ರವ್ಯವಹಾರಗಳನ್ನು ನಡೆಸುವುದರ ಮೂಲಕ ಫ್ರಾನ್ಸಿನಿಂದ ಮಿಲಿಟರಿ ನೆರವು ಹಾಗೂ ಹೊಸ ಹೊಸ ತಂತ್ರಜ್ಞಾನಗಳನ್ನು ಪಡೆದುಕೊಳ್ಳಲು ಮುಂದಾದನು. ಕೃಷಿ, ಕೈಗಾರಿಕೆ ಹಾಗೂ ಸೈನಿಕ ವಲಯಗಳನ್ನು ಆಧುನೀಕರಣಗೊಳಿಸಲು ಯೋಜಿಸಿದನು. ಫ್ರಾನ್ಸ್ ಚಕ್ರವರ್ತಿ ನೆಪೋಲಿಯನ್ ಬೋನಾಪಾರ್ಟೆಯ ಸೈನಿಕ ಕಾರ್ಯಾಚರಣೆಯನ್ನು ಗಮನಿಸಿ ಅವನ ನೆರವು ಪಡೆಯಲು ಉತ್ಸುಕತೆ ತೋರಿದ. ಫ್ರೆಂಚರ ನೆರವಿನಿಂದಲೇ ಬ್ರಿಟಿಷ್ ವಸಹಾತುಶಾಹಿ ಶಕ್ತಿಯನ್ನು ನಿರ್ಮೂಲನೆ ಮಾಡಲು ಟಿಪ್ಪು ತೀರ್ಮಾನಿಸಿದ[೭೬] ಎಂಬುದು ಈ ಚರಿತ್ರೆಕಾರರ ಅಭಿಪ್ರಾಯವಾಗಿದೆ.

ಷೇಕ್ ಆಲಿ ಅವರು ಟಿಪ್ಪುವಿನ ವಸಾಹತುಶಾಹಿ ವಿರುದ್ಧದ ಹೋರಾಟಗಳು ಮತ್ತು ರಾಜ್ಯದ ಶ್ರಯೋಭಿವೃದ್ಧಿಗಾಗಿ ರೂಪಿಸಿದ ಆರ್ಥಿಕ ಆವಿಷ್ಕಾರಗಳನ್ನು ವಿವರವಾಗಿ ಅಧ್ಯಯನಿಸಿ ವಸ್ತುನಿಷ್ಠ ಒಲವುಗಳನ್ನು ಚರಿತ್ರೆಯ ಬರವಣಿಗೆಯಲ್ಲಿ ದಾಖಲಿಸಿದ್ದಾರೆ. ಟಿಪ್ಪುವಿನ ವ್ಯಕ್ತಿತ್ವ, ಆಡಳಿತ ವೈಖರಿ ಅವನ ಧಾರ್ಮಿಕ ಮತ್ತು ಭಾಷಾ ನೀತಿಗಳ ಬಗ್ಗೆಯೂ ತಮ್ಮ ಚಾರಿತ್ರಿಕ ಸೂಕ್ಷ್ಮ ಸಂವೇದನೆಗಳನ್ನು ವ್ಯಕ್ತಮಾಡಿದ್ದಾರೆ.

ಬ್ರಿಟಿಷರ ಪ್ರಭುತ್ವ ಸ್ಥಾಪನೆ ಮತ್ತು ವಿಸ್ತರಣಾ ನೀತಿಯೇ ತಡೆಯೊಡ್ಡುವುದರಲ್ಲಿ ಹೈದರನಿಗಿಂತ ಟಿಪ್ಪುವಿನ ನಿರ್ಧಾರ ಹೆಚ್ಚು ಪ್ರಬಲವಾಗಿತ್ತು. ಅವನು ಬ್ರಿಟಿಷರೊಂದಿಗೆ ಎಂದೂ ರಾಜಿ ಮಾಡಿಕೊಂಡಿಲ್ಲ. ಅವರನ್ನು ಧೂಳಿಪಟ ಮಾಡಬೇಕೆಂಬ ತನ್ನ ಧ್ಯೇಯದಿಂದ ವಿಚಲಿತನಾಗಲಿಲ್ಲ. ಆ ಕಾಲದಲ್ಲಿ ಬ್ರಿಟಿಷರಿಂದ ಭಾರತದ ಸ್ವಾತಂತ್ರ್ಯಕ್ಕೆ ಭಾರೀ ಅಪಾಯವಿದೆ ಎಂದು ಮನಗಂಡ ಏಕೈಕ ಅರಸ ಟಿಪ್ಪು ಒಬ್ಬನೇ. ಅವರ ಉದ್ದೇಶಗಳನ್ನು ಭಗ್ನಗೊಳಿಸಲು ತನ್ನ ಸರ್ವ ಶಕ್ತಿಯನ್ನು ಪ್ರಯೋಗಿಸಿದನು. ಅವನ ಜೀವನ ಸೂತ್ರ ನೂರುವರ್ಷ ಗುಲಾಮನಾಗಿ ಬದುಕಿರುವುದಕ್ಕಿಂತ

ಒಂದೇ ಒಂದು ದಿನ ಸ್ವತಂತ್ರವಾಗಿ ಬದುಕುವುದು ಮೇಲು; ನೂರು ವರ್ಷ ನರಿಯಂತೆ ಬದುಕುವುದಕ್ಕಿಂತ ಸಿಂಹವಾಗಿ ಒಂದು ದಿವಸ ಬದುಕಿರುವುದು ಮೇಲು ಎನ್ನುವುದು.

ಬ್ರಿಟಿಷರನ್ನು ರಾಜಕೀಯ ರಂಗದಿಂದ ತೆಗೆದು ಹಾಕುವ ಸಂಕಲ್ಪ ಶಕ್ತಿಯೂ, ಸಾಮರ್ಥ್ಯವೂ ಟಿಪ್ಪುವಿಗೆ ಇದ್ದವು. ಮರಾಠ ಮತ್ತು ನಿಜಾಮರ ಬೆಂಬಲವು ಬ್ರಿಟಿಷರಿಗೆ ದೊರಕದೇ ಹೋಗಿದ್ದರೆ ಖಂಡಿತವಾಗಿಯೂ ಅದನ್ನವನು ಸಾಧಿಸಿ ಬಿಡುತ್ತಿದ್ದನು. ಬ್ರಿಟಿಷರ ಆಯುಧಗಳ ಮೇಲ್ಮಟ್ಟಕ್ಕಿಂತಲೂ ಭಾರತೀಯರ ಅನೈಕ್ಯತೆಯೇ ಹೆಚ್ಚು ಅಪಾಯಕಾರಿಯಾಗಿತ್ತು. ಟಿಪ್ಪು ಎಂದೂ ಯಾವುದೇ ಭಾರತೀಯ ಶಕ್ತಿ ಎದುರು ವಸಾಹತುಗಾರರ ಪಕ್ಷಕ್ಕೆ ಸೇರಲಿಲ್ಲ. ಅದಕ್ಕೆ ಬದಲಾಗಿ ವಿದೇಶಿಯರ ವಿರುದ್ಧವಾಗಿ ತನ್ನ ಸಹ ದೇಶಭಕ್ತರ ಬೆಂಬಲಗಳಿಸಲು ಶಕ್ತಿ ಮೀರಿ ಪ್ರಯತ್ನಿಸಿದನು. ಭಾರತದ ಸ್ವಾತಂತ್ರ್ಯ ಹೋರಾಟದ ಭಾವನೆಯನ್ನು ಉದ್ಘಾಟಿಸಿದವನು[೭೭] ಟಿಪ್ಪು ಎಂಬುದು ಈ ಚರಿತ್ರೆಕಾರರ ಅಭಿಪ್ರಾಯವಾಗಿದೆ.

ಪ್ರಗತಿಪರ ಚಿಂತಕರು ಹಾಗೂ ಚರಿತ್ರೆಕಾರರೂ ಆದ ಎಸ್.ಚಂದ್ರಶೇಖರ್ ಅವರು ಟಿಪ್ಪು ಬಗೆಗೆ ತಮ್ಮ ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ. ಟಿಪ್ಪುವಿನ ಆಡಳಿತಕ್ರಮ, ಪ್ರಗತಿಪರವಾದ ನಿಲುವುಗಳು, ವಸಾಹತುಶಕ್ತಿಯ ವಿರುದ್ಧ ಹೋರಾಟದಲ್ಲಿ ಟಿಪ್ಪುವಿನ ಆಲೋಚನೆಗಳು ಕುರಿತು ಚರ್ಚಿಸಿದ್ದಾರೆ. ಚರಿತ್ರೆ ಬರವಣಿಗೆಯ ಸಮಯದಲ್ಲಿ ಟಿಪ್ಪುವನ್ನು ವಿವಿಧ ಮುಖಗಳಿಂದ ಚಿತ್ರಿಸಿರುವ ರೀತಿ, ಬ್ರಿಟಿಷ್ ಚರಿತ್ರೆಕಾರರು ಟಿಪ್ಪುವನ್ನು ಧರ್ಮ ಮತ್ತು ಭಾಷಿಕೆ ನೆಲೆಯಲ್ಲಿ ವಿರೋಧಾಭಾಸ ವ್ಯಕ್ತವಾಗುವ ರೀತಿಯಲ್ಲೆ ಚಿತ್ರಿಸಿರುವುದನ್ನು ಈ ಚರಿತ್ರೆಕಾರರು ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ಟಿಪ್ಪುವಿನ ಸ್ವಭಾವ, ಆಡಳಿತ ಕ್ರಮ, ಇತರರೊಂದಿಗಿನ ರಾಜಕೀಯ ಸಂಬಂಧಗಳು ಮತ್ತು ಸಮಕಾಲೀನ ಸಂದರ್ಭ ಜಗತ್ತಿನ ನಾನಾ ಭಾಷೆಗಳಲ್ಲಿ ಇದರ ಬಗ್ಗೆ ಹಲವು ಆಧಾರಗಳನ್ನು ಸೃಷ್ಟಿಸಿತು. ಇಲ್ಲಿಯವರೆಗೂ ಪ್ರಕಟವಾಗಿರುವ ಆಕರ ಸಾಮಗ್ರಿಗಳು ಇಂಗ್ಲೀಷ್‌ನಲ್ಲಿದ್ದು ಟಿಪ್ಪುವಿನ ಬಗ್ಗೆ ವಿಕೃತ ಚಿತ್ರಣ ಕೊಡುತ್ತವೆ. ಭಾರತದಲ್ಲಿದ್ದ ಅಥವಾ ಅಂದಿನ ಭಾರತದೊಂದಿಗೆ ಸಂಬಂಧವಿದ್ದ ಪ್ರತಿಯೊಬ್ಬ ಬ್ರಿಟಿಷನೂ ಬ್ರಿಟಿಷ್ ವಸಾಹತುಶಾಹಿ ಆಡಳಿತದಿಂದ ನೇರವಾಗಿ ಅಥವಾ ಪರೋಕ್ಷವಾಗಿಯಾದರೂ ಉಪಕೃತನಾಗಿದ್ದ. ಬ್ರಿಟಿಷರನ್ನು ಉಗ್ರವಾಗಿ ಪ್ರತಿಭಟಿಸಿ ಯುದ್ಧ ಮಾಡಿದ ಕೊನೆಯ ಪ್ರಬಲರೆಂದರೆ ಹೈದರ್ ಮತ್ತು ಟಿಪ್ಪು. ಆದ್ದರಿಂದಲೇ ವಸಾಹತುವಾದಿ ಬರಹಗಾರರು ಈ ಸುಲ್ತಾನರ ಬಗ್ಗೆ ವಿಷಕಾರಿದ್ದಾರೆ. ಇಂಗ್ಲೀಷ್ ಬಿಟ್ಟು ಉಳಿದ ಆಕರ ಗ್ರಂಥಗಳು ಅಂದರೆ ಫ್ರೆಂಚ್, ಡಚ್, ಪೋರ್ಚುಗೀಸ್, ಪರ್ಶಿಯನ್, ಅರಬಿಕ್, ಟರ್ಕಿ, ಮರಾಠಿ, ತೆಲುಗು, ತಮಿಳು ಭಾಷೆಯಲ್ಲಿರುವ ದಾಖಲೆಗಳು ಬಹುತೇಕ ಹಾಗೆಯೇ ಸ್ಥಳೀಯವಾಗಿ

ಲಭ್ಯವಿರುವ ಲಾವಣಿಗಳು, ಐತಿಹ್ಯಗಳು ಮುಂತಾದ ಜನಪದ ಸಾಮಗ್ರಿಗಳು ಜೊತೆಗೆ ಅಂದಿನ ಕನ್ನಡ ಸಾಹಿತ್ಯ ಕೃತಿಗಳನ್ನು ಬೇರೆಯ ಭಾಷೆಯ ಆಸಕ್ತರು ಉಪಯೋಗಿಸಲು ಸಾಧ್ಯವಾಗಿಲ್ಲ.[೨೭]

ಟಿಪ್ಪುವಿನ ಕಾಲದ ರಾಜಕಾರಣವನ್ನು ಬಹು ಜಾಗರೂಕತೆಯಿಂದ ಅಧ್ಯಯನಿಸಬೇಕು. ದೊರೆತ ಆಕರಗಳನ್ನು ಸೃಷ್ಟಿಸಿದ ಬರಹಗಾರರ ನಿಲುವುಗಳನ್ನು ಅರ್ಥಮಾಡಿಕೊಳ್ಳಬೇಕು. ಸಮಕಾಲೀನ ಸಂದರ್ಭದಲ್ಲಿ ಟಿಪ್ಪುವಿನ ರಾಜ್ಯಾಡಳಿತವು ಹೆಚ್ಚು ಚರ್ಚೆಗೆ ಒಳಗಾಗುತ್ತಿದೆ. ಅಂದಿನ ಚಾರಿತ್ರಿಕ ಘಟನೆಗಳನ್ನು ವರ್ತಮಾನದ ರಾಜಕಾರಣದ ಲಾಭಕ್ಕೆ ಬಳಸುವ ಚಾಳಿ ಹೆಚ್ಚುತ್ತಿದೆ. ಅದರಲ್ಲೂ ಧರ್ಮ ಮತ್ತು ಭಾಷೆಯ ನೆಲೆಯಲ್ಲಿ ಪರ-ವಿರುದ್ಧದ ಹೇಳಿಕೆಗಳು ಸಮಾಜದ ಮೇಲೆ ಪರಿಣಾಮಗಳನ್ನು ಬೀರುತ್ತಿವೆ. ಟಿಪ್ಪುವನ್ನು ಒಬ್ಬ ಮಹಾನ್ ನಾಯಕನಂತೆಯೂ ಬಿಂಬಿಸಲು ಪ್ರಯತ್ನಗಳೂ ನಡೆದಿವೆ. ಅದರಂತೆ ಟಿಪ್ಪು ಒಬ್ಬ ಖಳನಾಯಕ, ಪ್ರಗತಿ ವಿರೋಧಿ. ಪ್ರಜಾಪೀಡಕ ಎಂಬಂತೆ ಚಿತ್ರಿಸುತ್ತಿರುವುದು ಹಲವು ಅನುಮಾನ, ಭಿನ್ನಾಭಿಪ್ರಾಯಗಳಿಗೆ ಎಡೆ ಮಾಡಿಕೊಟ್ಟಿದೆ.[೨೮] ಚಾರಿತ್ರಿಕ ಪುರುಷನನ್ನು ಎಲ್ಲ ಒಳ್ಳೆಯ ಅಥವಾ ಕೆಟ್ಟ ಮೌಲ್ಯಗಳ ಮೊತ್ತವೆಂದು ಬಣ್ಣಿಸುವುದು ಚರಿತ್ರೆಗೆ ಹಾಗೂ ಮುಂದಿನ ಪೀಳಿಗೆಗೆ ಬಗೆಯುವ ಅಪಚಾರ. ಆಯಾ ಚಾರಿತ್ರಿಕ ಸಂದರ್ಭಗಳ ಹಿನ್ನೆಲೆಯಲ್ಲಿ ವ್ಯಕ್ತಿಗಳನ್ನು, ಘಟನೆಗಳನ್ನು ಪರೀಕ್ಷಿಸುವುದು ಹಾಗೂ ವಿಶ್ಲೇಷಿಸುವುದು ಸೂಕ್ತ.

ಬಾರ್ಕೂರು ಉದಯ ಅವರು ಟಿಪ್ಪು ಕುರಿತು ಇದುವರೆಗೂ ಬಂದಿರುವ ಬರಹಗಳನ್ನು ಅಧ್ಯಯನಿಸಿ ತಮ್ಮ ನಿಲುವುಗಳನ್ನು ವ್ಯಕ್ತಮಾಡಿದ್ದಾರೆ. ಟಿಪ್ಪು ಕಾಲದ ಸಮಕಾಲೀನ ಬ್ರಿಟಿಷ್ ವಸಾಹತುಶಾಹಿ ಚರಿತ್ರೆಕಾರರು ಮತ್ತು ಅಧಿಕಾರಿಗಳು ಟಿಪ್ಪುವಿನ ಆಡಳಿತ ವ್ಯವಸ್ಥೆ, ಆಕ್ರಮಣಗಳು, ಧಾರ್ಮಿಕ ಮತ್ತು ಭಾಷಿಕ ನೆಲೆಗಳಲ್ಲಿ ಹೆಚ್ಚು ಬರೆದಿದ್ದಾರೆ. ಮಾರ್ಕ್ಸ್ ವಿಲ್ಸ್, ಹಟ್ಸನ್, ಬುಕಾನನ, ಬೌರಿಂಗ್, ಹೆಂಡರ್ಸನ್, ಮನ್ರೋ, ರಾಬ್ಸನ್ ಮುಂತಾದ ಬರಹಗಾರರು ಟಿಪ್ಪು ಬಗ್ಗೆ ಪೂರ್ವಗ್ರಹ ಪೀಡಿತರಾಗಿ ಬರೆದರು. ಅವನು ಭಾರತದಲ್ಲಿ ಬ್ರಿಟಿಷರನ್ನು ಪ್ರಬಲವಾಗಿ ವಿರೋಧಿಸಿದ ಕಾರಣದಿಂದ ಟಿಪ್ಪು ಒಬ್ಬ ಕ್ರೂರಿ, ಮತಾಂಧ, ದೇಶದ್ರೋಹಿ ಎಂಬ ಆರೋಪಗಳನ್ನು ಹೊರಿಸಿ ಚರಿತ್ರೆಯಲ್ಲಿ ದಾಖಲಿಸಿದರು. ಇಂಥ ದೋಷಣೆಯ ಸಂಗತಿಗಳು ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿ ಟಿಪ್ಪು ಚರಿತ್ರೆ ಮತ್ತು ಅವನ ವ್ಯಕ್ತಿತ್ವ ಹೆಚ್ಚು ಚರ್ಚೆಗೆ ಗ್ರಾಸವಾಗಿದೆ. ಪರ-ವಿರೋಧದ ನಿಲುವುಗಳು ವ್ಯಕ್ತವಾಗುತ್ತಿದೆ. ಅದರಲ್ಲೂ ರಾಜಕಾರಣದಲ್ಲಿ ಅದನ್ನು ಬೆರಸಿ ತಮಗೆ ಲಾಭ ಮಾಡಿಕೊಳ್ಳುವ ಹುನ್ನಾರಗಳು ನಡೆಯುತ್ತಲೆ ಇದೆ.

ಬಾರ್ಕೂರು ಉದಯ ಅವರು ಟಿಪ್ಪುವಿನ ವ್ಯಕ್ತಿತ್ವ, ಅವನ ಆಡಳಿತ ಕುರಿತು ಚರ್ಚಿಸುತ್ತಾ ಹೈದರಾಲಿ ಮತ್ತು ಟಿಪ್ಪು ಭಾರತದ ಇತರ ಸಮಕಾಲೀನ ರಾಜರಂತಲ್ಲದೆ ಅವರು ಇಂಗ್ಲಿಷ್

ಕಂಪನಿಯ ಅಧೀನರಾಗಲು ಒಪ್ಪದಿದ್ದರಿಂದ ಇಂಗ್ಲೀಷ್ ಜನರು ಪೂರ್ವಗ್ರಹ ಪೀಡಿತರಾಗಿ ಅವರನ್ನು ನೋಡಿದರು. ಅವರ ಮೇಲೆ ಹೊರಿಸಲಾಗದ ಅನೇಕ ಅಪಾದನೆಗಳು ಅವರ ಕೈಯಿಂದ ಸೋತು, ನೊಂದು, ಕೋಪಗೊಂಡಿರುವವರಿಂದ ಅಥವಾ ಅವರ ಕೈಯಿಂದ ಶಿಕ್ಷಿಸಲ್ಪಟ್ಟ ಸೆರೆಯಾಳುಗಳಿಂದ ಕಲ್ಪಿತವಾದವುಗಳು. ಕಂಪನಿಯ ಸರಕಾರವು ಅವರ ಮೇಲೆ ಹೂಡಿದ ಆಕ್ರಮಣಕಾರಿ ಯುದ್ಧವನ್ನು ಸಮರ್ಥಿಸಿಕೊಳ್ಳಲು ಕಾತರರಾಗಿದ್ದ ಜನರು ಕೂಡ ಇಂಥದ್ದೆ ಆರೋಪಗಳನ್ನು ಮಾಡಿದರು.[೮೦]

ಟಿಪ್ಪು ಅನ್ಯಧರ್ಮ ವಿರೋಧಿ, ಸ್ವಧರ್ಮಿ ಎಂಬೆಲ್ಲ ಅಭಿಪ್ರಾಯಗಳಿಗೆ ಉತ್ತರ ಹುಡುಕುವ ಪ್ರಯತ್ನ ಈ ಚರಿತ್ರೆಕಾರರದು. ಟಿಪ್ಪು ಹಿಂದೂಧರ್ಮ ವಿರೋಧಿಯಾಗಿರಲಿಲ್ಲ. ಯಾರನ್ನೂ ಬಲತ್ಕಾರವಾಗಿ ಮತಾಂತರ ಮಾಡಲಿಲ್ಲ. ಶೃಂಗೇರಿ ಮಠದ ಸ್ವಾಮಿಜಿಗಳ ಬಗ್ಗೆ ಅಪಾರ ಭಕ್ತಿಭಾವ ತೋರಿದ. ಮಠಕ್ಕೆ ಭೂಮಿಯುಳ್ಳ ಉಂಬಳಿ ನೀಡಿದ ಹಲವು ದಾನ, ದತ್ತಿ ನೀಡಿದ ಸಂಗತಿಗಳು ದಾಖಲಾಗಿವೆ. ರಾಜ್ಯದ ಅಭಿವೃದ್ಧಿಗಾಗಿ ಮೈಸೂರಿಗಾಗಿ ಯುರೋಪೀಕರಣ ಪ್ರಕ್ರಿಯೆಗೆ ಚಾಲನೆ ನೀಡಿದ ಕೃಷಿ ಮತ್ತು ಕೈಗಾರಿಕಾ ವಲಯಗಳನ್ನು ಆಧುನೀಕರಿಸಲು ಪ್ರಯತ್ನಿಸಿದ. ವ್ಯಾಪಾರ, ವಾಣಿಜ್ಯ ಚಟುವಟಿಕೆಗಳ ಅಭಿವೃದ್ಧಿಗೆ ಶೀಘ್ರಗತಿ ಒದಗಿಸಿದ. ರಾಜ್ಯವು ಕೃಷಿ, ಕೈಗಾರಿಕೆ, ಆಡಳಿತ, ವ್ಯಾಪಾರದಲ್ಲಿ ಬಾರಿ ಮುನ್ನಡೆ ಸಾಧಿಸಿತು ಎಂಬ ನಿಲುವುಗಳನ್ನು ಈ ಚರಿತ್ರೆಕಾರರು ವ್ಯಕ್ತಮಾಡಿದ್ದಾರೆ.

ಸಿ.ಆರ್.ಗೋವಿಂದರಾಜು ಅವರು ಟಿಪ್ಪು ಚರಿತ್ರೆ ಕುರಿತು ಚರ್ಚಿಸಿದ್ದಾರೆ. ಅವರು ಟಿಪ್ಪು ವಿರುದ್ಧ ಇತ್ತೀಚೆಗೆ ಉಂಟಾದ ಕನ್ನಡ ಭಾಷಾ ವಿರೋಧಿ? ಎಂಬ ಪರ–ವಿರುದ್ಧದ ನಿಲುವುಗಳಿಗೆ ತಮ್ಮದೇ ಉತ್ತರವನ್ನು ಹುಡುಕಿ ಕೊಟ್ಟಿದ್ದಾರೆ. ಅವರ ಬರಹಗಳು ಟಿಪ್ಪುವಿನ ಆಡಳಿತ ವೈಖರಿ ಮತ್ತು ಭಾಷಿಕ ನೆಲೆಯಲ್ಲೆ ಹೆಚ್ಚು ಚರ್ಚಿತವಾಗಿದೆ. ಮೈಸೂರು ಸಂಸ್ಥಾನದಲ್ಲಿ ಒಡೆಯರ ಆಳ್ವಿಕೆಯ ಅವಧಿಯಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿತ್ತು. ಟಿಪ್ಪು ತಮ್ಮ ಆಡಳಿತದ ಅವಧಿಯಲ್ಲಿ ಈ ಆಡಳಿತ ಭಾಷೆಗೆ ಯಾವುದೇ ಭಂಗ ತಂದಿರಲಿಲ್ಲ, ಬದಲಾಗಿ ಹೊರಗಿನ ವಾಣಿಜ್ಯ–ವ್ಯಾಪಾರ ಯುದ್ಧ, ವ್ಯವಹಾರಗಳಿಗಾಗಿ ಮಾತ್ರ ಉರ್ದು, ಪರ್ಶಿಯನ್ ಮೊದಲಾದ ಭಾಷೆಗಳನ್ನು ಬಳಸುತ್ತಿದ್ದನು[೮೧] ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಟಿಪ್ಪುಸುಲ್ತಾನ ವ್ಯಕ್ತಿತ್ವ ಕುರಿತಾದ ಚರ್ಚೆಗಳಲ್ಲಿ ಅವನ ಕಾರ್ಯಗಳ ವಿಶ್ಲೇಷಣೆಗಳ ಮೂಲಕ ಕೆ.ಜಿ.ವಸಂತಮಾದವ ಅವರು ತಮ್ಮ ನಿಲುವು ವ್ಯಕ್ತಪಡಿಸಿದ್ದಾರೆ. ಹದಿನೆಂಟನೆ ಶತಮಾನದ ಭಾರತದ ಇತಿಹಾಸದಲ್ಲಿ ಎಲ್ಲಾ ಸ್ಥರದಲ್ಲೂ ಎದ್ದು ತೋರುವ ವ್ಯಕ್ತಿಗಳಲ್ಲಿ ಟಿಪ್ಪು ಸುಲ್ತಾನ ಅಗ್ರಗಣ್ಯ. ಅವನು ಪ್ರಬಲ ರಾಜಕೀಯ ಶಕ್ತಿಯಾಗಿ ದಕ್ಷಿಣ ಭಾರತದಲ್ಲಿ ಕಾಣಿಸಿ

ಕೊಂಡನಲ್ಲದೆ, ಹೆಚ್ಚಿನ ರಾಜಕೀಯ ಶಕ್ತಿಗಳಿಗೆ ಸವಾಲಾಗಿದ್ದ. ಇದರೊಂದಿಗೆ ವ್ಯಾಪಾರ ನೆಪದಿಂದ ರಾಜಕೀಯದಲ್ಲಿ ತೊಡಗಿಕೊಂಡಿದ್ದ ಇಂಗ್ಲಿಷರ ಪ್ರಬಲ ವೈರಿಯಾಗಿದ್ದ. ಇವನ ರಾಜ್ಯವು ವಿಶಾಲವ್ಯಾಪ್ತಿ ಹೊಂದಿ ಸಂಮಿಶ್ರ ಪ್ರದೇಶವಾಗಿತ್ತು. ಇದನ್ನು ರಕ್ಷಿಸಿಕೊಳ್ಳುವುದೇ ಟಿಪ್ಪುವಿಗೆ ಒಂದು ಸಮಸ್ಯೆಯಾಗಿತ್ತು. ಹಲವಾರು ಒಳ ಮತ್ತು ಹೊರ ಶತ್ರುಗಳು ಇದ್ದರು. ಅವರು ರಾಜ್ಯದ ಹಿತಾಸಕ್ತಿಗೆ ಅಪಾಯವುಂಟು ಮಾಡುತ್ತಿದ್ದರು. ಇವುಗಳನ್ನು ಎದುರಿಸಿ ವೀರತ್ವದಿಂದ ಅಂತ್ಯಗೊಂಡ.[೮೨]

ಹೈದರ್ ಮತ್ತು ಟಿಪ್ಪು ಅವರುಗಳ ಒಟ್ಟು ಆಡಳಿತಾವಧಿ ಕೇವಲ ನಲವತ್ತು ವರುಷಗಳು ಮಾತ್ರ. ಈ ಸೀಮಿತ ಆಡಳಿತ ಅವಧಿಯಲ್ಲಿ ಆಂಗ್ಲರ ಪ್ರತಿರೋಧದ ಜೊತೆಗೆ ಆಂತರಿಕವಾದ ಆತಂಕಗಳನ್ನು ಸಹ ಎದುರುಗೊಳ್ಳಬೇಕಾದ ಸನ್ನಿವೇಶ ಅವನದಾಗಿತ್ತು. ಇಂಥ ಸನ್ನಿವೇಶದಲ್ಲಿ ವಿಶಾಲ ಮೈಸೂರು ವಿಸ್ತರಿಸಿದಂತೆಲ್ಲ ಆಡಳಿತ ಭಾಷೆಯಾಗಿದ್ದ ಕನ್ನಡದ ವಿಸ್ತರಣೆಯೂ ಸ್ವಾಭಾವಿಕವಾಗಿಯೇ ಆಗುತ್ತಿತ್ತು. ಜೊತೆಗೆ ಗೆದ್ದ ಪ್ರದೇಶಗಳಲ್ಲಿ ನೇಮಕವಾಗುತ್ತಿದ್ದ ಅಧಿಕಾರಿಗಳು ಕನ್ನಡಿಗರೆ ಆಗಿರುತ್ತಿದ್ದರು. ಹೀಗಾಗಿ ಟಿಪ್ಪುವಿನ ಕನ್ನಡ ಭಾಷಾ ಪ್ರೇಮದ ಬಗೆಗಿನ ವಿರೋಧ, ಆತಂಕಗಳು ಹುರುಳಿಲ್ಲದವು.

ಟಿಪ್ಪುವಿನ ಕಾಲಾವಧಿಯಲ್ಲಿ ಹಠಾರ ಕಚೇರಿ ವ್ಯವಹಾರಗಳು, ಆದೇಶಗಳು ಕನ್ನಡದಲ್ಲಿವೆ. ಪೂರ್ಣಯ್ಯ, ಕೃಷ್ಣಯ್ಯ, ಶಾಮಯ್ಯ, ಖಂಡೇರಾವ್, ಶ್ರೀನಿವಾಸರಾವ್ ಮೊದಲಾದ ಕನ್ನಡ ಅಧಿಕಾರಿಗಳು ಆಯಕಟ್ಟಿನ ಹುದ್ದೆಗಳನ್ನು ನಿಬಾಯಿಸುತ್ತಿದ್ದುದರ ಬಗೆಗೆ ದಾಖಲೆಗಳಿವೆ. ಕನ್ನಡವೇ ರಾಜ್ಯದ ಪ್ರಧಾನ ಹಾಗೂ ಅಧಿಕೃತ ಭಾಷೆಯಾಗಿತ್ತು.[೮೩] ಟಿಪ್ಪು ಹೊರಾಡಿದ ವ್ಯಾಪಾರ-ವಾಣಿಜ್ಯ ಕಾಯಿದೆಗಳು, ಟಂಕಿಸಿದ ನಾಣ್ಯಗಳ ಅಂಕಿ-ಸಂಖ್ಯೆಗಳು ಕನ್ನಡದಲ್ಲಿರುವುದನ್ನು ಗುರುತಿಸಿದ್ದಾರೆ. ಶೃಂಗೇರಿ ಮಠಕ್ಕೆ ನಡೆಸಿದ ಪತ್ರವ್ಯವಹಾರ ಕನ್ನಡದಲ್ಲಿದೆ. ಆದರೂ ಟಿಪ್ಪುವಿನ ಕನ್ನಾಡಾಭಿಮಾನದ ಬಗ್ಗೆ ಎದ್ದಿರುವ ವಿವಾದಗಳು, ಬೀಸು ಹೇಳಿಕೆಗಳು ದುರದೃಷ್ಟಕರ. ಟಿಪ್ಪುವನ್ನು ಪರ ಅಥವಾ ವಿರೋಧದ ದೃಷ್ಟಿಗಳಿಂದ ನೋಡುವ ನೋಟಕ್ಕಿಂತ ಸಹಜ ಸ್ಥಿತಿಯಲ್ಲಿ ಅವನನ್ನು ಒಬ್ಬ ಮನುಷ್ಯನನ್ನಾಗಿ ನೋಡಿದರೆ ಸರಿ ಅನಿಸುತ್ತದೆ.[೮೪]

ಟಿಪ್ಪು ದೇಶಪ್ರೇಮಿಯೋ? ದೇಶ ದ್ರೋಹಿಯೋ? ಎಂಬ ವಿಚಾರಗಳ ಕುರಿತು ಚಿಂತಕರು ಚರ್ಚಿಸಿದ್ದಾರೆ. ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾದರೆ ಅವತ್ತಿನ ಭಾರತ ಪರಿಸ್ಥಿತಿ ಮತ್ತು ಯುರೋಪ್ ಹಾಗೂ ಇಂಗ್ಲೆಂಡಿನಲ್ಲಿ ನಡೆಯುತ್ತಿದ್ದ ವಿದ್ಯಮಾನಗಳನ್ನು ತಿಳಿಯಬೇಕಾಗುತ್ತದೆ. ಫ್ರೆಂಚರು ಮತ್ತು ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ಅವರು ತಮ್ಮ ಈ ದೇಶವನ್ನು ವಸಾಹತು ಪ್ರಾಂತ್ಯವನ್ನಾಗಿ ಮಾಡಿಕೊಳ್ಳಲು ಏಕೆ ಹವಣಿಸುತ್ತಿದ್ದರು? ಎಂಬುದನ್ನು ತಿಳಿಯಬೇಕು.

ಭಾರತದಲ್ಲಿನ ರಾಜಕೀಯ ಅಸ್ಥಿರತೆ ಅವರ ಹವಣಿಕೆಗೆ ಕಾರಣವೂ ಆಯಿತು. ಯುರೋಪ್‌ನಲ್ಲಿ ಬ್ರಿಟಿಷರಿಗೂ, ಫ್ರೆಂಚರಿಗೂ ವೈಷಮ್ಯ ಇತ್ತು. ಫ್ರೆಂಚರನ್ನು ಸದೆಬಡಿಯಲು ಬ್ರಿಟಿಷರು ಯತ್ನಿಸುತ್ತಿದ್ದರು. ಆಗ ಹೈದರ್ ಮತ್ತು ಟಿಪ್ಪು ಫ್ರೆಂಚರ ನೆರವನ್ನು ಪಡೆದು ಭಾರತದಲ್ಲಿ ಆಂಗ್ಲರನ್ನು ಬಗ್ಗು ಬಡಿಯಲು ಸಹಾಯ ಪಡೆಯಬೇಕಾಗಿತ್ತು. ಈ ಪ್ರಯತ್ನಕ್ಕೆ ಟಿಪ್ಪು ಮತ್ತು ಹೈದರಾಲಿಗೆ ಸ್ಥಳೀಯವಾಗಿ ಯಾವ ಅರಸರೂ, ಪಾಳೆಯಗಾರರೂ ನೆರವಿಗೆ ಬರಲಿಲ್ಲ.[೮೫] ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಹೊಂದುವ ಮತ್ತು ರಾಜ್ಯ ರಕ್ಷಣೆಯ ದೃಷ್ಟಿಯಿಂದ ಹೊರನಾಡುಗಳ ಸಹಾಯ ಮತ್ತು ಸಂಪರ್ಕ ಹೊಂದಿದ್ದರು. ಇವರ ಈ ತೀರ್ಮಾನ ದೇಶದ್ರೋಹವೇ? ದೇಶ ಪ್ರೇಮವೇ? ಎಂಬ ಪ್ರಶ್ನೆಗಳಿಗೆ ಉತ್ತರಿಸುತ್ತದೆ.

ಟಿಪ್ಪುವಿನ ವ್ಯಕ್ತಿತ್ವ ವಿರೋದೋಕ್ತಿ ಗುಣಗಳಿಂದ ಕೂಡಿದೆ. ಇವನು ಪರಾಕ್ರಮಿ. ಕೆಲವು ಸಂದರ್ಭಗಳಲ್ಲಿ ಅತ್ಯಂತ ಕ್ರೂರಿ ಮತ್ತು ದಯಾತ್ಮಕ ವ್ಯಕ್ತಿ. ಇದರಿಂದ ಚರಿತ್ರೆಯಲ್ಲಿ ನಾಯಕ ಮತ್ತು ಖಳನಾಯಕನಾಗಿ ಬಿಂಬಿತನಾಗಿದ್ದಾನೆ. ಅಂದಿನ ರಾಜಕೀಯ ಪರಿಸ್ಥಿತಿ ಟಿಪ್ಪುವಿನ ವ್ಯಕ್ತಿತ್ವ ನಿರ್ಮಿಸಲು ಪ್ರಭಾವ ಬೀರಿತು. ನಿಷ್ಪಕ್ಷವಾಗಿ ವೀಕ್ಷಿಸಿದಲ್ಲಿ ಟಿಪ್ಪುವಿನಲ್ಲಿ ಉತ್ತಮ ಗುಣಗಳಿದ್ದವು. ಆದರೆ ಅವುಗಳನ್ನು ನಾಶಪಡಿಸುವ ಶಕ್ತಿಗಳು ಅವನಲ್ಲಿದ್ದವು. ಅವನು ಕ್ರಿಯಾಶಕ್ತಿಯ ಬುದ್ಧಿವಂತ, ಚಲನಾತ್ಮಕ ಸ್ವಭಾವ ಹೊಂದಿದ್ದ, ಸಂಶೋಧನಾ ಗ್ರಹಿಕೆ ಇದ್ದವು. ಆದರೆ ಇವುಗಳನ್ನು ಯೋಜನಾಬದ್ಧವಾಗಿ ಕಾರ್ಯಗತಗೊಳಿಸುವ ಶಕ್ತಿ ಅವನಲ್ಲಿರಲಿಲ್ಲ. ಕಾರಣ ಸಮತೋಲನ ದೃಷ್ಟಿಯ ಕೊರತೆ ಇದ್ದಿತು. ಇದರಿಂದಾಗಿಯೇ ಈ ಸುಲ್ತಾನ ದುಡುಕಿನ ವ್ಯಕ್ತಿಯಾದ ಹಾಗೂ ವಿಚಾರಪರತೆ ಕಳೆದುಕೊಂಡ. ಇವನ ಉತ್ತಮ ಯೋಜನೆಗಳು ಪರಿಣಾತ್ಮಕವಾಗಲಿಲ್ಲ. ವಿಪರೀತ ವ್ಯಾಮೋಹ ಮತ್ತು ಭಾವನಾತ್ಮಕವಾಗಿ ವರ್ತಿಸಿ ಹೊಸ ಶತ್ರುಗಳನ್ನು ಸಂಪಾದಿಸಿದ. ತನ್ನ ರಾಜಕೀಯ ಜೀವನದಲ್ಲಿ ಟಿಪ್ಪು ಅತ್ಯಂತ ಜಿಗುಟುತನ ಮತ್ತು ಮೊಂಡುತನಗಳನ್ನು ವ್ಯಕ್ತಮಾಡುತ್ತಿದ್ದ. ಇವನ ಯೋಜನೆಗಳು ಉತ್ತಮವಿದ್ದರೂ ಅವುಗಳು ತಪ್ಪಾಗಿ ಜಾರಿಗೆ ಬರುವಂತೆ ಮಾಡಲು ಟಿಪ್ಪುವಿನಲ್ಲಿದ್ದ ಕೆಲವು ನಕಾರಾತ್ಮಕ ಗುಣಗಳೇ ಕಾರಣ. ಅವನ ಶತ್ರುಗಳು ಟಿಪ್ಪುವಿನ ಕುಂದು ಕೊರತೆಗಳನ್ನು ಸರಿಯಾಗಿ ಉಪಯೋಗಿಸಿಕೊಂಡರು.[೮೬] ಹೈದರಾಬಾದಿನ ನಿಜಾಮ, ಮರಾಠರು, ಕೆಲವು ಪಾಳೆಯಗಾರರು ಬ್ರಿಟಿಷರ ಪರ ನಿಂತು ಟಿಪ್ಪುವನ್ನು ರಾಜಕೀಯವಾಗಿ ಮುಗಿಸುವ ಪ್ರಯತ್ನ ನಡೆಸಿದರು.

ಟಿಪ್ಪು ತನ್ನ ಸ್ಥಾನವನ್ನು ಭದ್ರಮಾಡಿಕೊಳ್ಳಲು, ಮತ, ಜಾತಿ ಮತ್ತು ಧರ್ಮಗಳನ್ನು ಉಪಯೋಗಿಸಿದ. ಇದನ್ನು ಆಗಿನ ಕಾಲದ ಹಲವು ಅರಸರು ಪ್ರಯೋಗಿಸಿದ್ದರು. ಧಾರ್ಮಿಕ ಸಹಿಷ್ಣುತೆ ತನ್ನ ರಾಜ್ಯದ ಹಿತಾಸಕ್ತಿಗೆ ಭಂಗವುಂಟು ಮಾಡುವುದಿಲ್ಲ ಎಂದರಿತ ಟಿಪ್ಪು ಧಾರ್ಮಿಕ

ಸಹಿಷ್ಣುತೆಯನ್ನು ಧಾರಾಳವಾಗಿ ತೋರಿಸಿ ಅವನ ವೈರಿಗಳಿಗೆ ಅತ್ಯಂತ ಆಶ್ಚರ್ಯವನ್ನುಂಟು ಮಾಡಿದ. ಅವನ ರಾಜ್ಯದಲ್ಲಿ ಧಾರ್ಮಿಕ ದುರೀಣರು ಮತ್ತು ಧಾರ್ಮಿಕ ಸಂಸ್ಥೆಗಳು ಅಪಾಯವೆಂದು ಕಂಡಲ್ಲಿ ಅತ್ಯಂತ ಕ್ರೂರ ಧರ್ಮಾಂಧನಾಗಿಯೂ ವರ್ತಿಸಿದ. ಕೊಡಗು, ಮಲಬಾರು, ಕರಾವಳಿ ಪ್ರದೇಶಗಳಲ್ಲಿ ಧಾರ್ಮಿಕ ವ್ಯಕ್ತಿಗಳು ಮತ್ತು ಧಾರ್ಮಿಕ ಸಂಸ್ಥೆಗಳು ಟಿಪ್ಪುವಿನ ವಿರೋಧಿಗಳಾದ ಬ್ರಿಟಿಷರಿಗೆ ಸಹಾಯ ಮಾಡಿದರೆಂಬ ಕಾರಣದಿಂದ ಇವರುಗಳನ್ನು ಮತಾಂತರ ಮಾಡಲು ಕ್ರಮ ಕೈಗೊಂಡ ಇದನ್ನು ಶಿಕ್ಷಾ ದೃಷ್ಟಿಯಿಂದ ನಡೆಸಿದ.[೨೭] ಟಿಪ್ಪು ಈ ಮತಾಂತರ ಧೋರಣೆಯಿಂದ ರಾಜ್ಯಕ್ಕೆ ವ್ಯತಿರಿಕ್ತ ಪರಿಣಾಮ ಉಂಟಾಯಿತು.

ಇಸ್ಲಾಂ ಧರ್ಮದ ಬಗೆಗಿನ ಅವನ ಅತ್ಯುತ್ಸಾಹ ಮತ್ತು ಅದರ ಪರಿಣಾಮವಾಗಿ ಅವನು ಹಿಂದೂ ಧರ್ಮಿಯರ ಮೇಲೆ ಎಸಗಿದ ಘೋರ ಕೃತ್ಯಗಳು ಅವನ ಶಕ್ತಿ ಸಾಮರ್ಥ್ಯಗಳನ್ನು ಹೀರಿಬಿಟ್ಟವು. ಮತ್ತೆ ಮತ್ತೆ ಅವನು ತನ್ನ ಪ್ರಜೆಗಳೇ ಆಗಿದ್ದ ನಾಯರುಗಳು ಮತ್ತು ಕೊಡಗರ ವಿರುದ್ಧ ಹೋರಾಡಬೇಕಾಗಿ ಬಂತು. ಹೊರಗಿನ ಶತ್ರುಗಳಲ್ಲದೆ ಒಳಗಿನ ಅಸಂಖ್ಯಾತ ಶತ್ರುಗಳನ್ನೂ ಎದುರಿಸಬೇಕಾಯಿತು. ಅವರನ್ನು ಸರಿಯಾಗಿ ಮೆಟ್ಟಿ ಹಾಕಲು ಅವನಿಗೆ ಸಾಧ್ಯವಾಗಲಿಲ್ಲ. ಬ್ರಿಟಿಷರು ಇಂಥ ರಾಜಕೀಯ ಸನ್ನಿವೇಶವನ್ನು ತಮ್ಮ ವಸಾಹತೀಕರಣದ ಭದ್ರತೆ ಮತ್ತು ವಿಸ್ತರಣೆಗೆ ಬಳಸಿಕೊಂಡರು.

ಟಿಪ್ಪು ಕೆಲವು ವಿಲಕ್ಷಣ ಗುಣಗಳಿಂದ ಕೂಡಿದ ವ್ಯಕ್ತಿ. ಇವುಗಳಲ್ಲಿ ಮುಖ್ಯವಾದುದು ಅನ್ವೇಷಣಾಶೀಲ ಮನೋವೃತ್ತಿ ಮತ್ತು ಅದನ್ನು ಹಿಂಬಾಲಿಸುವ ಛಲ ಇವುಗಳು ಅವನ ಹೊಸ ಆಡಳಿತ ಮತ್ತು ಕೃಷಿ ಸುಧಾರಣೆಗೆ ಕಾರಣವಾಯಿತು. ರಾಜ್ಯಾಡಳಿತವನ್ನು ಹೊಸ ಮಾದರಿಯಲ್ಲಿ ಪುನರ್‌ರಚಿಸಿದ. ಕೃಷಿ, ನೀರಾವರಿ ಮತ್ತು ಸಾರಿಗೆ ಅಭಿವೃದ್ಧಿ ಪಡಿಸಲು ಮಹತ್ವದ ಕಾರ್ಯಕ್ರಮ ಹಾಕಿಕೊಂಡ. ಇದರೊಂದಿಗೆ ತನ್ನ ಸೈನ್ಯವನ್ನು ಆಧುನಿಕ ವಿಧಾನಗಳಿಂದ ಸಜ್ಜುಗೊಳಿಸಿದ. ಇದನ್ನು ಸಾಧಿಸಲು ಫ್ರೆಂಚ್ ತಜ್ಞರ ಸಹಾಯವನ್ನು ಪಡೆದ. ಇದರಿಂದಾಗಿ ಟಿಪ್ಪು ಫ್ರೆಂಚರ ಪರಾಶ್ರಿತನಾದ.[೨೮] ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಹೊಸ ಹೊಸ ಆವಿಷ್ಕಾರಗಳನ್ನು ನಡೆಸಿದ.

ಟಿಪ್ಪು ಚರಿತ್ರೆ ಬರವಣಿಗೆಯ ಸಂದರ್ಭಗಳನ್ನು ಕ್ರೋಢೀಕರಿಸಿ ವಸಾಹತುಶಾಹಿ, ರಾಷ್ಟ್ರೀಯ ವಾದಿ, ಪ್ರಗತಿಪರರು, ನವಚಾರಿತ್ರವಾದಿಗಳು ಮತ್ತು ಸಾಹಿತಿಗಳ ಅಭಿಪ್ರಾಯಗಳನ್ನು ವಿಶ್ಲೇಷಿಸಿದರೆ ಟಿಪ್ಪುವಿನ ವ್ಯಕ್ತಿತ್ವ ಮತ್ತು ಆಡಳಿತದ ಸ್ವರೂಪವನ್ನು ಅತೀಸೂಕ್ಷ್ಮವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಯಾವುದೋ ಒಂದು ಪೂರ್ವಾಗ್ರಹ ಪರಿಕಲ್ಪನೆಯನ್ನು ಇಟ್ಟುಕೊಂಡು ಚಾರಿತ್ರಿಕ ಘಟನೆಗಳನ್ನು ವಿವರಿಸುವುದು ತಪ್ಪಾಗುತ್ತದೆ. ಟಿಪ್ಪು ವಿಷಯದಲ್ಲಿ ಅದೇ ಆಗಿರುವುದು ಕೂಡ. ಟಿಪ್ಪುವಿನ ಆಳ್ವಿಕೆಯ ಕಾಲವನ್ನು ಧರ್ಮ, ಭಾಷೆ ಎನ್ನುವ ಸೂಕ್ಷ್ಮ ವಿಚಾರಗಳಿಗೆ ಒರೆಹಚ್ಚಿ ನೋಡುವುದರಿಂದ

ಸಾಮಾನ್ಯ ನೈಜ ಚರಿತ್ರೆಯನ್ನು ರಚಿಸಲು ಸಾಧ್ಯವಾಗುವುದಿಲ್ಲ. ತಪ್ಪು ಸಂದೇಶಗಳು ರವಾನೆಯಾಗಿ ಕೋಮುವಾದ, ಭಾಷಾ ಸಂಘರ್ಷದಂತಹ ಘಟನೆಗಳಿಗೂ ಕಾರಣವಾಗುತ್ತದೆ. ಟಿಪ್ಪು ಬ್ರಿಟಿಷರ ವಿರೋಧಿಯಾಗಿದ್ದ. ಭಾರತದಿಂದ ಅವರನ್ನು ಹೊರಗಟ್ಟಲು ಸರ್ವಪ್ರಯತ್ನ ನಡೆಸಿದ ಎಂದೂ ಬ್ರಿಟಿಷರೊಡನೆ ರಾಜಿ ಮಾಡಿಕೊಳ್ಳಲಿಲ್ಲ. ಸ್ವಾಭಿಮಾನವನ್ನು ಮತ್ತು ನಾಡಿನ ಸ್ವಾಯತ್ತತೆಯನ್ನು ಅವರಿಗೆ ಒತ್ತೆಯಿಡುವುದು ಅವನಿಗೆ ಒಗ್ಗದ ವಿಷಯವಾಗಿತ್ತು. ವಸಾಹತುಶಾಹಿ ಶಕ್ತಿಯನ್ನು ಬಲವಾಗಿ ಪ್ರತಿರೋಧಿಸಿದ. ಅವರ ಪ್ರಭುತ್ವ ಸ್ಥಾಪನೆ ಮತ್ತು ಸಾಮ್ರಾಜ್ಯ ವಿಸ್ತರಣಾ ನೀತಿಯನ್ನು ತಡೆದನು ಎಂಬ ಕಾರಣಕ್ಕೆ ಬ್ರಿಟಿಷ ವಸಾಹತುಶಾಹಿ ಬರಹಗಾರರು ಅವನೊಬ್ಬ ಮತಾಂಧ, ಕ್ರೂರಿ, ಕನ್ನಡ ಭಾಷಾ ವಿರೋಧಿ ಎಂಬ ನಿಲುವುಗಳನ್ನು ತಮ್ಮ ಬರವಣಿಗೆಗಳಲ್ಲಿ ಮೂಡಿಸಿದರು. ಈ ವಸಾಹತುಶಾಹಿ ಬರಹಗಾರರು ಹಾಕಿಕೊಟ್ಟ ದಾರಿಯಲ್ಲೆ ಟಿಪ್ಪುವಿನ ಚರಿತ್ರೆ ರಚನೆ ಮಾಡ ಹೊರಟ ರಾಷ್ಟ್ರವಾದಿ ಚರಿತ್ರೆಕಾರರು ಟಿಪ್ಪುವನ್ನು ಇಸ್ಲಾಂ ಧರ್ಮದ ಮತ್ತು ಪರ್ಶಿಯನ್ ಭಾಷಿಕ ಪ್ರೇಮದ ನೆಲೆಗಟ್ಟಿನಲ್ಲೇ ಚಿತ್ರಿಸಿದರು. ಇದರಿಂದ ಟಿಪ್ಪುವಿನ ಬಗೆಗೆ ವಸ್ತುನಿಷ್ಠ ಚರಿತ್ರೆ ರೂಪುಗೊಳ್ಳಲು ಸಾಧ್ಯವಾಗಲಿಲ್ಲ. ಬದಲಾಗಿ ಅವನೊಬ್ಬ ಅನ್ಯಧರ್ಮ ವಿರೋಧಿ, ರಾಷ್ಟ್ರದ್ರೋಹಿ, ಕನ್ನಡ ಭಾಷಾ ವಿರೋಧಿ ಎಂಬ ಅಭಿಪ್ರಾಯ ಮೂಡಲು ಎಡೆ ಮಾಡಿಕೊಟ್ಟಿತು. ಇಂದಿಗೂ ಈ ಭಾವನಾತ್ಮಕ ಅಂಶಗಳಿಂದಲೇ ಟಿಪ್ಪು ಪರ–ವಿರೋಧ ಅಭಿಪ್ರಾಯ ವ್ಯಕ್ತವಾಗುತ್ತದೆ. ಹೆಚ್ಚು ಚರ್ಚೆಗೂ ಗ್ರಾಸವಾಗಿದೆ.

ಟಿಪ್ಪುವನ್ನು ನೋಡುವ ದೃಷ್ಟಿಕೋನ ಚರಿತ್ರೆಕಾರರಲ್ಲಿ ಬದಲಾಗಬೇಕು. ಅಂದಿನ ಕಾಲಘಟ್ಟದ ಸಂಗತಿ–ಸನ್ನಿವೇಶಗಳು, ಬ್ರಿಟಿಷರು ಭಾರತದಲ್ಲಿ ಅನುಸರಿಸುತ್ತಿದ್ದ ಒಡೆದು ಆಳುವ ನೀತಿಗಳು, ಅದರಿಂದ ಭಾರತೀಯ ರಾಜರುಗಳು ಅನುಭವಿಸಿದ ಕಷ್ಟಗಳು ಇವುಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಟಿಪ್ಪುವನ್ನು ಒಂದು ರಾಜ್ಯದ ರಾಜನನ್ನಾಗಿ ನೋಡಬೇಕೆ ವಿನಃ ಅವನನ್ನು ಧರ್ಮ, ಭಾಷೆ ಎಂಬ ಸಂಕುಚಿತ ಭಾವನೆಗಳಿಗೆ ಕಟ್ಟಿಹಾಕಬಾರದು. ಟಿಪ್ಪು ರಾಜ್ಯದಲ್ಲಿ ಎಲ್ಲಾ ಧರ್ಮಿಯರೂ, ಭಾಷಿಕರೂ ಇದ್ದರು. ಎಲ್ಲರಿಗೂ ಸಮಾನ ಪ್ರೋತ್ಸಾಹ ನೀಡಿದ. ಪ್ರಜೆಗಳು ರಾಜ್ಯಕ್ಕೆ ದ್ರೋಹ ಬಗೆದರೆ, ತಪ್ಪು ಮಾಡಿದರೆ ಕಠಿಣವಾಗಿ ಶಿಕ್ಷಿಸುತ್ತಿದ್ದ ಇದು ಅನಿವಾರ್ಯವಾಗಿತ್ತು.

ಚರಿತ್ರೆ ಬರವಣಿಗೆಯ ಸಂದರ್ಭದಲ್ಲಿ ಪ್ರತಿಯೊಂದು ಘಟನೆಯನ್ನು ವಸ್ತುನಿಷ್ಠವಾಗಿ ನೋಡಬೇಕು. ನಡೆದ ಘಟನೆಗಳನ್ನು ಯಥಾವತ್ತಾಗಿ ಹಾಗೆ ಚಿತ್ರಿಸಬೇಕು. ಅದನ್ನು ತಿರುಚಿದರೆ ಅದರ ಪರಿಣಾಮಗಳು ಸಮಾಜದ ಮೇಲೆ ಬೇರೆಯೇ ಆಗಿರುತ್ತದೆ. ಟಿಪ್ಪುವಿನ ಚರಿತ್ರೆ ರಚನೆ ಸಂದರ್ಭದಲ್ಲೂ ಇದೇ ಆಗಿರುವುದು. ಪ್ರಸ್ತುತ ಸಂದರ್ಭದಲ್ಲಿ ಟಿಪ್ಪು ಹೆಚ್ಚು ಚರ್ಚೆಗೆ ಗುರಿಯಾಗಿದ್ದಾನೆ. ಇಂದಿನ ರಾಜಕಾರಣಕ್ಕೆ ಅಂದಿನ ಚಾರಿತ್ರಿಕ ಘಟನೆಗಳನ್ನು ಬಳಸಿ ಅಧಿಕಾರ ಹಿಡಿಯುವ,

ಸಮಾಜದಲ್ಲಿ ಕೋಮುಭಾವನೆ ಕೆರಳಿಸಿ ರಾಜಕೀಯ ಲಾಭ ಮಾಡಿಕೊಳ್ಳುವ ಹುನ್ನಾರಗಳು ನಡೆದಿವೆ. ಇದರಿಂದ ಟಿಪ್ಪು ಚರಿತ್ರೆ ಪುನರ್ ಮೌಲ್ಯೀಕರಣ ಹೊಂದಬೇಕಾಗಿದೆ. ಟಿಪ್ಪುವಿನ ಪರ-ವಿರುದ್ಧ ವಾದಗಳಿಗೆ ಸರಿ ಉತ್ತರವನ್ನು ಹುಡುಕಿ ಕೊಡುವ ಜವಾಬ್ದಾರಿ ಚರಿತ್ರೆಕಾರರ ಮೇಲಿದೆ.

ಅಡಿಟಿಪ್ಪಣಿಗಳು

೧. ಚಿನ್ನಸ್ವಾಮಿ ಸೋಸಲೆ ಎನ್., ಚರಿತ್ರೆ ಅಧ್ಯಯನ, ಸಂಪುಟ ೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯, ಪು.೩

೨. ಗೋವಿಂದರಾಜು ಸಿ.ಆರ್., ಚರಿತ್ರೆ ಅಧ್ಯಯನ, ಸಂಪುಟ ೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೩. ಕರ್ನಾಟಕ ವಿಮೋಚನಾರಂಗ, ೧೯೯೯, ಪು.೪

೪. ಗೋವಿಂದರಾಜು ಸಿ.ಆರ್.(ಸಂ), ಮೋಹನ್‌ಕೃಷ್ಣ ರೈ ಕೆ.(ಲೇ), ಚರಿತ್ರೆ ಅಧ್ಯಯನ, ಸಂಪುಟ ೨, ೨೦೦೬, ಪು.೩

೫. ಮೋಹನ್‌ಕೃಷ್ಣ ರೈ ಕೆ., ಚರಿತ್ರೆ ಅಧ್ಯಯನ ಸಂಪುಟ ೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭, ಪು.ಸಂ.ನು.

೬. ಬಾರಕೂರು ಉದಯ, ಹೈದರಾಲಿ-ಟಿಪ್ಪು ಇತಿಹಾಸ ಕಥನ, ಮಾನವತಾ ವೇದಿಕೆ, ಮಂಗಳೂರು, ೨೦೦೩, ಪು.೫

೭. ಅದೇ, ಪು.೬

೮. ವಿರೂಪಾಕ್ಷಿ ಪೂಜಾರಳ್ಳಿ, ಚರಿತ್ರೆ ಅಧ್ಯಯನ, ಸಂಪುಟ ೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೯, ಪು.೩.

೯. ವಿಜಯ್ ಪೂಣಚ್ಚ ತಂಬಂಡ, ಚರಿತ್ರೆ ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪು.೫೫.

೧೦. ವಿರೂಪಾಕ್ಷಿ ಪೂಜಾರಳ್ಳಿ, ಪೂರ್ವೋಕ್ತ, ಪು.೭-೪.

೧೧. ವಿಜಯ್ ಪೂಣಚ್ಚ ತಂಬಂಡ, ಪೂರ್ವೋಕ್ತ, ಪು.೫೬.

೧೨. ವಿರೂಪಾಕ್ಷಿ ಪೂಜಾರಳ್ಳಿ, ಪೂರ್ವೋಕ್ತ, ಪು.೫.

೧೩. ವಿಜಯ್ ಪೂಣಚ್ಚ ತಂಬಂಡ, ಪೂರ್ವೋಕ್ತ, ಪು.೫೬-೫೭.

೧೪. ಅದೇ, ಪು.೬೦-೬೬.

೧೫. ಅದೇ, ಪು.೬೯.

೧೬. ಅದೇ, ಪು.೭೫.

೧೭. ಅದೇ, ಪು.೪೪೫.

೧೮. ಅದೇ, ಪು.೪೪೮-೪೫೨.

೧೯. ಅದೇ, ಪು.೪೫೬.

೨೦. ಅದೇ, ಪು.೪೫೯.

೨೧. ಅದೇ, ಪು.೪೬೧.

೨೨. ಅದೇ, ಪು.೪೬೪.

೨೩. ಅದೇ, ಪು.೪೬೬.

೨೪. ಚಿನ್ನಸ್ವಾಮಿ ಸೋಸಲೆ ಎನ್., ಚರಿತ್ರೆ ಅಧ್ಯಯನ, ಸಂಪುಟ ೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೨-೧೩.

೨೫. ಬಾರ್ಕೂರು ಉದಯ, ಹೈದರಾಲಿ-ಟಿಪ್ಪು: ಇತಿಹಾಸ ಕಥನ, ಮಾನವತಾ ವೇದಿಕೆ, ಮಂಗಳೂರು, ೨೦೦೩, ಪು.೬

೨೬. ಅದೇ, ಪು.೭

೨೭. ರಂಗನಾಥ್ ಎಸ್.ಬಿ.(ಅನು), ಭಗವಾನ್ ಎಸ್ ಗಿದ್ವಾನಿ(ಮೂಲ), ಟಿಪ್ಪು ಸುಲ್ತಾನನ ಖಡ್ಗ, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ೨೦೧೩, ಪು.XXiV

೨೮. ಅದೇ, ಪು.XXXiii

೨೯. ಡಾಡ್ವೆಲ್ ಎಚ್.ಎಚ್., ಕೇಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ, ಸಂಪುಟ ೫, ಕೇಂಬ್ರಿಡ್ಜ್ ೧೯೨೯, ಪು.೩೪೨.

೩೦. ಮಾರ್ಕ್‌ವಿಲ್ಕ್ಸ್, ಹಿಸ್ಟಾರಿಕಲ್ ಸ್ಕೆಚ್ಚಸ್ ಆಫ್ ದಿ ಇಂಡಿಯನ್ ಇನ್ ಆ್ಯನ್ ಅಂಟೆಮ್ಪ್ ಟು ಟ್ರೇಸ್ ದಿ ಹಿಸ್ಟರಿ ಆಫ್ ಮೈಸೂರ್, ಸಂಪುಟ ೩, ಕಾಸ್ಮೋ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, ೧೯೮೦, ಪು.೭೬೭

೩೧. ಬೌರಿಂಗ್ ಲೆವಿನ್ ಬಿ, ಹೈದರ್ ಅಂಡ್ ಟಿಪ್ಪು ಸುಲ್ತಾನ್, ಆಕ್ಸ್‌ಫರ್ಡ್, ೧೮೯೩, ಎಸ್ ಚಾಂದ್, ದೆಹಲಿ, ೧೯೬೮, ಪು.೨೨೬.

೩೨. ಹಯವದನ್‌ರಾವ್ ಸಿ. ಹಿಸ್ಟರಿ ಆಫ್ ಮೈಸೂರ್, ಸಂಪುಟ ೩, ಸರ್ಕಾರಿ ಮುದ್ರಣಾಲಯ, ಬೆಂಗಳೂರು, ೧೯೪೬, ಪು. ೧೦೪೩-೫೩

೩೩. ಹುಸೇನ್ ಅಲಿಖಾನ್ ಕಿರ್ಮಾನಿ, ಹಿಸ್ಟರಿ ಆಫ್ ದಿ ರೀಜನ್ ಆಫ್ ಟಿಪ್ಪುಸುಲ್ತಾನ್ ಲಂಡನ್, ೧೮೪೪, ಪು.೨೮೧.

೩೪. ಜವಾಹರಲಾಲ ನೆಹರು, ದಿ ಡಿಸ್ಕವರಿ ಆಫ್ ಇಂಡಿಯಾ, ಅರಮನೆ ಆವೃತ್ತಿ ಲಂಡನ್, ೧೯೫೬, ಪು.೨೭೨-೭೩.

೩೫. ತಾರಾಚಂದ್ ಎಸ್., ಹಿಸ್ಟರಿ ಆಫ್ ದಿ ಫ್ರೀಡಂ ಮೂವ್‌ಮೆಂಟ್ ಆಫ್ ಇಂಡಿಯಾ ನ್ಯೂಡೆಲ್ಲಿ, ೧೯೬೫, ಸಂಪುಟ ೧, ಪು.೨೨೬-೨೨೭.

೩೬. ಗೌರಿಸುಂದರ್, ಟಿಪ್ಪುಸುಲ್ತಾನ್ ಕನ್ನಡ ದ್ರೋಹಿಯೇ? ಸುಂದರ ಪ್ರಕಾಶನ, ಬೆಂಗಳೂರು, ೨೦೦೬, ಪು.೭೩, ೭೪.

೩೭. ಅದೇ, ಪು.೧೯೩.

೩೮. ಅದೇ, ಪು.೧೨೫.

೩೯. ಅದೇ, ಪು.೧೨೯.

೪೦. ಅದೇ, ಪು.೧೩೦.

೪೧. ರಂಗನಾಥ್ ಎಸ್.ಬಿ., ಪೂರ್ವೋಕ್ತ, ಪು.೧೫.

೪೨. ಅದೇ, ಪು.XVi.

೪೩. ಚಿದಾನಂದ ಮೂರ್ತಿ ಎಂ., ಮೂಲ ದಾಖಲೆಗಳಲ್ಲಿ ಹುದುಗಿದ್ದ ಟಿಪ್ಪು, ಭಾರತ ವಿಕಾಸ ಪರಿಷತ್ತು, ಬೆಂಗಳೂರು, ೨೦೧೩, ಪು.೩.

೪೪. ಅದೇ, ಪು.೪.

೪೫. ಅದೇ, ಪು.೫.

೪೬. ಗೌರಿಸುಂದರ್, ಪೂರ್ವೋಕ್ತ, ಪು.೨೬.

೪೭. ಅದೇ, ಪು.೧.

೪೮. ಅದೇ, ಪು.೬

೪೯. ಅದೇ, ಪು.೭

೫೦. ಅದೇ, ಪು.೨೧.

೫೧. ಅದೇ, ಪು.೨೦.

೫೨. ವಿಜಯ ಕರ್ನಾಟಕ, ನವೆಂಬರ್ ೨೦೦೬, ಪು.೪

೫೩. ಗೌರಿಸುಂದರ್, ಪೂರ್ವೋಕ್ತ, ಪು.೭-೮.

೫೪. ಅದೇ, ಪು.೯೮.

೫೫. ಕರ್ಮವೀರ, ನವೆಂಬರ್ ೨೦೦೬, ಪು.೧೦-೧೧

೫೬. ಮುತ್ತಣ್ಣ ಐ.ಎಂ., ಟಿಪ್ಪು ಸುಲ್ತಾನ್, ಎಕ್ಸ್‌ರಾಯ್ಡ್, ೧೯೮೦, ಪು.೧೦೮.

೫೭. ವಿಜಯ ಕರ್ನಾಟಕ, ನವೆಂಬರ್ ೨೦೦೬, ಪು.೨೦೩.

೫೮. ಗೌರಿಸುಂದರ್, ಪೂರ್ವೋಕ್ತ, ಪು.೨೦೭.

೫೯. ವಿಜಯ ಕರ್ನಾಟಕ, ನವೆಂಬರ್ ೨೦೦೬, ಪು.೫.

೬೦. ಕರ್ಮವೀರ, ನವೆಂಬರ್ ೨೦೦೬, ಪು.೯.

೬೧. ಗೌರಿಸುಂದರ್, ಪೂರ್ವೋಕ್ತ, ಪು.೧೩೬-೧೩೭.

೬೨. ಅದೇ, ಪು.೨೧೪-೨೧೫.

೬೩. ಹಯವದನರಾವ್ ಸಿ., ಹಿಸ್ಟರಿ ಆಫ್ ಮೈಸೂರ್, ಸಂಪುಟ ೩, ೧೯೪೬ ಪು.೨೨೪.

೬೪. ವಾರ್ತಾಭಾರತಿ, ಮಂಗಳೂರು, ನವೆಂಬರ್ ೨೦೦೬, ಪು.೬

೬೫. ಸಂಯುಕ್ತ ಕರ್ನಾಟಕ, ನವೆಂಬರ್ ೧, ೨೦೦೬, ಪು.೪

೬೬. ಕರ್ಮವೀರ, ನವೆಂಬರ್ ೨೦೦೬, ಪು.೧೦.

೬೭. ವಾರ್ತಾಭಾರತಿ, ಮಂಗಳೂರು, ನವೆಂಬರ್ ೨೦೦೬, ಪು.೬.

೬೮. ಹೊಸತು, ನವೆಂಬರ್, ೨೦೦೬, ಪು.೯.

೬೯. ಸಂಯುಕ್ತ ಕರ್ನಾಟಕ, ನವೆಂಬರ್ ೧, ೨೦೦೬, ಪು.೪

೭೦. ಸುಲ್ತಾನ್ ವಾರ್ಷಿಕ ವರದಿ, ೨೦೦೬, ಪು.೬.

೭೧. ಗೌರಿಸುಂದರ್, ಪೂರ್ವೋಕ್ತ, ಪು.೧೯೭

೭೨. ಅದೇ, ಪು.೧೯೯-೨೦೧.

೭೩. ಅದೇ, ಪು.೨೦೨.

೭೪. ಕೋ. ಚೆನ್ನಬಸಪ್ಪ, ಟಿಪ್ಪು ಸುಲ್ತಾನ್, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೩, ಪು.೯.

೭೫. ಇರ್ಫಾನ್ ಹಬೀಬ್, ಸ್ಟೇಟ್ ಅಂಡ್ ಡಿಪ್ಲೊಮಸಿ ಅಂಡರ್ ಟಿಪ್ಪು ಸುಲ್ತಾನ್, ತುಲಿಕಾ, ನ್ಯೂಡೆಲ್ಲಿ, ೨೦೦೧, ಪು.ಸಂಪಾದಕರ ನುಡಿ

೭೬. ಅದೇ, ಪು.೧೩೪

೭೭. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ ಸಂಪುಟ ೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು.ಸಂಪಾದಕರ ನುಡಿ

೭೮. ಚಂದ್ರಶೇಖರ್ ಎಸ್., ವಸಹಾತುಕಾಲೀನ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬, ಪು.೩೩

೭೯. ಅದೇ, ಪು.೨೬

೮೦. ಬಾರ್ಕೂರು ಉದಯ, ಹೈದರಾಲಿ-ಟಿಪ್ಪು ಇತಿಹಾಸ ಕಥನ, ಮಾನವತಾ ವೇದಿಕೆ, ಮಂಗಳೂರು, ೨೦೦೩, ಪು.೯೫

೮೧. ಗೋವಿಂದರಾಜು ಸಿ.ಆರ್., ಚರಿತ್ರೆ ಅಧ್ಯಯನ, ಸಂಪುಟ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪು.೧೩೪

೮೨. ಮೋಹನ್‌ಕೃಷ್ಣ ರೈ ಕೆ.(ಪ್ರಸಂ)., ಚರಿತ್ರೆ ಅಧ್ಯಯನ, ಸಂಪುಟ ೩, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭, ಪು.೮೯.

೮೩. ಗೋವಿಂದರಾಜು ಸಿ.ಆರ್., ಚರಿತ್ರೆ ಅಧ್ಯಯನ, ಸಂಪುಟ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪು.೧೩೪

೮೪. ಅದೇ, ಪು.೧೩೫

೮೫. ಅದೇ, ಪು.೧೭.

೮೬. ಮೋಹನ್‌ಕೃಷ್ಣ ರೈ ಕೆ.(ಪ್ರಸಂ)., ಚರಿತ್ರೆ ಅಧ್ಯಯನ, ಸಂಪುಟ ೩, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭, ಪು.೯೦-೯೧

೮೭. ಅದೇ, ಪು.೯೨.

೮೮. ಅದೇ, ಪು.೯೫-೯೬.

ಅಧ್ಯಾಯ ಮೂರು

ಟಿಪ್ಪು ಸುಲ್ತಾನನ ಆಡಳಿತದ ಸ್ವರೂಪ

ಅಧ್ಯಾಯ ಮೂರು

ಟಿಪ್ಪು ಸುಲ್ತಾನನ ಆಡಳಿತದ ಸ್ವರೂಪ

೩.೧. ಹೈದರಾಲಿಯ ರಾಜಕೀಯ ಪ್ರವೇಶ

ಹೈದರಾಲಿಯ ಪೂರ್ವ ಇತಿಹಾಸವನ್ನು ನಿರ್ದಿಷ್ಟವಾಗಿ ಹೇಳಲು ಅಸಾಧ್ಯವಾದರೂ, ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು.[೧] ಹೈದರನ ಪೂರ್ವಜರು ಬಾಗ್ದಾದ್‌ನಿಂದ ಬಂದಿದ್ದು, ಪಂಜಾಬಿನಲ್ಲಿ ನೆಲೆಸಿದ್ದು, ಅನಂತರದಲ್ಲಿ ಅಜ್ಮೀರ್‌ನ ಮೂಲಕ ದಕ್ಷಿಣಕ್ಕೆ ಬಂದವರೆಂದು ನಂಬಲಾಗಿದೆ.[೨] ಹದಿನೆಂಟನೇ ಶತಮಾನ ಆರಂಭದಲ್ಲಿ(೧೭೧೯-೪೮) ಮೊಗಲ್ ಸಾಮ್ರಾಟ ಮಹಮದ್ ಶಾಹನು ಆಳ್ವಿಕೆ ನಡೆಸುವಾಗ ಅವನ ದಳಪತಿ ಅಥವಾ ಪೌಜುದಾರನಾಗಿ ಕರ್ನಾಟಕದ ತುಮಕೂರು ಜಿಲ್ಲೆಯ ಶಿರಾದಲ್ಲಿ ಕಾರ್ಯನಿರ್ವಹಿಸುತ್ತಿದ್ದ ದರ್ಗಾಖಲಿಖಾನ್ ಸೇವೆಯಲ್ಲಿದ್ದ ಪತಹ್ ಮಹಮದ್‌ನ ಮಗ ಹೈದರಾಲಿ.[೩] ಪತಹ್ ಮಹಮದ್‌ಗೆ ಮೂವರು ಹೆಂಡತಿಯರು. ಕಿರಿಯ ಪತ್ನಿಯಲ್ಲಿ ಶಾಹ್‌ಬಾಜ್ ಮತ್ತು ಹೈದರ್ ಜನಿಸಿದರು.[೪] ಹೈದರಾಲಿ ಕ್ರಿ.ಶ.೧೭೨೨ರಲ್ಲಿ ಕೋಲಾರ ಜಿಲ್ಲೆಯ ಬೂದಿಕೋಟೆಯಲ್ಲಿ ಜನಿಸಿದನು.[೫] ಪತಹ್ ಮಹಮದ್ ಯುದ್ಧದಲ್ಲಿ ಸಾವಿಗೀಡಾಗಿದ್ದ. ಅವನ ಹೆಂಡತಿ ತನ್ನ ಬಂಧುಗಳೊಡನೆ ವಾಸಿಸುವ ಸಲುವಾಗಿ ತನ್ನ ಇಬ್ಬರು ಮಕ್ಕಳೊಂದಿಗೆ ಬೆಂಗಳೂರಿಗೆ ವಲಸೆ ಬಂದಳು. ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ಅವರನ್ನು ಶ್ರೀರಂಗಪಟ್ಟಣಕ್ಕೆ ಕರೆತರಲಾಯಿತು. ರಾಜ್ಯದ ಮುಖ್ಯ ಸೇನಾಧಿಕಾರಿಯಾಗಿದ್ದ ನಂಜರಾಜನು ಅವರನ್ನು ಸೈನಿಕರಾಗಿ ನೇಮಿಸಿದನು.[೬] ಹೈದರಾಲಿ ೧೭೪೯ರಲ್ಲಿ ಅಶ್ವದಳದ ಅಧಿಕಾರಿಯಾಗಿ ನೇಮಕಗೊಂಡನು.

ಮೈಸೂರು ರಾಜ್ಯದ ಸೈನ್ಯದ ಉನ್ನತ ದರ್ಜೆಗೆ ಹೈದರಾಲಿ ನೇಮಕ ಹೊಂದಲು ಆ ಕಾಲದ ರಾಜರುಗಳು ಪಾಲಿಸಿಕೊಂಡು ಬಂದಿರುವ ಒಂದು ನೀತಿ ಕಾರಣವಾಗಿದ್ದಿರಬೇಕು. ಏಕೆಂದರೆ ಇಂಥ ದರ್ಜೆಗೆ ನೇಮಕ ಮಾಡಿಕೊಳ್ಳುವಾಗ ಪದ್ಧತಿಯಂತೆ ಮೊಗಲ್ ಸೈನಿಕ

ವರ್ಗದಿಂದಲೇ ಅದರಲ್ಲೂ ಅಶ್ವದಳದಲ್ಲಿ ಸೇವೆಯಲ್ಲಿದ್ದು ಪರಿಣತಿ ಹೊಂದಿವರನ್ನು ಹೆಚ್ಚಾಗಿ ನೇಮಿಸಲಾಗುತ್ತಿತ್ತು. ಹೊಸ ತಳಿಯ ಕುದುರೆಗಳ ಸವಾರಿಯಲ್ಲಿ ಪರಿಣಿತರಾದವರು ಹಾಗೂ ಬಿಲ್ಲು ವಿದ್ಯೆಯಲ್ಲಿ ಪರಿಣಿತರಾದವರು ಹದಿನೆಂಟನೆ ಶತಮಾನದ ಭಾರತದ ಸೈನ್ಯದ ಮುಖ್ಯ ಸಂಪತ್ತಾಗಿದ್ದರು. ಶತ್ರುಗಳನ್ನು ಸದೆಬಡಿಯಲು ಇದು ಅನಿವಾರ್ಯವಾಗಿತ್ತು.[೭] ಈ ಕಾರಣದಿಂದ ಮೊಗಲ್ ಸಾಮ್ರಾಜ್ಯದ ಅಶ್ವದಳದಲ್ಲಿ ಪಳಗಿದ ಸೈನಿಕರು ಉದ್ಯೋಗವಿಲ್ಲದಾಗ ಹೊಸದಾಗಿ ಉಗಮವಾಗುವ ಸ್ಥಳೀಯ ಆಡಳಿತದಲ್ಲಿ ಉದ್ಯೋಗಕ್ಕೆ ಸೇರಿಕೊಳ್ಳುವ ಪ್ರವೃತ್ತಿ ಸರ್ವೇಸಾಮಾನ್ಯವಾಗಿತ್ತು. ಹೈದರಾಲಿ ವಿಚಾರವಾಗಿ ಅವನು ಆದಾಗಲೇ ಮೊಗಲರ ಆಡಳಿತದಲ್ಲಿ ದಳಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಸಾಕಷ್ಟು ತರಬೇತಿ ಪಡೆದ ನಂತರ ಅಧಿಕಾರದ ಚುಕ್ಕಾಣಿ ಹಿಡಿದು ಪರ್ಯಾಯ ಅಧಿಪತ್ಯ ಸ್ಥಾಪಿಸಿ ಹೊಸ ರಾಜಕೀಯ, ಆಡಳಿತ ಸಂಸ್ಥೆಗಳನ್ನು ಮೈಸೂರು ರಾಜ್ಯದಲ್ಲಿ ಈಗಾಗಲೇ ಚಾಲ್ತಿಯಲ್ಲಿದ್ದ ಪದ್ಧತಿಯಲ್ಲಿ ಅಳವಡಿಸಲು ಪ್ರಯತ್ನ ನಡೆಸಿರುವುದು ಗಮನಾರ್ಹ ಸಂಗತಿ.

ಮೈಸೂರಿನಲ್ಲಿ ಈ ರಾಜಕೀಯ ಬದಲಾವಣೆ ಆಗುವ ಸ್ವಲ್ಪ ಸಮಯದ ಮೊದಲು ಕೆಲವೊಂದು ಅವಕಾಶಗಳು ಹೈದರಾಲಿಗೆ ಲಭ್ಯವಾಗಿದ್ದವು. ಹದಿನೆಂಟನೆಯ ಶತಮಾನದ ಭಾರತದಲ್ಲಿ ನಡೆದ ಬಹುತೇಕ ಯುದ್ಧಗಳಲ್ಲಿ ಸುಸಜ್ಜಿತ ಕಾಲುದಳದ ಭಾಗವಹಿಸುವಿಕೆ ಮುಖ್ಯವಾಗಿತ್ತು. ಇದು ಇನ್ನುಳಿದ ಸೈನಿಕ ದಳಕ್ಕಿಂತಲೂ ಉತ್ಕೃಷ್ಟವಾಗಿತ್ತು. ಕ್ರಿ.ಶ.೧೭೪೭ ಮೈಲಾಪೋರ್ (ಮದ್ರಾಸ್) ಕದನದಲ್ಲಿ ಫ್ರೆಂಚರ ಕಾಲುದಳ ಸೈನ್ಯವು ಮೊಗಲ್ ದಳಪತಿ ಅನ್ವರುದ್ದೀನ್ ಖಾನ್ ನೇತೃತ್ವದ ಅಶ್ವದಳವನ್ನು ಸೋಲಿಸಿತು. ಇದು ನಡೆದುದು ಬ್ರಿಟಿಷ್ ಫ್ರೆಂಚ್ ನಡುವೆ. ದಕ್ಷಿಣ ಭಾರತದಲ್ಲಿ ತಮ್ಮದೇ ಸಾರ್ವಭೌಮತ್ವವನ್ನು ಸ್ಥಾಪಿಸಲು ನಡೆಸಿದ ಕರ್ನಾಟಕ ಯುದ್ಧದ ಸಮಯದಲ್ಲಿ ಹೈದರಾಲಿ ಈ ಕದನಗಳಲ್ಲಿ ಫ್ರೆಂಚರ ಪರವಾಗಿ ಭಾಗವಹಿಸಿದ್ದು, ಐರೋಪ್ಯ ಮಾದರಿಯ ಯುದ್ಧ ಕೌಶಲ್ಯವನ್ನು ಕಲಿತುಕೊಳ್ಳಲು ಅವಕಾಶ ಸಿಕ್ಕಿತು. ಫ್ರೆಂಚ್ ಸೈನ್ಯದ ಶಿಸ್ತು ಅವನ ಮೇಲೆ ಪರಿಣಾಮ ಬೀರಿತು. ಇದಕ್ಕೆ ಪೂರಕವಾಗಿ ಕ್ರಿ.ಶ.೧೭೫೫–೫೬ರಲ್ಲಿ ಫ್ರೆಂಚ್ ಅಧಿಕಾರಿಗಳ ಸೇವೆ ಪಡೆದು ಫಿರಂಗಿಗಳನ್ನು, ಮದ್ದುಗುಂಡುಗಳನ್ನು, ಬಂದೂಕುಗಳನ್ನು ಸಂಗ್ರಹಿಸಿದನು. ಶಸ್ತ್ರಾಗಾರಗಳನ್ನು ಅನೇಕ ಕಡೆಗಳಲ್ಲಿ ತೆರೆದನು. ಹೈದರಾಲಿ ಸೈನಿಕ ಶಕ್ತಿ ವೃದ್ಧಿಯಾಗಲು ಕಾರಣ ಒಂದನೆಯದಾಗಿ ಅವನು ಆರಂಭದಿಂದಲೂ ಸೈನ್ಯದಲ್ಲಿ ಸೇವೆಯಲ್ಲಿದ್ದು ಸಾಕಷ್ಟು ತರಬೇತಿಯ ನೈಪುಣ್ಯತೆ ಪಡೆದಿದ್ದನು. ಎರಡನೆಯದಾಗಿ ವೈಯಕ್ತಿಕ ನೆಲೆಯಲ್ಲಿ ರೂಢಿಸಿಕೊಂಡಿರುವ ವ್ಯವಹಾರ ಕುಶಲತೆ, ದಳಪತಿಯಾಗಿ ಸೈನ್ಯದ ತುಕಡಿಯಲ್ಲಿ ವಹಿಸಿಕೊಂಡಿರುವ ಅಧಿಕಾರ. ಇದರಿಂದ ಹೈದರಾಲಿಗೆ ಎರಡು ರೀತಿಯ ಲಾಭ ದೊರೆಯಿತು. ೧. ಮೊಗಲ್ ಸೈನ್ಯದಲ್ಲಿ ದಳಪತಿಯಾಗಿ ಅಶ್ವದಳ ತರಬೇತಿ. ೨. ಫ್ರೆಂಚ್ ಅಧಿಕಾರಿಗಳ

ಸಹವಾಸದಿಂದ ಮಸ್ಕತ್ ಬಂದೂಕು ಉಪಯೋಗಿಸಲು ಶಿಸ್ತುಬದ್ಧ ಕಾಲುದಳದ ತರಬೇತಿ. ಇವೆರಡರ ತರಬೇತಿಯಿಂದ ಭಾರತವಲ್ಲಿ ಹೈದರಾಲಿ ಮಾತ್ರ ಮೊದಲಿಗೆ ಯುರೋಪ್ ಮಾದರಿಯ ಕಾಲುದಳದ ಸಂಘಟನೆ ಮತ್ತು ಬಂದೂಕುಗಳೊಂದಿಗೆ ಸಜ್ಜುಗೊಂಡ ಕಾಲುದಳದ ಉಪಯುಕ್ತತೆ ಕರ್ನಾಟಕದ ಸೈನ್ಯಕ್ಕೆ ಅವಶ್ಯ ಇರುವುದನ್ನು ಮೊದಲು ಕಂಡುಕೊಂಡನು. ಇದೊಂದರಿಂದಲೇ ಹೈದರಾಲಿ ಒಬ್ಬ ವಿಶಿಷ್ಟ ವ್ಯಕ್ತಿಯಾಗಿ ಭಾರತದ ಇತಿಹಾಸ ಪುಟಗಳಲ್ಲಿ ಸ್ಥಾನ ಪಡೆದಿದ್ದಾನೆ.

ಮೈಸೂರು ಸಂಸ್ಥಾನದಲ್ಲಿ ಹೈದರಾಲಿ ಅಧಿಕಾರ ಪಡೆದಿರುವುದು ತನ್ನ ವ್ಯವಹಾರಿಕ ಜ್ಞಾನದಿಂದ ಮತ್ತು ಕ್ಲುಪ್ತ ಸಮಯಕ್ಕೆ ಚಾಣಾಕ್ಷತನ ತೋರಿರುವುದರಿಂದಲೇ. ಈ ಸಂದರ್ಭದಲ್ಲಿ ಅಂದಿನ ರಾಜಕೀಯ ಪರಿಸ್ಥಿತಿಯನ್ನು ಸ್ವಲ್ಪ ಅವಲೋಕಿಸುವುದಾದರೆ, ಈ ಕಾಲದ ಭಾರತದ ರಾಜಕೀಯ ಪರಿಸ್ಥಿತಿ ಶೋಚನೀಯವಾಗಿದ್ದು, ಐರೋಪ್ಯ ರಾಷ್ಟ್ರಗಳಿಗೆ ತಮ್ಮ ವಸಾಹತುಶಾಹಿ ಸಾಮ್ರಾಜ್ಯ ನಿರ್ಮಿಸಲು ಸರ್ವಾನುಕೂಲತೆಗಳನ್ನು ಕಲ್ಪಿಸಿಕೊಟ್ಟಿತು. ಹದಿನೆಂಟನೆಯ ಶತಮಾನ ದುದ್ದಕ್ಕೂ ಕೊಲೆ, ಕೊಳ್ಳೆ, ಕ್ರಾಂತಿಗಳು ನಿರಂತರವಾಗಿ ನಡೆಯುತ್ತಿದ್ದು, ಮೊಗಲ ಸಾಮ್ರಾಜ್ಯದ ಸರ್ವನಾಶಕ್ಕೆ ಕಾರಣವಾದವು. ಸಾಮ್ರಾಜ್ಯದ ಪ್ರಾಂತಗಳೂ ದಂಗೆಕೋರ ಪಾಳೆಯಗಾರರ ಆಧಿಪತ್ಯದಲ್ಲಿ ಸ್ವತಂತ್ರವಾಗಿ ನೆಲೆನಿಂತವು. ಮೊಗಲ್ ಸಾಮ್ರಾಜ್ಯ ದೆಹಲಿಗೆ ಸೀಮಿತವಾಯಿತು. ಮೊಗಲ್ ಸಾಮ್ರಾಜ್ಯದಿಂದ ಸಿಡಿದು ನಿಂತ ಅನೇಕ ಚಿಕ್ಕಪುಟ್ಟ ರಾಜ್ಯಗಳನ್ನು ಔರಂಗಜೇಬನು ಪುನಃ ಸಂಘಟಿಸಿದನು. ಅವನ ಮರಣದ ನಂತರ ರಾಜ್ಯಕ್ಕಾಗಿ ಅಂತರ್ಯುದ್ಧ ಸರ್ವೇಸಾಮಾನ್ಯ ವಾಗಿ ಔರಂಗಜೇಬನ ವಂಶಜರು ಸಾಮ್ರಾಜ್ಯಕ್ಕಾಗಿ ಕಚ್ಚಾಡಿಕೊಂಡರು. ಈ ಬಿಕ್ಕಟ್ಟಿನ ನಡುವೆ ಔರಂಗಜೇಬನ ಪುತ್ರ ಪರುಕ್ಸಿಯಾರ್ ಸಿಂಹಾಸನವೇರಿದನು. ಭಾರತದ ರಾಜರುಗಳ ರಕ್ಷಣೆ ನಮಗೆ ಅವಶ್ಯವಿರುವವರೆಗೂ 'ಈಸ್ಟ್ ಇಂಡಿಯಾ ಕಂಪನಿ'ಯವರು ತಮ್ಮ ವಿಶೇಷಾಧಿಕಾರ ಶಾಸನ ರೂಪದ ಪ್ರಸಿದ್ಧ ಪರ್ಮಾನು ಹೊರಡಿಸ ತೊಡಗಿದುದು ಅವನ ಕಾಲದಲ್ಲಿ ಅಧಿಕಾರ ರಾಜ್ಯಾಧಿಕಾರವು ಅದೋಗತಿ ಹೊಂದಲೂ, ನಾಲ್ಕು ಕಡೆ ರಾಜದ್ರೋಹವೂ ಪ್ರಾಕೃತಿಕ ಕ್ಷೋಭೆಯೂ ತಲೆದೋರಿದವು. ಹೀಗೆ ಅರಾಜಕತೆಯ ಭೀಕರ ಕ್ಷಣಗಳು ತಲೆಎತ್ತಿ ವಿದೇಶಿ ಆಕ್ರಮಣಕಾರರಿಗೆ ಮತ್ತೆ ಅವಕಾಶ ಕೊಟ್ಟವು. ಮೊಗಲ್ ರಾಜ್ಯದಿಂದ ಸಿಡಿದುನಿಂತ ಮರಾಠರೊಡನೆ ಸಿಖ್ಖರ ಹೋರಾಟ ಅವ್ಯಾಹತವಾಗಿ ನಡೆಯಿತು. ಇತ್ತ ದಕ್ಷಿಣದ ಮಾಂಡಲೀಕನಾದ ನಿಜಾಮನೂ ಮೊಗಲರ ಪ್ರಭುತ್ವ ಧಿಕ್ಕರಿಸಿ ಸ್ವತಂತ್ರನಾದನು. ಕ್ರಿ.ಶ.೧೭೩೮ರಲ್ಲಿ ಪರ್ಷಿಯಾದ ನಾದಿರಷಹನು ಅಪಾರ ಸೈನ್ಯದೊಡನೆ ದೆಹಲಿ ಸುತ್ತಮುತ್ತ ಕೊಳ್ಳೆ ಹೊಡೆದನು. ಸಹಸ್ರಾರು ಜನರನ್ನು ಅಮಾನುಷ ಹಿಂಸೆಗೆ ಗುರಿಪಡಿಸಿದನು. ಈ ವ್ಯವಸ್ಥೆಯ ನಡುವೆ ಕೆಲವಾರು ಪ್ರಾಂತಗಳು ಮುಸಲ್ಮಾನರ ಒಡೆತನವನ್ನು ಕಿತ್ತೊಗೆದರು. ತಂಜಾವೂರು, ಮೈಸೂರು ಮೊದಲಾದ ರಾಜ್ಯಗಳು ತಮ್ಮ ರಾಜರ ಆದಿಪತ್ಯದಲ್ಲಿ ಮತ್ತೊಮ್ಮೆ ಸ್ವತಂತ್ರವಾಗಿ ತಲೆ ಎತ್ತಿದವು.

ಭಾರತದ ಪರಿಸ್ಥಿತಿ ಅಂದು ಶೋಚನೀಯವಾಗಿತ್ತು. ವಿದೇಶಿ ಸಾಮ್ರಾಜ್ಯ ನಿರ್ಮಾಣಕ್ಕೆ ಸರ್ವಾನುಕೂಲತೆಗಳನ್ನು ಕಲ್ಪಿಸಿಕೊಟ್ಟಿತು. ಒಂದು ಕಡೆ ಮರಾಠರ ಪ್ರಾಬಲ್ಯದಿಂದ ಮೊಗಲ್ ಸಾಮ್ರಾಜ್ಯ ನುಚ್ಚುನೂರಾಗಿತ್ತು. ಇನ್ನೊಂದು ಕಡೆ ಪಾಣಿಪತ್ ಕದನದಿಂದ ಉತ್ತರ ಭಾರತದಲ್ಲಿ ಮರಾಠರ ಶಕ್ತಿ ನಾಶವಾದಂತೆ ಭಾಸವಾಗಿತ್ತು. ಉತ್ತರ–ದಕ್ಷಿಣ ಭಾರತಗಳೊಳಗಣ ಛಿದ್ರತೆಗಳಿಂದ ಅಖಂಡ ಭಾರತದ ಕಲ್ಪನೆ–ಕನಸಿನ ಗಂಟಾಗಿತ್ತು. ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ದುರುದ್ದೇಶದಿಂದ ಬ್ರಿಟಿಷರು, ಫ್ರೆಂಚರು, ಡಚ್ಚರು ಭಾರತಕ್ಕೆ ಪ್ರವೇಶ ಮಾಡಿದರು. ಹದಿನೇಳು–ಹದಿನೆಂಟನೆಯ ಶತಮಾನಗಳಲ್ಲಿ ಯುರೋಪಿನಲ್ಲಿ ಸಂಭವಿಸಿದ ಕ್ರಾಂತಿಗಳನ್ನು ಭಾರತದೊಳಗಿನ ವೈಷಮ್ಯಗಳನ್ನು ಅವರು ಸದುಪಯೋಗಪಡಿಸಿಕೊಂಡರು.[೮]

ಈ ಎಲ್ಲ ವಿದ್ಯಮಾನಗಳ ಸಂಪೂರ್ಣ ಲಾಭ ಪಡೆದು ಮೈಸೂರಿನ ಸೇನಾಧಿಕಾರಿಯಾದ ಹೈದರಾಲಿ ಸಂಸ್ಥಾನದ ಅಧಿಪತಿಯಾಗುವ ಮಹತ್ವಾಕಾಂಕ್ಷೆಯೊಂದಿಗೆ ರಾಜಕೀಯ ರಂಗಕ್ಕೆ ಪ್ರವೇಶಿಸುತ್ತಾನೆ. ಹೈದರ್ ತನ್ನ ಅಣ್ಣನಾದ ಶಾಹ್‌ಬಾಜನನ್ನು ಮೀರಿ ಬೆಳೆದು ನಿಂತ. ಸೈನಿಕ ಪದವಿಗಳಲ್ಲಿ ಮೇಲೇರಿದ. ಮುನ್ನುಗ್ಗುವ ತನ್ನ ಛಲ ಹಾಗೂ ಸಾಹಸ ಪ್ರವೃತ್ತಿಯಿಂದ ಬಹುಬೇಗ ದಿಂಡಿಗಲ್ಲಿನ ಫೌಜುದಾರ ಹುದ್ದೆಗೆ ಏರಿದ. ಕ್ರಮೇಣ ಮೈಸೂರಿನಲ್ಲಿ ಅತ್ಯಂತ ಪ್ರಬಲನೂ, ನಂಬಿಕೆಗೆ ಅರ್ಹನೂ ಆದ ಸೇನಾಧಿಪತಿಯಾಗಿ ಪರಿಣಮಿಸಿದ. ರಾಜನ ಅಧಿಕಾರವನ್ನೆಲ್ಲ ತನ್ನ ಕೈವಶ ಮಾಡಿಕೊಂಡ. ಇಷ್ಟಾಗಿಯೂ ತನ್ನ ಜೀವನಪರ್ಯಂತ ಅವನು ಅಧಿಕೃತವಾಗಿ ರಾಜಪ್ರತಿನಿಧಿ ಅಥವಾ 'ಸರ್ವಾಧಿಕಾರಿ' ಮಾತ್ರವೇ ಆಗಿ ಉಳಿದಿದ್ದ.

ಕ್ರಿ.ಶ.೧೭೬೧ ರಿಂದ ೧೭೮೨ ಅವಧಿಯಲ್ಲಿ ಹೈದರನೇ ವಾಸ್ತವ ಅರ್ಥದಲ್ಲಿ ಮೈಸೂರಿನ ಅರಸ. ಮೈಸೂರು ರಾಜ್ಯದ ಗಡಿಗಳನ್ನು ವಿಸ್ತರಿಸಿಕೊಂಡು ಹೋಗುವ ತನ್ನ ಪ್ರಯತ್ನದ ಅಂಗವಾಗಿ ಸತತವಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಸಂಚರಿಸುತ್ತಲೇ ಇದ್ದ. ತನ್ನ ಮಹದಾಸೆಗೆ ವ್ಯವಹಾರಿಕ ಸ್ವರೂಪ ನೀಡುವ ಸಲುವಾಗಿ ಐರೋಪ್ಯರ ಕ್ರಮವನ್ನೇ ಅನುಸರಿಸಿದ್ದ ಬಲಿಷ್ಠ ಸೈನ್ಯವೊಂದನ್ನು ರೂಪಿಸಿದ್ದ. ಹೈದರ್ ಜೀವಮಾನದ ಅವಧಿಯಲ್ಲಿ ಹೈದರಾಬಾದಿನ ನಿಜಾಮನೊಂದಿಗೆ, ಮರಾಠರೊಂದಿಗೆ ಕರ್ನಾಟಕ ನವಾಬನಾಗಿದ್ದ ಮಹಮದ್ ಅಲಿ, ಬ್ರಿಟಿಷರೊಡನೆ, ಹತ್ತಾರು ಸಂಸ್ಥಾನಿಕರು ಅದರಲ್ಲಿಯೂ ಪಾಳೆಯಗಾರರೊಂದಿಗೆ ಹೋರಾಡ ಬೇಕಾಯಿತು.[೯]

ದಕ್ಷಿಣ ಭಾರತದಲ್ಲಿ ಬ್ರಿಟಿಷರು ಮತ್ತು ಫ್ರೆಂಚರು ತಮ್ಮ ವಸಾಹತು ಸ್ಥಾಪನೆಗೆ ಪೈಪೋಟಿ ನಡೆಸುತ್ತಿದ್ದರು. ತಮ್ಮ ಉದ್ದೇಶ ಈಡೇರಿಕೆಗಾಗಿ ಸ್ಥಳೀಯ ಅರಸರೊಂದಿಗೆ, ನವಾಬರೊಂದಿಗೆ ಕೈಜೋಡಿಸುತ್ತಿದ್ದರು. ದಖನ್ ಸಾರ್ವಭೌಮತ್ವಕ್ಕಾಗಿ ನಾಸಿರ್‌ಜಂಗ್ ಮತ್ತು ಮುಜಾಫರ್‌ಜಂಗ್

ನಡುವೆ ನಡೆಯುತ್ತಿದ್ದ ಸಂಘರ್ಷದಲ್ಲಿ ಬ್ರಿಟಿಷರು ಹಾಗೂ ಫ್ರೆಂಚರೂ, ಭಾಗಿಗಳಾದರು. ಆರ್ಕಾಟ್ ನವಾಬ ಮಹಮದ್ ಅಲಿ ಜೊತೆ ಮೇಜರ್‌ಲಾರೆನ್ಸ್ ನೇತೃತ್ವದ ಬ್ರಿಟಿಷ್ ಸೈನ್ಯ ನಾಸಿರ್‌ಜಂಗನ ಪರ ಹೋರಾಡಲು ಸಿದ್ಧವಾಯಿತು. ಚಂದಾಸಾಹೇಬನ ಮೂಲಕ ಫ್ರೆಂಚ್ ಸೇನೆ ಕರ್ನಲ್ ಡಿಬುಸ್ಸಿ ನಾಯಕತ್ವದಲ್ಲಿ ಮುಜಾಫರ್ ಜಂಗನ ಪರ ಯುದ್ಧಕ್ಕಿಳಿಯಿತು. ಈ ಸಮಯದಲ್ಲಿ ಹೈದರಾಲಿ ಮೈಸೂರು ಸೇನೆಯ ಸಣ್ಣ ತುಕಡಿಯೊಂದರ ನೇತೃತ್ವ ವಹಿಸಿ ನಾಸಿರ್‌ಜಂಗ್ ಪರ ಯುದ್ಧದಲ್ಲಿ ಭಾಗವಹಿಸಿದ. ಈ ಯುದ್ಧ ಹೈದರಾಲಿಗೆ ಹೆಚ್ಚು ಲಾಭ ತಂದುಕೊಟ್ಟಿತು. ಅಪಾರ ಸಂಪತ್ತು ದೊರೆಯಿತು. ಮೈಸೂರಿಗೆ ಹಿಂತಿರುಗುವ ಮೊದಲು ಪಾಂಡಿಚೇರಿಗೆ ಹೋಗಿದ್ದ ಹೈದರ್ ಅಲ್ಲಿ ಫ್ರೆಂಚ್ ಸೈನ್ಯದ ಶಿಸ್ತನ್ನು ಅವರ ಎಂಜಿನಿಯರ್‌ಗಳ ತಂತ್ರಗಾರಿಕೆ ನೋಡಿ ಬಹಳ ಪ್ರಭಾವಿತನಾಗಿದ್ದ. ಕ್ರಿ.ಶ.೧೭೫೧ರಲ್ಲಿ ಹೈದರ್‌ಗೆ ಮತ್ತೆ ದಾಳಿಯ ಅವಕಾಶ ದೊರೆತು ಈ ಬಾರಿಯೂ ಮೈಸೂರು ಸೈನ್ಯದ ಭಾಗವಾಗಿ ತಿರುಚನಾಪಳ್ಳಿಗೆ ಮುತ್ತಿಗೆ ಹಾಕಿದ ನಾಲ್ಕು ವರ್ಷಗಳ ಕಾಲ ಕದನ ನಡೆಯಿತು. ಮೈಸೂರು ರಾಜ ನಂಜರಾಜ ಯುದ್ಧಕ್ಕಾಗಿ ಅಪಾರ ಹಣ ವೆಚ್ಚ ಮಾಡಿದ. ಫ್ರೆಂಚರು ಮತ್ತು ಬ್ರಿಟಿಷರೂ ಈ ಯುದ್ಧದಲ್ಲಿ ಪಾಲ್ಗೊಂಡರು ಮಹಮದ್ ಅಲಿ ಮೋಸದಿಂದ ಮೈಸೂರು ಸೈನ್ಯಕ್ಕೆ ಜಯ ಸಿಗಲಿಲ್ಲ. ಆದರೂ ಹೈದರಾಲಿ ಈ ಯುದ್ಧದಲ್ಲೂ ಲಾಭ ಪಡೆದ. ಪುದುಕೋಟೆಯಲ್ಲಿ ನಡೆದ ದಾಳಿಗಳ ವೇಳೆ ಬ್ರಿಟಿಷ್ ಸೈನ್ಯದ ಹಲವಾರು ಫಿರಂಗಿಗಳನ್ನು, ಬಂದೂಕುಗಳನ್ನು ವಶಪಡಿಸಿಕೊಂಡಿದ್ದ.

ಹೈದರಾಲಿ ಒಂದುವರೆ ಸಾವಿರ ಕುದುರೆ ಸವಾರರು, ಮೂರು ಸಾವಿರ ಕಾಲಾಳುಗಳಿದ್ದ ವ್ಯವಸ್ಥಿತ ತರಬೇತಿ ಪಡೆದ ಯೋಧರ ಪಡೆಯನ್ನು ಕಟ್ಟಿದ. ಸೈನ್ಯವನ್ನು ಸಂಭಾಳಿಸಲು ಮತ್ತು ನೆರೆಯ ಪಾಳೆಯ ಪಟ್ಟುಗಳ ಜೊತೆಗೆ ಸಂವಹನ ನಡೆಸಲು ಖಂಡೇರಾವ್ ಅನ್ನೋ ಮರಾಠಿ ಬ್ರಾಹ್ಮಣನನ್ನು ತನ್ನ ಸಹಾಯಕ ಮಂತ್ರಿಯನ್ನಾಗಿ ನೇಮಿಸಿಕೊಂಡ. ಹೈದರ್‌ಗೆ ಅದ್ಭುತ ಜ್ಞಾಪಕ ಶಕ್ತಿಯಿತ್ತು. ತೀಕ್ಷ್ಣ ಬುದ್ಧಿಮತ್ತೆಯಿತ್ತು. ಅವನನ್ನು ಮೋಸಗೊಳಿಸುವುದು ಸುಲಭವಿರಲಿಲ್ಲ.

ಕ್ರಿ.ಶ.೧೭೫೫ರಲ್ಲಿ ತಮಿಳುನಾಡಿನ ಮಧುರೈ ಬಳಿಯ ದಿಂಡಿಗಲ್‌ಗೆ ಹೈದರ್‌ನನ್ನು ಫೌಜುದಾರನಾಗಿ ಮೈಸೂರು ಸಂಸ್ಥಾನ ನೇಮಕ ಮಾಡಿತು. ಅಲ್ಲಿಯವರೆಗೆ ಕೂಲಿಯ ಸೈನಿಕನಂತಿದ್ದ ಹೈದರ್‌ಗೆ ಅಧಿಕೃತವಾದ ಒಂದು ಹೊಸ ಸ್ಥಾನ-ಮಾನ ದೊರಕಿತು. ಅಕ್ಕಪಕ್ಕದ ಪಾಳೇಪಟ್ಟುಗಳ ಮೇಲೆ ದಾಳಿ ಮಾಡಿ ಅಪಾರ ಸಂಪತ್ತನ್ನು ಲೂಟಿ ಮಾಡಿ ಆ ಸಂಪತ್ತನ್ನು ಉಪಯೋಗಿಸಿ ಒಂದು ಬಲಿಷ್ಠ ಸೇನಾಪಡೆ ಕಟ್ಟಿದ. ದಿಂಡಿಗಲ್‌ನಲ್ಲಿ ಮೈಸೂರು ಸಂಸ್ಥಾನದ ಸುಬೇದಾರನಾಗಿದ್ದ ಹೈದರ್‌ಗೆ ಮರಾಠ ದಂಡಯಾತ್ರೆ ಒಂದು ವರವಾಗಿ ಪರಿಣಮಿಸಿತು. ಕ್ರಿ.ಶ.೧೭೫೭ರಲ್ಲಿ ಪೇಶ್ವೆ ಬಾಜೀರಾಯ ಮೈಸೂರು ಮೇಲೆ ದಂಡೆತ್ತಿದ. ಬಾರಿ ಮೊತ್ತದ ಕಪ್ಪಕ್ಕೆ ಬೇಡಿಕೆ ಇಟ್ಟ, ಐದು ಲಕ್ಷ ರೂಪಾಯಿ ನಗದು ಮತ್ತು ಇಪ್ಪತ್ತೇಳು ಲಕ್ಷ ರೂಪಾಯಿ ಮೊತ್ತಕ್ಕೆ ಸರಿದೂಗುವ

ಹಲವಾರು ಜಿಲ್ಲೆಗಳನ್ನು ಬಾಜೀರಾವ್‌ಗೆ ಬಿಟ್ಟುಕೊಡಲಾಯಿತು. ಅದೇ ಹೊತ್ತಿಗೆ ಮೈಸೂರು ಸಂಸ್ಥಾನದ ಸ್ಥಿತಿ ಚಿಂತಾಜನಕವಾಗಿತ್ತು. ನಂಜರಾಜ ಮತ್ತು ದೇವರಾಜರ ನಡುವೆ ವೈಷಮ್ಯ ತಾರಕಕ್ಕೇರಿತ್ತು. ಸೈನಿಕರಿಗೆ ಸಂಬಳ ಸರಿಯಾಗಿ ನೀಡದೆ ಬಂಡಾಯ ಆರಂಭವಾಯಿತು. ಈ ಸಂದರ್ಭದಲ್ಲಿ ಹೈದರಾಲಿ ದಿಂಡಿಗಲ್‌ನಿಂದ ಬಂದು ತಾನು ಕೊಳ್ಳೆಹೊಡೆದು ಕೂಡಿಟ್ಟ ಸಂಪತ್ತಿನಿಂದ ಬಂಡಾಯವನ್ನು ಶಮನ ಮಾಡಿದ. ಹೀಗೆ ನಿಧಾನವಾಗಿ ಮೈಸೂರಿನ ಮೇಲೆ ಹಿಡಿತ ಸಾಧಿಸುತ್ತ ಬಂದ. ಮರಾಠರಿಗೆ ಕೊಡಬೇಕಾಗಿದ್ದ ಕಪ್ಪವನ್ನು ನಿಲ್ಲಿಸಿದ. ಇದರಿಂದ ಕ್ರೋಧಗೊಂಡ ಮರಾಠರು ಮತ್ತೆ ದಂಡೆತ್ತಿ ಬಂದರು. ಗೋಪಾಲಹರಿ ಎಂಬುವನ ನೇತೃತ್ವದ ಮರಾಠ ಸೈನ್ಯ ಬೆಂಗಳೂರನ್ನು ವಶಪಡಿಸಿಕೊಂಡಿತು. ನಂತರ ಚನ್ನಪಟ್ಟಣವನ್ನು ಮುತ್ತಿತು. ಹೈದರ್ ಚಾಣಾಕ್ಷತನ ಉಪಯೋಗಿಸಿ ಮರಾಠರನ್ನು ಸೋಲಿಸಿದ.

ಮರಾಠರು ಹೈದರ್‌ನೊಡನೆ ಒಪ್ಪಂದ ಮಾಡಿಕೊಂಡರು. ಒಟ್ಟು ೩೨ ಲಕ್ಷ ರೂಪಾಯಿ ಕಪ್ಪವನ್ನು ಮೈಸೂರು ಸಂಸ್ಥಾನ ಮರಾಠರಿಗೆ ನೀಡಬೇಕೆಂದು ಕರಾರು ಆಯಿತು. ಮೈಸೂರು ಸಂಸ್ಥಾನಕ್ಕೆ ಒದಗಿದ ಗಂಡಾಂತರವನ್ನು ತಪ್ಪಿಸಿದ್ದಕ್ಕಾಗಿ ಮೈಸೂರು ಅರಸರು ಹೈದರ್‌ಗೆ "ಪತೇ ಹೈದರ್ ಬಹದ್ದೂರ್" ಬಿರುದು ನೀಡಿದರು.[೧೦]

ಹೈದರಾಲಿ ಮೈಸೂರಿನ ದಂಡನಾಯಕನಾಗಿದ್ದುಕೊಂಡೇ ಅಸಾಧಾರಣ ರಾಜನೀತಿ ಪ್ರಜ್ಞೆಯಿಂದ ಸಂಸ್ಥಾನದ ರಾಜನಾಗುವ ಎಲ್ಲ ಲಕ್ಷಣಗಳನ್ನು ಹೊಂದಿದನು. ಹೈದರಾಲಿಯ ಪ್ರಭುತ್ವ ವೃದ್ಧಿಯನ್ನು ಹತ್ತಿರದಿಂದಲೇ ಗಮನಿಸಿದ ಒಡೆಯರು ಉಚ್ಚಾಟನೆಗೊಂಡ ನಂಜರಾಜಯ್ಯನ ಸಹಾಯಕೋರಿ ಅವನ ಶಕ್ತಿಯನ್ನು ದಮನಮಾಡಲು ಪ್ರಯತ್ನಗಳನ್ನು ನಡೆಸಿದ್ದರು. ಹೈದರ್‌ನ ಆಪ್ತನಾದ ದಿವಾನ್ ಖಂಡೇರಾಯನೂ ಅವನ ವಿರುದ್ಧ ಒಳಸಂಚು ನಡೆಸಿದನು. ಒಡೆಯರು ಮರಾಠರ ಸಹಾಯ ಕೇಳಿದರು. ಕ್ರಿ.ಶ.೧೭೬೦ರಲ್ಲಿ ಅರಮನೆಯ ಪ್ರಕ್ಷುಬ್ಧ ಸ್ಥಿತಿಗತಿಗಳು ಹೈದರಾಲಿಗೆ ವಿರೋಧವಾಗಿದ್ದವೆಂದು ತಿಳಿದು ಆತ ತನ್ನ ಪರಿವಾರವನ್ನೆಲ್ಲ ಶ್ರೀರಂಗಪಟ್ಟಣದಲ್ಲೇ ಇರಿಸಿ ಬೆಂಗಳೂರಿಗೆ ಪಲಾಯನ ಮಾಡಬೇಕಾಯಿತು. ಕ್ರಿ.ಶ.೧೭೬೧ ಜುಲೈ ತಿಂಗಳಲ್ಲಿ ಶಸ್ತ್ರಸಜ್ಜಿತ ಸೈನ್ಯದೊಡನೆ ಮೈಸೂರು ಸಂಸ್ಥಾನ ಮತ್ತು ಕೋಟೆಯನ್ನು ಆಕ್ರಮಿಸಿದ. ಒಡೆಯರನ್ನು ದಿಗ್ಬಂಧನದಲ್ಲಿಟ್ಟು ಸ್ವತಃ ಪೂರ್ಣಾಧಿಕಾರವನ್ನು ವಹಿಸಿಕೊಂಡನು.

ಈ ರಾಜಕೀಯ ಸ್ಥಿತಿಗತಿಗಳ ವೈರುಧ್ಯದಲ್ಲಿ ಗಮನಿಸಬೇಕಾದ ಅಂಶವೆಂದರೆ ಹೈದರ್ ರಾಜ ಒಡೆಯರನ್ನು ಮೂಲೆಗುಂಪು ಮಾಡಿ ಅವನೇ ಪರ್ಯಾಯ ಶಕ್ತಿ ಎಂದು ಆರಂಭದಲ್ಲಿ ಬಹಿರಂಗಪಡಿಸಲಿಲ್ಲ. ಬದಲಾಗಿ ಕಾನೂನು ಸಂಪ್ರದಾಯದಂತೆ ಚಿಕ್ಕಕೃಷ್ಣರಾಜನನ್ನು ಪ್ರಭುವಾಗಿ ಅಧಿಕೃತವಾಗಿ ಮುಂದುವರೆಯಲು ಅವಕಾಶ ನೀಡಿದನು. ಕ್ರಿ.ಶ.೧೭೬೬ರಲ್ಲಿ ರಾಜನು ಮರಣ ಹೊಂದಿದ ನಂತರವೂ ಉತ್ತರಾಧಿಕಾರಿಯಾಗಿ ಪರಂಪರಾಗತವಾಗಿ ಮುಂದುವರೆದುಕೊಂಡು

ಬಂದ ಸಂಪ್ರದಾಯದಂತೆ ಒಡೆಯರ ಕುಟುಂಬದ ಸದಸ್ಯನೊಬ್ಬನನ್ನು ಸಿಂಹಾಸನವನ್ನೇರಿಸಿದನು. ಆಸ್ಥಾನ ಮತ್ತು ಅರಮನೆಯಲ್ಲಿ ನಡೆಯುತ್ತಿದ್ದ ಎಲ್ಲಾ ಧಾರ್ಮಿಕ ಕ್ರಿಯೆಗಳನ್ನು ನಿರಂತರವಾಗಿ ಮುಂದುವರೆಯುವಂತೆ ನೋಡಿಕೊಂಡನು. ಸಂಸ್ಥಾನದೊಳಗೆ ಮುಂದೆ ಬರಬಹುದಾದ ವಿರೋಧವನ್ನು ಚಾಣಾಕ್ಷತನದಿಂದ ದೂರಮಾಡಿಕೊಂಡನು. ತನ್ನ ಇರುವಿಕೆಗೆ ಕಾನೂನು ಬದ್ಧವಾಗಿ ಗೌರವ ಪಡೆಯುವ ಪ್ರಕ್ರಿಯೆಯನ್ನು ಹೊರಗಿನಿಂದ ನಿರ್ವಹಿಸಿದನು. ಮೈಸೂರು ಸಂಸ್ಥಾನದ ರಾಜ್ಯವ್ಯವಸ್ಥೆಗಿಂತಲೂ ಶಿರಾದಲ್ಲಿರುವ ಮೊಗಲರ ಪ್ರತಿನಿಧಿಯಾಗಿ ಅಧಿಕಾರ ವಹಿಸಿಕೊಂಡು ಆಡಳಿತದ ಉಸ್ತುವಾರಿ ನೋಡಿಕೊಳ್ಳುತ್ತಿದ್ದನು. ಕ್ರಿ.ಶ.೧೭೬೧ರಲ್ಲಿ ಹೈದರಾಲಿಖಾನ್ ಮತ್ತು ಪೌಜುದಾರ್ ಎಂಬ ಬಿರುದಿನೊಂದಿಗೆ ಶಿರಾದಲ್ಲಿ ರಾಜಕೀಯಕ್ಕೆ ನೇರವಾಗಿ ಪ್ರವೇಶ ಪಡೆಯುತ್ತಾನೆ. ಇಂಥ ತಂತ್ರ ಅನುಸರಿಸಿದ. ಮೈಸೂರು ರಾಜನಿಂದಲೂ ಉನ್ನತ ಪದವಿಯನ್ನು ಪಡೆದನು. ಕ್ರಿ.ಶ.೧೭೬೩ರಲ್ಲಿ ಶಿರಾದ ಮೇಲೆ ದಂಡೆತ್ತಿ ಹೋಗಿ ವಶಪಡಿಸಿಕೊಂಡನು. ನಿಜಾಮಬಾದ್ ಬಸಾಲತ್ ಜಂಗನು ದುರ್ಬಲನಾದ ಕಾರಣ ಹೈದರಾಲಿಯನ್ನು ಶಿರಾದ ನವಾಬನನ್ನಾಗಿ ಘೋಷಿಸಿದ. ಆಗ ಬಸವಯ್ಯನೆಂಬುವನು, ಬಿದನೂರು ಸಿಂಹಾಸನದ ಹಕ್ಕುದಾರನೊಬ್ಬನು ಹೈದರ್‌ನ ಸೈನ್ಯದಲ್ಲಿದ್ದನು. ಅವನ ನೆರವಿಗೆಂದು ಕ್ರಿ.ಶ.೧೭೬೩ರಲ್ಲಿ ಬಿದನೂರನ್ನು ಆಕ್ರಮಿಸಿ ಅಲ್ಲಿಯ ರಾಣಿ ವೀರಮ್ಮಾಜಿಯನ್ನು ಸೋಲಿಸಿದನು. ರಾಜ್ಯ ರಕ್ಷಣೆಗಾಗಿ ಕೊನೆಯವರೆಗೂ ಹೋರಾಡಿ ಸೋತ ವೀರಮ್ಮಾಜಿ ಅಪಾರ ಸಂಪತ್ತನ್ನು ಬಿಟ್ಟು ಬಲ್ಲಾಳರಾಯನ ದುರ್ಗಕ್ಕೋಡಿ ಸೆರೆ ಸಿಕ್ಕಿದಳು. ಬಿದನೂರಿನ ರಾಜ್ಯಕೋಶವನ್ನು ಹೈದರಾಲಿ ಮುಂದಿನ ದಂಡಯಾತ್ರೆಗೆ ಬಳಸಿಕೊಂಡನು. ಬಸವರಾಜ ದುರ್ಗ, ಹೊನ್ನಾವರ, ಮಂಗಳೂರು ಬಲ್ಲಾಳ ದುರ್ಗಾ, ಕರಾವಳಿ ಪ್ರದೇಶಗಳು ಹೈದರಾಲಿಯ ವಶವಾದವು.

ಆಯಕಟ್ಟಿನ ದೃಷ್ಟಿಯಿಂದ ಶ್ರೀರಂಗಪಟ್ಟಣಕ್ಕಿಂತಲೂ ಬಿದನೂರು ಹೆಚ್ಚು ಪ್ರಧಾನವಾಗಿದ್ದ ಕಾರಣ ಹೈದರಾಲಿ ರಾಜಧಾನಿಯನ್ನು ಬಿದನೂರಿಗೆ ವರ್ಗಾಯಿಸಿ ಅದಕ್ಕೆ ಹೈದರ್‌ನಗರ ಎಂದು ಹೆಸರಿಟ್ಟನು. ಅಲ್ಲಿ ಅರಮನೆ, ಟಂಕಶಾಲೆ ಕಟ್ಟಿಸಿದ. ಹೈದರನ ವಿಜಯ ಸಾಧನೆಗಳಿಂದ ಸವಣೂರು ನವಾಬ ಅಬ್ದುಲ್ ಹಕೀಮನಿಗೆ ಆಸನಕಂಪವುಂಟಾಯಿತು. ಚಾಣಾಕ್ಷತನದಿಂದ ಹೈದರನಿಗೆ ಎರಡು ಲಕ್ಷ ಪೊಗದಿ ಸಮರ್ಪಿಸಿ ಮುಂದಾಗುವ ಗಂಡಾಂತರ ತಪ್ಪಿಸಿಕೊಂಡ.

ಹೈದರಾಲಿ ಮರಾಠರ ಆಶ್ರಿತನಾದ ಸವಣೂರು ನವಾಬನನ್ನು ಹಾಗೂ ನಿಜಾಮನ ಸಾಮಂತನಾದ ಶಿರಾದ ನವಾಬನನ್ನು ಸೋಲಿಸಿದ್ದರಿಂದ ವೈರಿ ವರ್ಗ ಹೆಚ್ಚಿತು. ನಿಜಾಮ ಮತ್ತು ಮರಾಠರಿಗೆ ಸ್ನೇಹ ಸಂದೇಶವನ್ನು, ಅಮೂಲ್ಯ ಕಾಣಿಕೆಗಳನ್ನು ಕಳುಹಿಸಿದನು. ಮರಾಠರು ಕ್ರಿ.ಶ.೧೭೬೫ರಲ್ಲಿ ಒಪ್ಪಂದ ಮಾಡಿಕೊಂಡು ಹೈದರ್‌ನನ್ನು ಶಿರಾದ ನವಾಬನೆಂದು ಅಂಗೀಕರಿಸಿದರು. ಮೈಸೂರ ರಾಜ್ಯವು ಮೂಲ ಗಡಿರೇಖೆಗಳಿಗಿಂತಲೂ ವಿಸ್ತಾರಗೊಂಡಿತು. ಆಂತರಿಕವಾಗಿಯೂ

ಹೈದರಾಲಿಯ ಸಾರ್ವಭೌಮತ್ವ ಮೈಸೂರು ರಾಜ್ಯದಲ್ಲಿ ಪರಂಪರಾನುಗತವಾಗಿ ಉಳಿದಿರುವ ಸಂಸ್ಥೆಗಳು ಮತ್ತು ಮೊಗಲ್ ಸಂಸ್ಥೆಗಳ ಅಂಶಗಳನ್ನು ಒಳಗೊಂಡ ಒಂದು ಸಂಯೋಜನೆಯಾಗಿತ್ತು. ಮೊಗಲ್ ಸಂಸ್ಥೆಗಳ ಅಂಶಗಳನ್ನು ಒಳಗೊಂಡ ಒಂದು ಸಂಯೋಜನೆಯಾಗಿತ್ತು. ಮೊಗಲ್ ಸಂಸ್ಥೆಗಳ ಅನುಕರಣೆಯಿಂದ ಭೂಕಂದಾಯವನ್ನು ವಸೂಲಿ ಮಾಡುವುದರಿಂದ ರಾಜ್ಯದ ಸಂಪತ್ತಿನ ಹೆಚ್ಚಳ ಕಂಡುಬಂತು. ಅದರ ಬಳಕೆಯಿಂದ ಆಡಳಿತವನ್ನು ಕೇಂದ್ರೀಕರಿಸಲಾಯಿತು. ಹೈದರ್ ಅಧಿಕಾರಕ್ಕೆ ಬರುವ ಮೊದಲು ಮೈಸೂರು ರಾಜ್ಯದಲ್ಲಿ ಆನುವಂಶಿಕ ಸಾಮಂತರುಗಳಾದ ದೇಶ್‌ಮುಖರು, ಪಾಳೇಗಾರರು, ಗೌಡರು ಮತ್ತು ಪಟೇಲರ ದೌರ್ಜನ್ಯವಿತ್ತು. ರಾಜ್ಯದಲ್ಲಿ ಆಗುವ ಕೃಷಿ ಉತ್ಪಾದನೆ ಮತ್ತು ಖಜಾನೆಗೆ ಬರುವ ಕಂದಾಯದಲ್ಲೂ ಅವರು ಪಾಲುದಾರರಾಗಿದ್ದರು.[೧೧] ಹೈದರಾಲಿ ಮಾತ್ರ ಒಂದು ನಿರ್ದಿಷ್ಟ ಪದ್ಧತಿಯನ್ನು ಜಾರಿಗೆ ತಂದು ಸ್ಥಳೀಯ ಪಾಳೇಗಾರರು, ಪಟೇಲರು, ಗೌಡರು ಕೇವಲ ಭೂಮಾಲೀಕರೆಂದು ಮತ್ತು ಅವರ ಬಿರುದುಗಳು ಶಾಶ್ವತವಾದುದಲ್ಲವೆಂದು ಅಧಿಕೃತವಾಗಿ ಪ್ರಕಟಿಸಿದನು. ಇಂಥ ಮಧ್ಯವರ್ತಿಗಳನ್ನು ತಡೆಗಟ್ಟಲು ಭೂಮಿಯ ಉತ್ಪಾದನೆಗೆ ಅನುಗುಣವಾಗಿ ನೇಮಿಸಿದ ಅಧಿಕಾರಿಗಳು ನೇರವಾಗಿ ರೈತರಿಂದ ತೆರಿಗೆ ವಸೂಲಿ ಮಾಡುವ ಕ್ರಮವನ್ನು ಅನುಷ್ಠಾನಕ್ಕೆ ತಂದನು.[೧೨]

೩.೨. ಟಿಪ್ಪು ಸುಲ್ತಾನನ ರಾಜಕೀಯ ಪ್ರವೇಶ

ಹೈದರಾಲಿಯ ಮರಣಾನಂತರ ಅವನ ಮಗ ಸಮರ್ಥಶಾಲಿ ಟಿಪ್ಪು ಸುಲ್ತಾನ್ ಅಧಿಕಾರಕ್ಕೆ ಬಂದನು. ತಂದೆಗಿಂತಲೂ ಇವನ ಶೌರ್ಯ, ಕಷ್ಟಸಹಿಷ್ಣತೆ ಮತ್ತು ದೃಢಚಿತ್ತ ಹೆಚ್ಚು ಜನಪ್ರಿಯವಾಗಿದ್ದವು. ಟಿಪ್ಪು ೧೦ ನವೆಂಬರ್ ೧೭೫೦ರಲ್ಲಿ ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದ. ಸಂತ ಟಿಪ್ಪು ಮಸ್ತಾನ್‌ಜೌಲಿಯ ಎಂಬುವನ ಹೆಸರನ್ನೇ ಮಾರ್ಪಡಿಸಿ ಮಗುವಿಗೆ ಟಿಪ್ಪುವೆಂಬ ಹೆಸರಿಡಲಾಯಿತು. ಈ ಸಂತನ ಗೋರಿ ಆರ್ಕಾಟ್‌ನಲ್ಲಿದ್ದಿತು. ಗಂಡು ಮಗುವಾಗಲೆಂದು ಟಿಪ್ಪು ತಾಯಿ ಫಾತಿಮಾ ಬೇಗಂ ಆ ಸಂತನ ಗೋರಿ ಬಳಿ ಪ್ರಾರ್ಥಿಸಿದಳು, ಇದರಿಂದ ಆ ಸಂತನ ಹೆಸರಿಡಲಾಯಿತು.

ಟಿಪ್ಪು ತಂದೆ ಹೈದರಾಲಿ ನಿರಕ್ಷರಕುಕ್ಷಿಯಾದರೂ ತನ್ನ ಮಗ ಆ ಕಾಲಕ್ಕೆ ತಕ್ಕಂತೆ ಪಾಂಡಿತ್ಯ ಸಂಪಾದಿಸಬೇಕಾದ ವ್ಯವಸ್ಥೆ ಮಾಡಿದ. ಟಿಪ್ಪು ಬಾಲ್ಯದಲ್ಲೇ ವಿದ್ಯಾಭ್ಯಾಸ ಪಡೆದು, ಆ ಕಾಲದ ವಿವಿಧ ಕಲೆಗಳಲ್ಲಿ, ಜ್ಞಾನದಲ್ಲಿ ಪರಿಣತಿ ಹೊಂದಿದ. ಚಿಕ್ಕ ವಯಸ್ಸಿನಲ್ಲೇ ಹೈದರ್ ಜೊತೆ ಯುದ್ಧಗಳಲ್ಲಿ ಭಾಗವಹಿಸಿದ. ಕ್ರಿಶ.೧೭೬೩ರಲ್ಲಿ ಹೈದರ್ ಮಲಬಾರ್ ಮುತ್ತಿದ ಸಂದರ್ಭದಲ್ಲಿ ಟಿಪ್ಪುವಿಗೆ ಯುದ್ಧದ ಮೊದಲ ಅನುಭವವಾಯಿತು.[೧೩] ಮೊದಲನೆ ಮೈಸೂರು ಯುದ್ಧದ ಕಾಲದಲ್ಲಿ ಹೈದರಾಬಾದ್ ನಿಜಾಮನೊಂದಿಗೆ ರಾಜತಾಂತ್ರಿಕ ಮಾತುಕತೆಗಳನ್ನು ಏರ್ಪಡಿಸಿ

ಯಶಸ್ವಿಯಾದನು. ಟಿಪ್ಪುವಿನ ಕೌಶಲ್ಯವನ್ನು ಗೌರವಿಸಿದ ನಿಜಾಮ ಅವನಿಗೆ 'ಫತ್ ಆಲಿಖಾನ್' ಎಂಬ ಬಿರುದು ನೀಡಿದ. ಯುದ್ಧ ನಡೆದ ಸಮಯದಲ್ಲಿ ಟಿಪ್ಪು ಮದ್ರಾಸ್‌ವರೆಗೆ ಮುನ್ನುಗ್ಗಿ ಹೋಗಿ ಬ್ರಿಟಿಷ್ ಕೌನ್ಸಿಲರುಗಳ ಮನೆಗಳನ್ನು ಲೂಟಿ ಮಾಡಿದ. ಕ್ರಿ.ಶ.೧೭೬೨–೭೨ರಲ್ಲಿ ನಡೆದ ಮೈಸೂರು–ಮರಾಠ ಯುದ್ಧದಲ್ಲಿ ಭಾಗವಹಿಸಿದ.[೧೪]

ಎರಡನೇ ಆಂಗ್ಲೋ–ಮೈಸೂರು ಯುದ್ಧ ಆರಂಭವಾಗುವ ವೇಳೆಗೆ ಯುದ್ಧ ವಿದ್ಯೆ, ರಾಜತಂತ್ರದಲ್ಲೂ ಅವನ ಅನುಭವ ಪಕ್ವವಾಗಿತ್ತು. ಕ್ರಿ.ಶ.೧೭೮೦ರ ಸೆಪ್ಟೆಂಬರ್‌ನಲ್ಲಿ ಪೊಲ್ಲಲೂರು ರಣರಂಗದಲ್ಲಿ ಕರ್ನಲ್ ಬೆಲ್ಲಿಯನ್ನು ಸೋಲಿಸಿದ ಸಂದರ್ಭದಲ್ಲಿ ಕ್ರಿಯಾತ್ಮಕ ಪಾತ್ರವಹಿಸಿದ ಫೆಬ್ರವರಿ ಕ್ರಿ.ಶ.೧೭೮೨ರಲ್ಲಿ ಅನ್ನಗುಡಿ ಯುದ್ಧದಲ್ಲಿ ಕರ್ನಲ್ ಬ್ರೈತ್ ವೈಟ್‌ನನ್ನು ಸೋಲಿಸಿ ಹಿಮ್ಮೆಟಿಸಿದಾಗಲೂ ಟಿಪ್ಪುವಿನ ಸಾಮರ್ಥ್ಯ ಬೆಳಕಿಗೆ ಬಂತು. ಹೈದರನು ಮರಣ ಹೊಂದಿದ ಸಮಯದಲ್ಲಿ ಅವನು ಮಲಬಾರ್ ಕರಾವಳಿ ಪ್ರದೇಶದಲ್ಲಿ ಕರ್ನಲ್ ಹಂಬರ್‌ಸ್ಟೋನನ ವಿರುದ್ಧ ಹೋರಾಟದಲ್ಲಿ ನಿರತನಾಗಿದ್ದ.[೧೫]

೧೭೮೨ ಡಿಸೆಂಬರ್‌ನಲ್ಲಿ ಎರಡನೇ ಮೈಸೂರು ಯುದ್ಧ ಸಮಯದಲ್ಲೆ ಹೈದರಾಲಿ ಮರಣಿಸಿದ. ಟಿಪ್ಪು ೩೨ನೇ ವಯಸ್ಸಿನಲ್ಲಿ ತಂದೆಯ ಉತ್ತರಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡನು. ಬ್ರಿಟಿಷರೊಡನೆ ಯುದ್ಧ ಮುಕ್ತಾಯ ಮಾಡುವುದು ಟಿಪ್ಪುವಿನ ಮೊದಲ ಕರ್ತವ್ಯವಾಗಿತ್ತು. ಉತ್ತರದಲ್ಲಿ ಕೃಷ್ಣಾನದಿಯಿಂದ ದಕ್ಷಿಣದಲ್ಲಿ ದಿಂಡಿಗಲ್‌ವರೆಗೆ, ಪಶ್ಚಿಮದ ಮಲಬಾರ್‌ನಿಂದ ಪೂರ್ವದಲ್ಲಿ ಘಟ್ಟ ಪ್ರದೇಶದವರೆಗೆ ವಿಸ್ತಾರವಾದ ಒಂದು ಲಕ್ಷ ಚದುರ ಮೈಲಿಗಳಿಗೂ ಹೆಚ್ಚು ವಿಸ್ತೀರ್ಣ ಹೊಂದಿದ ಸಾಮ್ರಾಜ್ಯಕ್ಕೆ ಉತ್ತರಾಧಿಕಾರಿಯಾದ. ಟಿಪ್ಪು ಅಧಿಕಾರಕ್ಕೆ ಬಂದ ಕೂಡಲೇ ತಂದೆ ಆರಂಭಿಸಿದ್ದ ಎರಡನೇ ಮೈಸೂರು ಯುದ್ಧ ಮುಂದುವರೆಸಿದ. ಬ್ರಿಟಿಷರ ವಿರುದ್ಧ ಮತ್ತಷ್ಟು ಬಿರುಸಾಗಿ ಹೋರಾಟ ನಡೆಸಿದ. ಉತ್ತರದಲ್ಲಿ ಕೃಷ್ಣಾ ನದಿಯಿಂದ ದಕ್ಷಿಣದಲ್ಲಿ ದಿಂಡಿಗಲ್‌ವರೆಗೆ, ಪಶ್ಚಿಮದಲ್ಲಿ ಮಲಬಾರ್‌ವರೆಗೆ ವಿಸ್ತರಣೆ ಹೊಂದಿದ್ದ ರಾಜ್ಯಕ್ಕೆ[೧೬] ಭದ್ರತೆ ಏರ್ಪಡಿಸಲು ಪ್ರಯತ್ನಿಸಿದ.

ಟಿಪ್ಪುವಿನ ಹೋರಾಟಕ್ಕೆ ಬ್ರಿಟಿಷರು ಶಾಂತಿ ಸಂಧಾನಕ್ಕೆ ಕಾತುರರಾದರು. ಪಶ್ಚಿಮ ಕರಾವಳಿ ಪ್ರದೇಶದಲ್ಲಿ ತನ್ನ ಎಲ್ಲ ನೆಲೆಗಳನ್ನು ಮರಳಿ ಸ್ಥಾಪಿಸಿ ದಕ್ಷಿಣ ಭಾಗದಿಂದ ಬ್ರಿಟಿಷರು ಮೈಸೂರಿನತ್ತ ಸಾಗಿ ಬರುವ ಪ್ರಯತ್ನಗಳನ್ನು ವಿಫಲಗೊಳಿಸಿದ. ನಾಲ್ಕು ವರ್ಷಗಳ ಸತತ ಹೋರಾಟದ ಅನಂತರವೂ ಮೈಸೂರಿನವರನ್ನು ಆರ್ಕಾಟ್ ಪ್ರದೇಶದಿಂದ ಹಿಮ್ಮೆಟಿಸಲು ಬ್ರಿಟಿಷರು ಅಸಮರ್ಥರಾದರು. ಲಾರ್ಡ್ ಮೆಕಾರ್ಟನು ಟಿಪ್ಪುವಿನೊಡನೆ ಶಾಂತಿ ಮಾತುಕತೆ ಆರಂಭಿಸಿದ. ಈ ಕಾರಣಕ್ಕಾಗಿ ಅವನು ಸಾಡಲಿಯನ್ ಮತ್ತು ಸ್ಟಾಂಟನ್ ಎಂಬ ಇಬ್ಬರು ಕಮಿಷನ್ನರುಗಳನ್ನು

(ಬ್ರಿಟಿಷ್) ಮಂಗಳೂರಿಗೆ ಕಳುಹಿಸಿದ. ಕ್ರಿ.ಶ.೧೭೮೪ ಮಾರ್ಚ್ ೧೧ರಂದು ಮಂಗಳೂರು ಒಪ್ಪಂದಕ್ಕೆ ಸಹಿ ಹಾಕಲಾಯಿತು. ಇಂಡೋ-ಬ್ರಿಟಿಷ್ ಇತಿಹಾಸದಲ್ಲೇ ಪ್ರಮುಖ ದಾಖಲೆಯಾದ ಈ ಒಪ್ಪಂದ ಬ್ರಿಟಿಷರಿಗೆ ಎಷ್ಟರಮಟ್ಟಿಗೆ ನಿರಾಶೆವುಂಟು ಮಾಡಿತೆಂದರೆ ವಾರನ್ ಹೇಸ್ಟಿಂಗ್ಸ್‌ನು ಅದನ್ನು ಅವಮಾನಕರ ಶಾಂತಿ ಒಪ್ಪಂದ ಎಂದು ತೀರ್ಮಾನಿಸಿದ. ಈ ಒಪ್ಪಂದ ಬ್ರಿಟಿಷರ ಪ್ರತಿಷ್ಠೆಗೆ ಪೆಟ್ಟು ನೀಡಿತು.

೧೭೮೩–೧೭೮೫ರ ಅವಧಿಯವರೆಗೆ ಟಿಪ್ಪು–ಮರಾಠರು ಮತ್ತು ಹೈದರಾಬಾದ್ ನಿಜಾಮ ಇವರ ವಿರುದ್ಧ ಸೈನಿಕ ಕಾರ್ಯಾಚರಣೆಯಲ್ಲಿ ತೊಡಗಬೇಕಾಯಿತು. ಈ ಎರಡೂ ಸ್ಥಳೀಯ ಅಧಿಪತ್ಯಗಳಿಂದ ಟಿಪ್ಪುವಿಗೆ ಯಾವುದೇ ಶಾಂತಿ, ನೆಮ್ಮದಿ ದೊರಕಿರಲಿಲ್ಲ. ಮಂಗಳೂರು ಒಪ್ಪಂದ ಈ ಇಬ್ಬರು ನೆರೆಯವರಲ್ಲಿ ಅಸೂಯೆ ಉಂಟುಮಾಡಿತು. ಮೈಸೂರಿನ ಉತ್ತರಕ್ಕೆ ಇದ್ದ ಇವರು ಹೈದರಾಲಿ ಕಾಲದಲ್ಲಿ ಕಳೆದುಕೊಂಡ ಪ್ರದೇಶಗಳನ್ನು ಪುನಃ ವಶಪಡಿಸಿಕೊಳ್ಳಲು ಅಸಮರ್ಥರಾದರು. ಅವರಲ್ಲಿ ನಿರಾಶೆ ಮೂಡಿಸಿತು. ಕೃಷ್ಣಾನದಿಯ ಸುತ್ತಮುತ್ತಲಿನ ಫಲವತ್ತಾದ ಭೂಪ್ರದೇಶಗಳನ್ನು ಕಳೆದುಕೊಂಡಿದ್ದನ್ನು ಮರಾಠರು ಮರೆಯುವಂತಿರಲಿಲ್ಲ. ಕ್ರಿ.ಶ.೧೭೮೫ರ ಅಕ್ಟೋಬರ್‌ನಲ್ಲಿ ಮರಾಠರು ಟಿಪ್ಪು ವಿರುದ್ಧ ಬ್ರಿಟಿಷರೊಡನೆ ಸ್ನೇಹ ಬೆಳೆಸಿಕೊಂಡರು. ಈ ಒಪ್ಪಂದದ ಪ್ರಕಾರ ಟಿಪ್ಪು ಮರಾಠರಿಂದ ಗೆದ್ದಿದ್ದ ಕರ್ನಾಟಕದ ಪ್ರದೇಶಗಳನ್ನು ಮರಾಠರಿಗೆ ಬಿಟ್ಟುಕೊಡಲು ಕೇಳಬೇಕು, ಅವನು ನಿರಾಕರಿಸಿದ ಪಕ್ಷ ಮರಾಠರು ಮೈಸೂರಿನ ಮೇಲೆ ಯುದ್ಧ ಮಾಡತಕ್ಕದ್ದು ಎಂದು ತೀರ್ಮಾನಿಸಲಾಯಿತು. ಟಿಪ್ಪುವನ್ನು ಮಣಿಸಲು ಹೈದರಾಬಾದಿನ ನಿಜಾಮನಿಗೂ ಆತುರವಿತ್ತು. ಒಬ್ಬರೇ ಟಿಪ್ಪು ಮೇಲೆ ಯುದ್ಧ ಸಾರಲು ಸಮರ್ಥರಿಲ್ಲದ್ದರಿಂದ ಬ್ರಿಟಿಷರು ಅಥವಾ ಮರಾಠರು ಟಿಪ್ಪು ಮೇಲೆ ಯುದ್ಧ ಘೋಷಿಸುವ ಅವಕಾಶ ಉಪಯೋಗಿಸಿಕೊಳ್ಳಲು ನಿರ್ಧರಿಸಿದರು.[೧೭]

ಉತ್ತರ ಕರ್ನಾಟಕದಲ್ಲಿ ಟಿಪ್ಪುವಿನ ಸಾಮಂತನಾಗಿದ್ದ ನರಗುಂದ ದೇಸಾಯಿ ಕ್ರಿ.ಶ.೧೭೮೦ ರಿಂದಲೂ ವಾರ್ಷಿಕ ಕಪ್ಪಕಾಣಿಕೆ ಸಲ್ಲಿಸದ ಪ್ರಶ್ನೆಯೇ ಯುದ್ಧಕ್ಕೆ ತಕ್ಷಣದ ಕಾರಣವಾಯಿತು. ಟಿಪ್ಪು ಹಣವನ್ನು ಕೇಳಿದಾಗ ದೇಸಾಯಿ ಮರಾಠರ ಸಹಾಯ ಕೇಳಿದ. ಈ ಸಮಯದಲ್ಲಿ ಉಂಟಾದ ಬಿಕ್ಕಟ್ಟು ಕ್ರಿ.ಶ.೧೭೮೬ರಲ್ಲಿ ಯುದ್ಧ ಆರಂಭವಾಗಲು ಕಾರಣವಾಯಿತು. ನಿಜಾಮ ಮತ್ತು ಮರಾಠರು ಬಾದಾಮಿ ಮುತ್ತಿದರು. ಜೂನ್ ಕ್ರಿ.ಶ.೧೭೮೬ರಲ್ಲಿ ಹರಿಪಂತ ಗಜೇಂದ್ರಗಡದತ್ತ ನುಗ್ಗಿದ. ನಿಜಾಮನಿಗೆ ಸೇರಿದ್ದ ಅದವಾನಿ ಕೋಟೆಯನ್ನು ಟಿಪ್ಪು ಮುತ್ತಿದ. ಬಹುದ್ದೂರ್ ಬಾಂಡ್ ಕೋಟೆ ಸುತ್ತುವರಿದು ಹರಿಪಂತನನ್ನು ಚಕಿತಗೊಳಿಸಿದ. ಫೆಬ್ರವರಿ ೧೭೮೭ರವರೆಗೆ ಯುದ್ಧ ಮುಂದುವರೆಸಿದ. ಏಪ್ರಿಲ್ ಕ್ರಿ.ಶ.೧೭೮೭ರಲ್ಲಿ ಗಜೇಂದ್ರಗಡ ಒಪ್ಪಂದ ನಡೆದು ಯುದ್ಧ ಮುಕ್ತಾಯ ಕಂಡಿತು. ಇದರಿಂದ ಯಾರಿಗೂ ಲಾಭವಾಗಲಿಲ್ಲ.

ರಣರಂಗದಲ್ಲಿ ಟಿಪ್ಪುವಿಗೆ ಲಾಭದಾಯಕ ಸ್ಥಾನಮಾನಗಳಿದ್ದಾಗ್ಯೂ ಬ್ರಿಟಿಷರೊಡನೆ ನಡೆಯುವ ತನ್ನ ಹೋರಾಟದಲ್ಲಿ ಅವರ ಬೆಂಬಲ ದೊರಯುವುದೆಂಬ ನಿರೀಕ್ಷೆಯ ಮೇಲೆ ತನ್ನ ಶತ್ರುಗಳ ಬಗ್ಗೆ ಹೆಚ್ಚು ಉದಾರವಾಗಿ ನಡೆದುಕೊಂಡ. ಈ ದಿಶೆಯಲ್ಲಿ ಟಿಪ್ಪುವಿಗೆ ನಿರಾಶೆ ಉಂಟಾಯಿತು. ತನ್ನ ಕಡೆ ಸೇರಿಸಿಕೊಳ್ಳಬೇಕೆಂದು ಬಯಸಿದ್ದ ರಾಜ್ಯಗಳೇ ಬ್ರಿಟಿಷರ ಕುತಂತ್ರ ರಾಜಕಾರಣದಿಂದ ಅವನ ವಿರುದ್ಧ ರೂಪುಗೊಂಡ ಒಕ್ಕೂಟಕ್ಕೆ ಸೇರಿಕೊಳ್ಳುವಂತಾಯಿತು. ಬ್ರಿಟಿಷರು ತನ್ನ ಬದ್ಧ ವೈರಿ ಎಂದು ಪರಿಗಣಿಸಿ ಅವರ ಎಲ್ಲ ವ್ಯೂಹಗಳನ್ನು ಸಮರ್ಥವಾಗಿ ಎದುರಿಸುವ ಸಾಹಸಕ್ಕೆ ಟಿಪ್ಪು ಇಳಿದನು.

ಹೈದರಾಲಿ ಇಂಥದ್ದೇ ನಿಲುವನ್ನು ತೆಗೆದುಕೊಂಡಿದ್ದ. ಹೈದರ್ ಆಡಳಿತದಲ್ಲಿ ಮೊಗಲ್ ಸಂಸ್ಥೆಗಳನ್ನು ಮುಂದುವರೆಸಿ ಸ್ಥಳೀಯ ಸಂಪ್ರದಾಯ ಮತ್ತು ಆಚಾರ–ವಿಚಾರಗಳನ್ನು ಗೌರವಿಸಿ ಒಡೆಯರ ವಂಶದ ರಾಜನ ರಕ್ಷಕನೆಂದೇ ಪ್ರದರ್ಶಿಸಿ ಸಂಸ್ಥಾನದ ಪ್ರಜೆಗಳ ಸ್ವಾಮಿನಿಷ್ಠೆ ಪಡೆದನು. ಹೈದರ್ ಆಡಳಿತದಲ್ಲಿ ಮೊಗಲ್ ಸಂಸ್ಥೆಗಳು ಮತ್ತು ಪದ್ಧತಿಗಳನ್ನು ಅನುಸರಿಸಿದ. ಮೇಲಾಗಿ ಏನೂ ಪ್ರಯತ್ನ ನಡೆಸಿರಲಿಲ್ಲ. ಸೈನ್ಯಾಡಳಿತದ ಆಧುನೀಕರಣವು ಮಾತ್ರ ಒಂದು ಮುಖ್ಯ ಅಂಶವಾಗಿತ್ತು. ಇದು ಟಿಪ್ಪು ಕಾಲದಲ್ಲಿ ಅವರ ಪ್ರಭುತ್ವದ ಕ್ರೋಢೀಕರಣಕ್ಕೆ ಭದ್ರ ಬುನಾದಿಯಾಯಿತು. ಇದೊಂದೇ ಅಂಶ ಟಿಪ್ಪುವಿಗೆ ಸಾಕಾಗುತ್ತಿರಲಿಲ್ಲ. ಇಂಥ ಆಲೋಚನೆಯು ಅವನೊಬ್ಬ ವಿದ್ಯಾವಂತ, ಇಸ್ಲಾಂ ಇತಿಹಾಸ ಮತ್ತು ಥಿಯೋಲಜಿಯಲ್ಲಿ ಪ್ರೌಢಿಮೆ ಹೊಂದಿದ್ದರಿಂದ ತನ್ನ ಸಂಸ್ಥಾನದ ಪ್ರಜೆಗಳ ಆಸಕ್ತಿಗಳನ್ನು ರಕ್ಷಿಸುವುದು, ರಾಜನಾದವನ ಮೂಲಭೂತ ಕರ್ತವ್ಯವೆಂದು ಭಾವಿಸಿದ್ದ. ಬ್ರಿಟಿಷರ ವಿರುದ್ಧ ಹೋರಾಡುವುದು ಈ ದೃಷ್ಟಿಯಿಂದ ಅವನ ಆದ್ಯತೆಯಾಗಿತ್ತು. ಅದಕ್ಕೆ ತನ್ನ ರಾಜ್ಯದ ಪ್ರಜೆಗಳ ಸಹಕಾರ ಬಹುದೊಡ್ಡ ಕೊಡುಗೆ ಎಂದೇ ಭಾವಿಸಿದ್ದ. ಮೈಸೂರು ಸಂಸ್ಥಾನದ ಸರ್ವತೋಮುಖ ಅಭಿವೃದ್ಧಿ ಆತನ ಕಾರ್ಯಚಟುವಟಿಕೆಗಳಲ್ಲಿ ಪ್ರಧಾನವಾಗಿತ್ತು.[೧೮]

ಟಿಪ್ಪು ತಾನು ಹಮ್ಮಿಕೊಂಡಿರುವ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಕೇವಲ ಮೊಗಲರು ಕಲ್ಪಿಸಿರುವ ಒಂದು ಹುದ್ದೆ ಅಲಂಕರಿಸಿ ಅವರಿಗೆ ಸ್ವಾಮಿನಿಷ್ಠೆ ತೋರಿಸಿದರೆ ಸಾಲದು ಎಂಬ ಅರಿವಿತ್ತು. ತನ್ನ ಪ್ರಭುತ್ವಕ್ಕೆ ಗೌರವ ದೊರಕಿಸಿಕೊಳ್ಳಲು ಸ್ವತಂತ್ರ ಸಾರ್ವಭೌಮತ್ವ ಸ್ಥಾಪಿಸಲು ಪ್ರಯತ್ನಿಸಿದ. ಇದಕ್ಕೆ ಪೂರಕ ಎಂಬಂತೆ ಮೊಗಲರ ಬಿರುದುಗಳು ಮತ್ತು ಹೆಸರುಗಳನ್ನು ಮುದ್ರಿಸುವುದನ್ನು ನಿಲ್ಲಿಸಿ ಭಿನ್ನ ಮಾದರಿಯ ಪ್ರಯೋಗಗಳನ್ನು ನಡೆಸಿದ.

೩.೩. ಟಿಪ್ಪು ಮತ್ತು ಆಂತರಿಕ ರಾಜಕಾರಣ

ಎರಡನೆಯ ಮೈಸೂರು ಯುದ್ಧವಾದ ಮೇಲೆ ಟಿಪ್ಪುವಿನ ಘನತೆ–ಗೌರವ ಹೆಚ್ಚಿದವು. ಅದು ನೆರೆಹೊರೆಯವರಲ್ಲಿ ಮಾತ್ಸರ್ಯ ಕೆರಳಿಸಿತು. ಮಂಗಳೂರು ಒಪ್ಪಂದವು ಮರಾಠರೊಂದಿಗೆ

ಘರ್ಷಣೆಯ ಬೀಜಗಳನ್ನು ತನ್ನಲ್ಲಿ ಹುದುಗಿಸಿಕೊಂಡಿದ್ದಿತು. ಉತ್ತರ ಭಾಗದಲ್ಲಿ ತಮಗಾದ ನಷ್ಟವನ್ನು ಬ್ರಿಟಿಷರ ನೆರವು ಪಡೆದು ಭರ್ತಿಮಾಡಿಕೊಳ್ಳಬೇಕೆಂದು ಅವರು ಬಯಸಿದರು. ಮೈಸೂರು ಪ್ರಬಲವಾದ ನೆರೆರಾಜ್ಯವಾಗಿರುವುದನ್ನು ಅವರು ಎಂದೂ ಸಹಿಸಲಿಲ್ಲ. ಪೇಶ್ವೆ ಮಾದವರಾಯ ಹೈದರ್‌ನ ಮೇಲೆ ಮೂರು ಬಾರಿ ದಂಡಯಾತ್ರೆ ಮಾಡಿದ. ಮೂರು ಆಕ್ರಮಣಗಳನ್ನು ಎದುರಿಸಿ ನಿಲ್ಲಲು ಅವನು ಶಕ್ತನಾದನು. ಮಾದವರಾಯ ಮರಣಿಸಿದ ಮೇಲೆ ಹೈದರನು ಮರಾಠರಿಗೆ ಸೇರಿದ್ದ ಗಣನೀಯ ಪ್ರಮಾಣದ ಭೂಪ್ರದೇಶಗಳನ್ನು ವಶಪಡಿಸಿಕೊಂಡನು. ರಾಜಕಾರಣದಲ್ಲಿ ರಘೋಬನ ಕೈವಾಡವಿರುವವರೆಗೂ ಆ ಪ್ರದೇಶಗಳನ್ನು ಮರಳಿ ಪಡೆಯಲು ಮರಾಠರು ಹೆಚ್ಚೇನೂ ಮಾಡಲು ಸಾಧ್ಯವಾಗಲಿಲ್ಲ. ಮೊದಲನೆ ಮೈಸೂರು ಯುದ್ಧ ಮುಗಿದ ಮೇಲೆ ಮೈಸೂರು–ಮರಾಠ ದ್ವೇಷಕ್ಕೆ ಚಾಲನೆ ಬಂದಿತು.

ಹೈದರನೊಂದಿಗೆ ಯುದ್ಧ ಮಾಡುತ್ತಲೇ ಇದ್ದರೂ ಬೇರೊಂದು ಶಾಂತಿ ಸಂಧಾನ ಮಾಡಿಕೊಳ್ಳುವ ಮರಾಠ ಪ್ರಯತ್ನವೇ ಟಿಪ್ಪುವಿನ ಅಧಿಕಾರ ಸ್ವೀಕಾರದ ಸಮಯದಲ್ಲಿ ಕಂಡುಬಂದ ಮೈಸೂರು–ಮರಾಠ ವೈರಕ್ಕೆ ಕಾರಣ. ಸಾಲ್ಬಾಯ್ ಒಪ್ಪಂದ ರೂಪುಗೊಂಡ ನಂತರ ನಾನಾಪಡ್ನವೀಸ್ ಪುಣೆಯಲ್ಲಿ ಹೈದರ್‌ನ ವಕೀಲನಾದ ನೂರುದ್ದೀನ್ ಮೂಲಕ ಹೈದರಾಬಾದಿಗೆ ಹೀಗೆ ಹೇಳಿ ಕಳುಹಿಸಿದ. ಹೈದರ್ ತಾನು ಆಕ್ರಮಿಸಿಕೊಂಡಿದ್ದ ಜಿಲ್ಲೆಗಳನ್ನು ತೆರವು ಮಾಡಿದ್ದೇ ಆದಲ್ಲಿ ನಾನು ಬ್ರಿಟಿಷರೊಂದಿಗೆ ಯುದ್ಧ ಮುಂದುವರೆಸುತ್ತೇನೆ. ಸಾಲ್ಬಾಯ್ ಒಪ್ಪಂದ ರದ್ದು ಪಡಿಸಲು ಸಿಂಧ್ಯಾನನ್ನು ಒತ್ತಾಯಪಡಿಸುತ್ತೇನೆ. ಮರಾಠರ ನಡವಳಿಕೆ ಹೈದರ್ ಮತ್ತು ಟಿಪ್ಪುವಿಗೆ ಅರ್ಥವಾಗಲಿಲ್ಲ. ಅವರು ಮೈಸೂರಿನೊಡನೆ ಮೈತ್ರಿ ಕಡಿದುಕೊಂಡಿದ್ದು ಮಾತ್ರವಲ್ಲ ಹಿಂದೆ ಕ್ರಿ.ಶ.೧೭೮೦ರಲ್ಲಿ ಬ್ರಿಟಿಷರ ವಿರುದ್ಧ ಕಾದುವ ಷರತ್ತಿಗೆ ಒಳಪಟ್ಟು ಅದಕ್ಕೆ ಪ್ರತಿಯಾಗಿ ಖಾಯಂ ಆಗಿ ನೀಡಿದ್ದ ಪ್ರದೇಶಗಳನ್ನು ಮೈಸೂರು ಹಿಂತಿರುಗಿಸಬೇಕೆಂದು ಒತ್ತಾಯ ಮಾಡುತ್ತಿದ್ದರು.

ಟಿಪ್ಪು ಸಾಲ್ಬಾಯ್ ಒಪ್ಪಂದ ತಿರಸ್ಕರಿಸಿ ಅದನ್ನು ರದ್ದುಪಡಿಸಿ ಬ್ರಿಟಿಷರೊಂದಿಗೆ ಯುದ್ಧಾಚರಣೆಗಳನ್ನು ಮುಂದುವರಿಸಬೇಕೆಂದು ನಾನಾನನ್ನು ಕೋರಿದನು. ನಾನಾ ಅದನ್ನು ನಿರಾಕರಿಸಿ ತನ್ನ ಹಕ್ಕನ್ನು ಬಲತ್ಕಾರದಿಂದ ಜಾರಿಗೆ ತರಲು ಪ್ರಯತ್ನಿಸಿದನು. ಮರಾಠ ಪ್ರದೇಶಗಳನ್ನು ಮರಳಿಸದೇ ಇದ್ದಲ್ಲಿ ಬ್ರಿಟಿಷ್–ಮರಾಠ ಜಂಟಿ ಆಕ್ರಮಣ ಎದುರಿಸಬೇಕಾಗುತ್ತದೆ ಎಂದೂ ಸಿಂದಿಯಾ ಟಿಪ್ಪುವಿಗೆ ಬೆದರಿಕೆ ಹಾಕಿದ. ಇದಕ್ಕೂ ನಾನಾನ ಬೆಂಬಲವಿತ್ತು. ಕ್ರಿ.ಶ.೧೭೮೩ ಅಕ್ಟೋಬರ್ ೨೮ರಂದು ಸಿಂಧ್ಯಾ ಟಿಪ್ಪು ವಿರುದ್ಧ ಬ್ರಿಟಿಷರೊಡನೆ ಆಕ್ರಮಣ ಒಪ್ಪಂದ ಮಾಡಿಕೊಂಡನು. ಒಪ್ಪಂದದ ಷರತ್ತುಗಳೆಂದರೆ, ಟಿಪ್ಪು ತಕ್ಷಣವೇ ಕರ್ನಾಟಕವನ್ನು ತೆರವು ಮಾಡುವುದು, ಬ್ರಿಟಿಷ್ ಯುದ್ಧಬಂಧಿಗಳನ್ನು ಬಿಡುಗಡೆ ಮಾಡುವಂತೆ ನೋಡಿಕೊಳ್ಳುವುದು, ಯಾವ ಪಕ್ಷವೂ ಟಿಪ್ಪುವಿನೊಂದಿಗೆ ಪ್ರತ್ಯೇಕ ಒಪ್ಪಂದ ಮಾಡಿಕೊಳ್ಳಕೂಡದು, ಇದಕ್ಕೆ ತಪ್ಪಿದರೆ ಮರಾಠರು ಅವನ

ಮೇಲೆ ಯುದ್ಧ ಸಾರುವುದು. ನಾನಾ ಮತ್ತು ಸಿಂಧ್ಯಾ ನಡುವಿನ ಮಾತ್ಸರ್ಯದಿಂದ ಈ ಒಪ್ಪಂದ ಜಾರಿಯಾಗಲಿಲ್ಲ. ಟಿಪ್ಪುವಿನಿಂದ ಕಳೆದುಹೋದ ತಮ್ಮ ಪ್ರದೇಶಗಳನ್ನು ಮತ್ತೆ ಪಡೆಯಲು ನಾನಾ ನಿಜಾಮನೊಂದಿಗೆ ಮೈತ್ರಿ ಒಪ್ಪಂದಕ್ಕೆ ತೊಡಗಿದ. ಈ ಮಧ್ಯೆ ಟಿಪ್ಪು ಬ್ರಿಟಿಷರೊಂದಿಗೆ ಮಂಗಳೂರು ಒಪ್ಪಂದ ಏರ್ಪಡಿಸಿಕೊಂಡು ಇವರೆಲ್ಲರನ್ನು ಮೀರಿಸಿದನು.[೨೦]

ನಾನಾ ನಿಜಾಮನ ನೆರವನ್ನು ಎರಡು ಕಾರಣಗಳಿಗೆ ಕೇಳಿದ. ಅವುಗಳೆಂದರೆ ಕೃಷ್ಣಾ ಪ್ರದೇಶದ ಮರಾಠ ಜಿಲ್ಲೆಗಳನ್ನು ಟಿಪ್ಪುವಿನಿಂದ ಪಡೆಯುವುದು ಹಾಗೂ ಸಿಂಧ್ಯಾ ಪ್ರವರ್ಧಮಾನಕ್ಕೆ ಬರುವುದನ್ನು ತಡೆಯುವುದು. ಸಿಂಧ್ಯಾ ಉತ್ತರ ಭಾರತದಲ್ಲಿ ಬಲಿಷ್ಠ ರಾಜ್ಯ ಕಟ್ಟಿ ಬ್ರಿಟಿಷರೊಡನೆ ಸಖ್ಯ ಬೆಳೆಸಿಕೊಂಡಿದ್ದನು. ಇಬ್ಬರು ಕ್ರಿ.ಶ.೧೭೮೪ ಜೂನ್ ೭ ರಿಂದ ೨೫ರವರೆಗೆ ಯಾದಗಿರ್‌ನಲ್ಲಿ ಮಾತುಕತೆ ನಡೆಸಿ ಒಪ್ಪಂದ ಮಾಡಿಕೊಂಡರು. ಒಪ್ಪಿಕೊಂಡ ಅಂಶಗಳು ಇವು, ಬರಲಿರುವ ವರ್ಷ ಇಬ್ಬರು ಸೇರಿ ಟಿಪ್ಪು ವಿರುದ್ಧ ಯುದ್ಧ ಮಾಡುವುದು, ಮೊದಲು ಕಳೆದುಕೊಂಡಿದ್ದ ತಂತಮ್ಮ ಪ್ರದೇಶಗಳನ್ನು ಗೆದ್ದುಕೊಳ್ಳುವುದು, ಆಮೇಲೆ ಮಿಕ್ಕ ಮೈಸೂರು ರಾಜ್ಯವನ್ನು ವಶಪಡಿಸಿ ಕೊಳ್ಳುವುದು, ಅದನ್ನು ಇಬ್ಬರೂ ಸಮನಾಗಿ ಹಂಚಿಕೊಳ್ಳುವುದು.

ಟಿಪ್ಪು ಸುಲ್ತಾನ್ ಅವರ ಯೋಜನೆಗಳನ್ನು ವಿಫಲಗೊಳಿಸಲು ಪ್ರಯತ್ನಿಸಿದನು. ಮರಾಠರ ಜೊತೆ ಸೇರಿಕೊಂಡರೆ ದಾಳಿ ಮಾಡಿ ರಾಜ್ಯವನ್ನು ಧೂಳೀಪಟ ಮಾಡಿಬಿಡುವುದಾಗಿ ಹೆದರಿಸಿ ನಿಜಾಮ ಒಪ್ಪಂದದಿಂದ ಕಳಚಿಕೊಳ್ಳುವಂತೆ ಮಾಡಲು ನೋಡಿದನು. ಅಂಥದೊಂದು ಸಂದರ್ಭ ಬಂದರೆ ನಾನು ಖಂಡಿತವಾಗಿಯೂ ನಿಜಾಮನ ನೆರವಿಗೆ ಬರುವುದಿಲ್ಲ ಎಂದು ಟಿಪ್ಪುವಿಗೆ ಗೊತ್ತು. ಏಕೆಂದರೆ ಅದು ಪುಣೆಯಲ್ಲಿ ಬಿಕ್ಕಟ್ಟು ಉಲ್ಬಣವಾಗಿದ್ದ ಸಮಯ. ಪೇಶ್ವೆ ಮಾಧವರಾವ್ ನಾರಾಯಣನನ್ನು ಕೆಳಗಿಳಿಸಿ ರಘೋಬನ ಮಗ ಬಾಜೀರಾಯನನ್ನು ಅಧಿಕಾರಕ್ಕೆ ತರಲು ಪ್ರಯತ್ನ ನಡೆಯುತ್ತಿತ್ತು. ಟಿಪ್ಪು ಯುದ್ಧ ಸಿದ್ಧತೆಗಳನ್ನು ಮಾಡತೊಗಿದಾಗ ನಿಜಾಮನಿಗೆ ಭೀತಿಯುಂಟಾಯಿತು. ಅವನನ್ನು ಸಮಾಧಾನಪಡಿಸಲು ಶ್ರೀರಂಗಪಟ್ಟಣಕ್ಕೆ ರಾಯಬಾರಿಯನ್ನು ಕಳುಹಿಸಿದ. ಟಿಪ್ಪು ವಿರುದ್ಧ ಆಕ್ರಮಣಕಾರಿ ಕ್ರಮಗಳನ್ನು ಬೇಗ ತೊಡಗುವಂತೆ ಒತ್ತಾಯಿಸಿ ನಾನಾ ಬಳಿಗೆ ತನ್ನ ಪ್ರತಿನಿಧಿಯನ್ನು ಕಳುಹಿಸಿದ. ಆಗ ನಾನಾ ಬಾಜೀರಾಯನ ದಂಗೆ ಹತ್ತಿಕ್ಕುವುದರಲ್ಲಿ ನಿರತನಾಗಿದ್ದನು. ಟಿಪ್ಪುವಿಗೂ ಯುದ್ಧ ಮಾಡಲೇಬೇಕೆಂಬ ತೀವ್ರ ಆಸಕ್ತಿ ಇರಲಿಲ್ಲ. ಘರ್ಷಣೆಯಿಲ್ಲದೆ ಆ ಘಟನೆಯು ಸರಿದುಹೋಯಿತು.

ಮರಾಠರು ಮತ್ತು ನಿಜಾಮ ಯುದ್ಧವನ್ನು ತಾತ್ಕಾಲಿಕವಾಗಿ ಮುಂದೂಡಿದ್ದರು. ಟಿಪ್ಪುವನ್ನು ದಮನ ಮಾಡಲು ಸೂಕ್ತವಾದ ಅವಕಾಶಕ್ಕಾಗಿ ಕಾಯುತ್ತಿದ್ದರು. ನರಗುಂದದ ಪ್ರಕರಣವು ಅವರಿಗೆ ಕಾದಿದ್ದ ಅವಕಾಶವನ್ನು ಒದಗಿಸಿತು. ನರಗುಂದವು ಮೈಸೂರಿನ ಉತ್ತರಕ್ಕಿದ್ದ ಒಂದು ಪಾಳೆಯಪಟ್ಟು. ಅದನ್ನು ಹೈದರ್ ಕ್ರಿ.ಶ.೧೭೭೮ರಲ್ಲಿ ಗೆದ್ದಿದ್ದನು. ಪಾಳೆಯಪಟ್ಟಿನ ಮುಖ್ಯಸ್ಥ

ವೆಂಕಟರಾವ್ ಬಾವೆ ಮೈಸೂರಿನ ಪ್ರಭುತ್ವ ಒಪ್ಪಿಕೊಂಡು ವಾರ್ಷಿಕ ಕಪ್ಪ ಕಾಣಿಕೆ ಕೊಡುವುದಾಗಿ ಸಮ್ಮತಿಸಿದನು. ಎರಡನೆಯ ಮೈಸೂರು ಯುದ್ಧವು ಮುಗಿದ ನಂತರ ಟಿಪ್ಪು ನರಗುಂದದ ಜಮೀನುದಾರನಿಂದ ಬರಬೇಕಾದ ಕಪ್ಪ ಹೆಚ್ಚಿಸಿದನು. ಅದು ಬಹುದೊಡ್ಡ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿ ಮೈಸೂರು-ಮರಾಠ ಯುದ್ಧಕ್ಕೆ ಎಡೆಗೊಟ್ಟಿತು.[೨೧]

ಪೊಗದಿಯನ್ನು ಹೆಚ್ಚಿಸಿದ್ದಕ್ಕೆ ದೇಸಾಯಿಯ ನಡವಳಿಕೆಯೇ ಕಾರಣ. ಮೈಸೂರು ವಿರುದ್ಧ ಬುಡಮೇಲು ಕಾರ್ಯಾಚರಣೆಯಲ್ಲಿ ಅವನು ತೊಡಗಿದ್ದನು. ಪೇಶ್ವೆಯೇ ಪರಮಪ್ರಭುವೆಂದು ಪರಿಗಣಿಸಿ ಹೈದರ್ ಮತ್ತು ಟಿಪ್ಪುವನ್ನು ಅಪಮಾನಿಸಿ ಪುಣೆಯಲ್ಲಿನ ಪ್ರಭಾವಶಾಲಿ ವ್ಯಕ್ತಿಗಳೊಂದಿಗೆ ರಹಸ್ಯವಾಗಿ ವಿರೋಧಿ ಪತ್ರವ್ಯವಹಾರ ನಡೆಸುತ್ತಿದ್ದನು. ಮುಂಬಯಿಯ ಬ್ರಿಟಿಷ್ ಸರಕಾರದ ಸಂಪರ್ಕ ಬೆಳೆಸಿದನು. ಉತ್ತರದಿಂದ ಮೈಸೂರಿನ ಮೇಲೆ ದಾಳಿಮಾಡಲು ತನಗೆ ಸಹಾಯ ನಿಡಬೇಕೆಂದು ಕೋರಿದನು. ಈ ಮನವಿ ಬಂದಾಗ ಮದರಾಸು ಸರಕಾರವು ಟಿಪ್ಪುವಿನೊಂದಿಗೆ ಸಂಧಾನ ಮಾತುಕತೆ ನಡೆಸುತ್ತಿತ್ತು. ದೇಸಾಯಿಯ ಪ್ರಸ್ತಾಪವನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ದೇಸಾಯಿಯು ಇತರ ಜಮೀನ್ದಾರರನ್ನು ದಂಗೆಯೇಳುವಂತೆ ಪ್ರಚೋದಿಸಿದನು. ಪುಂಗನೂರು, ಮದನಪಲ್ಲಿ ಮತ್ತಿತರ ಪಾಳೆಯಗಾರರಿಗೆ ಟಿಪ್ಪುವಿಗೆ ನಿಷ್ಠೆ ತೋರದಂತೆ ತಾಕೀತು ಮಾಡಿದನು. ಸೇಡಂ ಕೋಟೆಗೆ ಮುತ್ತಿಗೆ ಹಾಕಿದನು. ಎರಡು ವರ್ಷಗಳಿಂದ ಕಪ್ಪವನ್ನು ಕೊಡದೇ ಸತಾಯಿಸಿದನು. ಈ ಕಾರಣದಿಂದ ನರಗುಂದದ ಮೇಲೆ ಪೊಗದಿ ಹೆಚ್ಚಿಸಿ ಬಾಕಿಯನ್ನು ಪಾವತಿ ಮಾಡುವಂತೆ ಒತ್ತಾಯಪಡಿಸಿದನು. ವಿಷಯವನ್ನು ಪೂರ್ತಿಯಾಗಿ ವಿಚಾರ ಮಾಡದೆಯೇ ಪುಣೆ ಸರಕಾರ ದೇಸಾಯಿಯನ್ನು ಬೆಂಬಲಿಸಿತು. ಪೊಗದಿ ಹೆಚ್ಚಿಸಲು ಟಿಪ್ಪುವಿಗೆ ಅಧಿಕಾರವಿಲ್ಲ ಎಂದು ನಾನಾ ಅಭಿಪ್ರಾಯಪಟ್ಟನು.[೨೨]

ನರಗುಂದ ದೇಸಾಯಿ ವೆಂಕಟರಾಯ ಪೊಗದಿ ಕೊಡುವುದಿರಲಿ ಟಿಪ್ಪುವಿನ ಅಧಿಕಾರವನ್ನು ತಾನು ಒಪ್ಪಲು ತಯಾರಿರಲಿಲ್ಲ ಎಂದು ಘೋಷಿಸಿದ. ಮದನಪಲ್ಲಿಯ ಪಾಳೆಗಾರನೊಂದಿಗೆ ಕೂಡಿಕೊಂಡು ಸೇಡಂ ಕೋಟೆಗೆ ಮುತ್ತಿಗೆ ಹಾಕಿದ. ಹಳ್ಳಿಗಳ ಮೇಲೆಲ್ಲ ರಾತ್ರೋರಾತ್ರಿ ಎರಗಿ ಕೊಳ್ಳೆ ಲೂಟಿಗಳನ್ನು ಮಾಡಿ ಸುಲ್ತಾನನಿಗೆ ಸಡ್ಡು ಹೊಡೆದು ನಿಲ್ಲುವ ನಿಶಾನೆಯನ್ನು ಕಳುಹಿಸುವಲ್ಲಿ ಯಶಸ್ವಿಯಾದ. ನರಗುಂದ ದೇಸಾಯಿ ಪುಣೆಯ ರಾಜವಾಡೆಗೆ ಬೇಕಾದ ಮನುಷ್ಯನಾದ್ದರಿಂದ ಪಡ್ನವೀಸ್‌ಗೆ ಪೊಗದಿ ಕೊಡದ ವಿಚಾರವನ್ನು ತಿಳಿಸಿ ಈ ಸಂಬಂಧ ಮಾತುಕತೆ ನಡೆಸಲು ತೀರ್ಮಾನಿಸಿದ. ದೇಸಾಯಿ ಮೈಸೂರು ರಾಜ್ಯಕ್ಕೆ ಮಾಡಿರುವ ಅಪಮಾನಗಳು, ನಡೆಸಿರುವ ಕೊಳ್ಳೆಗಳು, ಪೊಗದಿ ಬಾಕಿ ವಿಚಾರಗಳನ್ನೆಲ್ಲ ತಿಳಿಸಿ ನಾವು ನರಗುಂದ ಮುತ್ತಿದಾಗ ದೇಸಾಯಿ ಪಕ್ಷ ವಹಿಸಬಾರದೆಂಬ ಮನವಿಯನ್ನು ನನ್ನ ಪರವಾಗಿ ಮಾಡಿ ಬನ್ನಿ ಎಂದು ತನ್ನಿಬ್ಬರು ವಕೀಲರಾದ ನೂರ್‌ಮಹಮದ್‌ಖಾನ್ ಮತ್ತು ಷಿಯಾಸ್‌ಖಾನ್‌ರನ್ನು ಪುಣೆಗೆ ಕಳುಹಿಸಿದ.

ಪಡ್ನವೀಸ್ ವಕೀಲರ ಅಭಿಪ್ರಾಯಗಳಿಗೆ ಬೆಲೆ ಕೊಡಲು ನಿರಾಕರಿಸಿ ದೇಸಾಯಿ ಪಕ್ಷ ವಹಿಸುವುದಾಗಿ ಸುದ್ದಿ ಕಳುಹಿಸಿದ. ಟಿಪ್ಪು ತನ್ನ ಅಧಿಕಾರಿಗಳಲ್ಲಿ ಒಬ್ಬನಾದ ಸೈಯದ್‌ಗಫಾರ್‌ನನ್ನು ನರಗುಂದದ ಕೋಟೆಗೆ ಸಂಧಾನಕಾರನಾಗಿ ಕಳುಹಿಸಿದ. "ತಪ್ಪು ಒಪ್ಪಿಕೊಂಡು ಟಿಪ್ಪುವಿನ ಒಡೆತನದಲ್ಲಿ ಬಾಳುವುದಾದರೆ ಕ್ಷಮಿಸಲು ಸಿದ್ದ" ಎಂಬ ಮಾತನ್ನು ಹೇಳಿ ಕಳುಹಿಸಿದ್ದ. "ಸುಲ್ತಾನನ ಮಾತುಗಳಿಗೆ ಒಪ್ಪಿ ನಡೆಯಲು ನಾನೇನು ಗುಲಾಮನಲ್ಲ, ಯುದ್ಧಮಾಡಿಯೇ ಕೋಟೆಯನ್ನು ಗೆಲ್ಲಿ ಎಂದೂ ಸವಾಲು ಹಾಕಿದ.[೨೩]

ಟಿಪ್ಪುವು ತನ್ನ ಹಕ್ಕಿಗಾಗಿ ಒತ್ತಾಯ ಮಾಡಲು ಬಲ ಪ್ರಯೋಗದಲ್ಲಿ ತೊಡಗಿದನು. ಮೈಸೂರು ಸೇನೆ ನರಗುಂದ ಕೋಟೆ ಮೇಲೆ ಆಕ್ರಮಣ ಮಾಡಿತು. ದೇಸಾಯಿ ವೆಂಕಟರಾಯ ತನ್ನ ಸಮೀಪ ಬಂಧು ಕಾಲೋಪಂತ್‌ನೊಂದಿಗೆ ಮುನ್ನುಗ್ಗಿ ಮೈಸೂರು ಸೇನೆಗೆ ತಕ್ಕ ಪ್ರತ್ಯುತ್ತರಗಳನ್ನು ಕೊಡಲಾರಂಭಿಸಿದ. ನಾನಾ ಪಡ್ನವೀಸ್ ಸೇನೆ ಕಳುಹಿಸಲಿದ್ದಾನೆಂಬ ನಂಬಿಕೆಯಲ್ಲಿ ಕೆಲದಿನಗಳ ಕಾಲ ವೀರಾವೇಶದಿಂದ ಹೋರಾಡಿದ ಕಾಲೋಪಂತ್ ಮತ್ತು ವೆಂಕಟರಾಯರಿಗೆ ಮರಾಠ ಸೈನ್ಯ ಸಮಯಕ್ಕೆ ಸರಿಯಾಗಿ ಬಾರದ ಕಾರಣದಿಂದ ಕಷ್ಟವಾಗತೊಡಗಿತು. ನರಗುಂದ ನಗರ ಟಿಪ್ಪುವಿನ ವಶವಾಯಿತು. ಈ ಸುದ್ದಿ ನಾನಾ ಪಡ್ನವೀಸನಿಗೆ ಸಹಿಸದಾಯಿತು. ಪುಣೆಯ ರಾಜಕೀಯ ಸ್ಥಿತ್ಯಂತರಗಳಲ್ಲಿ ಅವನು ಕಂಗೆಟ್ಟಿದ್ದನಾದರೂ ನರಗುಂದದ ರಕ್ಷಣೆಗೆ ಸೇನೆಯನ್ನು ಸಜ್ಜುಗೊಳಿಸಿಕೊಂಡು ಹೊರಟು ನಿಂತ.[೨೪]

ನರಗುಂದದ ರಕ್ಷಣೆಗಾಗಿ ಪರಶುರಾಮ ಭಾವು ಮತ್ತು ಗಣೇಶ ಪಂತಬೆಹ್ರೋ ಇವರನ್ನು ಗಣನೀಯ ಪ್ರಮಾಣದ ಸೈನ್ಯದೊಂದಿಗೆ ನಾನಾ ಕಳುಹಿಸಿದನು. ಸಾಧ್ಯವಾದಷ್ಟು ಮಟ್ಟಿಗೆ ಟಿಪ್ಪುವು ಮುತ್ತಿಗೆಯನ್ನು ತೆಗೆಯುವುದಾದರೆ ಯುದ್ದ ಮುಂದುವರಿಸಬಾರದೆಂದು ಬಾವುವಿಗೆ ಆದೇಶವಿತ್ತನು. ಟಿಪ್ಪುವಿಗೂ ಈ ವಿಚಾರವನ್ನು ಶಾಂತಿಯುತವಾಗಿ ಪರಿಹರಿಸಿಕೊಳ್ಳುವುದೇ ಬೇಕಾಗಿತ್ತು. ನರಗುಂದದ ಮೇಲೆ ತನ್ನ ಒಡೆತನವನ್ನು ಪುಣೆಯು ಅಂಗೀಕರಿಸುವುದಾದ ಪಕ್ಷದಲ್ಲಿ ದೇಸಾಯಿಯು ಪೊಗದಿಯ ಬಾಕಿಯನ್ನು ಪಾವತಿ ಮಾಡಿ, ತನಗಾದ ಹಾನಿಯನ್ನು ತುಂಬಿಕೊಟ್ಟರೆ ಒಡನೆಯೇ ಮುತ್ತಿಗೆ ಹಿಂತೆಗೆಯಲು ಸಿದ್ಧನಾಗಿದ್ದನು. ಟಿಪ್ಪು ಸೇನಾಪತಿ ಬರ್ಹಾನುದ್ದೀನ್ ನರಗುಂದದಿಂದ ಹಿಂದಕ್ಕೆ ಬಂದನು. ಈ ಆಕ್ರಮಣವು ನಿವಾರಿತವಾದ್ದರಿಂದ ದೇಸಾಯಿ ಮತ್ತೆ ಟಿಪ್ಪುವನ್ನು ಕೆರಳಿಸುವಂತಹ ಯಾವುದೇ ಕಾರ್ಯಾಚರಣೆಯಲ್ಲಿ ತೊಡಗಬಾರದೆಂದು ಎಚ್ಚರಿಕೆ ಕೊಟ್ಟನು. ನಾನಾ ಮಾಡಿದ್ದ ಆಜ್ಞೆಗೆ ವಿರುದ್ಧವಾಗಿ ಬಾವು ಮತ್ತು ಗಣೇಶಪಂತರು ಟಿಪ್ಪು ಸೈನ್ಯದ ಮೇಲೆ ಎರಗಿದರು. ಬಲವಾದ ಪೆಟ್ಟುತಿಂದು ಹಿಮ್ಮೆಟ್ಟಿದರು. ಶಾಂತಿಯನ್ನು ಬಯಸುವಲ್ಲಿ ನಾನಾ ಪ್ರಾಮಾಣಿಕ ಇಚ್ಛೆ ತೋರಿಸಲಿಲ್ಲ. ತನ್ನ ವಿರೋಧಿಯನ್ನು ಮರುಳುಗೊಳಿಸಿ ಸಮಯವನ್ನು ಗೆದ್ದುಕೊಳ್ಳುತ್ತಿದ್ದನು. ಹುಸಿ ಭದ್ರತಾ ಭರವಸೆಯನ್ನು ಅವನಿಗೆ ಕೊಟ್ಟು ಯುದ್ಧ

ಸಿದ್ಧತೆಗಳೆಲ್ಲ ಪೂರ್ತಿ ಮುಗಿಯುವವರೆಗೆ ಟಿಪ್ಪುವನ್ನು ಮರುಳುಗೊಳಿಸಲು ನಾನಾ ಅಪೇಕ್ಷಿಸಿದನು. ಪರುಶುರಾಮ ಬಾವು ಟಿಪ್ಪುವಿನ ಸೈನ್ಯದ ಮೇಲೆ ನಡೆಸಿದ ಅಪ್ರಚೋದಿತ ದಾಳಿ ಮತ್ತೆ ಯುದ್ಧವನ್ನು ತ್ವರಿತಗೊಳಿಸಿತು. ಟಿಪ್ಪು ನರಗುಂದದ ಕೋಟೆಗೆ ಬಲವಾದ ಮುತ್ತಿಗೆ ಹಾಕಿದನು. ಕಾಲೋಪಂತನಿಗೆ ಶರಣಾಗತನಾಗಲು ಮತ್ತೊಂದು ಅವಕಾಶ ಕೊಡಲಾಯಿತು. ಪುಣೆಯ ಆದೇಶದ ಮೇರೆಗೆ ಅವನು ಶರಣಾಗತನಾಗಲು ನಿರಾಕರಿಸಿದನು. ಕೋಟೆ ಆಕ್ರಮಣಕ್ಕೆ ತುತ್ತಾಯಿತು. ದೇಸಾಯಿ ಮತ್ತು ಅವನ ಮಂತ್ರಿಯನ್ನೂ ಅವರವರ ಕುಟುಂಬಗಳೊಂದಿಗೆ ಕಬ್ಬಾಳದುರ್ಗಕ್ಕೆ ಕಳುಹಿಸಲಾಯಿತು. ಕ್ರಿ.ಶ.೧೭೮೭ರಲ್ಲಿ ಮೈಸೂರು-ಮರಾಠ ಯುದ್ಧ ಕೊನೆಗೊಂಡ ಮೇಲೆ ಟಿಪ್ಪು ಸೈನ್ಯ ಕಿತ್ತೂರು, ಹೊಸಕೋಟೆ, ದೊಡವಾಡ, ಖಾನಾಪುರ, ಪಾಳೆಯಪಟ್ಟುಗಳನ್ನು ಗೆದ್ದಿತು. ನರಗುಂದ ಪತನವು ನಾನಾಗೆ ಬಹುದೊಡ್ಡ ಆಘಾತವಾಗಿತ್ತು. ಮರಾಠ ನಾಯಕರನ್ನೂ, ನಿಜಾಮನನ್ನೂ ಒಳಗೊಂಡ ದೊಡ್ಡ ಒಕ್ಕೂಟ ರೂಪಿಸಲು ಮುಂದಾದನು.[೨೫]

ಟಿಪ್ಪು ಮರಾಠರೊಂದಿಗೆ ಶಾಂತವಾಗಿರಲು ಪ್ರಯತ್ನಿಸಿದನು. ತನ್ನ ಭಾರತೀಯ ನೆರೆಯರೊಂದಿಗೆ ಇಟ್ಟುಕೊಂಡಿದ್ದ ರಾಜಕಾರಣ ಸಂಬಂಧವು ಇಂಗ್ಲಿಷರೊಂದಿಗೆ ಸಂಬಂಧಗಳಿಗಿಂತ ಬೇರೆ ಏಕೆಂದರೆ ಬ್ರಿಟಿಷರು ಭಾರತದ ಸ್ವಾತಂತ್ರ್ಯಕ್ಕೆ ಮಹಾ ಗಂಡಾಂತರಕಾರಿ ಎಂದು ಭಾವಿಸಿದ್ದನು. ಮರಾಠರು ಅವರ ರಾಜ್ಯವನ್ನು ಕೊಳ್ಳೆ ಹೊಡೆದಿದ್ದರು, ಯುದ್ಧಬಂಧಿಗಳನ್ನು ಇರಿಸಿಕೊಂಡಿದ್ದರು, ತನ್ನಿಂದ ಚೌಥ್ ಕೇಳಿದ್ದರು, ಟಿಪ್ಪುವಿನ ಅಸಮಾಧಾನಕ್ಕೆ ಕಾರಣರಾಗಿದ್ದರೂ ಅವರೊಂದಿಗೆ ಸಂಬಂಧ ಮುರಿದುಕೊಳ್ಳುವ ಅಪೇಕ್ಷೆ ಅವನಿಗಿರಲಿಲ್ಲ. ಆದರೆ ಮರಾಠ, ನಿಜಾಮ ಯುದ್ಧವು ಅವರ ಗಮನವನ್ನು ಬೇರೆ ಕಡೆಗೆ ಎಳೆಯಿತಾಗಿ ಟಿಪ್ಪುವಿನ ಕಾತರ-ಕಳವಳಗಳು ಹಗುರವಾದವು. ತನ್ನ ಶಕ್ತಿಯನ್ನು ಒಗ್ಗೂಡಿಸಿಕೊಳ್ಳಲು ಅವಕಾಶವನ್ನು ಪರಿಸ್ಥಿತಿಯು ಅವನಿಗೆ ಒದಗಿಸಿತು.

ಕ್ರಿ.ಶ.೧೭೯೨ರ ಸಂಧಿಯಾದೊಡನೆ ಮರಾಠರು ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸ ತೊಡಗಿದರು. ಅವನ ರಾಜ್ಯವನ್ನು ಭಾರೀ ಪ್ರಮಾಣದಲ್ಲಿ ಧ್ವಂಸ ಮಾಡತೊಡಗಿದರು. ಬಾವು ಎಷ್ಟು ದೌರ್ಜನ್ಯ ಮಾಡಿದನೆಂದರೆ ಕಾರನ್‌ವಾಲೀಸ್ ಹೀಗೆ ಅಭಿಪ್ರಾಯಪಟ್ಟನು. "ಅವನು ಸೇನೆಯನ್ನು ನಡೆಸಿಕೊಂಡು ಹೋಗುವಾಗ ಅನೇಕ ಅಕ್ರಮಗಳನ್ನು ಮಾಡುತ್ತಾನೆ ಎಂದು ನನಗನ್ನಿಸುತ್ತದೆ. ಏಕೆಂದರೆ ಅವನ ಸೈನ್ಯವು ಒಪ್ಪಂದಕ್ಕೆ ಸ್ವಲ್ಪವೂ ಗೌರವ ಕೊಟ್ಟಿಲ್ಲ. ಟಿಪ್ಪುವಿನ ಕಡೆಯ ಧಾರವಾಡದ ಗೌರ್ನರ್ ಆಗಿದ್ದ ಬದ್ರುಜ್-ಜಮಾನ್-ಖಾನ್‌ನನ್ನು ಅವರು ಬಿಡುಗಡೆ ಮಾಡಲಿಲ್ಲ. ಅವನು ಧಾರವಾಡದ ಕೋಟೆಯನ್ನು ಷರತ್ತುಗಳ ಮೇಲೆ ವೈರಿಗಳಿಗೆ ಒಪ್ಪಿಸಿ ಬಿಟ್ಟಿದ್ದನು. ಹೊಂದಾಣಿಕೆಗೊಳಿಸಬೇಕಾದ ಗಡಿ ವಿವಾದಗಳಿದ್ದವು. ಒಪ್ಪಂದದ ಪ್ರಕಾರ ಟಿಪ್ಪುವಿಗೆ ಸಿರಾ, ಚಂಚೋಳಿ ಮತ್ತು ಸೂಪ ಈ ಮೂರು ತಾಲೂಕುಗಳನ್ನು ಪಡೆಯಬೇಕಾಗಿದ್ದಿತು.

ಮರಾಠರು ಈ ಭಾಗಗಳನ್ನು ತಾವೇ ಇರಿಸಿಕೊಂಡಿದ್ದರು. ಈ ಗಡಿ ವ್ಯಾಜ್ಯಗಳನ್ನು ಒಂದು ಆಯೋಗವು ಕುಳಿತು ಪರಿಹರಿಸಿಕೊಡಬೇಕು ಎಂದು ಟಿಪ್ಪು ಬಯಸಿದನು. ಮರಾಠರು ಅವನ ಯೋಜನೆಯನ್ನು ನಿರ್ಲಕ್ಷಿಸಿದರು.

ಪುಣೆಗೆ ಸಿಂಧಿಯನು ಬಂದುದರಿಂದ ಮರಾಠ ರಾಜಕೀಯದಲ್ಲಿ ಪೂರ್ಣ ಬದಲಾವಣೆ ಯುಂಟಾಯಿತು. ಟಿಪ್ಪುವಿನ ವ್ಯಾಜ್ಯಗಳು ಪರಿಹಾರಗೊಂಡವು. ಪುಣೆಯ ಆಸ್ಥಾನದೊಂದಿಗೆ ಸಂಬಂಧಗಳು ಉತ್ತಮಗೊಂಡವು. ಮಹಾದಾಜಿ ಸಿಂಧ್ಯಾನು ಕ್ರಿ.ಶ.೧೭೯೨ರಲ್ಲಿ ಉತ್ತರದಿಂದ ದಕ್ಷಿಣದಲ್ಲಿ ತನ್ನ ಪ್ರಭುತ್ವ ಸ್ವೀಕರಿಸುವುದಕ್ಕಾಗಿ ಬಂದನು. ಬ್ರಿಟಿಷರು ರಜಪೂತರನ್ನು ಅಡಗಿಸಲು ತನಗೆ ಸಹಾಯ ಮಾಡುವುದಾದರೆ ಮೂರನೆಯ ಮೈಸೂರು ಯುದ್ಧದಲ್ಲಿ ಸೇರಿಕೊಳ್ಳುವುದಾಗಿ ಇಚ್ಛೆ ವ್ಯಕ್ತಪಡಿಸಿದ. ಬ್ರಿಟಿಷರು ಅವನ ಯೋಜನೆಯನ್ನು ಪುರಸ್ಕರಿಸಲಿಲ್ಲ. ನಿರಾಶೆಗೊಂಡ ಸಿಂಧಿಯಾ ಬ್ರಿಟಿಷ್ ವಿರೋಧಿ ಮನೋಭಾವ ಹೊಂದಿದನು.

ಸಿಂಧ್ಯಾನ ಆಗಮನದಿಂದ ಟಿಪ್ಪು ಮತ್ತು ನಿಜಾಮ ಇಬ್ಬರಿಗೂ ಅನುಕೂಲವಾಯಿತು. ಮೈಸೂರು ಯುದ್ಧದಲ್ಲಿ ಅವನಿಗೆ ಸೂಕ್ತ ಪ್ರಾತಿನಿಧ್ಯ ಬ್ರಿಟಿಷರಿಂದ ದೊರಕಲಿಲ್ಲವಾದ್ದರಿಂದ ಟಿಪ್ಪುವಿಗೆ ಸಹಾಯ ಮಾಡಲು ಅಪೇಕ್ಷಿಸಿದನು. ಅವನ ನೀತಿಯನ್ನು ಬೆಂಬಲಿಸಿದನು. ಬ್ರಿಟಿಷರ ಅಪಾಯಕಾರಿ ಬೆಳವಣಿಗೆಗೆ ತಡೆಹಾಕಲು ತಕ್ಕ ಸಾಧನವಾಗಿ ಟಿಪ್ಪುವನ್ನು ಬೆಂಬಲಿಸುವುದು ತನ್ನ ಅಭಿಪ್ರಾಯವೆಂದು ಹೇಳಿದನು. ಪಿ.ಇ.ರಾಬರ್ಟ್ಸ್ ಹೇಳುವಂತೆ "ಸಿಂಧಿಯನು ಪೇಶ್ವೆಗೆ, ಟಿಪ್ಪುವಿಗೆ ವಿರುದ್ಧವಾಗಿ ಬ್ರಿಟಿಷರಿಗೆ ನೇರವಾಗಿ ದೊಡ್ಡದೊಂದು ತಪ್ಪು ಮಾಡಿದಂತಾಯಿತೆಂಬ ಮನೋಭಾವ ಬದಲಿಸಿಕೊಂಡು ಟಿಪ್ಪುವಿನೊಡನೆ ನಿಕಟ ಸಂಬಂಧಗಳನ್ನು ಇಟ್ಟುಕೊಳ್ಳಬೇಕೆಂದೂ ಹೇಳಿ ಅವನನ್ನು ಒಲಿಸಿದನು. ಅವನೊಂದಿಗೆ ವಿಶ್ವಾಸಪೂರ್ವಕ ಪತ್ರವ್ಯವಹಾರ ನಡೆಸತೊಡಗಿದನು. ನಿಜಾಮ ಮತ್ತು ಮರಾಠರಿಗೂ ಯುದ್ಧ ಮೊದಲಾದಾಗ ಟಿಪ್ಪು ಭಾಗಶಃ ಸೇಡು ತೀರಿಸಿಕೊಂಡಂತಾಯಿತೆಂದು ಭಾವಿಸಿದನು. ಆ ಯುದ್ಧದಲ್ಲಿ ಟಿಪ್ಪು ತಟಸ್ಥನಾಗಿದ್ದ. ಇದನ್ನು ಮರಾಠರೊಂದಿಗೆ ಮೈತ್ರಿ ಎಂದು ಭಾವಿಸಲಾಯಿತು. ಮೈಸೂರು ರಾಜಕುಮಾರನನ್ನು ಬಿಡುಗಡೆ ಮಾಡಲು ನಿಜಾಮನು ಬೇಡವೆಂದದ್ದು, ಟಿಪ್ಪುವಿಗೆ ವಿರುದ್ಧವಾಗಿ ಬ್ರಿಟಿಷರೊಂದಿಗೆ ಭರವಸೆಯ ಒಪ್ಪಂದಕ್ಕೆ ಮುಂದಾಗಿದ್ದು, ಹೈದರಾಬಾದ್ ಆಸ್ಥಾನದಲ್ಲಿ ಬ್ರಿಟಿಷರು ನಡೆಸಿದ ಒಳಸಂಚುಗಳು, ಟಿಪ್ಪು ಮರಾಠರ ಕಡೆಗೆ ಒಲವು ತೋರಲು ಕಾರಣವಾದವು.

ಮರಾಠ–ನಿಜಾಮರ ಯುದ್ಧದಿಂದ ಟಿಪ್ಪು ಹೆಚ್ಚಿನ ಪ್ರಾಧಾನ್ಯತೆಯನ್ನು ಪಡೆದನು. ದಕ್ಷಿಣ ಭಾರತದ ಅಧಿಕಾರ ರಾಜಕಾರಣದಲ್ಲಿ ಸಮತೋಲನ ಶಕ್ತಿಯಾಗಿ ವರ್ತಿಸಿದನು. ಟಿಪ್ಪುವಿನ ವಿಶ್ವಾಸವನ್ನು ನಿಜಾಮ ಗಳಿಸಿದ್ದರೆ ಮುಂದೊದಗಲಿದ್ದ ಪರಿಭವವನ್ನು ತಪ್ಪಿಸಿಕೊಳ್ಳಲು ಸಾಧ್ಯ ವಾಗುತ್ತಿತ್ತು. ಕಿರ್ಕ್ ಪ್ಯಾಟ್ರಿಕ್ ಟಿಪ್ಪುವಿಗೂ ನಿಜಾಮನಿಗೂ ಇದ್ದ ಭಿನ್ನಾಭಿಪ್ರಾಯ ಹೋಗಲಾಡಿಸಲು

ಪ್ರಯತ್ನಿಸಿದನು. ಕ್ರಿ.ಶ.೧೭೯೨ರ ಸಿಂಧಿಯಾನೊಡನೆ ಈ ಪ್ರಯತ್ನ ನಡೆಯಿತು. ವಿವಾದಗಳೆಲ್ಲ ಪರಿಹಾರವಾಗುವವರೆಗೂ ರಾಜಕುಮಾರರನ್ನು ಇರಿಸಿಕೊಂಡಿರಬೇಕೆಂದು ನಿಜಾಮನ ಮಂತ್ರಿ ಒತ್ತಾಯ ಪಡಿಸಿದುದು ಟಿಪ್ಪುವಿನ ಅಸಮಾಧಾನಕ್ಕೆ ಕಾರಣವಾಯಿತು. ಕ್ರಿ.ಶ.೧೭೯೫ರ ಮರಾಠ-ನಿಜಾಮ ಯುದ್ಧವು ದಕ್ಷಿಣ ಭಾರತದ ರಾಜಕೀಯ ಚಿತ್ರದ ತೊಡಕನ್ನು ಮನವರಿಕೆ ಮಾಡಿತು. ಕ್ರಿ.ಶ.೧೭೯೪ರಲ್ಲಿ ನಾನಾ ಪಡ್ನವೀಸ್ ತನ್ನ ಸಾಮರ್ಥ್ಯದ ಶಿಖರದಲ್ಲಿದ್ದನು. ದೀರ್ಘಕಾಲದ ಅಧಿಕಾರ, ಟಿಪ್ಪುವಿನ ಪರಾಜಯ, ಮಹಾದಾಜಿ ಸಿಂಧಿಯಾ ಹಾಗೂ ಹರಿಪಂತರ ಮರಣದಿಂದಲೂ ದಕ್ಷಿಣ ಭಾರತದಲ್ಲಿ ಅಜೇಯ ಶಕ್ತಿಯಾಗಿ ಬೆಳೆದನು.[೨೬]

೩.೪. ಟಿಪ್ಪುವಿನ ಧಾರ್ಮಿಕ ಧೋರಣೆ

ಟಿಪ್ಪುವಿನ ಕಾರ್ಯಚಟುವಟಿಕೆಗಳಲ್ಲಿ ಗಮನ ಸೆಳೆಯುವಂತದ್ದು ಅವನ ಧಾರ್ಮಿಕ ಧೋರಣೆ. ದಾಖಲೆಗಳನ್ನು ಅಧ್ಯಯಿನಿಸಿದ ವಿದೇಶಿ ವಿದ್ವಾಂಸರು ಟಿಪ್ಪುವನ್ನು ಧರ್ಮಾಂಧನೆಂದು, ಪರಧರ್ಮ ದ್ವೇಷಿಯೆಂದು ಬಣ್ಣಿಸಿದ್ದಾರೆ. ಇವರಲ್ಲಿ ಪ್ರಮುಖರು ಕರ್ನಲ್ ಮಾರ್ಕ್‌ವಿಲ್ಕ್ಸ್, ಕಿರ್ಕ್‌ಪ್ಯಾಟ್ರಿಕ್ ಹಾಗೂ ಲೂಯಿಸ್ ಬೌರಿಂಗ್. ಇವರ ಹೇಳಿಕೆಯನ್ನೆ ಆಧರಿಸಿ ಕೆಲವು ದೇಶಿಯ ಇತಿಹಾಸಕಾರರು ಟಿಪ್ಪುವನ್ನು ಮತಾಂಧನೆಂದು ವ್ಯಾಖ್ಯಾನಿಸಿದ್ದಾರೆ.[೨೭] ಕಿರ್ಕ್‌ಪ್ಯಾಟ್ರಿಕ್ ಟಿಪ್ಪುವನ್ನು 'ಅಸಹಿಷ್ಣತೆಯ ಮತದ್ವೇಷಿ ಅಥವಾ ಪ್ರಕೋಪದ ಹುಚ್ಚ' ಎಂದು ಕರೆದಿದ್ದಾನೆ.[೨೮] ಮಾರ್ಕ್ ವಿಲ್ಕ್ಸ್‌ನು ತನ್ನ ಹಿಸ್ಟರಿ ಆಫ್ ಮೈಸೂರ್‌ನಲ್ಲಿ ಹೀಗೆ ಹೇಳುತ್ತಾನೆ. "ಬಲವಂತ ಮತ ಪರಿವರ್ತನೆ, ಸಾಮೂಹಿಕ ಜನಾಂಗದ ಮುಂದೊಗಲನ್ನು ಕತ್ತರಿ ಹಾಕುವ ಮತ ಸಂಸ್ಕಾರ, ದೇವಸ್ಥಾನಗಳ ನಾಶ, ದೇವಾಲಯಗಳ ಮುಟ್ಟುಗೋಲು ಮುಂತಾದವುಗಳ ಕತೆಗಳನ್ನು ಹೇಳುತ್ತ ಟಿಪ್ಪು ಅಸಹಿಷ್ಣತೆಯ ಮತದ್ವೇಷಿ ಮತ್ತು ಯಾವುದೋ ಒಂದು ಕಾಲದಲ್ಲಿ ಚರಿತ್ರೆಯಲ್ಲಿರುವ ಧಾರ್ಮಿಕ ಸಚಿತ್ರ ಹಿಂಸೆಯು ಅತ್ಯಂತ ಭಯಾನಕವಾಗಿ ಪುನರ್ ಸ್ಥಾಪನೆಯಾಯಿತು.[೨೯] ಇದಕ್ಕೆ ಪೂರಕವೆಂಬಂತೆ ಕೆಲವು ಆಧುನಿಕ ಇತಿಹಾಸಕಾರರಾದ ರಾಬರ್ಟ್ಸ್ ಮತ್ತು ಸರ್ದೇಸಾಯಿ ಯಂತವರು ಕೂಡ ಅದೇ ಅಭಿಪ್ರಾಯವನ್ನು ಪುನರುಚ್ಚರಿಸುತ್ತಾರೆ. ಆದರೆ ಸುರೇಂದ್ರನಾಥ ಸೇನರು ಟಿಪ್ಪು ಎಲ್ಲಿ ಇಸ್ಲಾಂ ಮತಕ್ಕೆ ಬಲವಂತವಾಗಿ ಪರಿವರ್ತನೆಯನ್ನು ಮಾಡಿದ್ದನೊ, ಅಲ್ಲಿ ಅವನ ಉದ್ದೇಶ ರಾಜಕೀಯವೇ ಹೊರತು ಧಾರ್ಮಿಕವಲ್ಲವೆಂದು ಅಭಿಪ್ರಾಯಪಡುತ್ತಾರೆ.[೩೦]

ಕೊಡಗಿನಲ್ಲಿ ಮತ್ತು ಮಲಬಾರಿನಲ್ಲಿ ಟಿಪ್ಪುವು ಕೈಗೊಂಡ ಮತಾಂತರ ಮತ್ತು ಕರಾವಳಿ ಕರ್ನಾಟಕದಲ್ಲಿ ಕ್ರೈಸ್ತ ಮತ್ತು ಸಾರಸ್ವತ ಗೌಡರ ಮೇಲೆ ಎಸಗಿದ ದೌರ್ಜನ್ಯ ಎಂಬ ಉದಾಹರಣೆ ಯನ್ನು ದೇಶಿ ಮತ್ತು ವಿದೇಶಿ ವಿದ್ವಾಂಸರು ಕೊಡುತ್ತಾರೆ. ಟಿಪ್ಪುವು ಮತಾಂಧನೆಂಬ ಅಭಿಪ್ರಾಯ ೧೯೧೬ರವರೆಗೆ ಇದ್ದಿತು. ಆರ್.ನರಸಿಂಹಾಚಾರ್ಯರ ಶ್ರಮದಿಂದ ಬೆಳಕಿಗೆ ಬಂದ ಶೃಂಗೇರಿ

ದಾಖಲೆಗಳು ಟಿಪ್ಪುವಿನ ಧಾರ್ಮಿಕ ಧೋರಣೆ ಬಗೆಗಿನ ಅಭಿಪ್ರಾಯ ಪರಿಷ್ಕರಣೆಗೆ ಕಾರಣವಾಯಿತು. ಈ ದಾಖಲೆಗಳಲ್ಲಿ ಟಿಪ್ಪುವು ಶೃಂಗೇರಿ ಮಠದ ಧಾರ್ಮಿಕ ಕಾರ್ಯಗಳಿಗೆ ಅಪಾರ ದಾನ ಮಾಡಿದನೆಂದು ತಿಳಿಸಲಾಗಿದೆ.[೩೦] ಶೃಂಗೇರಿ ಮಠಕ್ಕೆ ಟಿಪ್ಪು ಬರೆದ ಪತ್ರಗಳು ಮತ್ತು ಮಠದ ಶ್ರೇಯೋಭಿವೃದ್ಧಿಗೆ ಅವನು ನೀಡಿರುವ ದಾನ, ದತ್ತಿ ಹಾಗೂ ಉಡುಗೊರೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಗಮನಿಸುವಾಗ ಟಿಪ್ಪುವಿನ ಆಕ್ರಮಣಕಾರಿ ಸ್ವಭಾವದ ಇಸ್ಲಾಂ ಧರ್ಮ ಯಾವುದೇ ಕಾರಣಕ್ಕೂ ಹಿಂದೂ ಧರ್ಮದೊಂದಿಗೆ ಘರ್ಷಣೆಗೆ ಅನುವು ಮಾಡಿಕೊಟ್ಟಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಬ್ರಿಟಿಷರ ವಿರುದ್ಧದ ಟಿಪ್ಪುವಿನ ಹೋರಾಟದಲ್ಲಿ ಧರ್ಮದ ಬಳಕೆ ಆಗಿರುವುದು ನೂರಕ್ಕೆ ನೂರು ಸತ್ಯ. ಆದರೆ ಅಂಥ ಕ್ರಮಗಳಿಂದ ಟಿಪ್ಪು ಅವನ ಸಾಮ್ರಾಜ್ಯದ ಆಡಳಿತಕ್ಕೆ ಒಳಪಡುವ ಹಿಂದೂ ಪ್ರಜೆಗಳ ಮನಸ್ಸಿಗೆ ನೋವುಂಟು ಮಾಡುವ ಅಥವಾ ಅವರ ಧರ್ಮಕ್ಕೆ ಹಾಗೂ ದೇವಾಲಯಗಳಿಗೆ ತೊಂದರೆ ನೀಡುವ ಇರಾದೆ ಹೊಂದಿರಲಿಲ್ಲ. ಎಲ್ಲಾ ಧರ್ಮಗಳ ನಡುವೆ ಸಮಾನತೆ ಕಾಪಾಡಿಕೊಳ್ಳುವುದು ಅವನ ಉದ್ದೇಶವಾಗಿತ್ತು.[೩೧]

ಶೃಂಗೇರಿ ಮಠದ ಸ್ವಾಮಿಜಿಯವರಿಗೆ ಬರೆದಿರುವ ಹೆಚ್ಚಿನ ಪತ್ರಗಳಲ್ಲಿ ಟಿಪ್ಪು ತನ್ನ ಸಾಮ್ರಾಜ್ಯಕ್ಕೆ ಮತ್ತು ಪ್ರಭುತ್ವಕ್ಕೆ ಹೊರಗಿನಿಂದ ಬರುವ ಬೆದರಿಕೆ ಸ್ವರೂಪವನ್ನು ವಿವರಿಸುತ್ತಾನೆ. ಪತ್ರದ ಆರಂಭದಲ್ಲಿ ರಾಜಮುದ್ರೆ ಇರುತ್ತಿತ್ತು. ಕೆಂಪು ಬಣ್ಣದ ಬಟ್ಟೆಯಲ್ಲಿ ಬರೆಯಲಾಗುತ್ತಿತ್ತು. ಪತ್ರವ್ಯವಹಾರಗಳು ಸುಮಾರು ೧೭೯೧–೧೭೯೮ ನಡುವೆ ಆಗಿರುತ್ತದೆ. ಪತ್ರಗಳನ್ನು ಗಮನಿಸುವಾಗ ಮೈಸೂರು ಸಂಸ್ಥಾನಕ್ಕೆ ಮೂರು ಶಕ್ತಿಗಳ ಅಥವಾ ಗುಂಪುಗಳಿಂದ ಸಮಸ್ಯೆ ತಲೆದೋರಿತ್ತು. ಮರಾಠರು, ಹೈದರಾಬಾದ್ ನಿಜಾಮ ಮತ್ತು ಬ್ರಿಟಿಷರು ಈ ಮೂವರು ಅವನ ಬದ್ಧ ವೈರಿಗಳೆಂದೇ ಪತ್ರಗಳಲ್ಲಿ ಚಿತ್ರಿಸಿರುತ್ತಾನೆ. ಎರಡನೆಯದಾಗಿ ಶೃಂಗೇರಿ ಮಠದ ಮೇಲೆ ಮರಾಠರು ಮಾಡಿರುವ ದಾಳಿ ಮತ್ತು ಲೂಟಿ ಕಳವಳ ಹಾಗೂ ಅನುಕಂಪವನ್ನು ವ್ಯಕ್ತಪಡಿಸಿರುತ್ತಾನೆ. ಮೂರನೆಯದಾಗಿ ಮಠದ ಸ್ವಾಮೀಜಿ ವೈಯಕ್ತಿಕ ವಿಚಾರಗಳು, ಮಠದಲ್ಲಿ ನಡೆಯುವ ಆಂತರಿಕ/ಧಾರ್ಮಿಕ ಚಟುವಟಿಕೆಗಳೂ, ಅವರ ಶ್ರೇಯೋಭಿವೃದ್ಧಿ ಮತ್ತು ಕೆಲವೊಮ್ಮೆ ನಾಗರೀಕ ಸಮಸ್ಯೆಗಳ ಕುರಿತು ಸ್ವಾಮೀಜಿಯ ಸಲಹೆ ಸೂಚನೆಗಳನ್ನು ಅಪೇಕ್ಷಿಸಿ ವಿನಂತಿಸಿಕೊಳ್ಳುವುದನ್ನು ಪತ್ರಗಳಲ್ಲಿ ಸಾಮಾನ್ಯವಾಗಿ ಕಾಣಬಹುದು. ಈ ವಿಷಯಗಳಲ್ಲದೆ, ಮೇಲೆ ಉಲ್ಲೇಖಿಸಿರುವ ಮೂರು ಬಗೆಯ ವೈರಿಗಳ ದಮನಕ್ಕೆ ಮಠದಲ್ಲಿ ಧಾರ್ಮಿಕ ಕ್ರಿಯೆಗಳಾದ ಶತಚಂಡಿ ಜಪ ಮತ್ತು ಸಹಸ್ರ ಚಂಡಿ ಜಪಗಳನ್ನು ನೆರವೇರಿಸಲು ಸ್ವಾಮೀಜಿಯವರಲ್ಲಿ ಗೌರವಪೂರ್ವಕವಾಗಿ ವಿನಂತಿಸಿ ಕೊಳ್ಳುತ್ತಾನೆ.[೩೨]

ಟಿಪ್ಪು ಹಿಂದೂ ಪ್ರಜೆಗಳಿಗೆ ಸಂಪೂರ್ಣ ಪೂಜಾ ಸ್ವಾತಂತ್ರ್ಯ ನೀಡಿದ್ದನು. ಶ್ರೀರಂಗಪಟ್ಟಣದ ಕೋಟೆಯೊಳಗೆ ಇರುವ ಭವ್ಯವಾದ ರಂಗನಾಥ ದೇವಾಲಯವು ಸುಲ್ತಾನನ ಅರಮನೆಯ

ಪಶ್ಚಿಮಕ್ಕೆ ಕೆಲವೇ ಗಜಗಳ ದೂರದಲ್ಲಿದ್ದುದರಿಂದ ದೇವಸ್ಥಾನದ ಘಂಟೆಗಳ ನಾದವನ್ನು ಬ್ರಾಹ್ಮಣ ಅರ್ಚಕರ ಮಂತ್ರಗಳನ್ನು ಪ್ರತಿನಿತ್ಯವೂ ಕೇಳುತ್ತಿದ್ದನು. ಅವನು ದೇವಾಲಯಗಳ ಧಾರ್ಮಿಕ ಆಚರಣೆಗಳಿಗೆ ಅಡೆತಡೆ ಉಂಟು ಮಾಡಿರಲಿಲ್ಲ. ರಾಜ್ಯದಲ್ಲಿದ್ದ ಸಹಸ್ರಾರು ದೇವಸ್ಥಾನಗಳಾವುದರಲ್ಲಿಯೇ ಆಗಲಿ ಹಿಂದೂ ಪ್ರಜೆಗಳು ಪೂಜೆ–ಪುನಸ್ಕಾರಗಳನ್ನು ನಿಲ್ಲಿಸಲಿಲ್ಲ. ಇದಲ್ಲದೆ ಬ್ರಾಹ್ಮಣರಿಗೆ ತಮ್ಮ ಧಾರ್ಮಿಕ ಉತ್ಸವಾಚಾರಣೆಗಳಿಗಾಗಿ ಹಣವನ್ನೂ ನೀಡಿದ್ದನು. ಉದಾ: ಸಹಸ್ರ ಚಂಡಿ ಜಪದ ಆಚರಣೆಗಾಗಿ ಶೃಂಗೇರಿ ಮಠದ ಸ್ವಾಮಿಗಳಿಗೆ ಅಗತ್ಯವಾದ ಎಲ್ಲಾ ವಸ್ತುಗಳನ್ನು ಒದಗಿಸಬೇಕೆಂದು ಅಧಿಕಾರಿಗಳಿಗೆ ಅಪ್ಪಣೆ ಮಾಡಿದನು. ರಾಯಕೋಟೆಯ ಎರಡು ದೇವಾಲಯಗಳಿಗೆ ಉಂಬಳಿಯನ್ನು ಬಿಟ್ಟುಕೊಟ್ಟನು. ಅವನಿಂದ ಸನ್ನದುಗಳನ್ನು ಪಡೆದಿದ್ದ ಅರ್ಚಕರು ಅವುಗಳನ್ನು ೧೭೯೩ರಲ್ಲಿ ಮನ್ರೋನ ಮುಂದೆ ಇಟ್ಟು ಉಂಬಳಿಗಳನ್ನು ಮುಂದುವರೆಸಿಕೊಂಡು ಹೋಗಬೇಕೆಂದು, ಇಲ್ಲವಾದರೆ ಧರ್ಮಕಾರ್ಯಗಳಿಗೆ ಅಡಚಣೆಯಾಗುವುದೆಂದು ಹೇಳಿದರು. ಒಂದು ಸನ್ನಧಿನ ಪ್ರಕಾರವಾಗಿ ವೆಂಕಟಾಚಲಪತಿ ದೇವಸ್ಥಾನದಲ್ಲಿ ಪೂಜೆ ಮುಂದುವರಿಸಲು ಮತ್ತು ಕಡಪ ಜಿಲ್ಲೆಯ ಪುಲ್ಲಿವೆಂಡ್ಲದ ಅಂಜನೆಯಸ್ವಾಮಿ ದೇವಸ್ಥಾನದಲ್ಲಿ ನಿಂತುಹೋಗಿದ್ದ ಪೂಜೆಯನ್ನು ಮತ್ತೆ ಎತ್ತಿಕೊಳ್ಳಬೇಕೆಂದು ಆಜ್ಞಾಪಿಸಿದನು.[೩೫]

ಟಿಪ್ಪು ಮತ ದ್ವೇಷಿಯಾಗಿರದೆ ಪ್ರಜ್ಞಾವಂತ ರಾಜನಾಗಿ ಕಾರ್ಯನಿರ್ವಹಿಸಿರುವುದನ್ನು ಹಲವು ಪುರಾವೆಗಳಿಂದ ತಿಳಿಯಬಹುದು. ಇದನ್ನು ಅರಿಯಲು ಟಿಪ್ಪು ತನ್ನ ರಾಜ್ಯದ ಸರಕಾರದಲ್ಲಿ ಹಿಂದೂ ಪ್ರಜೆಗಳನ್ನು ಉನ್ನತ ಹುದ್ದೆಗಳಿಗೆ ನೇಮಕ ಮಾಡಿರುವ ಸಂದರ್ಭಗಳನ್ನು, ದೇವಸ್ಥಾನ ಮತ್ತು ಬ್ರಾಹ್ಮಣರಿಗೆ ನೀಡಿರುವ ದತ್ತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು, ವಿಗ್ರಹ ಪ್ರತಿಷ್ಠಾಪನೆಗೆ ಖಜಾನೆಯ ಸಂಪತ್ತನ್ನು ನೀಡಿರುವ ವಿಚಾರಗಳನ್ನು ಅವಲೋಕಿಸಬೇಕು. ಟಿಪ್ಪು ಆಡಳಿತದಲ್ಲಿ ಮುಸ್ಲಿಂಮೇತರರನ್ನು ಜವಾಬ್ದಾರಿಯುತ ಸ್ಥಾನಗಳಿಗೆ ನೇಮಿಸಿದನು. ದಿವಾನ್ ಪೂರ್ಣಯ್ಯನು ಮೀರ್ ಅಸೌಫ್ ಎಂಬ ಮುಖ್ಯ ಹುದ್ದೆಯಲ್ಲಿದ್ದನು. ಕೃಷ್ಣರಾಯ ಖಜಾನೆಯನ್ನು ನೋಡಿಕೊಳ್ಳುತ್ತಿದ್ದನು. ಚಾಮಯ್ಯ ಅಯ್ಯಂಗಾರನು ಅಂಚೆ ಮತ್ತು ಪೊಲೀಸ್ ಮಂತ್ರಿಯಾಗಿದ್ದನು. ರಂಗ ಅಯ್ಯಂಗಾರ್ ಮತ್ತು ನರಸಿಂಹರಾಯರು ಶ್ರೀರಂಗಪಟ್ಟಣದಲ್ಲಿ ಉನ್ನತ ಹುದ್ದೆಯಲ್ಲಿದ್ದರು. ಅಪ್ಪಾಜಿ ರಾಮನೂ ಮತ್ತು ಶ್ರೀನಿವಾಸರಾಯನೂ ಟಿಪ್ಪುವಿನ ನಂಬಿಗಸ್ಥರಾಗಿದ್ದು ಅವರು ಪ್ರಾಮುಖ್ಯವಾದ ರಾಯಬಾರಗಳನ್ನು ವಹಿಸುತ್ತಿದ್ದರು. ಮೂಲಚಂದ್ ಮತ್ತು ಸುಜನರಾಯ್ ಅವರುಗಳು ಮೊಗಲ್ ಆಸ್ಥಾನದಲ್ಲಿ ಟಿಪ್ಪುವಿನ ಮುಖ್ಯ ನಿಯೋಗಿಗಳಾಗಿದ್ದರು. ಸುಬ್ಬರಾವ್ ಟಿಪ್ಪುವಿನ ಪ್ರಧಾನ ಪೇಷ್ಕರ್ ಆಗಿದ್ದನು. ನರಸಿಂಹಯ್ಯ ಅವನ ಒಬ್ಬ ಮುನ್ಸಿಯಾಗಿದ್ದ ನಾಗಪ್ಪಯ್ಯ ಕೊಡಗಿಗೆ ಪೌಜುದಾರನಾಗಿ ನೇಮಕಗೊಂಡಿದ್ದನು.[೩೭] ಹೀಗೆ ಟಿಪ್ಪುವಿನ ಅನೇಕ ಅಮೀಲರು ಮತ್ತು ಕಂದಾಯ ಅಧಿಕಾರಿಗಳು ಹಿಂದೂಗಳಾಗಿದ್ದರು.

ಟಿಪ್ಪು ಮತದ್ವೇಷಿಯಲ್ಲದೆ ಪ್ರಜ್ಞಾವಂತನೂ ಮತ್ತು ಸಹಿಷ್ಣುವೂ ಆಗಿದ್ದರೆ ಕೊಡಗು ಮತ್ತು ಮಲಬಾರುಗಳಲ್ಲಿ ಹಿಂದೂಗಳನ್ನು ಬಲವಂತವಾಗಿ ಮುಸ್ಲಿಂ ಮತಕ್ಕೆ ಪರಿವರ್ತನೆ ಮಾಡಬೇಕೆಂದೇಕೆ ಅಪ್ಪಣೆಯಿತ್ತನು? ಎಂಬ ಪ್ರಶ್ನೆಯನ್ನು ಆಗಾಗ ಕೇಳಲಾಗುತ್ತದೆ. ಇದಕ್ಕೆ ಉತ್ತರವೆಂದರೆ ಅದಕ್ಕೆ ಧಾರ್ಮಿಕ ಉದ್ದೇಶವಿರಲಿಲ್ಲ ರಾಜಕೀಯ ಉದ್ದೇಶವಿತ್ತು. ಮುಸ್ಲಿಂಯೇತರ ಪ್ರಜೆಗಳು ಈ ಭಾಗದಲ್ಲಿ ಆಗಾಗ್ಗೆ ದಂಗೆಯೆದ್ದು ಸಾಮ್ರಾಜ್ಯದ ಶಾಂತಿಗೆ ಧಕ್ಕೆ ಉಂಟು ಮಾಡುತ್ತಿದ್ದರು ಮತ್ತು ಅವನ ಪ್ರಭುತ್ವಕ್ಕೆ ಬೆದರಿಕೆ ಉಂಟುಮಾಡುತ್ತಿದ್ದರು. ಅವರು ತಪ್ಪಿತಸ್ಥರಾಗಿರುವುದರಿಂದ ಈ ಮತಾಂಧತೆಯು ಒಂದು ವಿಧವಾದ ಶಿಕ್ಷೆಯೆಂದವನು ಭಾವಿಸಿದನು. ಅದೇ ರೀತಿ ಕೊಡಗು ಮತ್ತು ಮಲಬಾರಿನ ಜನರು ತಮ್ಮ ದಂಗೆಕೋರ ಪ್ರವೃತ್ತಿಯನ್ನು ಕೈ ಬಿಡದ ಕಾರಣ ಅವರನ್ನು ಮತಾಂತರಗೊಳಿಸಬೇಕೆಂದು ಅಪ್ಪಣೆ ಮಾಡಿದನು. ಇದಕ್ಕೆ ಸಂಬಂಧಿಸಿದ ಖಾಜ್ಜಿಗೆ ಬರೆದ ಒಂದು ಪತ್ರದಲ್ಲಿ ನಾಯರುಗಳನ್ನು ಇಸ್ಲಾಂ ಮತಕ್ಕೆ ಮತಾಂತರಿಸಲು ಅವನ ವಿರುದ್ಧ 'ದಂಗೆ ಎದ್ದ ಶಿಕ್ಷೆಯಾಗಿ' ಎಂದು ಒಪ್ಪಿಕೊಂಡಿದ್ದಾನೆ.[೩೮]

ಸಯ್ಯದ್ ಅಜಾಮ್ ಅವರ ರಿಲೀಜಿಯಸ್ ಪಾಲಿಸಿ ಆಫ್ ಟಿಪ್ಪು ಸುಲ್ತಾನ್; ಆ್ಯನ್ ಎಕ್ಸ್ಮಿನೇಷನ್ ಆಫ್ ಎ ಸ್ಪ್ಯಾಯೋರಿಟಿ ಲೇಖನದಲ್ಲಿ ಟಿಪ್ಪುವಿನ ಧಾರ್ಮಿಕ ಮನೋಧೋರಣೆ ಮಲಬಾರಿನ ನಾಯಕರ ಬಗ್ಗೆ, ಕೊಡಗಿನ ಬಗ್ಗೆ, ದಕ್ಷಿಣ ಕನ್ನಡ ಕ್ರಿಶ್ಚಿಯನ್ನರ ಬಗ್ಗೆ ಮತ್ತು ಮಹಮದೀಯರ ಬಗ್ಗೆ, ಅವರ ಮೇಲೆ ತೀವ್ರ ಶಿಕ್ಷೆಗಳನ್ನು ವಿಧಿಸಿದ್ದಕ್ಕೆ ಕಾರಣ, ಅವರ ದ್ರೋಹ, ಅವಿಧೇಯತೆ ಎಂಬ ಕಾರಣ ನೀಡಿ ಟಿಪ್ಪು ಒಬ್ಬ ಕ್ರೂರಿ ಎಂದು ಬಿಂಬಿಸಿರುವ ವಿಚಾರವನ್ನು ಚರ್ಚಿಸಲಾಗಿದೆ. ಪ್ರಸಿದ್ಧ ಟಿಪ್ಪು ಉದ್ದೇಶ ರಾಜಕೀಯ ಸುಧಾರಣೆ ಮಾತ್ರ ಆಗಿತ್ತು. ಬ್ರಿಟಿಷರಿಗೆ ಅಥವಾ ಯುರೋಪಿಯನ್ನರಿಗೆ ಧಾರ್ಮಿಕ ಅಸಹನೆ, ಮತಾಂಧತೆ, ರಕ್ತಗುಣವಾಗಿತ್ತು. ಭಾರತದ ರಾಜರುಗಳ ಮೇಲೆ ಆ ಗುಣ ಹೊರಿಸಿದರು. ಟಿಪ್ಪುವನ್ನು ಆ ಬಣ್ಣ ಲೇಪಿಸಿ ಚಿತ್ರಿಸಿದರು.[೩೯] ಹಲವು ಸ್ಥಳೀಯ ದಾಖಲೆಗಳು ಟಿಪ್ಪುವಿನ ಧಾರ್ಮಿಕ ಔದಾರ್ಯತೆಯನ್ನು ಬೆಳಕಿಗೆ ತಂದಿವೆ. ಈ ಹಿನ್ನೆಲೆಯಲ್ಲಿ ಟಿಪ್ಪುವಿನ ಧಾರ್ಮಿಕ ಧೋರಣೆಗಳನ್ನು ತಿಳಿಯಬೇಕಾಗಿದೆ. ಆಗಿನ ರಾಜಕೀಯ ಸ್ಥಿತಿಯನ್ನು ಯಾವ ರೀತಿಯಲ್ಲಿ ನಡೆಸಿದರೆ ತನಗೆ ಹಿತವಾಗುವುದೆಂದು ಟಿಪ್ಪು ವರ್ತಿಸಿದ. ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಮತ, ಜಾತಿ ಮತ್ತು ಧರ್ಮಗಳನ್ನು ಹೇರಳವಾಗಿ ಉಪಯೋಗಿಸಿದ. ಟಿಪ್ಪು ಅತ್ಯಂತ ಕ್ರೂರ ಧರ್ಮಾಂಧನಾಗಿಯೂ ವರ್ತಿಸಿದ್ದಾನೆ. ಇದು ನಡೆದದ್ದು ಕೆಲವೇ ಪ್ರಸಂಗಗಳಲ್ಲಿ. ಕೊಡಗು, ಮಲಬಾರು ಮತ್ತು ಕರಾವಳಿ ಕರ್ನಾಟಕದಲ್ಲಿನ ಧಾರ್ಮಿಕ ವ್ಯಕ್ತಿಗಳು ಮತ್ತು ಧಾರ್ಮಿಕ ಸಂಸ್ಥೆಗಳು ಟಿಪ್ಪುವಿನ ವಿರೋಧಿಗಳಾದ ಬ್ರಿಟಿಷರಿಗೆ ಸಹಾಯ ಮಾಡಿದರೆಂಬ ಕಾರಣದಿಂದ ಇವರುಗಳನ್ನು ಸುಲ್ತಾನ ಮತಾಂತರ ಮಾಡಲು ಕ್ರಮ ಕೈಗೊಂಡ. ಇವನ ಅಭಿಪ್ರಾಯದಂತೆ ಮಲಬಾರಿನ ನಾಯರರು

ಆರು ಸಲ ದಂಗೆ ಎದ್ದಿದ್ದರು. ಆರು ಸಲ ಅವರನ್ನು ಕ್ಷಮಿಸಿ ಅಂತ್ಯದಲ್ಲಿ ಅವರನ್ನು ಶಿಕ್ಷಿಸಲಿಗೋಸ್ಕರ ಇಸ್ಲಾಂ ಮತಕ್ಕೆ ಮತಾಂತರ ಮಾಡುವಂತೆ ಮಾಡಿದ. ಇದೇ ಬೆದರಿಕೆಯನ್ನು ಕೊಡಗಿನ ಅವಿಧೇಯ ಪ್ರಜೆಗಳೊಡನೆ ಜಾರಿಗೆತಂದ. ಒಟ್ಟಿನಲ್ಲಿ ಟಿಪ್ಪು ಮತಾಂತರವನ್ನು ಶಿಕ್ಷಾ ದೃಷ್ಟಿಯಿಂದ ನಡೆಸಿದ. ಇನ್ನೊಂದು ಗಮನಿಸುವ ಸಂಗತಿ ಏನೆಂದರೆ ಸ್ಥಳೀಯ ಸಮಕಾಲೀನ ದಾಖಲೆಗಳಲ್ಲಿ ಟಿಪ್ಪುವಿನ ಮತಾಂಧತೆಯ ವಿವರಗಳೇ ಇಲ್ಲ. ಈ ಸ್ಥಳೀಯ ಭಾಷೆಯ ದಾಖಲೆಗಳು ಟಿಪ್ಪುವಿನ ಧಾರ್ಮಿಕ ಸಹಿಷ್ಣುತೆ ಮತ್ತು ಔದಾರ್ಯತೆಯನ್ನು ತಿಳಿಸಿವೆ.[೪೦]

ಕರ್ನಾಟಕದಲ್ಲಿ ಆಗ ಅಸ್ತಿತ್ವದಲ್ಲಿದ್ದ ಊಳಿಗಮಾನ್ಯ ಪದ್ಧತಿಯ ಮತ್ತೊಂದು ಮಾದರಿ ಬ್ರಾಹ್ಮಣ ಮಠಮಾನ್ಯಗಳಿಗೆ ನೀಡುತ್ತಿದ್ದ ದತ್ತಿಗಳು. ವಾಸ್ತವವಾಗಿ ಬ್ರಾಹ್ಮಣ ಮಠಗಳೇ ಅತಿ ದೊಡ್ಡ ಜಾಗೀರ್‌ದಾರ್ ಊಳಿಗಮಾನ್ಯ ಶಕ್ತಿಗಳಾಗಿದ್ದವು. ಅತಿದೊಡ್ಡ ಸಂಖ್ಯೆಯ ಶೂದ್ರ ರೈತಾಪಿ ವರ್ಗವನ್ನು ಈ ಮಠಗಳು ದೇವರ ಹೆಸರಿನಲ್ಲಿ ಶೋಷಿಸುತ್ತಿದ್ದವು. ಈ ಧಾರ್ಮಿಕ ವ್ಯವಸ್ಥೆಯ ದೋಷವನ್ನು ಸರಿಪಡಿಸಲು ಟಿಪ್ಪು ತನ್ನ ಆಡಳಿತ ಯಂತ್ರ ಪ್ರಯೋಗಿಸಿದ. ದೇವಸ್ಥಾನದ ಭೂಮಿಯನ್ನು ಶೂದ್ರ ರೈತಾಪಿ ವರ್ಗಕ್ಕೆ ಹಂಚಿ ಕ್ರಾಂತಿಕಾರಿ ಬದಲಾವಣೆಗೆ ಕಾರಣನಾದ. ಬ್ರಿಟಿಷ್ ಚರಿತ್ರೆಕಾರ ಫ್ರಾನ್ಸಿಸ್ ಬುಕಾನನ್ ದಾಖಲಿಸುವಂತೆ ನಂಜನಗೂಡಿನಲ್ಲಿ ೫೦೦ ಬ್ರಾಹ್ಮಣ ಮನೆಗಳಿದ್ದು, ವಾರ್ಷಿಕ ೧೪,೦೦೦ ಪಗೋಡಗಳಷ್ಟು ಆದಾಯ ತರುತ್ತಿದ್ದ ಭೂಮಿ ಹೊಂದಿದ್ದವು. ಅದೇ ಊರಿನಲ್ಲಿ ೨೦೦ ಶೂದ್ರ ಮನೆಗಳಿದ್ದವು. ಅವರು ಈ ಭೂಮಿಗಳಲ್ಲಿ ಕಡಿಮೆ ಕೂಲಿಗೆ ದುಡಿದರೂ ಊರಿನ ಹೊರಗೆ ಬದುಕಬೇಕಾಗಿತ್ತು. ಟಿಪ್ಪು ಬ್ರಾಹ್ಮಣರ ಅಧಿಕಾರವನ್ನು ಮೊಟಕುಗೊಳಿಸಿದ. ಅವರಿಗೆ ೧೦೦ ಪಗೋಡಗಳಷ್ಟು ಮಾಸಿಕ ವೇತನ ನೀಡಿದ.

ಟಿಪ್ಪು ಬ್ರಾಹ್ಮಣರ ವಿರೋಧಿ ಎಂದು ಬಣ್ಣಿಸಲಾಯಿತು. ಟಿಪ್ಪು ಬ್ರಾಹ್ಮಣ ಜಾತಿಯಲ್ಲಿದ್ದ ವೈದಿಕ ಮತ್ತು ಲೌಕಿಕ ಬ್ರಾಹ್ಮಣರೆಂಬ ವಿಧಗಳನ್ನು ಗುರುತಿಸಿದ. ಶ್ರಮದ ಕೊಡುಗೆ ನೀಡಿ ಸಮಾಜದ ಅಭಿವೃದ್ಧಿಗೆ ಪೂರಕವಾಗಿದ್ದ ಲೌಕಿಕ ಬ್ರಾಹ್ಮಣರಿಗೆ ಟಿಪ್ಪುವಿನಿಂದ ತೊಂದರೆಯಿರಲಿಲ್ಲ. ಶ್ರಮಪಡದೇ ರೈತರ ಶೋಷಣೆ ಮಾಡುತ್ತಿದ್ದ ವೈದಿಕ ಬ್ರಾಹ್ಮಣರು ಮಾತ್ರ ಟಿಪ್ಪುವಿನ ಸುಧಾರಣಾ ಕ್ರಮಗಳಿಗೆ ನೇರವಾಗಿ ಗುರಿಯಾದರು.[೪೧] ಪಾಶ್ಚಾತ್ಯ ಇತಿಹಾಸಕಾರರ ಅಭಿಪ್ರಾಯದಲ್ಲಿ ಟಿಪ್ಪು ಒಬ್ಬ ಮೂಢ, ಮತಾಂಧ, ತನ್ನ ಪ್ರಜೆಗಳಾದ ಹಿಂದೂಗಳನ್ನು ಹಿಡಿದು ಬಲವಂತವಾಗಿ ಇಸ್ಲಾಂ ಧರ್ಮಕ್ಕೆ ಸೇರಿಸಿದ ಎಂದೂ ವಾದಿಸಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತು, ಒಪ್ಪಿತವಲ್ಲದ್ದು. ಆ ಕಾಲಘಟ್ಟದಲ್ಲಿ ಹಿಂದೂ–ಮುಸ್ಲಿಂರ ಬಾಂಧವ್ಯ ಸ್ನೇಹಮಯವಾಗಿತ್ತು.

ಪಾಶ್ಚಾತ್ಯ ಇತಿಹಾಸಕಾರರು ಬರೆದಿರುವಂತೆ ಟಿಪ್ಪು ಯಾವ ಮತವನ್ನೂ ದ್ವೇಷಿಸಲಿಲ್ಲ. ಹಿಂದೂ ಧರ್ಮದ ಬಗ್ಗೆ ಅಪಾರ ಗೌರವವನ್ನು ತೋರಿಸುತ್ತಿದ್ದ ಎಂಬುದಕ್ಕೆ ನಿದರ್ಶನಗಳಿವೆ. ಹಲವು ಹಿಂದೂ ಮಠಮಾನ್ಯಗಳನ್ನು, ಧರ್ಮಗುರುಗಳನ್ನು ಗೌರವಿಸಿದನು. ಅನೇಕ ದೇವಾಲಯಗಳ ಜೀರ್ಣೋದ್ಧಾರ ಮಾಡಿಸಿದ. ಮರಾಠರು ತಮ್ಮ ರಾಜಕೀಯ ಪ್ರಭುತ್ವಕ್ಕಾಗಿ ನಡೆಸಿದ ಹೋರಾಟದಲ್ಲಿ ಶೃಂಗೇರಿಯ ಶಾರದಾಂಬ ದೇವಾಲಯ ಧ್ವಂಸ ಮಾಡಿದರು. ಟಿಪ್ಪು ಮಂದಿರದ ಪುನರ್ ನಿರ್ಮಾಣಕ್ಕೆ ಧನಸಹಾಯ ಮಾಡಿದ. ಶೃಂಗೇರಿ ಜಗದ್ಗುರುಗಳಿಗೆ ಅಪಾರ ಕಾಣಿಕೆ ನೀಡಿದ.

ಶೃಂಗೇರಿ ಮಠದ ಜಗದ್ಗುರು ಶ್ರೀ ಶಂಕರಾಚಾರ್ಯರಿಗೆ ಹೈದರ್ ಮತ್ತು ಟಿಪ್ಪು ಕನ್ನಡದಲ್ಲಿ ಅನೇಕ ಪತ್ರಗಳನ್ನು ಬರೆದಿದ್ದಾರೆ. ಸಾಮಾನ್ಯವಾಗಿ ಪ್ರತಿಯೊಂದು ಪತ್ರವೂ 'ಶ್ರೀ ಮಾತ್ಪರ ಮಹಂಸಾದಿ ಯಥೋಕ್ತ ಬಿರುದಾಂಕಿತರಾದಂಥ ಶ್ರೀ ಸಚ್ಚಿದಾನಂದ ಭಾರತೀ ಮಹಾಸ್ವಾಮಿಗಳವರಿಗೆ ಟಿಪ್ಪು ಸುಲ್ತಾನ ಬಾದಶಹರ ಸಲಾಂ ಅದಾಗಿ ಸಂಬೋಧಿತವಾಗಿದೆ. ಮೊದಲನೆ ಪತ್ರದಲ್ಲಿ ನೀವು ದೊಡ್ಡವರು, ತಪಸ್ವಿಗಳು, ಬಹುಜನ ಕ್ಷೇಮ ಚಿಂತಿಸುವಂಥ ನಿಮಗೆ ವಿಹಿತಧರ್ಮವಾದ ಕಾರಣ ಶತ್ರುಗಳು ಯಾವತ್ತೂ ಪರಾಜಿತರಾಗಿ ಪಲಾಯನವಾಗುವ ಹಾಗೂ ಸ್ವದೇಶದ ಯಾವತ್ತೂ ಜನವೂ ಕ್ಷೇಮದಿಂದ ಇರುವ ಹಾಗೂ ನೀವು ನಿಮ್ಮ ಬ್ರಾಹ್ಮಣರು ಸಹಿತವಾಗಿ ಈಶ್ವರನ ಪ್ರಾರ್ಥನೆ ಮಾಡಿ ಸಕಲರು ಸುರಕ್ಷಿತವಾಗಿ ಇರುವ ಹಾಗೆ ಆಶೀರ್ವಾದ ಮಾಡಿಸಬೇಕು ಎಂದೂ ಅರಿಕೆ ಮಾಡಿದ. ಟಿಪ್ಪು ಹಿಂದೂಗಳ ಬಗ್ಗೆ ಇಬ್ಬಗೆಯ ಧೋರಣೆಯನ್ನು ಪ್ರಜೆಗಳ ವಿಷಯವಾಗಿ ಮಾಡಲೇ ಇಲ್ಲ ಎಂಬುದು ಹಲವು ದಾಖಲೆಗಳಿಂದ ತಿಳಿದುಬರುತ್ತದೆ. ಯಾವ ಸಂದರ್ಭದಲ್ಲೂ ಹಿಂದೂ ಧರ್ಮ ಮತ್ತು ದೇವಾಲಯಗಳ ಶ್ರೇಯೋಭಿವೃದ್ಧಿಗೆ ನೀಡಿರುವ ದೇಣಿಗೆಯಲ್ಲಿ ಒಂದು ರಾಜಕೀಯ ಅಸ್ತ್ರವನ್ನಾಗಿ ಪರಿವರ್ತನೆ ಮಾಡಿಕೊಳ್ಳಲಿಲ್ಲ. ತನ್ನ ವೈಯಕ್ತಿಕ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಉಪಯೋಗಿಸಲಿಲ್ಲ. ಬದಲಾಗಿ ತನ್ನ ಸಾಮ್ರಾಜ್ಯದಲ್ಲಿ ಶಾಂತಿಯ ವಾತಾವರಣವಿದ್ದಾಗಲೇ ಇಂತಹ ದೇಣಿಗೆಗಳನ್ನು ನೀಡಿದ್ದನು ಹಾಗೂ ಪ್ರಾರ್ಥನೆ ಸಲ್ಲಿಸಿದ್ದನು. ತನ್ನ ಸ್ವ-ಇಚ್ಛೆಯಿಂದ ಪ್ರಜೆಗಳ ಹಿತರಕ್ಷಣೆ ಮಾಡುವುದು ಒಬ್ಬ ಪ್ರಭುವಿನ ಮೂಲಕರ್ತವ್ಯವೆಂದೇ ಪರಿಭಾವಿಸಿದ್ದು, ಆ ಹೊಣೆಯನ್ನು ದೇವರೇ ಟಿಪ್ಪುವಿಗೆ ದಯಪಾಲಿಸಿರುವುದು ಎಂದು ಸ್ಪಷ್ಟವಾಗಿ ನಂಬಿರುವುದಕ್ಕೆ ಸಾಕಷ್ಟು ಐತಿಹಾಸಿಕ ಪುರಾವೆಗಳಿವೆ. ಚರಿತ್ರೆಕಾರರು ಒಬ್ಬ ರಾಜನ ವ್ಯಕ್ತಿತ್ವವನ್ನು ಅವನು ಮಾಡಿದ ಕೆಟ್ಟ ಕೆಲಸಗಳಿಂದಲೇ ನಿರೂಪಿಸುವುದಾದರೆ ಬಹುಶಃ ಜಗತ್ತಿನಲ್ಲಿ ಯಾವುದೇ ಕಾಲಘಟ್ಟದಲ್ಲಿಯೂ ಒಳ್ಳೆಯ ಗುಣಗಳನ್ನು ಪೂರ್ಣ ಅಳವಡಿಸಿಕೊಂಡು ಆಡಳಿತ ನಡೆಸಿದ ಸಾರ್ವಭೌಮರು ಸಿಗುವುದು ವಿರಳವೇ. ಟಿಪ್ಪು ವಿಚಾರದಲ್ಲಿ ಅವನು ಮಾಡಿದ ಸಂದರ್ಭೋಚಿತ ಕೆಲವು ಕೆಡುಕುಗಳನ್ನು ಹೊರಗಿಟ್ಟು ಚರ್ಚಿಸುವುದಾದರೆ ಅವನ

ಸಂಸ್ಥಾನದಲ್ಲಿ ತನ್ನ ಪ್ರಭುತ್ವದ ಬೆಳವಣಿಗೆಗೆ, ಸಾಮ್ರಾಜ್ಯದ ಹಿಂದೂಧರ್ಮದ ಅಭಿವೃದ್ಧಿಗೆ ಮತ್ತು ವೈಭವಕ್ಕೆ ಶಕ್ತಿಮೀರಿ ಪ್ರಯತ್ನಿಸಿರುವುದು ತಿಳಿಯುತ್ತದೆ.[೪೪]

ಟಿಪ್ಪುವಿನ ಸಾಮ್ರಾಜ್ಯದ ವಿವಿಧ ದೇವಾಲಯಗಳಿಗೆ ಯಾವುದೇ ತಾರತಮ್ಯ ಮಾಡದೇ ಅವನು ನೀಡಿದ ದಾನಧರ್ಮ ಗಮನಾರ್ಹ. ಇವುಗಳಲ್ಲಿ ಪ್ರಮುಖವಾದವುಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ. ೧. ರಾಜಧಾನಿ ಶ್ರೀರಂಗಪಟ್ಟಣದ ರಂಗನಾಥ ದೇವಾಲಯ. ೨. ಮೇಲುಕೋಟೆಯ ನರಸಿಂಹದೇವಾಲಯ ಶ್ರೀರಂಗಪಟ್ಟಣ ತಾಲೂಕಿನಲ್ಲಿರುವ ನಾರಾಯಣ ಸ್ವಾಮಿ ದೇವಾಲಯ. ೩. ನಂಜನಗೂಡು ತಾಲೂಕಿನ ಕಳಲೆಯ ಲಕ್ಷ್ಮಿಕಾಂತ ದೇವಾಲಯ, ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನ. ರಂಗನಾಥ ದೇವಾಲಯಕ್ಕೆ ೭ ಬೆಳ್ಳಿ ಲೋಟಗಳು ಮತ್ತು ಬೆಳ್ಳಿಯ ಟರ್ಪಿನನ್ನು ನೀಡಿದ್ದನು. ನರಸಿಂಹ ದೇವಾಲಯಕ್ಕೆ ಒಂದು ನಗಾರಿ, ಲಕ್ಷ್ಮಿಕಾಂತ ದೇವಾಲಯಕ್ಕೆ ೪ ಬೆಳ್ಳಿ ಲೋಟ, ಒಂದು ಬೆಳ್ಳಿ ಪಡಿಗ, ನಂಜನಗೂಡು ಶ್ರೀಕಂಠೇಶ್ವರ ದೇವಾಲಯಕ್ಕೆ ಚಿನ್ನ ಮಿಶ್ರಿತ ಬೆಳ್ಳಿಯ ಲೋಟಗಳು, ಮೇಲುಕೋಟೆ ನಾರಾಯಣ ಸ್ವಾಮಿ ದೇವಾಲಯದ ಕೆಲವು ಆಭರಣಗಳು, ಚಿನ್ನದ ಮತ್ತು ಬೆಳ್ಳಿಯ ಪಾತ್ರೆಗಳ ಮೇಲಿನ ಶಾಸನಗಳು ಅವು ಟಿಪ್ಪುವಿನ ಅರ್ಪಣೆಗಳೆಂದು ಹೇಳುತ್ತವೆ.[೪೬] ಹಾಗೆಯೇ ಟಿಪ್ಪು ಈ ದೇವಸ್ಥಾನಕ್ಕೆ ೧೭೮೫ರಲ್ಲಿ ಹನ್ನೆರಡು ಆನೆಗಳನ್ನು[೪೭] ಮತ್ತು ಕ್ರಿ.ಶ.೧೭೮೬ರಲ್ಲಿ ಒಂದು ನಗಾರಿಯನ್ನು ಕೊಟ್ಟನು.[೪೮] ತಳದಲ್ಲಿ ಐದು ವಿಧವಾದ ಅಮೂಲ್ಯವಾದ ಹರಳುಗಳನ್ನು ಕುಂದಣಿಸಿರುವ ರತ್ನದ ಬಟ್ಟಲು ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನದಲ್ಲಿದೆ.[೪೯] ಈ ಎಲ್ಲಾ ದೇಣಿಗೆಗಳನ್ನು, ದಾನಗಳನ್ನು ಟಿಪ್ಪು ನೀಡಿದ್ದಾನೆ ಎನ್ನುವುದಕ್ಕೆ ಈ ಎಲ್ಲಾ ವಸ್ತುಗಳ ಮೇಲೆ 'ಟಿಪ್ಪು ಸುಲ್ತಾನ್ ಬಾದ್‌ಶಹ' ಎಂದು ಬರೆಸಲಾಗಿತ್ತು.[೫೦] ಹಿಂದೂ ದೇವಾಲಯಗಳು ಮಠಮಾನ್ಯಗಳಿಗೆ ಉಡುಗೊರೆ, ದೇಣಿಗೆಗಳನ್ನು ನೀಡುವ ಪದ್ಧತಿ ಟಿಪ್ಪು ಹೊಸದಾಗಿ ಆರಂಭಿಸಿದುದ್ದಲ್ಲ ಅದು ಅವನ ತಂದೆ ಹೈದರಾಲಿಯ ಕಾಲದಲ್ಲೂ ಚಾಲ್ತಿಯಲ್ಲಿದ್ದು, ಅದನ್ನು ಟಿಪ್ಪು ಮುಂದುವರಿಸಿದ. ಉದಾಹರಣೆಗೆ ದೇವನಹಳ್ಳಿಯ ಗೋಪಾಲಕೃಷ್ಣ ದೇವಾಲಯಕ್ಕೆ ಕ್ರಿ.ಶ.೧೭೬೦ರಲ್ಲಿ ಹೈದರಾಲಿ ಒಂದು ಬೆಳ್ಳಿಯ ಲೋಟವನ್ನು ದಾನ ನೀಡಿದನು. ಆ ಬೆಳ್ಳಿಯ ಪಾತ್ರೆಯ ಮೇಲೆ ಬರೆಸಿರುವ ನವಾಬ ಹೈದರ್ ಆಲಿಖಾನ್ ಬಹದ್ದೂರ್ ಬಿರುದು ಸಾಕ್ಷಿಯಾಗಿದೆ.[೫೧]

ಟಿಪ್ಪುವಿನ ಧಾರ್ಮಿಕ ಧೋರಣೆಯನ್ನು ಚರ್ಚಿಸುವಾಗ ಬಹಳ ಮುಖ್ಯವಾಗಿ ಅವನು ಶೃಂಗೇರಿ ಮಠದೊಂದಿಗಿನ ಸಂಬಂಧಗಳು, ಸ್ವಾಮಿಜಿಗಳೊಂದಿಗೆ ನಡೆಸಿರುವ ಪತ್ರವ್ಯವಹಾರಗಳನ್ನು ಗಮನಿಸಿದರೆ ಅವನ ಧಾರ್ಮಿಕ ಸಹಿಷ್ಣುತೆ ಸ್ಪಷ್ಟಪಡುತ್ತದೆ. ಈ ಪತ್ರಗಳಲ್ಲಿ ಟಿಪ್ಪು ತನ್ನ ರಾಜ್ಯಕ್ಕೆ ಮತ್ತು ಪ್ರಭುತ್ವಕ್ಕೆ ಹೊರಗಿನಿಂದ ಬರುವ ಬೆದರಿಕೆಯ ಸ್ವರೂಪವನ್ನು ವಿವರಿಸುತ್ತಾನೆ. ಇದನ್ನು

ಗಮನಿಸಿದರೆ ಮೈಸೂರು ರಾಜ್ಯಕ್ಕೆ ಮೂರು ಶಕ್ತಿಗಳಿಂದ ಪ್ರತಿರೋಧ ವ್ಯಕ್ತವಾಗಿತ್ತು. ಮರಾಠರು, ಹೈದರಾಬಾದ್ ನಿಜಾಮ್ ಮತ್ತು ಬ್ರಿಟಿಷರು ಈ ಮೂವರು ಶತ್ರುಗಳೆಂದೇ ಪತ್ರದಲ್ಲಿ ಉಲ್ಲೇಖಿಸಿದ್ದಾನೆ. ಎರಡನೆಯದಾಗಿ ಶೃಂಗೇರಿ ಮಠದ ಮೇಲೆ ಮರಾಠರು ಮಾಡಿರುವ ದಾಳಿ ಮತ್ತು ಲೂಟಿಯ ಬಗ್ಗೆ ಅನುಕಂಪವನ್ನು ವ್ಯಕ್ತಪಡಿಸಿದ್ದಾನೆ. ಮೂರನೆಯದಾಗಿ, ಅವರ ಶ್ರೇಯೋಭಿವೃದ್ಧಿ ಮತ್ತು ಕೆಲವೊಮ್ಮೆ ನಾಗರೀಕ ಸಮಸ್ಯೆಗಳ ಕುರಿತು ಸ್ವಾಮಿಜಿಯ ಸಲಹೆ ಸೂಚನೆಗಳನ್ನು ಅಪೇಕ್ಷಿಸಿ ವಿನಂತಿಸಿಕೊಳ್ಳುವುದನ್ನು ಪತ್ರಗಳಲ್ಲಿ ಸಾಮಾನ್ಯವಾಗಿ ಕಾಣಬಹುದು. ಮರಾಠರು, ಹೈದರಾಬಾದಿನ ನಿಜಾಮ, ಬ್ರಿಟಿಷರು ಪದೇ ಪದೇ ಟಿಪ್ಪು ರಾಜ್ಯದ ಮೇಲೆ ದಂಡೆತ್ತಿ ಉಪಟಳ ನೀಡುತ್ತಿದ್ದರು. ಈ ಮೂರು ಬಗೆಯ ವೈರಿಗಳ ದಮನಕ್ಕೆ ಶೃಂಗೇರಿ ಶ್ರೀಗಳು ಮಠದಲ್ಲಿ ಶತಚಂಡಿ ಜಪ, ಸಹಸ್ರ ಚಂಡಿ ಜಪಗಳನ್ನು ನೆರವೇರಿಸಲು ಗೌರವಪೂರಕವಾಗಿ ವಿನಂತಿಸಿದ್ದಾನೆ. ಈ ಸಮಾಚಾರವನ್ನು ಗೋಪಾಲದಾಸ ಎಂಬ ಮಧ್ಯವರ್ತಿ ಮೂಲಕ ಸ್ವಾಮಿಗಳಿಗೆ ತಲುಪಿಸಿದನು. ಈ ಸಕಲ ಧಾರ್ಮಿಕ ಪ್ರಕ್ರಿಯೆಗಳಿಗೆ ತಗಲುವ ಖರ್ಚುವೆಚ್ಚವನ್ನು ಸ್ವತಃ ಟಿಪ್ಪುವೇ ಭರಿಸುವನೆಂದೂ ಆಶ್ವಾಸನೆ ನೀಡಿರುವುದು ತಿಳಿಯುತ್ತದೆ.[೫೨] ದೇಶದ ಶ್ರೇಯೋಭಿವೃದ್ಧಿಗೆ ಮತ್ತು ವೈರಿಗಳ ನಾಶಕ್ಕೆ ಇಂಥ ಯಜ್ಞಯಾಗಗಳನ್ನು ನೆರವೇರಿಸಲು ಟಿಪ್ಪು ವಿನಂತಿಸಿಕೊಂಡಿದ್ದನು. ಈ ವಿಷಯ ಕ್ರಿ.ಶ.೧೭೯೧ರಲ್ಲಿ ಶೃಂಗೇರಿಗೆ ಕಳುಹಿಸಿದ ಎರಡು ಪತ್ರಗಳಿಂದ ತಿಳಿದುಬರುತ್ತದೆ.[೫೩] ಇವೆಲ್ಲವೂ ಸುಸೂತ್ರವಾಗಿ ನೆರವೇರಲು ಬೇಕಾದ ವ್ಯವಸ್ಥೆಗಳನ್ನು ಮಾಡುವಂತೆ ಅಸಫ್ ಎಂಬ ಸ್ಥಳೀಯ ಅಧಿಕಾರಿಗೆ ಸೂಚಿಸಿ ಒಂದು ಆಜ್ಞೆ ಹೊರಡಿಸಿದ. ಈ ಆಜ್ಞೆಯಲ್ಲಿ ಧಾರ್ಮಿಕ ಕ್ರಿಯೆಗಳಿಗೆ ಬೇಕಾದ ಎಲ್ಲಾ ಸೌಲಭ್ಯ ಮತ್ತು ಖರ್ಚನ್ನು ಭರಿಸಲು ಸರಕಾರದ ವತಿಯಿಂದ ಕ್ರಮಕೈಗೊಳ್ಳಲು ಸೂಚಿಸಲಾಗಿದೆ ಎಂದು ಸ್ವಾಮೀಜಿಗೆ ಟಿಪ್ಪು ಬರೆದಿದ್ದನು.[೫೪] ಈ ಕಾರ್ಯಕ್ರಮಗಳು ಸರಿಯಾದ ಸಮಯದಲ್ಲಿ ಯಾವ ಅಡ್ಡಿ ಆತಂಕಗಳು ಬರದ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳುವ ಉಸ್ತುವಾರಿಯನ್ನು ಕೊಪ್ಪ ಹೋಬಳಿ ಅಮೀಲ್ದಾರ್‌ತ್ತಿಯಂ ಬಕರಾವ್ ಮತ್ತು ನಗರ ಪ್ರಾಂತದ ಮುಸ್ಸದ್ದಿ ಅಸಫ್ ಕಕ್ಕೇರಿ ಅವರುಗಳಿಗೆ ವಿಷಯ ತಿಳಿಸಿ ಶೃಂಗೇರಿಗೆ ತೆರಳುವಂತೆ ಸೂಚಿಸಿದ್ದೇನೆ ಎಂಬ ವಿಷಯವನ್ನು ಪತ್ರದಲ್ಲಿ ಪ್ರಸ್ತಾಪಿಸಿದ್ದನು.

ಟಿಪ್ಪು ಶೃಂಗೇರಿ ಸ್ವಾಮಿಗಳೊಂದಿಗೆ ನಡೆಸಿದ ಪತ್ರವ್ಯವಹಾರಗಳನ್ನು ಅವಲೋಕಿಸಿದರೆ ಟಿಪ್ಪು ಬಗೆಗೆ ವಿನ್ಸೆಂಟ್ ಸ್ಮಿತ್ ಮಾಡಿರುವ ಟೀಕೆಗಳು ಸಮರ್ಥನೀಯವಲ್ಲ ಎಂದೂ ಹೇಳಬಹುದು. ಶೃಂಗೇರಿ ಗುರುಗಳನ್ನು ಪ್ರಾರ್ಥನೆ ಮತ್ತು ಇನ್ನಿತರ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿ ರಾಜ್ಯದ ಸಂಕಷ್ಟಗಳನ್ನು ನಿವಾರಣೆಯಾಗುವ ಅರ್ಥದಲ್ಲಿ ನಿವೇದಿಸಿಕೊಂಡಿರುವುದು. ತನ್ನ ಸಂಸ್ಥಾನಕ್ಕೆ ಬೆದರಿಕೆಯನ್ನುಂಟು ಮಾಡುವ ಮೂರು ವೈರಿಗಳನ್ನು ಸಂಪೂರ್ಣ ನಾಶಮಾಡುವಂಥ

ಗುರಿಯೂ ಇದರಲ್ಲಿ ಸೇರಿತ್ತು. ಪ್ರಮುಖವಾಗಿ ಬ್ರಿಟಿಷರ ಅಧಿಕಾರವನ್ನು ಸಂಪೂರ್ಣ ದಮನಿಸುವುದು. ಇಂಥ ಪ್ರಮುಖ ವಿಷಯಗಳು ಪತ್ರಗಳಲ್ಲಿ ಪ್ರಸ್ತಾಪಿತವಾಗಿದ್ದವು. ಎರಡನೆಯದಾಗಿ ಟಿಪ್ಪು ಪತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ತನ್ನ ಸ್ವಂತ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳಲು ಸ್ವಾಮಿಜಿಯನ್ನು ವಿನಂತಿ ಮಾಡದೇ ರಾಜ್ಯದ ಹಿತಕ್ಕಾಗಿ ಪ್ರಾರ್ಥನೆ ಸಲ್ಲಿಸುವಂತೆ ಕೇಳಿಕೊಂಡಿರುವುದು ಸ್ಪಷ್ಟಪಡುತ್ತದೆ.[೫೫]

ವಾಸ್ತವವಾಗಿ ತೀವ್ರವಾದ ಭಿನ್ನಾಭಿಪ್ರಾಯಗಳಿಗೆ ಎಡೆಮಾಡಿಕೊಟ್ಟಿರುವ ಟಿಪ್ಪುವಿನ ಧಾರ್ಮಿಕ ನೀತಿ ಅವನೊಬ್ಬ "ಅಸಹಿಷ್ಣು, ಮತಭ್ರಾಂತ ಹಾಗೂ ಉಗ್ರಮತಾಂಧ ಎಂಬಂತೆ ಮಾರ್ಕ್ ವಿಲ್ಕ್ಸ್ ವರ್ಣಿಸಿದನು. ಇದನ್ನೇ ಉಳಿದ ಕೆಲ ಇತಿಹಾಸಕಾರರು ಮುಂದುವರೆಸಿದರು. ಟಿಪ್ಪು ತನ್ನ ಶತ್ರುಗಳಿಂದ ಅನುಭವಿಸಿದ ಕಷ್ಟಗಳಿಗಿಂತ ಇತಿಹಾಸಕಾರರ ಟೀಕೆಗಳಿಂದ ಹೆಚ್ಚು ಕಷ್ಟಪಟ್ಟಿದ್ದಾನೆ. ಅದೊಂದು ವಸಾಹತುಕಾರರ ಆಟವಾಗಿತ್ತು. ಬ್ರಿಟಿಷರು ತಮ್ಮ ಆಡಳಿತ ಮತ್ತು ಪ್ರಭುತ್ವವನ್ನು ಸಮರ್ಥಿಸಿಕೊಳ್ಳಲು ಬ್ರಿಟಿಷ್ ಇತಿಹಾಸಕಾರರನ್ನು ಪ್ರೇರೇಪಿಸಿದರು. ಬಿಟ್ಸನ್, ಬೌರಿಂಗ್, ಕಿರ್ಕ್ ಪ್ಯಾಟ್ರಿಕ್, ಮಾರ್ಕ್ ವಿಲ್ಕ್ಸ್, ಫ್ರಾನ್ಸಿಸ್ ಬುಕ್‌ನನ್ ಇವರೆಲ್ಲರೂ ಟಿಪ್ಪುವನ್ನು ದೂಷಿಸುವ ಅವನ ಹೆಸರು ಕೆಡಿಸುವ ಪ್ರಯತ್ನ ಮಾಡಿದ್ದಾರೆ. ಆಡಳಿತವನ್ನು ಭಾರತದಲ್ಲಿ ವಿಸ್ತರಿಸುವುದಕ್ಕೆ ಇದ್ದ ಒಂದೇ ಒಂದು ಬಲವಾದ ತಡೆ ಟಿಪ್ಪು. ಇತಿಹಾಸಕಾರ ಜಾನ್ ವಿಲಿಯಂ ಕೇ ಹೇಳುತ್ತಾನೆ, ಒಬ್ಬ ದೇಶಿಯ ಅರಸನನ್ನು ಮೊದಲು ಪದಚ್ಯುತಗೊಳಿಸಿ, ಆಮೇಲೆ ಅವನನ್ನು ಹೀನಾಯವಾಗಿ ದೂಷಿಸುತ್ತ ಹೋಗುವುದು ಇದು ನಮ್ಮ ಪದ್ಧತಿಯಾಗಿದೆ.[೫೬]

ಟಿಪ್ಪುವಿನ ಉಗ್ರ ಧಾರ್ಮಿಕ ನೀತಿ ಪರವಾಗಿ ಉದ್ಧರಿಸಿರುವ ಅನೇಕ ಮೂಲಗಳು ಅವನು ಯುದ್ಧ ಖೈದಿಗಳಾಗಿ ಸೆರೆಮನೆ ಸೇರಿದ್ದವರು ಕೊಟ್ಟ ಹೇಳಿಕೆಗಳು. ಟಿಪ್ಪುವಿನ ಧಾರ್ಮಿಕ ನೀತಿಯನ್ನು ಕೇವಲ ಮಲಬಾರಿನ ನಾಯಕರು, ಕೊಡಗಿನ ರಾಜರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕ್ರೈಸ್ತರು ಇವರುಗಳ ಬಗೆಗೆ ಟಿಪ್ಪು ತಳೆದಿದ್ದ ಧೋರಣೆಯಿಂದ ಮಾತ್ರವೇ ಟೀಕಿಸಲಾಗುತ್ತದೆ. ರಾಷ್ಟ್ರದ ಶತ್ರುಗಳಾದ ವಸಾಹತುಗಾರರೊಂದಿಗೆ ಷಾಮೀಲಾಗಿ ತನ್ನನ್ನು ಪದಚ್ಯುತಗೊಳಿಸಲು ಒಳಸಂಚು ರೂಪಿಸಿದ್ದರಿಂದ ಟಿಪ್ಪು ಇವರುಗಳ ಬಗೆಗೆ ಕಠೋರ ನೀತಿ ಅನುಸರಿಸಿದ ಎಂಬ ಸತ್ಯವನ್ನು ಮರೆಯಲಾಯಿತು. ಬ್ರಿಟಿಷ್, ಫ್ರೆಂಚ್, ನಿಜಾಮ, ಮರಾಠರು ಈ ಯಾರೊಂದಿಗೇ ಆಗಲಿ ಅವನ ಧೋರಣೆಯು ಆ ಕಾಲದ ತುರ್ತು ಅಗತ್ಯಕ್ಕೆ ತಕ್ಕಂತಿದ್ದಿತೇ ಹೊರತು ಪ್ರಜೆಗಳ ಬಗೆಗೆ ತನ್ನದೇ ಒಂದು ಧಾರ್ಮಿಕ ನೀತಿ ಎನ್ನುವುದು ಇರಲಿಲ್ಲ. ಅವನದು ಮುಖ್ಯವಾಗಿ ವಿದೇಶಾಂಗ ನೀತಿ ಮತ್ತು ಸ್ವದೇಶ ನೀತಿ ಎಂಬ ಎರಡು ನೀತಿಗಳು. ಮೊದಲನೆಯದು ಬ್ರಿಟಿಷರನ್ನು ಈ ದೇಶದಿಂದಲೇ ಹೊರಹಾಕುವುದು. ಎರಡನೆಯದು ತನ್ನ ರಾಜ್ಯವನ್ನು ಪ್ರಗತಿಪರವೂ, ಆಧುನಿಕವೂ ಆಗುವಂತೆ ಮಾಡುವುದು. ಅವನು ಮಾಡಿದ ಆಡಳಿತ ಸುಧಾರಣೆಗಳ

ಪ್ರಮುಖ ಉದ್ದೇಶ ತನ್ನ ಎಲ್ಲಾ ಪ್ರಜೆಗಳು, ಜಾತಿ, ಮತ, ವರ್ಗಗಳ ಭೇದವಿಲ್ಲದೆ, ಸಂತೋಷವಾಗಿ, ಸಂಪದ್ಭರಿತರಾಗಿ ಬದುಕಬೇಕು ಎನ್ನುವುದು? ಅವನು ಕೈಗೊಂಡ ಸುಧಾರಣೆಯ ಫಲವು ಕೇವಲ ಮುಸ್ಲಿಮರಿಗೆ ತಲುಪಿ ಬೇರೆ ಧರ್ಮದವರಿಗೆ ತಲುಪದ ಒಂದು ಸಂದರ್ಭವೂ ಇಲ್ಲ. ರೈತರನ್ನು ರಕ್ಷಿಸಿ, ಅವರಿಗೆ ಸಹಾಯ ಮಾಡಿ ಅವರ ಹಿತಗಳನ್ನು ಕಾಪಾಡುವುದಕ್ಕೆ ಅಧಿಕಾರಿಗಳಿಗೆ ಕಟ್ಟಾಜ್ಞೆ ಮಾಡಿದ್ದನು. ಉತ್ತಮ ಆದರ್ಶಗಳನ್ನು ಹೊಂದಿದ್ದನು. ಮನುಷ್ಯ, ಮನುಷ್ಯರ ನಡುವೆ ಭೇದ ಕಲ್ಪಿಸಿ ಪಕ್ಷಪಾತ ಮಾಡಿ ಭಗವಂತನ ಅಸಮಧಾನ ಕಟ್ಟಿಕೊಳ್ಳುವುದು ಸರಿಯಲ್ಲ ಎಂದು ಆಲೋಚಿಸಿದ. ಆದ್ದರಿಂದ ತನ್ನ ಪ್ರಜೆಗಳ ಬಗೆಗೆ ವ್ಯವಹರಿಸಲು ಟಿಪ್ಪುವಿಗೆ ಪ್ರತ್ಯೇಕವಾದ ಧಾರ್ಮಿಕ ನೀತಿಯಾಗಲಿ, ತತ್ವವಾಗಲಿ, ಮಾನಕವಾಗಲಿ ಇರಲಿಲ್ಲ. ತನ್ನ ಪ್ರಜೆಗಳು ಹಿಂದೂಗಳಾಗಲಿ, ಮುಸ್ಲಿಮರಾಗಲಿ, ಕ್ರೈಸ್ತರಾಗಲಿ; ಅವರ ಭಾವನೆಗಳನ್ನು, ಆಚಾರ-ವಿಚಾರಗಳನ್ನು ಗೌರವಿಸಬೇಕು. ಅವರ ಹಿತಗಳನ್ನು ಕಾಪಾಡಬೇಕು. ವಾಸ್ತವವಾಗಿ ಟಿಪ್ಪು ಎಲ್ಲ ಧರ್ಮದವರ ಬಗೆಗೆ ಉದಾರವಾಗಿದ್ದನು. ದಾಖಲೆಗಳು ಇದನ್ನು ಸ್ಪಷ್ಟಪಡಿಸುತ್ತವೆ. ಚರಿತ್ರೆಕಾರರು ಸಮಕಾಲೀನ ದಾಖಲೆಗಳನ್ನು ಪೂರ್ವಗ್ರಹ ಪೀಡಿತರಾಗದೆ ಅವಲೋಕಿಸಿದರೆ ಟಿಪ್ಪುವಿನ ನೀತಿಗಳ ಬಗ್ಗೆ ತಿಳಿಯುತ್ತದೆ.

ಟಿಪ್ಪುವಿನ ಧಾರ್ಮಿಕ ಧೋರಣೆಯನ್ನು ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಮುಸ್ಲಿಮೇತರ ಅನ್ಯ ಧರ್ಮಿಯರ ವಿಷಯದಲ್ಲಿ ಅವನ ಧೋರಣೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಬೇಕು. ಈ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಟ್ಟ ಈಚಿನ ಸಂಶೋಧನೆಗಳು ಟಿಪ್ಪುವು ಜಾತಿ, ಜನಾಂಗ, ಧರ್ಮ, ವರ್ಗಗಳ ಆಧಾರದ ಮೇಲೆ ಎಂದೂ ಪಕ್ಷಪಾತ ಮಾಡಲಿಲ್ಲ ಎಂಬುದನ್ನು ತೋರಿಸುತ್ತದೆ. ಅವನು ಹಲವು ಹಿಂದೂ ದೇವಾಲಯಗಳು ಮತ್ತು ಮಠಗಳಿಗೆ ದಾನ-ದತ್ತಿ ನೀಡಿದನು. ಇವು ತಮ್ಮ ಧಾರ್ಮಿಕ ಆಚರಣೆಗಳನ್ನು ಮುಕ್ತವಾಗಿ ನಡೆಸಲು ಪ್ರೋತ್ಸಾಹ ನೀಡಿದನು. ಇಂಥ ಧಾರ್ಮಿಕ ಸಂಸ್ಥೆಗಳು ೧೫೬ ರಷ್ಟಿದ್ದವು. ಬಹುಸಂಖ್ಯಾತ ಹಿಂದೂಗಳ ಬೆಂಬಲವಿಲ್ಲದೆ ಆಡಳಿತ ನಡೆಸಿದರೆ ಅಸ್ಥಿರಗೊಳ್ಳುತ್ತದೆ ಎಂಬ ಅರಿವು ಅವನಿಗಿತ್ತು. ಅವನ ನ್ಯಾಯ ಸಂಹಿತೆ ಹೀಗಿತ್ತು; "ನಮ್ಮ ಪ್ರಜೆಗಳೊಂದಿಗೆ ಜಗಳವಾಡುವುದೆಂದರೆ ನಮ್ಮೊಂದಿಗೇ ನಾವು ಯುದ್ಧ ಮಾಡಿದ ಹಾಗೆ, ಅವರು ನಮ್ಮನ್ನು ರಕ್ಷಿಸುವ ಗುರಾಣಿಗಳಿದ್ದ ಹಾಗೆ, ನಮಗೆ ಬೇಕಾದುದೆಲ್ಲವನ್ನೂ ಒದಗಿಸಿ ಶತ್ರುಗಳನ್ನೆದುರಿಸಲು ಅಗತ್ಯವಾದ ಶಕ್ತಿಯನ್ನು ಕಾದಿರಿಸಿಕೊಡುತ್ತಾರೆ."

ಟಿಪ್ಪುವಿನ ಜನಪ್ರಿಯತೆ ತಿಳಿಯಲು, ಅವನ ಮರಣದ ನಂತರ ಜನಸಾಮಾನ್ಯರು ಬ್ರಿಟಿಷರಿಗೆ ಪ್ರತಿರೋಧವನ್ನು ವ್ಯಕ್ತಪಡಿಸಿದ ರೀತಿಯನ್ನು ನೋಡಿ ಅಳೆಯಬಹುದು. ವಾಘ್ ಬಂಡಾಯ(**waugh**) ವೆಲ್ಲೂರು ದಂಗೆ, ಕ್ರಿ.ಶ.೧೮೩೧ ಕ್ರಾಂತಿ ಇವೆಲ್ಲ ನ್ಯಾಯಯುತವೂ, ಸರ್ವಸಮಾನವೂ ಆಗಿದ್ದ ಟಿಪ್ಪುವಿನ ವಿದ್ಯಾಸಂಪನ್ನ ದ್ಯೋತಕವಾಗಿರುವಂತೆಯೇ ಬ್ರಿಟಿಷರ

ವಿರುದ್ಧ ಜನಸಾಮಾನ್ಯರ ಇಚ್ಛಾಶಕ್ತಿ ಹೇಗಿತ್ತು ಎಂಬುದನ್ನು ಸೂಚಿಸುತ್ತದೆ. ಹೈದರಾಲಿ ಕಾಂಜೀವರಂನಲ್ಲಿ ಒಂದು ದೇವಾಲಯ ನಿರ್ಮಿಸಲು ಶಿಲಾನ್ಯಾಸ ಮಾಡಿದ. ಪೂರ್ಣಗೊಳ್ಳುವುದರೊಳಗೆ ಹೈದರಾಲಿ ಮರಣಿಸಿದ, ಅದನ್ನು ಟಿಪ್ಪು ಪೂರ್ಣಗೊಳಿಸಿದ. ಅನೇಕ ಹಿಂದೂ ಪ್ರಜೆಗಳನ್ನು ಉನ್ನತ ಹುದ್ದೆಗೆ ಏರಿಸಿದನು. ಪೂರ್ಣಯ್ಯ ದಿವಾನರಾಗಿದ್ದರೆ ಕಂದಾಯ ಮತ್ತು ಹಣಕಾಸು ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು. ಕೃಷ್ಣರಾವ್ ಕೋಶಾಧಿಕಾರಿಯಾಗಿದ್ದರು; ಶಾಮ ಅಯ್ಯಂಗಾರ್ ಅಂಚೆ ಮತ್ತು ಪೋಲೀಸ್ ಇಲಾಖೆ ನೋಡಿಕೊಳ್ಳುತ್ತಿದ್ದರು, ನರಸಿಂಹರಾವ್ ಮತ್ತು ರಂಗ ಅಯ್ಯಂಗಾರ್ ಶ್ರೀರಂಗಪಟ್ಟಣದಲ್ಲಿ ಮುಖ್ಯ ಹುದ್ದೆಯಲ್ಲಿದ್ದರು, ಶ್ರೀನಿವಾಸರಾವ್ ಮತ್ತು ಅಪ್ಪಾಜಿರಾವ್ ಪ್ರಸಿದ್ಧ ಮುತ್ಸದ್ಧಿಗಳು, ಮೂಲಚಂದ ಮತ್ತು ಸಜ್ಜನರಾವ್ ಮೊಗಲ್ ಆಸ್ಥಾನದಲ್ಲಿ ಟಿಪ್ಪು ಪ್ರತಿನಿಧಿಗಳಾಗಿದ್ದರು. ನಾಗಪ್ಪ ಕೊಡಗಿನ ಫೌಜುದಾರನಾಗಿದ್ದನು. ಟಿಪ್ಪು ಸೈನ್ಯದಲ್ಲೂ ಹಲವು ಹಿಂದೂ ಅಧಿಕಾರಿಗಳಿದ್ದರು. ಹರಿಸಿಂಗ್ ಅಶ್ವದಳ ಮುಖ್ಯಸ್ಥನಾಗಿದ್ದ. ಇದೆಲ್ಲವೂ ಟಿಪ್ಪು ಧಾರ್ಮಿಕ ಧೋರಣೆಗೆ ಸಾಕ್ಷಿ. ಮಹಾತ್ಮಗಾಂಧಿ 'ಯಂಗ್ ಇಂಡಿಯಾ'ದಲ್ಲಿ ಬರೆಯುತ್ತಾ ಟಿಪ್ಪುವು ಹಿಂದೂ-ಮುಸ್ಲಿಂಮರ ಐಕ್ಯತೆಯ ಮೂರ್ತರೂಪ ಎಂದು ವರ್ಣಿಸಿದ್ದು ಸಮುಚಿತವೇ ಆಗಿದೆ.

ಟಿಪ್ಪು ತನ್ನ ಶತ್ರುಗಳ ವಿಷಯದಲ್ಲಿ ನಿಷ್ಠುರವಾದಿಯಾಗಿ ವರ್ತಿಸಿದುದು, ರಾಜಕಾರಣದ ದೃಷ್ಟಿಯಿಂದಲೇ ಹೊರತು ಧಾರ್ಮಿಕ ನೆಲೆಯಲ್ಲಲ್ಲ ಎನ್ನುವುದನ್ನು ಅವನು ಫ್ರೆಂಚರೊಂದಿಗೆ ಮಾಡಿಕೊಳ್ಳಲು ಯೋಚಿಸಿದ್ದ ಒಪ್ಪಂದದಲ್ಲಿ ನಿರೂಪಿಸಿದ್ದ ನಿಯಮಗಳಿಂದ ತಿಳಿಯಬಹುದು. ಇದರಲ್ಲಿ ಅವನಲ್ಲಿದ್ದ ಮಾನವೀಯತೆಯ ಗುಣಗಳನ್ನು ಗುರುತಿಸಬಹುದು. "ನಾನಾಗಲಿ ರಿಪಬ್ಲಿಕನ್ ಸೇನೆಯಾಗಲಿ ಸೆರೆಹಿಡಿದಿರುವ ಬ್ರಿಟಿಷ್ ಹಾಗೂ ಪೋರ್ಚುಗೀಸ್ ಪುರುಷ ಮತ್ತು ಸೆರೆಯಾಳುಗಳನ್ನು ಮಾನವಿಯತೆಯಿಂದಲೇ ನೋಡಬೇಕೆಂದು ಬಯಸುತ್ತೇನೆ. ಅವರನ್ನು ಮಿತ್ರರಾಜರ ಗಡಿಗಳಿಂದಾಚೆಗೆ ಭಾರತದಿಂದ ಹೊರಗೆ ಯಾವುದಾದರೊಂದು ಸ್ಥಳದಲ್ಲಿ ನೆಲೆಗೊಳಿಸಿ ತಮ್ಮಿಬ್ಬರ ವೆಚ್ಚದಲ್ಲಿ ಅವರನ್ನು ನೋಡಿಕೊಳ್ಳಬೇಕು" ಇಂಥ ಸ್ಪಷ್ಟ ಮಾಹಿತಿಯ ದಾಖಲೆಗಳಿದ್ದರೂ ವಿಲ್ಕ್ಸ್‌ನ "ಧಾರ್ಮಿಕ ಹಿಂಸೆ ಎನ್ನುವುದು ಇತಿಹಾಸ ಪುಟಗಳಲ್ಲಿ ಮಾತ್ರವೇ ಇದ್ದುದ್ದನ್ನು ಟಿಪ್ಪು ಅತ್ಯಂತ ಕರಾಳವಾದ ರೀತಿಯಲ್ಲಿ ಮರುಕಳಿಸುವ ಹಾಗೆ ಮಾಡಿದನು" ಎಂದು ಬರೆಯಲು ಲಜ್ಜೆಪಡಲಿಲ್ಲ. ಟಿಪ್ಪುವಿನ ಬಗೆಗೆ ವಿಲ್ಕ್ಸ್ ವಸ್ತುನಿಷ್ಠವಾಗಿ ಬರೆಯದೆ ವ್ಯಕ್ತಿನಿಷ್ಠವಾಗಿ ಬರೆದಿದ್ದರೆ ಟಿಪ್ಪುವಿನ ಪ್ರಜೆಗಳಿಗೆ, ಅವನ ಕಾರ್ಯಸಾಧನೆಗಳಿಗೆ ಪಕ್ಷಪಾತ ರಹಿತವಾದ ನ್ಯಾಯ ವಿತರಣೆಯಾಗುತ್ತಿತ್ತು.[೬೦] ಟಿಪ್ಪು ಧರ್ಮಸಹಿಷ್ಣತೆ ತಿಳಿಯುತ್ತಿತ್ತು. ಕೆಲವು ಬ್ರಿಟಿಷ್ ಚರಿತ್ರೆಕಾರರು ಟಿಪ್ಪುವಿನ ವಿರುದ್ಧದ ಚರಿತ್ರೆಯನ್ನು ಸೃಷ್ಟಿಸಿದರು. ಭಾರತದಲ್ಲಿ ಬ್ರಿಟಿಷರ ಪ್ರಭುತ್ವ ಸ್ಥಾಪನೆಯ ಹಾದಿಯಲ್ಲಿ ತಡೆಯಾಗಿದ್ದ ಟಿಪ್ಪುವನ್ನು ಚಾರಿತ್ರಿಕವಾಗಿ ಖಳನಾಯಕನಂತೆ ಬಿಂಬಿಸುವ ಪ್ರಯತ್ನ ನಡೆಸಿದರು. ಕೆಲವು

ಭಾರತೀಯ ಚರಿತ್ರೆಕಾರರು ವಸಾಹತುಶಾಹಿ ಇತಿಹಾಸಕಾರರ ದಾರಿಯಲ್ಲೇ ಸಾಗಿದರು. ಟಿಪ್ಪುವಿನ ಆಡಳಿತ ಮತ್ತು ಕಾರ್ಯಸಾಧನೆಗಳನ್ನು ಧರ್ಮ ಮತ್ತು ಭಾಷಿಕ ನೆಲೆಯಲ್ಲೇ ಅವಲೋಕಿಸುವ ಪ್ರಯತ್ನ ನಡೆಸಿದರು. ಇವರುಗಳ ಬರವಣಿಗೆಯಲ್ಲಿ ಟಿಪ್ಪುವಿನ ರಾಷ್ಟ್ರಪ್ರೇಮವಾಗಲಿ, ವಸಾಹತುಶಾಹಿ ವಿರೋಧವಾಗಲಿ ದಾಖಲಾಗಲಿಲ್ಲ. ಇತಿಹಾಸ ತಿರುಚುವುದರಿಂದ ತಪ್ಪು ತೀರ್ಮಾನಗಳಿಗೆ ಎಡೆಮಾಡಿಕೊಡುತ್ತದೆ. ಕೋಮುವಾದ ಬೆಳವಣಿಗೆಗೆ ದಾರಿಮಾಡಿಕೊಡುತ್ತದೆ ಎಂಬ ಅರಿವು ಚರಿತ್ರೆಕಾರರಲ್ಲಿರಬೇಕು.

ಟಿಪ್ಪುವಾಗಲಿ, ಹೈದರಾಲಿಯಾಗಲಿ ಮತಾಂಧರೂ ಆಗಿರಲಿಲ್ಲ, ಹಿಂದೂ ಅಥವಾ ಕ್ರೈಸ್ತ ಧರ್ಮ ವಿರೋಧಿಗಳೂ ಆಗಿರಲಿಲ್ಲ. ಅವರು ಪರಧರ್ಮ ಸಹಿಷ್ಣುಗಳು ಮಾತ್ರವಲ್ಲ, ಪರಮ ಸಮಾಜ ಸುಧಾರಕರೂ ಆಗಿದ್ದರು. ಧರ್ಮ, ಮತಾಂತರ ಇತ್ಯಾದಿ ಸಂಗತಿಗಳಿಗಿಂತ ಅವರ ಜೀವನ ಧ್ಯೇಯ ಬ್ರಿಟಿಷ್ ವಸಾಹತುಶಾಹಿಗಳನ್ನು ಭಾರತದಿಂದ ಹೊಡೆದೋಡಿಸಿ ಕರ್ನಾಟಕದ ಐತಿಹಾಸಿಕ ಮುನ್ನಡೆಗೆ ತ್ವರಿತಗತಿ ಒದಗಿಸುವುದೇ ಆಗಿತ್ತು.[೬೧] ಈ ಮಹತ್ವದ ಕಾರ್ಯದಲ್ಲಿ ಅಡ್ಡಬಂದ ಸ್ಥಳೀಯ ಹಾಗೂ ಹೊರಗಿನ ಶಕ್ತಿಗಳನ್ನು ಮಣಿಸುವ ಪ್ರಯತ್ನ ನಡೆಸಿದರು. ಟಿಪ್ಪು ಮತದ್ವೇಷಿಯಲ್ಲದೆ, ಪ್ರಜ್ಞಾವಂತನೂ ಮತ್ತು ಸಹಿಷ್ಣುವು ಆಗಿದ್ದರೆ ಕೊಡಗು ಮತ್ತು ಮಲಬಾರುಗಳಲ್ಲಿ ಹಿಂದೂಗಳನ್ನು ಬಲವಂತವಾಗಿ ಇಸ್ಲಾಂ ಮತಕ್ಕೆ ಮತಾಂತರಿಸಬೇಕು ಎಂದು ಏಕೆ ಅಪ್ಪಣೆಯಿತ್ತನು? ಎಂಬ ಪ್ರಶ್ನೆಯನ್ನು ಆಗಾಗ ಕೇಳಲಾಗುತ್ತದೆ. ಇದಕ್ಕೆ ನಿಜವಾದ ಉತ್ತರವೆಂದರೆ, ಅದು ಧಾರ್ಮಿಕ ಕಾರಣದಿಂದಾದುದಲ್ಲ, ರಾಜಕೀಯವಾದುದಾಗಿತ್ತು. ಮುಸ್ಲಿಂಮೇತರ ಪ್ರಜೆಗಳು ದಂಗೆಯೆದ್ದು ಸಾಮ್ರಾಜ್ಯದ ಶಾಂತಿಗೆ ಧಕ್ಕೆ ಉಂಟುಮಾಡುತ್ತಿದ್ದರು. ಮತ್ತು ಅವನ ಪ್ರಭುತ್ವಕ್ಕೆ ಬೆದರಿಕೆ ಉಂಟು ಮಾಡುತ್ತಿದ್ದರು. ಅವರು ತಪ್ಪಿತಸ್ಥರಾದ್ದರಿಂದ ಈ ಮತಾಂಧತೆಯು ಒಂದು ವಿಧವಾದ ಶಿಕ್ಷೆಯೆಂದೇ ಭಾವಿಸಿದರು. ಕೊಡಗು ಮತ್ತು ಮಲಬಾರಿನ ಜನರು ತಮ್ಮ ದಂಗೆಕೋರ ಪ್ರವೃತ್ತಿ ಬಿಡದೆ ಬ್ರಿಟಿಷರ ಜೊತೆ ಕೈಜೋಡಿಸಿದ ಕಾರಣ ಟಿಪ್ಪು ಅವರನ್ನು ಮತಾಂತರಿಸುವಂತೆ ಅಪ್ಪಣೆ ಕೊಟ್ಟನು. ಈ ವಿಧವಾದ ಭಯದಿಂದ ಕೊಡವರನ್ನು ನಾಯರುಗಳನ್ನು ವಿಧೇಯರನ್ನಾಗಿ ಮಾಡುವೆನೆಂದು ನಿರೀಕ್ಷಿಸಿದ್ದನು.[೬೨]

ಕೊಡಗು ಮತ್ತು ಮಲಬಾರುಗಳಲ್ಲಿ ಎಷ್ಟು ಜನರನ್ನು ಬಲವಂತವಾಗಿ ಇಸ್ಲಾಂ ಧರ್ಮಕ್ಕೆ ಮತಾಂತರಿಸಿದ ಎಂದು ಸ್ಪಷ್ಟವಾಗಿ ಹೇಳುವುದು ಕಷ್ಟ. ಇದಕ್ಕೆ ಸಂಬಂಧಿಸಿದ ಹೆಚ್ಚಿನ ವಿವರಗಳು ಬ್ರಿಟಿಷರ ಬರವಣಿಗೆಯಲ್ಲಿ ದಾಖಲಾಗಿದೆ. ಅವರು ಯಾವಾಗಲೂ ಟಿಪ್ಪುವನ್ನು ದುಷ್ಟನೆಂದು ಅವನ ವಿರುದ್ಧ ಅಪಪ್ರಚಾರ ಮಾಡುವುದರಿಂದ ಅವರ ಹೇಳಿಕೆಗಳನ್ನು ನಂಬಲು ಅಸಾಧ್ಯ. ಮುಸ್ಲಿಂ ಆಧಾರಗಳು ಯಾವಾಗಲೂ ಸುಲ್ತಾನನನ್ನು ಇಸ್ಲಾಂ ಧರ್ಮದ ವೀರನೆಂದೇ ಚಿತ್ರಿಸಲು ಪ್ರಯತ್ನಿಸಿವೆ. ಅವು ಕೂಡ ಸತ್ಯವೆಂದು ನಂಬುವುದು ಕಷ್ಟ. ಅವು ಟಿಪ್ಪುವಿನ ಸುತ್ತ ಒಂದು

ಧಾರ್ಮಿಕ ಪ್ರಭಾಮಂಡಲ ವಿರಚಿಸಿ ಒಬ್ಬ ಧಾರ್ಮಿಕ ವೀರನಂತೆ ಮೇಲಕ್ಕೆತ್ತುವ ಪ್ರತೀಕ್ಷೆಯಿಂದ ಕೂಡಿವೆ. ಉದಾಹರಣೆಗೆ ಇಂಥ ವರ್ಗಕ್ಕೆ ಸೇರಿದ ಒಂದು ದಾಖಲೆಯು ಕೊಡಗಿನಲ್ಲಿ ೭೦,೦೦೦ ಹಿಂದೂಗಳನ್ನು ಇಸ್ಲಾಮಿಗೆ ಮತಾಂತರಗೊಳಿಸಿದ ಎಂದು ಹೇಳುತ್ತವೆ.[೬೨] ರೈಸ್ ೮೫,೦೦೦ವೆಂದು ಅಂದಾಜಿಸಿದ್ದಾನೆ.[೬೪] ಕೊಡಗಿನಲ್ಲಿ ಆ ಕಾಲದ ಜನಸಂಖ್ಯೆಯೇ ಈ ಅಂಕಿಗಳಷ್ಟು ಇರದಿರುವುದರಿಂದ ಇದು ಸತ್ಯಕ್ಕೆ ದೂರವಾದುದು. ಕ್ರಿ.ಶ.೧೮೩೬ರಲ್ಲಿ ಕೊಡಗಿನ ಜನಸಂಖ್ಯೆ ೬೫,೪೩೭ ಎಂದೆಣಿಸಲಾಗಿದೆ.[೬೫] ಟಿಪ್ಪುವಿನ ಆಡಳಿತ ನೀತಿಯನ್ನು ವಿವಿಧ ದೃಷ್ಟಿಕೋನಗಳಿಂದ ವಿಮರ್ಶಿಸಿರುವ ಮೂರ್ ಕೂಡ ಕೊಡಗಿನ ಧಾರ್ಮಿಕ ವಿಷಯವಾಗಿ ಏನನ್ನೂ ಹೇಳುವುದಿಲ್ಲ.[೬೬]

ಟಿಪ್ಪು ಅಧಿಕಾರದ ವ್ಯಾಪ್ತಿಗೆ ಒಳಪಟ್ಟ ಕರಾವಳಿಯ ಕ್ರೈಸ್ತರು ಎರಡನೇ ಆಂಗ್ಲೋ-ಮೈಸೂರು ಕದನದಲ್ಲಿ ಬ್ರಿಟಿಷರಿಗೆ ಸಹಕಾರ ನೀಡಿದ್ದರು. ಬಾಂಬೆಯಿಂದ ಬಂದ ಬ್ರಿಟಿಷ್ ಅಧಿಕಾರಿ ಮ್ಯಾಥ್ಯೂಸನು ಪಡುವಣ ಕೆರೆಯನ್ನು ಮುತ್ತಿದಾಗ ಅವನಿಗೆ ಕ್ರೈಸ್ತರು ಗೂಢಾಚಾರಿಗಳಂತೆ ಸಹಕರಿಸಿದರು. ಟಿಪ್ಪು ಸೇನೆಯಲ್ಲಿದ್ದ ಸುಮಾರು ಮೂವತ್ತು ಮಂದಿ ಕ್ರೈಸ್ತರು ಬ್ರಿಟಿಷ್ ಸೇನೆ ಸೇರಿಕೊಂಡರು. ಬ್ರಿಟಿಷರಿಗೆ ಎಲ್ಲಾ ನೆರವು ನೀಡಿದರು. ಟಿಪ್ಪು ಮಂಗಳೂರನ್ನು ಮುತ್ತಿದಾಗ ಕರಾವಳಿ ಕ್ರೈಸ್ತರು ರಹಸ್ಯವಾಗಿ ಕ್ಯಾಂಬೆಲ್ಲನಿಗೆ ನೆರವಾಗಿ ಟಿಪ್ಪುವನ್ನು ಮಣಿಸಲು ಬ್ರಿಟಿಷರೊಡನೆ ಒಳಸಂಚು ನಡೆಸಲು ಕಾಸಿಂ ಅಲಿ ಮತ್ತು ಮಹಮ್ಮದಾಲಿಯವರು ಸೇರಿಕೊಂಡರು.[೬೭] ಕ್ರೈಸ್ತರ ಪರವಾಗಿ ಪಾ.ಮಿರಾಂಡ ಮಧ್ಯವರ್ತಿಯಾಗಿ ಸೆರೆಹಿಡಿದ ೧೫೦ ಮಂದಿ ಕ್ರೈಸ್ತರನ್ನು ಬಿಡುಗಡೆಗೊಳಿಸುವಾಗ ಪಾ.ಮಿರಾಂಡನನ್ನು ಕ್ಷಮಿಸಿ ಗೌರವದಿಂದ ಸ್ವಾಗತಿಸಿದನು. ಸೆರೆಯಾಳುಗಳನ್ನು ಹಿಂಸಿಸಬಾರದೆಂದು ಪಾ.ಮೀರಾಂಡ ಟಿಪ್ಪುವನ್ನು ಕೇಳಿಕೊಂಡಾಗ ಸಮ್ಮತಿಸಿದ ಎಂದು ಪತ್ರದಲ್ಲಿ ತಿಳಿಸಿದ್ದಾನೆ.[೬೮]

ಇಂಥ ಕೃತ್ಯಗಳನ್ನು ಎಸಗಿ ಟಿಪ್ಪುವಿನ ವಿರುದ್ಧ ಕಾರ್ಯಾಚರಣೆ ನಡೆಸಿರುವುದರಿಂದ ಕರಾವಳಿ ಕ್ರಿಶ್ಚಿಯನ್ನರನ್ನು ಶಿಕ್ಷಿಸಿದುದು. ಪಾದರ್ ಮಿರಾಂಡನನ್ನು ಕೋಟೆಯೊಂದರಲ್ಲಿ ದಿಗ್ಬಂದನದಲ್ಲಿರಿಸಿ ವಿಶೇಷ ಮಂಡಳಿಯೊಂದರಿಂದ ವಿಚಾರಣೆ ನಡೆಸಿ ಮೌಂಟ್ ಮೇರಿಯನ್‌ನ ಎಲ್ಲಾ ಕ್ರೈಸ್ತರನ್ನು ಕೊಚ್ಚಿಗೆ ಗಡಿಪಾರು ಮಾಡಿದ. ಕೆಲವರನ್ನು ಗೋವಾಕ್ಕೆ ಗಡಿಪಾರು ಮಾಡಿಸಿದ. ಉಳಿದವರನ್ನು ಶ್ರೀರಂಗಪಟ್ಟಣ ಮತ್ತು ಚಿತ್ರದುರ್ಗದಲ್ಲಿ ಸೆರೆಯಲ್ಲಿರಿಸಿದ. ಮಹಮ್ಮದಾಲಿ ಮತ್ತು ಕಾಸಿಂ ಆಲಿಯವರನ್ನು ಗಲ್ಲಿಗೇರಿಸಿದ. ಇಂಥ ಶಿಕ್ಷೆಗೆ ಗುರಿ ಪಟ್ಟವರ ಸಂಖ್ಯೆಯನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಗೋವೆಯ ವೈಸ್ರಾಯಿ ರಾಜ್ಯಗಳ ಕಾರ್ಯದರ್ಶಿಗೆ ಬರೆದ ಪತ್ರವು ೩೦,೦೦೦ವೆಂದು ಹೇಳುತ್ತದೆ. ಮಾರ್ಕ್ಸ್‌ವಿಲ್ಕ್ಸ್‌ನು ೬೦,೦೦೦ ಮಂದಿಯನ್ನು ಗಡಿಪಾರು

ಮಾಡಿದ ಎಂದು ಹೇಳುತ್ತಾನೆ. ಒಂದೊಂದು ದಾಖಲೆಗಳು ಬೇರೆಯಾದ ಅಂಕಿ ಅಂಶಗಳನ್ನು ತಿಳಿಸುತ್ತವೆ.[೭೦]

ಟಿಪ್ಪು ಬಲವಂತವಾಗಿ ಕ್ರೈಸ್ತರನ್ನು ಇಸ್ಲಾಂ ಧರ್ಮಕ್ಕೆ ಮತಾಂತರಗೊಳಿಸಿದ ಎಂಬ ಆಪಾದನೆಗಳಿಗೆ ಲಭ್ಯವಿರುವ ಆಧಾರಗಳು ಉತ್ಪ್ರೇಕ್ಷೆಯಿಂದ ಕೂಡಿವೆ. ಇಸ್ಲಾಂ ಧರ್ಮಕ್ಕೆ ಮತಾಂತರಿಸಿರುವುದು ಸತ್ಯವಿದೆ. ಆದರೆ ಸೆರೆವಾಸದಿಂದ ಬಿಡುಗಡೆಗೊಳ್ಳಲು ಹಾಗೆ ಮಾಡಿರಬಹುದು. ಅಂಥವರನ್ನು ಸೆರೆಯಿಂದ ಬಿಡಿಸಿದ ನಂತರ ಅವರಿಗೆ ಅರಮನೆ ಮತ್ತು ಸೈನ್ಯದಲ್ಲಿ ಉನ್ನತ ಹುದ್ದೆಗಳನ್ನು ನೀಡಿದನು. ಬಹುಸಂಖ್ಯೆಯವರನ್ನು ಶ್ರೀರಂಗಪಟ್ಟಣ ಮತ್ತು ಚಿತ್ರದುರ್ಗದಲ್ಲಿ ಸೆರೆಯಲ್ಲಿರಿಸಿ ಅವರು ತಮ್ಮ ಧಾರ್ಮಿಕ ಸಂಪ್ರದಾಯಗಳನ್ನು ಅನುಸರಿಸಲು ಅನುಮತಿಸಿದನು. ಕ್ರಿ.ಶ.೧೭೮೯ರಲ್ಲಿ ಗೋವಾಕ್ಕೆ ಒಂದು ನಿಯೋಗ ಕಳುಹಿಸಿ ಸೆರೆಯಲ್ಲಿರುವ ಕ್ರೈಸ್ತರು ತಮ್ಮ ಧಾರ್ಮಿಕ ಆಚರಣೆಗಳನ್ನು ಕಡೆಗಣಿಸಿರುವುದರಿಂದ ಅವರಿಗೆ ಮಾರ್ಗದರ್ಶನ ನೀಡಲು ವಿಶೇಷ ಪುರೋಹಿತರನ್ನು(ಪಾದ್ರಿ) ಕಳುಹಿಸುವಂತೆ ಅಲ್ಲಿಯ ವೈಸರಾಯನೂ ಆದ ಆರ್ಚ್‌ಬಿಷಪ್‌ನನ್ನು ಕೇಳಿಕೊಂಡಿದ್ದನು. ನಾಶಪಡಿಸಲಾದ ಚರ್ಚ್‌ಗಳನ್ನು ಕಟ್ಟಿಸಿಕೊಡುವುದಾಗಿ ಮಾತುಕೊಟ್ಟಿದ್ದನು. ಇವೆಲ್ಲವೂ ಹೆಚ್ಚಾಗಿ ಹೈದರಾಲಿ–ಟಿಪ್ಪು ಆಕ್ರಮಿಸಿದ ಪ್ರದೇಶಗಳಾದ ಬಿದನೂರು, ಮಂಗಳೂರು, ಮಲಬಾರ್, ಕೊಚ್ಚಿನ್, ತಿರುವಾಂಕೂರ್, ಕೊಡಗು ಇತ್ಯಾದಿ ಸ್ಥಳಗಳಲ್ಲಿ ಕಂಡುಬರುತ್ತವೆ. ಇಲ್ಲಿನ ಜನರು ಟಿಪ್ಪು ವಿರುದ್ಧ ದಂಗೆಗಳನ್ನು ಸಂಘಟಿಸಿದ್ದರು, ಅವನ ಪ್ರಭುತ್ವವನ್ನು ನಿರಾಕರಿಸಿದ್ದರು ಹಾಗೂ ನಾನಾ ಪಿತೂರಿಗಳನ್ನು ಮಾಡಿದ್ದರು. ಟಿಪ್ಪುವಿನ ಆದಿಪತ್ಯವನ್ನು ಗೌರವಿಸದೇ ಪರಕೀಯರನ್ನು ಸೇರಿರುವುದು[೭೧] ಟಿಪ್ಪು ಈ ನಿರ್ಧಾರಗಳನ್ನು ತಳೆಯಲು ಕಾರಣವಾಯಿತು.

೩.೪. ಆಡಳಿತ ನೀತಿ

ಕರ್ನಾಟಕದ ಚರಿತ್ರೆಯಲ್ಲಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಇವರ ಆಳ್ವಿಕೆಯ ಅವಧಿ ಸುಮಾರು ನಲವತ್ತು ವರ್ಷಗಳು. ಇದು ಕಾಲದ ದೃಷ್ಟಿಯಿಂದ ಅತ್ಯಲ್ಪ ಸಮಯವಾದರೂ ಪ್ರಭಾವ ದೃಷ್ಟಿಯಿಂದ ಹೆಚ್ಚು ಮಹತ್ವಪೂರ್ಣ ಸಮಯ. ಹೈದರ್ ಮತ್ತು ಟಿಪ್ಪುವಿನದು ಹದಿನೆಂಟನೆಯ ಶತಮಾನದ ಅತ್ಯಂತ ಆಕರ್ಷಕ ವ್ಯಕ್ತಿತ್ವ. ಅವರ ಜೀವನದ ಮುಖ್ಯ ಧ್ಯೇಯವೇ ಭಾರತದಲ್ಲಿ ವಸಾಹತುಶಾಹಿ ವಿಸ್ತರಣಕ್ಕೆ ತಡೆಯೊಡ್ಡುವುದು, ತಮ್ಮ ರಾಜ್ಯವನ್ನು ಆಧುನೀಕರಿಸುವುದು. ಹೊರ ಜಗತ್ತಿನೊಂದಿಗೆ ಅದನ್ನು ಸಂಬಂಧಗೊಳಿಸುವುದು, ರಾಜ್ಯದಲ್ಲಿ ಬಲವಾದ ಮತ್ತು ಕಾರ್ಯಕ್ಷಮತೆಯುಳ್ಳ ಸರಕಾರ ರಚಿಸುವುದು, ರಾಜ್ಯದ ಗಡಿಗಳನ್ನು ವಿಸ್ತರಿಸುವುದು. ಪ್ರಗತಿಪರ ವಿಚಾರಗಳನ್ನು ಗ್ರಹಿಸುವುದು ಹಾಗೂ ಹೊಸ ಆವಿಷ್ಕಾರಗಳಿಗೆ ಮನ್ನಣೆ ನೀಡಿ ರಾಜ್ಯವನ್ನು

ಅಭಿವೃದ್ಧಿ ಪಡಿಸುವುದು. ಅವರ ರಾಜ್ಯಾಡಳಿತ ವ್ಯವಸ್ಥೆಯು ಈ ಉದ್ದೇಶಗಳನ್ನು ಈಡೇರಿಸಿಕೊಳ್ಳುವ ದಿಕ್ಕಿನಲ್ಲಿ ರೂಪುಗೊಂಡಿತು.

ಹೈದರಾಲಿ ತನ್ನ ಆಳ್ವಿಕೆ ಅವಧಿಯುದ್ದಕ್ಕೂ ಶಾಸನಬದ್ಧ ಅಧಿಕಾರ ಚಲಾಯಿಸಲಿಲ್ಲ. ಆ ಕಾಲದ ರಾಜಕಾರಣದಲ್ಲಿ ಸರ್ವಸಾಮಾನ್ಯವಾಗಿದ್ದಂತೆ ಶಾಸನಬದ್ಧ ಅಧಿಕಾರಕ್ಕೆ ಬರಲು ವಾಸ್ತವ ಅಧಿಕಾರದ ಚಲಾವಣೆಯನ್ನು ಅವನು ನಿರ್ವಹಿಸುತ್ತಿದ್ದನು. ಮೊಗಲರು ಮತ್ತು ಮರಾಠರು ಮಾತ್ರವಲ್ಲದೆ ಬ್ರಿಟಿಷರೂ ತಮ್ಮ ಪ್ರಭುತ್ವದ ಆರಂಭ ಕಾಲದಲ್ಲಿ ತಮ್ಮ ಅಧಿಕಾರವನ್ನು ಬಲಪಡಿಸಲು ಅದು ರಕ್ಷಾ ಕವಚವೆಂಬಂತೆ ಉಪಯೋಗಿಸಿಕೊಂಡರು. ಬಂಗಾಳದ ನವಾಬನನ್ನು ಸಿಂಹಾಸನದಲ್ಲಿ ನಾಮ ಮಾತ್ರ ಕುಳ್ಳಿರಿಸಿ ತಾವೇ ವಾಸ್ತವದಲ್ಲಿ ಅಧಿಕಾರ ಚಲಾಯಿಸಿದರು. ಹೈದರನೂ ಮೈಸೂರಿನಲ್ಲಿ ಅದನ್ನೆ ಮಾಡಿದನು. ಅವನ ಕಾಲದಲ್ಲಿ ಒಡೆಯರ್ ರಾಜವಂಶವು ಎಂದೂ ಅಧಿಕಾರ ಕಳೆದುಕೊಳ್ಳಲಿಲ್ಲ. ಎಲ್ಲ ಔಪಚಾರಿಕ ಕಾರ್ಯಕ್ರಮಗಳು, ಆಚರಣೆಗಳು, ರಾಜವಂಶಕ್ಕೆ ಸಲ್ಲುವ ಗೌರವ ಮರ್ಯಾದೆ ಎಲ್ಲವೂ ಸಲ್ಲುತ್ತಿದ್ದವು. ರಾಜನು ಮೃತನಾದರೆ ಅವನ ವಾರಸುದಾರನನ್ನು ಆರಿಸಿ ಅಧಿಕಾರಕ್ಕೆ ತರಲಾಗುತ್ತಿತ್ತು. ಹೈದರಾಲಿಯ ಕಾಲದಲ್ಲಿ ಒಡೆಯರ್‌ಗಳ ವಂಶಪಾರಂಪರ್ಯ ಅರಸೊತ್ತಿಗೆ ಮುಂದುವರಿದುಕೊಂಡು ಬಂದಿತ್ತು.

ಹೈದರಾಲಿ ಶಾಸನಬದ್ಧ ಅಧಿಕಾರವನ್ನು ಒಡೆಯರಿಗೆ ಉಳಿಸಿದ. ಈ ಅಧಿಕಾರದ ಕಲ್ಪನೆಯು ಹಲವು ಕಾರಣಗಳಿಂದ ಮಹತ್ವದ್ದಾಗಿತ್ತು. ಅಧಿಕಾರದ ನಾಮಮಾತ್ರದ ನೆಲೆ ಹಾಗೂ ವಾಸ್ತವ ನೆಲೆಗಳೆರಡರ ಸತ್ಯವನ್ನು ಹೊಂದಿಸುವ ವಿಚಾರಪೂರ್ವಕ ಕ್ರಮವನ್ನು ಅದು ತೋರಿಸಿಕೊಟ್ಟಿತು. ಭಾರತದಲ್ಲಿ ಆಡಳಿತವು ಎಂದೂ ಜಾತ್ಯಾತೀತವಾದುದು. ಸರಕಾರದ ಮುಖ್ಯಸ್ಥನು ಹಿಂದೂವೋ, ಮುಸ್ಲಿಮನೋ ಎನ್ನುವುದು ಮುಖ್ಯವಾಗಿರಲಿಲ್ಲ ಎಂಬುದನ್ನು ಅದು ಸೂಚಿಸುತ್ತದೆ. ಅಲ್ಲಿ ಮುಖ್ಯವಾಗಿರುವುದು ಭದ್ರವಾಗಿ ಕತ್ತಿಹಿಡಿಯುವ ಶಕ್ತಿ ಹಾಗೂ ಸಮರ್ಪಕ ಆಡಳಿತ ನಿರ್ವಹಿಸುವ ಶಕ್ತಿ. ಈ ಎರಡೂ ಗುಣಗಳು ಹೈದರನಲ್ಲಿತ್ತು. ಹೈದರನ ಮನೋಧರ್ಮವು ರಾಜನನ್ನು ಗೌರವಿಸಿ, ಅವನನ್ನೇ ಮುಖ್ಯಸ್ಥನನ್ನಾಗಿ ಉಳಿಸಿಕೊಳ್ಳುವುದು. ಅರಸೊತ್ತಿಗೆಗೆ ಹತ್ತಿರವಿದ್ದ ಶಕ್ತಿಯುಳ್ಳ ಮೇಲುವರ್ಗದವರು ಹೈದರ್‌ನನ್ನು ಪದಚ್ಯುತಗೊಳಿಸಲು ಖಂಡೇರಾಯನ ನೇತೃತ್ವದಲ್ಲಿ ಪ್ರಯತ್ನ ಮಾಡಿದರು. ಅದು ವಿಫಲಗೊಂಡು ಹೈದರನು ಸಾಂಪ್ರದಾಯಿಕ ಅಧಿಕಾರ ಹಂಚಿಕೆಯಲ್ಲಿ ಯಾವ ಬದಲಾವಣೆ ಇರುವುದಿಲ್ಲವೆಂಬ ಭರವಸೆ ನೀಡಿದನು. ವಿರೋಧಿಸುವ ಶಕ್ತಿಗಳು ಕಡಿಮೆಯಾದವು. ಕೆಲವು ಸಂದರ್ಭಗಳಲ್ಲಿ ಅಪರೂಪಕ್ಕೆ ಅರಮನೆಯಲ್ಲಿ ಏಳುತ್ತಿದ್ದ ದುರ್ಬಲವಾದ ಸಂಚುಗಳನ್ನು ಹೊರತುಪಡಿಸಿದರೆ ಬಲವಾದ ಪ್ರತಿರೋಧ ಯಾವುದೂ ಇರಲಿಲ್ಲ. ಕಾರ್ಯದಕ್ಷತೆ, ಪ್ರತಿಭೆ ಯಾರಲ್ಲೇ ಇರಲಿ ಅವರನ್ನು ಹೈದರ್ ಪ್ರೋತ್ಸಾಹಿಸಿದ. ಇದು ತನ್ನ ಅಧಿಕಾರವನ್ನು

ರೂಢಿಸಿಕೊಳ್ಳಲು ಅದನ್ನು ಪ್ರತಿರೋಧವಿಲ್ಲದಂತೆ ಉನ್ನತವಾಗುವಂತೆ ಮಾಡಲು ಸಾಧ್ಯವಾಯಿತು. ಇದು ಹೈದರಾಲಿಯ ಆಡಳಿತ ನೀತಿಯೂ ಆಗಿತ್ತು.

ಟಿಪ್ಪುವು ಶಾಸನಬದ್ಧ ಅಧಿಕಾರವೂ, ಪರಿಣಾಮಕಾರಿ ಅಧಿಕಾರವೂ ಬೇರೆ ಬೇರೆಯಾಗಿರುವಂಥ ಒಂದು ಪರಿಸ್ಥಿತಿಯೊಂದಿಗೆ ರಾಜಿ ಮಾಡಿಕೊಳ್ಳಲು ಸಿದ್ಧನಾಗಿರಲಿಲ್ಲ. ಅವನ ಮನೋಧರ್ಮ ತಂದೆಗಿಂತ ಭಿನ್ನವಾಗಿತ್ತು. ಅವನು ಅಧಿಕಾರಕ್ಕೆ ಬರಲು ಸಮಸ್ಯೆಯೇನು ಬರಲಿಲ್ಲ. ರಾಜ್ಯದ ಗಣ್ಯ ವ್ಯಕ್ತಿಗಳು ಮನಸ್ಸು ಮಾಡಿದ್ದರೆ, ಟಿಪ್ಪು ಅಧಿಕಾರ ಹಿಡಿಯುವುದು ಕಷ್ಟವಾಗುತ್ತಿತ್ತು. ಹೈದರ್ ನಿಧನ ಹೊಂದಿದಾಗ ಟಿಪ್ಪುವು ದೂರದ ಪಶ್ಚಿಮ ಕರಾವಳಿಯ ಮಲಬಾರಿನಲ್ಲಿದ್ದನು. ಪೂರ್ಣಯ್ಯ ಮತ್ತು ಕೃಷ್ಣರಾವ್ ಇಬ್ಬರೂ ಹೈದರನ ಸಾವಿನ ಸುದ್ದಿಯನ್ನು ರಹಸ್ಯವಾಗಿಟ್ಟು ಟಿಪ್ಪುವನ್ನು ಅತ್ಯಂತ ವೇಗವಾಗಿ ಬರುವಂತೆ ಕರೆಸಿ ಯಾವ ಗೊಂದಲವಿಲ್ಲದೆ ಅಧಿಕಾರಕ್ಕೆ ತಂದರು. ಹೈದರ್‌ನ ಜನಪ್ರಿಯತೆಗೂ ಇದು ನಿದರ್ಶನ.

ಟಿಪ್ಪುವಿನ ಆಲೋಚನೆಗಳು ಬೇರೆಯಾಗಿದ್ದವು. ಹೈದರಾಲಿ ಬಿಟ್ಟು ಹೋಗಿದ್ದ ಭದ್ರವಾದ ಆಧಾರವನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ಬಯಸಿದನು. ಮಹಾರಾಜನ ನಾಮಮಾತ್ರ ನಾಯಕತ್ವ ಒಪ್ಪಿಕೊಳ್ಳುವ ನಾಟಕವಾಡುವುದನ್ನು ತಪ್ಪಿಸಿಕೊಳ್ಳಲು ಇಚ್ಛಿಸಿದನು. ಮೊಗಲ್ ಚಕ್ರವರ್ತಿ ರಾಜಕೀಯ ಮತ್ತು ಸೈನಿಕ ಶಕ್ತಿಯಲ್ಲಿ ದುರ್ಬಲವಾಗಿದ್ದರೂ ಶಾಸನಬದ್ಧವಾಗಿ ಇನ್ನೂ ಪ್ರಭಾವಶಾಲಿ ಶಕ್ತಿಯಾಗಿದ್ದನು. ಭಾರತದಲ್ಲಿ ಯಾರಿಗೇ ಆಗಲಿ ಶಾಸನಬದ್ಧ ಅಧಿಕಾರ ನೀಡುವ ಹಕ್ಕು ಇರುವುದು ಅವನೊಬ್ಬನಿಗೆ ಎಂಬುದು ಅಂಗೀಕೃತವಾಗಿದ್ದ ವಿಚಾರ. ನಿಜಾಮ, ಪೇಶ್ವೆ ಹಾಗೂ ಕಂಪನಿ ಮೊಗಲ್ ಚಕ್ರವರ್ತಿಯಿಂದ ಸನ್ನದುಗಳನ್ನು ಪಡೆದಿದ್ದರು. ಟಿಪ್ಪುವು ಷಾಹ ಅಲಮ್‌ನಿಂದ ಹಾಗೆ ಸನ್ನದು ಪಡೆಯಲು ಪ್ರಯತ್ನಿಸಿ ವಿಫಲನಾದನು. ದೆಹಲಿಯ ದರ್ಬಾರಿನಲ್ಲಿ ಫ್ರೆಂಚರು ಅವನ ಪರವಾಗಿ ಪ್ರಯತ್ನಿಸಿದರೂ ಬ್ರಿಟಿಷರು ಅದನ್ನು ತಪ್ಪಿಸಿದರು.

ಸ್ವತಂತ್ರ ರಾಜನೆಂದು ಮನ್ನಣೆ ಪಡೆಯಬೇಕೆಂದು ಟಿಪ್ಪು ಇಚ್ಛಿಸಿದನು. ಏಕೆಂದರೆ ಮಹಾರಾಜರ ಅಧಿಕಾರದ ಗುರುತುಗಳು ಇರುವವರೆವಿಗೂ ತನಗೆ ಅತೃಪ್ತಿ, ಒಳಸಂಚು, ಕಾರಸ್ಥಾನಗಳ ಕೇಂದ್ರವಾಗುವುದು ಹೆಚ್ಚುತ್ತಲೇ ಇರುತ್ತದೆ ಎಂದು ಅವನು ಭಾವಿಸಿದನು.[೭೩] ಈ ಧ್ಯೇಯ ಸಾಧನೆಗೆ ಇಸ್ಲಾಮಿಕ್ ಜಗತ್ತಿನ ಖಲೀಪನಾದ ಅಟೋಮನ್ ಸುಲ್ತಾನನ್ನು ಸಂಪರ್ಕಿಸಿದನು. ಕ್ರಿ.ಶ.೧೭೮೫ ನವೆಂಬರ್‌ನಲ್ಲಿ ತುರ್ಕಿಗೆ ರಾಯಭಾರ ನಿಯೋಗವೊಂದನ್ನು ಕಳುಹಿಸಿದನು. ಅಟೋಮನ್ ಸುಲ್ತಾನನು ಟಿಪ್ಪುವಿಗೆ ಸ್ವತಂತ್ರ ಅರಸನಾಗಿ ಪದವಿ ಧರಿಸಲು ನಾಣ್ಯಗಳನ್ನು ಟಂಕಿಸಲು, ತನ್ನ ಹೆಸರಿನಲ್ಲಿ ಖುತ್ಬಾ ಓದಿಸಲು ಅನುಮತಿಸಿದನು. ಟಿಪ್ಪು ಮೈಸೂರಿನ ಅರಸನಾಗಿ ಶಾಸಬದ್ಧ ಅಧಿಕಾರ ಪಡೆದು ತನ್ನ ಇಚ್ಛೆಯನ್ನು ಪೂರೈಸಿಕೊಂಡನು. ಹೀಗೆ

ಅಧಿಕೃತ ಮನ್ನಣೆ ಪಡೆಯಬೇಕೆಂದು ಟಿಪ್ಪು ಕಾತರಿಸಿದ್ದಾದರೂ ಏಕೆ ಎನ್ನುವ ಪ್ರಶ್ನೆಗಳಿಗೆ ಉತ್ತರಗಳು ಸ್ಪಷ್ಟವಾಗಿವೆ. ಪದೇ ಪದೇ ಹೈದರನ ಕಾಲದಿಂದಲೂ ಅರಮನೆಯಲ್ಲಿ ತನ್ನ ವಿರುದ್ಧವಾಗಿ ನಡೆಯುತ್ತಿದ್ದ ಒಳಸಂಚುಗಳನ್ನು ತಡೆಯುವುದು, ತನ್ನ ಮತ್ತು ತಂದೆ ಹೈದರಾಲಿ ವಿರುದ್ಧ ಒಳಸಂಚು, ಪಿತೂರಿ ನಡೆಸಿದವರನ್ನು ಪತ್ತೆ ಮಾಡಿ ಶಿಕ್ಷಿಸುವುದು ಟಿಪ್ಪುವಿಗೆ ಅತ್ಯಂತ ಅಗತ್ಯವಾಗಿತ್ತು. ಬ್ರಿಟಿಷರು ಟಿಪ್ಪುವನ್ನು ಪದಚ್ಯುತಗೊಳಿಸಲು ನಡೆಸಿದ ಎಲ್ಲಾ ಒಳಸಂಚುಗಳನ್ನು ವಿಫಲಗೊಳಿಸಿದ ಅವನು ಸ್ಥಾನವನ್ನು ತನ್ನ ನೆರೆಹೊರೆಯವರ ಸ್ಥಾನಮಾನಗಳೊಂದಿಗೆ ಸರಿಸಮವಾಗಿ ರೂಪಿಸಿಕೊಳ್ಳಲು ಬಯಸಿದನು. ಹೈದರಾಬಾದಿನ ನಿಜಾಮನೊಂದಿಗೆ ವೈವಾಹಿಕ ಸಂಬಂಧ ಬೆಳೆಸಲು ಪ್ರಯತ್ನಿಸಿದನು. ಟಿಪ್ಪು ಕೆಳಮಟ್ಟದ ನಾಯಕ ಕುಟುಂಬದಿಂದ ಬಂದವನು ಎಂಬ ಕಾರಣಕ್ಕೆ ಮಾತುಕತೆಗಳು ಮುರಿದುಬಿದ್ದವು.

ಟಿಪ್ಪುವಿನದು ಸ್ವತಂತ್ರ ಮನೋಧರ್ಮ, ಪ್ರಭುತ್ವದಲ್ಲಿ ಭಾಗೀದಾರನಾಗಿರಬಾರದು ಎಂದು ಅವನು ಯೋಚಿಸಿದನು. ರಾಜಕಾರಣದಲ್ಲಿ ಯಾವುದೇ ಒಂದು ವ್ಯವಸ್ಥೆಯು ಉಪಯುಕ್ತವಲ್ಲ ಎಂದು ಕಂಡರೆ ಅದನ್ನು ಕೈಬಿಡುತ್ತಿದ್ದನು.[೨೪] ಅದನ್ನು ಉಳಿಸಿಕೊಂಡರೆ ಅಪಾಯದ ಮೂಲವಾಗಬಹುದು. ಯುದ್ಧಕ್ಕೂ ಕಾರಣವಾಗಬಹುದು ಎಂದೂ ಆಲೋಚಿಸಿದನು. ಟಿಪ್ಪುವಿಗೆ ಜಗತ್ತಿನ ಬೇರೆ ಬೇರೆ ಭಾಗಗಳೊಂದಿಗೆ ಸಂಪರ್ಕವಿದ್ದಿತು. ಬ್ರಿಟಿಷರನ್ನು ಸಮರ್ಥವಾಗಿ ಎದುರಿಸಲು ಅಷ್ಟೇ ಪ್ರಬಲ ಶಕ್ತಿಗಳನ್ನು ತನ್ನ ಬೆಂಬಲಕ್ಕೆ ನಿಲ್ಲುವಂತೆ ಮಾಡಲು ಯತ್ನಿಸಿದನು. ಫ್ರಾನ್ಸ್, ಟರ್ಕಿ, ಅಫ್ಘಾನಿಸ್ಥಾನ, ಇರಾನ್ ದೇಶಗಳೊಂದಿಗೆ ರಾಯಭಾರ ಸಂಬಂಧಗಳು ಮತ್ತು ಪತ್ರ ವ್ಯವಹಾರದ ಮೂಲಕ ಆರ್ಥಿಕ, ತಾಂತ್ರಿಕ ಹಾಗೂ ಸೈನಿಕ ಸಹಾಯ ಪಡೆಯಲು ಪ್ರಯತ್ನಿಸಿದನು. ಈ ಜಾಗತಿಕ ಶಕ್ತಿಗಳೊಂದಿಗೆ ರಕ್ಷಕ ಮತ್ತು ಆಕ್ರಮಣಶೀಲ ಒಪ್ಪಂದಗಳನ್ನು ಮಾಡಿಕೊಂಡು ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿಯನ್ನು ಸಂಪೂರ್ಣ ಹೊರಹಾಕಲು ಆಲೋಚಿಸಿದನು.

ಟಿಪ್ಪು ಮತ್ತು ಹೈದರ್ ಇವರ ಆಡಳಿತ ನೀತಿ ಕುರಿತು ವಿಭಿನ್ನ ಹೇಳಿಕೆ ನೀಡಲಾಗುತ್ತಿದೆ. ಅವರ ಆಳ್ವಿಕೆಯನ್ನು 'ಅಧಿಕಾರದ ದುರಾಕ್ರಮಣ ಎಂದು ನಿಂದಿಸಲಾಗಿದೆ. ಅದು ಪೂರ್ಣ ಪ್ರಮಾಣದಲ್ಲಿ ಯುರೋಪಿಯನ್ ಪರಿಕಲ್ಪನೆ. ಬ್ರಿಟಿಷರು ಮೈಸೂರು ರಾಜ್ಯವನ್ನು ಗೆದ್ದುದನ್ನು ಸಮರ್ಥಿಸಿಕೊಳ್ಳಲು ಉದ್ದೇಶ ಪೂರಕವಾಗಿ ಹೇರಿದ ಕಲ್ಪನೆ. ಟಿಪ್ಪುವಿನ ಪತನದ ನಂತರದ ಇತಿಹಾಸ ಲೇಖನಗಳಲ್ಲಿ ದುರಾಕ್ರಮಣ ಹಾಗೂ ಪುನಸ್ಥಾಪನೆ ಎಂಬ ಎರಡು ಕಲ್ಪನೆಗಳು ಪದೇ ಪದೇ ಕಂಡುಬರುತ್ತವೆ. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಧೋರಣೆಗೆ, ವಸಾಹತುಶಾಹಿ ವಿಸ್ತರಣೆಗೆ ಈ ಇಬ್ಬರು ನಾಯಕರು ಕಡಿವಾಣ ಹಾಕಿದರು. ಅವರ ಹೋರಾಟಗಳನ್ನು ಹೀಯಾಳಿಸಲು ಹಾಗೂ ಒಡೆಯರ್ ಕುಟುಂಬಕ್ಕೆ ಔದಾರ್ಯ ತೋರಿ ಅಧಿಕಾರ ದೊರಕಿಸಿಕೊಟ್ಟ ಹೆಗ್ಗಳಿಕೆಯನ್ನು ತಮ್ಮದೇ ಎಂಬಂತೆ ಬಿಂಬಿಸಲು ಬ್ರಿಟಿಷರು ಹುಟ್ಟು ಹಾಕಿದ ಕಲ್ಪನೆಗಳು ಇವು.

ಈ ಎರಡು ಕಲ್ಪನೆಗಳ ಹಿಂದೆ ಹತ್ತೊಂಬತ್ತನೆಯ ಶತಮಾನದ ಯುರೋಪಿನ ಇಡೀ ರಾಜಕೀಯ ದರ್ಶನವಿದೆ. "ಶಾಸನಬದ್ಧತೆ" ಮತ್ತು "ಪ್ರತಿಕ್ರಿಯೆ" ಎಂಬ ಎರಡು ಪದಗಳಲ್ಲಿ ಅದನ್ನು ಸಂಗ್ರಹಿಸಬಹುದು. ಪ್ರಗತಿಪರ ಚಿಂತನೆಯ ನಡೆಯಲ್ಲಿ ಫ್ರಾನ್ಸ್ ಎಲ್ಲರಿಗಿಂತ ಮುಂದಿದ್ದು, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ತತ್ವಗಳನ್ನು ಕ್ರಾಂತಿಯ ವಿಚಾರಗಳಾಗಿ ಮುಂದೊಡ್ಡಿತು. ಕ್ರಿ.ಶ.೧೭೮೯ರಲ್ಲಿ ಈ ಕಲ್ಪನೆಗಳು ಫ್ರೆಂಚ್ ಮಹಾಕ್ರಾಂತಿಯಾಗಿ ವಿಕಾಸಗೊಂಡವು. ಪ್ರಜಾಪ್ರಭುತ್ವ ಮತ್ತು ರಾಷ್ಟ್ರೀಯತೆಯ ವಿಚಾರಗಳನ್ನು ಪ್ರವೇಶಗೊಳಿಸಿದವು. ನೆಪೋಲಿಯನ್ ಕ್ರಾಂತಿಯ ಶಿಶುವಾದನು. ಅತ್ಯಂತ ವೇಗವಾಗಿ ಪ್ರಬಲನಾದನು. ಯುರೋಪಿನ ಎಲ್ಲಾ ರಾಜಕೀಯ ಶಕ್ತಿಗಳನ್ನು ತನ್ನಲ್ಲೆ ಕೇಂದ್ರೀಕರಿಸಲು ಹೊರಟನು. ಫ್ರೆಂಚ್ ಕ್ರಾಂತಿಯ ವಿಚಾರಧಾರೆಗಳು ವಿನ್ಯಾಸಗೊಳ್ಳುವುದನ್ನು ಹಳೆಯ ವ್ಯವಸ್ಥೆಯ ಸಂರಕ್ಷಕರಾಗಿದ್ದ ಇಂಗ್ಲೆಂಡ್ ಮತ್ತು ಆಸ್ಟ್ರಿಯ ಸಹಿಸದಾದವು. ಅವು ಹಳೆಯ ಚಕ್ರಾದಿಪತ್ಯಗಳ ಪುನರ್‌ಸ್ಥಾಪನೆ ವಿಷಯದಲ್ಲಿ ಆಸಕ್ತಿ ತೋರಿದವು. ವಿಯೆನ್ನಾ ಕಾಂಗ್ರೆಸ್ ಅಧಿವೇಶನದಲ್ಲಿ ನೆಪೋಲಿಯನ್ ಯುರೋಪಿನ ಹಳೆಯ ಅರಸೊತ್ತಿಗೆಗಳನ್ನು ದುರಾಕ್ರಮಿಸಿದ ಎಂದೂ ಹೇಳಲಾಯಿತು. ಇಂಗ್ಲೆಂಡ್ ಮತ್ತು ಆಸ್ಟ್ರಿಯ ಯುರೋಪನ್ನು ನಿರಂಕುಶ ಅರಸರ ಮುಷ್ಟಿಯಿಂದ ಬಿಡಿಸುವ ವಿಮೋಚಕರ ಪಾತ್ರವನ್ನು ತಮಗೆ ತಾವು ಆರೋಪಿಸಿಕೊಂಡು ಶಕ್ತಿ ಸಮತೋಲನವನ್ನು ಮತ್ತೆ ಸ್ಥಾಪಿಸಿದ ಕೀರ್ತಿಯನ್ನು ಪಡೆದರು.[೭೫] ಯುರೋಪಿನ ರಾಜಕಾರಣ ಮತ್ತು ಆಡಳಿತ ನೀತಿಗಳು ಟಿಪ್ಪುವನ್ನು ಪ್ರೇರೇಪಿಸಿದವು. ತನ್ನ ಆಡಳಿತ ನೀತಿಯಲ್ಲಿ ಯುರೋಪಿನ ರಾಜಕೀಯ ತಂತ್ರಗಾರಿಕೆಯನ್ನು ಸಮೀಕರಿಸುವ ಪ್ರಯತ್ನ ನಡೆಸಿದನು.

ಲೇ.ಮೂರ್ ನೇರವಾಗಿ ಟಿಪ್ಪುವಿನೊಂದಿಗೆ ಯುದ್ಧಮಾಡಿದ ವ್ಯಕ್ತಿ. ಅವನು ಟಿಪ್ಪು ಆಡಳಿತ ನೀತಿ ಕುರಿತು ಪ್ರತ್ಯಕ್ಷ ವರದಿ ನೀಡಿದ್ದಾನೆ. ಅದು ಹೀಗಿದೆ, "ಹೊಸ ದೇಶವೊಂದರ ಮೂಲಕ ಪ್ರಯಾಣ ಮಾಡುತ್ತಿರುವ ವ್ಯಕ್ತಿಯು ಆ ದೇಶವು ಚೆನ್ನಾಗಿ ಕೃಷಿಗೆ ಒಳಪಟ್ಟಿರುವುದನ್ನು ನೋಡುತ್ತಾನೆ. ಸದಾ ಕಾರ್ಯ ಪ್ರವೃತ್ತರಾದ ಪ್ರಜೆಗಳನ್ನು ನೋಡುತ್ತಾನೆ; ಪಟ್ಟಣಗಳು ಹೊಸದಾಗಿ ನಿರ್ಮಿತವಾಗಿವೆ; ವಾಣಿಜ್ಯವು ವಿಸ್ತಾರವಾಗುತ್ತಿರುತ್ತದೆ. ನಗರಗಳ ಸಂಖ್ಯೆಯೂ ಹೆಚ್ಚುತ್ತಿರುತ್ತದೆ. ಎಲ್ಲೆಡೆ ಸುಖ ಸಮೃದ್ಧಿಗಳಿಂದ ತುಂಬಿರುವ ಆ ನಾಡನ್ನು ನೋಡಿ ಅದು ಪ್ರಜೆಗಳ ಮನಸ್ಥಿತಿಗೆ ಹೊಂದಿಕೆಯಾಗುವಂಥ ದೇಶವೆಂದು ತೀರ್ಮಾನಿಸುತ್ತಾನೆ. ಟಿಪ್ಪುವಿನ ರಾಜ್ಯಾಡಳಿತದ ಚಿತ್ರಣವಿದು. ಅಲ್ಲಿಯ ಸರಕಾರವನ್ನು ನಾನು ಗೌರವಿಸುವುದು ಹೀಗೆ.[೭೬]

ಸರ್ ಜಾನ್ ಶೋರ್ ನಂತಹ ಬ್ರಿಟಿಷ್ ಉನ್ನತಾಧಿಕಾರಿಯೂ ಟಿಪ್ಪುವಿನ ಆಡಳಿತ ನೀತಿ ಕುರಿತು ವಿಶ್ಲೇಷಿಸಿದ್ದಾನೆ. ಅವನ ಹೇಳಿಕೆಗಳು ಹೀಗಿವೆ. "ಟಿಪ್ಪು ಗರ್ವವಿಲ್ಲದ ಗೌರವ ಕಾಪಾಡಿ ಕೊಂಡಿದ್ದಾನೆ. ಅವನ ದೇಶದ ಕೃಷಿಕರಿಗೆ ಉತ್ತಮ ರಕ್ಷಣೆಯಿದೆ. ರೈತರ ಕ್ರಮಕ್ಕೆ

ಪ್ರೋತ್ಸಾಹ ಮತ್ತು ಬಹುಮಾನ ನೀಡಲಾಗುತ್ತದೆ. ಮಲಬಾರಿನ ಪ್ರಜೆಗಳನ್ನು ಅವನು ಕ್ರೂರವಾಗಿ ನಿರ್ದಯವಾಗಿ ನೋಡಿಕೊಳ್ಳುತ್ತಿದ್ದನು ಎಂಬ ಸುದ್ದಿಗಳು ಹರಡಿದ್ದವು. ಅವುಗಳಿಗೆ ಆಧಾರಗಳಿದ್ದರೂ ಉತ್ಪ್ರೇಕ್ಷೆಯಿಂದ ಕೂಡಿದ್ದವು. ಅವನೊಂದಿಗೆ ಯುದ್ಧ ಮಾಡುವ ಸಂದರ್ಭದಲ್ಲಿ ಚಾರಿತ್ರ್ಯವುಳ್ಳ ಸೈನ್ಯವರ್ಗಗಳಿಗೆ ಸೇರಿದ ಅಥವಾ ಪ್ರಭಾವಶಾಲಿಯಾದ ಒಬ್ಬ ವ್ಯಕ್ತಿಯೂ ಅವನ ಕಡೆಯಿಂದ ಪಕ್ಷಾಂತರಗೊಂಡು ಹೋಗಲಿಲ್ಲ."[೭೭]

ಟಿಪ್ಪುವಿನ ವ್ಯಕ್ತಿತ್ವ ಮತ್ತು ಆಡಳಿತ ನೀತಿ ಕುರಿತು ಕೆಲವು ಪ್ರತ್ಯಕ್ಷದರ್ಶಿಗಳು ನೀಡಿರುವ ವರದಿಗಳು ಅಂದಿನ ವಾಸ್ತವಾಂಶಗಳನ್ನು ತಿಳಿಯಲು ಸಹಕಾರಿಯಾಗಿವೆ. ಇಂಥ ವರದಿಗಳಲ್ಲಿ ಅಲೆಗ್ಸಾಂಡರ್ ಡಿರೋಮ್ ವರದಿ ಹೀಗಿದೆ. "ಹೈದರನು ಸ್ಥಾಪಿಸಿದ್ದ ವ್ಯವಸ್ಥೆಯ ವ್ಯವಹರಣೆಯಿಂದ, ತನ್ನ ನಡವಳಿಕೆ ಹೀಗಿರಬೇಕು ಎಂದು ಟಿಪ್ಪುವು ಹಾಕಿಕೊಂಡ ಕೆಲವು ತತ್ವಗಳಿಂದ, ಅನೇಕ ವರ್ಷಗಳ ದಾಳಿಗೆ ಸ್ವಲ್ಪವೂ ಜಗ್ಗದೆ ನಿಂತ ರಾಜ್ಯದಿಂದ, ಈ ಎಲ್ಲ ಅಂಶಗಳು ಸೇರಿದ ಒಟ್ಟು ಪರಿಣಾಮದಿಂದ ಅವನ ದೇಶವು ಎಲ್ಲೆಲ್ಲೂ ಜನರಿಂದ ತುಂಬಿದ್ದಿತು; ಕೃಷಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಯಿತು. ಅವನ ಸೈನಿಕರು ಕೊನೆವರೆಗೂ ಶಿಸ್ತಿನಿಂದ ಹಾಗೂ ನಿಷ್ಠೆಯಿಂದ ಹೋರಾಡುತ್ತಿದ್ದರು. ಅವನ ಮಿಲಿಟರಿ ಆಡಳಿತವು ವ್ಯವಸ್ಥಿತವಾಗಿತ್ತು. ಸರಕಾರದ ನಿಯಮಗಳು ಕಟ್ಟುನಿಟ್ಟಿನಿಂದ ಕೂಡಿತ್ತು. ಸಮಾಜ ವ್ಯವಸ್ಥೆಯಲ್ಲಿ ಸ್ವಲ್ಪ ನಿರಂಕುಶತೆ ಇತ್ತು. ಟಿಪ್ಪು ಪ್ರಜಾಹಿತಕ್ಕೆ ಮನ್ನಣೆ ನೀಡಿದ್ದ ತನ್ನ ಶತ್ರುಗಳೆಂದು ತಿಳಿಬಂದರೆ ಅವರನ್ನು ಹಿಂಸೆಗೆ ಒಳಪಡಿಸುತ್ತಿದ್ದ. ಸೈನ್ಯದ ಬಲವರ್ಧನೆ, ಕೋಟೆಗಳ ನಿರ್ಮಾಣಕ್ಕೆ ಆದ್ಯಗಮನ ನೀಡಿದ್ದ. ರಾಜ್ಯದ ಗಡಿಭಾಗಗಳ ಭದ್ರತೆ ಮತ್ತು ರಕ್ಷಣೆಗೆ ತನ್ನ ಸೇನಾತುಕಡಿಗಳನ್ನು ನಿಯೋಜಿಸಿದ್ದ. ವ್ಯಾಪಕವಾದ ವಿಜಯಯಾತ್ರೆಗಳನ್ನು ನಡೆಸಲು ಆಲೋಚಿಸಿದ್ದನು."[೭೮]

ಟಿಪ್ಪುವಿನ ಆಡಳಿತ ನೀತಿಯಲ್ಲಿನ ಮತ್ತೊಂದು ಪ್ರಮುಖ ಅಂಶವೆಂದರೆ ಮಾನವನ ಸ್ವಾತಂತ್ರ್ಯ ಪರಿಕಲ್ಪನೆ. ರಾಜಕೀಯ, ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯಗಳು ಇರಬೇಕು ಎನ್ನುವುದು. ಬ್ರಿಟಿಷರೊಡನೆ ಅವನು ಹೋರಾಡಿದ್ದು ಸ್ವಾತಂತ್ರ್ಯಕ್ಕಾಗಿ. ಬ್ರಿಟಿಷರು ತನ್ನ ಪ್ರಜೆಗಳನ್ನು ಅಧೀನವರ್ತಿಗಳನ್ನಾಗಿಸಲು ಪ್ರಯತ್ನಿಸಿದರು. ಟಿಪ್ಪುವಿನ ಪರಿಕಲ್ಪನೆಯಲ್ಲಿ ರಾಜ್ಯವೆಂದರೆ "ವಿಸ್ತೃತಗೊಂಡ ಸ್ವಾತಂತ್ರ್ಯ". ತನ್ನ ರಾಜ್ಯದಲ್ಲಿ ಪ್ರಜೆಗಳ ಸ್ವಾತಂತ್ರ್ಯಕ್ಕೆ ಅಡ್ಡಿಮಾಡಿದ ವಿದೇಶಿ ಶಕ್ತಿಯ ವಿರುದ್ಧ ಟಿಪ್ಪು ಸಮರ ಸಾರಿದನು ರಾಜ್ಯವು ಅನಿರ್ಬಂಧಿತ ಪೂರ್ಣಸ್ವಾತಂತ್ರ್ಯ ಹೊಂದಿರಬೇಕು ಎಂಬುದು ಅವನ ಮೂಲತತ್ವವಾಗಿತ್ತು. ಅದಕ್ಕೆ ಬದ್ಧವಾಗಿ ನಿಂತನು.

ಟಿಪ್ಪುವಿನ ರಾಜ್ಯಾಡಳಿತ ನೀತಿಯು ಜಾತ್ಯಾತೀತ ಸ್ವರೂಪ ಹೊಂದಿತ್ತು. ಹಲವು ಚರಿತ್ರೆಕಾರರು ಅವನೊಬ್ಬ ಮತಾಂಧ, ಅಸಹಿಷ್ಣು ಎಂದೂ ವಾದಿಸಿದ್ದಾರೆ. ಅವನು ಹಿಂದೂ ದೇವಾಲಯಗಳಿಗೆ

ಕೊಟ್ಟ ಅಸಂಖ್ಯಾತ ಆಭರಣಗಳು, ಸಿವಿಲ್ ಮತ್ತು ಮಿಲಿಟರಿ ಹುದ್ದೆಗಳಲ್ಲಿ ಮುಸ್ಲಿಮೇತರ ಪ್ರಜೆಗಳನ್ನು ಅಧಿಕ ಸಂಖ್ಯೆಯಲ್ಲಿ ಸೇರಿಸಿಕೊಂಡಿದ್ದು, ಶೃಂಗೇರಿಯ ಶಂಕರಾಚಾರ್ಯರ ಬಗೆಗೆ ತೋರಿಸುತ್ತಿದ್ದ ಭಕ್ತಿಗೌರವಗಳು ಇವೆಲ್ಲ ಟಿಪ್ಪು ಅಸಹಿಷ್ಣುವಾಗಿದ್ದ ಎಂದೂ ಬ್ರಿಟಿಷರು ಮಾಡುವ ಆರೋಪವನ್ನು ಸುಳ್ಳಾಗಿಸುತ್ತವೆ. ಕೊಡಗಿನ ರಾಜರ ಮೇಲೆ, ಮಂಗಳೂರು ಕ್ರಿಶ್ಚಿಯನ್ನರು ಹಾಗೂ ಮಲಬಾರಿನ ನಾಯಕರ ಮೇಲೆ ಟಿಪ್ಪು ಕ್ರೂರವಾಗಿ ನಿರ್ದಯವಾಗಿ ನಡೆದುಕೊಂಡದ್ದಕ್ಕೆ ರಾಜಕೀಯ ಕಾರಣಗಳಿದ್ದವು. ಅವರು ಸರಕಾರದ ವಿರುದ್ಧ ಬಂಡಾಯ ಹೂಡಿದ್ದರು. ಬ್ರಿಟಿಷರೊಡನೆ ಸ್ನೇಹ ಬೆಳೆಸಿಕೊಂಡಿದ್ದರು. ಕಡಪ, ಕರ್ನೂಲು ನವಾಬರು, ರಾಜ್ಯದ ಹಿತಕ್ಕೆ ವಿರುದ್ಧವಾಗಿ ವರ್ತಿಸಿದಾಗ ಟಿಪ್ಪು ನಿರ್ದಯವಾಗಿ ನಡೆದುಕೊಂಡನು.[೭೯]

ಟಿಪ್ಪುವು ತನ್ನ ರಾಜ್ಯಾಡಳಿತದಲ್ಲಿ ಹಲವು ಸುಧಾರಣೆಗಳನ್ನು ಹಂತ ಹಂತವಾಗಿ ಜಾರಿಗೊಳಿಸಿದನು. ತನ್ನ ರಾಜ್ಯಕ್ಕೆ ಎದುರಾದ ಆಂತರಿಕ ಮತ್ತು ಬಾಹ್ಯಶಕ್ತಿಗಳನ್ನು ತಡೆಯಲು ತನ್ನ ವಿದೇಶಾಂಗ ನೀತಿಯನ್ನು ಬದಲಿಸಿದ. ಬ್ರಿಟಿಷರನ್ನು ಭಾರತದಿಂದಲೇ ಹೊರದೂಡುವ ಅವನ ಹೋರಾಟಕ್ಕೆ ನೆರೆಹೊರೆಯ ನಾಯಕರು ಮುಕ್ತ ಮನಸ್ಸಿನಿಂದ ಬೆಂಬಲ ನೀಡಲಿಲ್ಲ. ಮರಾಠರು, ಹೈದರಾಬಾದಿನ ನಿಜಾಮರು ಬೆಂಬಲಿಸಲಿಲ್ಲ. ಅವರು ಬ್ರಿಟಿಷರ ಮಿತ್ರತ್ವ ಸಂಪಾದಿಸಿ ಟಿಪ್ಪುವಿನ ಪದಚ್ಯುತಿಗೆ ಒಳಸಂಚು, ಪಿತೂರಿ ನಡೆಸಿದರು. ಇದನ್ನು ಬೇಗನೇ ಅರ್ಥಮಾಡಿಕೊಂಡ ಟಿಪ್ಪು, ಹೊರಜಗತ್ತಿನೊಂದಿಗೆ ಸಂಪರ್ಕ ಹೊಂದಲು ಮುಂದಾದ ತನ್ನ ರಾಜ್ಯದ ಆರ್ಥಿಕಾಭಿವೃದ್ಧಿ, ರಕ್ಷಣೆ, ಮಿಲಿಟರಿ ಉದ್ದೇಶಗಳನ್ನು ಇದು ಹೊಂದಿತು. ತನಗೆ ಎದುರಾದ ಬ್ರಿಟಿಷ್ ವಸಾಹತುಶಾಹಿಯನ್ನು ತಡೆಯಲು ಅವರಷ್ಟೇ ಪ್ರಬಲವಾದ ಮತ್ತೊಂದು ಶಕ್ತಿಯ ಸಹಾಯದ ಅವಶ್ಯಕತೆ ಇತ್ತು. ಅದಕ್ಕಾಗಿ ಹೊರಜಗತ್ತಿನೊಂದಿಗೆ ಸಂಪರ್ಕ ಏರ್ಪಡಿಸಿಕೊಂಡ. ಫ್ರಾನ್ಸ್, ಟರ್ಕಿ, ಇರಾನ್, ಅಫ್ಘಾನಿಸ್ಥಾನ ಇತ್ಯಾದಿ ದೇಶಗಳೊಂದಿಗೆ ರಾಯಭಾರ ಸಂಪರ್ಕ ಹೊಂದಿದ. ಪತ್ರವ್ಯವಹಾರದ ಮೂಲಕವೂ ರಾಜತಾಂತ್ರಿಕ ಸಂಬಂಧ ಬೆಳೆಸಿದ. ಬ್ರಿಟಿಷರ ವಿರುದ್ದ ಹೋರಾಡಲು ಸೈನಿಕ ಸಹಾಯ ನೀಡುವಂತೆ ಕೇಳಿದ. ರಾಜ್ಯದ ಆರ್ಥಿಕ ಬಲವನ್ನು ವೃದ್ಧಿಸಲು ವ್ಯಾಪಾರ-ವಾಣಿಜ್ಯದ ಅಭಿವೃದ್ಧಿಗೆ ವಿದೇಶಿ ವ್ಯಾಪಾರಕ್ಕೆ ಒತ್ತು ನೀಡಿದ. ಹೊರ ರಾಷ್ಟ್ರಗಳ ತಾಂತ್ರಿಕತೆಯನ್ನು ಕೃಷಿ, ಕೈಗಾರಿಕೆ ಮತ್ತು ಮಿಲಿಟರಿ ಕ್ಷೇತ್ರಗಳಿಗೆ ಅಳವಡಿಸಲು ಪ್ರಯತ್ನಿಸಿದ. ನೌಕಾಪಡೆಯನ್ನು ಸಮರ್ಥವಾಗಿ ಕಟ್ಟಿದ. ಫ್ರಾನ್ಸ್‌ಗೆ ಕಳುಹಿಸಿದ ರಾಯಭಾರ ನಿಯೋಗಕ್ಕೆ ಕೆಲವು ನಿರ್ದೇಶನಗಳನ್ನು ನೀಡಿದ್ದ ಮೊದಲನೆಯದು ಸೈನಿಕ ಸಹಾಯ ಕೇಳುವುದು. ಎರಡನೆಯದು ಕುಶಲಕರ್ಮಿಗಳು, ಗಾಜು ತಯಾರಕರು, ಕನ್ನಡಿ ತಯಾರಕರು ಹಡಗು ಕಟ್ಟುವವರು, ಯುದ್ಧ ಸಾಮಗ್ರಿಗಳ ತಯಾರಿಕೆ ಕೌಶಲ್ಯವನ್ನು ಹೊಂದಿದ್ದ ನಿಪುಣ ತಂತ್ರಜ್ಞರನ್ನು ಜೊತೆಯಲ್ಲಿ ಕರೆತರುವಂತೆ

ನಿರ್ದೇಶನ ನೀಡಿದ್ದ. ಈ ಮೂಲಕ ಆಧುನಿಕ ಆವಿಷ್ಕಾರಗಳಿಗೆ ಉತ್ತೇಜನ ನೀಡಿದನು. ರಾಜ್ಯದಲ್ಲಿ ಐರೋಪೀಕರಣ ಪ್ರಕ್ರಿಯೆಗಳು ಆರಂಭಗೊಂಡವು.

ಟಿಪ್ಪುವಿನ ರಾಜ್ಯವು ಪಶ್ಚಿಮದಲ್ಲಿ ಉದ್ದನೆಯ ಕರಾವಳಿಯನ್ನು ಹೊಂದಿತ್ತು. ಇದು ಹೈದರ್ ಮತ್ತು ಟಿಪ್ಪು ಹೊರಜಗತ್ತಿನೊಂದಿಗೆ ಸಂಪರ್ಕ ಹೊಂದಲು ಅನುಕೂಲ ಒದಗಿಸಿತು. ಅವರು ಮೊದಲು ಮಾಡಿದ ಕೆಲಸ ಬಲವಾದ ನೌಕಾಪಡೆ ಕಟ್ಟುವುದು. ಟಿಪ್ಪುವಿನ ನೌಕಾಪಡೆಯಲ್ಲಿ ೨೨ ಯುದ್ಧ ಹಡಗುಗಳು, ೨೦ ದೊಡ್ಡ ಫ್ರಿಗೇಟ್‌ಗಳು ಇದ್ದವು. ಇವುಗಳಲ್ಲಿ ಒಂದೊಂದರಲ್ಲಿ ೭೨ ಮತ್ತು ೬೨ ತೋಪುಗಳಿದ್ದವು. ಶ್ರೀಗಂಧ, ಮೆಣಸು, ಏಲಕ್ಕಿ, ತೆಂಗಿನಕಾಯಿ, ದಂತ ಇತ್ಯಾದಿ ವಸ್ತುಗಳನ್ನು ಮೈಸೂರು ಉತ್ಪಾದಿಸುತ್ತಿತ್ತು. ಈ ವಸ್ತುಗಳಿಗೆ ಐರೋಪ್ಯ ಮಾರುಕಟ್ಟೆಯಲ್ಲಿ ಅಧಿಕ ಬೇಡಿಕೆ ಇತ್ತು. ಈ ವಸ್ತುಗಳ ವ್ಯಾಪಾರವು ವಿದೇಶಿಯರ ಏಕಸ್ವಾಮ್ಯಕ್ಕೆ ಒಳಪಡದಂತೆ ಟಿಪ್ಪು ಎಚ್ಚರವಹಿಸಿದ. ರಾಜ್ಯದ ನಿಯಂತ್ರಣಕ್ಕೆ ಒಳಪಡಿಸಲು ಬಯಸಿದ. ಆಮದು ರಫ್ತುಗಳ ಏಕಸ್ವಾಮ್ಯವು ಸರಕಾರದ ನಿಯಂತ್ರಣದಲ್ಲಿತ್ತು. ಯಾವುದೇ ಮಧ್ಯವರ್ತಿಗಳಿಗೆ, ದಳ್ಳಾಳಿಗೆ ಅವಕಾಶವಿರಲಿಲ್ಲ. ಟಿಪ್ಪುವಿನ ಈ ವ್ಯಾಪಾರ ನೀತಿಯು ಎರಡು ಉದ್ದೇಶಗಳನ್ನು ಹೊಂದಿತ್ತು. ರಾಜ್ಯದ ಸಂಪತ್ತನ್ನು ಹೆಚ್ಚಿಸುವುದು ಹಾಗೂ ವಿಶಾಲ ಜಗತ್ತಿನೊಂದಿಗೆ ರಾಜ್ಯವನ್ನು ಸಂಬಂಧ ಪಡಿಸುವುದು. ಅರ್ಮೇನಿಯ, ಬಾಸ್ರಾ, ಮಸ್ಕತ್ ಪೆಗು, ಜಿದ್ದಾ, ಏಡನ್, ಅರ್ಮುಜ್ ಮತ್ತು ಕಚ್‌ನಂತಹ ಪ್ರದೇಶಗಳಲ್ಲಿ ಮೈಸೂರಿನ ವ್ಯಾಪಾರಿ ಕೊಠಿಗಳು ಸ್ಥಾಪನೆಯಾದವು. ಹೊರದೇಶದಲ್ಲಿ ಮಾತ್ರವಲ್ಲದೆ ಸ್ವದೇಶದ ಪಾಂಡಿಚೇರಿ, ಪುಣೆ, ಕಚ್, ಕರಾಚಿ, ಮಾಹೆ, ಕಡಪಾ ಮತ್ತು ಕರ್ನೂಲು ಭಾಗದಲ್ಲಿ ವ್ಯಾಪಾರಿ ಕೊಠಿ ಸ್ಥಾಪಿಸಿದ. ಟಿಪ್ಪುವಿನ ರಾಜಕೀಯ-ಆರ್ಥಿಕ ಪರಿಕಲ್ಪನೆ ಯುರೋಪಿನ ವಾಣಿಜ್ಯ ಪರಿಕಲ್ಪನೆಗೆ ಸಮನಾಗಿತ್ತು.[೮೦] ರಾಜಕೀಯ ಸ್ವಾತಂತ್ರ್ಯ, ಆರ್ಥಿಕ ಸ್ವಾವಲಂಬನೆ, ಏಕಸ್ವಾಮ್ಯತೆ ಉಂಟುಮಾಡಲು ಬೇಕಾದ ಆಡಳಿತ ನೀತಿಯನ್ನು ರೂಪಿಸಿದನು. ಅವನ ರಾಜ್ಯಾಡಳಿತದ ಆಲೋಚನೆಗಳು ಆಧುನಿಕತೆ ಕಡೆಗೇ ಇದ್ದವು.

ಟಿಪ್ಪುವಿಗೆ ಸದಾ ಅನ್ವೇಷಣಾ ಶೀಲ ಮನೋವೃತ್ತಿ ಮತ್ತು ಅದನ್ನು ಹಿಂಬಾಲಿಸುವ ಛಲ ಇತ್ತು. ಇದು ಅವನ ಹೊಸ ಆಡಳಿತ ಮತ್ತು ಕೃಷಿ, ವಾಣಿಜ್ಯ ಸುಧಾರಣೆಗೆ ಕಾರಣವಾಯಿತು. ರಾಜ್ಯದ ಆಡಳಿತವನ್ನು ಹೊಸ ಮಾದರಿಯಲ್ಲಿ ಪುನರಚಿಸಿದ. ಕೃಷಿ, ನೀರಾವರಿ ಮತ್ತು ಸಾರಿಗೆ ಅಭಿವೃದ್ಧಿ ನಡೆಸಲು ಮಹತ್ವದ ಕಾರ್ಯಕ್ರಮ ರೂಪಿಸಿದ. ಸೈನ್ಯವನ್ನು ಆಧುನಿಕ ವಿಧಾನಗಳಿಂದ ಸಜ್ಜುಗೊಳಿಸಿದ. ಭೂಕಂದಾಯ ನಿಷ್ಕರ್ಷೆ ಮಾಡಿದ. ಅವುಗಳನ್ನು ಕ್ಲುಪ್ತ ಕಾಲದಲ್ಲಿ ಸರ್ಕಾರಕ್ಕೆ ಸಲ್ಲುವಂತೆ ಮಾಡಿದ. ಕೆಳವರ್ಗದಲ್ಲಿ ಸ್ಥಳೀಯ ಭಾಷೆಗಳನ್ನು ಉಳಿಸಿಕೊಂಡು ಉನ್ನತ ವರ್ಗಗಳಲ್ಲಿ ಪರ್ಶಿಯನ್ ಭಾಷೆಯನ್ನು ಬಳಕೆಗೆ ತಂದನು. ಇದರಿಂದ ರಾಜ್ಯದಲ್ಲಿ ಬಳಕೆಯಲ್ಲಿದ್ದ ಭಾಷೆಗಳಲ್ಲಿ ಪರ್ಶಿಯನ್ ಶಬ್ದಗಳು ಸೇರಿದ್ದವು. ಟಿಪ್ಪು ಆಳ್ವಿಕೆಯಲ್ಲಿ ವಿವಿಧ ಶ್ರೇಣಿಯ ನಾಣ್ಯಗಳು ಚಲಾವಣೆಗೆ

ಬಂದವು. ಪ್ರತಿಯೊಂದು ನಾಣ್ಯದ ಮೇಲೆ ಅವುಗಳು ಜಾರಿಗೆ ಬಂದ ವರ್ಷವನ್ನು ನಮೂದಿಸುವುದನ್ನು ಜಾರಿಗೆ ತಂದನು. ಆಯುರ್ವೇದ ಮತ್ತು ಸಾಂಪ್ರದಾಯಿಕ ನಾಟಿ ವೈದ್ಯಕೀಯ ಪದ್ಧತಿಯನ್ನು ಸಂಯೋಜಿಸಿದ. ತನ್ನದೇ ವೈದ್ಯಕೀಯ ಪದ್ಧತಿಯನ್ನು ಜಾರಿಗೆ ತರಲು ಕ್ರಮ ಕೈಗೊಂಡ. ಹಲವಾರು ವೈದ್ಯಕೀಯ ಗ್ರಂಥಗಳನ್ನು ಕಲೆ ಹಾಕಿದ. ಮುಫಾರಡತ್ ತಿಬ್ಬಿ, ಜಹರೂನ ನಾ ಟುಹಾವಾ ಮತ್ತು ಮುಹಾಮ್ಮದಿಯ ಗ್ರಂಥಗಳು ಉತ್ತಮ ಉದಾಹರಣೆಗಳಾಗಿವೆ. ಟಿಪ್ಪು ಬ್ರಿಟಿಷ್ ವೈದ್ಯಕೀಯ ಪದ್ಧತಿಯನ್ನು ಸಂಶಯದಿಂದ ನೋಡಿದ. ಆದರೆ ಟಿಪ್ಪುವಿನ ಉತ್ತಮ ವೈದ್ಯಕೀಯ ಯೋಜನೆ ಎಡವಿ ಬಿತ್ತು. ಇದಕ್ಕೆ ಕಾರಣ ವೈದ್ಯಕೀಯ ಪದ್ಧತಿಯಲ್ಲಿ ಚಾಲ್ತಿಯಲ್ಲಿದ್ದ ಸಂಸ್ಕೃತ ಮತ್ತು ಸ್ಥಳೀಯ ಶಬ್ದಗಳ ಬದಲಾಗಿ ಅಗತ್ಯಕ್ಕಿಂತ ಹೆಚ್ಚು ಪರ್ಶಿಯನ್ ಮತ್ತು ಅರೇಬಿಕ್ ಭಾಷೆ ಅಳವಡಿಸಿಕೊಂಡಿದ್ದು.[೧೧]

ಟಿಪ್ಪುವಿನ ರಾಜ್ಯಾಡಳಿತವು ಎಷ್ಟು ಪ್ರಗತಿಪರವಾಗಿತ್ತೆಂದರೆ ಅದು ತನ್ನ ಕಾಲಕ್ಕಿಂತ ಬಹಳ ಮುಂದಿನದಾಗಿತ್ತು. ಅವನು ಕೈಗೊಂಡ ಆರ್ಥಿಕ ಪ್ರಯೋಗಗಳು, ವ್ಯಾಪಾರ–ವಾಣಿಜ್ಯದ ಅಭಿವೃದ್ಧಿ, ಸಾಗರೋತ್ತರ ವ್ಯಾಪಾರ, ಭಾರೀ ಕೈಗಾರಿಕಾ ಯೋಜನೆಗಳು, ಬಲವಾದ ನೌಕಾದಳ ಕಟ್ಟಲು ಮಾಡಿದ ಪ್ರಯತ್ನಗಳು, ರಾಕೆಟುಗಳ ಉಡಾವಣೆ, ಕಾವೇರಿ ನದಿಗೆ ಅಡ್ಡಲಾಗಿ ಒಂದು ಅಣೆಕಟ್ಟನ್ನು ನಿರ್ಮಿಸಲು ಆಲೋಚಿಸಿದ್ದು, ಶ್ರೀರಂಗಪಟ್ಟಣದಲ್ಲಿ ಒಂದು ವಿಶ್ವವಿದ್ಯಾಲಯ ಸ್ಥಾಪಿಸಲು ದೂರಾಲೋಚನೆ ಮಾಡಿದ್ದು ಇವೆಲ್ಲ ಅವನ ಪ್ರಗತಿಪರ ಚಿಂತನೆಗೆ ಸಾಕ್ಷಿಯಾಗಿವೆ. ಹೊಸ ನೌಕಾಪಡೆ ರಚನೆ, ನಾಣ್ಯಗಳನ್ನು ಟಂಕಿಸಿದುದು, ಪಂಚಾಂಗದ ಪರಿಷ್ಕರಣೆ, ಹೊಸ ಅಳತೆ ಮತ್ತು ತೂಕದ ಮಾಪನ ರೂಪಿಸಿದ್ದು, ಸಹಕಾರಿ ಬ್ಯಾಂಕ್‌ಗಳ ಪ್ರಯೋಗ, ನ್ಯಾಯ ವಿತರಣೆಯಲ್ಲಿ ಹೊಸ ಬಗೆಯ ನಿಯಮಾವಳಿ ಜಾರಿಗೆ ತಂದುದು. ಸ್ಥಳನಾಮಗಳ ಬದಲಾವಣೆ– ಇವೆಲ್ಲ ಟಿಪ್ಪುವಿನ ರಚನಾತ್ಮಕ ಕೌಶಲ್ಯ ಮತ್ತು ಆಧುನಿಕ ವ್ಯವಸ್ಥೆಗೆ ತೋರಿದ ಉತ್ಸಾಹವನ್ನು ತೋರಿಸುತ್ತವೆ.[೮೨]

ಹೈದರಾಲಿ ತನ್ನ ಆಡಳಿತದಲ್ಲಿ ಮೊಗಲ್ ಸಂಸ್ಥೆಗಳನ್ನು ಮುಂದುವರಿಸಿ ಸ್ಥಳೀಯ ಸಂಪ್ರದಾಯ ಮತ್ತು ಆಚಾರ ವಿಚಾರಗಳನ್ನು ಗೌರವಿಸಿ ಒಡೆಯರ್ ವಂಶದ ರಾಜನ ರಕ್ಷಕನೆಂದೇ ತನ್ನನ್ನು ಪ್ರದರ್ಶಿಸಿಕೊಂಡು ಮೈಸೂರು ಸಂಸ್ಥಾನದ ಪ್ರಜೆಗಳ ಸ್ವಾಮಿನಿಷ್ಠೆಯನ್ನು ಪಡೆದನು. ನಿಜವಾಗಿ ಹೇಳುವುದಾದರೆ ಹೈದರಾಲಿ ಆಡಳಿತದಲ್ಲಿ ಮೊಗಲ್ ಸಂಸ್ಥೆಗಳನ್ನು ಮತ್ತು ಪದ್ಧತಿಗಳನ್ನು ಅನುಸರಿಸಿದನು. ಆದರೂ ಸೈನಿಕ ಆಡಳಿತದಲ್ಲಿ ಆಧುನೀಕರಣ ಪ್ರಕ್ರಿಯೆ ಆರಂಭಿಸಿದ. ಇದು ಟಿಪ್ಪು ಕಾಲದಲ್ಲಿ ಅವನ ಪ್ರಭುತ್ವದ ಕ್ರೋಢೀಕರಣಕ್ಕೆ ಭದ್ರ ಬುನಾದಿಯಾಯಿತು. ಟಿಪ್ಪು ಸುಶಿಕ್ಷಿತನಾಗಿದ್ದು, ಇಸ್ಲಾಂ ಇತಿಹಾಸ ಮತ್ತು ಥಿಯೋಲಜಿಯಲ್ಲಿ ಪ್ರೌಢಿಮೆ ಹೊಂದಿದ್ದರಿಂದ

ತನ್ನ ಪ್ರಜೆಗಳ ಆಸಕ್ತಿಯನ್ನು ರಕ್ಷಿಸುವುದು ಅರಸನ ಮೂಲಭೂತ ಕರ್ತವ್ಯವೆಂದು ಭಾವಿಸಿದ್ದನು. ಬ್ರಿಟಿಷರ ವಿರುದ್ಧ ಹೋರಾಡುವುದು ಅವನ ಪ್ರಥಮ ಆದ್ಯತೆಯಾಗಿತ್ತು. ಈ ಕಾರ್ಯಕ್ಕೆ ತನ್ನ ಸಾಮ್ರಾಜ್ಯದ ಪ್ರೋತ್ಸಾಹ ಬಹುದೊಡ್ಡ ಕೊಡುಗೆ ಎಂದೂ ಭಾವಿಸಿದನು. ಮೈಸೂರು ಸಂಸ್ಥಾನದ ಸರ್ವತೋಮುಖ ಅಭಿವೃದ್ಧಿ ಅವನ ಕಾರ್ಯಯೋಜನೆಗಳಲ್ಲಿ ಪ್ರಮುಖವಾಗಿದ್ದವು.[೮೩] ತಾನು ರೂಪಿಸಿಕೊಂಡಿರುವ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಕೇವಲ ಮೊಗಲರು ಕಲ್ಪಿಸಿರುವ ಒಂದು ಹುದ್ದೆಯನ್ನು ಅಲಂಕರಿಸಿ ಅವರ ಸ್ವಾಮಿನಿಷ್ಠೆಯನ್ನು ತೋರಿದರೆ ಸಾಲದು ಮತ್ತು ಅದರಿಂದ ತನ್ನ ಪ್ರಭುತ್ವಕ್ಕೆ ಗೌರವ ಮನ್ನಣೆ ಸಿಗುವುದಿಲ್ಲ ಎಂಬುದೂ ಅರಿವಿತ್ತು. ಅವರಿಂದ ಸ್ವತಂತ್ರನಾಗಿ ತನ್ನ ಸಾರ್ವಭೌಮತ್ವವನ್ನು ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸಲು ಪ್ರಯತ್ನಿಸಿದ. ಇದಕ್ಕೆ ಪೂರಕವೆಂಬಂತೆ ಅವನು ಮೊಗಲರ ಬಿರುದುಗಳು ಮತ್ತು ಹೆಸರುಗಳನ್ನು ತನ್ನ ನಾಣ್ಯಗಳ ಮೇಲೆ ಮುದ್ರಿಸುವುದನ್ನು ನಿಲ್ಲಿಸಿದನು. ಮಾರ್ಕ್‌ವಿಲ್ಕ್ಸ್ ಹೇಳುವಂತೆ ಕ್ರಿ.ಶ.೧೭೮೬ರ ನಂತರ ವೈಯಕ್ತಿಕವಾಗಿ 'ಬಾದ್‌ಷಾಹ' ಎಂಬ ಬಿರುದು ಬಳಸುತ್ತಿದ್ದನು.[೮೪]

ಟಿಪ್ಪು ತನ್ನ ಸಾರ್ವಭೌಮತ್ವ ಪ್ರಸ್ತುತ ಪಡಿಸುವಾಗ ಎಲ್ಲಿಯೂ ಮೊಗಲ್ ಸಾಮ್ರಾಟರ ರಾಜಕೀಯ ಸಾರ್ವಭೌಮತ್ವದ ಮೆರಗು ಕಂಡು ಬರುವುದಿಲ್ಲ. ಎತ್ತರದ ಬಿರುದುಗಳಾದ ಬಾದ್‌ಷಾಹ ಅಥವಾ ಜಿಲ್–ಇ–ಇಲಾಹಿ ಬಿರುದುಗಳು ಮೊಗಲ್ ಸುಲ್ತಾನರಿಗೆ ಅಲಂಕೃತವಾಗಿದ್ದವು. ಅದಕ್ಕೆ ಟಿಪ್ಪು ಧಾರ್ಮಿಕ ರಣೋತ್ಸಾಹದ ಮೆರಗು ನೀಡಿದ್ದು ಅದು ಹದಿನೆಂಟನೇ ಶತಮಾನದ ಸಾಮ್ರಾಜ್ಯಶಾಹಿ ಮೊಗಲ್ ರಾಜ್ಯ ವ್ಯವಸ್ಥೆಯಲ್ಲಿ ಕಂಡುಬರುವುದಿಲ್ಲ. ಟಿಪ್ಪು ನಾಣ್ಯಗಳ ಮೇಲೆ ಒಂದೊಂದು ಹೆಸರನ್ನು ಅಚ್ಚು ಹಾಕಿಸಿದ್ದನು. ಸಾಮಾನ್ಯವಾಗಿ ಹೆಸರುಗಳು ಪ್ರವಾದಿ ಮಹಮದ್, ಖಲೀಫ್ ಮತ್ತು ನಕ್ಷತ್ರಗಳಿಗೆ ಸಂಬಂಧಿಸಿದ್ದವು.

ಟಿಪ್ಪು ತನ್ನ ಅಧಿಕಾರವನ್ನು ವೃದ್ಧಿಸಲು ಇಸ್ಲಾಂಗೆ ಒಂದು ಮುಖ್ಯವಾದ ಸೈದ್ಧಾಂತಿಕ ಆಸರೆ ಒದಗಿಸಿದನು. ಇದು ಹೈದರ್‌ನಿಗೆ ಇರಲಿಲ್ಲವಾದರೂ ಟಿಪ್ಪು ಚಾಣಾಕ್ಷತನದಿಂದ ಪ್ರಯೋಗಿಸಿದನು. ಇಲ್ಲಿಯವರೆಗೆ ಮೈಸೂರು ಸಂಸ್ಥಾನದ ಮುಸಲ್ಮಾನ ಪ್ರಜೆಗಳು, ಅಧಿಕಾರಿಗಳು, ಸೈನಿಕರು ಮೊಗಲ್ ಸಾಮ್ರಾಟರಿಗೆ ಸ್ವಾಮಿನಿಷ್ಠೆ ತೋರಿಸಿ, ಅಧಿಕಾರ, ಬಿರುದುಗಳು, ಸ್ಥಾನಮಾನಗಳನ್ನು ಪಡೆಯುತ್ತಿದ್ದರು. ಅಂಥವರ ನಿಲುವುಗಳನ್ನು ಬದಲಿಸಿ ಮೊಗಲ್ ಸಾಮ್ರಾಟರಿಗೆ ತೋರಿಸುತ್ತಿದ್ದ ಸ್ವಾಮಿ ನಿಷ್ಠೆಯನ್ನು ತನ್ನ ಕಡೆಗೆ ಒಲಿಸಿಕೊಳ್ಳಬೇಕೆಂದು ತೀರ್ಮಾನಿಸಿ ತಾನು ಮೊಗಲರಂತೆ ಇಸ್ಲಾಂ ಧರ್ಮದ ಅನುಯಾಯಿ ಮತ್ತು ಧರ್ಮಯುದ್ಧ ಮುಖಂಡನೆಂದು ಕೃತವಾಗಿ ತೋರ್ಪಡಿಸಿ ಅವರಿಂದ ಮೆಚ್ಚುಗೆ ಪಡೆಯಬೇಕೆಂದು ತವಕಿಸಿದನು. ಇಸ್ಲಾಂ ಧರ್ಮಕ್ಕೆ ಹೆಚ್ಚು ಗೌರವ ತೋರಿಸಿ ಅದರ ಅನುಯಾಯಿಗಳನ್ನು ಧರ್ಮಯುದ್ಧಕ್ಕೆ ಸಜ್ಜುಗೊಳಿಸಿದನು.

ಟಿಪ್ಪು ಬ್ರಿಟಿಷರ ವಿರುದ್ಧ ಈ ಧರ್ಮಯುದ್ಧ ಘೋಷಿಸಿದ್ದೂ ಮಾತ್ರವಲ್ಲ ಬೇರೆ ಬೇರೆ ಭಾಗಗಳಿಗೆ ತನ್ನ ರಾಯಭಾರಿಗಳನ್ನು ಕಳುಹಿಸಿ ಧರ್ಮಯುದ್ಧದ ಅನಿವಾರ್ಯತೆಯನ್ನು ಪ್ರಚಾರ ಮಾಡಿದನು. ಆಟೋಮನ್ ಸುಲ್ತಾನನ ಆಸ್ಥಾನಕ್ಕೆ ತನ್ನ ರಾಯಭಾರಿಯನ್ನು ಕಳುಹಿಸಿ ಭಾರತದಲ್ಲಿ ಬ್ರಿಟಿಷರ ಆಕ್ರಮಣ ನೀತಿಯ ನಿಜಸ್ವರೂಪ ತಿಳಿಸಿದನು. ಬ್ರಿಟಿಷರು ಬಂಗಾಳ, ಕರ್ನಾಟಕ್, ಸೂರತ್, ಗುಜರಾತ್ ಇತ್ಯಾದಿ ಪ್ರಾಂತಗಳನ್ನು ಆಕ್ರಮಿಸಿ ಒಟ್ಟು ಇಪ್ಪತ್ತಾರು ಕೋಟಿ ರೂಪಾಯಿಗಳನ್ನು ಕೊಳ್ಳೆ ಹೊಡೆದರು ಎಂದು ವಿವರಿಸಿದ. ಅನೇಕ ಮುಸ್ಲಿಂ ಜನರನ್ನು ಬ್ರಿಟಿಷರು ಅವರ ಧರ್ಮಕ್ಕೆ ಮತಾಂತರಿಸಿದರು. ಇಸ್ಲಾಂ ಧರ್ಮದ ಮಸೀದಿ, ಗುಮ್ಮಟಗಳನ್ನು ನಾಶಗೊಳಿಸಿದರು. ಅವುಗಳ ಜಾಗದಲ್ಲಿ ತಮ್ಮ ಅನುಯಾಯಿಗಳಿಗೆ ಪ್ರಾರ್ಥನ ಸ್ಥಳಗಳಾಗಿ ಇಗರ್ಜಿಗಳನ್ನು ಕಟ್ಟಿಸಿದರು. ಇಂಥ ಧಾರ್ಮಿಕ ಹೇಯ ಕೃತ್ಯ ಎಸಗಿದ ಬ್ರಿಟಿಷರ ವಿರುದ್ಧ ಅನಿವಾರ್ಯವಾಗಿ ಇಸ್ಲಾಂ ಧರ್ಮದ ಅನುಯಾಯಿಗಳು ಧರ್ಮಯುದ್ಧ ಸಾರಬೇಕು ಎಂದು ಪ್ರಚಾರ ಮಾಡಿದ.

ನಾಸ್ತಿಕರಾದ ಬ್ರಿಟಿಷರು ಇಸ್ಲಾಂ ಧರ್ಮ ಮತ್ತು ಸಂಸ್ಥೆಗಳನ್ನು ವಿರೋಧಿಸಿದರು. ಇದನ್ನು ತಿಳಿದು ಟಿಪ್ಪು ಧರ್ಮಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಿದ. ಧರ್ಮದ ಹೆಸರಿನಲ್ಲಿ ಮತಾಂಧತೆ ಮಾಡಿರುವುದನ್ನು, ಟಿಪ್ಪುವಿನ ಧಾರ್ಮಿಕ ಧೋರಣೆಯನ್ನು ಬುಕಾನನ್ ಮತ್ತು ವಿಲ್ಕ್ಸ್ ಖಂಡಿಸಿದ್ದಾರೆ.[೮೫]

ಟಿಪ್ಪು ತೆಗೆದುಕೊಂಡ ಧಾರ್ಮಿಕ ಧೋರಣೆಗಳಲ್ಲಿ ಕೆಲವು ಪ್ರಶಂಸನೀಯ. ಹೈದರಾಲಿಯಂತೆ ಹಿಂದೂ ಪ್ರಜೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸರಕಾರದ ಚಟುವಟಿಕೆಗಳಿಗೆ ತನ್ನ ಆಡಳಿತದಲ್ಲಿ ನೇಮಿಸಿದ. ದಿವಾನ್ ಪೂರ್ಣಯ್ಯ ಟಿಪ್ಪುವಿನ ಕೆಲವೇ ಪ್ರಮುಖ ಮಂತ್ರಿಗಳಲ್ಲಿ ಒಬ್ಬರಾಗಿದ್ದರು. ಹಿಂದೂ ಅಧಿಕಾರಿಗಳು ಟಿಪ್ಪುವಿನ ಆಡಳಿತದ ಉನ್ನತ ಹುದ್ದೆಯಲ್ಲಿದ್ದರು. ನಂಬಿಕಸ್ಥರಾಗಿ ಪ್ರಾಮಾಣಿಕರಾಗಿದ್ದರು.[೮೬] ಕಂದಾಯ ವಿಭಾಗದಲ್ಲಿ ಅನೇಕ ಬ್ರಾಹ್ಮಣ ಅಧಿಕಾರಿಗಳಿದ್ದರು. ಕನ್ನಡ ಭಾಷೆಯಾಡುವ ಹಿಂದೂಗಳನ್ನು ಖಜಾನೆಯು ಸೇರಿ ವಿವಿಧ ಸರಕಾರಿ ಇಲಾಖೆಗಳಲ್ಲಿ ಗುಮಾಸ್ತರಾಗಿ ನೇಮಿಸಿದ್ದನು. ಬ್ರಾಹ್ಮಣರಿಗೆ ಒಡೆಯರುಗಳ ಕಾಲದಲ್ಲಿ ಜಾರಿಯಲ್ಲಿದ್ದ ಭೂದಾನವನ್ನು ಟಿಪ್ಪು ಅನುಸರಿಸಿದ. ಸಂಸ್ಥಾನದಲ್ಲಿದ್ದ ಪುರೋಹಿತರು ಹಾಗೂ ಜ್ಯೋತಿಷಿಗಳ ಕಂದಾಯ ಮನ್ನಾ ಮಾಡಿದ. ತನ್ನ ಪ್ರಭುತ್ವವನ್ನು ಮೈಸೂರಿನಲ್ಲಿ ಸ್ಥಾಪಿಸಿದರೂ ಒಡೆಯರ್ ರಾಜಮನೆತನಕ್ಕೆ ಗೌರವ ನೀಡಿದ. ಅದನ್ನು ಕಾನೂನುಬದ್ಧವಾಗಿ ಮುಂದುವರಿಸಿದ.[೮೭]

ಟಿಪ್ಪುವಿನ ಆಡಳಿತ ನೀತಿಯು ರಾಜ್ಯದ ಅಭಿವೃದ್ಧಿ ಮತ್ತು ವಸಾಹತುಶಾಹಿಯ ದಮನಕ್ಕೆ ಬೇಕಾದ ಸಿದ್ಧತೆಗಳಿಗೆ ಅನುಗುಣವಾಗಿ ರೂಪಿತವಾಗಿತ್ತು. ಆಧುನಿಕ ವಿಚಾರಗಳಿಗೆ ಆಡಳಿತದಲ್ಲಿ

ಮನ್ನಣೆ ನೀಡಲಾಗಿತ್ತು. ಕೆಲವು ನಿಯಮಾವಳಿಗಳು ಭದ್ರತೆ ಮತ್ತು ರಕ್ಷಣೆ ದೃಷ್ಟಿಕೋನದಿಂದಲೇ ರೂಪಿತವಾಗಿದ್ದವು.

೩.೬. ಟಿಪ್ಪುವಿನ ಭಾಷಾನೀತಿ

ಹೈದರ್ ಮತ್ತು ಟಿಪ್ಪು ಅಧಿಕಾರಕ್ಕೆ ಬರುವ ಮೊದಲು ಮೈಸೂರು ರಾಜ್ಯವು ಭಾಷಿಕವಾಗಿ ತನ್ನದೇ ನೀತಿಯನ್ನು ಒಳಗೊಂಡಿತ್ತು. ಒಡೆಯರ್ ಮನೆತನದ ಆಳ್ವಿಕೆಯಲ್ಲಿ ಕನ್ನಡ, ಸಂಸ್ಕೃತ ಹಾಗೂ ಇಂಗ್ಲಿಷ್ ಭಾಷೆಗಳು ಶಿಕ್ಷಣ ಕ್ಷೇತ್ರದಲ್ಲಿ ಬಳಕೆಯಲ್ಲಿದ್ದವು. ಮೂಲತಃ ಕನ್ನಡ ಮತ್ತು ಸಂಸ್ಕೃತ ಭಾಷೆಗಳು ಪ್ರಧಾನವಾಗಿ ಚಾಲ್ತಿಯಲ್ಲಿದ್ದವು. ಕನ್ನಡವು ಬಹುಸಂಖ್ಯಾತ ಭಾಷೆಯೂ ಮಾತೃಭಾಷೆಯೂ ಆಗಿತ್ತು. ಈ ಭಾಷೆಗಳಲ್ಲಿ ಪಾಂಡಿತ್ಯ ಸಂಪಾದಿಸಿದ ಜ್ಞಾನಿಗಳಿಗೆ ಅರಸರು ಉದಾರ ಪ್ರೋತ್ಸಾಹ ನೀಡಿದರು. ಉನ್ನತ ಗೌರವ ನೀಡುತ್ತಿದ್ದರು. ಸಂಸ್ಕೃತವು ದೇವಭಾಷೆ ಎಂಬ ಪರಿಕಲ್ಪನೆಗೆ ಸೀಮಿತಗೊಂಡು ಉನ್ನತ ವರ್ಗದವರಿಗೆ ಮಾತ್ರ ಈ ಭಾಷೆಯನ್ನು ಕಲಿಸುವ, ಉಚ್ಚರಿಸುವ ಸ್ವಾತಂತ್ರ್ಯವಿತ್ತು. ಕೆಳಸ್ತರದ ಜನರಿಗೆ ಸಂಸ್ಕೃತ ನಿಲುಕದ ಭಾಷೆಯಾಗಿತ್ತು. ಭಾರತದಲ್ಲಿ ಆರ್ಯರ ಕಾಲದಿಂದಲೂ ಈ ಭಾಷೆಯು ಹುಟ್ಟಿ ಪುರೋಹಿತಶಾಹಿ ವರ್ಗಕ್ಕೆ ಸೀಮಿತಗೊಂಡಿತು. ಈ ಭಾಷೆಯ ಅಪಾರ ಸಾಹಿತ್ಯ ಸೃಷ್ಟಿಯಾದರೂ ಸಾರ್ವತ್ರೀಕರಣಗೊಳ್ಳಲಿಲ್ಲ. ಗುರುಕುಲ ಮಾದರಿಯ ಶಿಕ್ಷಣ ವ್ಯವಸ್ಥೆಯಲ್ಲಿ ಈ ಭಾಷೆ ತನ್ನ ಪ್ರಾಧಾನ್ಯತೆ ಉಳಿಸಿಕೊಂಡಿತು. ಮೈಸೂರು ರಾಜ್ಯದಲ್ಲಿ ಅರಸರು ಸಂಸ್ಕೃತ ಭಾಷೆಯಲ್ಲಿ ಹೆಚ್ಚು ಜ್ಞಾನಪಡೆದ ವಿದ್ವನ್ಮಣಿಗಳಿಗೆ ರಾಜಸ್ಥಾನದಲ್ಲಿ ಉನ್ನತ ಗೌರವ ಮತ್ತು ಸ್ಥಾನಮಾನ ಕಲ್ಪಿಸಿದರು. ಅದರಂತೆ ಕನ್ನಡ ಭಾಷೆಯು ಪ್ರಾಶಸ್ತ್ಯ ಪಡೆದಿತ್ತು. ಶಿಕ್ಷಣ ಕ್ಷೇತ್ರದಲ್ಲಿಯೂ ಪ್ರಥಮ ಆದ್ಯತೆ ಪಡೆದಿತ್ತು. ಸಮಸ್ತ ಜ್ಞಾನವನ್ನು ಪ್ರಸಾರ ಮಾಡುವ ಮಾಧ್ಯಮವಾಗಿತ್ತು. ಅಪಾರ ಸಾಹಿತ್ಯವೂ ಸೃಷ್ಟಿಯಾಯಿತು. ಆಡಳಿತದಲ್ಲಿಯೂ ಬಳಕೆಯಾಯಿತು.

ಹೈದರ್ ಮತ್ತು ಟಿಪ್ಪು ಮೈಸೂರು ಸಂಸ್ಥಾನದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಪರ್ಶಿಯನ್ ಭಾಷೆಯು ರಾಜ್ಯದ ಅಧಿಕೃತ ಭಾಷೆಯಾಯಿತು. ಸಮಸ್ತ ಜ್ಞಾನ ಪ್ರಸಾರ ಮಾಡುವ ಶಿಕ್ಷಣ ಮಾಧ್ಯಮವಾಗಿ ಬೆಳೆಯಿತು. ಅವಿದ್ಯಾವಂತನಾಗಿದ್ದ ಹೈದರ್ ಕೂಡ ಪರ್ಶಿಯನ್ ಮತ್ತು ಅರೆಬಿಕ್ ವಿದ್ವಾಂಸರನ್ನು ಪೋಷಿಸಿದನು. ವಿದ್ಯಾವಂತನಾಗಿದ್ದ ಟಿಪ್ಪುವು ಈ ಭಾಷೆಗಳು ಸಮೃದ್ಧವಾಗಿ ಬೆಳೆಯಲು ಪ್ರೋತ್ಸಾಹ ನೀಡಿದನು. ಅವನ ಆಸ್ಥಾನವು ಸಾಹಿತ್ಯ ರಚನೆಯಲ್ಲಿ ಅಕ್ಬರನ ಆಳ್ವಿಕೆಯ ದಿನಗಳ ವೈಭವವನ್ನು ಮರುಕಳಿಸುವಂತೆ ಮಾಡಿತು. ಟಿಪ್ಪು ಸದಾ ನೆರೆಹೊರೆಯವರು ಮತ್ತು ಬ್ರಿಟಿಷ್ ವಸಾಹತುಶಾಹಿ ಶಕ್ತಿಗಳೊಂದಿಗೆ ಹೋರಾಡುತ್ತಾ ವಿದ್ವೇಷವನ್ನೇ ಎದುರಿಸಬೇಕಾದರೂ ಸಾಹಿತ್ಯ ಚಟುವಟಿಕೆಗಳನ್ನು ನಿರ್ಲಕ್ಷಿಸಲಿಲ್ಲ. ತನ್ನ ಸುತ್ತಮುತ್ತ ಕವಿಗಳು,

ವಿದ್ವಾಂಸರ ಸಮೂಹವನ್ನು ಹೊಂದಿದ್ದನು. ತಾನೇ ಬರವಣಿಗೆಯಲ್ಲಿ ತೊಡಗಿದ್ದನು. ಸ್ವಂತ ಗ್ರಂಥ ಭಂಡಾರ ಹೊಂದಿದ್ದನು. ಭಾರತದಲ್ಲಿ ಮೊದಲ ಬಾರಿಗೆ ಉರ್ದು ಪತ್ರಿಕೆಯನ್ನು(ವೃತ್ತ) ಪ್ರಾರಂಭಿಸಿದ ಕೀರ್ತಿ ಟಿಪ್ಪುವಿನದೆ.[೮೮]

ಟಿಪ್ಪುವಿನ ಗ್ರಂಥಭಂಡಾರದ ಬಗ್ಗೆ ತಿಳಿಯಬೇಕಾದರೆ ಕ್ರಿ.ಶ.೧೮೦೯ರಲ್ಲಿ ಲಂಡನ್‌ನಲ್ಲಿ ಪ್ರಕಟವಾದ "ಮೈಸೂರಿನ ದಿ.ಟಿಪ್ಪು ಸುಲ್ತಾನನ ಪ್ರಾಚ್ಯ ಗ್ರಂಥ ಸಂಗ್ರಹದ ವರ್ಣನಾತ್ಮಕ ಸೂಚಿ"(Descriptive catalogue of the oriental library of the Late Tipoo sultan of Mysore) ಎಂಬ ಕೃತಿಯನ್ನು ನೋಡಬೇಕು. ಇದರ ಕರ್ತೃ ಮೇಜರ್ ಚಾರಲ್ಸ್ ಸ್ಟೆವರ್ಟ್ ಇದರಲ್ಲಿ ಅರಾಬಿಕ್, ಪರ್ಷಿಯನ್, ಉರ್ದು, ದಖ್ಖಿನಿ, ತುರ್ಕಿ ಮತ್ತು ಜತಾರಿ ಭಾಷೆಗಳಲ್ಲಿನ ೧೦೯೦ ಹಸ್ತಪ್ರತಿಗಳನ್ನು ಪಟ್ಟಿ ಮಾಡಲಾಗಿದೆ. ಟಿಪ್ಪುವಿನ ಗ್ರಂಥಭಂಡಾರವನ್ನು ಅವನ ಪತನದ ನಂತರ ಕ್ರಿ.ಶ.೧೮೦೦ರಲ್ಲಿ ಕಲ್ಕತ್ತಾದ ಪೋರ್ಟ್‌ವಿಲಿಯಂ ಕಾಲೇಜಿಗೆ ವರ್ಗಾಯಿಸಲಾಯಿತು. ಅಲ್ಲಿಂದ ಬ್ರಿಟಿಷರು ಇಂಗ್ಲೆಂಡಿಗೆ ಸಾಗಿಸಿದರು. ಈ ಗ್ರಂಥಾಲಯದಲ್ಲಿ ಖಗೋಳ ವಿಜ್ಞಾನ, ವೈದ್ಯಶಾಸ್ತ್ರ, ಅನುಭಾವ, ದೇವತಾಶಾಸ್ತ್ರ, ದರ್ಶನ, ಕಾವ್ಯ, ಕಥೆ, ಕಾದಂಬರಿ, ಪತ್ರಗಳು, ಗಣಿತ, ವ್ಯಾಕರಣ, ನಿಘಂಟುಗಳು, ನ್ಯಾಯಶಾಸ್ತ್ರ, ಕಾನೂನು, ಕುರಾನ್ ವ್ಯಾಖ್ಯಾನಗಳು ಹಾಗೂ ಉರ್ದು, ಪರ್ಶಿಯನ್, ತುರ್ಕಿ ಭಾಷೆಯ ಕೃತಿಗಳಿದ್ದವು. ಟಿಪ್ಪು ತನ್ನ ಹದಿನೇಳು ವರ್ಷಗಳ ಅಲ್ಪ ಆಡಳಿತದ ಅವಧಿಯಲ್ಲಿ ೪೫ ಗ್ರಂಥಗಳನ್ನು ಬರೆಸಿದನು. ಅದರಲ್ಲಿ ಪ್ರಮುಖವಾದವು ಪತುಲ್‌ಮುಜಾಹಿದೀನ್, ಮುಫ್ರಾಹ್-ಅಲ್-ಖುಲಾಬ್, ಲಾಲ್-ಓ-ಗೋಹರ್, ಖತ್ತೆ ನಸ್ತಿಲಿಕ್, ಖುಲಾಸ್-ಎ-ಸುಲ್ತಾನೀ, ಜವಹರ್-ಉಲ್-ಕುರಾನ್, ಅಜ್ಬಬ್-ಎ-ಸುಲ್ತಾನೀ, ವಾಜ್-ಉಲ್-ಮುಜಾಹಿದ್ದೀನ್, ಜಾದ್-ಉಲ್ ಮುಜಾಹಿದೀನ್, ಉರುಸ್-ಎ-ಇರ್ಫಾನ್, ಹುಕುಂ-ನಾಮಾ-ಎ-ಜಾಸೂಸನ್, ಖಸ್ಸಾಎ-ದರ್‌ಬಕ್ತ, ಹುಕುಂನಾಮಾ, ತೋಷಕ್‌ಖಾನಾ, ಅಸ್ಲಾಹ್ ಖಾನಾ, ತೋಪ್‌ಖಾನಾ, ಅಸ್ಲಾಹ್‌ಖಾನಾ, ಖಲಾಬಂದಿ ಇತ್ಯಾದಿ.

ಪತುಲ್ ಮುಜಾಹಿದೀನ್ ಎನ್ನುವುದು ಟಿಪ್ಪು ಆಸ್ಥಾನಿಕನಾಗಿದ್ದ ಮೀರ್ ಜೈನುಲ್ ಅಬೀದೀನ್ ಶರಾಸ್ತ್ರಿಗೆ ಕ್ರಿ.ಶ.೧೭೮೩ರಲ್ಲಿ ಹೇಳಿ ಬರೆಸಿದ ಕೃತಿ. ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಈ ಸಮಗ್ರ ಕೃತಿಯು ಮಿಲಿಟರಿ ಆಡಳಿತವನ್ನು ಕುರಿತದ್ದಾಗಿದೆ. ಮೊದಲ ಅಧ್ಯಾಯವು ರಕ್ಷಣೆ, ಅಪರಾಧಗಳು, ವಂಚನೆ, ಒಳಸಂಚು, ಸ್ವಾತಂತ್ರ್ಯದ ಮೌಲ್ಯ, ಗುಲಾಮಗಿರಿ, ಶರಣಾಗತಿಯಿಂದ ಬರುವ ಫಲಗಳು ಇತ್ಯಾದಿಗಳನ್ನು ಚರ್ಚಿಸುತ್ತದೆ. ಮೂರನೇ ಅಧ್ಯಾಯವು ಪ್ರಧಾನವಾಗಿದ್ದು ಮಿಲಿಟರಿ ವ್ಯೂಹ ರಚನೆ, ಯುದ್ಧ ವಿಧಾನಗಳು, ಮಿಂಚಿನ ದಾಳಿಗಳು, ವಿವಿಧ ಯುದ್ಧಾಸ್ತ್ರಗಳ ಬಳಕೆ, ಗೆರಿಲ್ಲಾ ಯುದ್ಧತಂತ್ರ ವಿಚಾರಗಳನ್ನು ಚರ್ಚಿಸುತ್ತದೆ. ಉಳಿದ ಅಧ್ಯಾಯಗಳಲ್ಲಿ ನಿಷ್ಠೆ, ಪ್ರಾಮಾಣಿಕತೆ, ಸೈನಿಕ ಶಿಸ್ತು, ಸೇನಾ ಕವಾಯಿತು, ವ್ಯಾಯಾಮಗಳು,

ಸಮವಸ್ತ್ರ, ಶಿಸ್ತುಪಾಲನೆ, ಸೈನಿಕರ ನೇಮಕಾತಿ, ಬಡ್ತಿ, ವೃತ್ತಿ ಅವಕಾಶಗಳು, ಕ್ಷಪಣಿ, ನೌಕಾದಳ ಇತ್ಯಾದಿ ವಿಚಾರಗಳನ್ನು ಸಮಗ್ರವಾಗಿ ಚರ್ಚಿಸುತ್ತದೆ. ಟಿಪ್ಪು ಕಾಲದ ಮಿಲಿಟರಿ ವ್ಯವಸ್ಥೆ ಮತ್ತು ಆಡಳಿತವನ್ನು ತಿಳಿಯಲು ಈ ಕೃತಿ ಉಪಯುಕ್ತವೂ, ಸ್ವಾರಸ್ಯಕರವೂ ಆಗಿದೆ.

ಟಿಪ್ಪುವು ಬಹುಮುಖ ಪ್ರತಿಭೆಯನ್ನು ಹೊಂದಿದ್ದು, ಸಮಾಜದ ಎಲ್ಲ ವಲಯಗಳ ಬಗ್ಗೆಯೂ ಗ್ರಂಥಗಳನ್ನು ರಚನೆ ಮಾಡಿಸಿದನು. ಅವು ಹೆಚ್ಚು ಪರ್ಶಿಯನ್ ಭಾಷೆಯಲ್ಲಿದ್ದವು. ಹಸನ್ ಅಲಿ ಇಜ್ಜತ್ ರಚಿಸಿದ ಮಫ್ರಾಹ್–ಉಲ್–ಖಲುಖ್(ಮಫ್ರಾಹ್) ಎಂಬ ಕೃತಿ ಸಂಗೀತ ಕಲೆಯ ಹುಟ್ಟು ಮತ್ತು ಬೆಳವಣಿಗೆಯನ್ನು ತಿಳಿಸುತ್ತದೆ. ಹಿಂದೂ ಗಾಯನ ಪರಂಪರೆಯನ್ನು ಆಧಾರವಾಗಿಟ್ಟುಕೊಂಡು ಬರೆಯಲಾಗಿದೆ. ಭಕ್ತಿಸಂಗೀತ ಮತ್ತು ದೇವತಾರಾಧನೆಯ ಬಗ್ಗೆಯೂ ಚರ್ಚಿಸಿದೆ. ಟಿಪ್ಪು ಸಂಗೀತದ ಬಗ್ಗೆ ಹೊಂದಿದ್ದ ಆಸಕ್ತಿಯನ್ನು ತೋರಿಸುತ್ತದೆ.

ಟಿಪ್ಪು ಅಧಿಕಾರಕ್ಕೆ ಬಂದಾಗ ಉರ್ದು ಭಾಷೆಯ ಉನ್ನತಿಗೆ ಪ್ರೋತ್ಸಾಹ ನೀಡಿದ. ಅವನು ತನ್ನ ರಾಜಧಾನಿ ಶ್ರೀರಂಗಪಟ್ಟಣದಲ್ಲಿ ಒಂದು ವಿಶ್ವವಿದ್ಯಾಲಯ ಸ್ಥಾಪಿಸಿ ಅದಕ್ಕೆ ಜಮಿ–ಉಲ್–ಉಮುರ್ ಎಂದು ಹೆಸರಿಟ್ಟನು. ಉರ್ದು ಕವಿಗಳು, ವಿದ್ವಾಂಸರು ಬಂದು ತನ್ನ ರಾಜಧಾನಿಯಲ್ಲಿ ನೆಲೆಸುವಂತೆ ಆಹ್ವಾನಿಸಿದನು. ಹೈದರ್ ನಾಮಕೃತಿಯು ಟಿಪ್ಪು ಕಾಲದ ಉರ್ದು ಭಾಷಾ ಬೆಳವಣಿಗೆ ಬಗೆಗೆ ತಿಳಿಯಲು ಉಪಯುಕ್ತವಾಗಿದೆ. ಹುಸೇನ್ ಕಾದಿರ್ ಉರ್ದು ಭಾಷೆಯಲ್ಲಿ ಅಪಾರ ಪಾಂಡಿತ್ಯ ಪಡೆದಿದ್ದು ಹಲವು ಕವಿತೆಗಳನ್ನು ರಚಿಸಿದನು. ಜೈನ್–ಉಲ್–ಅಬೀದೀನ್ ಶೂಸ್ತ್ರಿ ಕೂಡ ಪರ್ಶಿಯನ್ ಜೊತೆಗೆ ಉರ್ದು ಭಾಷೆಯಲ್ಲೂ ಜ್ಞಾನ ಸಂಪಾದಿಸಿದ್ದ. ಈ ಭಾಷೆಯಲ್ಲಿ ಯೋಧಗೀತೆಗಳನ್ನು ರಚಿಸಿದ. ರಸನ್ ಅಲಿ ಇಜ್ಜತ್ ಮುಫ್ರಾ–ಅಲ್–ಕಲಾಜ್ ಎಂಬ ಸಂಗೀತ ಕುರಿತಾದ ಗ್ರಂಥರಚಿಸಿದ. ತರಬ್ ಎಂಬುವನು ಪತ್‌ನಾಮ ಎಂಬ ಐತಿಹಾಸಿಕ ಕೃತಿ ರಚಿಸಿದ. ಮೌಲ್ವಿ ಮುಹಮದ್ ಇಶಾಕ್ ನೀತಿಶಾಸ್ತ್ರ ಕುರಿತು ಪರ್ಶಿಯನ್ ಭಾಷೆಯ ಕೃತಿಯನ್ನು ರಿಯಾಜ್–ಉಲ್–ಅದಿಫಿನ್ ಎಂಬ ಹೆಸರಿನಲ್ಲಿ ಉರ್ದುವಿಗೆ ಭಾಷಾಂತರಿಸಿದ. ಮುಹಮದ್ ಅಲಿ ಮೇಕ್ರಿ ಖನಾಜಾದ್, ಅಬ್ದುಲ್ ಖಾತಿಕ್ ಜಾತಲ್ ಮೊದಲಾದ ಹಲವು ಉರ್ದು ಕವಿಗಳು ಟಿಪ್ಪು ಆಸ್ಥಾನದಲ್ಲಿ ಆಶ್ರಯ ಪಡೆದಿದ್ದರು.

ಟಿಪ್ಪುವಿನ ಆಸ್ಥಾನದಲ್ಲಿ ಇನ್ನೂ ಕೆಲವು ಉರ್ದು ಮತ್ತು ಪರ್ಶಿಯನ್ ಎರಡೂ ಭಾಷೆಗಳನ್ನು ಅರಿತಿದ್ದ ವಿದ್ವಾಂಸರಿದ್ದರು. ರಾಯಚೂರಿನ ಶಹಾಮುಹಮ್ಮದ್ ಹುಸೇನ್ ಒಬ್ಬ ಸೂಫಿಸಂತ. ಅವನನ್ನು ಶ್ರೀರಂಗಪಟ್ಟಣಕ್ಕೆ ಆಹ್ವಾನಿಸಲಾಗಿತ್ತು. ಅವನು ಉರ್ದು ಮತ್ತು ಪರ್ಶಿಯನ್ ಎರಡರಲ್ಲೂ ಬರೆದನು. ಅವುಗಳಲ್ಲಿ ಕೆಲವು ಇಂಕ್ ಬಾದ್–ಉಲ್–ತಲಿಬಿನ್, ರಿಸಾಲ್–ಎ–ಕದಾರಿಯಾ, ಅಖೈದ್–ಎ–ಸೊಫಿಯಾ, ಇಸಾರ್–ಎ–ತಾಹಿದ್, ರಿಸಾಲ್ಯೆ–ಎ–ಐನಿಯತ್–ಓ–ಪೈರಿ–ಯಾತ್, ಮಹಾದ್–ಎ–ಮೀರಾನ್, ದೀವಾನ್–ಎ–ಶಾಹಮೀರ್, ರಿಸಾಲ್–

ಎ–ಸೂರಿಯಾ, ಜೆಯಾ–ಉಲ್–ಉಯೂನ್ ಇತ್ಯಾದಿಗಳು. ಸೈಯದ್ ಶಹಾ ನೂರುಲ್ಲಾಕಾದ್ರಿ[೬೧] ಮತ್ತೊಬ್ಬ ಪ್ರಸಿದ್ಧ ವಿದ್ವಾಂಸನಾಗಿದ್ದು, ತಜ್ವಲಿ–ಎ–ಅನ್ವರ್ ಎಂಬ ಹೆಸರಾಂತ ಕೃತಿ ರಚಿಸಿದ. ಟಿಪ್ಪು ಉರ್ದು ಮತ್ತು ಪರ್ಶಿಯನ್ ಭಾಷಾ ಸಾಹಿತ್ಯ ಬೆಳವಣಿಗೆಗೆ ನೀಡಿದ ಪ್ರೋತ್ಸಾಹದಿಂದ ಇಂಥ ಹಲವು ಕವಿಗಳು, ವಿದ್ವಾಂಸರು ಮೈಸೂರು ರಾಜ್ಯದಲ್ಲಿ ನೆಲೆಸಿ ಸಾಹಿತ್ಯ ಕೃಷಿ ಮಾಡಿದರು. ಟಿಪ್ಪುವಿನ ಆಡಳಿತ ಭಾಷೆಯಾಗಿಯೂ ಕೂಡ ಪರ್ಶಿಯನ್ ಬಳಕೆಯಾಯಿತು. ಹಲವು ಕಾನೂನು ಕಾಯಿದೆಗಳು ಪರ್ಶಿಯನ್ ಭಾಷೆಯಲ್ಲೇ ರೂಪಿತವಾದವು. ಉರ್ದು ಮತ್ತು ಪರ್ಶಿಯನ್ ಭಾಷೆಗಳ ಬಗ್ಗೆ ಅಪಾರ ಪ್ರೀತಿಯನ್ನು ಟಿಪ್ಪು ಹೊಂದಿದ್ದು ಈ ಭಾಷೆಗಳ ಸಮೃದ್ಧಿಗೂ ಕಾರಣವಾಯಿತು.

ಹೈದರ್ ಮತ್ತು ಟಿಪ್ಪುವಿನ ಆಳ್ವಿಕೆಯಲ್ಲಿ ಕನ್ನಡವೂ ಅಧಿಕೃತ ಭಾಷೆಯಾಗಿತ್ತು ಎಂಬುದಕ್ಕೆ ನಿದರ್ಶನಗಳಿವೆ. ಹೈದರನು ತನ್ನ ಆಡಳಿತ ಕ್ರಮದಲ್ಲಿ ಹಿಂದಿನಿಂದಲೂ ಬೇರೂರಿದ್ದ ಆಚರಣೆಗಳನ್ನು ಮತ್ತು ಸ್ಥಳೀಯ ಪದ್ಧತಿಗಳನ್ನು ಗೌರವಿಸುತ್ತಿದ್ದನು. ಕನ್ನಡವು ಆಡಳಿತ ಭಾಷೆಯಾಗಿ ಬೆಳೆದು ಕಚೇರಿಗಳಲ್ಲಿ ಅಧಿಕೃತ ಭಾಷೆಯಾಗಿ ಬಳಕೆಯಾಗುತ್ತಿತ್ತು. ಟಿಪ್ಪುವಿನ ಕಾಲದ ಶಾಸನಗಳಲ್ಲಿ ಫಾರಸಿಯಲ್ಲಿ ಒಕ್ಕಣೆಯಿದ್ದು ವಿಷಯವೆಲ್ಲ ಕನ್ನಡದಲ್ಲಿಯೇ ನಿರೂಪಿತವಾಗಿದೆ. ಟಿಪ್ಪು ಮತ್ತು ಹೈದರ್ ಶೃಂಗೇರಿ ಮಠದ ಪೀಠಾಧಿಪತಿ ಶ್ರೀಶಂಕರಾಚಾರ್ಯರಿಗೆ ಬರೆದ ನಲವತ್ತಕ್ಕಿಂತಲೂ ಹೆಚ್ಚು ಕಾಗದ ಪತ್ರಗಳು ಕನ್ನಡ ಭಾಷೆಯಲ್ಲಿವೆ. ಟಿಪ್ಪುವು ಸ್ವತಂತ್ರ ರಾಜನಾಗಿದ್ದರೂ ಆಡಳಿತದ ಲೆಕ್ಕ–ಪತ್ರಗಳನ್ನು ಅರಬಿಕ್ ಭಾಷೆಯಲ್ಲಿ ಬರೆಯುವಂತೆ ಬಲಾತ್ಕರಿಸಲಿಲ್ಲ. ಆತನ ಆಳ್ವಿಕೆಯಲ್ಲಿ ತರಫ್‌ದಾರರು ಕನ್ನಡದಲ್ಲಿಯೇ ಕಂದಾಯ ಲೆಕ್ಕಗಳನ್ನು ಇಡುತ್ತಿದ್ದರು. ಅದರ ಪ್ರತಿಗಳು ಅಮಲ್ದಾರ ಕಚೇರಿ ಸೇರಿ ಅಗತ್ಯಬಂದಾಗ ಮರಾಠಿ ಮತ್ತು ಫಾರಸಿ ಭಾಷೆಗೆ ತರ್ಜುಮೆಗೊಳ್ಳುತ್ತಿದ್ದವು. ಅಠಾರ ಕಛೇರಿ, ರುಸುಂ, ಸುಭೇದಾರ, ಹುಜೂರ್, ಖಾವಂದರು ಅವಹಾಲ್ ಇತ್ಯಾದಿ ಪಾರಸಿ ಶಬ್ದಗಳು ಕನ್ನಡದಲ್ಲಿ ಸೇರಿಕೊಂಡವು.

ಬ್ರಿಟಿಷ್ ಪೂರ್ವದ ಆಡಳಿತದಲ್ಲಿ ಕನ್ನಡವು ನಿರಂತರವಾಗಿ ಆಡಳಿತ ಭಾಷೆಯಾಗಿ ಬೆಳೆದು ಬಂದಿದೆ ಎಂಬುದು ಮೇಲಿನ ಅಂಶಗಳಿಂದ ಸ್ಪಷ್ಟಪಡುತ್ತದೆ. ಇತರೆ ಭಾಷೆಗಳ ಪ್ರಭಾವದ ಮಧ್ಯದಲ್ಲೂ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ. ತನ್ನ ಸತ್ವವನ್ನು ಅನ್ಯಭಾಷೆಗಳಿಗೂ ನೀಡುವುದರ ಜೊತೆಗೆ ಬೇರೆ ಭಾಷೆಗಳಿಂದಲೂ ಅನೇಕ ಪದಗಳನ್ನು ಪಡೆಯುವುದರ ಮೂಲಕ ತನ್ನ ಶಬ್ದ ಭಂಡಾರವನ್ನು ಹೆಚ್ಚಿಸಿಕೊಂಡಿದೆ.[೬೨]

ಟಿಪ್ಪುವಿನ ಕನ್ನಡ ಭಾಷಾನೀತಿಗೆ ಸಂಬಂಧಿಸಿದಂತೆ ಹುಟ್ಟುಹಾಕಲಾದ ವಿವಾದಗಳು ಸತ್ವವಿಲ್ಲದವು. ಅಂದಿನ ಕನ್ನಡದ ಬಗೆಗಿನ ಆತಂಕ, ದುಗುಡಗಳು ಆ ಹೊತ್ತಿನದವೂ ಆಗಿದ್ದವು

ಎಂದು ಭಾವಿಸಬೇಕಿಲ್ಲ. ಏಕೆಂದರೆ ಟಿಪ್ಪುವಿನ ಆಳ್ವಿಕೆಯ ಅವಧಿಯಲ್ಲಿ ಯಾವುದೇ ಭಾಷೆಯನ್ನು ಬಲವಂತವಾಗಿ ಜನರ ಮೇಲೆ ಹೇರುವ ಸನ್ನಿವೇಶ ಬಂದಿರಲಿಲ್ಲ. ಆ ಹೊತ್ತಿನ ಸಾಂಸ್ಕೃತಿಕ ಸನ್ನಿವೇಶಕ್ಕೆ, ಪರಿಸರಕ್ಕೆ ಒಗ್ಗುವ ರೀತಿಯಲ್ಲಿ ಇತರೆ ಭಾಷೆಗಳು ಕನ್ನಡದಲ್ಲಿ ಬೆರತು ಹೋಗಿದ್ದವು. ಅಂಥ ಭಾಷೆಗಳಲ್ಲಿ ಉರ್ದು ಮತ್ತು ಪರ್ಶಿಯನ್ ಭಾಷೆಗಳು ಸೇರಿದ್ದವು. ಇವುಗಳ ಜೊತೆಗೆ ಇಂಗ್ಲಿಶ್, ಫ್ರೆಂಚ್, ಮರಾಠಿ ಭಾಷೆಗಳು ಬೆರತು ಹೋಗಿದ್ದವು. ಉರ್ದು ಮತ್ತು ಪರ್ಷಿಯನ್ ಭಾಷೆಗಳು ಟಿಪ್ಪುವಿನ ಅವಧಿಯಲ್ಲಿ ಸಂವಹನಗೊಳ್ಳುತ್ತಿದ್ದುದಕ್ಕೆ ಚಾರಿತ್ರಿಕ ಹಿನ್ನೆಲೆಗಳಿವೆ. ಅದಕ್ಕೆ ಹೈದರ್ ಅಥವಾ ಟಿಪ್ಪು ಹೊಣೆಗಾರರಲ್ಲ.

ಕನ್ನಡದ ನೆಲವನ್ನು ಹಲವು ರಾಜಮನೆತನಗಳು ಆಳಿದವು. ನವಾಬರು, ಸುಲ್ತಾನರು ಕನ್ನಡ ಭಾಷೆಯ ವಿರುದ್ಧ ಯಾವುದೇ ಫಿರ್ಯಾದು ಹೊರಡಿಸಲಿಲ್ಲ. ಬದಲಾಗಿ ಆಯಾ ಸನ್ನಿವೇಶಕ್ಕೆ ಅನುಗುಣವಾಗಿ ತಮ್ಮ ಭಾಷಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕನ್ನಡದ ಭೂಭಾಗವನ್ನು ಆಳ್ವಿಕೆ ಮಾಡಿದ ಬಹಮನಿ ಮತ್ತು ಆದಿಲ್‌ಶಾಹಿಗಳೊಂದಿಗೆ ಅರಬ್ಬಿ ಹಾಗೂ ಪಾರ್ಸಿ ಭಾಷೆಗಳು ಕನ್ನಡದೊಂದಿಗೆ ಬೆರೆತವು. ಸುಮಾರು ೩೫೦ ವರುಷಗಳ ಕಾಲ ಆಳಿದ ಈ ಸುಲ್ತಾನರ ಅವಧಿಯಲ್ಲಿ ಮಿಲಿಟರಿ ಭಾಷೆಯಾಗಿ ರೆಖ್ತಾ ಭಾಷೆಯನ್ನು ಕನ್ನಡಿಗರು ಅರಿತುಕೊಂಡರು.[೯೨] ಕನ್ನಡ ಪರಿಸರದ ಮುಸಲ್ಮಾನರೂ ಅಲ್ಲಿಯವರೆವಿಗೂ ಅಚ್ಚಕನ್ನಡಿಗರಾಗಿ ಕನ್ನಡದಲ್ಲಿ ವ್ಯವಹರಿಸುತ್ತಿದ್ದರು. ಅನಂತರ ಈ ರೆಖ್ತಾ(ಲಷ್ಕರಿ ಭಾಷೆ) ಪಾರ್ಸಿ ಭಾಷೆಯನ್ನು ಖರೋಷ್ಠಿ ಲಿಪಿಯೊಡನೆ ಬೆರೆಸಿ ಮಾತನಾಡುವ ಪ್ರಕ್ರಿಯೆ ಆರಂಭವಾಯಿತು. ಇದರಿಂದ ಹುಟ್ಟಿದುದು ದಖ್ಖನಿ ಅಥವಾ ದಖ್ಖನಿ ಉರ್ದು ಭಾಷೆ. ಈ ಉರ್ದು ಭಾಷೆಯ ಹುಟ್ಟು ಕರ್ನಾಟಕವೇ ಆಗಿದೆ.

ಮೈಸೂರು ಸಂಸ್ಥಾನದಲ್ಲಿ ಒಡೆಯರುಗಳ ಆಳ್ವಿಕೆಯಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿತ್ತು. ಹೈದರ್ ಮತ್ತು ಟಿಪ್ಪು ಕನ್ನಡ ಭಾಷೆಗೆ ಯಾವ ಭಂಗವನ್ನೂ ತರಲಿಲ್ಲ. ಬದಲಾಗಿ ಹೊರಗಿನ ವ್ಯಾಪಾರ-ವಾಣಿಜ್ಯ ಮಿಲಿಟರಿ ವ್ಯವಹಾರಗಳಿಗೆ ಮಾತ್ರ ಉರ್ದು, ಪಾರ್ಸಿ ಮೊದಲಾದ ಭಾಷೆಗಳನ್ನು ಬಳಸಿದರು. ಟಿಪ್ಪು ಬೇರೆ ಭಾಷಿಕ ಪ್ರದೇಶಗಳನ್ನು ಆಕ್ರಮಿಸಿದಾಗ ಸ್ಥಳೀಯ ಭಾಷೆಯ ಜೊತೆಗೆ ಅವರವರ ಭಾಷೆಯಲ್ಲಿ ದಾಖಲೆಗಳನ್ನಿಡುವ 'ಡಬ್ಬಲ್ ದಫ್ತರ್' ಪದ್ಧತಿ ಜಾರಿಗೆ ತಂದನು.

ಹೈದರ್ ಹಾಗೂ ಟಿಪ್ಪು ಅವರ ೪೦ ವರುಷಗಳ ಆಡಳಿತದಲ್ಲಿ ಬ್ರಿಟಿಷರ ಪ್ರತಿರೋಧದ ಜೊತೆಗೆ ಆಂತರಿಕ ಶಕ್ತಿಗಳ ಆತಂಕಗಳನ್ನು ಎದುರಿಸಬೇಕಾಯಿತು. ಇಂಥ ಸನ್ನಿವೇಶದಲ್ಲಿ ವಿಶಾಲ ಮೈಸೂರು ವಿಸ್ತರಿಸಿದಂತೆಲ್ಲಾ ಆಡಳಿತ ಭಾಷೆಯಾಗಿದ್ದ ಕನ್ನಡದ ವಿಸ್ತರಣೆಯೂ

ಸ್ವಾಭಾವಿಕವಾಗಿ ಆಯಿತು. ಗದ್ದ ಪ್ರದೇಶಗಳಲ್ಲಿ ನೇಮಕವಾಗುತ್ತಿದ್ದ ಅಧಿಕಾರಿಗಳು ಕನ್ನಡಿಗರೇ ಆಗಿರುತ್ತಿದ್ದರು. ಟಿಪ್ಪುವಿನ ಕಾಲದ ಹದಿನೆಂಟು(ಅಠಾರ) ಕಛೇರಿಗಳ ವ್ಯವಹಾರಗಳು ಕನ್ನಡದಲ್ಲೇ ನಡೆಯುತ್ತಿದ್ದವು. ಅವನ ಆಡಳಿತದಲ್ಲಿ ಪೂರ್ಣಯ್ಯ, ಕೃಷ್ಣಯ್ಯ, ಶಾಮಯ್ಯ, ಖಂಡೇರಾವ್, ಶ್ರೀನಿವಾಸರಾವ್ ಮೊದಲಾದ ಕನ್ನಡ ಅಧಿಕಾರಿಗಳೇ ಕನ್ನಡದಲ್ಲಿ ವ್ಯವಹರಿಸುತ್ತಿದ್ದರು. ಕನ್ನಡ ರಾಜ್ಯದ ಅಧಿಕೃತ ಪ್ರಧಾನ ಭಾಷೆಯಾಗಿತ್ತು.[೪] ಆದರೂ ಇವತ್ತಿನವರೆಗೂ ಹೈದರ್ ಮತ್ತು ಟಿಪ್ಪುವಿನ ಭಾಷಾನೀತಿಯ ಬಗ್ಗೆ ವಾದ-ವಿವಾದಗಳು ಏಳುತ್ತಲೇ ಇವೆ, ಹೆಚ್ಚು ಚರ್ಚೆಗೂ ಗ್ರಾಸವಾಗಿದೆ.

ಅಡಿಟಿಪ್ಪಣಿಗಳು

೧. ಬಾರ್ಕೂರು ಉದಯ, ಹೈದರಾಲಿ-ಟಿಪ್ಪು: ಇತಿಹಾಸ ಕಥನ, ಮಾನವತಾ ವೇದಿಕೆ, ಮಂಗಳೂರು, ೨೦೦೩, ಪು.೩೪.

೨. ಶರ್ಮ ಎಚ್.ಡಿ., ಟಿಪ್ಪು ನಿಜಸ್ವರೂಪ, ಸಾಹಿತ್ಯ ಸಿಂಧೂ ಪ್ರಕಾಶನ, ಬೆಂಗಳೂರು, ೨೦೦೩, ಪು.೪.

೩. ಬಾರ್ಕೂರು ಉದಯ, ಪೂರ್ವೋಕ್ತ, ಪು.೩೪.

೪. ಶರ್ಮ ಎಚ್.ಡಿ., ಪೂರ್ವೋಕ್ತ, ಪು.೪.

೫. ವಿಲಿಯಂ ಇರ್ವಿನ್, ದಿ ಆರ್ಮಿ ಆಫ್ ದಿ ಇಂಡಿಯನ್ ಮೊಗಲ್ಸ್, ಲಂಡನ್, ೧೯೦೩, ಪು.೧೦೩.

೬. ಶರ್ಮ ಎಚ್.ಡಿ., ಪೂರ್ವೋಕ್ತ, ಪು.೪.

೭. ವಿಲಿಯಂ ಇರ್ವಿನ್, ಪೂರ್ವೋಕ್ತ, ಪು.೧೦೩.

೮. ಮಾರ್ಕ್ ವಿಲ್ಕ್ಸ್, ಹಿಸ್ಟಾರಿಕಲ್ ಸ್ಕೆಚ್ಚಸ್ ಆಫ್ ಸೌತ್ ಇಂಡಿಯಾ, ಸಂಪುಟ ೧, ಮೈಸೂರು, ೧೯೩೦, ಪು.೪೯೧-೯೨.

೯. ಶರ್ಮ ಎಚ್.ಡಿ., ಪೂರ್ವೋಕ್ತ, ಪು.೪-೫.

೧೦. ಪ್ರತಾಪಸಿಂಹ, ಟಿಪ್ಪು ಸುಲ್ತಾನ್ ಸ್ವಾತಂತ್ರ್ಯ ವೀರನಾ? ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೨೦೧೩, ಪು.೪೯-೫೧.

೧೧. ಮಾರ್ಕ್ ವಿಲ್ಕ್ಸ್, ಪೂರ್ವೋಕ್ತ, ಪು.೧೭೨-೭೩.

೧೨. ಪ್ರಾನ್ಸಿಸ್ ಬುಕನನ್, ಎ ಜರ್ನಿ ಫ್ರಮ್ ಮೆಡ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು

ಕೆನರಾ ಎಂಡ್ ಮಲಬಾರ್, ೧೮೦೦–೦೨ ಸಂಪುಟ ೧, ಲಂಡನ್, ೧೮೦೭, ಪು.೩೦೦.

೧೩. ಷೇಕ್ ಅಲಿ ಬಿ., ಟಿಪ್ಪು ಸುಲ್ತಾನ್, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ೧೯೭೯, ಪು.೫.

೧೪. ಮೊಹಿಬುಲ್ ಹಸನ್, ಟಿಪ್ಪು ಸುಲ್ತಾನನ ಇತಿಹಾಸ, ಮೈಸೂರು, ಪು.೯.

೧೫. ಷೇಕ್ ಅಲಿ ಬಿ., ಪೂರ್ವೋಕ್ತ, ಪು.೫–೬.

೧೬. ಬಾರ್ಕೂರು ಉದಯ, ಪೂರ್ವೋಕ್ತ, ಪು.೫೨.

೧೭. ಅದೇ, ಪು.೫೩.

೧೮. ಅದೇ, ಪು.೫೩, ೫೪.

೧೯. ಬರುನ್ ಡೇ, ಸಮ್ ಸೋಶಿಯೋ ಪಾಲಿಟಿಕಲ್ ಇಂಪ್ಲಿಕೇಷನ್ಸ್ ಆಫ್ ದಿ ಕೂಗ್‌ನೊಮೆನ್ ಟಿಪ್ಪು ಸುಲ್ತಾನ, ಪ್ರೊಸಿಡಿಂಗ್ಸ್ ಆಫ್ ದಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ೫೨ ಸೆಶನ್ಸ್, ದೆಹಲಿ, ಪು.೭೦೦–೭೦೭.

೨೦. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ, ಸಂಪುಟ ೫, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು.೨೫೦, ೨೫೧.

೨೧. ಷೇಕ್ ಅಲಿ ಬಿ. ಪೂರ್ವೋಕ್ತ, ಪು.೨೫೨–೨೫೪

೨೨. ಅದೇ, ಪು.೨೫೪.

೨೩. ಗುರುರಾಜ್ ಬಿ., ಟಿಪ್ಪು! ಚಾರಿತ್ರಿಕ ಕಾದಂಬರಿ, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ೨೦೦೮, ಪು.೨೦೪, ೨೦೫.

೨೪. ಅದೇ, ಪು.೨೦೬.

೨೫. ಷೇಕ್‌ಅಲಿ ಬಿ., ಪೂರ್ವೋಕ್ತ, ಪು.೨೫೬–೨೫೭.

೨೬. ಅದೇ, ಪು.೩೬೫–೩೬೭.

೨೭. ಮೋಹನ್‌ಕೃಷ್ಣ ರೈ ಕೆ.(ಸಂ)., ಚರಿತ್ರೆ ಅಧ್ಯಯನ, ಸಂಪುಟ ೩, ವಸಂತ ಮಾಧವ(ಲೇ), ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ, ೨೦೦೭, ಪು.೬೨.

೨೮. ಕಿರ್ಕ್ ಪ್ಯಾಟ್ರಿಕ್, ಸಿಲೆಕ್ಟ್ ಲೆಟರ್ಸ್ ಆಫ್ ಟಿಪ್ಪು ಸುಲ್ತಾನ ಟು ವೇರಿಯಸ್ ಪಬ್ಲಿಕ್ ಫಂಕ್ಷನರೀಸ್, ಲಂಡನ್, ೧೮೧೧, ಪು.೧೦.

೨೯. ಮಾರ್ಕ್‌ವಿಲ್ಕ್ಸ್, ಹಿಸ್ಟಾರಿಕಲ್ ಸ್ಕೆಚ್ಚಸ್ ಆಫ್ ದಿ ಸೌತ್ ಇಂಡಿಯಾ ಇನ್ ಆ್ಯನ್ ಎಟೆಮ್ಟ್ಸ್ ಟು ಟ್ರೇಸ್ ದಿ ಹಿಸ್ಟರಿ ಆಫ್ ಮೈಸೂರು, ಸಂಪುಟ ೭, ಪು.೭೬೬.

೩೦. ಸುರೇಂದ್ರನಾಥ ಸೇನ್, ಸ್ಟಡೀಸ್ ಇನ್ ಇಂಡಿಯನ್ ಹಿಸ್ಟರಿ, ಕಲ್ಕತ್ತ, ೧೯೩೦, ಪು.೧೬೬–೧೭೭.

೩೧. ಮೋಹನ್‌ಕೃಷ್ಣ ರೈ ಕೆ., ಪೂರ್ವೋಕ್ತ, ಪು.೬೨.

೩೨. ಬಾರ್ಕೂರು ಉದಯ, ಪೂರ್ವೋಕ್ತ, ಪು.೬೨.

೩೩. ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್, ೧೯೧೬, ಪು.೭೩.

೩೪. ಸ್ಥಳೀಯ ದಾಖಲೆಗಳು, ಸಂಪುಟ ೪, ಪು.೨೮೦.

೩೫. ಬಾರ್ಕೂರು ಉದಯ, ಪೂರ್ವೋಕ್ತ, ಪು.೭೫.

೩೬. ಪೂಗನೂರಿ, ಮೆಮೊರೀಸ್ ಆಫ್ ಹೈದರ್ ಅಂಡ್ ಟಿಪ್ಪು, ಮದ್ರಾಸ್, ೧೯೪೮, ಪು.೪೨, ೪೭.

೩೭. ಮಲಬಾರ್ ಕಮಿಶನ್, ಪಸ್ಟ್ ಕಮಿಷನರ್ ಡೈರೀಸ್, ಸಂಪುಟ ೨, ಪು.೨೨೩.

೩೮. ಸುಲ್ತಾನುತ್ ತಾವಾರಿಖ್, ಪು.೪೭, ೫೧.

೩೯. ಚಿದಾನಂದಮೂರ್ತಿ ಎಂ., ಮೂಲ ದಾಖಲೆಗಳಲ್ಲಿ ಹುದುಗಿದ್ದ ಟಿಪ್ಪು, ಭಾರತ ವಿಕಾಸ ಪರಿಷತ್ತು, ಬೆಂಗಳೂರು, ೨೦೧೩, ಪು.೬೪.

೪೦. ಮೋಹನ್‌ಕೃಷ್ಣ ರೈ ಕೆ., ಪೂರ್ವೋಕ್ತ, ಪು.೬೨, ೬೩.

೪೧. ಕರ್ನಾಟಕ ವಿಮೋಚನಾ ರಂಗ, ಹುತಾತ್ಮ ಟಿಪ್ಪು ಸುಲ್ತಾನ್, ೧೯೯೯, ಪು.೨೩.

೪೨. ಕೋ. ಚನ್ನಬಸಪ್ಪ, ಅಪ್ರತಿಮ ದೇಶಭಕ್ತ ಟಿಪ್ಪೂ ಸುಲ್ತಾನ್, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೩, ಪು.೧೭

೪೩. ಅದೇ, ಪು.೧೮.

೪೪. ಬಾರ್ಕೂರು ಉದಯ, ಪೂರ್ವೋಕ್ತ, ಪು.೬೦–೬೧.

೪೫. ಮೈಸೂರ್ ಆರ್ಕಿಯಾಲಾಜಿಕಲ್ ರಿಪೋರ್ಟ್, ೧೯೧೮, ಪು.೬೦.

೪೬. ಮೈಸೂರ್ ಆರ್ಕಿಯಾಲಾಜಿಕಲ್ ರಿಪೋಟ್, ೧೯೧೮ ಪುಟಗಳು, ೨೧, ೩೭.

೪೭. ಎಪಿಗ್ರಾಫಿಯಾ ಕರ್ನಾಟಕ, ಸಂಪುಟ ೩, ಶ್ರೀರಂಗಪಟ್ಟಣ, ಪು.೭೭.

೪೮. ಮೈಸೂರ್ ಆರ್ಕಿಯಾಲಾಜಿಕಲ್ ರಿಪೋರ್ಟ್, ೧೯೧೬, ಪು.೩೯.

೪೯. ಅದೇ, ಪು.೨೩, ೪೦.

೫೦. ವಿನ್ಸೆಂಟ್ ಸ್ಮಿತ್, ಪೂರ್ವೋಕ್ತ, ಪು.೫೮–೫೯.

೫೧. ಮೈಸೂರ್ ಆರ್ಕಿಯಾಲಾಜಿಕಲ್ ರಿಪೋರ್ಟ್, ೧೯೧೩–೧೪, ಪು.೫೦–೫೧.

೫೨. ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್, ೧೯೧೬, ಪು.೪೨, ೭೫.

೫೩. ಅದೇ, ಪು.೭೪.

೫೪. ಅದೇ, ಪು.೭೫.

೫೫. ಅದೇ, ಪು.೭೫.

೫೬. ಜಾನ್ ವಿಲಿಯಂ ಕೇ., ಹಿಸ್ಟರಿ ಆಫ್ ದಿ ಸಿಪಾಯಿ ವಾರ್ ಇನ್ ಇಂಡಿಯಾ, ಸಂಪುಟ ೩, ಪು.೩೬೧–೬೨.

೫೭. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ ಸಂಪುಟ ೫, ಪು.೫೦೧–೫೦೨.

೫೮. ಅದೇ, ಪು.೫೦೩–೫೦೪.

೫೯. ಅದೇ, ಪು.೫೦೪.

೬೦. ಅದೇ, ಪು.೫೦೪–೫೦೫.

೬೧. ಹುತಾತ್ಮ ಟಿಪ್ಪು ಸುಲ್ತಾನ್, ಪೂರ್ವೋಕ್ತ, ಪು.೪೨–೪೩.

೬೨. ಬಾರ್ಕೂರು ಉದಯ, ಪೂರ್ವೋಕ್ತ, ಪು.೭೬

೬೩. ಮಾರ್ಕ್ ವಿಲ್ಕ್ಸ್, ಪೂರ್ವೋಕ್ತ, ಸಂಪುಟ–೨, ಪು.೨೮೩.

೬೪. ರೈಸ್ ಬಿ.ಎಲ್., ಪೂರ್ವೋಕ್ತ, ಸಂಪುಟ.೩, ಪು.೧೧೧.

೬೫. ಕಿರ್ಮಾನಿ ಪೂರ್ವೋಕ್ತ, ಪು.೨೯೮.

೬೬. ಬಾರ್ಕೂರು ಉದಯ, ಪೂರ್ವೋಕ್ತ, ಪು.೭೬

೬೭. ಶಿಲ್ಪಾ ಎಸ್., ಹಿಸ್ಟರಿ ಆಫ್ ಕ್ರಿಶ್ಚಿಯಾನಿಟಿ ಇನ್ ಕೆನರಾ, ಸಂಪುಟ ೧, ಕಾರವಾರ ೧೯೫೮, ಪು.೨೦೫-೨೧೧.

೬೮. ಅದೇ, ಪು.೨೦೭.

೬೯. ಮೈಸೂರಿಯನ್ ರೆವೆನ್ಯೂ ರೆಗ್ಯುಲೇಶನ್ಸ್, ಪು.೨೭-೨೮, ಮೆಕೆನ್ಜಿಡ್ ರೋಡ್ರಿಕ್, ಸ್ಕೆಚ್ ಆಫ್ ದಿ ವಾರ್ ವಿತ್ ಟಿಪ್ಪುಸುಲ್ತಾನ, ಸಂಪುಟ ೧, ಪು.೯.

೭೦. ಬಾರ್ಕೂರು ಉದಯ, ಪೂರ್ವೋಕ್ತ, ಪು.೭೮.

೭೧. ಪೂರ್ವೋಕ್ತ, ಪು.೮೦.

೭೨. ಶೇಕ್ ಅಲಿ ಬಿ., ಪೂರ್ವೋಕ್ತ, ಪು.೪೨೩-೪೨೪.

೭೩. ಅದೇ, ಪು.೪೨೫.

೭೪. ಅದೇ, ಪು.೪೨೬.

೭೫. ಅದೇ, ಪು.೪೨೭.

೭೬. ಎಡ್ವರ್ಡ್ ಮೂರ್, ಎ ನರೇಟಿವ್ ಆಫ್ ದಿ ಆಪರೇಷನ್ಸ್ ಆಫ್ ಕ್ಯಾಪ್ಟನ್ ಲಿಟ್ಸ್ ಡಿಸ್‌ಪ್ಯಾಚ್‌ಮೆಂಟ್ಸ್ ಲಂಡನ್, ೧೭೯೪, ಪು.೨೦೬, ೨೦೭.

೭೭. ಜಾನ್ ಮಾಲ್ಕೋಮ್, ದಿ ಪೊಲಿಟಿಕಲ್ ಹಿಸ್ಟರಿ ಆಫ್ ಇಂಡಿಯಾ, ಸಂಪುಟ ೨, ಅನುಬಂಧ ೨, ಪು.೨೨೦-೨೨೧.

೭೮. ಅಲೆಗ್ಸಾಂಡರ್ ಡಿರೋಮ್, ನರೇಟಿವ್ ಆಫ್ ದಿ ಕ್ಯಾಂಪೆನ್ಸ್ ಇನ್ ಇಂಡಿಯಾ ವಿಚ್ ಟರ್ಮಿನೇಟೆಡ್ ದಿ ವಾರ್ ವಿತ್ ಟಿಪ್ಪು ಸುಲ್ತಾನ್ ಇನ್ ೧೭೯೨, ಲಂಡನ್, ೧೭೯೪, ಪು.೨೪೯-೫೦.

೭೯. ಶೇಕ್ ಅಲಿ ಬಿ., ಪೂರ್ವೋಕ್ತ, ಪು.೪೩೯-೪೪೦.

೮೦. ಅದೇ. ಪು.೪೪೧.

೮೧. ಮೋಹನ್‌ಕೃಷ್ಣ ರೈ(ಸಂ), ಚರಿತ್ರೆ ಅಧ್ಯಯನ, ಸಂಪುಟ ೩, ವಸಂತ ಮಾಧವ ಕೆ.ಜಿ.(ಲೇ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೭, ಪು.೯೫-೯೭.

೮೨. ಶೇಕ್ ಅಲಿ ಬಿ., ಪೂರ್ವೋಕ್ತ, ಪು.೫೪.

೮೩. ಬಾರ್ಕೂರು ಉದಯ, ಪೂರ್ವೋಕ್ತ, ಪು.೫೪.

೮೪. ಒರುನ್ ಡೇ ಸಮ್ ಸೋಶಿಯೋ-ಪಾಲಿಟಿಕಲ್ ಇಂಪ್ಲಿಕೇಶನ್ಸ್ ಆಫ್ ದಿ ಕೂಗ್‌ನೋಮೆನ್ 'ಟಿಪ್ಪು ಸುಲ್ತಾನ್' ಪ್ರೊಸಿಡಿಂಗ್ ಆಫ್ ದಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ೫೨ನೇ ಸೆಶನ್ಸ್, ಡೆಲ್ಲಿ, ಪು.೭೦೦-೭೦೭.

೮೫. ಫ್ರಾನ್ಸಿಸ್ ಬುಕಾನನ್, ಎ ಜರ್ನಿ ಫ್ರಮ್ ಮೆಡ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್, ಕೆನರಾ ಎಂಡ್ ಮಲಬಾರ್, ೧೮೦೦-೦೧, ಸಂಪುಟ ೧, ಲಂಡನ್, ೧೮೦೭, ಪು.೭೦-೭೩, ಸಂಪುಟ ೨, ಪು.೭೬೫.

೮೬. ಮೊಹಿಬುಲ್ ಹಸನ್, ಟಿಪ್ಪು ಸುಲ್ತಾನ್ ಇತಿಹಾಸ(ಕನ್ನಡ ಆವೃತ್ತಿ), ಮೈಸೂರು ಪುಟಗಳು, ೩೫೭-೫೮.

೮೭. ಬಾರ್ಕೂರು ಉದಯ, ಪೂರ್ವೋಕ್ತ, ಪು.೫೮.

೮೮. ಷೇಕ್ ಅಲಿ ಬಿ., ಪೂರ್ವೋಕ್ತ, ಪು.೫೧೮.

೮೯. ಅದೇ, ಪು.೫೧೯.

೯೦. ಅದೇ, ಪು.೫೧೯-೫೨೦.

೯೧. ಅದೇ, ಪು.೫೨೨-೨೩.

೯೨. ತಲಕಾಡು ಚಿಕ್ಕ ರಂಗೇಗೌಡ, ಮೈಸೂರು ಹುಲಿ ಟಿಪ್ಪು ಸುಲ್ತಾನ್, ಟಿಪ್ಪು ಸುಲ್ತಾನ್ ಸಂಯುಕ್ತ ರಂಗ, ಬೆಂಗಳೂರು, ಪು.೮೧-೮೨.

೯೩. ಗೋವಿಂದರಾಜು ಸಿ.ಆರ್.(ಸಂ), ಚರಿತ್ರೆ ಅಧ್ಯಯನ, ಸಂಪುಟ ೨, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೩೩-೧೩೪.

೯೪. ಅದೇ, ಪು.೧೩೪.

ಅಧ್ಯಾಯ ನಾಲ್ಕು

ಬ್ರಿಟಿಷ್ ವಿರೋಧಿ ನೀತಿ ಹಾಗೂ ಫ್ರೆಂಚರ ನೆರವು

ಅಧ್ಯಾಯ ನಾಲ್ಕು

ಬ್ರಿಟಿಷ್ ವಿರೋಧಿ ನೀತಿ ಹಾಗೂ ಫ್ರೆಂಚರ ನೆರವು

ಯುರೋಪಿನ ರಾಜಕೀಯ ಸ್ಥಿತ್ಯಂತರಗಳನ್ನು ಗಮನಿಸಿದರೆ ಹದಿನೆಂಟನೆಯ ಶತಮಾನದ ಪೂರ್ವಾರ್ಧದಲ್ಲಿ ಯುರೋಪಿನ ರಾಷ್ಟ್ರಗಳು ಪೌರಾತ್ಯ ದೇಶಗಳಲ್ಲಿ ತಮ್ಮ ವಸಾಹತು ನೆಲೆಗಳನ್ನು ಗಟ್ಟಿಗೊಳಿಸಿಕೊಂಡು ನಂತರ ಅಲ್ಲಿಯೇ ತಮ್ಮ ಪ್ರಭುತ್ವ ಸ್ಥಾಪನೆಗೆ ಮುಂದಾದವು. ಯುರೋಪಿನಲ್ಲಿ ನಡೆದ ಸಪ್ತವಾರ್ಷಿಕ ಯುದ್ಧ ಪರಿಣಾಮವು ಭಾರತದಲ್ಲೂ ಪ್ರತಿಧ್ವನಿಸಿತು. ಫ್ರಾನ್ಸ್ ಮತ್ತು ಇಂಗ್ಲೆಂಡ್ ಈ ಯುದ್ಧದಲ್ಲಿ ಪ್ರತಿಸ್ಪರ್ಧಿಗಳಾಗಿ ಹೋರಾಟಕ್ಕೆ ಇಳಿದಿದ್ದವು. ಬ್ರಿಟಿಷರು ಮತ್ತು ಫ್ರೆಂಚರು ಭಾರತದಲ್ಲೂ ವಸಾಹತುಗಳನ್ನು ಹಿಡಿದಿದ್ದರು. ವ್ಯಾಪಾರ ಪೈಪೋಟಿ ನಡೆಸುತ್ತಿದ್ದವು. ಭಾರತದ ಅಂದಿನ ರಾಜಕೀಯ ಅಸ್ಥಿರತೆಯ ಲಾಭ ಪಡೆದು ತಮ್ಮ ರಾಜಕೀಯ ಪ್ರಭುತ್ವ ಸ್ಥಾಪನೆಗೆ ಕೈ ಹಾಕಿದವು. ಫ್ರೆಂಚರು ಮತ್ತು ಬ್ರಿಟಿಷರು ಅಧಿಕಾರ ಸ್ಥಾಪಿಸಲು ಭಾರತದಲ್ಲೂ ಪರಸ್ಪರ ಯುದ್ಧದಲ್ಲಿ ತೊಡಗಿದ್ದರು. ಆರ್ಕಾಟಿನ ನವಾಬರ ಅಧಿಕಾರದಲ್ಲಿ ಎರಡೂ ರಾಷ್ಟ್ರಗಳು ಹಸ್ತಕ್ಷೇಪ ಮಾಡಿದವು. ಫ್ರೆಂಚರ ಗವರ್ನರ್ ಡೂಪ್ಲೆ ಮತ್ತು ಬ್ರಿಟಿಷರ ರಾಬರ್ಟ್ ಕ್ಲೈವ್ ಹೈದರಾಬಾದಿನ ರಾಜಕೀಯದಲ್ಲಿ ವಿಶೇಷ ಪಾತ್ರ ವಹಿಸಿದರು. ಹೀಗೆ ಭಾರತದ ಸ್ಥಳೀಯ ಅರಸರು, ಸುಲ್ತಾನರು ಮತ್ತು ನವಾಬರ ರಾಜಕಾರಣದಲ್ಲಿ ಮಧ್ಯೆ ಪ್ರವೇಶಿಸಿದ ಈ ಎರಡು ವಿದೇಶಿ ಶಕ್ತಿಗಳು ಅಧಿಕಾರಕ್ಕಾಗಿ ತೀವ್ರ ಪೈಪೋಟಿ ನಡೆಸಿದವು.

ಬ್ರಿಟಿಷರು ಮತ್ತು ಫ್ರೆಂಚರು ಮರಾಠರು, ಹೈದರಾಬಾದಿನ ನಿಜಾಮ ಮತ್ತು ಮೈಸೂರು ರಾಜ್ಯಗಳ ರಾಜಕಾರಣದ ವ್ಯವಹಾರಗಳಲ್ಲಿ ಪ್ರವೇಶ ಪಡೆದರು. ವ್ಯಾಪಾರ ವಾಣಿಜ್ಯೋದ್ಯಮದ ದೃಷ್ಟಿಯಿಂದಲೂ ಇವು ಆಯಕಟ್ಟಿನ ರಾಜ್ಯಗಳಾಗಿದ್ದವು. ಉತ್ತರ ಕರಾವಳಿಯನ್ನು ಹೊಂದಿದ್ದವು. ಇದರಿಂದ ದಖ್ಖನ್ನಿನ ಭಾಗಗಳ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದರು. ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಇಬ್ಬರೂ ಮರಾಠರು ಮತ್ತು ಹೈದರಾಬಾದಿನ ನಿಜಾಮನೊಂದಿಗೆ ಯುದ್ಧ ಮತ್ತು ಒಪ್ಪಂದಗಳಲ್ಲಿ ತೊಡಗಿದ್ದರು. ಈ ಸನ್ನಿವೇಶಗಳ ಲಾಭ ಪಡೆಯಲು ಫ್ರೆಂಚರು ಮತ್ತು

ಬ್ರಿಟಿಷರು ಬಯಸಿದರು. ಬ್ರಿಟಿಷರೊಂದಿಗಿನ ಹೋರಾಟದಲ್ಲಿ ಟಿಪ್ಪುವಿಗೆ ಸ್ಥಳೀಯ ರಾಜ್ಯಗಳಾದ ಮರಾಠರು, ಹೈದರಾಬಾದಿನ ನಿಜಾಮ ಇವರು ನೆರವಿಗೆ ಬರಲಿಲ್ಲ. ಸೈನಿಕವಾಗಿ ಪ್ರಬಲರಾಗಿದ್ದ ಬ್ರಿಟಿಷರನ್ನು ಭಾರತದಿಂದಲೇ ಕಿತ್ತೆಸೆಯಬೇಕೆಂಬುದು ಟಿಪ್ಪುವಿನ ನಿಲುವಾಗಿತ್ತು. ಈ ಉದ್ದೇಶ ಸಾಧನೆಗೆ ಮತ್ತೊಂದು ಪ್ರಬಲ ಯುರೋಪಿನ ಶಕ್ತಿಯ ನೆರವು ಪಡೆಯಲು ಬಯಸಿದನು. ಫ್ರೆಂಚರ ನೆರವು ಪಡೆಯಲು ಇಚ್ಛಿಸಿದನು. ಫ್ರೆಂಚರಿಗೂ ಇದು ಅನಿವಾರ್ಯವಾಗಿತ್ತು. ಭಾರತದಲ್ಲಿದ್ದ ಫ್ರೆಂಚರ ಮತ್ತು ಫ್ರಾನ್ಸಿನಲ್ಲಿದ್ದ ಅವರ ಉನ್ನತ ಅಧಿಕಾರಿಗಳ ಸಹಾಯವನ್ನು ಕೋರಲು ಟಿಪ್ಪುವು ಯೋಚಿಸಿದನು. ಟಿಪ್ಪು ಮತ್ತು ಫ್ರೆಂಚರ ನಡುವೆ ಹಲವು ಭಿನ್ನಾಭಿಪ್ರಾಯಗಳಿದ್ದರೂ ಅವರಿಬ್ಬರನ್ನು ಸಾಮೀಪ್ಯಕ್ಕೆ ತರುವ ಒಂದು ಅಂಶವೆಂದರೆ ಬ್ರಿಟಿಷರ ಬಗೆಗಿನ ಅವರಿಬ್ಬರ ಸಮಾನವಾದ ದ್ವೇಷ. ಬ್ರಿಟಿಷರು ಮತ್ತು ಫ್ರೆಂಚರ ನಡುವಿನ ದ್ವೇಷಾಸೂಯೆಗಳನ್ನು ಟಿಪ್ಪುವು ತನ್ನ ರಾಜಕೀಯ ಲಾಭಕ್ಕೆ ಬಳಸಿಕೊಳ್ಳಲು ಬಯಸಿದನು. ಅದಕ್ಕಾಗಿ ಫ್ರೆಂಚರ ಹದಿನಾರನೆಯ ಲೂಯಿ ಮತ್ತು ಅವನ ಅಧಿಕಾರಿಗಳೊಂದಿಗೆ ಪತ್ರವ್ಯವಹಾರ ಮತ್ತು ರಾಯಭಾರ ಸಂಬಂಧಗಳನ್ನು ಏರ್ಪಡಿಸಿಕೊಂಡನು. ಇದರ ಉದ್ದೇಶವು ವಾಣಿಜ್ಯೋದ್ಯಮದ ಅಭಿವೃದ್ಧಿ, ಸೈನಿಕ ನೆರವು ಪಡೆಯುವುದು ಹಾಗೂ ಕೈಗಾರಿಕಾಭಿವೃದ್ಧಿ ಸಾಧಿಸುವುದು, ಯುರೋಪಿನ ಹೊಸ ಹೊಸ ತಂತ್ರಜ್ಞಾನವನ್ನು ಎರವಲು ಪಡೆಯಲು ಯೋಚಿಸಿದನು.

ಟಿಪ್ಪು ತನ್ನ ನಿಷ್ಠಾವಂತ ಸೈನ್ಯ ಹಾಗೂ ತನ್ನ ಪ್ರಜೆಗಳ ಬೆಂಬಲದ ಆಸರೆಯೊಂದಿಗೆ ಏಕಾಂಗಿಯಾಗಿಯೇ ಬ್ರಿಟಿಷರನ್ನು ಎದುರಿಸಿದನು. ಯುದ್ಧ ಸ್ಫೋಟಗೊಳ್ಳಲು ನೀಡಿದ ಕಾರಣಗಳು ನಿಮಿತ್ತಮಾತ್ರವಾಗಿದ್ದವು. ಏಕೆಂದರೆ ಮೂರನೆಯ ಆಂಗ್ಲೋ–ಮೈಸೂರು ಯುದ್ಧಕ್ಕೆ ಕಾರಣವೆಂದು ಹೇಳಲಾಗುವ ತಿರುವಾಂಕೂರು ರಾಜನ ಕರಾವಳಿಯ ಮೇಲೆ ಟಿಪ್ಪು ದಾಳಿ ನಡೆಸಿದನು. ಯುದ್ಧ ಮುಕ್ತಾಯ ಆದ ನಂತರ ನಡೆದ ಒಪ್ಪಂದದಲ್ಲಿ ಈ ಪ್ರಕರಣವು ಹೆಸರಿಗೂ ಪ್ರಸ್ತಾಪವಾಗಲಿಲ್ಲ. ಈಗಾಗಲೇ ಥಾಮಸ್ ಮನ್ರೋ ಗಮನಿಸಿದಂತೆ ಬ್ರಿಟಿಷ್ ವಸಾಹತುಶಾಹಿಯ ಮುನ್ನಡೆಗೆ ಅಡ್ಡಿಯಾಗಿದ್ದ ಟಿಪ್ಪುವನ್ನು ಬಗ್ಗು ಬಡಿಯುವುದೇ ನಿಜವಾದ ಉದ್ದೇಶವಾಗಿತ್ತು.

ಕ್ರಿ.ಶ.೧೭೯೦ ಮೇ ೨೪ರಂದು ಮೂರನೆಯ ಆಂಗ್ಲೋ–ಮೈಸೂರು ಯುದ್ಧ ಪ್ರಾರಂಭವಾಯಿತು. ಆರಂಭದ ದಿನಗಳಲ್ಲಿ ಟಿಪ್ಪುವಿನ ಸೈನ್ಯ ಬ್ರಿಟಿಷ್ ಜನರಲ್ ಮೆಥ್ಯೂಸ್‌ನನ್ನು ಧೃತಿಗೆಡಿಸಿ ಹೊರಗಟ್ಟಿತು. ೧೭೯೧ರ ಫೆಬ್ರವರಿ ೫ ರಿಂದ ಗವರ್ನರ್ ಜನರಲ್ ಕಾರನ್‌ವಾಲೀಸ್ ಖುದ್ದು ಸೈನ್ಯದ ನಾಯಕತ್ವ ವಹಿಸಿದ್ದ. ಬೆಂಗಳೂರು ಬ್ರಿಟಿಷರ ವಶವಾಯಿತು. ಬ್ರಿಟಿಷರ ವಿಜಯಗಳನ್ನು ಕಂಡ ಮರಾಠರು, ಹೈದರಾಬಾದಿನ ನಿಜಾಮ ತಮ್ಮ ಪಡೆಗಳೊಡನೆ ಬ್ರಿಟಿಷರ ಕೈ ಬಲಪಡಿಸಿದರು. ಮತ್ತೊಂದೆಡೆ ಫ್ರೆಂಚರಿಂದ ಟಿಪ್ಪು ನಿರೀಕ್ಷಿಸಿದ ಸಹಾಯ ಬಾರದೆ ಹೋಯಿತು. ಕಾರಣ ಆಗ ತಾನೆ ಫ್ರಾನ್ಸ್ ಕ್ರಾಂತಿಯ ಹೊಸ್ತಿಲಲ್ಲಿತ್ತು. ಕುಟಿಲ ರಾಜತಂತ್ರ,

ಅಪಾರ ಸೇನಾಬಲ ಹಾಗೂ ಮೋಸದ ಯುದ್ಧ ತಂತ್ರಗಳಿಂದ ಬ್ರಿಟೀಷ್ ಮಿತ್ರ ಪಡೆಗಳು ಕ್ರಿ.ಶ.೧೭೯೨ರ ಮಾರ್ಚ್ ವೇಳೆಗೆ ಶ್ರೀರಂಗಪಟ್ಟಣದ ಹೊರವಲಯದಲ್ಲಿ ಬೀಡು ಬಿಟ್ಟು ಕೋಟೆಯನ್ನು ಮುತ್ತಿಗೆ ಹಾಕಲು ಯೋಚಿಸಿದವು. ಟಿಪ್ಪುವಿಗೆ ಶರಣಾಗದೆ ಬೇರೆ ಆಯ್ಕೆ ಇರಲಿಲ್ಲ. ಸಂಸ್ಥಾನವನ್ನು ಉಳಿಸಿಕೊಳ್ಳುವ ದೂರದೃಷ್ಟಿಯಿಂದ ಟಿಪ್ಪು ಶಾಂತಿ ಸಂಧಾನಕ್ಕೆ ಮುಂದಾದ. ಇದರಲ್ಲಿ ಬ್ರಿಟಿಷ್ ವಿರೋಧಿ ಹೋರಾಟ ಮುಂದುವರೆಸುವ ಅಭಿಲಾಶೆಯೂ ಅಡಗಿತ್ತು. ಎರಡು ವರ್ಷಗಳ ಸತತ ಸಮರಗಳಿಂದ ಹಾಗೂ ಟಿಪ್ಪುವಿನ ಜಾಣ ಯುದ್ಧ ತಂತ್ರದಿಂದ ಬ್ರಿಟಿಷ್ ಮಿತ್ರಪಡೆಗಳು ೧೦ ಲಕ್ಷದಷ್ಟು ಸೈನ್ಯ ಸರಿಯಾದ ಆಹಾರ-ಸಾಮಗ್ರಿಗಳಿಲ್ಲದೆ ಕುಗ್ಗಿತು. ಇದರಿಂದ ಮಿತ್ರಪಡೆಗಳ ಬೆಂಬಲ ಮುಂದುವರೆಸುವ ಖಾತರಿಯಿಲ್ಲದೆ ಬ್ರಿಟಿಷರೂ ಶಾಂತಿ ಸಂಧಾನದ ದಾರಿ ಕಾಯುತ್ತಿದ್ದರು. ಟಿಪ್ಪುವಿನ ಅಸಹಾಯಕ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಬಳಸಿಕೊಂಡರು.

ಕ್ರಿ.ಶ.೧೭೯೨ರ ಮಾರ್ಚ್ ೧೮ ರಂದು ಶ್ರೀರಂಗಪಟ್ಟಣ ಒಪ್ಪಂದ ನಡೆದಾಗ ಬ್ರಿಟಿಷರು ವಿಧಿಸಿದ ಷರತ್ತುಗಳನ್ನು ಟಿಪ್ಪು ಒಪ್ಪಿಕೊಳ್ಳಬೇಕಾಯಿತು. ಅದರ ಪ್ರಕಾರ

೧. ಸುಮಾರು ೩ ಕೋಟಿ ರೂ.ಗಳಷ್ಟು ಆದಾಯ ತರುತ್ತಿದ್ದ ಹೆಚ್ಚು ಕಡಿಮೆ ಅರ್ಧದಷ್ಟು ರಾಜ್ಯವನ್ನು ಬಿಟ್ಟುಕೊಡಬೇಕಾಯಿತು.

೨. ಯುದ್ಧ ವೆಚ್ಚಕ್ಕಾಗಿ ಸುಮಾರು ೩.೩ ಕೋಟಿ ರೂ.ಗಳಷ್ಟು ಹಣವನ್ನು ದಂಡವಾಗಿ ಕೊಡಬೇಕಾಯಿತು.

೩. ಎಲ್ಲಾ ಬ್ರಿಟಿಷ್ ಸೆರೆಯಾಳುಗಳನ್ನು ಬಿಟ್ಟು ಕೊಡಬೇಕಾಯಿತು.

೪. ದಂಡದ ಹಣ ತೆರುವ ಖಾತರಿಗಾಗಿ ಟಿಪ್ಪು ತನ್ನೆರಡು ಮಕ್ಕಳನ್ನು ಬ್ರಿಟಿಷರ ಬಳಿ ಅಡವಿಡಬೇಕಾಯಿತು.

ಭಾರತದ ಚರಿತ್ರೆಯಲ್ಲಿ ಈ ರೀತಿ ನಾಡ ರಕ್ಷಣೆಗಾಗಿ ದೊರೆಯೊಬ್ಬ ತನ್ನ ಮಕ್ಕಳನ್ನೇ ಅಡವಿಟ್ಟ ಮತ್ತೊಂದು ಉದಾಹರಣೆ ದೊರೆಯುವುದಿಲ್ಲ. ಮೈಸೂರಿನ ಈ ಸೋಲಿನಿಂದ ಮರಾಠರಿಗೆ ಕೃಷ್ಣ, ತುಂಗಭದ್ರಾ ನದಿಗಳ ನಡುವಿನ ಪ್ರಾಂತಗಳು ಹಾಗೂ ಬಿಜಾಪುರ ದೊರೆತವು. ಫ್ರಾನ್ಸಿಸ್ ಫರ್ನಾಂಡೀಸ್ ಎಂಬ ಚರಿತ್ರೆಕಾರ ದಾಖಲಿಸಿರುವಂತೆ ಮರಾಠರಿಗೆ ತನ್ನ ರಾಜ್ಯದ ಪ್ರಮುಖ ಭಾಗ ಕೊಡಬೇಕಾಗಿ ಬಂದರೂ ಟಿಪ್ಪು ಖುದ್ದಾಗಿ ಮರಾಠರ ಸೇನಾಧಿಕಾರಿ ಹರಿಕಾಂತ್ ಪಡ್ಕೆಯನ್ನು ಭೇಟಿ ಮಾಡಿ "ನಾನು ನಿಜವಾಗಿ ನಿಮ್ಮ ಶತ್ರುವಲ್ಲ, ನಿಮ್ಮ ನಿಜವಾದ ಶತ್ರು ಬ್ರಿಟಿಷರು ಎಂದು ವಿವರಿಸಲು ಪ್ರಯತ್ನಿಸಿದ. ರಾಜಕೀಯ ದಾರ್ಶನಿಕನಂತೆ ನುಡಿದ. ಈ ಮಾತು ಮುಂದಿನ ಇಪ್ಪತ್ತೆರಡು ವರ್ಷಗಳಲ್ಲಿ ನಿಜವಾಯಿತು. ಕಿರ್ಕಿ ಕದನದ ಮೂಲಕ

ಮರಾಠರು ಬ್ರಿಟಿಷ್ ವಸಾಹತುಶಾಹಿಗಳ ಆಕ್ರಮಣಕ್ಕೆ ಬಲಿಯಾದರು. ಈ ದುರಂತ ಸಂಭವಿಸುವ ಮುನ್ನವೇ ಮರಾಠರು ಬ್ರಿಟಿಷರ ವಿರುದ್ಧ ಟಿಪ್ಪುವಿನ ಜೊತೆ ಕೈ ಜೋಡಿಸಿದ್ದರೆ ಕಡೇ ಪಕ್ಷ ತಟಸ್ಥ ನೀತಿ ಅನುಸರಿಸಿದ್ದರೆ ಭಾರತದ ಹಾಗೂ ಕರ್ನಾಟಕದ ಕಥೆ ಬೇರೇಯೆ ಆಗಿರುತ್ತಿತ್ತು.[೧]

ಭಾರತೀಯ ರಾಜಕೀಯ ಶಕ್ತಿಗಳು ಬ್ರಿಟಿಷರ ವಿರುದ್ಧ ಕೈಜೋಡಿಸದೇ ಇದ್ದಾಗ ಟಿಪ್ಪು ವಿದೇಶಿ ಶಕ್ತಿಗಳ ನೆರವು ಕೇಳಲು ಪ್ರಯತ್ನಿಸಿದ. ಭಾರತದಿಂದ ಬ್ರಿಟಿಷರನ್ನು ಪೂರ್ಣ ಕಾಲ್ತೆಗೆಸಲು ನೆರವು ಅಪೇಕ್ಷಿಸಿ ಫ್ರಾನ್ಸ್, ಇರಾನ್, ಅಫ್‌ಘಾನಿಸ್ತಾನ ಮತ್ತು ಟರ್ಕಿಗಳಿಗೆ ರಾಯಭಾರಿಗಳನ್ನು ಕಳುಹಿಸಿದ. ಫ್ರಾನ್ಸ್‌ನ ನೆಪೋಲಿಯನ್ ಜೊತೆಯಂತೂ ಬ್ರಿಟಿಷರನ್ನು ಮದ್ರಾಸ್, ಕಲ್ಕತ್ತ ಹಾಗೂ ಮುಂಬೈ ಕೇಂದ್ರಗಳಿಂದ ಹೊರದೂಡಲು ಯೋಜನೆ ತಯಾರಿಸಿದ ನೆಪೋಲಿಯನ್ ತನ್ನ ಸೇನಾ ಪಡೆಯೊಂದಿಗೆ ಮಧ್ಯ ಏಷ್ಯಾದವರೆಗೆ ಬಂದಿದ್ದ ಅಲ್ಲುಂಟಾದ ಸೋಲಿನಿಂದ ಹಿಂತಿರುಗಬೇಕಾಯಿತು. ಟರ್ಕಿ ಮತ್ತು ಇರಾನ್‌ಗಳು ಸೈನಿಕ ಸಹಾಯವನ್ನು ನೀಡುವ ಪರಿಸ್ಥಿತಿಯಲ್ಲಿರಲಿಲ್ಲ. ನೇರ ಯುದ್ಧ, ಸಾಹಸ ಹಾಗೂ ಸಮರಗಳಿಂದ ಟಿಪ್ಪುವನ್ನು ಗೆಲ್ಲುವುದು ಸಾಧ್ಯವಿರಲಿಲ್ಲ. ಟಿಪ್ಪುವಿನ ದಂಡನಾಯಕ ಮೀರ್‌ಸಾದಿಕ್‌ನಂತ ದ್ರೋಹಿಗಳ ಜೊತೆ ಬ್ರಿಟಿಷರು ಕ್ರಿ.ಶ.೧೭೯೨ ರಿಂದಲೇ ಸಂಬಂಧ ಸಾಧಿಸಿದರು. ಟಿಪ್ಪುವಿನೊಂದಿಗೆ ದ್ವೇಷ ಬೆಳೆಸಿಕೊಂಡಿದ್ದ ಹತ್ತಾರು ಪಾಳೆಯಗಾರರು ಹಾಗೂ ಖಿಲ್ಲೆದಾರರನ್ನೂ ಬ್ರಿಟಿಷರು ಕೊಂಡುಕೊಂಡರು. ಕೊನೆಯ ದಿನಗಳಲ್ಲಿ ದಿವಾನ್ ಪೂರ್ಣಯ್ಯ ಅವರನ್ನು ತಮ್ಮ ಕಡೆಗೆ ಸೆಳೆದುಕೊಂಡರು.

ವೆಲ್ಲಸ್ಲಿ ಗವರ್ನರ್ ಜನರಲ್ ಆಗಿ ಬಂದ ಮೇಲೆ ಭಾರತದ ಸಂಸ್ಥಾನಗಳನ್ನು ತಮಗೆ ಸರಿಸಮನಾಗಿ ನೋಡುವ ಬದಲು ಅಧೀನವಾಗಿ ನೋಡುವ ವಸಾಹತುಶಾಹಿ ಸಹಾಯಕ ಸೈನಿಕ ಪದ್ಧತಿ ಜಾರಿಗೆ ಬಂದಿತು. ಇದರ ಮೂಲಕ ಇಡೀ ಭಾರತದ ರಾಜಸಂಸ್ಥಾನಗಳನ್ನು ನೇರ ಹತೋಟಿಗೆ ಒಳಪಡಿಸುವ ಪ್ರಯತ್ನ ನಡೆಸಿತು. ಬ್ರಿಟಿಷರ ಕುತಂತ್ರ ಆಕ್ರಮಣ ನೀತಿಗೆ ವಿರುದ್ಧ ನಿಂತಿದ್ದ ಟಿಪ್ಪುವನ್ನು ಮಣಿಸಲೇಬೇಕೆಂಬ ಸಂಚು ಹೂಡಿದರು. ಕ್ರಿ.ಶ.೧೭೯೮ರಲ್ಲೆ ಹೈದರಾಬಾದಿನ ನಿಜಾಮ ಬ್ರಿಟಿಷರ ಪರಮಾದಿತ್ಯ ಒಪ್ಪಿಕೊಂಡ ಪ್ರಥಮನಾಗಿ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ್ದ. ಮರಾಠರನ್ನು ಬ್ರಿಟಿಷರು ತಟಸ್ಥಗೊಳಿಸಿದರು. ಟಿಪ್ಪು ಪ್ರಧಾನ ದಂಡನಾಯಕ ಮೀರ್‌ಸಾದಿಕ್ ಬ್ರಿಟೀಷ್ ಸೈನ್ಯ ರಾಜ್ಯದೊಳಗೆ ನುಗ್ಗಲು ದಾರಿ ಒದಗಿಸಿದ.[೨] ಬ್ರಿಟಿಷರ ರಾಜತಾಂತ್ರಿಕ ಸೈನಿಕ ಸಿದ್ಧತೆಗಳು ಮುಗಿದ ನಂತರ ಸೈನ್ಯ ಜನರಲ್ ಹ್ಯಾರಿಸ್ ನೇತೃತ್ವದಲ್ಲಿ ಕ್ರಿ.ಶ.೧೭೯೯ರ ಫೆಬ್ರವರಿ ೩ ರಂದು ಮದ್ರಾಸ್ ಬಿಟ್ಟಿತು. ಬ್ರಿಟಿಷರು ರೂಪಿಸಿದ ಮೋಸದ ಬಲೆ ಎಷ್ಟು ಗಟ್ಟಿಯಾಗಿತೆಂದರೆ ಮದ್ರಾಸು ತೊರೆದ ಬ್ರಿಟಿಷ್ ಸೈನ್ಯ ಶ್ರೀರಂಗಪಟ್ಟಣದ ಹೊರವಲಯದಲ್ಲಿ ಬೀಡು ಬಿಟ್ಟಿತು. ಪ್ರಧಾನ ದಂಡನಾಯಕನೇ ದ್ರೋಹಿಯಾಗಿ ಬ್ರಿಟಿಷರ ಜೊತೆ ಸೇರಿದ್ದರಿಂದ ಸೈನಿಕರು ಹೋರಾಡ ಬೇಕೆಂದಿದ್ದರೂ ಯಾವುದೇ ಆದೇಶ ದೊರೆಯದೆ

ಕೋಟೆಗಳು ಬ್ರಿಟಿಷರ ವಶವಾದವು. ಏಪ್ರಿಲ್ ೨೫ ರಂದು ಶ್ರೀರಂಗಪಟ್ಟಣ ಕೋಟೆಯ ಮೇಲೆ ಸೈನ್ಯ ದಂಡೆತ್ತಿತ್ತು. ಟಿಪ್ಪು ಗೌರವಯುತ ಸಂಧಾನ ಮಾರ್ಗಗಳಿಂದ ಸ್ವಾತಂತ್ರ್ಯ ಉಳಿಸಿಕೊಳ್ಳಲು ಪ್ರಯತ್ನಿಸಿದರೂ ಬ್ರಿಟಿಷರು ಮೈಸೂರು ಸಂಸ್ಥಾನದ ಸಂಪೂರ್ಣ ಶರಣಾಗತಿ ಹೊರತುಪಡಿಸಿ ಮತ್ತೇನನ್ನೂ ಒಪ್ಪಲು ಸಿದ್ಧರಿರಲಿಲ್ಲ. ಟಿಪ್ಪು ಸ್ವಾತಂತ್ರ್ಯ ತೊರೆದು ಹೇಡಿಯಂತೆ ನೂರು ವರ್ಷ ಬಾಳಲು ಸಿದ್ಧನಿರಲಿಲ್ಲ. ಅಂತಿಮ ಯುದ್ಧ ಆರಂಭವಾಯಿತು. ಟಿಪ್ಪು ವಿಚಲಿತನಾಗದೆ ಕೋಟೆಯ ರಕ್ಷಣೆಗೆ ಸಿದ್ಧನಾದ. ಕ್ರಿ.ಶ.೧೭೯೯ ಮೇ ೪ ಸೈನಿಕರಿಗೆ ಸಂಬಳ ಕೊಡುವ ನೆಪದಲ್ಲಿ ಮೀರ್‌ಸಾದಿಕ್ ಕೋಟೆಯ ರಕ್ಷಣಾ ಪಡೆಯನ್ನು ಬೇರೆ ಕಡೆಗೆ ಕಳುಹಿಸಿದ. ಸಮಯಸಾಧಿಸಿ ಬ್ರಿಟಿಷ್ ಪಡೆ ಶ್ರೀರಂಗಪಟ್ಟಣ ಕೋಟೆಯೊಳಗೆ ನುಗ್ಗಿತು.[೩] ಮೇ ೪ ಮಧ್ಯಾಹ್ನದ ವೇಳೆಗೆ ಬ್ರಿಟಿಷ್ ಸೇನೆ ಶ್ರೀರಂಗಪಟ್ಟಣದ ಒಳನುಗ್ಗಿ ಲೂಟಿ-ಕಗ್ಗೊಲೆ ಪ್ರಾರಂಭಿಸಿತು. ಕೆಲವು ಸೈನಿಕರ ಜೊತೆಗೂಡಿ ಬ್ರಿಟಿಷ್ ಸೈನ್ಯದೊಂದಿಗೆ ಕಾದಾಡುತ್ತಿದ್ದ ವೇಳೆಗಾಗಲೇ ನಾಲ್ಕಾರು ಗುಂಡುಗಳು ಟಿಪ್ಪುವಿನ ದೇಹ ಹೊಕ್ಕಿದ್ದವು. ಅವನ ಕುದುರೆ ಗುಂಡೇಟಿಗೆ ಬಲಿಯಾಯಿತು. ಟಿಪ್ಪು ಕೊನೆ ಉಸಿರು ಇರುವವರೆಗೆ ಬ್ರಿಟಿಷ್ ಸೇನೆಯನ್ನು ಪ್ರತಿರೋಧಿಸುತ್ತಲೇ ಯುದ್ಧ ಭೂಮಿಯಲ್ಲಿ ಮುನ್ನಡೆದ. ಕೊನೆಗೆ ನಿತ್ರಾಣನಾಗಿ ಕುಸಿದು ಬಿದ್ದನು. ಬ್ರಿಟಿಷ್ ಸೈನಿಕನೊಬ್ಬ ಟಿಪ್ಪು ತಲೆಗೆ ಗುಂಡಿಟ್ಟು ಹೊಡೆದು ಅವನ ವಜ್ರ ಹಿಡಿಕೆಯ ಖಡ್ಗವನ್ನು ಕಸಿದುಕೊಂಡನು. ನಾಲ್ಕು ದಶಕಗಳ ಕಾಲ ಬ್ರಿಟಿಷರ ವಸಾಹತುಶಾಹಿ ಶಕ್ತಿಯಿಂದ ಜನರನ್ನು ರಕ್ಷಣೆ ಮಾಡಿದ್ದ ಮೈಸೂರು ಹುಲಿ, ಕ್ರಾಂತಿಕಾರಿ ಟಿಪ್ಪು ಹುತಾತ್ಮನಾದ.[೪] ಈ ಸುದ್ದಿ ತಿಳಿಯುತ್ತಿದ್ದಂತೆ ವೆಲ್ಲಸ್ಲಿ 'ಇದೀಗ ಇಂಡಿಯಾ ನಮ್ಮದು ಎಂದು ಉದ್ಗರಿಸಿದ.' ಟಿಪ್ಪುವಿನ ಸಾವಿನಿಂದ ತಾವು ಗಳಿಸಿದ್ದೇನು? ಎಂಬುದನ್ನು ಬ್ರಿಟಿಷರು ಸ್ಪಷ್ಟವಾಗಿ ಅರಿತಿದ್ದರು.

ಟಿಪ್ಪುವಿನ ಸೋಲು ಒಬ್ಬ ದೊರೆಯ ಸೋಲಲ್ಲ. ಅದು ವಸಾಹತುಶಾಹಿಯ ವಿರುದ್ಧ ಭಾರತೀಯರ ಪ್ರತಿರೋಧದ ಸೋಲಾಗಿತ್ತು. ಭಾರತದ ಮೇಲೆ ಸಂಪೂರ್ಣ ಬ್ರಿಟಿಷರ ಹಿಡಿತ ಸ್ಥಾಪಿತವಾಯಿತು. ಕ್ರಿ.ಶ.೧೭೯೯ ಮೇ ೧೧ ರಂದು ಈಸ್ಟ್ ಇಂಡಿಯಾ ಕಂಪನಿಯ ಅಧ್ಯಕ್ಷ ದುಂಡಾಸನಿಗೆ ರಾಬರ್ಟ್ ಕ್ಲೈವ್ ಬರೆದ ಪತ್ರದಲ್ಲಿ "ಪ್ಲಾಸಿ ಕದನದ ನಂತರ ಭಾರತದಲ್ಲಿ ಇಷ್ಟೊಂದು ಪ್ರಮುಖ ಘಟನೆ ನಡೆದಿಲ್ಲ. ಈ ಅದ್ಭುತ ವಿಜಯದಿಂದ ಬ್ರಿಟಿಷ್ ಸಾಮ್ರಾಜ್ಯದ ಅಸ್ಥಿಭಾರ ದೃಢವಾಗಿ ನೆಲೆಯೂರಿದೆ.

ಟಿಪ್ಪುವಿನ ಸಾವಿನೊಡನೆ ಭಾರತ ಅದರಲ್ಲೂ ಕರ್ನಾಟಕದ ಅವನತಿಯ ದುರಂತ ಪ್ರಾರಂಭವಾಯಿತು. ಊಳಿಗಮಾನ್ಯ ಶೋಷಣೆಯಡಿ ನೊಂದು ನಲುಗಿದ್ದ ಲಕ್ಷಾಂತರ ಜನತೆ ಪಡೆದುಕೊಂಡಿದ್ದ ಸ್ವಾತಂತ್ರ್ಯದ ಬೆಳಕು ನಂದಿ ಹೋಯಿತು. ರೈತರು, ಕುಶಲಕರ್ಮಿಗಳು, ವ್ಯಾಪಾರಸ್ಥರು ಹಾಗೂ ಜಮೀನ್ದಾರರು, ಪರಾವಲಂಬಿ ಅರಸೊತ್ತಿಗೆಯ ಹಾಗೂ ಬ್ರಿಟಿಷ್ ವಸಾಹತುಶಾಹಿಗಳ ಪಾಲಾಯಿತು. ಇಡೀ ಭಾರತ ಊಳಿಗಮಾನ್ಯ ವ್ಯವಸ್ಥೆಯಿಂದ ಹೊರಬರಲು

ಪ್ರಯತ್ನಿಸುತ್ತಿದ್ದ ಸಮಯದಲ್ಲಿ ಹೈದರ್–ಟಿಪ್ಪು ಆಳ್ವಿಕೆ ಕರ್ನಾಟಕದ ವಿಕಾಸಕ್ಕೆ ಗುಣಾತ್ಮಕ ಕ್ರಾಂತಿಕಾರಿ ಪರಿವರ್ತನೆ ತಂದುಕೊಟ್ಟಿತು.[೫] ಹೈದರ್–ಟಿಪ್ಪು ಪ್ರಭುತ್ವ ಜನಕಂಟಕವಾಗಿರದೇ ಪ್ರಜ್ಞಾಶೀಲ, ಸರ್ವಾಧಿಕಾರಿ ಪ್ರಭುತ್ವವಾಗಿತ್ತು. ಈಜಿಪ್ಟ್, ಟರ್ಕಿ, ಡೆನ್ಮಾರ್ಕ್, ಇಂಗ್ಲೆಂಡ್, ಫ್ರಾನ್ಸ್ ದೇಶಗಳ ಊಳಿಗಮಾನ್ಯ ವಿರೋಧಿ ಪ್ರಜ್ಞಾಶೀಲ ಸರ್ವಾಧಿಕಾರಿ ಪ್ರಭುತ್ವಗಳು ಮಾಡಿದಂತೆ ನಾಡಿನ ಪ್ರಗತಿಗೆ ಕಂಟಕರಾಗಿದ್ದ ಪಾಳೆಯಗಾರರು, ಮಠಮಾನ್ಯಗಳ ಸರ್ವಾಧಿಕಾರವನ್ನು, ಊಳಿಗಮಾನ್ಯ ಪ್ರಭುತ್ವವನ್ನೂ ನಾಶ ಮಾಡಿದರು.[೬] ಹಾಸನ, ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಚಿತ್ರದುರ್ಗ ರಾಯಚೂರು, ಬಳ್ಳಾರಿ, ಧಾರವಾಡ, ತುಮಕೂರು, ಕೋಲಾರ, ಇಂಥ ಎರಡು ನೂರು ಪಾಳೆಯಗಾರರನ್ನು ನಾಶಪಡಿಸಿದರು. ಫ್ರಾನ್ಸಿಸ್ ಬುಕಾನನ್ ಗುರುತಿಸಿದಂತೆ ಮೈಸೂರು ಅರಸರಾದ ಹೈದರ್–ಟಿಪ್ಪು, ಪಾಳೆಯಗಾರ ವಿರೋಧಿ ಸೈನಿಕ ಕಾರ್ಯಚರಣೆಗಳಿಂದಾಗಿ ಮೈಸೂರು ರಾಜ್ಯದಲ್ಲಿ ಊಳಿಗಮಾನ್ಯ ಪದ್ಧತಿ ಕುಸಿಯಿತು.

ಹೈದರಾಲಿ ಮತ್ತು ಟಿಪ್ಪು ಇಬ್ಬರು ಬ್ರಿಟಿಷ್ ವಸಾಹತುಶಾಹಿ ವಿರೋಧಿ ನೀತಿಯನ್ನೇ ಅನುಸರಿಸಿದರು. ಮೈಸೂರು ರಾಜ್ಯ ಮಾತ್ರವಲ್ಲದೆ ಇಡೀ ಭಾರತದಿಂದಲೇ ಅವರನ್ನು ಹೊರದೂಡುವ ಮಹತ್ವಾಕಾಂಕ್ಷೆ ಹೊಂದಿದ್ದರು. ಅದಕ್ಕಾಗಿ ಮರಾಠರು, ಹೈದರಾಬಾದಿನ ನಿಜಾಮ, ಸ್ಥಳೀಯ ಪಾಳೆಯಗಾರ, ಒಕ್ಕೂಟ ರಚಿಸಿ ಬ್ರಿಟಿಷರನ್ನು ಕಾಲ್ತೆಗೆಸುವ ಯೋಜನೆಯನ್ನು ರೂಪಿಸಿದರು. ಅದು ಈ ನಾಯಕರುಗಳ ಅಸಹಕಾರದಿಂದ ಸಾಧ್ಯವಾಗಲಿಲ್ಲ. ಆದರೂ ಧೈರ್ಯಗೆಡದೆ ಬ್ರಿಟಿಷರ ವಿರುದ್ಧ ಸಮರ ಸಾರುತ್ತಲೇ ಮುನ್ನಡೆದರು. ಟಿಪ್ಪುವಿನ ಮೈಸೂರು ಸೈನ್ಯವು ಬ್ರಿಟಿಷರ ವಸಾಹತುಶಾಹಿ ಮಿತ್ರಕೂಟಗಳ ವಿರುದ್ಧ ನಾಲ್ಕು ಯುದ್ಧಗಳನ್ನು ನಡೆಸಿತು. ಈ ನಾಲ್ಕೂ ಯುದ್ಧಗಳಲ್ಲಿ ಟಿಪ್ಪು ಭಾಗವಹಿಸಿದ್ದನಲ್ಲದೇ ಕೊನೆಯ ಮೂರು ಯುದ್ಧಗಳಲ್ಲಿ ತನ್ನ ಸೇನೆಯ ದಂಡನಾಯಕನಾಗಿಯೂ,[೭] ಯುದ್ಧಭೂಮಿಕೆಯಲ್ಲಿ ಸೈನ್ಯವನ್ನು ಮುನ್ನಡೆಸಿದನು. ಹೈದರಾಲಿ ಹುತಾತ್ಮನಾದ ನಂತರ ಟಿಪ್ಪು ತಂದೆಯ ಉತ್ತರಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದನು. ಈ ಸಮಯದಲ್ಲಿ ಭಾರತದ ಪರಿಸ್ಥಿತಿ ಸಂಕ್ರಮಣ ಸ್ಥಿತಿಯಲ್ಲಿತ್ತು. ಔರಂಗಜೇಬನ ನಂತರ ಮೊಗಲರ ಹಿಡಿತದಲ್ಲಿದ್ದ ರಾಜರುಗಳು ಸ್ವಾತಂತ್ರ್ಯ ಘೋಷಿಸಿಕೊಂಡರು. ರಾಜ ರಾಜರ ನಡುವೆ ಅಧಿಕಾರಕ್ಕಾಗಿ ಸದಾ ಘರ್ಷಣೆಗಳು ನಡೆಯುತ್ತಿದ್ದವು. ರಾಜಕೀಯ ಅರಾಜಕತೆ, ಅಸ್ಥಿರತೆ ಉಂಟಾಯಿತು. ದಕ್ಷಿಣ ಭಾರತದಲ್ಲಿಯೂ ವಿಜಯನಗರ ಪತನವಾಗಲಾಗಿ ಪಾಳೆಯಗಾರರ ಅಟ್ಟಹಾಸ ಮಿತಿ ಮೀರಿತ್ತು. ಮುಖ್ಯವಾಗಿ ಕ್ರಿ.ಶ.೧೭೫೭ರಲ್ಲಿ ನಡೆದ ಪ್ಲಾಸಿ ಕದನದಲ್ಲಿ ಬಂಗಾಳದ ನವಾಬ ಸಿರಾಜುದ್ದೌಲ ಸೋಲಲಾಗಿ[೮] ಬ್ರಿಟಿಷರು ಭಾರತದಲ್ಲಿ ಪ್ರಭುತ್ವ ಸ್ಥಾಪನೆಗೆ ಮುಂದಾದರು. ತಮ್ಮ ರಾಜತಾಂತ್ರಿಕತೆ ಮತ್ತು ವ್ಯಾಪಾರ ನೈಪುಣ್ಯತೆ ಬಳಸಿ ಭಾರತದಲ್ಲಿ ವಸಾಹತುಶಾಹಿ ಶಕ್ತಿಯನ್ನು ಬಲಗೊಳಿಸಲು

ಪ್ರಯತ್ನಿಸಿದರು ಅದರಂತೆ ಮೈಸೂರು ರಾಜ್ಯವನ್ನು ತಮ್ಮ ಹಿಡಿತಕ್ಕೆ ಪಡೆಯಲು ಯತ್ನಿಸಿದರು. ಇವರ ಪ್ರಯತ್ನಕ್ಕೆ ಹೈದರ್ ಮತ್ತು ಟಿಪ್ಪು ತಡೆಗೋಡೆಯಾಗಿ ನಿಂತರು. ಟಿಪ್ಪು ಪ್ರಬಲನಾಗಿಯೇ ಬ್ರಿಟಿಷ್ ವಿರೋಧಿ ಭಾವನೆ ವ್ಯಕ್ತಪಡಿಸಿದ. ವ್ಯಾಪಾರ–ವಾಣಿಜ್ಯ ಹಾಗೂ ಸೈನಿಕವಾಗಿಯೂ ಅವರ ಪ್ರತಿರೋಧವನ್ನು ಎದುರಿಸಲು ಫ್ರೆಂಚರ ನೆರವಿಗಾಗಿ ಸಕಲ ಸಿದ್ಧತೆ ಮಾಡಿಕೊಂಡಿದ್ದನು.

೪.೧. ರಾಜ್ಯದ ಏಕಸ್ವಾಮ್ಯ

ಟಿಪ್ಪು ಮೈಸೂರು ರಾಜ್ಯದ ಆಡಳಿತ ಮತ್ತು ಆರ್ಥಿಕ ವ್ಯವಸ್ಥೆಯ ಮೇಲೆ ತನ್ನ ಮತ್ತು ರಾಜ್ಯದ ಏಕಸ್ವಾಮ್ಯ ಏರ್ಪಡಿಸಲು ಪ್ರಯತ್ನಿಸಿದನು. ಮೈಸೂರು ಒಡೆಯರನ್ನು ಅಧಿಕಾರದಿಂದ ದೂರವಿರಿಸಿ ರಾಜ್ಯದ ಸಮಗ್ರ ಅಧಿಕಾರಗಳನ್ನು ತನ್ನಲ್ಲೆ ಕೇಂದ್ರೀಕರಿಸಿಕೊಂಡು ಸಾರ್ವಭೌಮ ಆಡಳಿತಗಾರನಾಗಿ ಅಧಿಕಾರ ನಿರ್ವಹಿಸಿದ. ತನ್ನನ್ನು ಬಾದಷಹನೆಂದು ಕರೆದುಕೊಂಡು ತನ್ನದೇ ಒಡ್ಡೋಲಗ ನಡೆಸಿದ. ತಾನು ಪಡೆದುಕೊಂಡಿದ್ದ ಅಧಿಕಾರ ಮತ್ತು ಬಿರುದುಗಳಿಗೆ ಖಲೀಫನಾದ ಟರ್ಕಿ ಸುಲ್ತಾನನಿಂದ ಮನ್ನಣೆ ಪಡೆದು ಶಾಸನಬದ್ಧ ದೊರೆಯಾದನು. ಟಿಪ್ಪು ಅಧಿಕಾರಕ್ಕೆ ಬಂದಾಗ ಮೈಸೂರು ರಾಜ್ಯವು ಸ್ವತಂತ್ರರಾದ ಹಲವು ಪಾಳೆಯಗಾರರು ಮತ್ತು ಜಮೀನ್ದಾರರಿಂದ ಕೂಡಿತ್ತು. ಇವರುಗಳ ಸ್ವಾತಂತ್ರ್ಯ ಪ್ರವೃತ್ತಿ ಮತ್ತು ಸ್ವಾಯತ್ತತೆಯನ್ನು ಹತ್ತಿಕ್ಕಿ ರಾಜ್ಯಾಡಳಿತದ ಎಲ್ಲಾ ಭಾಗಗಳ ಮೇಲೆ ಏಕಸ್ವಾಮ್ಯ ಸ್ಥಾಪಿಸಲು ಹೈದರ್ ಮತ್ತು ಟಿಪ್ಪು ಪ್ರಯತ್ನಿಸಿದರು.

ರಾಜಕೀಯವಾಗಿ ಟಿಪ್ಪು ನಿರಂಕುಶನಾಗಿ ಬಿಂಬಿತನಾಗಿದ್ದರೂ ರಾಜ್ಯದ ಪ್ರಗತಿ ಮತ್ತು ಸಂರಕ್ಷಣೆಯ ದೃಷ್ಟಿಯಿಂದ ಪ್ರಗತಿಪರ ನಿಲುವುಗಳನ್ನು ಹೊಂದಿದ್ದ. ರಾಜ್ಯದ ಸರ್ವತೋಮುಖ ಅಭಿವೃದ್ಧಿ ದೃಷ್ಟಿಯಿಂದ ರಾಜ್ಯದ ಎಲ್ಲಾ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಅವುಗಳನ್ನು ನಿಯಮ ಬದ್ಧವಾಗಿ ಬಳಸುವುದು ಅವನ ನೀತಿಯಾಗಿತ್ತು.[೯] ತನ್ನ ಅಧಿಕಾರ ಶಕ್ತಿಯನ್ನು ಭದ್ರಪಡಿಸುವುದು ಮತ್ತು ರಾಜ್ಯದ ಪ್ರಗತಿಯನ್ನು ಸಾಧಿಸುವುದು ಈ ಎರಡು ಮುಖ್ಯ ನೀತಿಗಳನ್ನು ಹೊಂದಿದ್ದ. ಆಡಳಿತ ಮತ್ತು ಅಧಿಕಾರದ ಲೋಪದೋಷಗಳನ್ನು ಸರಿಪಡಿಸಲು ಕಠಿಣ ಕಾಯಿದೆಗಳನ್ನು ಜಾರಿಗೆ ತಂದನು. ಆಂಗ್ಲ ಬರಹಗಾರ ಮೆಕೆನ್ಜಿ ಪ್ರಕಾರ ಟಿಪ್ಪು ಒಳ್ಳೆಯ ಸರಕಾರದ ಉತ್ತಮ ತತ್ವಗಳಿಂದ ಆಡಳಿತ ವ್ಯವಸ್ಥೆಗೆ ನವಚೈತನ್ಯ ತುಂಬಿದ. ನೆರೆಯ ಯಾವ ರಾಜ್ಯವೂ ಕಂಡರಿಯದ ಸಂಪನ್ಮೂಲದ ದಕ್ಷ ಆರ್ಥಿಕ ನಿರ್ವಹಣೆ ಮಾಡಿ ಮಧ್ಯವರ್ತಿಗಳ ಮೋಸ ಮತ್ತು ವಂಚನೆಗಳನ್ನು ತಪ್ಪಿಸಿ ತನ್ನ ರೈತರನ್ನು ರಕ್ಷಿಸಿದ. ರಾಜ್ಯದ ಪ್ರಮುಖ ವಿಚಾರಗಳಲ್ಲಿ ಟಿಪ್ಪು ಸೈನಿಕ ಮತ್ತು ನಾಗರಿಕ ಅಧಿಕಾರಿಗಳಿಂದ ಸಲಹೆ ಪಡೆಯುತ್ತಿದ್ದರೂ ಅಂತಿಮ ತೀರ್ಮಾನ ಅವನದೇ ಆಗಿತ್ತು. ಕೇಂದ್ರ ಸರಕಾರದಲ್ಲಿ ೭ ಆಡಳಿತ ವಿಭಾಗಗಳಿದ್ದು,

ಇವುಗಳಿಗೆ ಪ್ರಧಾನ ಅಧಿಕಾರಿಗಳು ಮತ್ತು ಅಧೀನ ಅಧಿಕಾರಿಗಳು ಇದ್ದರು. ರಾಜ್ಯದಲ್ಲಿ ೩೭ ಪ್ರಾಂತಗಳು ಮತ್ತು ೧೨೪ ತಾಲ್ಲೂಕುಗಳೂ ಇದ್ದವು.

ಟಿಪ್ಪು ರಾಜ್ಯದ ಆರ್ಥಿಕ ವ್ಯವಸ್ಥೆಯ ಮೇಲೆ ಏಕಸ್ವಾಮ್ಯ ಸ್ಥಾಪಿಸಿದ್ದ. ಕೃಷಿ, ವ್ಯಾಪಾರ, ವಾಣಿಜ್ಯ, ಕೈಗಾರಿಕೆ ಮತ್ತು ಉತ್ಪಾದನೆಗಳಲ್ಲಿ ಮೂಲಭೂತ ಬದಲಾವಣೆ ತರಲು ಬಯಸಿದನು. ಡಾಡ್ವೆಲ್ ಪ್ರಕಾರ "ಟಿಪ್ಪು ತನ್ನ ಆಡಳಿತದಲ್ಲಿ ಪಾಶ್ಚಾತ್ಯ ನೀತಿಗಳನ್ನು ಜಾರಿಗೆ ತರುವಲ್ಲಿ ಆಸಕ್ತಿ ವಹಿಸಿದ ಪ್ರಥಮ ಭಾರತೀಯ. ಅವನು ಪಾಶ್ಚಾತ್ಯ ವಿಜ್ಞಾನ ಮತ್ತು ರಾಜಕೀಯ ಸಿದ್ಧಾಂತಗಳಿಂದ ಪ್ರಭಾವಿತನಾಗಿದ್ದ. ಪಾಶ್ಚಾತ್ಯ ದೇಶಗಳು ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರದ ಮೂಲಕವೇ ಸಂಪದ್ಭರಿತ ಮತ್ತು ಶಕ್ತಿ ಶಾಲಿಗಳಾಗಿದ್ದವು. ಇದನ್ನು ಅರಿತು ಪಾಶ್ಚಾತ್ಯ ಮಾದರಿಯಲ್ಲೇ ರಾಜ್ಯದ ಪ್ರಗತಿ ಸಾಧಿಸಲು ಯೋಜಿಸಿದ. ಹೊರ ಜಗತ್ತಿನೊಡನೆ ಸಂಪರ್ಕ ಏರ್ಪಡಿಸಲು ರಾಜ್ಯವನ್ನು ತೀರಪ್ರದೇಶದವರೆಗೂ ವಿಸ್ತರಿಸಿದ. ಬಂದರು ಮತ್ತು ನೌಕಾಪಡೆ ಕಟ್ಟಿ ವಿದೇಶಿ ವ್ಯಾಪಾರ ವಾಣಿಜ್ಯೋದ್ಯಮಕ್ಕೆ ಉತ್ತೇಜನ ನೀಡಿದ. ರಾಜ್ಯದಲ್ಲಿ ಉತ್ಪಾದನೆಯಾಗುತ್ತಿದ್ದ ಮತ್ತು ವಿದೇಶಿ ಮಾರುಕಟ್ಟೆಗಳಲ್ಲಿ ಬಹು ಬೇಡಿಕೆಯಿದ್ದ ರೇಷ್ಮೆ, ಶ್ರೀಗಂಧ, ಏಲಕ್ಕಿ, ಮೆಣಸು, ತೆಂಗಿನಕಾಯಿ, ದಂತ, ಆಭರಣ ಇತ್ಯಾದಿ ವಸ್ತುಗಳ ಮೇಲೆ ರಾಜ್ಯದ ಏಕಸ್ವಾಮ್ಯ ಏರ್ಪಡಿಸಿ ಇವುಗಳ ಮೇಲೆ ವಿದೇಶಿಯರ ಹಸ್ತಕ್ಷೇಪವಿರದಂತೆ ಮಾಡಿದ. ಈ ಉತ್ಪಾದನೆ ವಸ್ತುಗಳನ್ನು ರಾಜ್ಯವೇ ಕೊಂಡು ವಿದೇಶಿಯರಿಗೆ ಮಾರುವ ಮತ್ತು ಹೆಚ್ಚು ಲಾಭಗಳಿಸುವ ವ್ಯವಸ್ಥೆ ಜಾರಿಗೆ ತಂದ. ಆಮದು ಮತ್ತು ರಫ್ತುಗಳ ಮೇಲೆ ರಾಜ್ಯದ ಹತೋಟಿ ಏರ್ಪಡಿಸಿದ. ಕಡಲ್ಗಳ್ಳರ ಹಾವಳಿ ತಪ್ಪಿಸಲು ಕ್ರಮ ಕೈಗೊಂಡ. ಚೀನಾ, ಫ್ರಾನ್ಸ್, ಬರ್ಮಾ, ಸಿಲೋನ್, ಪರ್ಷಿಯಾ, ಅರೇಬಿಯಾ, ಟರ್ಕಿ, ಬಾಸ್ರಾ, ಮಸ್ಕಟ್ ಮುಂತಾದ ದೇಶಗಳೊಂದಿಗೆ ವ್ಯಾಪಾರ ಸಂಪರ್ಕ ಏರ್ಪಡಿಸಿದ. ಭಾರತದ ಪಾಂಡಿಚೇರಿ, ಕಲ್ಲಿಕೋಟೆ, ಕಚ್, ಕರಾಚಿ, ಮಾಹೆ, ಕರ್ನೂಲು ಮುಂತಾದ ಕಡೆ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿದನು.[೧೦]

ಟಿಪ್ಪು ತನ್ನ ರಾಜ್ಯದ ಎಲ್ಲಾ ಭಾಗಗಳಲ್ಲಿ ಡಿಪೋಗಳನ್ನು ತೆರೆದನು. ಅವೇ ಮೂವತ್ತಿದ್ದವು. ಇವುಗಳಲ್ಲಿ ಮುಖ್ಯವಾದವು ಶ್ರೀರಂಗಪಟ್ಟಣ, ಬೆಂಗಳೂರು, ಕೋಲಾರ, ಸತ್ಯಮಂಗಲ, ಮುಳುಬಾಗಿಲು, ಮದನಪಲ್ಲಿ, ಗುರ್ರಮಕೊಂಡ, ಪುಂಗನೂರು, ಚಿತ್ರದುರ್ಗ, ಬಿದನೂರು, ಶಿಕಾರಿಪುರ, ಸುಂದಾ, ಮಂಗಳೂರು, ಕುಶಾಲಪುರ, ಕಾರವಾರ, ಭಟ್ಕಳ, ಜಮಾಲಬಾದ್, ಕಲ್ಲಿಕೋಟೆ, ಬನವಾಸಿ, ನಂದಿದುರ್ಗಗಳಲ್ಲಿದ್ದವು. ಈ ವ್ಯಾಪಾರ ಕೇಂದ್ರಗಳನ್ನು ನಿರ್ವಹಿಸಲು ಸೂಕ್ತ ಸಿಬ್ಬಂದಿಯನ್ನು ನೇಮಿಸಲಾಗಿತ್ತು. ಸಗಟು ವ್ಯಾಪಾರಕ್ಕೆ ಸಂಬಂಧಿಸಿದಂತೆ ಅದು ಸರಕಾರದ ಸ್ವಾಮ್ಯವಾಯಿತು.[೧೧]

ಟಿಪ್ಪು ಕ್ರಿ.ಶ.೧೭೮೭-೮೮ರಲ್ಲಿ ಜಾರಿಗೆ ತಂದ ವಾಣಿಜ್ಯ ನಿಯಮಗಳೂ ವ್ಯವಸ್ಥಿತವಾದ ಆಂತರ್ದೇಶಿ ವ್ಯಾಪಾರಕ್ಕೆ ಅವಕಾಶ ಕಲ್ಪಿಸಿತು. ವಾಣಿಜ್ಯ ಕೇಂದ್ರಗಳ ಸ್ಥಾಪನೆ, ಪ್ರಾಂತೀಯ ಅಧಿಕಾರಿಗಳ ನೇಮಕ, ಅವರ ಕರ್ತವ್ಯಗಳನ್ನು ಈ ವಾಣಿಜ್ಯ ನಿಯಮಗಳು ಹೊಂದಿದ್ದವು. ವಿದೇಶಿ ವ್ಯಾಪಾರ ವಾಣಿಜ್ಯಗಳಿಗೆ ಸಂಬಂಧಿಸಿದಂತೆ ಮಾತ್ರ ಗಣನೀಯ ಪ್ರಮಾಣದ ಏಕಸ್ವಾಮ್ಯವು ಸರಕಾರದ ಹಿಡಿತದಲ್ಲಿತ್ತು.

ದೇಶೀಯ ಮತ್ತು ವಿದೇಶಿಯ ವ್ಯಾಪಾರ-ವಾಣಿಜ್ಯ ವಲಯದಲ್ಲಿ ಸರಕಾರವು ಪ್ರವೇಶಿಸಿದ್ದರ ಉದ್ದೇಶ ಏಲಕ್ಕಿ, ಮೆಣಸು, ಶ್ರೀಗಂಧ ಮತ್ತು ಅಮೂಲ್ಯ ಹರಳುಗಳು ಮುಂತಾದ ವಸ್ತುಗಳ ಲಾಭದಾಯಕ ವ್ಯಾಪಾರದಲ್ಲಿ ವಸಾಹತುಗಾರರು ಕಾಲಿಡದಂತೆ ಅವರನ್ನು ದೂರವಿಡುವುದು, ಮತ್ತು ರಾಜ್ಯಕ್ಕೆ ಹೆಚ್ಚಿನ ವರಮಾನ ತರುವುದು. ಅದನ್ನು ಜನರ ಕಲ್ಯಾಣ ಕಾರ್ಯಕ್ರಮಗಳಿಗೆ ವಿನಿಯೋಗಿಸುವುದು. ಟಿಪ್ಪುವಿನ ಈ ನೀತಿಯು ಉತ್ತಮ ಫಲವನ್ನೆ ನೀಡಿತು. ರಾಜ್ಯದಲ್ಲಿ ಸರ್ವತೋಮುಖ ಪ್ರಗತಿ ಕಂಡುಬಂದಿತು. ಟಿಪ್ಪು ನಿರಂತರವಾಗಿ ಯುದ್ಧದಲ್ಲಿ ತೊಡಗಿದ್ದರೂ ಒಮ್ಮೆಯಾದರೂ ಅವರಿಗೆ ಆರ್ಥಿಕ ಮುಗ್ಗಟ್ಟು ಸಂಭವಿಸಲಿಲ್ಲ. ಕ್ರಿ.ಶ.೧೭೯೯ರಲ್ಲಿ ಟಿಪ್ಪು ಮರಣ ಹೊಂದಿದಾಗ ಅದಕ್ಕಿಂತ ಸ್ವಲ್ಪ ಮೊದಲು ಬ್ರಿಟೀಷರಿಗೆ ಅರ್ಧರಾಜ್ಯವನ್ನು ಬಿಟ್ಟುಕೊಟ್ಟರೂ, ಯುದ್ಧದ ನಷ್ಟ ಭರ್ತಿ ಹಣವನ್ನು ಪಾವತಿಸಿದರೂ ಅವನ ಖಜಾನೆ ತುಂಬಿತ್ತು.[೧೨] ಇದಕ್ಕೆ ಕಾರಣ ರಾಜ್ಯದ ಎಲ್ಲಾ ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಅವುಗಳ ಮೇಲೆ ರಾಜ್ಯದ ಏಕಸ್ವಾಮ್ಯವಿದುದ್ದು.

ಟಿಪ್ಪು ರಾಜ್ಯದಲ್ಲಿ ಜಾರಿಗೆ ತಂದ ಆರ್ಥಿಕ ನೀತಿಯ ಮುಖ್ಯ ಉದ್ದೇಶ ತನ್ನ ರಾಜ್ಯದಲ್ಲಿ ಸರಕಾರವು ಮುಖ್ಯವರ್ತಕನಾಗುವಂತೆ ಮಾಡುವುದಾಗಿತ್ತೇ ಹೊರತು ಏಕೈಕ ವರ್ತಕವಾಗುವಂತಲ್ಲ. ಸರಕಾರವು ಹೆಚ್ಚು ಹಣವನ್ನು ವ್ಯಾಪಾರ-ವಾಣಿಜ್ಯಕ್ಕೆ ತೊಡಗಿಸಿ ಅಪಾರ ಲಾಭ ಪಡೆಯುತ್ತಿತ್ತು. ಈ ಲಾಭವು ರಾಜ್ಯದ ಎಲ್ಲಾ ಪ್ರಜೆಗಳಿಗೆ ಸೇರಿದ ಲಾಭವಾಗಿತ್ತೇ ಹೊರತು ಕೇವಲ ಶ್ರೀಮಂತ ವರ್ತಕರದಲ್ಲ. ನಿಜವಾದ ಗುರಿ ರಾಜ್ಯದ ಖಜಾನೆಯನ್ನು ತುಂಬುವುದು. ಟಿಪ್ಪುವಿನ ಇಂಥ ನೀತಿಯು ವ್ಯಾಪಾರ ವಾಣಿಜ್ಯಗಳನ್ನು "ನಿರಂಕುಶ ರಾಜಕೀಯ ಶಕ್ತಿಯ ಅತಿರೇಕ ಕ್ರಮಗಳಿಗೆ ಅಧೀನ ಪಡಿಸಿದೆ ಎಂದು ಕೆಲವು ವಿದ್ವಾಂಸರು ವಾದಿಸಿದ್ದಾರೆ.[೧೩] ವಾದಗಳು ಏನೇ ಇದ್ದರೂ ಟಿಪ್ಪು ರಾಜ್ಯದ ಆರ್ಥಿಕ ವಲಯಗಳು ವಸಾಹತುಶಾಹಿಗಳ ಹಿಡಿತಕ್ಕೆ ಒಳಪಡುವುದನ್ನು ಇಚ್ಛಿಸಲಿಲ್ಲ. ರಾಜ್ಯವನ್ನು ಆರ್ಥಿಕವಾಗಿ ಬಲಿಷ್ಠಗೊಳಿಸಲು ಅವನು ಜಾರಿಗೆ ತಂದ ವ್ಯಾಪಾರ-ವಾಣಿಜ್ಯ ಕಾಯಿದೆಗಳು ಅನುಕೂಲಕರವಾಗಿದ್ದವು. ಬ್ರಿಟಿಷರು ಮೈಸೂರು ರಾಜ್ಯದ ಲಾಭದಾಯಕ ವಸ್ತುಗಳ ಮೇಲೆ ಕಣ್ಣಿಟ್ಟು ಅವುಗಳ ಮೇಲೆ ತಮ್ಮ ಆಧಿಪತ್ಯ ಸ್ಥಾಪಿಸಲು ಹಲವು ಹುನ್ನಾರಗಳನ್ನು ನಡೆಸಿದರೂ ಅದನ್ನು ಟಿಪ್ಪು ಬಹುತೇಕ ಅರಿತುಕೊಂಡನು. ಈ ವಾಣಿಜ್ಯ ಚಟುವಟಿಕೆಗಳಿಂದ

ಅವರನ್ನು ದೂರವಿಡುವ ದೃಷ್ಟಿಯಿಂದಲೇ ವಾಣಿಜ್ಯ ಕಾರ್ಯವ್ಯವಸ್ಥೆ ಮೇಲೆ ರಾಜ್ಯದ ಏಕಸ್ವಾಮ್ಯ ಸ್ಥಾಪಿಸಿದ.

ಹದಿನೆಂಟನೆಯ ಶತಮಾನದ ಕೊನೆಯಲ್ಲಿ ಇಂಗ್ಲೆಂಡ್, ಫ್ರಾನ್ಸ್, ಹಾಲೆಂಡ್‌ಗಳು ಪೋರ್ಚುಗಲ್‌ನ ವಿಶ್ವವ್ಯಾಪಾರ ಏಕಸ್ವಾಮ್ಯದ ವಿರುದ್ಧ ಯುದ್ಧ ಆರಂಭಿಸಿದವು. ಕ್ರಿ.ಶ.೧೭೦೦ರ ವೇಳೆಗೆ ಈ ರಾಷ್ಟ್ರಗಳು ಯುರೋಪಿನ ಪ್ರಮುಖ ವ್ಯಾಪಾರಿ ಶಕ್ತಿಗಳಾಗಿ ಕಾಣಿಸಿಕೊಂಡವು. ಇವು 'ಮರ್ಕೆಂಟೈಲಿಸಂ' ಎಂಬ ವ್ಯಾಪಾರ ತತ್ವದ ಮೇಲೆ ತಮ್ಮ ವ್ಯಾಪಾರ ವಹಿವಾಟು ನಡೆಸುತ್ತಿದ್ದವು. ಡಚ್ಚರು ಕ್ರಿ.ಶ.೧೬೦೨ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪನಿಯನ್ನು ಸ್ಥಾಪಿಸಿದರು. ಹತ್ತಿ, ಇಂಡಿಗೋ, ಅಫೀಮು, ಕಚ್ಚಾರೇಷ್ಮೆ ಮುಂತಾದ ವಸ್ತುಗಳ ಸಹಾಯದಿಂದ ಡಚ್ಚರು ಪೋರ್ಚುಗೀಸರ ಹಿಡಿತದಲ್ಲಿದ್ದ ವ್ಯಾಪಾರವನ್ನು ತಮ್ಮ ಕೈವಶ ಮಾಡಿಕೊಂಡರು. ಬ್ರಿಟಿಷರು ಕ್ರಿ.ಶ.೧೬೦೦ರಲ್ಲಿ ಬ್ರಿಟಿಷ್ 'ಈಸ್ಟ್ ಇಂಡಿಯಾ ಕಂಪನಿ' ಸ್ಥಾಪಿಸಿದರು. ಕಂಪನಿಯು ಪೂರ್ವದೇಶಗಳೊಂದಿಗೆ ವ್ಯಾಪಾರದಲ್ಲಿ ಏಕಸ್ವಾಮ್ಯ ನೀತಿಯನ್ನು ಅನುಸರಿಸಿತು. ಬ್ರಿಟಿಷರಿಗಿದ್ದ ವಿರೋಧವನ್ನು ಹಂತಹಂತವಾಗಿ ಮಟ್ಟ ಹಾಕಿದರು. ಫ್ರೆಂಚರು ಕ್ರಿ.ಶ.೧೬೬೪ರಲ್ಲಿ ದಿ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪಿಸಿದರು. ಫ್ರೆಂಚರಿಗೆ ರಾಜಕೀಯ ಹಾಗೂ ವ್ಯಾಪಾರ ಕ್ಷೇತ್ರದಲ್ಲಿನ ಎದುರಾಳಿ ಇಂಗ್ಲೆಂಡ್ ಆಗಿತ್ತು. ಇಂಗ್ಲೆಂಡಿನೊಂದಿಗಿನ ಪೈಪೋಟಿಯು ಫ್ರಾನ್ಸ್ ತನ್ನ ಸಾಮ್ರಾಜ್ಯ ಕಟ್ಟುವ ಕನಸ್ಸು ಚೂರಾಗುವಂತೆ ಮಾಡಿತು. ವ್ಯಾಪಾರದಲ್ಲಿ ಏಕಸ್ವಾಮ್ಯ ಸ್ಥಾಪಿಸುವಲ್ಲಿ ಮತ್ತು ರಾಜಕೀಯ ವಲಯದಲ್ಲಿ ಸ್ಥಿರತೆಯನ್ನು ಕಂಡುಕೊಳ್ಳುವಲ್ಲಿ ಬ್ರಿಟಿಷರು ಯಶಸ್ವಿಯಾದರು. ಇವರು ಯುರೋಪಿನ ಇನ್ನಿತರ ಶಕ್ತಿಗಳನ್ನು ದಮನ ಮಾಡಿದರು. ಜೊತೆಗೆ ಸ್ಥಳೀಯರನ್ನು ತಮ್ಮ ನಿಯಂತ್ರಣಕ್ಕೆ ಒಳಪಡಿಸಿದರು. ಕರ್ನಾಟಕವನ್ನು ತಮ್ಮ ವ್ಯಾಪಾರ ಅನುಕೂಲಕ್ಕಾಗಿ ಹಲವು ಘಟಕಗಳನ್ನಾಗಿ ವಿಂಗಡಿಸಿದರು. ಇದರಿಂದಾಗಿ ಹದಿನೇಳನೆಯ ಶತಮಾನದ ಮೊದಲಾರ್ಧ ವ್ಯಾಪಾರ ಏಕಸ್ವಾಮ್ಯಕ್ಕಾಗಿ ನಡೆದ ಹೋರಾಟವು ಒಪ್ಪಂದಗಳಿಗೆ ಸೀಮಿತವಾಯಿತು. ಕೆಳದಿಯ ನಾಯಕರು, ಮೈಸೂರು ಒಡೆಯರು, ಚಿತ್ರದುರ್ಗದ ನಾಯಕರು ಹಾಗೂ ಅಂದಿನ ಸಣ್ಣಪುಟ್ಟ ಅನೇಕ ಅರಸರು ಒಂದಲ್ಲ ಒಂದು ರೀತಿಯಲ್ಲಿ ಈ ಅನುಭವಗಳಿಗೆ ಒಳಗಾದರು. ಹೀಗಾಗಿ ವಿಜಯನಗರೋತ್ತರ ಸಂದರ್ಭದಲ್ಲಿ ಯುರೋಪಿಯನ್ನರ ಅತಿಯಾದ ಮಧ್ಯಪ್ರವೇಶ, ವ್ಯಾಪಾರದಲ್ಲಿ ಏಕಸ್ವಾಮ್ಯ ಸಂಪಾದಿಸುವ ಕಾತುರ, ಸ್ಥಳೀಯ ಅರಸು ಮನೆತನಗಳ ನಿರಂತರ ಯುದ್ಧಗಳು ಮುಂತಾದವು ಸ್ಥಳೀಯ ಅರ್ಥವ್ಯವಸ್ಥೆಯಲ್ಲಿ ಏರುಪೇರುಗಳನ್ನುಂಟು ಮಾಡಿದವು. ಅನೇಕ ವಾಣಿಜ್ಯ ಕೇಂದ್ರಗಳು ತೀವ್ರ ಆಘಾತವನ್ನು ಅನುಭವಿಸಿದವು. ಮೈಸೂರು ಸುಲ್ತಾನರ ಆಳ್ವಿಕೆಯಲ್ಲೂ ಅದು ಮುಂದುವರೆಯಿತು.[೧೪]

ಬ್ರಿಟಿಷರು ಅನುಸರಿಸಿದ ವ್ಯಾಪಾರ ನೀತಿಗಳು ಮೈಸೂರು ರಾಜ್ಯದ ಸ್ಥಳೀಯ ವ್ಯಾಪಾರಸ್ಥರಿಗೆ ತೀವ್ರ ಸವಾಲುಗಳಾದವು. ಇಲ್ಲಿನ ಎಲ್ಲಾ ವಸ್ತುಗಳ ಮೇಲೆ ವ್ಯಾಪಾರಿ ಹಿಡಿತ, ಬ್ರಿಟಿಷರು ಸ್ಥಳೀಯ ವ್ಯಾಪಾರಸ್ಥರು ಮೇಲೇಳದಂತೆ ಮಟ್ಟಹಾಕಿದರು. ಇವರ ತೀವ್ರ ಪೈಪೋಟಿ ಎದುರಿಸಲಾರದೆ ಅನೇಕರು ಅಪಾರ ನಷ್ಟ ಅನುಭವಿಸಿದರು. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಒಂದು ವ್ಯವಸ್ಥಿತ ವ್ಯಾಪಾರಿ ಸಂಸ್ಥೆಯಾಗಿದ್ದು, ಶಿಸ್ತುಬದ್ಧವಾಗಿತ್ತು. ಲಾಭಗಳಿಸುವುದು ಅದರ ಮೊದಲ ಆದ್ಯತೆಯಾಗಿತ್ತು. ಇದಕ್ಕೆ ಬ್ರಿಟನ್ ಸರ್ಕಾರ ಪೂರ್ಣ ಸಹಕಾರ ನೀಡುತ್ತಿತ್ತು. ಇಂಥ ವ್ಯವಸ್ಥೆ ಸ್ಥಳೀಯ ವ್ಯಾಪಾರಸ್ಥರಿಗೆ ಲಭ್ಯವಿರಲಿಲ್ಲ. ಹೀಗಾಗಿ ಬ್ರಿಟಿಷರು ಮೈಸೂರು ರಾಜ್ಯದ ವ್ಯಾಪಾರ–ವಾಣಿಜ್ಯದ ಮೇಲೂ ಏಕಸ್ವಾಮ್ಯ ಸ್ಥಾಪಿಸಿದರು.

ಟಿಪ್ಪು ತಾನು ಅಧಿಕಾರಕ್ಕೆ ಬಂದ ಮೇಲೆ ಬ್ರಿಟಿಷ್ ವಸಾಹತುಶಾಹಿ ಧೋರಣೆ ವಿರುದ್ಧ ಸಮರ ಸಾರಿದ. ಜೊತೆಗೆ ಅವರ ವ್ಯಾಪಾರ–ವಾಣಿಜ್ಯ ಬಲವನ್ನು ಮಟ್ಟ ಹಾಕಲು ಪ್ರಯತ್ನಿಸಿದ. ಅವರ ಏಕಸ್ವಾಮ್ಯವನ್ನು ಕೊನೆಗೊಳಿಸಲು ಸ್ಥಳೀಯ ವ್ಯಾಪಾರಸ್ಥರಿಗೆ ಉತ್ತೇಜನ ನೀಡಿದ. ವ್ಯಾಪಾರ–ವಾಣಿಜ್ಯ ಕಾಯಿದೆಗಳನ್ನು ಜಾರಿಗೆ ತಂದನು. ಕೃಷಿ ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆ ಕ್ರಮ ಕೈಗೊಂಡನು. ಫ್ರಾನ್ಸ್, ಅಫ್ಘಾನಿಸ್ಥಾನ, ಟರ್ಕಿ, ಇರಾನ್ ಮೊದಲಾದ ದೇಶಗಳೊಂದಿಗೆ ಸಂಪರ್ಕ ಸಾಧಿಸಿ ತನ್ನ ಅಂತರ್ದೇಶಿ ವ್ಯಾಪಾರದ ಅಭಿವೃದ್ಧಿಗೆ ಚಾಲನೆ ನೀಡಿದ.

ಯುರೋಪಿಯನ್ನರ ವ್ಯಾಪಾರ ಮತ್ತು ರಾಜ್ಯ ವಿಸ್ತರಣಾ ಧೋರಣೆಯನ್ನು ಪ್ರಬಲವಾಗಿ ವಿರೋಧಿಸುತ್ತಲೇ ಮೈಸೂರು ಸುಲ್ತಾನರು ಬೆಂಗಳೂರು, ಮಂಗಳೂರು, ಮೈಸೂರು ಮುಂತಾದ ಪಟ್ಟಣಗಳನ್ನು ಆರ್ಥಿಕ ಸ್ವಾವಲಂಬನೆಯ ಕೇಂದ್ರಗಳನ್ನಾಗಿ ಕಟ್ಟುವ ಪ್ರಯತ್ನ ಮಾಡಿದರು. ಹೊಸ ವಾಣಿಜ್ಯ ಮತ್ತು ಕೈಗಾರಿಕಾ ನೀತಿಗಳನ್ನು ಜಾರಿಗೊಳಿಸಿದರು. ನಿರಂತರ ಯುದ್ಧಗಳ ನಡುವೆಯೂ ಹೊಸ ನಗರ ಅರ್ಥವ್ಯವಸ್ಥೆಯ ಹುಟ್ಟಿಗೆ ಕಾರಣರಾದರು. ಟಿಪ್ಪು ತನ್ನ ರಾಜ ತಾಂತ್ರಿಕ ಮತ್ತು ವ್ಯಾಪಾರ–ವಾಣಿಜ್ಯಗಳ ಉದ್ದೇಶ ಸಾಧನೆಗಾಗಿ ಹೊಸ ಪ್ರಯೋಗಗಳನ್ನು ಮಾಡಿದನು. ವಿದೇಶಗಳಲ್ಲಿ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸುವುದು. ದೇಶಿ ಮತ್ತು ವಿದೇಶಿ ವರ್ತಕರಿಗೆ ಎಲ್ಲಾ ಬಗೆಯ ಮೂಲಭೂತ ವ್ಯಾಪಾರಿ ಸೌಲಭ್ಯಗಳನ್ನು ನೀಡಿ ಮೈಸೂರಿನತ್ತ ಆಕರ್ಷಿಸುವುದು, ಹೊಸ ವಾಣಿಜ್ಯ ವಿಭಾಗ ಸ್ಥಾಪಿಸುವುದು, ನೌಕಾನೆಲೆಯ ನಿರ್ಮಾಣ, ಫಿರಂಗಿ ಮತ್ತು ಇನ್ನಿತರ ಯುದ್ಧೋಪಕರಣಗಳ ತಯಾರಿಕೆ ಇವೇ ಮುಂತಾದ ಪ್ರಯೋಗಗಳನ್ನು ಮಾಡುವ ಮೂಲಕ ನಗರ ಕೇಂದ್ರಗಳು ಹೆಚ್ಚು ಚಲನಶೀಲವಾಗುವಂತೆ ಹಾಗೂ ಅವು ಬ್ರಿಟಿಷರೊಂದಿಗೆ ವಿರುದ್ಧದ ಯುದ್ಧದಲ್ಲಿ ನಿರ್ಣಾಯಕ ಪಾತ್ರ ವಹಿಸುವಂತೆ ಮಾಡಿದನು.

ಟಿಪ್ಪು ಕೈಗಾರಿಕಾ ವಲಯದಲ್ಲೂ ಏಕಸ್ವಾಮ್ಯ ಹೊಂದಲು ಯೋಜಿಸಿದ ದೇಶಿಯ ಮತ್ತು ವಿದೇಶಿಯ ತಂತ್ರಗಾರಿಕೆಯನ್ನು ಬಳಸಿ ಆಧುನೀಕರಣಗೊಳಿಸಲು ಪ್ರಯತ್ನಿಸಿದ. ಮೈಸೂರು ರಾಜ್ಯಕ್ಕೆ ವಿದೇಶಿಯ ಕರಕುಶಲ ಕರ್ಮಿಗಳು ಮತ್ತು ತಂತ್ರಜ್ಞರನ್ನು ಕರೆಸಿಕೊಂಡನು. ಇದರ ಮೂಲಕ ಕೈಗಾರಿಕಾ ಕ್ಷೇತ್ರದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿದನು. ಹಡಗು ನಿರ್ಮಾಣ, ಬಂದೂಕು ತಯಾರಿಕೆ, ಗಾಜು ತಯಾರಿಕೆ ಹಾಗೂ ಇತರ ಉಪಯುಕ್ತ ವಸ್ತುಗಳ ತಯಾರಿಕೆಯಲ್ಲಿ ನಿಪುಣರಾದವರನ್ನು ಕರೆತರುವ ವ್ಯವಸ್ಥೆ ಮಾಡಿದನು. ಬಂದೂಕು, ಕೋವಿಗಳು, ಫಿರಂಗಿಗಳನ್ನು, ಚಾಕುಗಳು, ಕತ್ತರಿಗಳು ಮತ್ತು ಕೈಗಡಿಯಾರಗಳನ್ನು ಶ್ರೀರಂಗಪಟ್ಟಣದಲ್ಲಿ ತಯಾರಿಸಲಾಗುತ್ತಿತ್ತು. ಕಬ್ಬಿಣವನ್ನು ಎರಕ ಹೊಯ್ಯುವ ಕೆಲಸವನ್ನು ಮಧುಗಿರಿ, ಚೆನ್ನರಾಯದುರ್ಗ, ಹಾಗಲವಾಡಿ, ದೇವರಾಯನದುರ್ಗಗಳಲ್ಲಿ ಮಾಡಲಾಗುತ್ತಿತ್ತು. ನೌಕಾನಿರ್ಮಾಣ ಟಿಪ್ಪುವಿನ ಕನಸುಗಳಲ್ಲಿ ಒಂದು. ಹಡಗು ಕಟ್ಟಲು ಮರವನ್ನು ಕಲ್ಲಿಕೋಟೆಯಿಂದ ಮಂಗಳೂರಿಗೆ ತರಲಾಗುತ್ತಿತ್ತು. ಮಂಗಳೂರು, ಸದಾಶಿವಗಡ ಮತ್ತು ಬಾಸ್ಕೋರಾಜಿ ಎಂಬ ಸ್ಥಳಗಳಲ್ಲಿ ಹಡಗು ನಿರ್ಮಾಣ ಕೆಲಸ ನಡೆಯುತ್ತಿತ್ತು. ಬ್ರಿಟಿಷರ ವಿರೋಧಿಗಳಾದ ಫ್ರೆಂಚರ ನೆರವು ಪಡೆದು ಸೈನ್ಯವನ್ನು ಸುಸಜ್ಜಿತಗೊಳಿಸಿದ. ಟಿಪ್ಪು ಕೃಷಿ ಕ್ಷೇತ್ರ ಅಭಿವೃದ್ಧಿಪಡಿಸಲು ಅಗತ್ಯ ಯೋಜನೆ ರೂಪಿಸಿದನು. ತನ್ನ ರಾಜಧಾನಿಯಲ್ಲಿ ರೇಷ್ಮೆ ಉದ್ಯಮವನ್ನು ಅಭಿವೃದ್ಧಿ ಪಡಿಸಿದನು. ನೆಲಘಟ್ಟ ಜವಳಿ ಉದ್ಯಮ ಕೇಂದ್ರವಾಗಿತ್ತು. ಶ್ರೀರಂಗಪಟ್ಟಣದ ಬಳಿ ಕಾಗದ ಕಾರ್ಖಾನೆ ಸ್ಥಾಪಿಸಿದ. ಚೆನ್ನಪಟ್ಟಣದಲ್ಲಿ ಗಾಜಿನ ವಸ್ತುಗಳು ತಯಾರಾಗುತ್ತಿದ್ದವು. ಚಿಕ್ಕಬಳ್ಳಾಪುರ ಕಲ್ಲು ಸಕ್ಕರೆಗೆ ಪ್ರಸಿದ್ಧವಾಗಿತ್ತು. ಮೈಸೂರಿನಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲಾಯಿತು. ಟಿಪ್ಪು ತನ್ನ ಟಂಕಶಾಲೆಗಳಿಂದ ವಿವಿಧ ಬಗೆಯ ನಾಣ್ಯಗಳನ್ನು ಹೊರಡಿಸಿದನು. ಶ್ರೀರಂಗಪಟ್ಟಣ, ಮೈಸೂರು, ಬೆಂಗಳೂರು, ಬಿದನೂರು, ಚಿತ್ರದುರ್ಗ, ಕಲ್ಲಿಕೋಟೆ, ದಿಂಡಿಗಲ್, ಧಾರವಾಡ, ಹುತ್ತಿಗಳಲ್ಲಿ ಟಂಕಶಾಲೆಗಳಿದ್ದವು. ವರ್ತಕರು ಮತ್ತು ಕುಶಲಕರ್ಮಿಗಳು ನಗರ ಜೀವನದಲ್ಲಿ ಪ್ರಧಾನವಾಗಿ ಗುರುತಿಸಿಕೊಂಡರು. ಬ್ರಿಟಿಷರು ವ್ಯಾಪಾರ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಟಿಪ್ಪು ವ್ಯಾಪಾರ ಮತ್ತು ಕೈಗಾರಿಕಾ ನೀತಿಗಳನ್ನು ರೂಪಿಸಿದ.[೧೬] ಅವು ಪೂರ್ಣಫಲ ನೀಡದಿದ್ದರೂ ಬ್ರಿಟಿಷರಿಗೆ ಸವಾಲಾಗಿಯೇ ಕಂಡವು. ಅವರ ಮಿಲಿಟರಿ ಹೋರಾಟದ ಜೊತೆಗೆ ಆರ್ಥಿಕವಾಗಿಯೂ ಬ್ರಿಟಿಷರನ್ನು ಕುಗ್ಗಿಸುವ ಆಲೋಚನೆ ಟಿಪ್ಪುವಿನದಾಗಿತ್ತು.

೪.೨. ಆಂಗ್ಲೋ-ಮೈಸೂರು ಯುದ್ಧಗಳು

ಮೈಸೂರು ರಾಜ್ಯದ ಸೇನೆಯಲ್ಲಿ ಸಾಮಾನ್ಯ ಸೈನಿಕನಾಗಿ ಸೇವೆ ಆರಂಭಿಸಿದ ಹೈದರಾಲಿ ತನ್ನ ಸೈನಿಕ ಕೌಶಲ್ಯದಿಂದ ರಾಜನ ಗಮನ ಸೆಳೆದನು. ರಾಜ್ಯದ ಮುಖ್ಯ ಸೇನಾಧಿಪತಿಯಾಗಿದ್ದ ನಂಜರಾಜರು ಹೈದರಾಲಿಗೆ ಸೈನ್ಯದಲ್ಲಿ ಪ್ರಾತಿನಿಧ್ಯ ನೀಡಿದರು. ಹೈದರ್ ತನ್ನ ಛಲ, ಸಾಹಸ ಪ್ರವೃತ್ತಿ, ಚಾಣಾಕ್ಷತನ ಉಪಯೋಗಿಸಿ ಮೈಸೂರು ರಾಜಕಾರಣದಲ್ಲಿ ಬಹುಬೇಗನೇ ದಿಂಡಿಗಲ್ಲಿನ

ಫೌಜುದಾರಿ ಹುದ್ದೆಗೆ ಏರಿದ. ಕ್ರಮೇಣ ಮೈಸೂರಿನಲ್ಲಿ ರಾಜ್ಯದ ಆಂತರಿಕ ರಾಜಕಾರಣ, ಅರಮನೆಯ ರಾಜಕೀಯ, ದಳವಾಯಿಗಳ ಸಂಘರ್ಷ ಇಂಥ ಪರಿಸ್ಥಿತಿ ಹೈದರಾಲಿ ಮೈಸೂರು ಆಡಳಿತದಲ್ಲಿ ಹಸ್ತಕ್ಷೇಪ ಮಾಡಲು ಅವಕಾಶ ಮಾಡಿದವು. ಹೈದರ್ ರಾಜನ ಅಧಿಕಾರವನ್ನೆಲ್ಲ ತನ್ನಲ್ಲೆ ಕೇಂದ್ರಿಕರಿಸಿಕೊಂಡನು. ಇಷ್ಟಾಗಿಯೂ ತನ್ನ ಜೀವನಪರ್ಯಂತ ಅವನು ಅಧಿಕೃತವಾಗಿ ರಾಜಪ್ರತಿನಿಧಿ ಅಥವಾ ಸರ್ವಾಧಿಕಾರಿಯಾಗಿ ಮಾತ್ರವೇ ಉಳಿದಿದ್ದನು.

ಕ್ರಿ.ಶ.೧೭೬೧ ರಿಂದ ಹಿಡಿದು ಕ್ರಿ.ಶ.೧೭೮೨ ರವರೆಗೆ ಹೈದರ್ ವಾಸ್ತವ ಅರ್ಥದಲ್ಲಿ ಮೈಸೂರಿನ ಅರಸನಾಗಿದ್ದ, ಮೈಸೂರು ರಾಜ್ಯದ ಗಡಿಗಳನ್ನು ವಿಸ್ತರಿಸಿಕೊಂಡು ಹೋಗುವ ತನ್ನ ಪ್ರಯತ್ನದ ಅಂಗವಾಗಿ ಅವನು ಸತತವಾಗಿ ಒಂದೆಡೆಯಿಂದ ಇನ್ನೊಂದು ಕಡೆಗೆ ಸಂಚರಿಸುತ್ತಲೇ ಸದಾ ಚಟುವಟಿಕೆಯಿಂದ ಇದ್ದ. ಯುದ್ಧ ದಾಹವನ್ನು ಹೊಂದಿದ್ದ. ಫ್ರೆಂಚರೊಂದಿಗೆ ಸಂಬಂಧ ಬೆಳೆಸಿದನು. ಸೈನ್ಯವನ್ನು ಫ್ರೆಂಚ್ ಮಾದರಿಯಲ್ಲಿ ಕಟ್ಟುವ ಪ್ರಯತ್ನ ನಡೆಸಿದನು. ನಿಯಮಿತವಾದ ಸೈನ್ಯವನ್ನು ರೂಪಿಸಿದ್ದ. ಸೈನ್ಯವನ್ನು ಐರೋಪ್ಯ ಮಾದರಿಯಲ್ಲೇ ತರಬೇತಿಗೊಳಿಸಿದ್ದ. ತನ್ನ ರಾಜ್ಯದ ಗಡಿಗಳನ್ನು ವಿಸ್ತರಿಸುವ ಹಾಗೂ ಖಜಾನೆಯನ್ನು ತುಂಬುವ ಆಲೋಚನೆಯಿಂದ ಯುದ್ಧ ಪ್ರವೃತ್ತಿ ಅನುಸರಿಸಿದ ಹೈದರಾಬಾದಿನ ನಿಜಾಮ, ಮರಾಠರು, ಕರ್ನಾಟಕದ ನವಾಬನಾಗಿದ್ದ ಮಹಮದ್ ಆಲಿ ಹಾಗೂ ಬ್ರಿಟಿಷರೊಂದಿಗೆ, ಹತ್ತಾರು ಸಂಸ್ಥಾನಿಕರು, ಪಾಳೆಯಗಾರರೊಂದಿಗೆ ಹೋರಾಟ ನಡೆಸಿದನು.[೧೭] ಯುದ್ಧಗಳಲ್ಲಿ ಸೋಲು-ಗೆಲುವು ಎರಡನ್ನೂ ಅನುಭವಿಸಿದನು.

ಕ್ರಿ.ಶ.೧೭೬೩ರಲ್ಲಿ ಹೈದರ್ ಬಿದನೂರು ಮೇಲೆ ಗಳಿಸಿದ ವಿಜಯವೇ ಅವನ ಮೊಟ್ಟ ಮೊದಲ ವಿಜಯವಾಗಿತ್ತು. ಬಿದನೂರಿನ ರಾಣಿ ವೀರಮ್ಮಾಜಿ ಪರಾಕ್ರಮದಿಂದ ಹೋರಾಡಿದರೂ ಪ್ರಬಲವಾಗಿದ್ದ ಸೇನಾಪಡೆಗಳೆದುರು ಹೆಚ್ಚು ಕಾಲ ನಿಲ್ಲಲಾಗಲಿಲ್ಲ. ಬಿದನೂರನ್ನು ಪೂರ್ವದಲ್ಲಿನ ಅತ್ಯಂತ ಶ್ರೀಮಂತ ವಾಣಿಜ್ಯ ನಗರವೆಂದು ಪರಿಗಣಿಸಲಾಗಿತ್ತು. ಯುದ್ಧದ ನಂತರ ಏಳು ದಿವಸಗಳವರೆಗೆ ಬಿದನೂರನ್ನು ಲೂಟಿ ಮಾಡಲಾಯಿತು. ಹೈದರ್ ದೊರೆತ ಲಾಭ ಎಷ್ಟೆಂಬುದರ ಬಗ್ಗೆ ಅನೇಕ ಅಂದಾಜುಗಳಿವೆಯಾದರೂ ಅದರ ಮೌಲ್ಯ ಹನ್ನೆರಡು ದಶಲಕ್ಷ ಸ್ಟರ್ಲಿಂಗ್ ಎಂದು ಅಂದಾಜು ಮಾಡಬಹುದಾಗಿದೆ. ರಾಣಿ ವೀರಮ್ಮಾಜಿಯನ್ನು ಬಂಧಿಸಲಾಯಿತು. ಮುಂದಿನ ವರ್ಷ ಮರಾಠರು ಹೈದರ್‌ನನ್ನು ಸೋಲಿಸಿ ರಾಣಿಯನ್ನು ಬಿಡುಗಡೆ ಮಾಡಿಸಿದರು.[೧೮]

ಬಿದನೂರಿನಲ್ಲಿ ದೊರೆತ ಐಶ್ವರ್ಯವೇ ಹೈದರ್ ಬಲಗೊಳ್ಳಲು ಹಾಗೂ ಯಶಸ್ಸುಗಳಿಸಲು ಸಾಧನವಾಯಿತು. ಕ್ರಿ.ಶ.೧೭೬೬ರಲ್ಲಿ ನೈರುತ್ಯ ಕರಾವಳಿಯ ಮಲಬಾರಿನ ಮೇಲೆ ವಿಜಯ ಸಾಧಿಸಿದನು. ಇದು ಬಿದನೂರಿನ ವಿಜಯಕ್ಕಿಂತ ಮಹತ್ವದ್ದು. ಏಕೆಂದರೆ ಇದು ಅವನಿಗೆ ಸಮುದ್ರ ಮಾರ್ಗ ತೆರೆದುಕೊಟ್ಟಿತು. ಇದು ಅವನ ಮಹಾತ್ವಾಕಾಂಕ್ಷೆಯೂ ಹೌದು. ಅವನು

ತುಂಗಭದ್ರಾನದಿಯನ್ನು ದಾಟಿ ಆಕ್ರಮಣ ಮಾಡಲು ಪ್ರಯತ್ನಿಸಿದ. ಇದು ಹೈದರಬಾದಿನ ನಿಜಾಮ ಮತ್ತು ಮರಾಠರನ್ನು ಕೆರಳಿಸಿತು. ಮುಂದೆ ಸಂಘರ್ಷಕ್ಕೆ ಎಡೆ ಮಾಡಿಕೊಟ್ಟಿತ್ತು. ಕ್ರಿ.ಶ.೧೭೬೪ ರಿಂದ ಕ್ರಿ.ಶ.೧೭೭೨ರ ಅವಧಿಯಲ್ಲಿ ಮರಾಠರು ಮೂರು ಬಾರಿ ಹೈದರ್‌ನನ್ನು ಹಿಮ್ಮೆಟ್ಟಿಸಿದರು. ಮರಾಠರೊಂದಿಗಿನ ಶತ್ರುತ್ವ ಮತ್ತು ಹೋರಾಟದಿಂದ ತನ್ನ ಐಶ್ವರ್ಯದ ಬಹುಪಾಲು ಹಾಗೂ ಪ್ರಾಂತ್ಯದ ಸಾಕಷ್ಟು ಭಾಗವನ್ನು ಕಳೆದುಕೊಳ್ಳಬೇಕಾಯಿತು.[೧೯] ಇದರ ಜೊತೆಗೆ ಹೈದರ್ ಒಳಗಿನ ಶತ್ರುಗಳು ಮತ್ತು ಬ್ರಿಟಿಷ್‌ರೊಂದಿಗೂ ಹೋರಾಡಬೇಕಾಯಿತು.

೪.೨.೧. ಮೊದಲನೆಯ ಮೈಸೂರು ಯುದ್ಧ(೧೭೬೧-೬೯)

ಹೈದರಾಲಿ ನಿರಂತರವಾಗಿ ಮರಾಠರೊಂದಿಗೆ ಹೋರಾಡಿ ಅಪಜಯ ಹೊಂದಿದರೂ ಧೈರ್ಯಗುಂದಲಿಲ್ಲ. ಬ್ರಿಟಿಷರನ್ನು ಎದುರಿಸಲು ನಾನು ಸಮರ್ಥನಾಗಿದ್ದೇನೆ ಎಂದೇ ಭಾವಿಸಿದ. ಬ್ರಿಟಿಷರು ಮದ್ರಾಸಿನ ಸುತ್ತಮುತ್ತಲ ಪ್ರದೇಶಗಳ ಮೇಲೆ ನಿಯಂತ್ರಣ ಹೊಂದಿದ್ದರು. ಕರ್ನಾಟಕದ ನವಾಬ ಮಹಮದ್ ಆಲಿ ವಲಾಜನೊಂದಿಗೆ ಮೈತ್ರಿ ಏರ್ಪಡಿಸಿಕೊಂಡಿದ್ದರು. ಹೈದರ್ ಕರ್ನಾಟಿಕ್ ಪ್ರದೇಶದ ಮೇಲೆ ಮುತ್ತಿಗೆ ಹಾಕಿದ. ಇದೇ ಮೊದಲನೆಯ ಆಂಗ್ಲೋ-ಮೈಸೂರು ಯುದ್ಧಕ್ಕೂ ಕಾರಣವಾಯಿತು. ಇದು ಕ್ರಿ.ಶ.೧೭೬೭ರಲ್ಲಿ ಆರಂಭವಾಯಿತು.

ಹೈದರಾಲಿ ಮತ್ತು ಬ್ರಿಟಿಷರ ನಡುವೆ ವಿರಸ ಬೆಳೆಯಲು ಹಲವು ಕಾರಣಗಳಿದ್ದವು. ಅದರಲ್ಲಿ ಪ್ರಮುಖವಾದವು ಮೈಸೂರು ಒಂದು ಆಯಕಟ್ಟಿನ ಸ್ಥಳವಾಗಿತ್ತು. ದಕ್ಷಿಣ ಭಾಗದಲ್ಲಿ ಮರಾಠರು ಪ್ರಾಬಲ್ಯಕ್ಕೆ ಬಂದುದು; ಕರ್ನಾಟಕದ ನವಾಬನ ದುರಾಸೆ; ಮೈಸೂರು ಮತ್ತು ಮದ್ರಾಸ್ ನಡುವೆ ಇದ್ದ ಗಡಿ ವಿವಾದಗಳು; ಹೈದರ್ ಫ್ರೆಂಚರೊಂದಿಗೆ ಹೊಂದಿದ್ದ ಮಧುರವಾದ ಸಂಬಂಧಗಳು; ಮೈಸೂರು ಸಂಸ್ಥಾನದ ಸಮೃದ್ಧ ಸಂಪತ್ತು ಇವು ಇತರರಿಂದ ಹೈದರಾಲಿಯನ್ನು ಬೇರೆಯೆ ಮಾಡಿದವು. ಹೈದರಾಬಾದಿನ ನಿಜಾಮ, ಮರಾಠರು ಮತ್ತು ಬ್ರಿಟಿಷರು ಈ ಪ್ರದೇಶದ ಮೇಲೆ ಪ್ರಭುತ್ವ ಸ್ಥಾಪಿಸಲು ಪ್ರಯತ್ನಿಸುತ್ತಿದ್ದರು.[೨೦] ಈ ಎಲ್ಲಾ ಶಕ್ತಿಗಳನ್ನು ಹೈದರಾಲಿ ಎದುರಿಸ ಬೇಕಾಯಿತು.

ಬ್ರಿಟಿಷರು ಮತ್ತು ಹೈದರಾಲಿಯ ಸಂಬಂಧಗಳು ಮತ್ತಷ್ಟು ಜಟಿಲವಾಗಿದ್ದು ಹಲವಾರು ಗಡಿವಿವಾದಗಳಿಂದ ಪೂರ್ವ ಮತ್ತು ಪಶ್ಚಿಮ ಕರಾವಳಿಗಳಲ್ಲಿ ಬ್ರಿಟಿಷರ ವಸಾಹತುಗಳು ಮೈಸೂರು ರಾಜ್ಯವನ್ನು ಸುತ್ತುವರೆದಿದ್ದವು. ಹೈದರಾಲಿ ಮಲಬಾರ್ ಪ್ರದೇಶವನ್ನು ಗೆದ್ದು ತಲಚೇರಿಯ ಸಮೀಪಕ್ಕೆ ಬಂದನು. ಬ್ರಿಟಿಷರು ಹೈದರನ ವಿರುದ್ಧ ಅಲ್ಲಿನ ನಾಯನಾರರು ಬಂಡೇಳುವಂತೆಯೂ ಪ್ರಚೋದಿಸಿದನು. ಪಶ್ಚಿಮ ಕರಾವಳಿ ಹೈದರನ ವಶವಾದುದು ಬ್ರಿಟಿಷರಿಗೆ ಬಾರಿ ಹಿನ್ನಡೆಯಾಯಿತು. ಅವರ ವ್ಯಾಪಾರ ವಾಣಿಜ್ಯ ವ್ಯವಹಾರಗಳಿಗೆ ತೊಂದರೆಯಾಯಿತು.

ಹೈದರನು ಕರಾವಳಿಯನ್ನು ಗೆದ್ದುಕೊಂಡದ್ದು ತನ್ನ ಒಂದು ನೌಕಾಪಡೆಯನ್ನು ಕಟ್ಟಲು ಸಹಕಾರಿಯಾಯಿತು. ತನ್ನ ಮಿತ್ರರಾದ ಫ್ರೆಂಚರೊಂದಿಗೆ ಸಂಪರ್ಕ ಬೆಳೆಸಲು ಅನುಕೂಲವಾಯಿತು.[೨೧]

ಹೈದರಾಲಿಯು ಬ್ರಿಟಿಷರ ಶತ್ರುಗಳಾದ ಫ್ರೆಂಚರೊಂದಿಗೆ ಮೈತ್ರಿಯುತ ಸಂಬಂಧ ಬೆಳೆಸಿದುದು ಬ್ರಿಟಿಷರು ಮತ್ತಷ್ಟು ಕೆರಳಲು ದಾರಿ ಮಾಡಿತು. ಬ್ರಿಟಿಷರು ಮತ್ತು ಫ್ರೆಂಚರು ಯುರೋಪಿನಲ್ಲಿಯೂ ಪರಸ್ಪರ ಮುಖಾಮುಖಿಯಾಗಿ ಕಾದಾಡುತ್ತಿದ್ದರು. ಅಲ್ಲಿ ಅವರುಗಳ ನಡುವೆ ಯಾವುದೇ ಯುದ್ಧ ಅಥವಾ ಒಪ್ಪಂದಗಳು ಏರ್ಪಟ್ಟರೂ ಅದರ ಪ್ರಭಾವ ಭಾರತದಲ್ಲಿಯೂ ಆಗುತ್ತಿತ್ತು. ಅದರಂತೆ ಮೈಸೂರಿನಲ್ಲಿಯೂ ಕೂಡ ನೌಕಾಸಮರದಲ್ಲಿ ಪ್ರಬಲರಾಗಿದ್ದ ಬ್ರಿಟಿಷರನ್ನು ಸೋಲಿಸಲು ಅವರಷ್ಟೇ ಪ್ರಬಲರಾದ ಮತ್ತೊಂದು ಯುರೋಪಿನ ಶಕ್ತಿಯನ್ನು ಬಳಸಬೇಕೆಂಬುದು ಹೈದರಾಲಿಯ ಅರಿವಿಗೆ ಬಂತು ಆ ಕಾರಣದಿಂದ ಫ್ರೆಂಚರೊಂದಿಗೆ ಮಿತ್ರುತ್ವ ಸಂಪಾದಿಸಿದ. ಹೈದರ ಸೈನ್ಯದಲ್ಲಿ ಹಲವು ಫ್ರೆಂಚ್ ಯೋಧರು ಸೇರ್ಪಡೆಗೊಂಡರು. ಬೇರೆ ಯಾವುದೇ ಭಾರತೀಯ ಸೈನ್ಯದಲ್ಲಿಯೂ ಹೈದರನ ಸೈನ್ಯದಲ್ಲಿದ್ದಷ್ಟು ಜನ ಫ್ರೆಂಚ್ ಯೋಧರಿರಲಿಲ್ಲ.[೨೨] ಈ ಬೆಳವಣಿಗೆಗಳು ಬ್ರಿಟಿಷರು ಹೈದರಾಲಿಯ ವಿರುದ್ಧ ಹೋರಾಟ ಮಾಡಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿತು.

ಹೈದರನ ದಕ್ಷ ನಾಯಕತ್ವ ಮತ್ತು ಸಾಮರ್ಥ್ಯಗಳಿಂದ ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯು ವಿಸ್ತಾರವಾಗುವುದಕ್ಕೆ ತಡೆವುಂಟಾಯಿತು. ಅವನ ಸೈನಿಕ ಸಾಮರ್ಥ್ಯ ಮತ್ತು ರಾಜತಾಂತ್ರಿಕತೆ ಮೈಸೂರನ್ನು ಬ್ರಿಟಿಷರೆದುರಿಗೆ ದೊಡ್ಡ ಸವಾಲಾಗಿ ರೂಪಿಸಲು ಬಳಕೆಯಾದವು. ಹೈದರನ ಪ್ರಾಬಲ್ಯವು ಬ್ರಿಟಿಷರಿಗೆ ನುಂಗಲಾರದ ತುತ್ತಾಯಿತು. ಹೇಗಾದರೂ ಸರಿಯೇ ಅವನ ಪ್ರಾಬಲ್ಯ ಮುರಿಯಲು ಪ್ರಯತ್ನಿಸಿದರು.

ಬ್ರಿಟಿಷರು ಮತ್ತು ಮೈಸೂರಿನ ನಡುವಿನ ಸಂಬಂಧಗಳು ಕ್ರಿ.ಶ.೧೭೫೦–೫೫ರ ಕರ್ನಾಟಕ ಯುದ್ಧಗಳಿಂದಲೇ ಪ್ರಾರಂಭಗೊಳ್ಳುತ್ತದೆ. ಕ್ರಿ.ಶ.೧೭೫೨ರ ಕೊನೆಯವರೆಗೂ ಮೈಸೂರು ಬ್ರಿಟಿಷರ ಮಿತ್ರನಾಗಿತ್ತು. ಆದರೆ ಅಲ್ಲಿಂದ ಮುಂದಕ್ಕೆ ಶತ್ರುವಾಗಿ ಅವರೊಂದಿಗೆ ಕಾದತೊಡಗಿತು. ಇದಕ್ಕೆ ಕಾರಣ ಒಪ್ಪಂದದಂತೆ ಕರ್ನಾಟಕ ನವಾಬನು ತಿರುಚನಾಪಳ್ಳಿಯನ್ನು ಮೈಸೂರಿಗೆ ಬಿಟ್ಟು ಕೊಡಲಿಲ್ಲ. ಇದು ಮೈಸೂರು ಮತ್ತು ಬ್ರಿಟಿಷರ ಪರಸ್ಪರ ವೈರತ್ವಕ್ಕೆ ಕಾರಣವೂ ಆಯಿತು. ಕ್ರಿ.ಶ.೧೭೬೦ರಲ್ಲಿ ಅಧಿಕಾರಕ್ಕೆ ಬಂದ ಹೈದರನು ಇದೇ ವಿರೋಧ ಭಾವನೆಯನ್ನೇ ಮುಂದು ವರೆಸಿದನು. ಕ್ರಿ.ಶ.೧೭೫೮ರಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡ್ ನಡುವೆ ಕರ್ನಾಟಿಕ್ ಯುದ್ಧ ಪ್ರಾರಂಭವಾದಾಗ ಹೈದರಾಲಿ ಫ್ರೆಂಚರ ನೆರವಿಗೆ ಬರಬಹುದೆಂದು ಫ್ರೆಂಚರು ಭಾವಿಸಿದರು.[೨೩] ಕ್ರಿ.ಶ.೧೭೬೦ರಲ್ಲಿ ಹೈದರಾಲಿ ಅಧಿಕಾರ ವಹಿಸಿಕೊಂಡಾಗ ಫ್ರೆಂಚರ ಗೌರ್ನರ್ ಕೌಂಟ್ ಡಿ ಲ್ಯಾಲಿಯು ಅವನಿಗೆ ಪತ್ರ ಬರೆದನು "ಈ ದೇಶದಲ್ಲಿ ಇನ್ನು ಮುಂದೆ ಯಾವುದೇ ತೊಂದರೆಯೂ

ಇರದಂತೆ ಮಾಡುವುದಕ್ಕಾಗಿ ನಾವಿಬ್ಬರೂ ಸೇರಿ ಬ್ರಿಟಿಷರನ್ನು ಹೊರದೂಡಬೇಕು."[೨೪] ಇದಕ್ಕೆ ಸ್ಪಂದಿಸಿದ ಹೈದರಾಲಿ ಕೂಡಲೇ ವೆಂಕೋಜಿ ಪಂಡಿತನ ಅಧೀನದಲ್ಲಿದ್ದ ೨೦೦೦ ಸೈನಿಕ ಪಡೆಯನ್ನು ಕಳುಹಿಸಿದನು. ಕ್ರಿ.ಶ.೧೭೬೦ರಲ್ಲಿ ಒಪ್ಪಂದ ಏರ್ಪಟ್ಟಿತು. ಅದರ ಪ್ರಕಾರ ಹೈದರನು ನೆರವನ್ನು ೩೦೦೦ ಸೈನಿಕರು ಮತ್ತು ೨೦೦೦ ಅಶ್ವಗಳಿಗೆ ಹೆಚ್ಚಿಸುವುದು. ಎರಡು ತಿಂಗಳ ನಂತರ ಲ್ಯಾಲಿಯು ಹೈದರನಿಗೆ ಎರಡು ಲಕ್ಷ ರೂಪಾಯಿ ಕೊಡುವುದು. ಪ್ರತಿವರ್ಷವೂ ಒಂದು ಲಕ್ಷ ರೂಪಾಯಿ ಕೊಡುವುದು ಎಂದಾಯಿತು. ಫ್ರೆಂಚರು ಹೈದರನಿಗೆ ಹದಿನೆಂಟು ಪೌಂಡುಗಳ ತುಫಾಕಿಗಳು, ಮದ್ದು ಗುಂಡುಗಳು, ಬಂದೂಕುಗಳನ್ನು ಒದಗಿಸಲು ಒಪ್ಪಿದರು.[೨೫] ಹೈದರಾಲಿ ಕರ್ನಾಟಿಕ್ ಕದನದಲ್ಲಿ ಫ್ರೆಂಚರಿಗೆ ಎಷ್ಟೇ ಸೈನಿಕ ನೆರವು ನೀಡಿದರೂ ಬ್ರಿಟಿಷರನ್ನು ಸೋಲಿಸಲು ಸಾಧ್ಯವಾಗಲಿಲ್ಲ. ಅಂತಿಮವಾಗಿ ಯುದ್ಧ ಕೊನೆಗೊಂಡು ಪಾಂಡಿಚೇರಿ ಬ್ರಿಟಿಷರ ವಶವಾಯಿತು.

೪.೨.೧.೧. ಮೊದಲನೇ ಆಂಗ್ಲೋ-ಮೈಸೂರು ಯುದ್ಧದ ಕಾರಣಗಳು

ಮೊಗಲರು ಉತ್ತರ ಭಾಗದಲ್ಲಿ ಈಸ್ಟ್ ಇಂಡಿಯಾ ಕಂಪನಿಗೆ ವ್ಯಾಪಾರಿ ಕೋಠಿಗಳನ್ನು ಸ್ಥಾಪಿಸಿಕೊಳ್ಳಲು ಭೂಭಾಗಗಳನ್ನು ಬಿಟ್ಟುಕೊಟ್ಟದ್ದು. ಮರಾಠರ ಮಾಧವರಾಯನು ಹೈದರನ ವಿರುದ್ಧ ಹೈದರಾಬಾದಿನ ನಿಜಾಮನೊಂದಿಗೆ ಮಾಡಿಕೊಂಡ ರಹಸ್ಯ ಒಪ್ಪಂದ, ಹೈದರಾಲಿ ಬಿದನೂರು, ಮಲಬಾರ್ ಪ್ರದೇಶಗಳನ್ನು ಆಕ್ರಮಿಸಿದುದು ನಿಜಾಮನು ಆರ್ಕಾಟಿನ ಸನ್ನದನ್ನು ಹೈದರನಿಗೆ ನೀಡಿದ್ದು ಇವು ಯುದ್ಧಕ್ಕೆ ಕಾರಣವಾದವು. ಈ ಯಾವೊಂದು ಅಂಶವೂ ಮೈಸೂರು-ಮದರಾಸುಗಳ ಮೇಲೆ ಪ್ರಭಾವ ಬೀರುವಂಥದಲ್ಲ ಆದ್ದರಿಂದಲೇ ಈ ಯುದ್ಧವೇ ಒಂದು ದೋಷಗಳ ಪ್ರಹಸನದಂತಾಯಿತು. ಕೆಲವು ಅಚ್ಚರಿಗಳು ಈ ಯುದ್ಧದಿಂದಾಗಿ ಬೆಳಕಿಗೆ ಬಂದವು. ಸ್ನೇಹಿತರು ಶತ್ರುಗಳಾದರು. ಶತ್ರುಗಳು ಮಿತ್ರರಾದರು. ಮೂರು ಪ್ರಬಲ ಶಕ್ತಿಗಳಾದ ಮರಾಠರು, ನಿಜಾಮ ಮತ್ತು ಬ್ರಿಟಿಷರು ಇವರ ಒಕ್ಕೂಟವು ಹೈದರಾಲಿಯನ್ನು ನಾಶ ಮಾಡಲೆಂದು ಹೊರಟು ವಿಫಲಗೊಂಡಿತು.

ಕ್ರಿ.ಶ.೧೭೬೧ರಿಂದ ಕ್ರಿ.ಶ.೧೭೬೬ರವರೆಗೆ ಬ್ರಿಟಿಷರು ಹೈದರನನ್ನು ಮರಾಠರ ಪ್ರಾಬಲ್ಯದ ವಿಸ್ತರಣೆಗೆ ತಡೆ ಒಡ್ಡುವ ಒಂದು ಶಕ್ತಿ ಎಂದು ಪರಿಗಣಿಸಿದ್ದರು. ಕ್ರಿ.ಶ.೧೭೬೫ರಲ್ಲಿ ಮರಾಠ ನಾಯಕ ಮಾಧವರಾಯನು ಮದ್ರಾಸಿಗೆ ಪತ್ರ ಬರೆದು, ಹೈದರನ ವಿರುದ್ಧ ತನಗೆ ನೆರವು ನೀಡಬೇಕೆಂದು ಕೋರಿದನು. ಮದ್ರಾಸಿನ ಗವರ್ನರ್ ರಾಬರ್ಟ್‌ಪಾಕ್ ಅದಕ್ಕೆ ಸಮ್ಮತಿಸಲಿಲ್ಲ. ಏಕೆಂದರೆ ಅಂಥ ಕ್ರಮದಿಂದ ಕೊನೆಯೇ ಇಲ್ಲದ ತೊಡಕುಗಳಿಗೆ ದಾರಿಯಾಗಬಹುದು ಎಂದು ಭಾವಿಸಿದನು.[೨೬]

ಕ್ರಿ.ಶ.೧೭೬೬ರ ಪ್ರಾರಂಭದಲ್ಲಿ ಮದರಾಸಿನೊಂದಿಗೆ ಹೈದರನ ಸಂಬಂಧ ಉತ್ತಮವಾಗಿತ್ತು. ಮಲಬಾರಿನಲ್ಲಿ ತಾನು ಪ್ರದೇಶಗಳನ್ನು ಗೆಲ್ಲುತ್ತಿರುವ ಸಂದರ್ಭದಲ್ಲಿ ಬ್ರಿಟಿಷರೊಂದಿಗೆ ಒಳ್ಳೆಯ ಭಾವನೆ ಹೊಂದಿರಬೇಕೆಂದು ಬಯಸಿದನು. ಮಲಬಾರಿನಲ್ಲಿ ವಾಣಿಜ್ಯ ರಿಯಾಯ್ತಿಗಳನ್ನು ಕೊಡಬೇಕೆಂದು ತಲಚೇರಿ ಕೋಠಿಯನ್ನು ಕೇಳಿದಾಗ ಒಪ್ಪಿಕೊಂಡನು. ಹೈದರಾಲಿ ಮಲಬಾರನ್ನು ಆಕ್ರಮಿಸಿದುದು ಮದ್ರಾಸಿಗಿಂತ ಮುಂಬೈ ಸರಕಾರಕ್ಕೆ ಕಳವಳ ಉಂಟುಮಾಡಿತು.[೨೮] ಹೈದರನು ಪರಿಸ್ಥಿತಿಯನ್ನು ಬಹು ಜಾಣತನದಿಂದ ನಿಭಾಯಿಸಿದನು. ಮುಂಬೈ ಸರಕಾರದ ಬಗ್ಗೆ ಯಾವುದೇ ದುರ್ಭಾವನೆಯಾಗಲಿ, ದುಷ್ಟ ಯೋಜನೆಯಾಗಲಿ ಇಲ್ಲ ಎಂದು ಸಮಾಧಾನಪಡಿಸಿದನು. ಹೈದರನು ಸುಂದಾ ಮೆಣಸಿನ ವ್ಯಾಪಾರವನ್ನೂ ಕಂಪನಿಗೆ ವಹಿಸಿಕೊಟ್ಟನು. ಕ್ರಿ.ಶ.೧೭೬೧ರ ಒಪ್ಪಂದವನ್ನು ಪರಿಷ್ಕರಿಸಿ ಹೊಸ ಒಪ್ಪಂದ ಮಾಡಿಕೊಳ್ಳಲು ಇಚ್ಚಿಸಿದನು. ಬ್ರಿಟಿಷರೊಂದಿಗೆ ವೈಮನಸ್ಸು ಕಟ್ಟಿಕೊಳ್ಳುವುದು ಸರಿಯಲ್ಲ ಎಂದೇ ಪ್ರಾರಂಭದಲ್ಲಿ ಭಾವಿಸಿದ್ದನು. ಹೈದರಾಲಿ ಮುಂಬೈ ಸರಕಾರದೊಂದಿಗೆ ಮಾಡಿಕೊಂಡ ಒಪ್ಪಂದದಂತೆ ಹೈದರನು ಯಾವುದೇ ಯುರೋಪಿಯನ್ ಶಕ್ತಿಯೊಂದಿಗೆ ಮೈತ್ರಿ ಬೆಳೆಸಕೂಡದು. ಕಂಪನಿಯ ಮಿತ್ರರ ವಿರುದ್ಧ ಅದರಲ್ಲೂ ಕರ್ನಾಟಕದ ನವಾಬ ಮತ್ತು ತಿರುವಾಂಕೂರಿನ ರಾಜನ ವಿರುದ್ಧವಾಗಿ ಯುದ್ಧ ನಡೆಸಬಾರದು ಎಂದೂ ಷರತ್ತು ವಿಧಿಸಿತು. ಈ ಒಪ್ಪಂದ ಸಂಪೂರ್ಣ ಜಾರಿಗೆ ಬರಲಿಲ್ಲ.

ಹೈದರಾಲಿ ಮಲಬಾರ್ ಭಾಗದ ಮೇಲೆ ಆಕ್ರಮಣ ನಡೆಸಿದಾಗಲೂ ಮುಂಬಯಿ ಸರಕಾರವು ಅವನ ಮೇಲೆ ಮದರಾಸು ಸರಕಾರವು ಯುದ್ಧ ಸಾರಬಾರದು ಎಂದೂ ತಾಕೀತು ಮಾಡಿತು. ಹೈದರ್ ಹೈದರಾಬಾದಿನ ನಿಜಾಮ, ಮರಾಠರು ಒಂದಾಗಿ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ನಿಂತರೆ ಅಂಥ ಸಂದರ್ಭ ಎದುರಾದರೆ ಹೈದರ್ ಬ್ರಿಟಿಷರೊಂದಿಗೆ ಒಂದು ರಕ್ಷಕ ಒಪ್ಪಂದ ಮಾಡಿಕೊಳ್ಳಲು ಸಿದ್ದವಾಗಿದ್ದನು.[೨೯] ಮರಾಠರು ಮೈಸೂರು ರಾಜ್ಯದ ಮೇಲೆ ಆಕ್ರಮಣ ಮಾಡುವ ಸಿದ್ಧತೆಯಲ್ಲಿದ್ದರು. ಕ್ರಿ.ಶ.೧೭೬೫ರಲ್ಲಿ ಆದ ಶಾಂತಿ ಒಪ್ಪಂದದ ಪ್ರಕಾರ ಹೈದರಾಲಿ ಉಳಿಸಿಕೊಂಡಿದ್ದ ಹರಿಹರ ಮತ್ತು ಬಸವಾಪಟ್ಟಣಗಳನ್ನು ಪೇಶ್ವೆ ಮಾಧವರಾಯನು ತನಗೆ ಒಪ್ಪಿಸಬೇಕೆಂದು ಒತ್ತಾಯಿಸಿದ. ಮಾಧವರಾಯ ಮತ್ತು ಹೈದರಬಾದಿನ ನಿಜಾಮ ಆಲಿಯು ಒಂದು ರಹಸ್ಯ ಒಪ್ಪಂದ ಮಾಡಿಕೊಂಡಿರುವುದು ಹೈದರನಿಗೆ ಸುಳಿವು ದೊರೆಯಿತು.[೩೦] ಇದರಿಂದ ಅಸಮಾಧಾನವೂ ಆಯಿತು. ಈ ರಹಸ್ಯ ಒಪ್ಪಂದ ಮುರಿಯಲು ಹೈದರ್ ಮದರಾಸು ಮತ್ತು ಮುಂಬೈ ಬ್ರಿಟಿಷರ ಸರಕಾರಗಳೊಂದಿಗೆ ರಕ್ಷಕ ಒಪ್ಪಂದ ಮಾಡಿಕೊಳ್ಳುವ ಆಲೋಚನೆ ನಡೆಸಿದನು.

ಹೈದರಾಬಾದ ನಿಜಾಮನು ಹೈದರನ ಮೈತ್ರಿ ಬಯಸಿದನು. ನಿಜಾಮನು ತನ್ನ ಸಹೋದರ ಮಹಫಜ್ ಖಾನನನ್ನು ಅರ್ಕಾಟ್ ಸನ್ನದು ಕೊಟ್ಟು ಕಳುಹಿಸಿದನು. ಈ ಸನ್ನಧಿಗೆ ಪ್ರತಿಯಾಗಿ

ಹೈದರನು ನಿಜಾಮನಿಗೆ ನಾಲ್ಕು ಲಕ್ಷ ಪಗೋಡಗಳನ್ನು ಸಲ್ಲಿಸಬೇಕೆಂದು ಷರತ್ತು ವಿಧಿಸಲಾಗಿತ್ತು. ಹೈದರನು ಫ್ರೆಂಚರೊಂದಿಗೆ ಸಂಪರ್ಕ ಬೆಳೆಸಿದ್ದಾನೆ. ಬ್ರಿಟಿಷರ ವಿರುದ್ಧ ಯುದ್ಧ ಸಿದ್ಧತೆಗಳು ನಡೆದಿವೆ. ಆರ್ಕಾಟ್ ಅಪಾಯದಲ್ಲಿ ಸಿಲುಕಿದೆ ಎಂಬ ಸುದ್ದಿಗಳು ಮದರಾಸು ಸರ್ಕಾರಕ್ಕೆ ತಿಳಿಯಿತು. ಹೈದರನ ಮನವೊಲಿಸಲು ಮದ್ರಾಸ್ ಸರ್ಕಾರ ಜೇಮ್ಸ್ ಬೋರ್ಚಿಯರ್ ಅನ್ನು ಕಳುಹಿಸಿತು.[೩೧] ಬ್ರಿಟಿಷರು ಹೈದರನೊಂದಿಗೆ ರಕ್ಷಕ ಮೈತ್ರಿ ಒಪ್ಪಂದ ಏರ್ಪಡಿಸಿಕೊಳ್ಳಲು ಪ್ರಯತ್ನಿಸಿದಾಗ ಹೈದರನು ನಿಜಾಮನು ಕಳುಹಿಸಿದ್ದ ಆರ್ಕಾಟ್ ಸನ್ನದ್ದನ್ನು ಅಂಗೀಕರಿಸಿದನು. ನಿಜಾಮ ಮತ್ತು ಮರಾಠರ ನಡುವೆ ಮೈಸೂರು ರಾಜ್ಯದ ವಿರುದ್ಧ ರಹಸ್ಯ ಒಪ್ಪಂದ ಆಗಿರುವುದು ಹೈದರನಿಗೆ ತಿಳಿದಿತ್ತು. ನಿಜಾಮನ ಸಲಹೆಯನ್ನು ಒಪ್ಪಿಕೊಂಡರೆ ಬ್ರಿಟಿಷರೊಡನೆ ಯುದ್ಧವು ಅನಿವಾರ್ಯವಾಗುತ್ತಿತ್ತು. ಮರಾಠ ಪೇಶ್ವೆ ಮಾಧವರಾಯ ಬ್ರಿಟಿಷರ ಪರವಾಗಿ ಯುದ್ಧ ಆರಂಭಿಸುತ್ತಿದ್ದನು ಎಂಬ ಅರಿವು ಹೈದರಾಲಿಗಿತ್ತು. ಅದರಿಂದ ಅವನು ಕಾಲಹರಣ ತಂತ್ರವನ್ನೇ ಬಳಸಿದನು.

ಹೈದರಾಲಿಯ ನಡೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಬ್ರಿಟಿಷರು ಹೈದರ್ ಮತ್ತು ನಿಜಾಮನನ್ನು ಬೇರ್ಪಡಿಸಲು ಆಲೋಚಿಸಿದರು. ಜೊತೆಗೆ ಹೈದರನ ವಿರೋಧಿಯಾಗಿದ್ದ ಮರಾಠರನ್ನು ತನ್ನ ಕಡೆಗೆ ಸೆಳೆಯುವ ಪ್ರಯತ್ನ ನಡೆಸಿದರು. ಮದರಾಸು ಸರಕಾರವು ನಿಜಾಮನೊಂದಿಗೆ ಸಂಧಾನ ಮಾತುಕತೆ ನಡೆಸಲು ಕೈಲ್ಲಾಡ್‌ನನ್ನು ಕಳುಹಿಸಿತು. ಒಪ್ಪಂದದಲ್ಲಿ ಇವನಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿತ್ತು.[೩೨] ನಿಜಾಮನನ್ನು ಆಕರ್ಷಿಸಲು ಕೊಡುಗೆಯನ್ನು ೧೦ ಲಕ್ಷಕ್ಕೆ ಏರಿಸಲಾಯಿತು. ಮುಸ್ತಫಾನಗರ ವಜ್ರದ ಗಣಿಗಳನ್ನು ನೀಡುವುದಾಗಿ ತಿಳಿಸಲಾಯಿತು. ಕ್ರಿ.ಶ.೧೭೬೬ ನವೆಂಬರ್ ೧೨ರಂದು ಒಪ್ಪಂದ ಏರ್ಪಟ್ಟಿತು.[೩೩] ಇದರಿಂದ ಹೈದರನು ಮರಾಠ ವಿರುದ್ಧ ನಿಜಾಮ ಮತ್ತು ಬ್ರಿಟಿಷರ ನೆರವು ಪಡೆಯುವ ಪ್ರಯತ್ನಕ್ಕೆ ಹಿನ್ನಡೆ ಉಂಟಾಯಿತು. ಬ್ರಿಟಿಷರೊಂದಿಗಿನ ರಕ್ಷಕ ಮೈತ್ರಿ ಒಪ್ಪಂದವು ಮುರಿದು ಬಿತ್ತು. ಮೈಸೂರು ರಾಜ್ಯದ ವಿರುದ್ಧ ಬ್ರಿಟಿಷರು, ನಿಜಾಮ ಮತ್ತು ಮರಾಠರ ಒಕ್ಕೂಟ ರಚನೆಯಾಯಿತು.

ಮೈಸೂರು ರಾಜ್ಯದಿಂದ ದೊರಕುವ ಲಾಭದ ಬಗ್ಗೆ ಬ್ರಿಟಿಷರು ನಿಜಾಮನಿಗೆ ಮನವರಿಕೆ ಮಾಡಿದರು. ಅದು ರಹಸ್ಯವಾಗಿಯೇ ನಡೆಯಿತು. ಬ್ರಿಟಿಷರು ಶಸ್ತ್ರಾಸ್ತ್ರಗಳಿಂದ ಸುರಕ್ಷಿತವಾಗಿರುವ ಕರ್ನಾಟಿಕ್ ಪ್ರದೇಶದ ಮೇಲೆ ದಾಳಿ ಮಾಡುವುದಕ್ಕಿಂತಲೂ ಮೈಸೂರನ್ನು ಸೋಲಿಸುವುದು ಯುಕ್ತವಾದುದು. ಪ್ರಯೋಜನಕಾರಿಯಾದುದು ಎಂದು ಮರಾಠರಿಗೂ ಮನವರಿಕೆ ಮಾಡಲಾಯಿತು.[೩೪] ಬ್ರಿಟಿಷರು ರಚಿಸಿಕೊಂಡ ಮಿತ್ರಕೂಟ, ಒಳ ಒಪ್ಪಂದಗಳು, ಭರವಸೆಗಳು ಮೈಸೂರಿಗೆ ಅಪಾಯ ತಂದೊಡ್ಡುವ ಮುನ್ಸೂಚನೆ ಅರಿತ ಹೈದರ್ ಯುದ್ಧ ಸಿದ್ಧತೆ ನಡೆಸಿ ಸನ್ನದ್ಧನಾದನು. ಮೊದಲನೆಯ ಆಂಗ್ಲೋ-ಮೈಸೂರು ಯುದ್ಧ ಸನ್ನಿಹಿತವಾಯಿತು.

ಬ್ರಿಟಿಷರು ದಖನ್ನಿನಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿ ಶಾಶ್ವತಗೊಳಿಸಲು ಪ್ರಯತ್ನಿಸಿದರು. ಈ ಉದ್ದೇಶ ಸಾಧನೆಗಾಗಿ ಹಲವು ರಾಜಕೀಯ ಹುನ್ನಾರಗಳನ್ನು ನಡೆಸಿದರು. ಸ್ಥಳೀಯ ರಾಜರುಗಳ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಿದರು. ಬಂಗಾಳ, ಅರ್ಕಾಟ್‌ನ ನವಾಬರು, ಮರಾಠರು, ಹೈದರಾಲಿ, ಹೈದರಾಬಾದಿನ ನಿಜಾಮ ಇವರುಗಳ ವೈರುಧ್ಯಗಳನ್ನು ಬ್ರಿಟಿಷರು ತಮ್ಮ ಅನುಕೂಲಕ್ಕೆ ಬಳಸಲು ಪ್ರಯತ್ನಿಸಿದರು. ಇವರುಗಳು ಒಟ್ಟುಗೂಡದಂತೆ ಮಾಡಲು ಹಲವು ಸಂಧಾನಗಳು ಮತ್ತು ಯುದ್ಧಗಳನ್ನು ನಡೆಸಲು ಯೋಚಿಸಿದರು. ಮೈಸೂರಿನಲ್ಲಿ ಶಕ್ತಿಶಾಲಿಯಾಗಿ ಬೆಳೆದಿದ್ದ ಹೈದರ್ ಮುಂದೆ ನಮ್ಮ ಪ್ರಭುತ್ವ ಸ್ಥಾಪನೆಗೆ ಅಡ್ಡ ಬರಬಹುದು ಎಂಬ ಅಲೋಚನೆಯೂ ಬ್ರಿಟಿಷರದಾಗಿತ್ತು. ಹೈದರಾಲಿಯು ಬ್ರಿಟಿಷರ ವಸಾಹತುಶಾಹಿ ವಿಸ್ತರಣೆಯನ್ನು ತಡೆಯುವ ಉದ್ದೇಶವನ್ನು ಹೊಂದಿದ್ದನು. ಬ್ರಿಟಿಷರ ವಿರುದ್ಧ ಒಂದು ವ್ಯೂಹ ರಚಿಸಲು ಮುಂದಾದನು. ಮದ್ರಾಸಿನ ಸರಕಾರ ಮೈಸೂರು ವಿಷಯದಲ್ಲಿ ಹೆಚ್ಚು ಆಸಕ್ತವಾಗಿರುವುದನ್ನು ಸೂಕ್ಷ್ಮವಾಗಿ ಗಮನಿಸಿದ ಹೈದರ್ ದಖನ್ನಿನ ರಾಜಕೀಯ ಶಕ್ತಿಗಳನ್ನು ಒಟ್ಟುಗೂಡಿಸಿ ಒಂದು ಕೂಟವನ್ನು ರಚಿಸಲು ಪ್ರಯತ್ನಿಸಿದ.

ಹೈದರಾಲಿ ನಿಜಾಮನೊಂದಿಗೆ ೫೦ ಲಕ್ಷ ರೂಪಾಯಿಗಳಿಗೆ ಸಂಧಿ ಮಾಡಿಕೊಳ್ಳುವ ಪ್ರಯತ್ನದಲ್ಲಿದ್ದನು. ಅನತಿ ಕಾಲದಲ್ಲೇ ಮರಾಠರ ಮಾದವರಾಯನಿಗೂ ಹೈದರನಿಗೂ ೩೦ ಲಕ್ಷ ರೂಪಾಯಿ ಮತ್ತು ಕೆಲವು ಕೋಟೆಗಳ ವಿಷಯವಾಗಿ ಸಂಧಿಯಾಯಿತು. ಮದರಾಸಿನಲ್ಲಿ ಬ್ರಿಟಿಷರ ಸ್ಥಿತಿ ಬಿಗಡಾಯಿಸುತ್ತಿತ್ತು. ಹೈದರಾಲಿ ನಮ್ಮ ವಿರುದ್ಧವಾಗಿ ಕ್ರೋಧಪತನಾಗಿದ್ದಾನೆ. ತನಗೆ ದೊರೆತ ಅವಕಾಶವನ್ನು ಬಳಸಿಕೊಂಡು ಅವನು ಪ್ರತಿಸೇಡು ತೀರಿಸಿಕೊಳ್ಳುತ್ತಾನೆ.[೩೫] ಬೋರ್ಚಿಯಾರ್ ತನ್ನ ಪತ್ರದಲ್ಲಿ ಹೀಗೆ ತಿಳಿಸಿದನು. ಬ್ರಿಟಿಷರು, ನಿಜಾಮ ಹಾಗೂ ಹೈದರ್ ಮೂವರೂ ಒಂದಾಗಿ ಮರಾಠರನ್ನು ಅಡಗಿಸಬೇಕು. ಮಾದವರಾಯನು ಕರ್ನಾಟಕದತ್ತ ಸಾಗಿ ಬರುತ್ತಿದ್ದಾನೆ ಎಂಬ ವರದಿಗಳು ಮದರಾಸಿಗೆ ತಲುಪಿದವು. ಮಾದವರಾಯನನ್ನು ಸಂಧಿಸಲು ಸೈನ್ಯದ ಸಮೇತ ಮೇಜರ್ ಅಬ್ರಹಾಮ್ ಬೋಜರ್‌ನನ್ನು ಕಳುಹಿಸಿದನು. ಮಾದವರಾಯನು ಕರ್ನಾಟಕದ ಕಣಿವೆ ಪ್ರದೇಶದತ್ತ ಬರದೇ ಹೋದರೆ ಹೈದರನಿಂದ ಕಣಿವೆ ಪ್ರದೇಶಗಳನ್ನು ಕಿತ್ತುಕೊಳ್ಳುವುದು[೩೬] ಎಂದು ಯೋಚಿಸಿದರು. ಇದು ಹೈದರನಲ್ಲಿದ್ದ ಬ್ರಿಟಿಷರ ಮೇಲಿನ ವೈರ ಭಾವನೆಯನ್ನು ಮತ್ತಷ್ಟು ಕೆರಳಿಸಿತು. ಮಾಧವರಾಯನು ತನ್ನ ವಿಜಯಯಾತ್ರೆ ಮುಗಿಸಿದನು. ಹೈದರನು ಮರಾಠರೊಂದಿಗೆ ಸಖ್ಯ ಬೆಳೆಸಿದನು. ನಿಜಾಮನನ್ನೂ ತನ್ನ ಪಾಳಯದಲ್ಲಿ ಇರಿಸಿದನು. ಬ್ರಿಟಿಷರು ಹೈದರನ ವಿರುದ್ಧವಾಗಿ ರಚಿಸಿದ್ದ ಶತ್ರುಕೂಟವನ್ನು ವಿಭಜಿಸುವಲ್ಲಿ ಯಶಸ್ವಿಯಾದನು. ಅದನ್ನು ಬ್ರಿಟಿಷರ ವಿರುದ್ಧವೇ ತಿರುಗಿಸುವ ತಂತ್ರಗಾರಿಕೆ ಬಳಸಿದನು.

ಹೈದರಾಬಾದಿನ ನಿಜಾಮನ ಮನಸ್ಸು ಡೋಲಾಯಮಾನವಾಗಿತ್ತು. ಸ್ಥಳೀಯ ಅರಸರೊಂದಿಗೆ ಹಾಗೂ ಬ್ರಿಟಿಷರೊಂದಿಗೆ ನಿಜಾಮನು ಮಾಡಿಕೊಳ್ಳುತ್ತಿದ್ದ ಒಪ್ಪಂದಗಳು ನಂಬಿಗಸ್ಥವಾಗಿ ಉಳಿಯುತ್ತಿರಲಿಲ್ಲ. ಅವನು ಮರಾಠರ ಮಾಧವರಾಯನೊಂದಿಗೂ ಸೇರುತ್ತಿರಲಿಲ್ಲ, ಹೈದರನೊಂದಿಗೆ ಯುದ್ಧವನ್ನು ಮಾಡುತ್ತಲೂ ಇರಲಿಲ್ಲ. ರಾಜನಾಗಿ ತನ್ನ ನಿಜವಾದ ವಿಚಾರವು ಏನಿದೆಯೆಂಬುದನ್ನು ಅವನು ಮರಾಠರಿಗೇ ಆಗಲಿ, ತನ್ನ ಮಿತ್ರರೆನಿಸಿಕೊಂಡ ಬ್ರಿಟಿಷರಿಗಾಗಲಿ ಬಿಟ್ಟುಕೊಡಲಿಲ್ಲ.[೫೭] ನಿಜಾಮನ ಮೂಲಗುಣವೇ ಅವನ ರಾಜಕಾರಣದ ಮೇಲೆ ಪ್ರಭಾವ ಬೀರಿತು. ಅವನು ಎಂದೂ ಸ್ಥಿರಚಿತ್ತನಲ್ಲ. ಯಾವುದೇ ನೀತಿನಿಷ್ಠೆಗಳಿಲ್ಲದವನು. ಮೈಸೂರು ರಾಜ್ಯದಿಂದ ತನಗೆ ಬೇಕಾದ ಭೂ ಪ್ರದೇಶಗಳನ್ನು ಕಿತ್ತುಕೊಳ್ಳಬಹುದು ಎಂಬ ಭಾವನೆಯಿಂದ ಬ್ರಿಟಿಷರ ಕಡೆಗೆ ಸೇರಿದನು. ಹೈದರಬಾದಿನ ನಿಜಾಮನು ಹೈದರ್ ಮತ್ತು ಬ್ರಿಟಿಷರ ಬಗೆಗೆ ನಡೆದುಕೊಂಡ ಅಪ್ರಾಮಾಣಿಕ ವರ್ತನೆ, ಇಡೀ ಮೈಸೂರನ್ನೇ ನುಂಗಿ ಬಿಡಬೇಕೆಂಬ ಮದರಾಸಿನ ದುರಾಸೆ, ಹೈದರನಿಗೆ ಸೇರಿದ ಕಣಿವೆಗಳನ್ನು ವಶಪಡಿಸಿಕೊಂಡಿದ್ದರಿಂದ ಹೈದರ್ ಮತ್ತಷ್ಟು ಕೆರಳಿದನು.

ಬ್ರಿಟಿಷರು ಮೈಸೂರು ರಾಜ್ಯವನ್ನು ಪೂರ್ಣ ಅಧೀನ ಮಾಡಿಕೊಳ್ಳಲು ಮರಾಠರು, ಹೈದರಾಬಾದಿನ ನಿಜಾಮ, ಆರ್ಕಾಟಿನ ನವಾಬರನ್ನು ಸೇರಿಕೊಂಡು ಹೈದರನ ವಿರುದ್ಧ ಒಂದು ಕೂಟವನ್ನೇ ಏರ್ಪಡಿಸಿದರು. ಅದನ್ನು ಜಾಣ್ಮೆಯಿಂದಲೇ ಹೈದರ್ ವಿಭಜಿಸಿದ. ನಿಜಾಮನನ್ನು ತನ್ನ ಪಾಳೆಯಲ್ಲಿರಿಸಿದ. ಕ್ರಿ.ಶ.೧೭೬೭ ಆಗಸ್ಟ್ ೨೫ ರಂದು ಹೈದರನು ನಿಜಾಮನೂ ಕೂಡಿ ಕರ್ನಾಟಕಕ್ಕೆ ಮುತ್ತಿಗೆ ಹಾಕಿದರು. ೬೫೦೦೦ ಸೈನ್ಯದೊಂದಿಗೆ ಕಾವೇರಿ ಪಟ್ಟಣ ಕಣಿವೆಯ ಮೂಲಕ ಅವರು ಪ್ರವೇಶ ಮಾಡಿದರು. ಹೈದರನ ಬಳಿ ೧೨೦೦೦ ಅಶ್ವದಳ, ೧೮೦೦೦ ಪದಾತಿದಳ, ೨೧೦ ಯುರೋಪಿಯನರು, ೪೯ ಫಿರಂಗಿಗಳು ಇದ್ದವು. ನಿಜಾಮನು ೨೫೦೦೦ ಅಶ್ವದಳ, ೧೦೦೦೦ ಪದಾತಿದಳ, ೬೦ ಫಿರಂಗಿಗಳನ್ನು ಹೊಂದಿದ್ದನು. ಬ್ರಿಟಿಷರ ಸೇನಾ ದಂಡನಾಯಕ ಸ್ಮಿತ್ ಕಡೆಯಲ್ಲಿ ೬೦೦ ಯುರೋಪಿಯನ್ನರು, ಸಿಪಾಯಿಗಳ ಆರು ಬಟಾಲಿಯನ್‌ಗಳು ಮಾತ್ರ ಇದ್ದವು. ಬಹುಬೇಗ ಗಡಿ ಪ್ರದೇಶದ ಕೋಟೆ, ಕಾವೇರಿ ಪಟ್ಟಣವು ಹೈದರನ ವಶವಾಯಿತು. ಹೈದರನು ತನ್ನ ಸೈನ್ಯವನ್ನು ಬೇರೊಂದು ದಿಕ್ಕಿನಲ್ಲಿ ಮುನ್ನಡೆಸುವ ಸಂದರ್ಭವನ್ನು ಉಪಯೋಗಿಸಿಕೊಂಡ. ಕ್ರಿ.ಶ.೧೭೬೭ ಸೆಪ್ಟೆಂಬರ್ ೨ರಂದು ಸ್ಮಿತ್ ಗಡಿ ಭಾಗದ ಚಂಗಮಹಳ್ಳಿಯನ್ನು ಗೆದ್ದನು.

ಹೈದರನು ಬ್ರಿಟಿಷರನ್ನು ಎಡೆಬಿಡದಂತೆ ಕಾಡಿದನು. ಅವರ ಸಾಮಾನು ಸರಂಜಾಮುಗಳನ್ನು ಲೂಟಿ ಮಾಡಿದನು. ಆಹಾರ ಪದಾರ್ಥಗಳ ಅಭಾವ ಉಂಟು ಮಾಡಿದನು. ಅವರ ಸೇನಾ ಮುನ್ನಡೆಯನ್ನು ತಡೆದನು. ಆಹಾರ ಪದಾರ್ಥಗಳು ಸರಬರಾಜು ಆಗುತ್ತಿದ್ದ ಮಾರ್ಗಗಳನ್ನು ಬಂದು ಮಾಡಿದನು. ಬ್ರಿಟಿಷರ ಬಲವನ್ನು ಕುಗ್ಗಿಸುವುದು ಅವನ ಯೋಜನೆಯಾಗಿತ್ತು. ಸೆಪ್ಟೆಂಬರ್

೮ ರಂದು ತಿರುಚನಾಪಳ್ಳಿಯಿಂದ ಸೈನ್ಯದೊಂದಿಗೆ ವುಡ್ ಸ್ಮಿತ್‌ನ ಜೊತೆಗೂಡಿದನು. ಚಂಗಮ ಕದನದ ಗೆಲುವಿನಿಂದ ಬ್ರಿಟಿಷರು ಹೆಚ್ಚು ಉತ್ಸಾಹಗೊಂಡರು. ವುಡ್ ಮತ್ತು ಸ್ಮಿತ್ ಇಬ್ಬರು ಜೊತೆಗೂಡಿ ಹೈದರ್‌ನ ಮಿತ್ರ ಪಡೆಯನ್ನು ಸೋಲಿಸಲು ಪ್ರಯತ್ನಿಸಿದರು. ಹೈದರನ ಅಶ್ವಬಲವು ಹೆಚ್ಚು ಸಮರ್ಥವಾಗಿದ್ದಿತು. ಸ್ಮಿತ್ತನು ಒಂದು ಪತ್ರವನ್ನೂ ಕ್ಷೇಮವಾಗಿ ಮದರಾಸಿಗೆ ತಲುಪಿಸಲು ಸಾಧ್ಯವಿರಲಿಲ್ಲ. ಸ್ಮಿತ್‌ನ ಬಳಿ ಸರಿಯಾದ ಅಶ್ವದಳವಿರಲಿಲ್ಲ. ಈ ಸಮಯದಲ್ಲೇ ಸೆಂಟ್ ಲೂಬಿನ್ ಎಂಬ ಫ್ರೆಂಚ್ ಸಾಹಸಿ ಹೈದರನ ಶಿಬಿರವನ್ನು ಬಿಟ್ಟು ಮದರಾಸಿಗೆ ಬಂದನು. ಅಲ್ಲಿ ಬ್ರಿಟಿಷರ ಮೇಲೆ ಪ್ರಭಾವ ಬೀರಿದ ಸ್ಮಿತ್ ಇವನ ಮಾತುಗಳನ್ನು ನಂಬಿದ, ಲೂಬಿನ್ ಹೈದರಾಲಿಯು ಬಿದನೂರಿನಲ್ಲಿ ಅಪಾರ ಸಂಪತ್ತು ಇರಿಸಿದ್ದಾನೆಂದು ತಿಳಿಸಿದ. ರಾಶಿ ರಾಶಿಯಾದ ಮುತ್ತುಗಳು, ವಜ್ರಗಳೂ, ನಗದು ಹಣವೂ ಇದೆ. ಮನಸ್ಸು ಮಾಡಿದರೇ ಸುಲಭವಾಗಿಯೇ ಹೈದರನನ್ನು ಸೋಲಿಸಿ ಅಪಾರ ಸಂಪತ್ತನ್ನು ವಶಪಡಿಸಿಕೊಳ್ಳಬಹುದು ಎಂದು ಮದರಾಸು ಸರಕಾರವನ್ನು ನಂಬಿಸಿದ. ಮದರಾಸು ಸರಕಾರದ ನೀತಿಯು ಎಷ್ಟು ಮೂರ್ಖತನದ್ದಾಗಿತ್ತೆಂದರೆ ಕೇಂದ್ರ ಕಛೇರಿಯು ಅವರನ್ನು ಒಬ್ಬ ಫ್ರೆಂಚ್ ಪಕ್ಷಾಂತರಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡದ್ದಕ್ಕಾಗಿ ಖಂಡಿಸಿತು.[೫೮]

ಕ್ರಿ.ಶ.೧೭೬೭ ಸೆಪ್ಟೆಂಬರ್ ೨೫ ರಂದು ಬ್ರಿಟಿಷರು ತಿರುವಣ್ಣಾಮಲೈನಲ್ಲಿ ಹೈದರನ ಮಿತ್ರ ಪಡೆಯನ್ನು ಸೋಲಿಸಿದರು. ಈ ಕದನದಲ್ಲಿ ನಿಜಾಮನು ಸರಿಯಾಗಿ ಸಹಕರಿಸಲಿಲ್ಲ. ಹೈದರನ ಸೈನ್ಯದ ದೊಡ್ಡ ಭಾಗವನ್ನು ಟಿಪ್ಪು ಮದರಾಸಿನ ಆಸು ಪಾಸಿಗೆ ಕೊಂಡೊಯ್ದಿದ್ದನು. ಈ ಸೈನ್ಯವು ಹೈದರನ ಬಳಿ ಇದ್ದಿದ್ದರೆ ಯುದ್ಧದ ಗತಿಯೇ ಬೇರೆಯಾಗಿರುತ್ತಿತ್ತು ಎಂದು ಪೋರ್ಚುಗೀಸ್ ಕ್ಯಾಪ್ಟನ್ ಪಿಕ್ಲೊಟೋ ಬರೆಯುತ್ತಾನೆ. ಈ ಕದನದ ನಂತರ ಮಿತ್ರಕೂಟವು ಕರ್ನಾಟಕ ಪ್ರಾಂತದಿಂದ ವಾಪಸ್ಸು ಹೋಗುತ್ತದೆಂದು ಸ್ಮಿತ್ ಆಲೋಚಿಸಿದನು. ಮಳೆ, ಆಹಾರದ ಕೊರತೆಯಿಂದ ಮದರಾಸು ಸೈನ್ಯ ಬೇರೆ ಬೇರೆ ಸ್ಥಳಗಳಲ್ಲಿ ಬೀಡು ಬಿಟ್ಟಿತು. ತಿರುವಣ್ಣಾ ಮಲೈ, ಕಾಂಜೀವರಂ ಮತ್ತು ತಿರುಚಿನಾಪಳ್ಳಿಯಲ್ಲಿ ಬ್ರಿಟಿಷರ ಸೇನೆ ನೆಲೆಗೊಂಡಿತ್ತು. ಈ ಸುವರ್ಣಾವಕಾಶ ಉಪಯೋಗಿಸಿಕೊಂಡು ಹೈದರ್ ವಾಣಿಯಂಬಾಡಿ, ತಿರುಪತ್ತೂರು ಭಾಗಗಳನ್ನು ವಶಪಡಿಸಿಕೊಂಡನು. ಅನಂತರ ಅಂಬೂರನ್ನು ಮುತ್ತಿದನು. ಹೈದರನು ಬ್ರಿಟಿಷರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಬಯಸಿದನು. ಬ್ರಿಟಿಷರಿಗೆ ಮಾತ್ರ ಶಾಂತಿ ಬೇಕಾಗಿರಲಿಲ್ಲ. ಮೈಸೂರು ರಾಜ್ಯವನ್ನು ಪೂರ್ಣ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಯೋಚಿಸಿದರು. ಅದಕ್ಕಾಗಿ ಹೈದರಾಲಿ ವಿರುದ್ಧ ಒಡೆಯರ್‌ರನ್ನು ಪ್ರಚೋದಿಸಿದರು. ರಂಗರಾವ್ ಎಂಬ ಏಜೆಂಟ್‌ನ ಮೂಲಕ ಉದ್ದೇಶಿತ ಯೋಜನೆಯನ್ನು ನಂಜರಾಜರಿಗೆ ವಿವರಿಸುವಂತೆ ನಿರ್ದೇಶಿಸಿದರು. ಅದರ ಪ್ರಕಾರ ಮುಂಬಯಿ ಬ್ರಿಟಿಷರ ಸೈನ್ಯ ಪಶ್ಚಿಮ ಭಾಗದಿಂದ ಲಗ್ಗೆ ಹಾಕುವುದು. ಮಲಬಾರಿನಲ್ಲಿ ದಂಗೆಯೇಳುವಂತೆ ಪ್ರಚೋದಿಸುವುದು.

ಹೈದರ್‌ನನ್ನು ನಾಶ ಮಾಡುವುದು. ಈ ಯುದ್ಧದ ವೆಚ್ಚವನ್ನು ಮಹಾರಾಜರು ಭರಿಸುವುದು.[೪೦] ಬ್ರಿಟಿಷರ ಈ ಪ್ರಯತ್ನವನ್ನು ಹೈದರನು ವಿಫಲಗೊಳಿಸಿದನು.

ಕ್ರಿ.ಶ.೧೭೬೭ ಡಿಸೆಂಬರ್ ೮ ರಂದು ನಡೆದ ಕದನದಲ್ಲಿ ಬ್ರಿಟಿಷರು ಹೈದರನ ವಿರುದ್ಧ ಮೂರನೆಯ ವಿಜಯ ಪಡೆದರು. ವಾಣಿಯಂಬಾಡಿ ವಶಪಡಿಸಿಕೊಂಡರು. ಇದೇ ಸಮಯದಲ್ಲಿ ನಿಜಾಮನು ಪ್ರತ್ಯೇಕಗೊಂಡನು. ಇದರಿಂದಾಗಿ ಹೈದರನು ಕರ್ನಾಟಕ ಭಾಗದಿಂದ ಹಿಂದೆ ಸರಿಯಲು ತೀರ್ಮಾನಿಸಿದನು. ಕ್ರಿ.ಶ.೧೭೬೮ ಜನವರಿ ೫ನೇ ತಾರೀಕು ತನ್ನ ರಾಜ್ಯಕ್ಕೆ ಮರಳಿ ಪ್ರಯಾಣಿಸಿದನು.[೪೧]

ಹೈದರನ ವಿರುದ್ಧ ನಡೆಸಿದ ಹೋರಾಟಗಳಿಂದ ವಿಜಯ ಪಡೆದ ಬ್ರಿಟಿಷರು ಇಡೀ ಮೈಸೂರು ರಾಜ್ಯವನ್ನು ಗೆಲ್ಲಲು ಉತ್ಸಾಹ ತೋರಿದರು. ಸ್ಮಿತ್, ಮ್ಯಾಕೆ ಮತ್ತು ಕಾಲ್ ಇವರನ್ನು ಯುದ್ಧ ನಿರ್ವಹಣೆ ಮಾಡುವ ಅಧಿಕಾರಿಗಳನ್ನಾಗಿ ನೇಮಿಸಲಾಯಿತು. ಬ್ರಿಟಿಷರ ಸೈನ್ಯವು ಏಪ್ರಿಲ್ ೫ ರಂದು ಮದ್ರಾಸಿನಿಂದ ಹೊರಟು ಕೃಷ್ಣಗಿರಿ, ವೆಂಕಟಗಿರಿ, ಮುಳುಬಾಗಿಲು, ಕೋಲಾರ ಮತ್ತು ಆನೇಕಲ್‌ಗಳನ್ನು ಗೆದ್ದರು. ಇದು ಹೈದರ್‌ನ ಮೇಲೆ ಯಾವ ಪರಿಣಾಮವುಂಟು ಮಾಡಲಿಲ್ಲ. ಅನಂತರ ವುಡ್ ಸೈನ್ಯ ಸಮೇತನಾಗಿ ಹೊರಟವನು ಧರ್ಮಪುರಿ, ತೆಂಗಿಕೋಟ, ಕಾವೇರಿಪುರಂ, ಸೇಲಂ ಮತ್ತು ಅತೂರು ಮೊದಲಾದ ಕೋಟೆಗಳನ್ನು ವಶಪಡಿಸಿಕೊಂಡನು. ಮುಂದುವರೆದು ಕೊಯಮತ್ತೂರು ಮತ್ತು ದಿಂಡಿಗಲ್‌ಗಳನ್ನೂ ಗೆದ್ದನು.[೪೨] ಮೇಜರ್ ಜಾನ್ ಗೋವಿನ್ ಮತ್ತು ಜಾನ್ ವಾಟ್ಸನ್‌ರನ್ನು ಮಂಗಳೂರು, ಹೊನ್ನಾವರ ಮತ್ತು ದುರ್ಗ ದ್ವೀಪಗಳನ್ನ ವಶಪಡಿಸಿಕೊಳ್ಳಲು ನಿಯೋಜಿಸಲಾಯಿತು. ಸ್ವಲ್ಪ ಸಮಯದಲ್ಲೇ ಇವು ಕೈವಶವಾದವು. ಮೇಜರ್ ಜಾನ್‌ಗೋವಿನ್ ಮತ್ತು ಜಾನ್‌ವಾಟ್ಸನ್ ಮುಂಬಯಿಗೆ ಮರಳಿದರು. ಈ ಸಮಯ ಉಪಯೋಗಿಸಿಕೊಂಡು ಹೈದರ್ ಬ್ರಿಟಿಷರು ಗೆದ್ದ ಎಲ್ಲಾ ಪ್ರದೇಶಗಳನ್ನು ವಶಪಡಿಸಿಕೊಂಡನು. ಕ್ರಿ.ಶ.೧೭೬೮ ಮೇ ೧೧ನೆಯ ತಾರೀಕು ಮುಂಬಯಿಯ ಸೈನ್ಯ ಮಂಗಳೂರಿನಿಂದ ತೆರವು ಮಾಡಿತು. ಸುಮಾರು ೮೦ ಮಂದಿ ಯುರೋಪಿಯನರು, ೧೬೨ ಮಂದಿ ಸೈನಿಕರು ಕಾಣೆಯಾದರು. ೫೦ ಮಂದಿ ಯುರೋಪಿಯನ್ ಸೈನಿಕರು ಹೈದರನ ವಶವಾದರು. ಅಪಾರ ಮದ್ದುಗುಂಡು, ಮಿಲಿಟರಿ, ಉಗ್ರಾಣ ದೊರೆತವು.[೪೩] ಇದರ ನೆರವಿನಿಂದ ಮತ್ತೆ ತನ್ನ ಸೈನ್ಯವನ್ನು ಹೆಚ್ಚು ಬಲಪಡಿಸಲು ಸಾಧ್ಯವಾಯಿತು.

ಯುದ್ಧದ ಅಂತಿಮ ಹಂತ

ಮೊದಲನೆ ಆಂಗ್ಲೋ–ಮೈಸೂರು ಕದನವನ್ನು ಸಾಧ್ಯವಾದಷ್ಟು ಜಾಗ್ರತೆಯಿಂದ ಅಂತಿಮ ಗೊಳಿಸಲು ಹೈದರನು ಉದ್ದೇಶಿಸಿದ. ಮುಂಬಯಿ ಸರಕಾರ ಬೆಂಗಳೂರನ್ನು ವಶಪಡಿಸಿಕೊಳ್ಳುವಂತೆ

ಎಷ್ಟೇ ಒತ್ತಾಯ ಹಾಕಿದರೂ ಡೆಪ್ಯೂಟಿಗಳು ಇದರಲ್ಲಿ ಸಫಲರಾಗಲಿಲ್ಲ. ಡೆಪ್ಯೂಟಿಗಳು ಹೈದರನನ್ನು ಪೂರ್ಣ ಸೋಲಿಸುವವರೆಗೂ ಯುದ್ಧವನ್ನು ಮುನ್ನಡೆಸಬೇಕೆಂದು ಒತ್ತಾಯ ಪಡಿಸಿದರು. ಆದರೆ ಮದರಾಸಿನ ಸರಕಾರಕ್ಕೆ ಡೆಪ್ಯೂಟಿಗಳ ಮೇಲೆ ವಿಶ್ವಾಸವಿರಲಿಲ್ಲ. ತಮ್ಮ ಹಿನ್ನಡೆಗೆ ಇವರೇ ಕಾರಣರೆಂದು ಅಭಿಪ್ರಾಯ ಪಟ್ಟಿತು. ವುಡ್ಸ್‌ನನ್ನು ಹಿಂದಕ್ಕೆ ಕರೆಸಿದ್ದು ಬೆಂಗಳೂರು ಮುತ್ತಿಗೆಯನ್ನು ಕೈಬಿಟ್ಟದ್ದು, ಹೈದರನೊಂದಿಗೆ ಶಾಂತಿ ಸಂಧಾನವಾಗದಂತೆ ನಡೆದುಕೊಂಡದ್ದು ಇವೆಲ್ಲವೂ ಡೆಪ್ಯೂಟಿಗಳ ಮೇಲೆ ಮದರಾಸು ಸರಕಾರಕ್ಕೆ ಅಸಮಧಾನ ತಂದಿತು. ತಕ್ಷಣವೇ ಡೆಪ್ಯೂಟಿಗಳನ್ನು ವಾಪಸ್ಸು ಬರುವಂತೆ ಸೂಚಿಸಿತು.[೪೪] ಸ್ಮಿತ್ ಕೂಡ ಬೆಂಗಳೂರು ಮತ್ತು ಶ್ರೀರಂಗಪಟ್ಟಣ ಇದರಲ್ಲಿ ಯಾವುದನ್ನೂ ಗೆಲ್ಲಲಾರದೆ ಹೋದನು. ಅವನು ಹಿಂತಿರಗಬೇಕೆಂದು ನಿರ್ದೇಶನ ಬಂದಿತು. ಅದರಂತೆ ತನ್ನ ವೈಫಲ್ಯ ಒಪ್ಪಿಕೊಂಡು ಮದರಾಸಿಗೆ ವಾಪಸ್ಸಾದನು.

ಸ್ಮಿತ್ ಒಬ್ಬ ಸಮರ್ಥ ದಳಪತಿ. ಅವನು ಯುದ್ಧರಂಗದಿಂದ ನಿರ್ಗಮಿಸಿದ್ದು ಹೈದರನಿಗೆ ಹೆಚ್ಚು ಅನುಕೂಲವಾಯಿತು. ವುಡ್ ಮದರಾಸು ಸರಕಾರದಲ್ಲಿ ಪ್ರಧಾನ ಪಾತ್ರವಹಿಸಿದನು. ಯಾವುದೇ ಕ್ರಮವನ್ನು ಕೈಗೊಳ್ಳಲು ಅವನಿಗೆ ಅಧಿಕಾರ ನೀಡಲಾಯಿತು. ಕೋಲಾರದ ಬಳಿಯ ಬಾಗಲೂರು ಬಳಿ ನಡೆದ ಯುದ್ಧದಲ್ಲಿ ವುಡ್ ಪರಾಭವ ಹೊಂದಿದನು. ಇದರಿಂದ ವುಡ್ ಕೂಡ ಹತಾಶನಾದನು. ಅವನನ್ನು ಹಿಂದಕ್ಕೆ ಕರೆಸಿ ಕೋರ್ಟ್‌ಮಾರ್ಷೆಲ್‌ಗೆ ಗುರಿಪಡಿಸಲಾಯಿತು. ಸ್ಮಿತ್ ಮತ್ತು ವುಡ್ ಇಬ್ಬರೂ ನಿರ್ಗಮಿಸಿದುದು ಹೈದರನು ಅನೇಕ ದುರ್ಗಗಳನ್ನು ಜಯಿಸಲು ಅನುಕೂಲವಾಯಿತು.[೪೫]

ವಿದೇಶಿ ಶತ್ರುಗಳನ್ನು ಸಮರ್ಥವಾಗಿ ಹಿಮ್ಮೆಟಿಸಲು ಕಾಲ ಸನ್ನಿಹಿತವಾಗಿದೆ. ಈ ಕಾರ್ಯದಲ್ಲಿ ಯಶಸ್ವಿಯಾಗಲು ಮರಾಠರು ಮತ್ತು ಹೈದರಾಬಾದಿನ ನಿಜಾಮ ತನ್ನೊಂದಿಗೆ ಸೇರಿಕೊಳ್ಳಬೇಕೆಂದು ಬಯಸಿದನು. ಈ ವಿಷಯ ತಿಳಿಸಲು ರಾಜಾಸಾಹೇಬನನ್ನು ಹಣದೊಂದಿಗೆ ಪುಣೆಗೆ ಕಳುಹಿಸಿಕೊಟ್ಟನು. ನಿಜಾಮನೂ ರುಕ್ನುದೌಲನನ್ನು ಪುಣೆಗೆ ಕಳುಹಿಸಿದ. ರಾಜಾಸಾಹೇಬನು ಮರಾಠ ಮತ್ತು ನಿಜಾಮನಿಂದ ಸೈನಿಕ ಸಹಾಯ ನೀಡುವ ಭರವಸೆಯೊಂದಿಗೆ ಮೈಸೂರಿಗೆ ಹಿಂತಿರುಗಿದ. ಮಾದವರಾಯನೇ ಸೆಪ್ಟೆಂಬರ್ ೨೧ ರಂದು ಹೈದರನೊಂದಿಗೆ ಸೇರಿಕೊಳ್ಳಲು ಪುಣೆಯಿಂದ ಹೊರಟನು. ಮರಾಠ ಸೈನ್ಯವನ್ನು ಮುನ್ನಡೆಸುವ ಜವಾಬ್ದಾರಿಯನ್ನು ಗೋಪಾಲರಾಯನಿಗೆ ವಹಿಸಲಾಗಿತ್ತು. ಪ್ರಬಲವಾದ ಸೇನಾ ತುಕಡಿಯನ್ನು ಕೊಂಕಣಕ್ಕೆ ಕಳುಹಿಸಲಾಗಿತ್ತು. ಜೊತೆಗೆ ಯಾವುದೇ ತುರ್ತು ಸಂದರ್ಭವನ್ನು ಎದುರಿಸಲು ಮರಾಠರ ನೌಕಾಬಲವು ಸನ್ನದ್ಧವಾಗಿತ್ತು. ರುಕ್ನುದ್ದೌಲನು ಮಾದವರಾಯನೊಂದಿಗೆ ನಿಜಾಮನ ಮೈತ್ರಿಯನ್ನು ಸಂಪಾದಿಸಿದನು. ಹೈದರನು ಬ್ರಿಟಿಷರನ್ನು ನಿರ್ಣಾಯಕವಾಗಿ ಹತ್ತಿಕ್ಕಲು ಬಹು ಜಾಣ್ಮೆಯಿಂದಲೇ ತನ್ನ ರಾಜನೀತಜ್ಞತೆಯನ್ನು ಪ್ರದರ್ಶಿಸಿದನು.

ಹೈದರನು ಬ್ರಿಟಿಷರ ವಿರುದ್ಧವಾಗಿ ನಡೆಸಿದ ಕಾರ್ಯತಂತ್ರಗಳೂ, ಮಾದವರಾಯನು ಪುಣೆಯಿಂದ ಹೊರಟದ್ದು ಉತ್ತರ ಭಾಗದಲ್ಲಿ ಪೂಜಾದ್ದೌಲನು ದಂಗೆಯದ್ದು, ನಿಜಾಮನ ಪ್ರತಿನಿಧಿ ರುಕ್ಕುದ್ದೌಲ ಮಾದವರಾಯನನ್ನು ಸಂದಿಸಿದ್ದು ಬ್ರಿಟಿಷರು ಹೆಚ್ಚು ಆತಂಕಪಡಲು ಕಾರಣವಾಯಿತು. ಪೂಜಾಉದ್ದೌಲನು ಬಂಗಾಳವನ್ನು ಆಕ್ರಮಿಸಬಹುದು. ನಿಜಾಮನು ಸರ್ಕಾರಗಳನ್ನು ಹೈದರ್ ಮತ್ತು ಮರಾಠರು ಸೇರಿ ಕರ್ನಾಟಕದ ಮೇಲೆ ಆಕ್ರಮಣ ಮಾಡಬಹುದು ಎಂದು ಅನುಮಾನಿಸಿದರು. ಇವರೆಲ್ಲ ಕಂಪನಿಯ ವಿರುದ್ಧ ರಹಸ್ಯ ಒಪ್ಪಂದ ಮಾಡಿಕೊಂಡಿದ್ದಾರೆಂಬ ಭಾವನೆಯೂ ಅವರದಾಗಿತ್ತು. ಒಕ್ಕೂಟವನ್ನು ಒಡೆಯಲು ಪ್ರಯತ್ನಿಸಿದರು. ಮರಾಠರ ಮಾದವರಾಯನಿಗೆ ಬಿದನೂರು ಗೆದ್ದುಕೊಡುವ ಭರವಸೆಯೊಂದಿಗೆ ತನ್ನ ಕಡೆಗೆ ಸೆಳೆಯಲು ಪ್ರಯತ್ನಿಸಿದರು. ಈ ವಿಷಯವಾಗಿ ಮಾತುಕತೆ ನಡೆಸಲು ಬ್ರೂಮ್‌ನನ್ನು ಕಳುಹಿಸಿದರು. ಇತ್ತ ಹೈದರನು ಫ್ರೆಂಚರನ್ನೂ ಈ ಯುದ್ಧಕ್ಕೆ ಎಳೆಯಬಹುದು ಎಂಬ ಆತಂಕವೂ ಬ್ರಿಟಿಷರನ್ನು ಕಾಡಿತು. ಇವೆಲ್ಲದಕ್ಕೆ ಪರಿಹಾರವೆಂದರೆ ಯುದ್ಧಮಾರ್ಗ ನಿಲ್ಲಿಸಿ ಸಂಧಾನ ಮಾರ್ಗ ಅನುಸರಿಸುವುದು ಸೂಕ್ತ ಎಂಬ ನಿರ್ಧಾರಕ್ಕೆ ಬರುವಂತಾಯಿತು.

ಹೈದರನು ಕ್ರಿ.ಶ.೧೭೬೭ ಡಿಸೆಂಬರ್ ವೇಳೆಗೆ ಉತ್ತಮ ಸ್ಥಿತಿ ತಲುಪಿದನು. ತಾನು ಕಳೆದುಕೊಂಡಿದ್ದ ಪ್ರದೇಶಗಳೆಲ್ಲವನ್ನು ಪಡೆದನು. ಮದರಾಸು ಭಾರತೀಯ ರಾಜರ ಒಕ್ಕೂಟದ ಭೀತಿಯ ಕಪಿಮುಷ್ಠಿಗೆ ಒಳಪಡುವಂತೆ ಮಾಡಿದನು. ಆದರೂ ಬ್ರಿಟಿಷರೊಂದಿಗೆ ಈಗಲೂ ನ್ಯಾಯಯುತವಾಗಿ ಷರತ್ತುಗಳ ಮೇಲೆ ಒಪ್ಪಂದ ಮಾಡಿಕೊಳ್ಳಲು ಇಚ್ಛಿಸಿದನು. ಮದರಾಸಿನಿಂದ ಶಾಂತಿ ಮಾತುಕತೆ ನಡೆಸಲು ಒಬ್ಬ ವ್ಯಕ್ತಿಯನ್ನು ಕಳುಹಿಸುವಂತೆಯೂ ಕೇಳಿದನು. ಬ್ರಿಟಿಷರು ಮುದ್ದುಕೃಷ್ಣ ಎಂಬ ಏಜೆಂಟನನ್ನು ಕಳುಹಿಸಿದರು. ಇಷ್ಟರ ನಡುವೆ ಹೈದರನು ಒಬ್ಬ ವಕೀಲನನ್ನು ಫಿಟ್ಸ್ ಜೆರಾಲ್ಡನ ಬಳಿಗೆ ಕಳುಹಿಸಿ ತಾನು ಶಾಂತಿಯ ಪರವಾಗಿರುವುದಾಗಿ ಹೇಳಿ ಕಳುಹಿಸಿದನು. ಫಿಟ್ಸ್ ಜೆರಾಲ್ಡನು ಬ್ರೂಕ್ ಎನ್ನುವವನನ್ನು ಮಾತುಕತೆಗೆ ಕಳುಹಿಸಿದನು.

೪.೨.೪. ಮದರಾಸು ಒಪ್ಪಂದ

ಮೊದಲನೆಯ ಆಂಗ್ಲೋ-ಮೈಸೂರು ಯುದ್ಧವನ್ನು ಅಂತಿಮಗೊಳಿಸಿದ ಮಂಗಳೂರು ಒಪ್ಪಂದವು ಐದು ಅನುಚ್ಛೇದಗಳನ್ನು ಹೊಂದಿತ್ತು. ಮೊದಲನೆಯ ಅನುಚ್ಛೇದದಲ್ಲಿ ಒಡಂಬಡಿಕೆ ಮಾಡಿಕೊಳ್ಳುತ್ತಿರುವವರ ಹೆಸರುಗಳಿದ್ದವು. ಇದರಲ್ಲಿ ನವಾಬನ ಹೆಸರನ್ನು ಕೈಬಿಡಲಾಗಿತ್ತು. ಕಾರಣ ಮಹಮ್ಮದ್ ಅಲಿ ಮತ್ತು ಹೈದರನ ನಡುವೆ ಪರಸ್ಪರ ಕಹಿಭಾವನೆಗಳು ಮೂಡಿದ್ದವು. ಈ ಅನುಚ್ಛೇದವು ಹೈದರ್‌ನ ಮತ್ತು ಮಹಮ್ಮದ್ ಅಲಿಯ ಮಧ್ಯೆ ಬೇರೂರಿದ್ದ ಶತ್ರುತ್ವವನ್ನು ತೋರಿಸಿಕೊಟ್ಟಿತು. ಒಪ್ಪಂದದಿಂದ ನವಾಬನನ್ನು ಹೊರಗಿಟ್ಟಿದ್ದು ಆಶ್ಚರ್ಯದ ಸಂಗತಿಯಾದರೆ,

ಅದರಲ್ಲಿ ತಂಜಾವೂರಿನ ರಾಜನನ್ನು ಸೇರಿಸಿಕೊಂಡಿದ್ದು ಇನ್ನೂ ಆಶ್ಚರ್ಯದ ಸಂಗತಿಯಾಗಿತ್ತು. ಯುದ್ಧದಲ್ಲಿ ಇವನ ಪಾತ್ರ ಗಮನಾರ್ಹವೇನಲ್ಲ. ಮದರಾಸು ಸರಕಾರವನ್ನು ವಿರೋಧಿಸಿದನು. ಹೈದರಾಲಿಗೆ ನಾಲ್ಕು ಲಕ್ಷ ರೂಪಾಯಿ ನೀಡಿದ್ದನು.[೪೬] ಈ ಒಪ್ಪಂದವು ಸಂರಕ್ಷಕ ಸ್ವರೂಪ ಹೊಂದಿತ್ತು.

ಬ್ರಿಟಿಷರಿಗೆ ಇದು ಇಷ್ಟವಿಲ್ಲದಿದ್ದರೂ ಅನಿವಾರ್ಯವಾಗಿತ್ತು. ಅವರಿಗೆ ಮನಸ್ಸಿಲ್ಲದಿದ್ದರೂ ಒಪ್ಪಂದದ ಷರತ್ತಿಗೆ ಒಪ್ಪಿಕೊಂಡಿದ್ದಾರೆ ಎನ್ನುವುದು ಆಗ ಅವನಿಗೆ ಅರ್ಥವಾಗಲಿಲ್ಲ. ಈ ಸಂಧಿಯ ಕರಾರುಗಳನ್ನು ಬೇಗ ಮುರಿಯಲು ಬ್ರಿಟಿಷರು ಆಶಿಸುತ್ತಿದ್ದರು. ಈ ಒಪ್ಪಂದ ಕೆಲಸಕ್ಕೆ ಬಾರದಂತಾಗುತ್ತದೆಂದು ಅವರು ಭಾವಿಸಿದರು.[೪೭] ಯುದ್ಧದ ಸಂದರ್ಭದಲ್ಲಿ ಉಭಯ ಪಕ್ಷಗಳು ವಶಪಡಿಸಿಕೊಂಡಿದ್ದ ಎಲ್ಲ ಪ್ರದೇಶಗಳನ್ನು ಹಿಂತಿರುಗಿಸುವುದು ಹಾಗೂ ಎಲ್ಲ ಯುದ್ಧ ಬಂದಿಗಳನ್ನೂ ವಿನಿಮಯ ಮಾಡಿಕೊಳ್ಳುವುದು ಎಂಬ ಷರತ್ತು ವಿಧಿಸಲಾಯಿತು. ಬ್ರಿಟಿಷರು ಯಾವುದನ್ನು ಕಾರ್ಯಕಲಾಪಕ್ಕೆ ತರುವ ಉದ್ದೇಶವಿರಲಿಲ್ಲದ್ದೇ ಅದನ್ನು ಈ ಒಪ್ಪಂದದಲ್ಲಿ ಒಪ್ಪಿಕೊಂಡರು. ಹೈದರನಿಗೆ ಸಹಾಯ ಮಾಡುವ ಯಾವ ಇರಾದೆಯೂ ಇರಲಿಲ್ಲ. ಅತ್ಯಂತ ಜರೂರು ಸನ್ನಿವೇಶದಿಂದ ಅಂಥದೊಂದು ಉಪನಿಯಮವನ್ನು ಒಪ್ಪಿಕೊಳ್ಳಬೇಕಾಯಿತು.

ಮೂರನೆಯ ಅನುಚ್ಛೇದದನ್ವಯ ಹೈದರಾಲಿ ಬ್ರಿಟಿಷರಿಗೆ ಕೆಲವು ವಾಣಿಜ್ಯ ರಿಯಾಯ್ತಿ ನೀಡಿದನು. ನಾಲ್ಕನೆಯ ಅನುಚ್ಛೇದವು ಯುದ್ಧ ಖೈದಿಗಳ ಬಿಡುಗಡೆಯನ್ನು ಕುರಿತದ್ದು. ಇದರಿಂದ ಬ್ರಿಟಿಷ್ ಸೆರೆಯಾಳುಗಳಿಗೆ ಅಪಾರ ಸಂತೋಷವುಂಟಾಯಿತು. ಒಪ್ಪಂದದ ಕರಾರಿನಂತೆ ಹೈದರಾಲಿ ಕ್ರಿ.ಶ.೧೭೬೯ ಮೇ ೨೮ ರಂದು ೨೦೫ ಯುರೋಪಿಯನ್ನರನ್ನು ಬಿಡುಗಡೆ ಮಾಡಿದನು. ಐದನೆಯ ಮತ್ತು ಕೊನೆಯ ಅನುಚ್ಛೇದವು ಪರಸ್ಪರ ಗೆದ್ದಿದ್ದ ಭಾಗಗಳ ವಿನಿಮಯವೇ ಪ್ರಧಾನ ಅಂಶವಾಗಿತ್ತು. ಇದರಿಂದ ಹೆಚ್ಚು ಅನುಕೂಲ ದೊರೆತದ್ದು ಕಂಪನಿಗೆ. ಹೈದರನು ಒಪ್ಪಂದದ ಎಲ್ಲಾ ಷರತ್ತುಗಳನ್ನು ಒಪ್ಪಿಕೊಂಡನಾದರೂ ಏಕೆ? ಎಂಬ ಪ್ರಶ್ನೆ ಮೂಡಬಹುದು. ಹೈದರನಿಗೆ ಬ್ರಿಟಿಷರೊಂದಿಗೆ ಬಯಲು ಯುದ್ಧದಲ್ಲಿ ಪೂರ್ಣಗೆಲ್ಲುವುದು ಸಾಧ್ಯವಿಲ್ಲವೆಂಬುದು ಚೆನ್ನಾಗಿಯೇ ಅರಿತಿದ್ದನು. ಬ್ರಿಟಿಷರಿಗೂ ಯುದ್ಧ ನಿಲ್ಲಿಸಿ ಶಾಂತಿ ಏರ್ಪಡಿಸಿಕೊಳ್ಳುವ ಅನಿವಾರ್ಯತೆಯೂ ಇತ್ತು. ಲಂಡನಿನ ಕೇಂದ್ರ ಕಚೇರಿಯ ಆದೇಶ, ಕಂಪನಿಯ ಆರ್ಥಿಕ ದುಸ್ಥಿತಿ, ಮದರಾಸು ಸೈನ್ಯದ ಸ್ಥಿತಿಗತಿ, ಹೈದರಾಲಿಯ ಪ್ರಾಬಲ್ಯದ ಅರಿವು, ಮದರಾಸಿನ ಬ್ರಿಟಿಷ್ ಅಧಿಕಾರಿಗಳ ಆಂತರಿಕ ಭಿನ್ನಾಭಿಪ್ರಾಯಗಳು[೪೮] ಈ ಶೋಚನೀಯ ಸನ್ನಿವೇಶಗಳು ಶಾಂತಿ ಒಪ್ಪಂದ ಮಾಡಿಕೊಳ್ಳುವ ಸನ್ನಿವೇಶ ಸೃಷ್ಟಿಸಿತು.

ಬ್ರಿಟಿಷರು ಹೈದರಾಲಿಯ ವಿರುದ್ಧದ ಯುದ್ಧದಲ್ಲಿ ಸಾಧಿಸಿದ್ದಾದರೂ ಏನು? ಅದು ಶೂನ್ಯವೇ. ಯುದ್ಧದ ಆರಂಭ, ಮುನ್ನಡೆ, ನಿರ್ವಹಣೆಯೂ ಅನರ್ಥಕಾರಿಯಾಗಿತ್ತು. ಯುದ್ಧಕ್ಕೂ ಮೊದಲು ಕಂಪನಿಯ ಗೌರವ ಪ್ರತಿಷ್ಠೆಗಳು ಉನ್ನತವಾಗಿತ್ತು. ಅದು ಇಳಿಮುಖವಾಯಿತು. ಕಂಪನಿಯ ಆರ್ಥಿಕ ಪರಿಸ್ಥಿತಿ ಶೋಚನೀಯ ಹಂತ ತಲುಪಿತು. ನೈತಿಕತೆ, ಆತ್ಮಸ್ಥೈರ್ಯಗಳು ಕುಸಿತ ಕಂಡವು. ಕಂಪನಿಯ ನೌಕರ ಮಾರ್ಟಿನ್‌ಗುಡ್ ಲ್ಯಾಡ್ ಎನ್ನುವವನು ಪಾಕ್‌ಗೆ ಹೀಗೆ ಬರೆದನು. "ಮೈಸೂರು ರಾಜ್ಯವನ್ನು ಗೆದ್ದು ವಶಪಡಿಸಿಕೊಳ್ಳಲೆಂದು ಹೊರಬಿದ್ದವರು ತಮ್ಮದೇ ರಾಜಧಾನಿಯ ಬಾಗಿಲಲ್ಲಿ ಶಾಂತಿ ಸಂಧಾನ ಮಾಡಿಕೊಳ್ಳುವ ದುಸ್ಥಿತಿ ಬರುತ್ತದೆಂದು ಯಾರು ಎಣಿಸಿದ್ದರು. ಸಮೃದ್ಧ ಬಂಡವಾಳ ಹೂಡಿಕೆ, ತುಂಬಿರುವ ಖಜಾನೆಗಳ ಬದಲಾಗಿ ಈಗ ನಾವು ನಮ್ಮ ಸಾಕುವುದು ದುಸ್ಥರವಾಗಿದೆ. ಕೊರಳುದ್ದ ಸಾಲದಲ್ಲಿ ಮುಳುಗಿದ್ದೇವೆ.[೪೯]

ಮದರಾಸಿನ ಬ್ರಿಟಿಷ್ ನಾಗರಿಕನಾದ ಎಫ್.ಸಿ.ಬ್ರೌನ್ ತನ್ನ ಪತ್ರದಲ್ಲಿ "ಭಾರತದಲ್ಲಿ ಬ್ರಿಟೀಷ್ ತೋಳಬಲಕ್ಕೆ ಇನ್ನು ವಿದಾಯ ಹೇಳಬೇಕು ಎಂದೆನಿಸುತ್ತದೆ. ಸರಿಯಾಗಿ ಬೆಳೆಸಿದ್ದರೆ ಶಾಂತಿ ಸುಭದ್ರತೆಗಳ ಆಧಾರದ ಮೇಲೆ ಸಂಪನ್ನವಾಗಿ ಬೆಳೆಯಬಹುದಾಗಿದ್ದ ವಿಜಯೋತ್ಸವದ ಮೇಲ್ಮೆಯನ್ನೂ ನಮ್ಮ ಪೌರ್ವಾತ್ಯ ಸಾಮ್ರಾಜ್ಯದ ಹೆಗ್ಗಳಿಕೆಯನ್ನೂ ಇನ್ನೂ ನೋಡಲಾರೆವೆಂದು ಕಾಣುತ್ತದೆ.[೫೦] ನಿಜಾಮನು ಹೈದರನೊಂದಿಗೆ ಯಾವಾಗ ಸಂಧಿಮಾಡಿಕೊಂಡನೋ ಆ ಕ್ಷಣವೇ ಯುದ್ಧ ನಿಲ್ಲಬೇಕಾಯಿತು ಎಂದು ಪಾಕ್ ಭಾವಿಸಿದನು. ಮ್ಯಾಕೇ ಯುದ್ಧ ಕುರಿತು "ಆ ದುರದೃಷ್ಟದ ಯುದ್ಧದಲ್ಲಿ ಎಂಥ ಅವಮಾನ, ನಾಚಿಕೆಯುಂಟಾಯಿತೆಂದರೆ ಅದನ್ನು ಯೋಚಿಸುವುದು ನನಗೆ ಸಾಧ್ಯವಿಲ್ಲ." ಜೇಮ್ಸ್ ಬೋರ್ಚಿಯರ್ ಯುದ್ಧ ಸೋಲಿನ ಸನ್ನಿವೇಶವನ್ನು ಕುರಿತು "ಡೈರಕ್ಟರುಗಳ ಸಮೂಹಕ್ಕೆ ಶಾಪ ಹಾಕಬೇಕು ಎಂದನು. ಅದರಲ್ಲಿ ಅನೇಕರು ದಡ್ಡರು, ಸಾಗರದಾಚೆ ಎಲ್ಲೋ ಕುಳಿತು ಮಾತನಾಡುವುದು ವಾಸ್ತವ ಪರಿಸ್ತಿತಿಯನ್ನು ಎಷ್ಟು ಮಾತ್ರ ತಿಳಿಯದವರು. ನಾವು ಹೈದರನೊಂದಿಗೆ ಹೇಗೆ ತಾನೇ ಯುದ್ಧವನ್ನು ನಿವಾರಿಸಬಹುದಾಗಿತ್ತು.

ಮೊದಲನೆಯ ಆಂಗ್ಲೋ ಮೈಸೂರು ಯುದ್ಧದ ವಿಜಯವು ಹೈದರನಿಗೆ ತೃಪ್ತಿವುಂಟು ಮಾಡಿತು. ಏಕೆಂದರೆ ಒಂದು ಯುರೋಪಿನ ಶಕ್ತಿಯ ಮುಂದೆ ನಿಂತು ಹೋರಾಡಿ ತನ್ನ ಷರತ್ತುಗಳಿಗೆ ಒಪ್ಪದಂತೆ ಮಾಡಿದನು. ಯುದ್ಧವು ಗತಿಸಿದಾಗ ಹೈದರನು ಬಹುಜಾಣ್ಮೆಯಿಂದ ವ್ಯವಹರಿಸಿದನು. ಮರಾಠರ ಮಾದವರಾಯನೊಂದಿಗೆ ವ್ಯವಹರಿಸಿ ತನಗೆ ಸಹಕಾರ ನೀಡುವಂತೆ ಅವನೊಂದಿಗೆ ಸಂದಿ ಮಾಡಿಕೊಂಡನು. ಬ್ರಿಟಿಷರ ಮಿತ್ರನಂತೆ ವರ್ತಿಸುತ್ತಿದ್ದ ಹೈದರಬಾದಿನ ನಿಜಾಮನನ್ನು ಅವರಿಂದ ಬೇರ್ಪಡಿಸಿದ ಬ್ರಿಟಿಷರ ಬೆಂಬಲಕ್ಕೆ ನಿಂತವರನ್ನೆ ಅವರ ವಿರುದ್ಧ ನಿಲ್ಲಿಸಿದ. ರಾಜಕಾರಣ ಮತ್ತು ಯುದ್ಧ ಎರಡರನ್ನೂ ಸನ್ನಿವೇಶಕ್ಕೆ ತಕ್ಕಂತೆ ಬಳಸಿದ ತನಗೆ ಎದುರಾದ ಸವಾಲುಗಳನ್ನು ಸೂಕ್ಷ್ಮತೆ, ಜಾಣ್ಮೆ, ವಿವೇಕ ಚಿತ್ತತೆಯನ್ನು ಪ್ರದರ್ಶಿಸಿ ಯಶಸ್ವಿಯಾದನು.

ಬ್ರಿಟಿಷರು ಹೈದರನ ಬಗೆಗೆ ಅತ್ಯಂತ ಗಂಭೀರವಾಗಿ ಯೋಚಿಸುವಂತೆಯೂ ಆಯಿತು. ಮೈಸೂರು ರಾಜ್ಯವನ್ನು ಆಕ್ರಮಿಸುವುದು ಸುಲಭವಲ್ಲ ಎಂಬುದು ಮನವರಿಕೆಯಾಯಿತು.

೪.೨.೨. ಎರಡನೆಯ ಮೈಸೂರು ಯುದ್ಧ ಕ್ರಿ.ಶ.೧೭೬೯–೧೭೮೪

ಮದರಾಸು ಒಪ್ಪಂದದಿಂದ ಹೈದರನು ತೃಪ್ತನಾಗಿ ಮೈಸೂರಿಗೆ ವಾಪಸ್ಸಾದನು. ಯಾವುದೇ ಸಮಯದಲ್ಲಾದರೂ ಕಂಪನಿಯ ನೆರವು ತನಗೆ ದೊರೆಯುತ್ತದೆಂದು ನಂಬಿದನು. ಈ ಒಪ್ಪಂದ ನಡೆದ ಮೂರೇ ತಿಂಗಳಲ್ಲಿ ಮರಾಠರು ಮೈಸೂರಿನ ಮೇಲೆ ಯುದ್ಧ ಘೋಷಿಸಿದರು. ಅದಕ್ಕೆ ಕಾರಣವೆಂದರೆ ಮಾಧವರಾಯನ ಶತ್ರುವಾಗಿದ್ದ ನಾಗಪುರದ ಜಾನೋಜಿ ಬೋಸ್ಲೆಯೊಂದಿಗೆ ಹೈದರನು ರಹಸ್ಯ ಪತ್ರವ್ಯವಹಾರ ನಡೆಸಿದನು. ಮತ್ತೊಂದು ಕಾರಣ ಹೈದರನು ಬ್ರಿಟಿಷರೊಂದಿಗೆ ಮಾಡಿಕೊಂಡಿದ್ದ ಮದರಾಸು ರಕ್ಷಕ ಒಪ್ಪಂದ. ಭಾರತೀಯ ಅರಸರ ನಡುವೆ ಹೈದರನು ತನ್ನ ಪ್ರತಿಷ್ಠೆ ಹೆಚ್ಚಿಸಿಕೊಂಡನು. ಇದು ಮರಾಠರ ಮಾತ್ಸರ್ಯಕ್ಕೆ ಕಾರಣವಾಯಿತು. ೧೭೬೯ರ ಮೇ ತಿಂಗಳಲ್ಲಿ ಮಾಧವರಾಯನು ಮೈಸೂರಿನ ಮೇಲೆ ಜಂಟಿ ಆಕ್ರಮಣ ಮಾಡಲು ಯೋಚಿಸಿ ಅದಕ್ಕೆ ನೆರವು ನೀಡುವಂತೆ ನಿಜಾಮನನ್ನು ಆಹ್ವಾನಿಸಿದನೆಂದು ರುಕ್ನುದ್ದೌಲನು ಮದರಾಸು ಸರಕಾರಕ್ಕೆ ತಿಳಿಸಿದನು.[೫೩]

ಹೈದರನು ಮರಾಠರಿಂದ ಕಿತ್ತುಕೊಂಡಿದ್ದ ಭಾಗಗಳನ್ನು ಮರಳಿ ಪಡೆಯುವ ಉದ್ದೇಶದಿಂದಲೇ ಜೂನ್ ೧೭೬೯ರಲ್ಲಿ ಮೈಸೂರಿನ ಮೇಲೆ ದಾಳಿ ಆರಂಭಿಸಿದರು. ಹೈದರನು ಬ್ರಿಟಿಷರ ಸೈನಿಕ ನೆರವು ಕೇಳಿದನು. ಮದರಾಸು ಸರಕಾರ ಯಾವುದೇ ನೆರವನ್ನು ನೀಡಲು ನಿರಾಕರಿಸಿತು. ಮುದ್ದುಕೃಷ್ಣ ಎಂಬ ವಕೀಲನನ್ನು ಮದರಾಸಿನಿಂದ ರಹಸ್ಯ ಮಾತುಕತೆಗಾಗಿ ಆಹ್ವಾನಿಸಿದನು.[೫೪] ಮದರಾಸು ಸರಕಾರಕ್ಕೆ ಎಷ್ಟೇ ಮನವಿ ಮಾಡಿದರೂ ಅವರು ಮೌನ ತಾಳಿದರು. ಇದು ಬ್ರಿಟಿಷರ ಒಪ್ಪಂದದ ಷರತ್ತುಗಳ ಪಾಲನೆಯ ಬಗ್ಗೆ ಅನುಮಾನ ಹುಟ್ಟು ಹಾಕಿತು.

ಮಾಧವರಾಯನು ೧೭೭೦ ಜನವರಿಯಲ್ಲಿ ೭೦,೦೦೦ ಸೈನಿಕರಿದ್ದ ಭಾರೀ ಸೈನ್ಯದೊಂದಿಗೆ ಮೈಸೂರಿನ ಮೇಲೆ ದಾಳಿ ಮಾಡಿದನು. ಇದು ಅತ್ಯಂತ ನಿರ್ಧಾರಯುತ ಆಕ್ರಮಣವಾಗಿತ್ತು. ಎರಡು ವರ್ಷಗಳ ಕಾಲ ಹೋರಾಡಿದರು. ಮರಾಠ ಸೈನ್ಯ ಶ್ರೀರಂಗಪಟ್ಟಣಕ್ಕೆ ಕೇವಲ ೪೦ ಮೈಲು ಹತ್ತಿರವೇ ಬೀಡುಬಿಟ್ಟಿತು. ಹೈದರನು ಸೈನಿಕ ನೆರವಿಗಾಗಿ ಮದರಾಸು ಸರಕಾರವನ್ನು ಕೇಳಿದನು. ಅವರಿಂದ ಸಣ್ಣ ಸಣ್ಣ ಸೇನಾ ತುಕಡಿ ಬಂದರೂ ಮರಾಠ ಸೈನ್ಯವನ್ನು ಕೃಷ್ಣಾ ನದಿಯತ್ತ ಅಟ್ಟಬಹುದು ಎಂಬ ಆಸೆ ಅವನದಾಗಿತ್ತು.[೫೫] ಹೈದರನು ಬ್ರಿಟಿಷರ ನೆರವಿಗಾಗಿ ಮತ್ತೆ ಮತ್ತೆ ಒತ್ತಡ ಹೇರಿದನು. ಮದರಾಸು ಸರಕಾರ ಈ ವಿಷಯವಾಗಿ ಚರ್ಚೆ ನಡೆಸಿತು. ಹೈದರ್‌ನನ್ನು ಬೆಂಬಲಿಸುವುದೊ, ಮರಾಠರನ್ನು ಬೆಂಬಲಿಸುವುದೊ, ತಟಸ್ಥವಾಗಿರುವುದೋ

ಎಂಬ ತಳಮಳ ಶುರುವಾಯಿತು. ಹೈದರಾಲಿಯನ್ನು ಬೆಂಬಲಿಸಿದರೆ ಕರ್ನಾಟಕ ಪ್ರಾಂತದ ಮೇಲೆ ಮರಾಠರ ಆಕ್ರಮಣವನ್ನು ಆಹ್ವಾನಿಸಿದಂತೆ, ಮರಾಠರನ್ನು ಬೆಂಬಲಿಸಿದರೆ ಮದರಾಸು ಒಪ್ಪಂದದ ಉಲ್ಲಂಘನೆಯೇ ಸರಿ. ತಟಸ್ಥವಾಗಿದ್ದರೆ ಇಬ್ಬರ ವಿರೋಧವನ್ನು ಎದುರಿಸಬೇಕಾಗುವುದು ಎಂಬ ಗೊಂದಲಗಳು ಹುಟ್ಟಿಕೊಂಡವು. ಹೈದರನ ಮನವಿಗೆ ಮದರಾಸು ಸರಕಾರ ಎರಡು ತಿಂಗಳು ಸರಿಯಾಗಿ ಪ್ರತಿಕ್ರಿಯೆ ತೋರಲಿಲ್ಲ. ಮಳೆಗಾಲ ಆರಂಭವಾದರೆ ಮಾಧವರಾಯನು ತಾನಾಗಿಯೇ ಪುಣೆಗೆ ಹಿಂತಿರುಗುತ್ತಾನೆಂದು ಅವರು ಭಾವಿಸಿದರು. ೧೭೭೦ರಲ್ಲಿ ಲಿಂಡ್ಸೆ ಮುಂಬಯಿಗೆ ಬಂದನು. ಅವನು ಹೈದರನೊಂದಿಗೆ ಯಾವುದೇ ಮೈತ್ರಿ ಮಾಡಿಕೊಳ್ಳುವುದನ್ನು ತಡೆದನು.

ಲಿಂಡ್ಸೆಯು ಮುಂಬಯಿಯಿಂದ ಮದರಾಸಿಗೆ ತೆರಳಿದನು. ಅಲ್ಲಿ ಹೈದರನ ವಿರುದ್ಧ ಮರಾಠರನ್ನು ಬೆಂಬಲಿಸುವಂತೆ ಶಿಫಾರಸ್ಸು ಮಾಡಿದನು. ಹೈದರನು ಫ್ರೆಂಚರೊಂದಿಗೆ ಸಂಬಂಧವಿಟ್ಟು ಕೊಂಡಿದ್ದಾನೆ ಅವನು ಬ್ರಿಟಿಷರ ಮಿತ್ರನಾಗಲಾರನು. ಮದರಾಸು ಒಪ್ಪಂದದ ಷರತ್ತುಗಳು ಬ್ರಿಟಿಷರ ಪ್ರತಿಷ್ಠೆಗೆ ಧಕ್ಕೆ ತಂದಿವೆ. ಅದನ್ನು ನಿರ್ಲಕ್ಷಿಸಬೇಕು. ಮರಾಠರಿಗೆ ಬೆಂಬಲ ನೀಡುವುದರಿಂದ ಹೆಚ್ಚಿನ ಲಾಭವಿದೆ ಎಂದು ವಾದಿಸಿದನು. ಲಿಂಡ್ಸೆಯ ವಾದವನ್ನು ಮದರಾಸಿನ ಕೌನ್ಸಿಲ್ ಒಪ್ಪಲಿಲ್ಲ. ಜೊತೆಗೆ ಮರಾಠರ ಪ್ರಾಬಲ್ಯ ಹೆಚ್ಚಿಸುವ ಯಾವುದೇ ಕೆಲಸಕ್ಕೆ ಕೈಹಾಕಬಾರದೆಂದು ಕೇಂದ್ರವು ಎಚ್ಚರಿಸಿತು.

ಹೈದರನು ಬ್ರಿಟಿಷರ ಈ ವರ್ತನೆಯನ್ನು ಮರೆಯಲಿಲ್ಲ, ಎಂದಿಗೂ ಅವರನ್ನು ಕ್ಷಮಿಸಲಿಲ್ಲ. ಆಪತ್ತಿನ ಸಮಯದಲ್ಲಿ ಅತ್ಯಂತ ತುಚ್ಛವಾಗಿ ತನ್ನನ್ನು ಕೈಬಿಟ್ಟು ದ್ರೋಹ ಮಾಡಿದರು. ಬ್ರಿಟಿಷರ ನೀತಿಗಳು ಕಹಿ ಅನುಭವ ನೀಡಿತು. ಅವರಿಗೆ ಸರಿಯಾದ ಪಾಠ ಕಲಿಸಲು ನಿರ್ಧರಿಸಿದನು. ೧೭೮೦ರಲ್ಲಿ ಭಾರತೀಯ ಶಕ್ತಿಗಳ ಒಕ್ಕೂಟಕ್ಕೆ ಸೇರಿಕೊಂಡುದಕ್ಕೆ ಬ್ರಿಟಿಷರಿಂದ ಆದ ನಿರಾಶೆಯೇ ಎಂದು ಮೆಕಾರ್ಟ್ನಿ ಭಾವಿಸಿದನು. ಅದರ ಫಲವಾಗಿ ೧೭೮೦ರಲ್ಲಿ ಮದರಾಸಿನ ಬ್ರಿಟಿಷರು ಹೈದರನಿಂದಲೇ ನಾಶವಾಗುವಂತಾಯಿತು.[೫೬]

೧೭೭೮ರ ಸಮಯಕ್ಕೆ ಯುದ್ಧದ ಮೋಡಗಳು ಕವಿದವು. ೧೭೭೮ರಲ್ಲಿ ಯುರೋಪಿನಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳ ನಡುವೆ ತಲೆ ಎತ್ತಿದ ವೈಮನಸ್ಯದ ಗಂಭೀರ ಪ್ರತಿಕ್ರಿಯೆ ಭಾರತದಲ್ಲಿ ಎರಡೂ ಪಕ್ಷಗಳ ನಡುವಣ ವ್ಯವಹಾರದಲ್ಲಿ ಕಾಣಿಸಿಕೊಂಡಿತು. ಹೈದರನು ತನಗೆ ಬ್ರಿಟಿಷರಿಂದ ಆದ ಮೋಸದಿಂದ ಸೇಡು ತೀರಿಸಿಕೊಳ್ಳಲು ಮರಾಠರು ರೂಪಿಸಿದ ಒಕ್ಕೂಟದಲ್ಲಿ ಸೇರಿಕೊಂಡನು. ಬ್ರಿಟಿಷರು ಮದರಾಸು ಒಪ್ಪಂದವನ್ನು ಉಲ್ಲಂಘಿಸಿದ್ದು, ಮಾಹೆಯನ್ನು ವಶಪಡಿಸಿಕೊಂಡಿದ್ದು, ಬಸಲತ್ ಜಂಗನೊಂದಿಗೆ ಮೈತ್ರಿ ಬೆಳೆಸಿದ್ದು, ನಿಜಾಮನಿಂದ ಕಪ್ಪ ಸಲ್ಲಿಕೆಯ ರಿಯಾಯ್ತಿ ಪಡೆದದ್ದು ತನ್ನ ವಿರುದ್ಧವಾಗಿ ಮಲಬಾರಿನ ನಾಯಕರನ್ನು ಎತ್ತಿ ಕಟ್ಟಿದ್ದು

ಇವೆಲ್ಲ ಹೈದರನ ಹಿತಾಸಕ್ತಿಗಳಿಗೆ ವಿರುದ್ಧವಾಗಿದ್ದವು. ಪಾಂಡಿಚೆರಿ, ಗುಂಟೂರು, ಮಾಹೆಯನ್ನು ಕಳೆದುಕೊಂಡದ್ದು ಬಹಳವೇ ಅನಾನುಕೂಲವಾಯಿತು. ಫ್ರೆಂಚರ ನೆರವಿನ ಭರವಸೆಯೂ, ಭಾರತೀಯ ರಾಜರುಗಳ ಒಕ್ಕೂಟ ಶಕ್ತಿಗಳ ವಿರುದ್ಧವಾಗಿ ಬ್ರಿಟಿಷರ ಮೂರು ಪ್ರೆಸಿಡೆನ್ಸಿಗಳು ಒಟ್ಟಾಗಿ ನಿಲ್ಲುವ ಸಾಧ್ಯತೆ ಇವೆಲ್ಲವು ಬ್ರಿಟಿಷರ ವಿರುದ್ಧ ಯುದ್ಧ ಕೈಗೊಳ್ಳಲು ಹೈದರನಿಗೆ ಪ್ರಚೋದನೆ ನೀಡಿದವು.[೫೭]

ಬಂಗಾಳ ಮತ್ತು ಮದ್ರಾಸ್‌ನ ಬ್ರಿಟಿಷರ ಅಧಿಪತ್ಯಗಳು ಭಾರತದಲ್ಲಿನ ಫ್ರೆಂಚರ ವಸಾಹತುಗಳನ್ನು ಆಕ್ರಮಿಸಿ ಸೋಲಿಸ ತೊಡಗಿದವು. ಹೇಸ್ಟಿಂಗ್ಸ್‌ನು ಚಂದ್ರನಗರವನ್ನು ವಶಪಡಿಸಿಕೊಂಡನು. ರಂಬೋಲ್ಡ್‌ನು ಕಾರೆಕಲ್, ಯಾನುಮ್ ಮತ್ತು ಮಚಲಿ ಪಟ್ಟಣಗಳನ್ನು ಜಯಿಸಿದನು. ನಂತರ ಪಾಂಡಿಚೇರಿಗೆ ಮುತ್ತಿಗೆ ಹಾಕಿದನು. ಪ್ರಬಲವಾದ ಫ್ರೆಂಚರ ಕೋಟೆ ಬ್ರಿಟಿಷರ ವಶವಾಯಿತು. ಫ್ರೆಂಚರು ಹೈದರಾಲಿಯ ನೆರವು ಯಾಚಿಸಿದರು. ಅವರಿಂದ ನಿರೀಕ್ಷಿತ ಸಹಕಾರ ದೊರೆಯಲಿಲ್ಲ. ಫ್ರೆಂಚರು ಹೈದರ್‌ನಿಗೆ ಭಾರೀ ಮಿಲಿಟರಿ ಉಗ್ರಾಣ, ೧೨ ಫಿರಂಗಿಗಳು, ೬ ತೋಪುಗಳು, ಸಾಕಷ್ಟು ಮದ್ದುಗುಂಡುಗಳನ್ನು ನೀಡಿದ್ದರು. ಯುರೋಪಿಯನ್ನರ ನಡುವಣ ಯುದ್ಧದಲ್ಲಿ ತನಗೆ ಯಾವ ತೊಂದರೆಯೂ ಆಗದೆ ಹೋದರೆ ತಾನು ಮಧ್ಯ ಪ್ರವೇಶ ಮಾಡಬಾರದು ಎಂಬುದು ಹೈದರ್‌ನ ನೀತಿಯಾಗಿತ್ತು.[೫೮]

ಹೈದರಾಲಿಯು ಬ್ರಿಟಿಷರ ವಿರುದ್ಧ ಒಕ್ಕೂಟ ರಚನೆಗೆ ಮುಂದಾದನು ಹೈದರಬಾದಿನ ನಿಜಾಮ, ಅರ್ಕಾಟ್ ನವಾಬ ಹಾಗೂ ಫ್ರೆಂಚರ ನೆರವು ಪಡೆದು ಬ್ರಿಟಿಷರನ್ನು ಎದುರಿಸಲು ಸಿದ್ಧತೆ ನಡೆಸಿದನು. ಫ್ರೆಂಚ್ ಗವರ್ನರ್ ಡಿ.ಸೋಯಿಲಾಕ್ ಭಾರತದಲ್ಲಿ ಸಂಭವಿಸಿದ ನಷ್ಟಗಳನ್ನು ಮರಳಿ ಸಂಪಾದಿಸಲು ಕಾತರನಾಗಿದ್ದನು. ಹೈದರ್‌ನ ದರ್ಬಾರಿನಲ್ಲಿದ್ದ ಪಿವೆರಾನ್ ಡಿ ಮಾರ್ಲಾಟ್‌ನಿಗೆ ಹೈದರ್‌ನೊಂದಿಗೆ ಒಂದು ಸಮಗ್ರ ಒಪ್ಪಂದ ಮಾಡಿಕೊಡುಳ್ಳುವಂತೆ ಆದೇಶಿಸಿದನು. ಇಬ್ಬರೂ ಕೂಡಿ ಬ್ರಿಟಿಷರಿಗೆ ತಕ್ಕ ಶಿಕ್ಷೆ ವಿಧಿಸಲು ಬಯಸಿದನು. ಫ್ರೆಂಚರು ೧೬ ಸಾವಿರ ಸೈನ್ಯ ಬಲವನ್ನು ಹೈದರನೊಂದಿಗೆ ಸಹಕರಿಸಲು ಕೋರಮಂಡಲ ಕರಾವಳಿಗೆ ಕಳುಹಿಸಿಕೊಡಲು ನಿರ್ಧಾರಿಸಲಾಯಿತು. ಈ ಸೇನೆಯ ವೆಚ್ಚವನ್ನು ಹೈದರ್ ವಹಿಸಿಕೊಳ್ಳಬೇಕು ಎಂದಾಯಿತು.[೫೯]

೪.೨.೧. ಎರಡನೆ ಮೈಸೂರು ಯುದ್ಧ: ಮೊದಲ ಹಂತ(೧೭೮೦–೧೭೮೧)

೧೭೮೦ರ ಜುಲೈನಲ್ಲಿ ಹೈದರನು ತನ್ನ ೮೦,೦೦೦ ಸೈನಿಕ ಪಡೆಯೊಂದಿಗೆ ಕರ್ನಾಟಕದ ಮೇಲೆ ಆಕ್ರಮಣ ಮಾಡಿದನು. ಮದರಾಸು ಯಾವುದೇ ರೀತಿಯಲ್ಲಿ ಯುದ್ಧ ಸನ್ನದ್ಧತೆ ಮಾಡಿಕೊಂಡಿರದ ಸಂದರ್ಭದಲ್ಲಿ ಹೈದರನು ಮಾಡಿದ ಆಕ್ರಮಣ ದಿಗ್ಭ್ರಾಂತಿವುಂಟು ಮಾಡಿತು. ಒಂದೇ ವಾರದಲ್ಲಿ ಮದರಾಸಿನ ಬಳಿಯ ಕಾಂಜೀವರಂ ನಗರವನ್ನು ಧ್ವಂಸ ಮಾಡಿದನು.

ಕಡಲೂರಿನ ದಕ್ಷಿಣಕ್ಕೆ ಪೋರ್ಟೋನೋವಾದವರೆಗೂ ನುಗ್ಗಿದನು. ಅವನ ಸೈನ್ಯದ ಆಕ್ರೋಶವು ಕರ್ನಾಟಕದಾದ್ಯಂತ ಹರಡಿತು. ಇದರ ಸುದ್ದಿಯು ಇಂಗ್ಲೆಂಡಿನ ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಪ್ರತಿಧ್ವನಿಸಿತು. ಬ್ರಿಟಿಷರು ಯುದ್ಧ ಸನ್ನದ್ಧರಾಗಿರಲಿಲ್ಲ. ಮದರಾಸು ಸರಕಾರವು ಆರ್ಥಿಕ ಸಂಕಷ್ಟದಲ್ಲಿತ್ತು. ಗವರ್ನರ್ ವೈಟ್‌ಹಿಲ್ ಹೈದರನನ್ನು ಸಮರ್ಥವಾಗಿ ಹೆದರಿಸಬೇಕೆಂದು ಹೇಳಿದಾಗ ಕಂಪನಿ ಸರಕಾರವು ತಮ್ಮ ಅಸಹಾಯಕತೆಯನ್ನು ತೋರಿಸಿತು. ಪಾಂಡಿಚೇರಿ ಮತ್ತು ಮಾಹೆಗಳನ್ನು ಗೆದ್ದುದು, ಸೂರತ್ತಿಗೆ ಸೈನ್ಯ ರವಾನೆ, ಫ್ರೆಂಚ್ ಸೈನಿಕ ಸೆರೆಯಾಳುಗಳಿಗೆ ಆಹಾರ ಪೂರೈಕೆ, ಮದರಾಸಿನ ಕೋಟೆ ನಿರ್ಮಾಣ ಇತ್ಯಾದಿಗಳಿಗೆ ಹೆಚ್ಚು ಹಣ ಖರ್ಚಾಗಿ ಖಜಾನೆ ಬರಿದಾಗಿತ್ತು.[೬೦]

ಹೈದರನು ಕರ್ನಾಟಕ ಪ್ರದೇಶದಲ್ಲಿ ಒಂದಾದ ಮೇಲೊಂದರಂತೆ ಕೋಟೆಗಳನ್ನು ವಶಪಡಿಸಿ ಕೊಳ್ಳುತ್ತಿದ್ದನು. ತಿರುವಣ್ಣಾಮಲೈ ಕೋಟೆ ಹೈದರನ ವಶವಾಯಿತು. ಪೋರ್ಟೋನೊವಾಗೆ ಹೋಗಿದ್ದ ಕರೀಂ ಸಾಹೇಬ್ ಅಪಾರ ಪ್ರಮಾಣದಲ್ಲಿ ಲೂಟಿ ಮಾಡಿ ಅದರ ಸಂಪತ್ತನ್ನು ೨೦೦ ಒಂಟೆಗಳ ಮೇಲೆ ಹೇರಿಕೊಂಡು ಅಲ್ಲಿಗೆ ತಂದನು. ಹೈದರನು ನವಾಬನ ರಾಜಧಾನಿ ಆರ್ಕಾಟಿಗೆ ಮುತ್ತಿಗೆ ಹಾಕಿದನು. ಈ ಸಮಯದಲ್ಲೂ ಮದರಾಸಿನ ಕೌನ್ಸಿಲ್ ಸದಸ್ಯರ ನಡುವೆ ಭಿನ್ನಮತ ಬೆಳೆಯುತ್ತಲೇ ಇತ್ತು. ಇದರ ಲಾಭ ಪಡೆಯಲು ಹೈದರನು ಯೋಚಿಸಿದನು. ತಿರುಚನಾ ಪಳ್ಳಿಯಲ್ಲಿದ್ದ ಕ್ಯಾಪ್ಟನ್‌ಕಾಸ್ಬಿ ಹೈದರನ ಸೇನಾ ಚಲನೆಯನ್ನು ತಡೆಯಬೇಕೆಂದು ವೈಟ್‌ಹಿಲ್ ಆಜ್ಞೆ ಮಾಡಿದನು. ಹೈದರನ ಬಾರಿ ಸೈನ್ಯವನ್ನು ಅತೀ ಸಣ್ಣ ಸೇನಾ ತುಕಡಿಯಿಂದ ಎದುರಿಸುವುದು ಕಷ್ಟವೇ ಎಂಬ ಅರಿವು ವೈಟ್‌ಹಿಲ್‌ಗೆ ಇಲ್ಲದಾಯಿತು. ಕ್ಯಾಪ್ಟನ್ ಕಾಸ್ಬಿ ಮದರಾಸಿನ ಮನ್ರೊ ಬಳಿ ಸೇರಿಕೊಂಡನು. ಹೈದರನು ಮುನ್ನುಗ್ಗಿ ಪೋಲೂರು ಕಲಾಸಿ ಪಾಕ್, ಕಾವೇರಿಪಾಕ್, ಮಲ್ಹಾಡಿ ಮುಂತಾದವನ್ನು ವಶಪಡಿಸಿಕೊಂಡನು. ಅವನ ಅಶ್ವಗಳು ಮದರಾಸಿನ ಗಾರ್ಡನ್‌ಹೌಸ್ ಮತ್ತು ಮದುರೈವರೆಗೆ ನುಗ್ಗಿದವು. ಆಗಸ್ಟ್ ೨೧ನೆಯ ತಾರೀಕು ಆರ್ಕಾಟಿಗೆ ಮುತ್ತಿಗೆ ಹಾಕಿದಾಗ ಮನ್ರೋ ೪೨೮೯ ಸೈನಿಕರ ಒಡಗೂಡಿ ಮದರಾಸಿನಿಂದ ಹೊರಟನು. ನೆರವಿಗಾಗಿ ಬೇಲೀ ಬರುವನೆಂದು ಕಾದನು.[೬೧]

ಬೇಲೀಯು ಹೈದರಾಲಿಯನ್ನು ಎದುರಿಸಲು ಆಗಸ್ಟ್ ೬ ರಂದು ತನ್ನ ೨೬೦೬ ಸೈನಿಕರೊಂದಿಗೆ ಗುಂಟೂರಿನಿಂದ ಹೊರಟು ಕಾಂಜೀವರಂ ಸಮೀಪದ ಆರಣೆಯನ್ನು ತಲುಪಿದನು. ಹೈದರನು ೮೦೦೦ ಕುದುರೆಗಳು ಮತ್ತು ೬೦೦೦ ಯೋಧರ ಪಡೆಯನ್ನು ಮೀರ್‌ಸಾಹೇಬನ ನಾಯಕತ್ವದಲ್ಲಿ ಕಳುಹಿಸಿದನು. ಟಿಪ್ಪುವು ಬೇಲೀಯನ್ನ ಪೆರಂಬಕಂ ಎಂಬಲ್ಲಿ ಎದುರಿಸಿ ಸೋತು ಹೋದನು.[೬೨] ಈ ಸಮಯಕ್ಕೆ ಬೇಲೀಯ ಬಳಿಯಿದ್ದ ಮದ್ದುಗುಂಡುಗಳೂ ಮತ್ತು

ಆಹಾರ ಸಾಮಗ್ರಿಗಳು ಮುಗಿಯತೊಡಗಿದವು. ಎರಡನ್ನು ಒದಗಿಸುವಂತೆ ಮನ್ರೋಗೆ ಹೇಳಿ ಕಳುಹಿಸಿದನು. ಮನ್ರೋ ೧೦೦೭ ಸೈನಿಕರನ್ನು ಕರ್ನಲ್ ಫ್ಲೆಚರ್ ಜೊತೆಗೆ ಕಳುಹಿಸಿದನು. ಬೇಲೀ ಸೆಪ್ಟೆಂಬರ್ ೯ನೆಯ ತಾರೀಕು ಫ್ಲೆಚರ್ ಪರಸ್ಪರ ಸಂಧಿಸಿದರು. ಈ ಸುದ್ದಿ ತಿಳಿದೊಡನೆ ತನ್ನ ಯುದ್ಧಕಾರ್ಯಚಟುವಟಿಕೆಯನ್ನು ತೀವ್ರಗೊಳಿಸಿದನು. ತನ್ನ ಮಗ ಟಿಪ್ಪುವನ್ನು ಜೊತೆಗೆ ಸೇರಿಸಿಕೊಂಡು ಶತ್ರುವನ್ನು ಎದುರಿಸಲು ಸಿದ್ಧನಾದನು. ಸೆಪ್ಟೆಂಬರ್ ೧೦ ರಂದು ಪೊಳಿಲೂರು ಬಳಿ ಕದನ ನಡೆಯಿತು. ಬ್ರಿಟಿಷರು ಹೀನಾಯವಾಗಿ ಸೋತರು. ಬೇಲೀಯ ಸೈನ್ಯವು ಧೂಳಿ ಪಟವಾಯಿತು. ೮೬ ಮಂದಿ ಯುರೋಪಿಯನ್ ಸೇನಾಧಿಕಾರಿಯಲ್ಲಿ ೩೬ ಮಂದಿ ಮಡಿದರು. ಹಲವರನ್ನು ಸೆರೆಹಿಡಿಯಲಾಯಿತು. ಬೇಲೀಯು ಗಾಯಗೊಂಡನು. ಅವನನ್ನು ಸೆರೆಹಿಡಿಯ ಲಾಯಿತು. ಫ್ಲೆಚರ್ ಯುದ್ಧರಂಗದಲ್ಲೆ ಮಡಿದನು. ಈ ಯುದ್ಧದಲ್ಲೇ ಬ್ರಿಟಿಷರು ಪ್ರಮುಖ ವ್ಯಕ್ತಿಗಳನ್ನು ಕಳೆದುಕೊಂಡರು.[೬೩]

ಹೈದರನು ಆರ್ಕಾಟ್ ಕೋಟೆಗಳನ್ನು ಹಿಡಿದನು. ನವಾಬ ಎಂಬ ಪದವಿಯನ್ನು ಧರಿಸಿದನು. ಆರ್ಕಾಟ್ ಹಿಡಿದಿದ್ದರಿಂದ ಅಪಾರ ಯುದ್ಧ ಸಾಮಗ್ರಿ, ಆಹಾರ ಪದಾರ್ಥಗಳು, ಉಗ್ರಾಣಗಳು ದೊರೆತವು. ಆರ್ಕಾಟ್ ಸೋಲಿನಿಂದಾಗಿ ವೈಟ್‌ಹಿಲ್ ಪದಚ್ಯುತಗೊಂಡನು. ಬಂಗಾಳದ ಗೌರ್ನರ್ ವಾರನ್ ಹೇಸ್ಟಿಂಗ್ಸ್‌ನು ಆರ್ಕಾಟ್ ಮತ್ತು ಮದರಾಸನ್ನು ರಕ್ಷಿಸುವ ಹೊಣೆಗಾರಿಕೆಯನ್ನು ಐರ್‌ಕೂಟನಿಗೆ ವಹಿಸಿದನು. ಮನ್ರೋನ ಸ್ಥಾನಕ್ಕೆ ಐರ್‌ಕುಟ್ ನೇಮಕಗೊಂಡನು. ಮದರಾಸಿಗೆ ಆಗಮಿಸಿದನು. ೩೩೦ ಯುರೋಪಿಯನ್ ಸೈನಿಕರು ೨೦೦ ಗೋಲಂದಾಜರು ೬೩೦ ಚಪ್ಪಾಸಿಗಳು ೬ ಪಿರಂಗಿಗಳು ಮತ್ತು ೨೦೦ ಬ್ಯಾರಲ್‌ಗಳನ್ನು ಸಮುದ್ರದ ಮೂಲಕ ಕಳುಹಿಸಲಾಯಿತು. ಭೂಮಾರ್ಗದ ಮೂಲಕ ಎಂಟು ಬೆಟಾಲಿಯನ್ ಸೈನಿಕರನ್ನು ಮದರಾಸಿಗೆ ಕಳುಹಿಸಲಾಯಿತು.[೬೪] ಗೌರ್ನರ್ ಕೌನ್ಸಿಲ್ ಸದಸ್ಯ ಡೇವಿಡ್‌ಸನ್ ಹೈದರನ ಮನೋಭಿಲಾಶೆ ತಿಳಿದುಕೊಂಡು ನಂತರವೇ ಯುದ್ಧ ಹೂಡುವ ತೀರ್ಮಾನ ಮಾಡಬೇಕೆಂದು ಸಲಹೆ ನೀಡಿದನು. ಕೌನ್ಸಿಲ್‌ನ ಉಳಿದ ಸದಸ್ಯರ ಸಮಿತಿಯು ಇವನ ಸಲಹೆಯನ್ನು ಒಪ್ಪಲಿಲ್ಲ. ಐರ್‌ಕೂಟ್ ಯುದ್ಧ ನಡೆಸುವ ಪೂರ್ಣಾಧಿಕಾರವಿದೆಯೆಂದು ತಿಳಿಸಿತು. ಗೌರ್ನರ್ ಕೌನ್ಸಿಲ ಸದಸ್ಯರ ನಡುವಿನ ಈ ಭಿನ್ನಾಭಿಪ್ರಾಯಗಳಿಂದ ಐರ್‌ಕೂಟ್ ಕಠಿಣ ನಿರ್ಧಾರ ಮಾಡುವುದು ಕಷ್ಟವಾಯಿತು. ಇಂಥ ಪರಿಸ್ಥಿತಿ ಮತ್ತೆ ಹೈದರನಿಗೆ ಹೆಚ್ಚು ಅನುಕೂಲ ಕಲ್ಪಿಸಿದಂತಾಯಿತು. ಅವನು ಆರ್ಕಾಟಿನ ನವಾಬನಾಗಿ ಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತಿದ್ದನು. ಸತ್‌ಘರ್, ಕೈಲಾಸ್‌ಘರ್, ಕರ್ನೆತ್‌ಘರ್ ಮತ್ತು ಜಿಂಜಿ ಕೋಟೆಗಳನ್ನು ಗೆದ್ದುಕೊಂಡನು. ಹೈದರನ ಸೇನಾದಿಪತಿ ಸರ್ದಾರ್ ಖಾನ್ ತಲಚೇರಿಗೆ ಮುತ್ತಿಗೆ ಹಾಕಿದನು. ಹೈದರನು ವಾಂಡಿವಾಷ್, ವೆಲ್ಲೂರು, ಪರಮಕೊಯಿಲ್

ಆಕ್ರಮಿಸುವ ಬೆದರಿಕೆಯೊಡ್ಡಿದನು.[೨೧] ಐರ್‌ಕೂಟ್ ಇದನ್ನು ವಿಫಲಗೊಳಿಸಿದನು. ಅನಂತರ ಹೈದರನನ್ನು ಪಾಂಡಿಚೇರಿವರೆಗೆ ಬೆನ್ನಟ್ಟಿದನು.

ಹೈದರನು ಪಾಂಡಿಚೇರಿಗೆ ಧಾವಿಸಲು ಕಾರಣವೂ ಇತ್ತು. ೧೭೮೧ ಜನವರಿ ೨೮ ರಂದು ಫ್ರೆಂಚ್ ನೌಕಾಪಡೆಯು ಪಾಂಡಿಚೇರಿಗೆ ಬಂದಿಳಿಯಿತು. ಹೈದರನು ಮೊದಲಿನಿಂದಲೂ ಫ್ರೆಂಚರ ನೆರವನ್ನು ಕೇಳುತ್ತಲೇ ಬಂದನು. ಡಿಸೋಯಿಲಾರ್‌ನು ಭಾರತದ ಪರಿಸ್ಥಿತಿ ಅಧ್ಯಯನ ಮಾಡುವ ಉದ್ದೇಶದಿಂದಲೇ ಡಿ ಆರ್ವ್ಸ್‌ನ ನೇತೃತ್ವದಲ್ಲಿ ಫ್ರೆಂಚ್ ನೌಕಾಪಡೆಯನ್ನು ಕಳುಹಿಸಿದ್ದನು. ಹೈದರನು ಫ್ರೆಂಚರ ನೆರವು ಪಡೆಯಲು ಡಿ ಆರ್ವ್ಸ್‌ನ ಬಳಿಗೆ ತನ್ನ ವಕೀಲನನ್ನು ಕಳುಹಿಸಿದನು. ಆದರೆ ಅದು ಪ್ರಯೋಜನಕಾರಿಯಾಗಲಿಲ್ಲ. ಹೈದರನಿಗೆ ಸಹಾಯ ಮಾಡಲು ಒಪ್ಪಲಿಲ್ಲ.

ಫ್ರೆಂಚರು ಯಾವುದೇ ನೆರವು ನೀಡದೇ ಹೋದರೂ ಹೈದರನು ಬ್ರಿಟಿಷರೊಂದಿಗೆ ಯುದ್ಧವನ್ನು ಮುಂದುವರಿಸಿದನು. ಕಡಲೂರಿನಿಂದ ನಾಗಪಟ್ಟಣದವರೆಗೆ ಎಲ್ಲ ಭೂ ಭಾಗವನ್ನು ಕೊಳ್ಳೆ ಹೊಡೆದನು. ತಂಜಾವೂರು ಮತ್ತು ತಿರುಚಿನಾಪಲ್ಲಿ ನಡುವೆ ಇದ್ದ ಪ್ರದೇಶವನ್ನು ಸೇನೆ ಮುತ್ತಿಗೆ ಹಾಕಿತು. ಟಿಪ್ಪುವು ಟಿಯಾಘರ್ ಭಾಗವನ್ನು ಆಕ್ರಮಿಸಿದನು. ನಂತರ ಲಾಲಮಿಯ, ನಾಗೋರನ್ನು ವಶಪಡಿಸಿಕೊಂಡನು. ಉಡೈಯರ ಪಾಳೆಯಂ, ಅರಿಯಲೂರು ಮತ್ತು ಪಲಂಕೊಟ್ಟಗಳೂ ಹೈದರನ ವಶಕ್ಕೆ ಬಂದವು.

ಎರಡನೆಯ ಆಂಗ್ಲೋ-ಮೈಸೂರು ಯುದ್ಧದ ಮೊದಲ ಹಂತದಲ್ಲಿ ಬ್ರಿಟಿಷರು ಸಾಕಷ್ಟು ನಷ್ಟವನ್ನು ಅನುಭವಿಸಿದರು. ಕೌನ್ಸಿಲ್ ಸದಸ್ಯರ ಭಿನ್ನಭಿಪ್ರಾಯಗಳೇ ಇವರ ವಿನಾಶಕ್ಕೆ ಹತ್ತಿರ ತಂದು ಬಿಟ್ಟಿತು. ಮನ್ರೋ, ಬೇಲಿ, ಐರ್‌ಕೂಟ್ ಇವರುಗಳು ನೈತಿಕ ಸ್ಥೈರ್ಯ ಕಳೆದುಕೊಂಡರು. ಸೈನ್ಯವನ್ನು ಸಮರ್ಥವಾಗಿ ಮುನ್ನಡೆಸಲು ಬೇಕಾದ ಯುದ್ಧ ಸಾಮಗ್ರಿಗಳು ಆಹಾರ ಪದಾರ್ಥಗಳನ್ನು ಸರಿಸಮಯದಲ್ಲಿ ಇವರಿಗೆ ದೊರಕದೆ ಹೋಯಿತು. ಅತ್ಯಂತ ಕಡಿಮೆ ಸೈನಿಕರನ್ನು ನಿಯೋಜಿಸಲಾಗಿತ್ತು. ಹೈದರನು ಬಾರೀ ಸೈನ್ಯವನ್ನು ಯುದ್ಧ ಭೂಮಿಕೆಗೆ ತೊಡಗಿಸಿದನು. ಅದನ್ನು ಬಿಡುವಿಲ್ಲದಂತೆ ಕದನದಲ್ಲಿ ತೊಡಗಿಸಿದನು. ಅತ್ಯಂತ ಕೌಶಲ್ಯದಿಂದ ಸೈನ್ಯವನ್ನು ಮುನ್ನಡೆಸುತ್ತಿದ್ದನು. ಇದರ ಕೊರತೆ ಬ್ರಿಟಿಷರದಾಗಿತ್ತು.

೪.೨.೨. ಆಂಗ್ಲೋ ಮೈಸೂರು ಯುದ್ಧದ ಎರಡನೆಯ ಹಂತ–ಜೂನ್ ೧೭೮೧–೧೭೮೨

ಜಾರ್ಜ್‌ಲಾರ್ಡ್ ಮೆಕಾಟ್ನೆ ನೂತನ ಗವರ್ನರ್ ಆಗಿ ನೇಮಕಗೊಂಡನು. ಮದರಾಸಿನ ಪರಿಸ್ಥಿತಿಯನ್ನು ಸುಧಾರಿಸುವನೆಂಬ ಬಹುದೊಡ್ಡ ನಿರೀಕ್ಷೆಯಿಂದ ಕಳುಹಿಸಲಾಗಿತ್ತು. ಅದು ಫಲ ನೀಡಲಿಲ್ಲ. ಅವನ ಆಡಳಿತಾವಧಿಯಲ್ಲಿ ಇನ್ನೂ ಹೆಚ್ಚಿನ ಸಮಸ್ಯೆಗಳು ಸೃಷ್ಟಿಗೊಂಡವು. ಭಾರತದಲ್ಲಿ ನಿರಂತರ ಕದನಗಳು ನಡೆಯುತ್ತಿರುವ ಸಮಯದಲ್ಲಿ ಗವರ್ನರ್ ಹುದ್ದೆ ಅಲಂಕರಿಸಿದ ಇವನಿಗೆ

ಕೆಲಸ ಮಾಡುವುದು ಸುಲಭವಾಗಿರಲಿಲ್ಲ. ಕೌನ್ಸಿಲ್ ಸದಸ್ಯರ ನಡುವೆ ಹೊಂದಾಣಿಕೆ ಇಲ್ಲದುದು ಒಂದು ದೊಡ್ಡ ಸಮಸ್ಯೆಯಾಗಿತ್ತು. "ಭಾರತಕ್ಕೆ ಹೋಗದವನು ಮಾನವ ಜನಾಂಗವನ್ನು ಅರ್ಧಮಾತ್ರ ನೋಡಿರುತ್ತಾನೆ" ಎಂದು ಅವನು ಹೇಳಿದ್ದು ಸರಿಯೇ.[೬೬] ಮೆಕಾರ್ಟ್ನೆಗೆ ದೊರೆತ ಹುದ್ದೆಯು ಹೂವಿನ ಹಾಸಿಗೆಯಾಗಿರಲಿಲ್ಲ. ಐರ್‌ಕೂಟ್‌ನ ಅಪಜಯಗಳು, ಕಡಿಮೆ ಸೈನ್ಯ, ಆಹಾರದ ಅಭಾವ, ಹಣಕಾಸಿನ ಬಿಕ್ಕಟ್ಟು ಮುಂತಾದ ಹತ್ತು ಹಲವು ಸಮಸ್ಯೆಗಳ ನಡುವೆ ಭಾರೀ ಸೈನ್ಯದೊಂದಿಗೆ ಎದುರಾಗಿದ್ದ ಹೈದರನನ್ನು ಸೋಲಿಸುವುದು ಸುಲಭದ ಮಾತಾಗಿರಲಿಲ್ಲ.

೧೭೮೧ರ ಜುಲೈನಲ್ಲಿ ಪೋರ್ಟೋನೋವೋದಲ್ಲಿ ನಡೆದ ಕದನದಲ್ಲಿ ಬ್ರಿಟಿಷರು ವಿಜಯಿಯಾದರು. ಇದು ಅವರ ಆತ್ಮಸ್ಥೈರ್ಯವನ್ನು ಹೆಚ್ಚಿಸಿತು. ವಾರನ್ ಹೇಸ್ಟಿಂಗ್ಸ್ ಮರಾಠರೊಂದಿಗೆ ಮಾತುಕತೆ ನಡೆಸಲು ಅನುಕೂಲವಾಯಿತು. ಈ ಕದನದಲ್ಲಿ ಹೈದರನ ದಳಪತಿ ಮೀರ್ ಸಾಹಿಬ್ ಮರಣಿಸಿದ. ಆದರೂ ಹೈದರನು ಮತ್ತಷ್ಟು ಚೈತನ್ಯಶೀಲನಾಗಿಯೇ ಯುದ್ಧ ಮುಂದುವರೆಸಿದನು. ಈ ಯುದ್ಧದಿಂದಾಗಿ ಟಿಪ್ಪು ವಾಂಡಿವಾಷ್ ಮುತ್ತಿಗೆಯನ್ನು ಹಿಂತೆಗೆಯ ಬೇಕಾಯಿತು. ಈ ವಿಜಯದಿಂದ ಬ್ರಿಟೀಷರಿಗೆ ಹೆಚ್ಚಿನ ಲಾಭ ದೊರೆಯಲಿಲ್ಲ. "ನಾವು ಗೆದ್ದ ಸೈನ್ಯಕ್ಕಿಂತ ಹೆಚ್ಚಾಗಿ ಸೋತ ಸೈನ್ಯದಂತಾಗಿದ್ದೇವೆ" ಎಂದು ಐರ್‌ಕೂಟ್ ಕೊರಗಿದನು.[೬೭]

ಸರ್ ಐರ್‌ಕೂಟ್‌ನು ೧೭೮೧ ಸೆಪ್ಟೆಂಬರ್ ೨೭ ರಂದು ನಡೆದ ಸೋಲಿಂಗೂರ್ ಕದನದಲ್ಲಿ ವಿಜಯ ಸಾಧಿಸಿದನು. ಈ ಯುದ್ಧದಲ್ಲಿ ಹೈದರನಿಗೆ ಅಪಾರ ಹಾನಿವುಂಟಾಯಿತು. ಟಿಪ್ಪುವು ಕರ್ನಲ್ ಅರ್ಥರ್ ಒವೆನ್ ಹಿಡಿತದಲ್ಲಿದ್ದ ಸೈನ್ಯದ ಮೇಲೆ ದಾಳಿಮಾಡಿದನು. ಇಲ್ಲಿ ೧೪೦೦ ಎತ್ತುಗಳನ್ನು ವಶಪಡಿಸಿಕೊಂಡನು.[೬೮] ಮಳೆಗಾಲ ಪ್ರಾರಂಭವಾದ್ದರಿಂದ ಯುದ್ಧಕ್ಕೆ ಅಲ್ಪವಿರಾಮ ದೊರೆಯಿತು.

೨.೨.೩. ಆಂಗ್ಲೋ ಮೈಸೂರು ಯುದ್ಧದ ಅಂತಿಮ ಹಂತ–೧೭೮೨

ಹೈದರಾಲಿ ಅಧಿಕಾರವನ್ನು ಕಿತ್ತೊಗೆಯುವ ಉದ್ದೇಶದಿಂದ ವಾರನ್ ಹೇಸ್ಟಿಂಗ್ಸ್‌ನು ಮೈಸೂರು ರಾಣಿ ಲಕ್ಷ್ಮಮ್ಮಣ್ಣಿಯೊಂದಿಗೆ ರಹಸ್ಯ ಮಾತುಕತೆ ನಡೆಸಿದನು. ಯುದ್ಧದಲ್ಲಿ ಚಾಣಾಕ್ಷನಾಗಿದ್ದ ಹೈದರಾಲಿಯನ್ನ ಮಣಿಸಲು ಮಾರ್ಗೋಪಾಯ ಕಂಡುಕೊಳ್ಳುವುದು ಅನಿವಾರ್ಯವಾಗಿತ್ತು. ೧೭೮೨ ಮೇ ೧೭ ರಂದು ಹೇಸ್ಟಿಂಗ್ಸ್ ಹೆಸರಾಂತ ಸಾಲ್ಬಾಯ್ ಒಪ್ಪಂದ ಮಾಡಿಕೊಂಡನು. ಈ ಒಪ್ಪಂದದಿಂದಾಗಿ ಭಾರತೀಯ ರಾಜರ ಒಕ್ಕೂಟವು ವಿಸರ್ಜನೆಗೊಂಡಿತು. ೧೭೮೧ರಲ್ಲಿಯೇ ಮರಾಠ ನಾಯಕ ಸಿಂಧಿಯನೊಂದಿಗೆ ಬ್ರಿಟಿಷರು ಸಂಧಿ ಏರ್ಪಡಿಸಿಕೊಂಡಿದ್ದರು. ಹೈದರನ

ಬಲವನ್ನು ಕುಗ್ಗಿಸುವುದು ಅವನ ವಿರುದ್ಧ ಸ್ಥಳೀಯ ಅರಸರ ವಿರುದ್ಧ ಪಡೆಯನ್ನು ಕಟ್ಟುವ ಯೋಜನೆ ಬ್ರಿಟಿಷರದ್ದು. ಸಲ್ಬಾಯ್ ಒಪ್ಪಂದವು ಇಂಡೋ-ಬ್ರಿಟಿಷ್ ಇತಿಹಾಸದ ಅತ್ಯಂತ ಮಹತ್ವದ ದಾಖಲೆಗಳಲ್ಲಿ ಒಂದು. ಅದು ಅಂದಿನ ಭಾರತದ ಎಲ್ಲ ಪ್ರಮುಖ ರಾಜಕೀಯ ಶಕ್ತಿಗಳನ್ನೂ ಒಳಗೊಂಡಿತ್ತು. ದೇಶದಲ್ಲಿ ಪ್ರಧಾನ ಶಕ್ತಿಗಳು ಮರಾಠರು ಮತ್ತು ಬ್ರಿಟಿಷರು ಮಾತ್ರ, ಉಳಿದವರೆಲ್ಲ ಇವರಿಬ್ಬರ ಮಿತ್ರರೆಂದು ಪರಿಗಣಿಸಲಾಯಿತು. "ಮರಾಠರಿಂದ ತಾವು ಗೆದ್ದಿದ್ದ ಒಂದೊಂದು ಅಂಗುಲ ನೆಲವನ್ನು ಕೊಟ್ಟಾದರೂ ಶಾಂತಿಯನ್ನು ಕೊಳ್ಳಲು ಇಚ್ಛಿಸುತ್ತೇವೆಂದು" ಹೇಸ್ಟಿಂಗ್ಸ್ ಒಪ್ಪಿಕೊಂಡನು.[೧೯] ಸಿಂಧಿಯಾನು ಹೈದರನಿಗೆದುರಾಗಿ ಬ್ರಿಟಿಷರೊಂದಿಗೆ ಸೇರಿಕೊಳ್ಳಲು ರಹಸ್ಯ ಭರವಸೆ ನೀಡಿದನು. ಈ ಬೆಳವಣಿಗೆಗಳು ಹೈದರನಿಗೆ ಬಹಳ ನಿರಾಶೆ ಮೂಡಿಸಿದವು. ಭಾರತೀಯ ಅರಸರ ಒಕ್ಕೂಟ ಶಕ್ತಿಯನ್ನು ಒಡೆದು ತಮ್ಮ ವಸಾಹತು ಶಕ್ತಿಯನ್ನು ನೆಲೆಗೊಳಿಸುವ ಬ್ರಿಟಿಷರ ರಾಜಕೀಯ ಹುನ್ನಾರಗಳನ್ನು ಅರ್ಥಮಾಡಿಕೊಳ್ಳದೆ ಹೋದದ್ದು ಭಾರತೀಯ ಅರಸರ ದೌರ್ಭಾಗ್ಯವೇ ಸರಿ. ಹೈದರನಿಗೆ ಇದರ ಅರಿವಿತ್ತು. ಅದರಿಂದಲೇ ಇವರೆಲ್ಲರಿಂದ ಅವನನ್ನು ಬೇರ್ಪಡಿಸಿ ಅಧಿಕಾರದಿಂದ ಪದಚ್ಯುತಗೊಳಿಸಲು ಸಲ್ಬಾಯ್ ಒಪ್ಪಂದದ ಮೂಲಕವೇ ಒಂದು ವ್ಯೂಹ ರಚಿಸಿದರು.[೨೦]

ತಾಂಜಾವೂರಿನ ರೆಸಿಡೆಂಟ್ ಜಾನ್‌ಸಲ್ಲಿವನ್ ಹೈದರನನ್ನು ಅಧಿಕಾರದಿಂದ ಕೆಳಗಿಳಿಸಲು ಒಂದು ಸಂಚು ರೂಪಿಸಿದನು. ಮೈಸೂರು ರಾಣಿ ಲಕ್ಷ್ಮಮ್ಮಣಿಯವರ ನೆರವಿನಿಂದ ಮೈಸೂರು ಅರಮನೆಯಲ್ಲಿ ಒಳಸಂಚು ನಡೆಸಿ ಹೈದರನನ್ನು ಪದಚ್ಯುತಗೊಳಿಸಲು ಯೋಜನೆ ರೂಪಿಸಿದನು. ಈ ಉದ್ದೇಶ ಸಾಧನೆಗಾಗಿ ರಾಣಿಯ ಪ್ರತಿನಿಧಿಗಳಾಗಿದ್ದ ತಿರುಮಲರಾವ್ ಮತ್ತು ನಾರಾಯಣರಾವ್ ಎಂಬ ಸಹೋದರರೊಂದಿಗೆ ಸಂಪರ್ಕ ಬೆಳೆಸಿದನು. ಮಹಾರಾಣಿಯೂ ಹೈದರಾಲಿಯನ್ನು ಅಧಿಕಾರದಿಂದ ಕೆಳಗಿಳಿಸಲು ಉತ್ಸುಕತೆ ತೋರಿದಳು. ಈ ವಿಷಯವನ್ನು ತಿರುಮಲರಾಯರು ಸಲ್ಲಿವನ್‌ಗೆ ತಿಳಿಸಿದನು. ಸಲ್ಲಿವನ್ ೧೭೮೨ರ ಏಪ್ರಿಲ್‌ನಲ್ಲಿ ಮದರಾಸಿಗೆ ಪತ್ರ ಬರೆದು ಮಹಾರಾಣಿಯು ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲು ಆಸಕ್ತಿ ತೋರಿದ್ದಾಳೆ. ಹೈದರಾಲಿಯನ್ನು ಪದಚ್ಯುತಗೊಳಿಸಲು ಸಹಕಾರ ನೀಡಿದರೆ ಒಟ್ಟು ೫ ಲಕ್ಷ ಪಗೋಡಗಳನ್ನು ಕಂತುಗಳಲ್ಲಿ ಕಂಪನಿಗೆ ಕೊಡಲು ಒಪ್ಪಿದಳು. ಕೊಯಮತ್ತೂರು ಗೆದ್ದಾಗ ಮೂರು ಲಕ್ಷ, ಮೈಸೂರು ರಾಜ್ಯವನ್ನು ಪ್ರವೇಶಿಸಿದಾಗ ಒಂದು ಲಕ್ಷ, ಶ್ರೀರಂಗಪಟ್ಟಣ ವಶಪಡಿಸಿಕೊಂಡಾಗ ಒಂದು ಲಕ್ಷ ಕೊಡುವುದಲ್ಲದೆ, ಸೈನ್ಯದ ಖರ್ಚುವೆಚ್ಚಗಳಿಗೆ ತಿಂಗಳಿಗೆ ಎರಡು ಲಕ್ಷ ಪಗೋಡ ಕೊಡಲು ಒಪ್ಪಿಗೆ ನೀಡಿದಳು. ಸಲ್ಲಿವನ್ ಮುಂಬಯಿಗೂ ಪತ್ರ ಬರೆದು ಮಹಾರಾಣಿಯ ಬಳಿ ಸಾಕಷ್ಟು ಹಣವಿದೆ. ಅದು ಗೌಪ್ಯತೆಯಲ್ಲಿಡಲಾಗಿದೆ. ಕೊಯಮತ್ತೂರು ಅಥವಾ ಮೈಸೂರಿನ ಯಾವುದಾದರೂ ಒಂದು ಕೋಟೆಯನ್ನು ಗೆದ್ದುಕೊಂಡರೂ ಹಣದೊರೆಯುತ್ತದೆ. ಅದನ್ನು ಉತ್ತಮ ಫಲಪ್ರದವಾದ

ಕಾರ್ಯಕ್ಕೆ ಬಳಸಬಹುದು ಎಂದು ತಿಳಿಸಿದನು.[೨೦] ಸಲ್ಲಿವನ್ ಮುಂಬಯಿ ಸರಕಾರದ ಗಮನವನ್ನು ಇತ್ತ ಸೆಳೆದನು. ಮಹಾರಾಣಿ ಮೈಸೂರು ರಾಜ್ಯದ ಸಮಗ್ರ ರಕ್ಷಣೆಯ ಜವಬ್ದಾರಿಯನ್ನು ಬ್ರಿಟಿಷರಿಗೆ ನೀಡಲು ಸಮ್ಮತಿಸಿದ್ದಾಳೆ. ಅದಕ್ಕೆ ಪ್ರತಿಯಾಗಿ ೫ ಲಕ್ಷ ರೂಪಾಯಿಗಳನ್ನೂ, ಆರು ಲಕ್ಷದ ಜಹಗೀರನ್ನು ನೀಡುತ್ತಾಳೆ, ಮರಾಠರು ಮತ್ತು ನಿಜಾಮನಿಗೆ ಸೇರಿದ್ದ ಪ್ರದೇಶಗಳ ಮೇಲಿನ ಹಕ್ಕು ಬಿಟ್ಟುಕೊಡುವುದಲ್ಲದೆ ಅವರಿಗೆ ಚೌಥ್ ಮತ್ತು ಪೇಷ್ಕಶ್‌ಗಳನ್ನು ಸಲ್ಲಿಸುತ್ತಾಳೆ. ಬ್ರಿಟಿಷರಿಗೆ ಸುಂದಾ ಮತ್ತು ಹೊನ್ನಾವರಗಳನ್ನು ಖಾಯಂ ಜಹಗೀರಾಗಿ ಕೊಡಲು ಸಿದ್ಧವಾಗಿದ್ದಾಳೆ ಎಂದು ತಿಳಿಸಿದನು. ಮುಂಬಯಿ ಮಹಾರಾಣಿಗೆ ಸಹಾಯ ಮಾಡಬೇಕೆಂದು ಒತ್ತಡ ಹಾಕಿದನು.[೨೧]

ಸಲ್ಲಿವಾನನ ಕಾರ್ಯಯೋಜನೆಯನ್ನು ಮದರಾಸು ಸರಕಾರ ಒಪ್ಪಿತು. ಆದರೆ ಸರ್‌ಐರ್ ಕೂಟ್ ಅಸಮ್ಮತಿ ವ್ಯಕ್ತಪಡಿಸಿದನು. ಕಾರಣ ಸಲ್ಬಾಯ್ ಒಪ್ಪಂದವಾದ ಮೇಲೆ ಹೈದರನು ಬ್ರಿಟಿಷರೊಂದಿಗೆ ಒಪ್ಪಂದ ಮಾಡಿಕೊಳ್ಳಲು ಉತ್ಸುಕನಾಗಿದ್ದಾನೆ. ಕೂಟ್ ಹೈದರನೊಂದಿಗೆ ಮಾತುಕತೆ ಆರಂಭಿಸಿದನು. ಹೈದರಾಲಿ ಸಲ್ಬಾಯ್ ಒಪ್ಪಂದವನ್ನು ಗೌರವಿಸದೆ ಹೋದರೆ ಸಲ್ಲಿವಾನನ ಯೋಜನೆಯನ್ನು ಅಂಗೀಕರಿಸಬೇಕೆಂದು ಮೆಕಾರ್ಟ್ನೆ ತಿಳಿಸಿದನು. ಕೊನೆಗೆ ಮಹಾರಾಣಿಯ ಅಭಿಲಾಶೆಯಂತೆ ಸಲ್ಲಿವಾನನ ಯೋಜನೆ ಅಂಗೀಕಾರವಾಯಿತು.

ಸಲ್ಲಿವಾನನು ಮೈಸೂರಿನ ಮಹಾರಾಣಿಯೊಂದಿಗೆ ಮಾಡಿಕೊಳ್ಳಬೇಕಾಗಿದ್ದ ಒಪ್ಪಂದದ ಕರಡು ಯೋಜನೆಯನ್ನು ಸಿದ್ಧಪಡಿಸಿದನು. ಅದನ್ನು ಸ್ವಾರ್ಟ್ಜ್ ಅಧಿಕೃತ ಮಾನ್ಯ ಮಾಡಿದನು. ಮೈಸೂರು ಕಡೆಯಿಂದ ತಿರುಮಲರಾಯನು ಒಪ್ಪಂದದಲ್ಲಿ ಪ್ರಧಾನ ಪಾತ್ರವಹಿಸಿದನು. ಈ ಒಪ್ಪಂದದ ಷರತ್ತುಗಳೆಂದರೆ ಮದರಾಸು ಸೈನ್ಯವು ಕೊಯಮತ್ತೂರು, ಮೈಸೂರು ಮತ್ತು ಶ್ರೀರಂಗಪಟ್ಟಣ ಗೆದ್ದಾಗ ಒಟ್ಟು ಹತ್ತು ಲಕ್ಷ ರೂಪಾಯಿಗಳನ್ನು ಕಂತುಗಳಲ್ಲಿ ಪಾವತಿಸಬೇಕು. ಬ್ರಿಟಿಷರ ಒಂದು ಸೇನಾ ತುಕಡಿಯನ್ನು ಮೈಸೂರಿನಲ್ಲಿಡುವುದು ಅದರ ವೆಚ್ಚವನ್ನು ರಾಣಿಯೇ ಭರಿಸುವುದು, ಮರಾಠರಿಗೆ ಚೌಥ್, ನಿಜಾಮನಿಗೆ ಪೇಷ್ಕಶ್ ಅನ್ನು ರಾಣಿಯು ಕಂಪನಿ ಮೂಲಕ ನೀಡಬೇಕು. ಕಂಪನಿಯು ಮೈಸೂರನ್ನು ರಾಣಿಗೆ ಗೆದ್ದುಕೊಡಬೇಕು. ಅದರಲ್ಲಿ ಯಾವುದೇ ಪ್ರದೇಶವನ್ನು ತಾವು ಉಳಿಸಿಕೊಳ್ಳಬಾರದು. ಕಂಪನಿ ಹೈದರನೊಂದಿಗೆ ಸಂಧಿ ಮಾಡಿಕೊಂಡರೆ ರಾಣಿಯು ನೀಡಿರುವ ಹಣವನ್ನು ಹಿಂತಿರುಗಿಸತಕ್ಕದ್ದು.[೨೨]

ಬ್ರಿಟಿಷರು ಹೈದರನಿಂದ ಅಧಿಕಾರ ಕಸಿದುಕೊಳ್ಳಲು ನಡೆಸುತ್ತಿದ್ದ ಒಳಸಂಚುಗಳನ್ನು ಗಮನಿಸಿಯೇ ತನ್ನ ಯುದ್ಧವನ್ನು ಮತ್ತಷ್ಟು ತೀವ್ರಗೊಳಿಸಿದನು. ಮಹಾರಾಣಿ ಲಕ್ಷ್ಮಮ್ಮಣಿ, ಮರಾಠರ ನಾಯಕ ಸಿಂಧಿಯಾ, ನಿಜಾಮರು ಬ್ರಿಟಿಷರ ಬೆಂಬಲಕ್ಕೆ ನಿಂತದ್ದು ಭಾರೀ ನಿರಾಶೆಯನ್ನು ಮೂಡಿಸಿತು. ಭಾರತೀಯ ರಾಜರ ಒಕ್ಕೂಟವನ್ನು ಒಡೆಯುವಲ್ಲಿ ಬ್ರಿಟಿಷರು ಯಶಸ್ವಿಯಾದರು.

ಈ ಎಲ್ಲ ರಾಜಕಾರಣದ ಸೂಕ್ಷ್ಮತೆಗಳನ್ನು ತಿಳಿದು ಹೈದರನು ಬ್ರಿಟಿಷರನ್ನು ನಿರ್ಣಾಯಕವಾಗಿ ಸೋಲಿಸಲು ಯುದ್ಧ ಸನ್ನದ್ಧತೆ ನಡೆಸಿದನು. ೧೭೮೨ ಆದಿ ಭಾಗದಲ್ಲಿ ಟಿಪ್ಪುವಿನ ನಾಯಕತ್ವದಲ್ಲಿ ಮೈಸೂರು ಸೈನ್ಯವು ತಂಜಾವೂರಿನ ಬಳಿ ಕರ್ನಲ್‌ಬ್ರೈತ್ ವೈಟ್ ನಾಯಕತ್ವದ ಬ್ರಿಟಿಷ್ ಸೈನ್ಯವನ್ನು ಸೋಲಿಸಿತು. ಎರಡನೆಯ ಮೈಸೂರು ಯುದ್ಧ ಹೀಗೆಯೇ ಜಯಾಪಜಯಗಳ ನಡುವೆ ಮುನ್ನಡೆಯುತ್ತಿದ್ದಾಗ ಹೈದರನು ಯುದ್ಧ ಭೂಮಿಯಲ್ಲೇ ತೀವ್ರ ಬೆನ್ನುಪಣೆ ರೋಗಕ್ಕೆ ಒಳಗಾದನು. ಕೊನೆಗೆ ಚಿತ್ತೂರು ಹತ್ತಿರದ ನರಸಿಂಗರಾಯ ಪೇಟೆಯಲ್ಲಿದ್ದ ಸೇನಾ ಶಿಬಿರದಲ್ಲಿ ೧೭೮೨ರ ಡಿಸೆಂಬರ್ ೭ ರಂದು ಕೊನೆಯುಸಿರೆಳೆದನು. ಈ ಸಮಯದಲ್ಲಿ ಟಿಪ್ಪು ಮಲಬಾರಿನಲ್ಲಿ ಬ್ರಿಟಿಷರ ವಿರುದ್ಧ ಹೋರಾಡುತ್ತಿದ್ದನು. ದಿವಾನ್ ಪೂರ್ಣಯ್ಯ ಮುಂತಾದವರು ಹೈದರನ ಮರಣದ ಸುದ್ದಿಯನ್ನು ರಹಸ್ಯವಾಗಿರಿಸಿ ತಕ್ಷಣವೇ ಟಿಪ್ಪುವನ್ನು ಬರಮಾಡಿಕೊಂಡು ಟಿಪ್ಪುವನ್ನು ಅಧಿಕಾರಕ್ಕೆ ತಂದರು.[೮] ಹೈದರನ ಮರಣದಿಂದಾಗಿ ಮೈಸೂರು ರಾಜಕಾರಣ ರಂಗದಿಂದ ಒಬ್ಬ ಅತಿಮುಖ್ಯವಾದ ವ್ಯಕ್ತಿ ನಿರ್ಗಮಿಸಿದಂತಾಯಿತು. ಮರಾಠರು ಮೈಸೂರು ರಾಜ್ಯದಿಂದ ಕಳೆದುಕೊಂಡಿದ್ದ ಪ್ರದೇಶಗಳನ್ನು ಮರಳಿ ಪಡೆಯಲು ಕಾತರಿಸಿದರು.

ಟಿಪ್ಪುವು ತನ್ನ ತಂದೆಗಿಂತಲೂ ಚುರುಕಾಗಿಯೇ ಯುದ್ಧವನ್ನು ಮುಂದುವರೆಸಿದನು. ಫ್ರೆಂಚರೊಂದಿಗೆ ನಿಕಟ ಸಂಪರ್ಕ ಬೆಳೆಸಿದನು. ಆದರೆ ೧೭೮೨ರಲ್ಲಿ ಟಿಪ್ಪುವಿನ ವಿರುದ್ಧವಾಗಿ ವಾರನ್ ಹೇಸ್ಟಿಂಗ್ಸ್‌ನು ಮರಾಠರೊಂದಿಗೆ ಒಪ್ಪಂದ ಮಾಡಿಕೊಂಡನು. ಈ ಒಪ್ಪಂದದಿಂದ ಮುಂದಾಗಬಹುದಾದ ಅಪಾಯಗಳನ್ನು ಅರಿತುಕೊಂಡ ಟಿಪ್ಪುವು ಯುದ್ಧ ಕೊನೆಗೊಳಿಸಿ ಸಂಧಿ ಮಾಡಿಕೊಳ್ಳಲು ನಿರ್ಧರಿಸಿದ. ಅದರಂತೆ ೧೭೮೪ ಮಾರ್ಚಿಯಲ್ಲಿ ಮಂಗಳೂರು ಒಪ್ಪಂದವು ಘಟಿಸಿತು. ಇದರಂತೆ ಎರಡನೆಯ ಮೈಸೂರು ಯುದ್ಧವು ಮುಕ್ತಾಯವಾಯಿತು.

೪.೨.೩. ಮೂರನೆಯ ಆಂಗ್ಲೋ ಮೈಸೂರು ಯುದ್ಧ ೧೭೯೦-೧೭೯೨

ತಿರುವಾಂಕೂರು ರಾಜ ರಾಮವರ್ಮನ ಸೈನ್ಯಕ್ಕೂ ಟಿಪ್ಪುವಿನ ಸೈನ್ಯಕ್ಕೂ ೧೭೮೯ ಡಿಸೆಂಬರ್ ೨೯ ರಂದು ನಡೆದ ಕಾಳಗವೇ ಪ್ರಮುಖವಾಗಿ ಮೂರನೆಯ ಆಂಗ್ಲೋ ಮೈಸೂರು ಯುದ್ಧಕ್ಕೆ ಕಾರಣವಾಯಿತು. ಬ್ರಿಟಿಷರೊಂದಿಗೆ ರಾಮವರ್ಮನು ಮೈತ್ರಿ ಹೊಂದಿದ್ದನು. ಟಿಪ್ಪುವು ಶಾಂತಿಯುತ ಮಾತುಕತೆಗಳಿಂದ ಯುದ್ಧವನ್ನು ಕೊನೆಗೊಳಿಸಲು ಪ್ರಯತ್ನಿಸಿದನು. ಆದರೆ ರಾಜನು ಮತ್ತು ಬ್ರಿಟಿಷರು ಸೇರಿ ಟಿಪ್ಪುವುನ್ನು ಸಂಪೂರ್ಣವಾಗಿ ಮುಗಿಸಿಯೇ ಬಿಡಬೇಕೆಂದು ತೀರ್ಮಾನಿಸಿದಂತೆ ತೋರುತ್ತಿತ್ತು. ಶಾಂತಿ ಸಂದಾನ ಮಾಡಿಕೊಳ್ಳಲು ಟಿಪ್ಪು ನಾಲ್ಕು ತಿಂಗಳು ಸಮಾಧಾನಿಸಿದರೂ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಕಡೆಗೆ ೧೭೯೦ ಏಪ್ರಿಲ್‌ನಲ್ಲಿ ತಿರುವಾಂಕೂರಿಗೆ ಹೊಂದಿಕೊಂಡಂತಿರುವ ಕೋಟೆ ಕೊತ್ತಲಗಳನ್ನು ನೆಲಸಮ ಮಾಡಿದನು. ಕ್ರಾಂಗನೂರು ಮತ್ತು ಆಯಕೋಬಾವನ್ನು ವಶಪಡಿಸಿಕೊಂಡನು. ಇದರೊಂದಿಗೆ ಮೂರನೆಯ ಮೈಸೂರು ಯುದ್ಧವು

ಅಧಿಕೃತವಾಗಿಯೇ ಪ್ರಾರಂಭವಾಯಿತು. ಈ ಯುದ್ಧವು ಬೇರೆ ಬೇರೆ ಭಾಗದಲ್ಲಿ ಡಿಸೆಂಬರ್ ೧೭೯೦ರಿಂದ ಫೆಬ್ರವರಿ ೧೭೯೨ರವರೆಗೆ ನಡೆಯಿತು.

೪.೨೩.೧. ಆಂಗ್ಲೋ ಮೈಸೂರು ಯುದ್ಧದ ಮೊದಲ ಹಂತ–ಏಪ್ರಿಲ್ ೧೭೯೦–ಡಿಸೆಂಬರ್ ೧೭೯೦: ಬ್ರಿಟಿಷರು ದಕ್ಷಿಣದಿಂದ ಆಕ್ರಮಣ ಮಾಡಲು ಇಚ್ಛಿಸಿದರು. ಕಾರನ್‌ವಾಲೀಸನು ಈ ಯುದ್ಧವನ್ನು ಹೆಚ್ಚು ಗಂಭೀರವಾಗಿ ಪರಿಗಣಿಸಿದ್ದನು. ತನ್ನ ಮಿತ್ರ ಪಡೆಗಳ ಸಹಾಯ ಪಡೆದು ಟಿಪ್ಪುವನ್ನು ಸಮರ್ಥವಾಗಿ ಎದುರಿಸಲು ಪೂರ್ವ ಯೋಜನೆ ರೂಪಿಸಿದನು. ಯುದ್ಧದ ಮೊದಲ ಕಂತಾಗಿ ಕೊಯಮತ್ತೂರನ್ನು ಹಿಡಿಯುವುದು. ನಂತರ ದಕ್ಷಿಣದ ಎಲ್ಲ ಕೋಟೆಗಳನ್ನು ವಶಪಡಿಸಿಕೊಳ್ಳುವುದು. ಆ ಮೇಲೆ ಗಜ್ಜಲಹಟ್ಟಿ ಮೂಲಕ ಮುಂದುವರೆದು ಮೈಸೂರನ್ನು ಪ್ರವೇಶಿಸುವುದು. ಬ್ರಿಟಿಷರ ಯೋಜನೆಯಾಗಿತ್ತು. ಮುಂಬಯಿಯ ಗೌರ್‍ನರ್ ಜನರಲ್ ಅಬರ್ ಕ್ರಾಂಬಿಯು ಪಶ್ಚಿಮ ಕರಾವಳಿಯ ಟಿಪ್ಪುವಿನ ರಾಜ್ಯಕ್ಕೆ ಸೇರಿದ ಭಾಗಗಳ ಮೇಲೆ ಮುತ್ತಿಗೆ ಹಾಕಬೇಕೆಂದು ಸೂಚಿಸಿದನು. ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳಿಂದ ಏಕಕಾಲಕ್ಕೆ ಶ್ರೀರಂಗಪಟ್ಟಣದ ಕಡೆಗೆ ಸೈನ್ಯವನ್ನು ನುಗ್ಗಿಸಿದರೆ ಬಹುಬೇಗ ಯುದ್ಧ ಮುಗಿದು ಟಿಪ್ಪುವಿನ ರಾಜ್ಯವು ವಶವಾಗುತ್ತದೆ. ಜೊತೆಗೆ ಮೈತ್ರಿ ಕೂಟದ ಕರಾರಿನಂತೆ ಅದರಲ್ಲಿ ಯಾರಿಗೂ ಪಾಲುಕೊಡಬೇಕಾಗಿಲ್ಲವೆಂದು ಕಾರನ್‌ವಾಲೀಸನು ಮುಂದಾಲೋಚಿಸಿದನು.

ಬ್ರಿಟಿಷರು ತಮ್ಮ ಉದ್ದೇಶ ಸಾಧನೆಗಾಗಿ ಯುದ್ಧ ಪ್ರಾರಂಭಿಸಿದರು. ಮುಂಬಯಿ ಜನರಲ್ ಮಾಡೋಸನ ನಾಯಕತ್ವದ ಸೈನ್ಯವು ೧೭೯೦ ಮೇ ೨೧ರಲ್ಲಿ ಧಾರಾಪುರ, ಕೊಯಮತ್ತೂರನ್ನು ವಶಪಡಿಸಿಕೊಂಡಿತು. ಈ ಸುದ್ದಿ ತಿಳಿದೊಡನೆ ಟಿಪ್ಪು ಶತ್ರುವನ್ನು ಹಿಮ್ಮೆಟಿಸಲು ನಿರ್ಧರಿಸಿದನು. ಸೈಯದ್ ಸಾಹೇಬನ ನಾಯಕತ್ವದಲ್ಲಿ ನಾಲ್ಕು ಸಾವಿರ ಅಶ್ವಪಡೆಯನ್ನು ಕಳುಹಿಸಿದನು. ಆದರೆ ಬ್ರಿಟಿಷರ ಸುಸಜ್ಜಿತ ಭಾರಿ ಸೈನ್ಯದ ಮುಂದೆ ಟಿಪ್ಪು ಸೈನ್ಯವು ನಿಲ್ಲಲಾರದೆ ಹೋಯಿತು. ಮಾಡೋಸನು ಮುನ್ನುಗ್ಗಿ ದಿಂಡಿಗಲ್ಲನ್ನು ವಶಪಡಿಸಿಕೊಂಡನು.[೭೫] ಮಾಡೋಸನು ಪಾಲಘಾಟ್‌ನ್ನು ವಶಪಡಿಸಿಕೊಳ್ಳಲು ಕರ್ನಲ್ ಫ್ಲಾಯ್ಡ್ ಮತ್ತು ಕರ್ನಲ್ ಸ್ಟುವರ್ಟ್‌ಗೆ ವಹಿಸಿದನು. ಅವರು ಸೋತು ಹಿಂತಿರುಗಬೇಕಾಯಿತು. ಮತ್ತೆ ಸ್ಟುವರ್ಟ್ ಆಗಸ್ಟ್ ೨೧ ರಂದು ಪಾಲಘಾಟ್‌ನ ಕೋಟೆಯ ಮೇಲೆ ಬಲವಾದ ಮುತ್ತಿಗೆಯನ್ನು ಹಾಕಿದನು. ಅದರಲ್ಲಿ ಫಲಪ್ರದನಾದನು. ಈರೋಡು, ಸತ್ಯಮಂಗಲಗಳೂ ಬ್ರಿಟಿಷರಿಗೆ ದಕ್ಕಿದವು.

ಮೈಸೂರು ಯುದ್ಧದ ಆರಂಭಿಕ ವಿಜಯಗಳಿಂದ ಉತ್ಸಾಹಭರಿತರಾದ ಬ್ರಿಟಿಷರು ರಾಜಧಾನಿ ಶ್ರೀರಂಗಪಟ್ಟಣದ ಕಡೆಗೆ ಧಾವಿಸಲು ಆಸಕ್ತಿ ವಹಿಸಿದರು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಟಿಪ್ಪುವು ೪೦,೦೦೦ ಸೈನಿಕರೊಂದಿಗೆ ಹೊರಟು ೧೭೯೦ ಸೆಪ್ಟೆಂಬರ್ ೯ ರಂದು ಗಜ್ಜಲಹಟ್ಟಿ ಕಣಿವೆ ತಲುಪಿದನು. ಫ್ಲಾಯ್ಡನ ಮುಂದೆ ಪ್ರತ್ಯಕ್ಷನಾದನು. ಇವನನ್ನು ಎದುರಿಸಲು ನುಗ್ಗಿದನು.

ಪಾಯ್ನ್ ಹೋರಯುದ್ಧಕ್ಕೆ ಬರದೆ ಅಡಗಿ ಕುಳಿತನು. ಟಿಪ್ಪುವು ದೂರದಿಂದಲೇ ಫಿರಂಗಿಗಳನ್ನು ಉಡಾಯಿಸಿ ಬ್ರಿಟೀಷರಿಗೆ ಭಾರಿ ನಷ್ಟವುಂಟು ಮಾಡಿದನು. ಸತ್ಯಮಂಗಲವು ಟಿಪ್ಪುವಿನ ವಶವಾಯಿತು. ಮೈಸೂರು ಸೈನ್ಯವು ಕರ್ನಲ್ ಪಾಯ್ನ್‌ನ ಸಕಲ ಸಾಮಾಗ್ರಿಗಳನ್ನು ಲೂಟಿ ಮಾಡಿತು. ಪಾಯ್ನ್‌ನ ನೆರವಿಗೆ ಜನರಲ್ ಮೆಡೋಸ್ ಧಾವಿಸಿದನು. ಬ್ರಿಟಿಷರ ಸೈನ್ಯವು ಗಜ್ಜಲಹಟ್ಟಿ ಕಣಿವೆಯ ಮೂಲಕ ಬರುವುದನ್ನು ತಡೆದನು. ಸೆಪ್ಟೆಂಬರ್ ೨೫ ರಂದು ಕೊಯಮತ್ತೂರನ್ನು ವಶಪಡಿಸಿಕೊಂಡನು. ನಂತರ ಈರೋಡನ್ನು ಹಿಡಿದನು. ಅಕ್ಟೋಬರ್ ಆರನೆಯ ತಾರೀಕು ಧಾರಾಪುರಂ ಮುತ್ತಿದನು. ಈ ನಡುವೆ ಬ್ರಿಟಿಷರು ಬಾರಾಮಹಲ್ ಪ್ರಾಂತ್ಯದಲ್ಲಿ ಯುದ್ಧ ಹೂಡಿದ್ದರು. ಬಂಗಾಳದ ನೆರವು ದೊರಕಿತು. ೯೫೦೦ ಸೈನಿಕರು ಹೋರಾಟ ನಡೆಸಿ ವಾಣಿಯಂಬಾಡಿಯನ್ನು ಗೆದ್ದುಕೊಂಡರು. ಬ್ರಿಟಿಷ್ ದಳಪತಿ ಮ್ಯಾಕ್ಸ್‌ವೆಲ್ ಕೃಷ್ಣಗಿರಿಯನ್ನು ವಶಪಡಿಸಿಕೊಳ್ಳಲು ನಡೆಸಿದ ಪ್ರಯತ್ನವನ್ನು ಟಿಪ್ಪು ವಿಫಲಗೊಳಿಸಿದನು.

೧೭೮೭ರಿಂದಲೇ ಟಿಪ್ಪು ಫ್ರೆಂಚರ ನೆರವು ಪಡೆಯಲು ಪ್ರಯತ್ನಿಸಿದನು. ಆದರೆ ಫ್ರಾನ್ಸ್‌ಗೆ ಮಹಾಕ್ರಾಂತಿಯ ಮುನ್ನ ಸಮಯವಾದ್ದರಿಂದ ನೆರವು ನೀಡಲಾಗಲಿಲ್ಲ. ಬ್ರಿಟಿಷರ ವಿರುದ್ಧ ೧೭೯೦ರ ಸಮಯಕ್ಕೆ ಮೂರನೆಯ ಆಂಗ್ಲೋ ಮೈಸೂರು ಯುದ್ಧಕ್ಕೆ ಸಿದ್ದತೆ ನಡೆಸಿದ ಟಿಪ್ಪು ಮತ್ತೆ ಫ್ರೆಂಚರ ನೆರವು ಪಡೆಯಲು ಮುಂದಾದನು. ಫ್ರೆಂಚ್ ದಳದ ನಾಯಕ ಮೆಕ್ನಮರಾ ಟಿಪ್ಪುವನ್ನು ೧೭೯೦ರಷ್ಟೆ ಮೊದಲೇ ತಿರುವಾಂಕುರು ಬಳಿ ಭೇಟಿಯಾಗಿದ್ದನು. ಟಿಪ್ಪು ಅವನ ಮೂಲಕ ಪತ್ರ ಕಳುಹಿಸಿ ಫ್ರಾನ್ಸ್ ೨೦೦೦ ಸೈನಿಕರನ್ನು ತನಗೆ ನೆರವಾಗಿ ಕಳುಹಿಸಿಕೊಡಬೇಕೆಂದು ಕೋರಿದನು.[೨೬] ಆದರೆ ಫ್ರಾನ್ಸ್ ಮಹಾಕ್ರಾಂತಿಯ ಕುದಿತ್ವವನ್ನು ಅನುಭವಿಸಿದ್ದಿತು. ಇದರಿಂದ ನೆರವು ನೀಡಲಾಗಲಿಲ್ಲ. ೧೭೯೦ರ ಮೇ ೧೩ರಂದು ಕಾಮ್ಟೆ ಡಿ ಕಾನ್‌ವೇ ಕಾರನ್‌ವಾಲೀಸನಿಗೆ ಪತ್ರ ಬರೆದು ಫ್ರೆಂಚರ ತಟಸ್ಥ ನೀತಿಯನ್ನು ಪ್ರಕಟಿಸಿದನು.[೨೭]

ಟಿಪ್ಪು ೧೭೯೦ ಡಿಸೆಂಬರ್ ೬ ರಂದು ತಿಯಾಘರ್ ಕೋಟೆಯನ್ನು ವಶಪಡಿಸಿಕೊಳ್ಳಲು ಯತ್ನಿಸಿದನು. ಆದರೆ ಕ್ಯಾಪ್ಟನ್ ಫ್ಲಿಂಟ್ ಅದನ್ನು ವಿಫಲಗೊಳಿಸಿದನು. ಟಿಪ್ಪು ಅಲ್ಲಿಂದ ಮುನ್ನಡೆದು ತಿರುವಣ್ಣಾಮಲೈ ಮೇಲೆ ಆಕ್ರಮಣ ಮಾಡಿ ವಶಪಡಿಸಿಕೊಂಡನು. ನಂತರ ೧೭೯೧ ಜನವರಿ ೨೩ ರಂದು ಪೆರುಮಕ್ಕಲ್ ಕೋಟೆಯನ್ನು ಗೆದ್ದುಕೊಂಡನು. ಬ್ರಿಟಿಷರನ್ನು ನಿರ್ಣಾಯಕವಾಗಿ ಸೋಲಿಸಿ ಇಲ್ಲಿಂದ ಪೂರ್ಣವಾಗಿ ಕಾಲ್ತೆಗಿಸುವ ಉದ್ದೇಶದಿಂದಲೇ ಟಿಪ್ಪು ಫ್ರೆಂಚರ ನೆರವು ಪಡೆಯುವ ನಿರೀಕ್ಷೆಯಿಂದ ಪಾಂಡಿಚೇರಿಗೆ ಧಾವಿಸಿದನು. ಇತ್ತ ಬ್ರಿಟಿಷರ ಸೈನ್ಯದಲ್ಲಿ ನಾಯಕತ್ವ ಬದಲಾವಣೆಗೆ ಚಾಲನೆ ದೊರೆಯಿತು. ಅದರಂತೆ ಕಾರನ್‌ವಾಲೀಸನು ೧೭೯೧ ಜನವರಿ ೨೭ ರಂದು ಸೈನ್ಯದ ನಾಯಕತ್ವ ವಹಿಸಿಕೊಂಡನು. ಇಲ್ಲಿಗೆ ಮೂರನೆಯ ಆಂಗ್ಲೊ ಮೈಸೂರು ಯುದ್ಧದ ಮೊದಲ ಹಂತ ಮುಗಿಯಿತು.[೨೮] ಈ ಹಂತದಲ್ಲಿ ಮೈಸೂರು

ರಾಜ್ಯವನ್ನು ಬ್ರಿಟಿಷರು ದಕ್ಷಿಣ ಮತ್ತು ಪಶ್ಚಿಮ ಭಾಗಗಳಿಂದ ಸುತ್ತುವರೆದು ಪೂರ್ಣಪ್ರಮಾಣದಲ್ಲಿ ವಶಪಡಿಸಿಕೊಳ್ಳಲು ನಡೆಸಿದ ಪ್ರಯತ್ನಗಳನ್ನು ಟಿಪ್ಪುವು ವಿಫಲಗೊಳಿಸಿದನು.

೪.೨.೩.೨. ಯುದ್ಧದ ಎರಡನೆಯ ಹಂತ: ಕಾರನ್‌ವಾಲೀಸ್‌ನು ಮದರಾಸಿನ ಬ್ರಿಟಿಷ್ ಸೇನಾ ನಾಯಕತ್ವ ವಹಿಸಿಕೊಂಡ ಮೇಲೆ ಮೈಸೂರು ರಾಜ್ಯವನ್ನು ಪೂರ್ಣ ವಶಪಡಿಸಿಕೊಳ್ಳಲು ಯೋಜನೆ ಸಿದ್ಧಪಡಿಸಿದನು. ಟಿಪ್ಪುವಿನ ಶಕ್ತಿ ಸಾಮರ್ಥ್ಯವನ್ನು ಅರಿತಿದ್ದ ಅವನು ಯುದ್ಧ ವ್ಯೂಹವನ್ನು ಬದಲಾಯಿಸಿದನು. ಮದರಾಸನ್ನು ಕೇಂದ್ರವನ್ನಾಗಿ ಮಾಡಿಕೊಂಡು ಈಶಾನ್ಯ ದಿಕ್ಕಿನಿಂದ ಮುನ್ನಡೆಯಲು ಇಚ್ಛಿಸಿದನು. ಅದಕ್ಕಾಗಿ ಚಿತ್ತೂರು ಮಾರ್ಗವಾಗಿ ಚಲಿಸಿ ೧೭೯೧ ಫೆಬ್ರವರಿ ೧೯ರಂದು ಮೈಸೂರು ರಾಜ್ಯದ ಗಡಿ ಭಾಗವನ್ನು ಪ್ರವೇಶಿಸಿದನು. ಈ ಸಮಯದಲ್ಲಿ ಪಾಂಡಿಚೇರಿಯಲ್ಲಿ ಟಿಪ್ಪು ಬ್ರಿಟಿಷರ ಆಕ್ರಮಣವನ್ನು ತಡೆಯಲು ಬಹುಬೇಗ ಧಾವಿಸಿದನು. ಬೆಂಗಳೂರು ರಕ್ಷಣೆಗೆ ಸಕಲ ಸಿದ್ಧತೆ ಮಾಡಿದನು. ಕಾರನ್‌ವಾಲೀಸನು ಫೆಬ್ರವರಿ ೨೮ ರಂದು ಕೋಲಾರವನ್ನು, ಮಾರ್ಚ್ ೨ರಂದು ಹೊಸಕೋಟೆಯನ್ನು ಹಿಡಿದನು. ನಂತರ ಅವನ ಸೈನ್ಯವು ಬೆಂಗಳೂರು ಕಡೆಗೆ ಪ್ರಯಾಣ ಬೆಳೆಸಿತು. ಇಲ್ಲಿಗೆ ಹತ್ತು ಮೈಲು ದೂರವಿರುವಾಗಲೇ ಟಿಪ್ಪುವಿನ ಅಶ್ವಪಡೆಯು ತಡೆಯೊಡ್ಡಿತು. ಸುಮಾರು ಹತ್ತು ಮಂದಿ ಬ್ರಿಟಿಷ್ ಸೈನಿಕರನ್ನು ಬಲಿತೆಗೆದುಕೊಂಡಿತು.[೭೯]

ಕಾರನ್‌ವಾಲೀಸನು ಬೆಂಗಳೂರು ಕೋಟೆಯನ್ನು ಮುತ್ತಿಗೆ ಹಾಕಲು ಯೋಜಿಸಿದನು. ಮಾರ್ಚ್ ೭ ರಂದು ನಗರದ ಮೇಲೆ ದಾಳಿ ಮಾಡಬೇಕೆಂದು ಆಜ್ಞೆ ಮಾಡಿದನು. ಬೆಂಗಳೂರು ನಗರವನ್ನು ವಶಪಡಿಸಿಕೊಳ್ಳಲು ಬ್ರಿಟಿಷರು ಆಸಕ್ತಿ ತೋರಿಸಲು ಕಾರಣ ಅಲ್ಲಿ ಒಂದು ಸಿಡಿಮದ್ದಿನ ಕಾರ್ಖಾನೆ, ಫಿರಂಗಿಯನ್ನು ಎರಕ ಹೊಯ್ಯುವ ಯಂತ್ರಗಳು ಇದ್ದವು. ಬೆಂಗಳೂರು ನಗರ ಮತ್ತು ಬಲಿಷ್ಠ ಕೋಟೆಯನ್ನು ವಶಪಡಿಸಿಕೊಳ್ಳಲು ಕಾರನ್‌ವಾಲೀಸನು ಸಾಕಷ್ಟು ಸೇನೆಯನ್ನು ಜಮಾಯಿಸಿದನು. ಟಿಪ್ಪು ತಕ್ಕ ಉತ್ತರ ನೀಡಲು ಕಮ್ರುದ್ದೀನ್ ಖಾನ್‌ನ ನಾಯಕತ್ವದಲ್ಲಿ ೬೦೦೦ ಸೈನಿಕರನ್ನು ಕಳುಹಿಸಿದನು. ಟಿಪ್ಪುವಿನ ಸೈನಿಕರು ಎಷ್ಟೇ ಹೋರಾಡಿದರೂ ನಗರವನ್ನು ವಶಪಡಿಸಿಕೊಳ್ಳಲಾಗಲಿಲ್ಲ. ಅಪಾರ ಪ್ರಮಾಣದ ಸೈನಿಕರು ಮಡಿದರು. ಕೊನೆಗೆ ಟಿಪ್ಪು ಬ್ರಿಟಿಷರಿಗೆ ಆಹಾರ ಪೂರೈಕೆಯಾಗುತ್ತಿದ್ದ ಮಾರ್ಗಗಳನ್ನು ತಡೆದನು. ಆದರೂ ಕಾರನ್‌ವಾಲೀಸನ ನಿರ್ದೇಶನದ ಮೇರೆಗೆ ಬ್ರಿಟಿಷ್ ಸೈನಿಕರು ರಹಸ್ಯವಾಗಿಯೇ ಬೆಂಗಳೂರು ಕೋಟೆಯೊಳಗೆ ನುಗ್ಗಿದರು. ಕೋಟೆಯ ರಕ್ಷಣೆಗೆ ಟಿಪ್ಪು ೨೦೦೦ ಸೈನಿಕರನ್ನು ಕಳುಹಿಸಿದರೂ ಪ್ರಯೋಜನವಾಗಲಿಲ್ಲ. ಅಷ್ಟು ಹೊತ್ತಿಗೆ ಕಾಲ ಮಿಂಚಿತ್ತು.[೮೦] ಕೋಟೆಯು ಬ್ರಿಟಿಷರ ವಶವಾಯಿತು. ಬೆಂಗಳೂರಿನಂಥ ಆಯಕಟ್ಟಿನ ಭಾಗವು ಕೈತಪ್ಪಿದುದು ಟಿಪ್ಪುವಿಗೆ ಭಾರಿ ಪೆಟ್ಟು ಬಿದ್ದಂತಾಯಿತು. ಕಾರನ್‌ವಾಲೀಸನು ಟಿಪ್ಪುವಿಗೆ ಸೇರಿದ್ದ ದೇವನಹಳ್ಳಿ ಮತ್ತು ಚಿಕ್ಕಬಳ್ಳಾಪುರಗಳನ್ನು ವಶಪಡಿಸಿಕೊಂಡನು. ನಂತರ ಶ್ರೀರಂಗಪಟ್ಟಣವನ್ನು

ಮುತ್ತಿಗೆ ಹಾಕುವ ಯೋಜನೆ ರೂಪಿಸಿದನು. ಇದಕ್ಕೆ ಸ್ಥಳೀಯವಾಗಿ ಮರಾಠರು ಮತ್ತು ನಿಜಾಮನ ನೆರವನ್ನು ಪಡೆಯಲು ಇಚ್ಛಿಸಿದನು.

ಹೈದರಾಬಾದಿನ ನಿಜಾಮ ಮತ್ತು ಮರಾಠರು ಟಿಪ್ಪುವನ್ನು ಸೋಲಿಸಲು ಬೇರೆ ಬೇರೆ ಭಾಗದ ಮೂಲಕ ಟಿಪ್ಪುವಿನ ರಾಜ್ಯದ ಮೇಲೆ ಆಕ್ರಮಣ ಮಾಡಲು ಮುಂದಾದರು. ಅವರು ಇತ್ತೀಚೆಗೆ ಬ್ರಿಟಿಷರೊಂದಿಗೆ ಸಂಧಿ ಮಾಡಿಕೊಂಡು ಟಿಪ್ಪು ವಿರುದ್ಧದ ಹೋರಾಟಕ್ಕೆ ಬ್ರಿಟಿಷರೊಂದಿಗೆ ಕೈ ಜೋಡಿಸಿದರು. ಮರಾಠ ನಾಯಕ ಹರಿಪಂತನು ೧೭೯೧ ಮಾರ್ಚಿಯಲ್ಲಿ ಪಂಗಳದಲ್ಲಿ ನಿಜಾಮನನ್ನು ಸಂಧಿಸಿದನು. ಟಿಪ್ಪುವಿನ ವಿರುದ್ಧದ ಹೋರಾಟಕ್ಕೆ ಪರಸ್ಪರ ಚರ್ಚಿಸಿದರು. ಟಿಪ್ಪುವನ್ನು ಸೋಲಿಸಬೇಕೇ ಹೊರತು ನಾಶ ಮಾಡಬಾರದು.[೮೧] ಬ್ರಿಟಿಷರು ಹೆಚ್ಚು ಬಲಿಷ್ಠರಾಗಿ ಬೆಳೆಯಲು ಬಿಡಬಾರದು ಎಂಬುದು ಅವರ ಇಚ್ಛೆಯಾಗಿತ್ತು. ಒಂದು ಪಕ್ಷ ಟಿಪ್ಪುವಿನ ಪತನವಾದರೆ ಮೈಸೂರು ರಾಜ್ಯದಲ್ಲಿ ಅವರ ಆಧಿಪತ್ಯ ಸ್ಥಾಪಿತವಾಗುತ್ತದೆ. ನಮಗೆ ನಿರೀಕ್ಷಿತ ಲಾಭವಾಗದೇ ಇರಬಹುದು ಎಂಬ ಅರಿವಿತ್ತು. ಹೀಗೆ ಟಿಪ್ಪು ಮೂರನೆಯ ಮೈಸೂರು ಯುದ್ಧದಲ್ಲಿ ಮರಾಠರು ಮತ್ತು ನಿಜಾಮರ ಪ್ರತಿರೋಧವನ್ನು ಎದುರಿಸಬೇಕಾಯಿತು.

ನಿಜಾಮನು ಕೊಪ್ಪಳವನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದನು. ಟಿಪ್ಪುವಿನ ಕಾವಲು ಪಡೆಯನ್ನು ಭೇದಿಸುವುದು ಅಷ್ಟು ಸುಲಭವಾಗಿರಲಿಲ್ಲ. ೧೭೯೧ ಏಪ್ರಿಲ್ ೧೮ ರಂದು ಕೊಪ್ಪಳವನ್ನು ವಶಪಡಿಸಿಕೊಂಡನು. ಮರಾಠರು ಟಿಪ್ಪುವಿನ ವಿರುದ್ಧ ಕಾರ್ಯಚರಣೆ ನಡೆಸಿದರು. ಮರಾಠ ಸೈನ್ಯದ ನಾಯಕತ್ವವನ್ನು ಪರುಶುರಾಮಭಾವು ವಹಿಸಿಕೊಂಡ ಮೇಲೆ ಯುದ್ಧಕ್ಕೆ ಹೆಚ್ಚು ಉತ್ಸುಕತೆ ತೋರಿದನು. ಬ್ರಿಟಿಷರ ಕ್ಯಾಪ್ಟನ್ ಲಿಟ್ಸ್‌ನ ನಾಯಕತ್ವದ ಸೈನ್ಯವು ಕುಮಟದಲ್ಲಿ ಮರಾಠ ಸೈನ್ಯದೊಂದಿಗೆ ಸೇರಿಕೊಂಡಿತು. ಈ ಒಕ್ಕೂಟ ಸೈನ್ಯದ ನೆರವಿನಿಂದ ಪರುಶುರಾಮ ಭಾವು ಹುಬ್ಬಳ್ಳಿ, ಮಿಶ್ರಿಕೋಟೆ, ದೊಡವಾಡ, ಗಜೇಂದ್ರಗಡ, ಸವಣೂರು ಮತ್ತು ಲಕ್ಷ್ಮೇಶ್ವರಗಳನ್ನು ವಶಪಡಿಸಿಕೊಂಡನು. ನಂತರ ಧಾರವಾಡ ಕೋಟೆಗೆ ಮುತ್ತಿಗೆ ಹಾಕಿದನು. ಟಿಪ್ಪುವಿನ ಕಾವಲು ಪಡೆಯು ಬದ್ರೂಜ್-ಜಮಾನ್‌ನ ನಾಯಕತ್ವದಲ್ಲಿ ಕೋಟೆಯ ರಕ್ಷಣೆಗೆ ನಿಂತಿತು. ಕರ್ನಲ್ ಫ್ರೆಡಿರಿಕ್ ಒತ್ತಾಯಕ್ಕೆ ಮಣಿದು ಪರಶುರಾಮ ಬಾವು ಧಾರವಾಡ ಕೋಟೆಯನ್ನು ಮುತ್ತಿದನು. ಟಿಪ್ಪುವಿನ ಕಾವಲು ಪಡೆಯು ತೀವ್ರ ಪ್ರತಿರೋಧ ತೋರಿತು. ೧೭೯೧ ಮಾರ್ಚ್ ೧೩ರಂದು ಫ್ರೆಡರಿಕ್ ಮರಣಿಸಿದ. ಅವನ ಸ್ಥಾನಕ್ಕೆ ಬಂದ ಕ್ಯಾಪ್ಟನ್ ಲಿಟ್ಲೆ ಯುದ್ಧ ಮುಂದುವರಿಸಿದ. ಈ ಸಂಯುಕ್ತ ಸೈನ್ಯದ ಎದುರು ಕಾವಲು ಪಡೆಯು ೨೯ ವಾರಗಳ ಸತತ ಹೋರಾಟ ನಡೆಸಿತು. ೧೦,೦೦೦ವಿದ್ದ ಕಾವಲು ಪಡೆ ೩೦೦೦ಕ್ಕೆ ಇಳಿಯಿತು. ಕೋಟೆಯನ್ನು ರಕ್ಷಿಸಿಕೊಳ್ಳುವುದು

ಕಷ್ಟವೆಂದು ತಿಳಿದುಬಂದಾಗ ಬದ್ರೂಜ್ ಜಮಾನ್ ೧೭೯೧ ಮಾರ್ಚ್ ೩೦ರಂದು ಶತ್ರುವಿಗೆ ಒಪ್ಪಿಸಿದನು.[೮]

ಧಾರವಾಡವನ್ನು ಜಯಿಸಿದ್ದರಿಂದ ಮುಂದೆ ತುಂಗಭದ್ರೆಯ ಸಮೀಪದ ಹಲವು ಪ್ರದೇಶಗಳನ್ನು ಆಕ್ರಮಿಸಲು ಅನುಕೂಲವಾಯಿತು. ರಾಮಗಿರಿ, ಸಂತೆ ಬಿದನೂರು, ಮಾಯಕೊಂಡ ಚಂಗೇರಿಗಳನ್ನು ಹಿಡಿದರು. ಮರಾಠರ ನೌಕಾದಳವು ಕಾರವಾರ ಸಮೀಪದಲ್ಲಿ ಟಿಪ್ಪುವಿಗೆ ಸೇರಿದ ಬಂದರುಗಳನ್ನು ವಶಪಡಿಸಿಕೊಳ್ಳಲು ಮುಂದಾಯಿತು. ಟಿಪ್ಪುವಿನ ಸೈನ್ಯವು ಅವರ ಪ್ರಯತ್ನವನ್ನು ವಿಫಲಗೊಳಿಸಿ ಹಿಮ್ಮೆಟ್ಟಿಸಿತು. ಮರಾಠರ ಹರಿಪಂತನು ಮೈಸೂರು ರಾಜ್ಯದ ಸುಪರ್ದಿಗೆ ಸೇರಿದ್ದ ಬಲಿಷ್ಠ ಕೋಟೆಯಾದ ಸಿರಾವನ್ನು ವಶಪಡಿಸಿಕೊಂಡನು ಹೀಗೆ ಮೂರನೆಯ ಮೈಸೂರು ಯುದ್ಧವು ಜಯಾಪಜಯಗಳ ನಡುವೆ ಸಾಗಿತು.

೪.೨.೩.೩. ಮೂರನೆಯ ಮೈಸೂರು ಯುದ್ಧದ ಅಂತಿಮ ಹಂತ: ಕಾರನ್‌ವಾಲೀಸನು ಯುದ್ಧವನ್ನು ಬಹುಬೇಗ ಅಂತಿಮಗೊಳಿಸಬೇಕೆಂದು ನಿರ್ಧರಿಸಿದನು. ಇದಕ್ಕೆ ಕಾರಣವೂ ಇತ್ತು. ತನ್ನ ಮಿತ್ರಪಡೆಯಲ್ಲಿರುವ ಮರಾಠರು ಮತ್ತು ಹೈದರಾಬಾದಿನ ನಿಜಾಮ ಮನಸ್ಸು ಬದಲಿಸಬಹುದು. ಟಿಪ್ಪುವು ಫ್ರೆಂಚರ ಸಂಬಂಧ ಬೆಳೆಸಿ ಅವರ ನೆರವು ಪಡೆಯಬಹುದು. ಇಂಥ ಸಂದರ್ಭವೇನಾದರೂ ಸೃಷ್ಟಿಯಾದರೆ ಯುದ್ದಗತಿ ಬದಲಾವಣೆಯಾಗುತ್ತದೆ. ಅದರಿಂದಲೇ ಶೀಘ್ರಗತಿಯಲ್ಲಿ ಯುದ್ಧವನ್ನು ಅಂತ್ಯಗೊಳಿಸಿ ಶ್ರೀರಂಗಪಟ್ಟಣವನ್ನು ಹಿಡಿಯಬೇಕು ಎಂದು ಯೋಚಿಸಿದನು. ಟಿಪ್ಪುವು ಬ್ರಿಟಿಷರ ಸೈನ್ಯಕ್ಕೆ ಕಿರುಕುಳ ನೀಡಿದನು. ಆಹಾರ ಪೂರೈಕೆ ಮಾರ್ಗಗಳನ್ನು ತಡೆದನು. ಮೇವು ಸಿಗದಂತೆ ಮಾಡಿದನು. ಬ್ರಿಟಿಷರ ಸೈನ್ಯವು ಸಾಕಷ್ಟು ಕೃಶವಾಯಿತು. ಟಿಪ್ಪುವಿನ ಮಿಂಚಿನ ದಾಳಿಗೆ ಹೆದರಿಯೇ ಮಿತ್ರ ಪಡೆಗಳು ಬೆಂಗಳೂರು ಕಡೆಗೆ ಪ್ರಯಾಣ ಬೆಳೆಸಿದವು. ಮರಾಠ ಸೇನೆ ಸಿರಾದ ಕಡೆಗೆ ತೆರಳಿತು. ನಿಜಾಮನ ಸೈನ್ಯವು ಅಸಾದ್ ಅಲಿ ಖಾನನ ನಾಯಕತ್ವದಲ್ಲಿ ಈಶಾನ್ಯ ದಿಕ್ಕಿಗೆ ಚಲಿಸಿತು.

ಟಿಪ್ಪುವು ಬ್ರಿಟಿಷರನ್ನು ಸಂಪೂರ್ಣವಾಗಿ ಸೋಲಿಸಿ ಅಲ್ಲಿಂದ ಕಾಲ್ತೆಗೆಸಲು ನಿರ್ಧರಿಸಿದನು. ಮತ್ತೆ ಸ್ಥಳೀಯ ರಾಜರ ಒಕ್ಕೂಟ ರಚನೆಗೆ ಮುಂದಾದನು. ಮರಾಠರನ್ನು ತನ್ನ ಕಡೆಗೆ ಸೆಳೆಯಲು ಶಾಂತಿ ಸಂಧಾನದ ಮಾತುಕತೆಗೆ ಆಹ್ವಾನಿಸಿದನು. ಟಿಪ್ಪುವಿನ ನಾಶದ ನಂತರ ಬ್ರಿಟಿಷರ ಗುರಿ ಮರಾಠರ ಮೇಲಿದೆ ಎಂಬುದನ್ನು ಮನವರಿಕೆ ಮಾಡಿಕೊಟ್ಟನು. ಮರಾಠ ನಾಯಕರನ್ನು ಸಂಪರ್ಕಿಸಿ ಸಂಧಿ ಮಾಡಿಕೊಳ್ಳಲು ಟಿಪ್ಪು ಅಪ್ಪಾಜಿರಾಮನನ್ನು ನಿಯೋಜಿಸಿದನು. ನಾನಾಫಡ್ನವೀಸನು ಭಾರಿ ಬೇಡಿಕೆಗಳನ್ನಿಟ್ಟನು. ಟಿಪ್ಪುವಿನ ರಾಜ್ಯದ ಉತ್ತರ ಭಾಗಗಳನ್ನು ಒಪ್ಪಿಸಬೇಕು. ಅಪಾರ ಹಣ ನೀಡಬೇಕು ಎಂದು ಷರತ್ತು ವಿಧಿಸಿದನು. ಟಿಪ್ಪು ಇದಕ್ಕೆ

ನಿರಾಕರಿಸಿದನು. ನಂತರ ಅಪ್ಪಾಜಿರಾಮನು ಹರಿಪಂತನನ್ನು ಸಂಪರ್ಕಿಸಿದನು. ಆದರೆ ಹರಿಪಂತ ಮತ್ತು ನಾನಾಫಡ್ನವೀಸ್ ನಡುವೆ ಅಧಿಕಾರ ವಿಚಾರದಲ್ಲಿ ಭಿನ್ನಾಭಿಪ್ರಾಯ ಮೂಡಿದ್ದರಿಂದ ಟಿಪ್ಪುವಿನ ಪ್ರಯತ್ನ ಫಲಿಸಲಿಲ್ಲ.

ಟಿಪ್ಪು ಹೈದರಾಬಾದಿನ ನಿಜಾಮನನ್ನು ತನ್ನತ್ತ ಸೆಳೆಯಲು ಪ್ರಯತ್ನಿಸಿದನು. ನಿಜಾಮ ಮತ್ತು ಅವನ ಸಲಹೆಗಾರರಾದ ಅಜೀವತ್–ಉಲ್–ಉಮ್ರಾ, ಮೊಹಮದ್ ಅಮೀನ್ ಅರತ್ ಮತ್ತು ತೇಜವಂತ್ ಸಿಂಗ್ ಇವರೊಂದಿಗೆ ಪತ್ರ ವ್ಯವಹಾರ ನಡೆಸಿದನು. ಆದರೆ ಬ್ರಿಟಿಷರು ಸೂಚಿಸುವ ಷರತ್ತುಗಳ ಮೇಲೆಯೇ ಸಂಧಿಯಾಗಬೇಕು ಎಂದು ನಿಜಾಮನು ತಿಳಿಸಿದನು.[೮೩] ಟಿಪ್ಪುವಿನ ಎಲ್ಲ ಪ್ರಯತ್ನಗಳು ವಿಫಲವಾದವು. ಕೊನೆಗೆ ಟಿಪ್ಪು ಫ್ರೆಂಚರ ನೆರವು ಪಡೆಯಲು ಹೆಚ್ಚು ಉತ್ಸುಕತೆ ತೋರಿದನು. ಫ್ರಾನ್ಸಿನಲ್ಲಿ ಮಹಾಕ್ರಾಂತಿ ಸಂಭವಿಸಿದ ಸಮಯವಾದ್ದರಿಂದ ಫ್ರಾನ್ಸಿನಿಂದ ಯಾವುದೇ ಸಹಕಾರ ದೊರೆಯುವ ಭರವಸೆಯೂ ಸಿಗಲಿಲ್ಲ.

ಕಾರನ್‌ವಾಲೀಸನು ಟಿಪ್ಪುವನ್ನು ಸೋಲಿಸಲು ಸೈನ್ಯವನ್ನು ವ್ಯವಸ್ಥೆಗೊಳಿಸಿದ. ಆಹಾರ ಪೂರೈಕೆ ಮತ್ತು ಯುದ್ಧ ಸಾಮಗ್ರಿಗಳನ್ನು ಸಾಕಷ್ಟು ಜಮಾವಣೆ ಮಾಡಿದ. ೧೭೯೧ ಜುಲೈ ೧೫ ರಂದು ಹೊಸೂರು ವಶಪಡಿಸಿಕೊಂಡನು. ನಂತರ ನಂದಿದುರ್ಗವನ್ನು ಹಿಡಿದನು. ೧೭೯೧ ನವೆಂಬರ್‌ನಲ್ಲಿ ಟಿಪ್ಪುವು ಬಾಕರ್ ಸಾಹೇಬ್ ಮತ್ತು ಕಮ್ರೂದ್ದೀನ್ ಖಾನನ ಸಂಗಡ ಸೈನ್ಯ ಕಳುಹಿಸಿ ಕೊಯಮತ್ತೂರು ಗೆದ್ದನು. ಬಾಕರನು ಕರ್ನಾಟಕವನ್ನು ಪ್ರವೇಶಿಸಿ ಪೋರ್ಟ್‌ಸೈಂಟ್ ಜಾರ್ಜ್ ಬಳಿಗೆ ತೆರಳಿದನು. ಅದರ ಸಮೀಪದ ಹಳ್ಳಿಗಳನ್ನು ಸುಟ್ಟು ಅಪಾರ ಸಂಪತ್ತನ್ನು ಕೊಳ್ಳೆ ಹೊಡೆದು ತಂದನು. ಕಾರನ್‌ವಾಲೀಸ್‌ನು ಲೆಫ್ಟಿನೆಂಟ್ ಕರ್ನಲ್ ಸ್ಟುವರ್ಟ್‌ನಿಗೆ ಸಾವನದುರ್ಗ ಗೆಲ್ಲುವಂತೆ ಸೂಚಿಸಿದನು. ಡಿಸೆಂಬರ್ ೧೭ ರಂದು ಕೋಟೆ ವಶವಾಯಿತು. ನಂತರ ಹುತ್ರಿದುರ್ಗ, ಶಿವನಗಿರಿ, ರಾಮಗಿರಿಗಳನ್ನು ವಶಪಡಿಸಿಕೊಂಡನು. ಕಾರನ್‌ವಾಲೀಸನು ಶ್ರೀರಂಗಪಟ್ಟಣ ಹಿಡಿಯಲು ಧಾವಿಸಿದನು. ಮರಾಠರು ಬ್ರಿಟಿಷರ ಪರವಾಗಿಯೇ ಯುದ್ಧ ಮುಂದುವರಿಸಿದರು. ಸಿರಾ, ಪ್ರಾಂತ್ಯದಲ್ಲಿ ತಮ್ಮ ಕಾರ್ಯಾಚರಣೆ ನಡೆಸುತ್ತ ಮುಂದೆ ಸಾಗಿದರು. ಕ್ಯಾಪ್ಟನ್ ಲಿಟ್ಲ ಶಿವಮೊಗ್ಗ ಭಾಗದ ಮೇಲೆ ಸೈನ್ಯ ನುಗ್ಗಿಸಿದನು. ಬಿದನೂರು, ಹೊಳೆ ಹೊನ್ನೂರು ಹಿಡಿಯಲು ಪ್ರಯತ್ನಿಸಿದನು. ಶಿವಮೊಗ್ಗದಲ್ಲಿ ಟಿಪ್ಪು ೭೦೦೦ ಕಾಲ್ದಳ, ೮೦೦ ಅಶ್ವಗಳು, ೧೦ ತೋಪುಗಳನ್ನು ಹೊಂದಿದ್ದ ಸೈನ್ಯ ಇರಿಸಿದ್ದ. ಮಹಮದ್‌ರಾಜಾ ಇದರ ದಳಪತಿಯಾಗಿದ್ದ. ಈ ಸೈನ್ಯದ ನೆರವಿನಿಂದ ಮರಾಠರ ದಾಳಿಯನ್ನು ಹಿಮ್ಮೆಟಿಸಿದನು. ನಂತರ ಮರಾಠ ಸೈನ್ಯವು ಬ್ರಿಟಿಷರ ಮಿತ್ರಕೂಟ ಸೇರಿಕೊಳ್ಳಲು ಶ್ರೀರಂಗಪಟ್ಟಣದ ಕಡೆಗೆ ತೆರಳಿತು.

೧೭೯೨ ಫೆಬ್ರವರಿ ೧ ರಂದು ಬ್ರಿಟಿಷರ ಮಿತ್ರ ಪಡೆಗಳು ಶ್ರೀರಂಗಪಟ್ಟಣದತ್ತ ಹೊರಟವು. ಇದನ್ನು ಗಮನಿಸಿದ ಟಿಪ್ಪು ಕೋಟೆಯನ್ನು ಬಲಪಡಿಸಿದನು. ಶತ್ರು ಸೈನ್ಯಗಳು ಮೇಲುಕೋಟೆ ಮೂಲಕ ಫೆಬ್ರವರಿ ೫ ರಂದು ಫ್ರೆಂಚ್‌ರಾಕ್ಸ್ ಎಂದು ಕರೆಯುತ್ತಿದ್ದ ಪಾಂಡವಪುರ ಸಮೀಪಕ್ಕೆ ಬಂದವು. ಬ್ರಿಟಿಷರ ಸೈನ್ಯದಲ್ಲಿ ೨೨೦೦೦ ಯೋಧರು, ೪೪ ಫೀಲ್ಡ್‌ಗನ್‌ಗಳು, ೨೨ ಗೋಲಂದಾಜು ಘಟಕಗಳು ಇದ್ದವು. ನಿಜಾಮನ ದಳಪತಿ ಸಿಕಂದರ್ ಝಾ ಕೈಕೆಳಗೆ ೧೮೦೦೦ ಅಶ್ವಗಳು, ಹರಿಪಂತನ ನೇತೃತ್ವದಲ್ಲಿ ೧೨೦೦೦ ಕುದುರೆಗಳೂ ಇದ್ದವು. ಟಿಪ್ಪುವಿನ ಕೋಟೆ ಮತ್ತು ಇತರ ಭಾಗಗಳಲ್ಲಿ ೩೦೦ ಫಿರಂಗಿಗಳು, ೪೦೦೦೦ ಪದಾತಿದಳ ಹಾಗೂ ೫೦೦೦ ಅಶ್ವಪಡೆ ಇದ್ದಿತು.[೮೪] ಭೀಕರವಾದ ಯುದ್ಧ ನಡೆಯುವ ಕಾರ್ಮೋಡವು ಕವಿಯಿತು.

ಬ್ರಿಟಿಷ್ ಸೈನ್ಯವನ್ನು ಮೂರು ಭಾಗಗಳಾಗಿ ಮಾಡಲಾಗಿತ್ತು. ೬೦೦೦ ಯುರೋಪಿಯನ್ನರು ೨೪೦೦ ಸಿಪಾಯಿಗಳಿದ್ದ ಬಲಭಾಗವನ್ನು ಮೆಡೋಸ್ ಮುನ್ನಡೆಸುತ್ತಿದ್ದನು. ೧೪೦೦ ಯುರೋಪಿಯನ್ನರು ಮತ್ತು ೨೩೦೦ ಸಿಪಾಯಿಗಳ ಮಧ್ಯ ತಂಡವನ್ನು ಸ್ಟುವರ್ಟ್; ಎಡಭಾಗದ ೫೦೦ ಯುರೋಪಿಯನ್ನರು ಮತ್ತು ೧೨೦೦ ಸಿಪಾಯಿಗಳನ್ನು ಮ್ಯಾಕ್ಸ್‌ವೆಲ್ ನಿರ್ವಹಿಸುತ್ತಿದ್ದನು. ೧೭೯೨ರ ಫೆಬ್ರವರಿ ೬ನೇ ತಾರೀಕು ಬೆಳದಿಂಗಳ ರಾತ್ರಿಯಲ್ಲಿ ಮ್ಯಾಕ್ಸ್‌ವೆಲ್ ಈದ್ಗಾ ಹೊರಕೋಟೆಯ ಕಡೆಗೆ ಸೈನ್ಯ ನುಗ್ಗಿಸಿದನು. ಸೈಯದ್ ಹಮೀದ್ ಇದರ ಕಾವಲುಕಾರನಾಗಿದ್ದ. ಭೀಕರ ಕಾಳಗ ನಡೆಯಿತು. ಹಮೀದ್ ಕಡೆ ೪೦೦ ಸೈನಿಕರು ಸತ್ತರು ಬ್ರಿಟಿಷರ ಕಡೆ ೮೦ ಸೈನಿಕರು ೧೧ ಅಧಿಕಾರಿಗಳು ಮೃತರಾದರು. ಬ್ರಿಟಿಷರು ವಿಜಯ ಸಾಧಿಸಿದರು.

ಮಧ್ಯದ ಸೇನಾ ತುಕಡಿಯನ್ನು ಮತ್ತೆ ಮೂರು ಭಾಗಗಳಾಗಿ ವಿಭಜಿಸಿದರು. ಮುಂಚೂಣಿಯ ಸೈನ್ಯವು ಮ್ಯಾಕ್ಸ್‌ವೆಲ್‌ನ ನಾಯಕತ್ವದಲ್ಲಿಯೂ, ಮಧ್ಯದ ತುಕಡಿಯೂ ಸ್ಟುವರ್ಟ್‌ನೂ, ಹಿಂಚೂಣಿಯ ಪಡೆಯನ್ನು ಕಾರನ್‌ವಾಲೀಸನು ಮುನ್ನಡೆಸುತ್ತಿದ್ದರು. ಇವರ ಸೈನ್ಯಗಳು ಟಿಪ್ಪುವಿನ ಅಶ್ವಪಡೆ ಗೆದುರಾಗಿ ಕಾದಿದ್ದವು. ಟಿಪ್ಪುವಿನ ಸೈನಿಕರು ರಾಕೆಟ್‌ಗಳ ದಾಳಿ ನಡೆಸಿದರು. ಮದ್ದುಗುಂಡುಗಳ ಸುರಿಮಳೆ ನಡೆಸಲಾಯಿತು. ಆದರೂ ಮೈಸೂರು ಸೇನೆ ವಿಫಲವಾಯಿತು. ಬ್ರಿಟಿಷರು ನಗರವನ್ನು ಹಿಡಿದರು. ದರಿಯಾದೌಲತ್ ಬಳಿ ಬೀಡುಬಿಟ್ಟಿದ್ದ ಕ್ಯಾಪ್ಟನ್ ಹಂಟರ್‌ನನ್ನು ಟಿಪ್ಪು ಸೈನ್ಯವು ದ್ವೀಪವನ್ನೇ ತೊರೆದು ಹೋಗುವಂತೆ ಮಾಡಿದವು. ಅವನು ಕಾರವಾಲೀಸನ ಬಳಿ ಸೇರಿದನು. ಮ್ಯಾಕ್ಸ್‌ವೆಲ್, ಸ್ಟುವರ್ಟ್ ಇಬ್ಬರೂ ಕಾವೇರಿ ನದಿಯನ್ನು ದಾಟಿ ದ್ವೀಪವನ್ನು ಪ್ರವೇಶಿಸಿದರು. ಗಂಜಾಂ ಪಟ್ಟಣದ ಎದುರಿಗಿದ್ದ ಲಾಲ್‌ಬಾಗ್ ಬಳಿ ನಿಂತಿದ್ದ ಸ್ಟುವರ್ಟ್‌ನ ಸೈನ್ಯದೊಂದಿಗೆ ಟಿಪ್ಪುವಿನ ಸೈನ್ಯ ಹೋರಾಟ ನಡೆಸಿತು. ಕಾರನ್‌ವಾಲೀಸನು ಕರಿಘಟ್ಟದಿಂದ ಸ್ಟುವರ್ಟ್ ನೆರವಿಗೆ ಮತ್ತಷ್ಟು ಸೈನ್ಯ ಕಳುಹಿಸಿದ. ಟಿಪ್ಪುವಿಗೆ ಹಿನ್ನಡೆಯಾಯಿತು. ಫ್ರೆಂಚ್ ಸೈನಿಕರೂ ಹೋರಾಡಿದರು

ಸಫಲವಾಗಲಿಲ್ಲ. ಬ್ರಿಟಿಷರು ಕೋಟೆಯ ಸುತ್ತ ಒಳಗೆ ಹೆಚ್ಚು ಭದ್ರತೆ ಏರ್ಪಡಿಸಿಕೊಂಡಿದ್ದರು. ಟಿಪ್ಪುವಿನ ಕಾವೇರಿ ನದಿಯ ಉತ್ತರ ಭಾಗ ಬ್ರಿಟಿಷರ ಪಾಲಾಯಿತು. ಬ್ರಿಟಿಷರ ಕಡೆ ೧೫೦೦ ಸೈನಿಕರು ಟಿಪ್ಪುವಿನ ಕಡೆ ೨೦೦೦ ಸೈನಿಕರು ಮರಣಿಸಿದರು. ಟಿಪ್ಪುವಿನ ಸುಂದರ ಉದ್ಯಾನವನ ನಾಶಹೊಂದಿತು.[೪೫]

ಕಾರನ್‌ವಾಲೀಸ್‌ನು ಶ್ರೀರಂಗಪಟ್ಟಣ ಕೋಟೆಯನ್ನು ಪೂರ್ಣಪ್ರಮಾಣದಲ್ಲಿ ವಶಪಡಿಸಿಕೊಳ್ಳಲು ಸಾಕಷ್ಟು ಸಿದ್ದತೆ ಮಾಡಿಕೊಂಡನು. ತನ್ನ ಎಲ್ಲಾ ಸೇನಾಧಿಕಾರಿಗಳಿಗೆ ನಿರ್ಣಾಯಕ ಯುದ್ಧಕ್ಕೆ ಸಿದ್ಧರಾಗುವಂತೆ ನಿರ್ದೇಶನ ನೀಡಿದನು. ಶ್ರೀರಂಗಪಟ್ಟಣದ ಕೋಟೆಯ ಗೋಡೆಯನ್ನು ಒಡೆಯಲು ಬ್ರಿಟಿಷರು ಗೋಲಂದಾಜು, ಬತೇರಿಗಳನ್ನು ನಿರ್ಮಿಸಿದರು. ಯುದ್ಧವು ಅಪಾಯಕಾರಿ ಹಂತ ತಲುಪಿದನ್ನು ಅರಿತು ಟಿಪ್ಪು ಬ್ರಿಟೀಷರೊಂದಿಗೆ ಸಂಧಿ ಮಾಡಿಕೊಳ್ಳಲು ತೀರ್ಮಾನಿಸಿದನು. ಅದಕ್ಕಾಗಿ ಪತ್ರ ವ್ಯವಹಾರ ನಡೆಸಿದನು. ೧೭೯೨ ಫೆಬ್ರವರಿಯಲ್ಲಿ ಶ್ರೀರಂಗಪಟ್ಟಣ ಒಪ್ಪಂದ ಜರುಗಿತು. ಮೂರನೆಯ ಯುದ್ಧವು ನಿಂತಿತು.

೪.೨.೪. ನಾಲ್ಕನೆಯ ಆಂಗ್ಲೋ-ಮೈಸೂರು ಯುದ್ಧ ೧೭೯೯

ವೆಲ್ಲಸ್ಲಿಯನ್ನು ೧೭೯೭ ಅಕ್ಟೋಬರ್‌ನಲ್ಲಿ ಗೌರ್‍ನರ್ ಜನರಲ್ ಆಗಿ ನೇಮಿಸಿ ಭಾರತಕ್ಕೆ ಕಳುಹಿಸಲಾಯಿತು. ೧೭೯೮ ಮೇ ೧೭ರಂದು ಕಲ್ಕತ್ತಕ್ಕೆ ಬಂದಿಳಿದನು. ಈ ಸಮಯದಲ್ಲಿ ಟಿಪ್ಪು ಮತ್ತು ಬ್ರಿಟಿಷರ ನಡುವೆ ಉತ್ತಮವಾದ ಸಂಬಂಧವಿತ್ತು. ಆದರೆ ವೆಲ್ಲಸ್ಲಿ ಬಂದ ಒಂದೇ ವರ್ಷದಲ್ಲಿ ಟಿಪ್ಪುವನ್ನು ಸರ್ವನಾಶ ಮಾಡಿತು. ವೆಲ್ಲಸ್ಲಿ ಭಾರತಕ್ಕೆ ಆಗಮಿಸಿದಾಗ ಟಿಪ್ಪು ಶುಭಾಶಯ ಪತ್ರ ಕಳುಹಿಸಿದ್ದನು. ಆದರೂ ಕ್ಷಿಪ್ರಗತಿಯಲ್ಲಿ ಅವನೊಂದಿಗೆ ಮತ್ತೆ ನಾಲ್ಕನೆಯ ಮೈಸೂರು ಯುದ್ಧ ಪ್ರಾರಂಭವಾಯಿತು.

ಭಾರತದ ಬ್ರಿಟಿಷರ ಹಿತಾಸಕ್ತಿಯನ್ನು ನೆರವೇರಿಸುವ ನಿಟ್ಟಿನಲ್ಲಿ ಅವರಿಗೆ ಅಡ್ಡಗಾಲಾಗಿದ್ದ ಟಿಪ್ಪುವನ್ನು ಸರ್ವನಾಶ ಮಾಡಲೇ ಬೇಕೆಂದು ತೀರ್ಮಾನಿಸಿಯೇ ವೆಲ್ಲಸ್ಲಿ ಭಾರತಕ್ಕೆ ಬಂದಿದ್ದನು. ಅವನ ಈ ನಿರ್ಧಾರಕ್ಕೆ ಹಲವು ಅಂಶಗಳು ಕಾರಣವಾಗಿದ್ದವು. ಟಿಪ್ಪುವಿನ ಶಕ್ತಿ-ಸಾಮರ್ಥ್ಯಗಳು ಅಧಿಕವಾಗಿತ್ತು. ರಾಜ್ಯದ ಹಣಕಾಸು ಪರಿಸ್ಥಿತಿ ಉತ್ತಮವಾಗಿತ್ತು, ಶಾಂತಿ ನೆಲೆಸಿತ್ತು. ಸೈನ್ಯವು ಶಿಸ್ತುಬದ್ಧವಾಗಿತ್ತು. ಶ್ರೀರಂಗಪಟ್ಟಣ ಒಪ್ಪಂದವು ರೂಪಿಸಿದ್ದ ಶಕ್ತಿ ಸಮತೋಲನವು ಅಸ್ತವ್ಯಸ್ತವಾಗುವ ಗತಿ ಬಂದೊದಗುತ್ತಿತ್ತು. ಈ ಎಲ್ಲಕ್ಕೂ ಕಳಸವಿಟ್ಟಂತೆ ಟಿಪ್ಪು ದೇಶಿಯ ಹಾಗೂ ವಿದೇಶಗಳೊಂದಿಗೆ ಸಂಪರ್ಕ ಹೊಂದಿದ್ದನು. ಬ್ರಿಟಿಷರ ಶತ್ರುಗಳಾದ ಫ್ರೆಂಚರೊಂದಿಗೆ ಹೆಚ್ಚು ಸಂಬಂಧ ಬೆಳೆಸಿದನು. ಬ್ರಿಟಿಷರ ವಿರುದ್ಧ ಭಾರತೀಯ ಶಕ್ತಿಗಳನ್ನು ಪ್ರಚೋದಿಸುತ್ತಿದ್ದನು. ನಿಜಾಮ ಮತ್ತು ಮರಾಠರೊಂದಿಗೆ

ಸಂಪರ್ಕ ಬೆಳೆಸಿದನು. ಅಫ್ಘಾನಿಸ್ಥಾನದ ಜಮಾನ್‌ಷಹಾನು ಭಾರತದ ಮೇಲೆ ದಂಡೆತ್ತಿ ಬರುವಂತೆ ಪ್ರಚೋದಿಸಿದನು.[೮೬] ಇವೆಲ್ಲ ಬ್ರಿಟಿಷರ ಕ್ರೋಧಕ್ಕೆ ಕಾರಣವಾದವು.

ಟಿಪ್ಪುವಿನ ಮೇಲೆ ಬ್ರಿಟಿಷರ ಕ್ರೋಧಕ್ಕೆ ತಕ್ಷಣದ ಕಾರಣ ಬ್ರಿಟಿಷರನ್ನು ಇಲ್ಲಿಂದ ಎದುರಿಸಿ ಓಡಿಸಲು ಫ್ರೆಂಚರ ಸಹಾಯ ಪಡೆಯಲು ಮಾರಿಷಸ್ ದ್ವೀಪಕ್ಕೆ ಒಂದು ರಾಯಬಾರಿ ತಂಡವನ್ನು ಕಳುಹಿಸಿದನು. ಸಾಕಷ್ಟು ಯುದ್ಧ ಸನ್ನದ್ಧತೆ ಮಾಡತೊಡಗಿದ. ಫ್ರೆಂಚರು ಟಿಪ್ಪುವಿನ ಕೋರಿಕೆ ಮನ್ನಿಸಿ ಒಂದು ಸಣ್ಣ ಸೇನಾತುಕಡಿಯನ್ನು ಕಳುಹಿಸಿದರು. ಫ್ರೆಂಚ್ ಗೌವರ್ನರ್ ಮಲಾರ್ಟಿಕನ ಘೋಷಣೆಯನ್ನು ಟಿಪ್ಪು ಒಪ್ಪಿಕೊಂಡನು. ಇದೇ ಸಮಯದಲ್ಲಿ ಯುರೋಪ್ ರಾಜಕಾರಣವು ಪೂರಕ ಪರಿಣಾಮ ಬೀರಿತು. ನೆಪೋಲಿಯನ್ ಬೋನಾಪಾರ್ಟೆ ಬ್ರಿಟಿಷರಿಗೆ ಬಾಧಿಸಿದನು. ಭಾರತದಲ್ಲಿ ಫ್ರೆಂಚರ ವರ್ಚಸ್ಸು ದಿನೇ ದಿನೇ ಹೆಚ್ಚುತ್ತಿತ್ತು. ಟಿಪ್ಪುವಿನ ಸಂಪರ್ಕದಲ್ಲಿದ್ದ ರೇಮಂಡನ ೧೫೦೦೦ ಪ್ರಬಲ ಸೈನ್ಯ ಕೂಡಿ ಯುದ್ಧ ಯೋಜನೆಯನ್ನು ರೂಪಿಸಿದರೆ ಅವು ಗಣನೀಯ ಪ್ರಮಾಣದಲ್ಲಿ ಈಡೇರಿ ಬಿಡುತ್ತಿದ್ದವು.[೮೭]

೧೭೯೨ರಲ್ಲಿ ನಡೆದ ಶ್ರೀರಂಗಪಟ್ಟಣ ಒಪ್ಪಂದದಲ್ಲಿ ಟಿಪ್ಪು ತನಗೆ ಒದಗಿಬಂದ ಸೋಲು, ಅಪಮಾನ, ಯುದ್ಧ ನಷ್ಟಗಳಿಂದ ಬೇಸರಗೊಂಡಿದ್ದ ಅವನು ಮುಂದೆಯೂ ಸುಮ್ಮನಿರಲಾರ ನೆಂಬುದು ಬ್ರಿಟಿಷರಿಗೆ ತಿಳಿದ್ದಿತು. ಅವನು ಸೈನಿಕ ಮತ್ತು ಆರ್ಥಿಕ ಸಹಾಯವನ್ನು ವಿದೇಶಗಳಿಂದ ಕೇಳುತ್ತಿದ್ದುದು ಮತ್ತೆ ಬಲಿಷ್ಠನಾಗಿ ತಮ್ಮನ್ನು ಹತ್ತಿಕ್ಕಲು ಎಂಬುದನ್ನು ಅರಿತುಕೊಂಡರು. ಟಿಪ್ಪು ಸ್ವತಂತ್ರ ರಾಜನಾಗಿದ್ದು ಅವನು ಯಾರೊಂದಿಗಾದರೂ ಒಪ್ಪಂದ ಮಾಡಿಕೊಳ್ಳಲು ಹಾಗೂ ವಿದೇಶಗಳಿಗೆ ರಾಯಭಾರಿಗಳನ್ನು ಕಳುಹಿಸಲು ಅಂತರರಾಷ್ಟ್ರೀಯ ನಿಯಾಮಾವಳಿಯ ಪ್ರಕಾರ ಹಿಂಜರಿಯಬೇಕಾಗಿರಲಿಲ್ಲ. ಆದರೂ ಟಿಪ್ಪು ಫ್ರೆಂಚರ ನೆರವು ಪಡೆಯಲು ಯತ್ನಿಸಿರುವ ಒಂದೇ ಕಾರಣಕ್ಕೆ ಅವನ ಮೇಲೆ ಯುದ್ಧ ಹೂಡಲು ವೆಲ್ಲಸ್ಲಿ ಯೋಚಿಸಿದ್ದನು.

ವೆಲ್ಲಸ್ಲಿಯು ೧೭೯೮ ಜೂನ್ ೨೦ ರಂದು ಜನರಲ್ ಹ್ಯಾರಿಸ್‌ಗೆ ತನ್ನ ಯುದ್ಧ ಆರಂಭಿಸುವ ನಿರ್ಧಾರ ತಿಳಿಸಿದನು. ಕರ್ನಾಟಿಕ್‌ನಲ್ಲಿದ್ದ ಸೇನಾಪಡೆಯು ಮೈಸೂರು ಕಡೆಗೆ ಚಲಿಸಲು ಆದೇಶವಿತ್ತನು.[೮೮] ಮೊದಲು ಮಲಬಾರ್ ಕರಾವಳಿಯಲ್ಲಿ ಇನ್ನೂ ಟಿಪ್ಪುವಿನ ವಶ ದಲ್ಲಿದ್ದ ಸ್ಥಳಗಳನ್ನು ವಶಪಡಿಸಿಕೊಳ್ಳುವುದು; ಎರಡನೆಯದಾಗಿ ಟಿಪ್ಪುವಿನ ರಾಜಧಾನಿಯ ಮೇಲೆ ಮುತ್ತಿಗೆ ಹಾಕಿ ಅವನು ಕರಾವಳಿಯ ಭಾಗಗಳನ್ನು ಬ್ರಿಟಿಷರಿಗೆ ಒಪ್ಪಿಸುವಂತೆ ಬಲಾತ್ಕರಿಸುವುದು; ಮೂರನೆಯದಾಗಿ ಟಿಪ್ಪುವು ಯುದ್ಧ ವೆಚ್ಚಗಳನ್ನು ಭರಿಸುವಂತೆ ಮಾಡುವುದು; ನಾಲ್ಕನೆಯದಾಗಿ ಅವನ ಆಸ್ಥಾನದಲ್ಲಿ ಖಾಯಂ ರೆಸಿಡೆಂಟ್‌ನನ್ನು ಇರಿಸಿಕೊಳ್ಳುವುದು; ಕೊನೆಯದಾಗಿ ಅವನು ತನ್ನ ಸೈನ್ಯದಲ್ಲಿರುವ ಎಲ್ಲ ಫ್ರೆಂಚ್ ಸೈನಿಕರನ್ನು ಹೊರಹಾಕುವಂತೆ ಮಾಡುವುದು.

ವೆಲ್ಲಸ್ಲಿಯು ತಕ್ಷಣವೇ ಟಿಪ್ಪುವಿನ ಮೇಲೆ ಯುದ್ಧ ಘೋಷಿಸಲಿಲ್ಲ. ಏಕೆಂದರೆ ಯುರೋಪಿನ ಶಕ್ತಿ ರಾಜಕೀಯವನ್ನು ಗಮನಿಸಿಯೇ ಮುಂದಿನ ನಿರ್ಧಾರ ತೆಗೆದುಕೊಳ್ಳಬೇಕಾಗಿತ್ತು. ಅಲ್ಲಿ ಇಂಗ್ಲೆಂಡ್ ಮಿತ್ರ ಪಡೆಗಳ ಸಖ್ಯವಹಿಸಿ ಫ್ರಾನ್ಸಿನ ವಿರುದ್ಧ ಯುದ್ಧದಲ್ಲಿ ಭಾಗಿಯಾಗಿತ್ತು. ಭಾರತದಲ್ಲಿ ಒಂದು ಯುದ್ಧವಾದರೆ ಯುರೋಪಿಯನ್ ರಾಜಕೀಯದಲ್ಲಿ ಆಗುವ ಪರಿಣಾಮಗಳನ್ನು ಗಮನಿಸಿಯೇ "ಬಹಿರಂಗ ಕ್ಷಮಾಪಣೆ" ಕೇಳಲು ಟಿಪ್ಪುವಿಗೆ ಅವಕಾಶ ಕೊಡಬೇಕೆಂದು ಹ್ಯಾರಿಸ್ ಅಪೇಕ್ಷಿಸಿದನು.[೮೯] ಟಿಪ್ಪುವನ್ನು ಯುದ್ಧಕ್ಕೆ ಪ್ರಚೋದಿಸಿದರೆ ಫ್ರೆಂಚರು ಕೆರಳಿ ಅದನ್ನು ಜೀವಂತವಾಗಿಸುವರು ಎಂದು ಭಾವಿಸಲಾಯಿತು.[೯೦] ಜೊತೆಗೆ ಬ್ರಿಟಿಷರು ಪೂರ್ಣವಾಗಿ ಯುದ್ಧ ಸಿದ್ಧತೆ ಮಾಡಿಕೊಂಡಿರಲಿಲ್ಲ. ಆಹಾರದ ಅಭಾವವಿತ್ತು. ಮರಾಠರು ಮತ್ತು ನಿಜಾಮರು ಇನ್ನೂ ದುರ್ಬಲರಾಗಿದ್ದರು ಮತ್ತು ಕಂಪನಿಯ ಆದಾಯ ಕುಸಿತ ಕಂಡಿತ್ತು. ಈ ಕಾರಣದಿಂದಲೇ ಸ್ವಲ್ಪ ದಿನಗಳ ಮಟ್ಟಿಗಾದರೂ ಯುದ್ಧವನ್ನು ಮುಂದೂಡಿ ಯುದ್ಧ ಸಿದ್ಧತೆ ಮಾಡಿಕೊಳ್ಳಲು ವೆಲ್ಲಸ್ಲಿ ನಿರ್ಧರಿಸಿದನು. ಬ್ರಿಟಿಷರ ನೌಕಾಪಡೆಯು ಪಶ್ಚಿಮ ಕರಾವಳಿಯಲ್ಲಿ ಕಟ್ಟೆಚ್ಚರದಿಂದಿರಬೇಕೆಂದು ಆದೇಶಿಸಿದನು. ಮದರಾಸು ತುರ್ತು ಸಂದೇಶ ನೀಡಿ ಯುದ್ಧ ಸಿದ್ಧತೆಗಳನ್ನು ಚುರುಕುಗೊಳಿಸುವಂತೆ ಆದೇಶ ನೀಡಿದನು. ಬಂಗಾಳದಿಂದ ಹೆಚ್ಚು ಸೈನ್ಯವನ್ನು ಕಳುಹಿಸಿದನು.

ವೆಲ್ಲಸ್ಲಿಯು ತುರ್ತಾಗಿ ಯುದ್ಧ ಸಿದ್ದತೆ ಮಾಡುತ್ತಲೇ ಹೈದರಾಬಾದಿನ ನಿಜಾಮ ಮತ್ತು ಮರಾಠರೊಂದಿಗೆ ಮೈತ್ರಿ ಒಪ್ಪಂದಗಳನ್ನು ಏರ್ಪಡಿಸಿಕೊಂಡನು. ಹೈದರಾಬಾದಿನಲ್ಲಿದ್ದ ಫ್ರೆಂಚ್ ಸೇನೆಯನ್ನು ವಿಸರ್ಜಿಸಿ ನಿಜಾಮನೊಂದಿಗೆ ಸಹಾಯಸೈನ್ಯ ಒಪ್ಪಂದವನ್ನು ಮಾಡಿಕೊಳ್ಳಲು ಮುಂದಾದನು. ೧೭೯೮ ಜುಲೈ ೮ ರಂದು ಕಿರ್ಕ್‌ಪ್ಯಾಟ್ರಿಕ್‌ಗೆ ಒಂದು ಪತ್ರ ಬರೆದು ಫ್ರೆಂಚ್ ಸೈನ್ಯವನ್ನು ವಿಸರ್ಜಿಸುವಂತೆ ತಿಳಿಸಿದನು. ೧೭೯೮ ಆಗಸ್ಟ್ ೧೯ರಂದು ರೆಸಿಡೆಂಟ್‌ನು ವೆಲ್ಲಸ್ಲಿಗೆ ಪತ್ರ ಬರೆದು ನಿಜಾಮನು ಟಿಪ್ಪುವಿನ ವಿರುದ್ಧ ಬ್ರಿಟಿಷರ ಪರವಾಗಿ ಸೇರಿಕೊಳ್ಳುವನೆಂದೂ ತಿಳಿಸಿದನು.[೯೧] ನಿಜಾಮನು ಸಹಾಯಕ ಸೈನ್ಯ ಪದ್ಧತಿಗೆ ಸಹಿ ಮಾಡಿದನು. ೬೦೦೦ ಬ್ರಿಟಿಷ್ ಸೈನ್ಯವನ್ನು ಹೈದರಾಬಾದಿನಲ್ಲಿ ಇರಿಸುವುದೆಂತಾಯಿತು. ೧೭೯೮ ಅಕ್ಟೋಬರ್ ೨೨ರಂದು ಫ್ರೆಂಚ್ ಸೈನ್ಯವನ್ನು ವಿಸರ್ಜಿಸಲಾಯಿತು. ವೆಲ್ಲಸ್ಲಿಯು ಮರಾಠರನ್ನು ಒಪ್ಪಂದಕ್ಕೆ ಆಹ್ವಾನಿಸಿದನು. ಎಲ್ಲಾ ಶಕ್ತಿಗಳೂ ಒಂದುಗೂಡಿದರೆ ಟಿಪ್ಪುವನ್ನು ನಾಶ ಮಾಡಬಹುದೆಂದು ಬಯಸಿದನು. ಮರಾಠ ಪೇಶ್ವೆಯು ಒಪ್ಪಂದಕ್ಕೆ ಸಮ್ಮತಿಸಬೇಕು ಹಾಗೂ ಟಿಪ್ಪುವಿನ ವಿರುದ್ಧದ ಯುದ್ಧದಲ್ಲಿ ಭಾಗವಹಿಸುವಂತೆ ಒಲಿಸಬೇಕೆಂದು ಪಾಮರ್‌ಗೆ ವೆಲ್ಲಸ್ಲಿಯು ಸೂಚಿಸಿದನು. ಆದರೆ ಬಾಜಿರಾಯನು ಅದಕ್ಕೆ ಸಮ್ಮತಿಸಲಿಲ್ಲ.[೯೨] ಟಿಪ್ಪುವಿನ ವಿರುದ್ಧ ನಡೆಸುವ ಯಾವುದೇ ಯುದ್ಧದಲ್ಲಿ ಭಾಗವಹಿಸುವುದಿಲ್ಲ ಎಂದು ತಿಳಿಸಿದನು.

ಟಿಪ್ಪುವು ಮರಾಠರನ್ನು ಬ್ರಿಟಿಷರಿಂದ ಪ್ರತ್ಯೇಕಿಸಲು ಪ್ರಯತ್ನಿಸಿದ. ೧೭೯೮ರಲ್ಲಿಯೇ ಪುಣೆಗೆ ತನ್ನ ವಕೀಲನನ್ನು ಕಳುಹಿಸಿದ್ದನು. ಬಾಜಿರಾಯ ಮತ್ತು ಸಿಂದಿಯಾ ಟಿಪ್ಪುವಿನ ನೆರವು ಪಡೆಯಲು ಉತ್ಸುಕರಾಗಿದ್ದರು. ಇದರ ಸಂಬಂಧವಾಗಿ ಚರ್ಚಿಸಲು ತಮ್ಮ ವಕೀಲರನ್ನು ಕಳುಹಿಸಿದ್ದರು.[೯೩] ಆಂಗ್ಲೋ ಮೈಸೂರು ಯುದ್ಧವೇನಾದರೂ ಸಂಭವಿಸಿದರೆ ಮರಾಠರು ನೆರವು ನೀಡದಿದ್ದರೂ ಪರವಾಗಿಲ್ಲ, ತಟಸ್ಥರಾಗಿರಬೇಕೆಂದು ಬಯಸಿದನು. ಆದರೆ ನಾನಾಪಟ್ನವೀಸನು ಬ್ರಿಟಿಷರಿಗೆ ನೆರವು ನೀಡುವ ಭರವಸೆ ಕೊಟ್ಟನು. ಟಿಪ್ಪುವು ಮರಾಠರಿಗೆ ಏನೇ ಪ್ರಚೋದನೆ ನೀಡಿದರೂ ಮರಾಠರ ವಚನಕ್ಕೆ ಬದ್ಧರಾಗಿದ್ದಾರೆ ಎಂದು ಪಾಮರನಿಗೆ ತಿಳಿಸಿದನು.[೯೪] ಟಿಪ್ಪುವಿನ ವಕೀಲರನ್ನು ವಜಾ ಮಾಡುವಂತೆ ಬಾಜೀರಾಯನಿಗೆ ಒತ್ತಾಯಿಸಿದನು. ಬಾಜೀರಾಯ, ಸಿಂದಿಯಾ ಮತ್ತು ಟಿಪ್ಪು ಮೂವರೂ ಬ್ರಿಟಿಷರ ವಿರುದ್ಧವಾಗಿ ಪರಸ್ಪರ ಒಂದು ಸಹಕಾರ ಯೋಜನೆಯನ್ನು ಸಿದ್ಧಪಡಿಸಿಕೊಂಡಿದ್ದರು.

ಟಿಪ್ಪುವಿನ ರಾಜಕಾರಣದ ಮಜಲುಗಳನ್ನು ಗಮನಿಸಿದ ವೆಲ್ಲಸ್ಲಿಯು ಇಲ್ಲಿನ ಬೇರೆ ಬೇರೆ ರಾಜರನ್ನು ಸಂಪರ್ಕಿಸಿದನು. ಬಿರೂರಿನ ರಾಜನೊಂದಿಗೆ ವ್ಯವಹರಿಸಿದನು. ಸಿಂಧಿಯಾನಿಗೆ ವಿರುದ್ಧವಾಗಿ ನಿಜಾಮನೊಂದಿಗೆ ರಕ್ಷಣಾ ಸಂಧಿ ಮಾಡಿಕೊಂಡನು. ತಿರುವಾಂಕೂರಿನ ರಾಜನ ಸಹಕಾರ ಕೋರಿದನು. ಟಿಪ್ಪು ಫ್ರೆಂಚರೊಂದಿಗೆ ನಿಕಟ ಸಂಪರ್ಕ ಹೊಂದದಂತೆ ಎಚ್ಚರಿಕೆ ನೀಡುವಂತೆ ಟರ್ಕಿ ಸುಲ್ತಾನನ ಮೇಲೆ ಒತ್ತಡ ಹೇರಲಾಯಿತು. ಇದರ ಉದ್ದೇಶ ಯುದ್ಧದಲ್ಲಿ ಟಿಪ್ಪುವಿಗೆ ಯಾರ ನೆರವು ಸಿಗದಂತೆ ಮಾಡಿ ಏಕಾಂಗಿಯಾಗಿ ಹೋರಾಡುವಂತೆ ಮಾಡುವುದು. ಅವನನ್ನು ಸುಲಭವಾಗಿ ಸೋಲಿಸುವುದು.

ಬ್ರಿಟಿಷರು ತಮ್ಮ ಮಿಲಿಟರಿ ಸಿದ್ಧತೆಯನ್ನು ಸಾಕಷ್ಟು ರಹಸ್ಯವಾಗಿಯೇ ನಡೆಸಿದರು. ಟಿಪ್ಪುವಿನ ಪಾಲಿಗೆ ಅದು ಎಲ್ಲವೂ ಸಹಜವಾದ ಸ್ಥಿತಿಯಲ್ಲಿಯೇ ಇದೆಯೆಂಬ ಭ್ರಮೆಯನ್ನುಂಟು ಮಾಡುವಂತಿತ್ತು. ಇಲ್ಲಿ ಗಮನಿಸಬಹುದಾದ ಎರಡು ಅಂಶಗಳೆಂದರೆ ಬ್ರಿಟಿಷರು ಮಾರಿಷಸ್ ಘೋಷಣೆಯ ಬಗ್ಗೆ ಟಿಪ್ಪುವಿನ ಬಳಿ ಚಕಾರವೆತ್ತದೆ ಇದ್ದದ್ದು ಮತ್ತು ಕಗ್ಗಂಟಾಗಿ ಉಳಿದಿದ್ದ ವೈನಾಡು ಪ್ರದೇಶದ ವ್ಯಾಜ್ಯವನ್ನು ಟಿಪ್ಪುವಿನ ಪರವಾಗಿ ವೆಲ್ಲಸ್ಲಿ ತೀರ್ಮಾನಿಸಿದ್ದು. ಈ ಎರಡು ಸಂಗತಿಗಳು ಬ್ರಿಟಿಷರು ನಡೆಸುತ್ತಿದ್ದ ಕಾರಸ್ಥಾನಗಳನ್ನು ಮರೆಮಾಡಲು ಹೂಡಿದ್ದ ತಂತ್ರವಾಗಿತ್ತು.[೯೫] ವೈನಾಡಿನ ಪ್ರಶ್ನೆಯ ಇತ್ಯರ್ಥವು ಒಂದು ನಾಟಕವಾಗಿತ್ತು ಮತ್ತು ಮಾರಿಷಸ್ ದ್ವೀಪಕ್ಕೆ ಟಿಪ್ಪುವು ಕಳುಹಿಸಿದ ನಿಯೋಗವನ್ನು ಕುರಿತು ಬ್ರಿಟಿಷರು ಒಂದು ಸಣ್ಣ ಪ್ರತಿಭಟನೆ ತೋರಿದಂತೆಯೂ ಕಾಣಲಿಲ್ಲ. ಇವೆಲ್ಲವು ಬ್ರಿಟಿಷರು ಟಿಪ್ಪುವನ್ನು ನಂಬಿಸಲು ಮಾಡಿದ ರಣತಂತ್ರಗಳು.

ವೆಲ್ಲಸ್ಲಿಯು ತನ್ನೆಲ್ಲ ಯುದ್ಧಸಿದ್ಧತೆಗಳು ಮುಗಿದ ಮೇಲೆ ಟಿಪ್ಪುವಿನ ರಾಯಭಾರ ಸಂಬಂಧಗಳನ್ನು ಪ್ರಶ್ನಿಸತೊಡಗಿದನು. ೧೭೯೮ ನವೆಂಬರ್ ೮ರಂದು ಟಿಪ್ಪುವಿಗೆ ಪತ್ರ ಬರೆದು,

ಅವನು ಫ್ರೆಂಚರೊಂದಿಗೆ ಸಂಬಂಧ ಸಾಧಿಸಿರುವುದನ್ನು ಮೊದಲಿಗೆ ಆಕ್ಷೇಪಿಸಿದನು. ನಿಮ್ಮ ಮಿತ್ರರು ನಮ್ಮ ಪರಮವೈರಿಗಳು. ಅವರು ಬ್ರಿಟಿಷ್ ಚಕ್ರಾಧಿಪತ್ಯದೊಂದಿಗೆ ಅನ್ಯಾಯಯುತ ಯುದ್ಧದಲ್ಲಿ ತೊಡಗಿದ್ದಾರೆ. ಅವರ ಜೊತೆಗೆ ಟಿಪ್ಪು ಸಂಬಂಧಪಿರಿಸಿಕೊಂಡರೆ ನಿಮಗೆ ಮಾರಕವಾಗಬಹುದೆಂದು ಬೆದರಿಕೆ ಹಾಕಿದನು.[೯೬] ಮೇಜರ್ ಡೋವ್‌ಟನ್‌ನನ್ನು ನಮಗೆ ಒಪ್ಪಿಸಬೇಕು ಬ್ರಿಟಿಷರ ಹಕ್ಕೊತ್ತಾಯಗಳನ್ನು ತಪ್ಪದೆ ಪೂರೈಸಿದರೆ ಮಾತ್ರ ನಿಮ್ಮ ಸರ್ವನಾಶದಿಂದ ಉಳಿಯಬಹುದು ಎಂದು ತಿಳಿಸಿದನು.

ಟಿಪ್ಪು ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಫ್ರೆಂಚರ ನೆರವು ಪಡೆಯಲು ಹೆಚ್ಚು ಉತ್ಸುಕತೆ ತೋರಿದನು. ರಾಯಭಾರ ಸಂಬಂಧವನ್ನು ಚುರುಕುಗೊಳಿಸಿದನು. ನೆಪೋಲಿಯನ್ ಬೋನಾಪಾರ್ಟೆ ಯೊಂದಿಗೆ ಪತ್ರವ್ಯವಹಾರ ನಡೆಸಿದನು. ಸೈನಿಕ ನೆರವಿನ ಒಪ್ಪಂದವನ್ನು ಏರ್ಪಡಿಸಿಕೊಂಡನು. ಟಿಪ್ಪುವಿನ ಯುದ್ಧ ಸನ್ನದ್ಧತೆಯನ್ನು ಸೂಕ್ಷ್ಮವಾಗಿಯೇ ಗಮನಿಸಿದ ವೆಲ್ಲಸ್ಲಿಯು ಇದಕ್ಕೆ ಕಡಿವಾಳ ಹಾಕಲು ನಿರ್ಧರಿಸಿದನು. ಟಿಪ್ಪುವಿಗೆ ಫ್ರೆಂಚರ ನೆರವು ದೊರೆತರೆ ಭಾರತದಲ್ಲಿ ಬ್ರಿಟಿಷರ ಅಸ್ತಿತ್ವ ಉಳಿಯುವುದು ಕಷ್ಟಕರವಾಗಿತ್ತತು. ಇದನ್ನು ತಿಳಿದೇ ವೆಲ್ಲಸ್ಲಿ ಟಿಪ್ಪುವನ್ನು ದುರ್ಬಲಗೊಳಿಸಲು ಯೋಜನೆ ಸಿದ್ಧಪಡಿಸಿದನು.

ಟಿಪ್ಪುವಿಗೆ ಸೈನಿಕ ನೆರವು ನೀಡುವುದಾಗಿ ನೆಪೋಲಿಯನನಿಂದ ಭರವಸೆ ದೊರೆಯಿತು. ವೆಲ್ಲಸ್ಲಿಯು ಇವರ ಸಂಬಂಧವನ್ನು ಒಡೆಯಲು ಸಂಚು ರೂಪಿಸಿದನು. ಹೈದರಾಬಾದಿನ ನಿಜಾಮನ ಬಳಿಯಿದ್ದ ಸಣ್ಣದಾದ ಫ್ರೆಂಚ್ ಸೈನ್ಯವನ್ನು ವಿಸರ್ಜಿಸುವಂತೆ ಮಾಡಿದನು. ಟಿಪ್ಪು ಮಾರಿಷಸ್‌ಗೆ ರಾಯಭಾರ ನಿಯೋಗ ಕಳುಹಿಸಿದ್ದಕ್ಕೂ, ಅಲ್ಲಿಂದ ಸೈನ್ನವನ್ನು ಕರೆಸಿದುದರ ಉದ್ದೇಶವೇನೆಂದು ವೆಲ್ಲಸ್ಲಿ ವಿವರಣೆ ಕೇಳಿದನು.[೯೭]

೧೭೯೮ರಲ್ಲಿ ಫ್ರೆಂಚರು ಭಾರತದಲ್ಲಿ ಹೊಂದಿದ್ದ ಸಾಮರ್ಥ್ಯಕ್ಕೂ ಬ್ರಿಟಿಷರ ಸಾಮರ್ಥ್ಯಕ್ಕೂ ಹೋಲಿಕೆಯೇ ಇರಲಿಲ್ಲ. ನೆಪೋಲಿಯನ್ ಈಜಿಪ್ಟ್ ಮೇಲೆ ದಾಳಿ ಮಾಡಿದ್ದರಿಂದ ಬ್ರಿಟಿಷರಿಗೆ ಹೆಚ್ಚು ಅಪಾಯವಿದ್ದಿತಾದರೂ ೧೭೯೮ರಲ್ಲಿ ಅಬೋಕಿರ್ ಬೇ ಎಂಬಲ್ಲಿ ಸೋತನು. ಇದು ಬ್ರಿಟಿಷರ ಭೀತಿಯನ್ನು ದೂರ ಮಾಡಿತು. ಬ್ರಿಟಿಷರು ಸಾಗರಗಳನ್ನು ಎಷ್ಟು ಕಟ್ಟೆಚ್ಚರದಿಂದ ಕಾದರೆಂದರೆ, ಫ್ರೆಂಚರು ತಮ್ಮ ಒಂದೇ ಒಂದು ನೌಕೆಯನ್ನು ಭಾರತಕ್ಕೆ ಕಳುಹಿಸಲು ಸಾಧ್ಯವಾಗದಿದ್ದಕ್ಕೆ ವಿಷಾಧಿಸುವಂತಾಯಿತು. ಸಿರಿಯಾದ ಅಕ್ರೆಯಲ್ಲಿ ಸಿಡ್ನಿಸ್ಮಿತ್‌ನ ಕೈಯಲ್ಲಿ ನೆಪೋಲಿಯನ್ ಸೋತನು.[೯೮] ಇದರಿಂದ ಟಿಪ್ಪುವಿಗೆ ಸೈನಿಕ ನೆರವು ನೀಡಲು ಸಾಧ್ಯವಾಗಲಿಲ್ಲ.

ಟಿಪ್ಪುವನ್ನು ನಿರ್ಣಾಯಕವಾಗಿ ಸೋಲಿಸಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಳ್ಳಲು ವೆಲ್ಲಸ್ಲಿಯು ಸೇನಾಧಿಪತಿ ಜನರಲ್ ಹ್ಯಾರಿಸ್‌ನಿಗೆ ಸೂಕ್ತ ನಿರ್ದೇಶನ ನೀಡಿದನು. ೧೭೯೯ ಫೆಬ್ರವರಿ ೧೧ನೆಯ ತಾರೀಕು ಬ್ರಿಟಿಷರ ಸೈನ್ಯವು ಮೈಸೂರಿನತ್ತ ಹೊರಟಿತು. ಅದರಲ್ಲಿ ೪೦೦೦

ಯುರೋಪಿಯನ್ನರೂ ಸೇರಿ ೩೦೦೦೦ ಸೈನಿಕರಿದ್ದರು. ಜೊತೆಗೆ ನಿಜಾಮನ ೧೬೦೦೦ ಸೈನ್ಯ, ಮುಂಬಯಿಯಿಂದ ೬೦೦೦, ದಕ್ಷಿಣದಿಂದ ಕರ್ನಲ್‌ರೀಡ್ ಮತ್ತು ಕರ್ನಲ್‌ಬ್ರೌನ್‌ರ ನಾಯಕತ್ವದ ಸೈನ್ಯಗಳು ಸೇರಿಕೊಂಡವು. ಯುದ್ಧವನ್ನು ತಡೆಯಲು ಟಿಪ್ಪು ಬ್ರಿಟಿಷರೊಂದಿಗೆ ಹಲವು ಪತ್ರ ವ್ಯವಹಾರಗಳನ್ನು ನಡೆಸಿದರೂ ಪ್ರಯೋಜನವಾಗಲಿಲ್ಲ.

ಯುದ್ಧದ ಅಂತ್ಯ ಮತ್ತು ಟಿಪ್ಪುವಿನ ಪತನ

ಬ್ರಿಟಿಷರೊಂದಿಗೆ ಯುದ್ಧವನ್ನು ತಪ್ಪಿಸಲು ಮತ್ತು ರಾಜಧಾನಿಯ ಕೋಟೆಯನ್ನು ರಕ್ಷಿಸಿಕೊಳ್ಳಲು ಟಿಪ್ಪುವು ಅನೇಕ ಸಂಧಾನ ಪತ್ರಗಳನ್ನು ಕಳುಹಿಸಿದನು. ಶಾಂತಿಯುತ ಪರಿಹಾರಕ್ಕೆ ಪ್ರಯತ್ನಸಿದ. ಬ್ರಿಟಿಷರು ಅವನಿಗೆ ಕ್ರೂರವಾದ ಷರತ್ತುಗಳನ್ನು ವಿಧಿಸಿದರು. ಈ ಷರತ್ತುಗಳ ಹಿಂದಿದ್ದ ಉದ್ದಟತನ, ಅನ್ಯಾಯವನ್ನು ನೋಡಿ ಟಿಪ್ಪು ಕ್ರೋಧಗೊಂಡನು. ಪರಾವಲಂಬಿಯಾಗಿ ಬದುಕುವುದಕ್ಕಿಂತ ಒಬ್ಬ ಯೋಧನಾಗಿ ಹೋರಾಡಿ ಗೌರವಾನ್ವಿತ ಮರಣವನ್ನು ಹೊಂದುವುದೇ ಮೇಲು ಎಂದು ಭಾವಿಸಿದನು. ಬ್ರಿಟಿಷರನ್ನು ಸಮರ್ಥವಾಗಿ ಎದುರಿಸಲು ಮುಂದಾದನು. ಕ್ರಿ.ಶ.೧೭೯೯ ಫೆಬ್ರವರಿಯಲ್ಲಿ ಯುದ್ಧ ಆರಂಭವಾಯಿತು. ಬ್ರಿಟಿಷರ ಒಕ್ಕೂಟ ಸೈನ್ಯವು ರಾಜಧಾನಿಯನ್ನು ಮುತ್ತಿಗೆ ಹಾಕಲು ಅಗಾಧವಾದ ಸೈನ್ಯವು ಜಮಾವಣೆಗೊಂಡಿತು. ಜೊತೆಗೆ ಟಿಪ್ಪುವಿನ ಆಪ್ತರಂತಿದ್ದ ಮೀರ್‌ಸಾಧಿಕ್ ಮತ್ತು ಅವನ ತಂಡದವರು ಬ್ರಿಟಿಷರ ಕಡೆಗೆ ಸೇರಿ ಒಳಸಂಚು ನಡೆಸಿದರು. ಟಿಪ್ಪುವಿನ ಸೇನಾ ರಹಸ್ಯಗಳನ್ನು ಬಯಲು ಮಾಡಿದರು. ಇದು ಟಿಪ್ಪುವಿಗೆ ಭಾರೀ ಆಘಾತ ನೀಡಿತು. ಬ್ರಿಟಿಷರು ಕೋಟೆಯ ಮೇಲೆ ಮೇ ೪ ನೆಯ ತಾರೀಕು ಆಕ್ರಮಣ ಮಾಡಿದ ರೀತಿಯನ್ನು ನೋಡಿದರೆ ಮೀರ್‌ಸಾಧಿಕ್‌ರ ವಿಶ್ವಾಸ ದ್ರೋಹವು ಸಾಬೀತಾಗುತ್ತದೆ.[೯೯]

ಮಂಗಳೂರಿನಿಂದ ಬರುತ್ತಿದ್ದ ಬ್ರಿಟಿಷ್ ಸೈನ್ಯವನ್ನು ಮಾರ್ಗ ಮಧ್ಯೆ ತಡೆಯಲು ಟಿಪ್ಪುವು ಪ್ರಯತ್ನಪಟ್ಟನು. ಅದು ಕೊಡಗು ಸಮೀಪಿಸಿದಾಗ ಸಿದ್ದೇಶ್ವರದ ಬಳಿ ಮೈಸೂರು ಸೈನ್ಯ ಬ್ರಿಟಿಷರನ್ನು ಎದುರಿಸಿತು ಭೀಕರ ಯುದ್ಧ ನಡೆದು ಮೈಸೂರು ಸೈನ್ಯಕ್ಕೆ ಸೋಲಾಯಿತು. ಟಿಪ್ಪುವಿಗೆ ಸ್ವಲ್ಪ ಹಿನ್ನಡೆ ಉಂಟಾಯಿತು. ನಂತರ ಬೆಂಗಳೂರು ಮಾರ್ಗವಾಗಿ ಶ್ರೀರಂಗಪಟ್ಟಣದ ಕಡೆಗೆ ಸಾಗಿ ಬರುತ್ತಿದ್ದ ಜನರಲ್ ಹ್ಯಾರಿಸನ ನೇತೃತ್ವದ ಸೈನ್ಯವನ್ನು ಮಳವಳ್ಳಿ ಬಳಿ ತಡೆಯಲು ಪ್ರಯತ್ನಪಟ್ಟನು. ಮೈಸೂರು ಸೈನ್ಯವು ವೀರಾವೇಶದಿಂದ ಹೋರಾಡಿದರೂ ಜಯ ಪಡೆಯದೇ ಶ್ರೀರಂಗಪಟ್ಟಣಕ್ಕೆ ಹಿಂತಿರುಗಿತು.[೧೦೦]

ಬ್ರಿಟಿಷ್ ಮತ್ತು ನಿಜಾಮನ ಸೈನ್ಯಗಳು ಒಟ್ಟುಗೂಡಿ ಶ್ರೀರಂಗಪಟ್ಟಣವನ್ನು ಮುತ್ತಿದವು. ಸುಲ್ತಾನನ ಮಹಲಿದ್ದ ಕಡೆಯ ಕೋಟೆಯ ಭಾಗವೂ, ಈಶಾನ್ಯ ದಿಕ್ಕಿನಲ್ಲಿದ್ದ ಬಾವುಟದ

ಬತೇರಿಯ ಭಾಗವೂ ಅಷ್ಟು ಸುರಕ್ಷಿತವಾಗಿರಲಿಲ್ಲ. ಇಲ್ಲಿ ರಾಜದ್ರೋಹಿಗಳ ಸಹಾಯದಿಂದ ಕೋಟೆಯ ಗೋಡೆಯನ್ನು ಒಡೆಯಲು ದಾಳಿ ನಡೆಸಿದರು. ಮಹಲಿನ ಸಮೀಪ ಉತ್ತರ ಗೋಡೆಯ ಭಾಗದಲ್ಲಿ ಟಿಪ್ಪುವೇ ಹೋರಾಡುತ್ತಿದ್ದನು. ಈಶಾನ್ಯ ದಿಕ್ಕಿನಲ್ಲಿ ಸೈಯದ್ ಗಫಾರನು ಹೋರಾಡುತ್ತಿದ್ದನು. ಬ್ರಿಟಿಷ್ ಸೈನಿಕರು ಕೋಟೆಯ ಮೇಲೆ ಗುಂಡಿನ ಮಳೆಗರೆಯಿತು. ಕೋಟೆಯ ಗೋಡೆ ಬಿರುಕು ಬಿಟ್ಟಿತು. ಕ್ರಿ.ಶ.೧೭೯೯ರ ಮೇ ೪ನೇ ತಾರೀಖು ಬ್ರಿಟಿಷ್ ಸೈನಿಕರು ಕೋಟೆಯೊಳಗೆ ಲಗ್ಗೆ ಹತ್ತಿದರು. ಟಿಪ್ಪು ತನ್ನ ಸೈನಿಕರನ್ನು ಮತ್ತಷ್ಟು ಹುರಿದುಂಬಿಸಿ ಹೋರಾಟ ನಡೆಸಿದನು. ಸೈಯದ್ ಗಫಾರನು ಮಡಿದನು. ಜನರಲ್ ಬೈರ್ಡ್‌ನ ನಾಯಕತ್ವದ ಸೈನ್ಯವು ಕೋಟೆಯೊಳಗೆ ನುಗ್ಗಿತು. ಭೀಕರ ಕಾಳಗ ನಡೆಯಿತು. ಬ್ರಿಟಿಷ್ ಸೈನ್ಯವು ಕೋಟೆಯ ದಕ್ಷಿಣ ಮತ್ತು ಪಶ್ಚಿಮ ಭಾಗವನ್ನು ವಶಪಡಿಸಿಕೊಂಡಿತು. ಟಿಪ್ಪು ಕೋಟೆಯ ದಿಡ್ಡಿ ಬಾಗಿಲ ಸಮೀಪ ಹೋರಾಡುತ್ತಿದ್ದಾಗ ಭುಜ ಮತ್ತು ಎದೆಗೆ ಗುಂಡು ತಗುಲಿತು.[೧೦೧] ಕೊನೆಗೆ ಬ್ರಿಟಿಷ್ ಸೈನಿಕನ ಕತ್ತಿಯ ಇರಿತಕ್ಕೆ ಒಳಗಾಗಿ ಕೆಳಗುರುಳಿದನು. ಅಲ್ಲಿಯೇ ಅಸುನೀಗಿದನು. ಅವನ ಸೈನಿಕರು ಎಷ್ಟೇ ಸ್ವಾಮಿನಿಷ್ಠೆಯಿಂದ ಹೋರಾಡಿದರೂ ಜಯ ಪಡೆಯಲು ಸಾಧ್ಯವಾಗಲಿಲ್ಲ. ಬ್ರಿಟಿಷ್ ಸೈನಿಕರು ಕೋಟೆ ಒಳಗೆ ಲೂಟಿ, ಸುಲಿಗೆ ನಡೆಸಿದರು. ಟಿಪ್ಪುವಿನ ದೇಹ ಮಾತ್ರ ನಗರದ ಬೀದಿಯಲ್ಲಿ ಬಿದ್ದಿತು.[೧೦೨] ಅವನು ಭಾರತ ಸ್ವಾತಂತ್ರ್ಯದ ಹುತಾತ್ಮನಾದನು. ಟಿಪ್ಪುವಿನ ಕಡೆ ಅಪಾರ ಸೈನಿಕರು ಹತರಾದರು.

ನಾಲ್ಕನೆಯ ಮೈಸೂರು ಯುದ್ಧವು ಬ್ರಿಟಿಷರ ಸಾಮ್ರಾಜ್ಯ ಸ್ಥಾಪನೆ ಮತ್ತು ವಿಸ್ತರಣದಲ್ಲಿ ನಡೆಸಿದ ಯುದ್ಧಗಳಲ್ಲಿ ಬಹುದೊಡ್ಡ ಮೈಲಿಗಲ್ಲು. ಈ ಯುದ್ಧದಲ್ಲಿ ಗೆದ್ದ ಬ್ರಿಟಿಷರು ಉದ್ವೇಗ ಗೊಂಡವರಂತೆ ಹರ್ಷೋದ್ಗಾರ ಮಾಡಿದರು. "ಇಂಡಿಯಾ ನಮ್ಮದು" ಎಂದು ಕಿರುಚಿದರು. ದಕ್ಷಿಣದಲ್ಲಿ ಶಕ್ತಿ ಶಿಖರವೆನಿಸಿದ್ದ ಶ್ರೀರಂಗಪಟ್ಟಣ ಅವರ ಕೈವಶವಾಗಿತ್ತು. ಈ ಯುದ್ಧವು ಫ್ರೆಂಚರ ಪ್ರಭಾವವನ್ನು ಮತ್ತೆ ಭಾರತದ ರಾಜಕಾರಣದಲ್ಲಿ ಮರುಕಳಿಸದಂತೆ ಅಳಿಸಿ ಹಾಕಿತು.[೧೦೩] ಮೈಸೂರು ರಾಜ್ಯದಲ್ಲಿ ಬ್ರಿಟಿಷರ ಪ್ರಭುತ್ವ ಗಟ್ಟಿಯಾಯಿತು. ಹೆಚ್ಚು ಫಲವತ್ತಾದ, ಅಧಿಕ ಸಂಪತ್ತು ಮತ್ತು ಆಯಕಟ್ಟಿನ ಭಾಗ ಇವರದಾಯಿತು. ಅವರು ತಮ್ಮ ಅನುಕೂಲಕ್ಕೆ ತಕ್ಕಂತೆಯೇ ಮೈಸೂರನ್ನು ವಿಭಜಿಸಿದರು. ಮೈಸೂರಿನ ಕರಾವಳಿ ಅವರದಾಯಿತು. ವ್ಯಾಪಾರ-ವಾಣಿಜ್ಯದ ವೃದ್ಧಿಗೆ ಅದು ಸಹಕಾರಿಯಾಯಿತು.

೪.೩. ಟಿಪ್ಪು ಮತ್ತು ಬ್ರಿಟಿಷರ ನಡುವಿನ ಒಪ್ಪಂದಗಳು

ಭಾರತದಲ್ಲಿ ವಸಾಹತುಶಾಹಿಯ ಸ್ಥಾಪನೆ ಮತ್ತು ವಿಸ್ತರಣೆಯಲ್ಲಿ ತೊಡಗಿದ್ದ ಬ್ರಿಟಿಷರು ಮೊದಲು ವ್ಯಾಪಾರದ ಮೂಲಕ ಅಧಿಕ ಸಂಪತ್ತು ಗಳಿಸಲು ಆದ್ಯತೆ ನೀಡಿದರು. ಅನಂತರ

ಭಾರತದ ಅಸ್ಥಿರ ರಾಜಕೀಯ ಸ್ಥಿತಿಯನ್ನು ಗಮನಿಸಿ ಬ್ರಿಟಿಷ್ ಪ್ರಭುತ್ವ ಸ್ಥಾಪನೆಗೆ ಇಳಿದರು. ಅವರು ಭಾರತದ ಅಂದಿನ ರಾಜಕೀಯ ಶಕ್ತಿಗಳನ್ನು ದಮನ ಮಾಡಲು ಒಡೆದು ಆಳುವ ನೀತಿಯನ್ನು ಅನುಸರಿಸಿದರು. ಸ್ಥಳೀಯ ರಾಜರುಗಳ ಆಂತರಿಕ ರಾಜಕಾರಣದಲ್ಲಿ ಹಸ್ತಕ್ಷೇಪ ಮಾಡಿದರು. ತಮಗೆ ಎದುರಾದವರನ್ನು ಯುದ್ಧದ ಮೂಲಕ ಮಣಿಸುವ ಪ್ರಯತ್ನ ನಡೆಸಿದರು. ಅಂದು ಬ್ರಿಟಿಷರ ರಾಜ್ಯ ವಿಸ್ತರಣೆಗೆ ಅಡ್ಡಗೋಡೆಯಾದವರು ಮೈಸೂರಿನ ಹೈದರಾಲಿ ಮತ್ತು ಟಿಪ್ಪು ಸುಲ್ತಾನರು. ಮೈಸೂರು ರಾಜ್ಯವು ಸಂಪದ್ಭರಿತ ರಾಜ್ಯವಾಗಿತ್ತು. ಆಯಕಟ್ಟಿನ ಕರಾವಳಿಯನ್ನು ಹೊಂದಿತ್ತು. ಇದರ ಮೇಲೆ ಬ್ರಿಟಿಷರು ಕಣ್ಣಿಟ್ಟರು. ಹೈದರಾಲಿ ಮತ್ತು ಟಿಪ್ಪುವನ್ನು ಅಧಿಕಾರದಿಂದ ಪದಚ್ಯುತಗೊಳಿಸಲು ಅವರೊಂದಿಗೆ ಹಲವು ಸಂಧಾನಗಳು ಮತ್ತು ಯುದ್ಧಗಳನ್ನು ನಡೆಸಿದರು. ಎರಡನೆ ಆಂಗ್ಲೋ ಮೈಸೂರು ಯುದ್ಧದಲ್ಲಿ ಹೈದರಾಲಿ ಬ್ರಿಟಿಷರೊಡನೆ ಹೋರಾಡಿ ಯುದ್ಧ ಭೂಮಿಕೆಯಲ್ಲೇ ಮಡಿದನು. ನಂತರ ಟಿಪ್ಪುವು ಯುದ್ಧವನ್ನು ಮುಂದುವರೆಸಿದನು. ತಂದೆ ಹೈದರಾಲಿಗಿಂತ ಪ್ರಬಲವಾಗಿ ಹೋರಾಡಿದನು. ಈ ಮಧ್ಯೆ ಮದರಾಸು ಸರಕಾರವು ಹಲವು ರಾಜಕಾರಣದ ಗೊಂದಲದಿಂದ ಕೂಡಿತ್ತು. ಬಂಗಾಳದ ಗೌವರ್ನರ್ ವಾರನ್ ಹೇಸ್ಟಿಂಗ್ಸ್, ಕರ್ನಾಟಿಕ್ ನವಾಬ ಮತ್ತು ಮದರಾಸು ಸರಕಾರದ ನಡುವೆ ಭಿನ್ನಾಭಿಪ್ರಾಯಗಳು ಪರಿಹಾರ ವಾಗಿರಲಿಲ್ಲ. ಸೈನ್ಯಕ್ಕೆ ಆಹಾರ ಮತ್ತು ಯುದ್ಧ ಸಾಮಗ್ರಿಗಳ ಕೊರತೆ ನಿವಾರಣೆಯಾಗಿಲ್ಲ ಈ ಎಲ್ಲ ನ್ಯೂನತೆಗಳಿಂದಾಗಿ ಬ್ರಿಟಿಷರು ಟಿಪ್ಪುವಿನೊಂದಿಗೆ ಒಪ್ಪಂದಕ್ಕೆ ಮುಂದಾದರು.

೪.೩.೧. ಮಂಗಳೂರು ಒಪ್ಪಂದ ೧೭೮೪ ಮಾರ್ಚ್ ೧೧

ಕ್ರಿ.ಶ.೧೭೮೪ರಲ್ಲಿ ಎರಡನೆಯ ಆಂಗ್ಲೋ ಮೈಸೂರು ಯುದ್ಧವು ಕೊನೆಗೊಂಡಿತು. ಕ್ರಿ.ಶ.೧೭೮೪ ಮಾರ್ಚ್ ೧೧ ರಂದು ಟಿಪ್ಪು ಮತ್ತು ಬ್ರಿಟಿಷರ ನಡುವೆ ಮಂಗಳೂರು ಒಪ್ಪಂದ ಏರ್ಪಟ್ಟಿತು. ಎರಡು ಪಕ್ಷಗಳು ಸಹಿ ಹಾಕಿದವು. ಈ ಒಪ್ಪಂದವು ೧೦ ಅನುಚ್ಛೇದಗಳಿಂದ ಕೂಡಿತ್ತು. ಈ ಒಪ್ಪಂದದ ಮೇರೆಗೆ ಉಭಯ ಪಕ್ಷಗಳು ಗೆದ್ದುಕೊಂಡಿದ್ದ ಪ್ರದೇಶಗಳು ಮತ್ತು ಕೋಟೆ–ಕೊತ್ತಲುಗಳನ್ನು ಪರಸ್ಪರ ಹಿಂತಿರುಗಿಸುವುದು. ಬ್ರಿಟಿಷರು ಪ್ರತ್ಯಕ್ಷವಾಗಲೀ ಅಥವಾ ಪರೋಕ್ಷವಾಗಲಿ ಟಿಪ್ಪುವಿನ ಶತ್ರುಗಳಿಗೆ ನೆರವಾಗುವಂತಿಲ್ಲ. ಟಿಪ್ಪು ಕೂಡ ಇದೇ ರೀತಿಯಲ್ಲಿ ಬ್ರಿಟಿಷರ ಸ್ನೇಹಿತರನ್ನು ಮತ್ತು ಶತ್ರುಗಳನ್ನು ನಡೆಸಿಕೊಳ್ಳಬೇಕು ಎಂಬುದಾಗಿ ಒಪ್ಪಂದದಲ್ಲಿ ಹೇಳಲಾಗಿತ್ತು.[೧೦೪] ಬ್ರಿಟಿಷರು ಕೂಡಲೇ ಮಂಗಳೂರನ್ನು ಖಾಲಿ ಮಾಡಿ ಟಿಪ್ಪುವಿನ ಪಡೆಗಳಿಗೆ ವಹಿಸಿಕೊಟ್ಟರು. ಒಪ್ಪಂದದ ಮತ್ತೊಂದು ಷರತ್ತಿನ ಪ್ರಕಾರ ಯುದ್ಧ ಬಂಧಿಗಳನ್ನು ಪರಸ್ಪರ ಬಿಡುಗಡೆ ಮಾಡಬೇಕೆಂದು ತಿಳಿಸಲಾಗಿತ್ತು.

ಹೈದರನು ಬ್ರಿಟಿಷರೊಂದಿಗೆ ಪ್ರಾರಂಭಿಸಿದ್ದ ಯುದ್ಧವನ್ನು ಈ ಒಪ್ಪಂದ ಕೊನೆಗೊಳಿಸಿತು. ಈ ಒಪ್ಪಂದವು ಮಿತ್ರ ಪಕ್ಷಗಳನ್ನು ಪಟ್ಟಿ ಮಾಡಿತು. ಟಿಪ್ಪುವಿನ ಕಡೆ ಕಣ್ಣಾನೂರಿನ ಬೀಬಿ

ಮತ್ತು ಮಲಬಾರಿನ ಜಮೀನ್ದಾರರು ಹಾಗೂ ಬ್ರಿಟಿಷರ ಕಡೆಗೆ ತಿರುವಾಂಕೂರು ರಾಜರು ಮತ್ತು ಕರ್ನಾಟಕ್‌ನ ಪಾಯೆಘಾಟ್ ಇದ್ದವು. ಕರ್ನಾಟಕ್‌ನ ನವಾಬ ಮಹಮದ್ ಅಲಿಯ ಹೆಸರನ್ನು ಉದ್ದೇಶ ಪೂರಕವಾಗಿ ಬಿಡಲಾಗಿತ್ತು. ಇದರಲ್ಲಿ ಯಾವುದೇ ಪಕ್ಷವು ಇತರರೊಂದಿಗೆ ಯುದ್ಧ ಮಾಡುತ್ತಿದ್ದರೆ ಇನ್ನೊಂದು ಪಕ್ಷವು ತಟಸ್ಥವಾಗಿರಬೇಕೆಂದು ನಿರ್ಧರಿಸಲಾಯಿತು. ಒಪ್ಪಂದ ಎರಡನೆಯ ಅನುಚ್ಛೇದದ ಪ್ರಕಾರ ಎರಡೂ ಪಕ್ಷಗಳು ಬೇರೆಯವರಿಂದ ಗೆದ್ದುಕೊಂಡಿದ್ದ ಪ್ರದೇಶಗಳನ್ನು ಬಿಟ್ಟುಕೊಡುವುದು, ಟಿಪ್ಪು ಯುದ್ಧ ಸಮಯದಲ್ಲಿ ಬಂಧಿಸಿದ್ದ ಸೆರೆಯಾಳುಗಳನ್ನು ಬಿಡುಗಡೆ ಮಾಡುವುದು, ಮೂವತ್ತು ದಿನಗಳೊಳಗೆ ಬ್ರಿಟಿಷರಿಗೆ ಸೇರಿದ್ದ ಭಾಗಗಳಿಂದ ತೆರವು ಮಾಡುವುದು, ಮೂರನೆಯ ಅನುಚ್ಛೇದವು ಪಶ್ಚಿಮ ಕರಾವಳಿಯಲ್ಲಿ ಮುಂಬಯಿ ಸರಕಾರ ವಶಪಡಿಸಿಕೊಂಡಿದ್ದ ಓನೊರ್, ಕಾರವಾರ, ಸದಾಶಿವಘರ ಮತ್ತು ಇನ್ನಿತರ ಕೋಟೆಗಳನ್ನು ಬಿಟ್ಟು ಕೊಡುವುದು. ಯುದ್ಧ ಖೈದಿಗಳನ್ನು ಬಿಡುಗಡೆ ಮಾಡಿದ ನಂತರವೇ ದಿಂಡಿಗಲ್‌ನ್ನು ವಹಿಸಿಕೊಡುವುದು. ನಾಲ್ಕನೆಯ ಅನುಚ್ಛೇದವು ಕಣ್ಣಾನೂರು ಮರಳಿಸುವ ವಿಚಾರ ಹೊಂದಿತ್ತು. ಇದರಂತೆ ಟಿಪ್ಪುವು ಅಂಬೂರು ಮತ್ತು ಸತರ್‌ಘರ್‌ಗಳನ್ನು ಮರಳಿಸಬೇಕಾಗಿತ್ತು. ಐದನೆಯ ಅನುಚ್ಛೇದದ ಪ್ರಕಾರ ಟಿಪ್ಪುವು ಕರ್ನಾಟಿಕ್ ಪ್ರದೇಶಗಳ ಮೇಲಿನ ತನ್ನ ಹಕ್ಕನ್ನು ತೊರೆಯ ಬೇಕಾಯಿತು. ಆರನೆಯ ಅನುಚ್ಛೇದದಂತೆ ಹೈದರಾಲಿ ಅಥವಾ ಟಿಪ್ಪುವಿನ ಕೈಸೆರೆಯಾಗಿದ್ದ ಎಲ್ಲಾ ವ್ಯಕ್ತಿಗಳನ್ನು ಅವರ ಕುಟುಂಬ ಸಮೇತ ಬಿಡುಗಡೆ ಮಾಡುವುದು. ಏಳನೆಯ ಅನುಚ್ಛೇದದ ಪ್ರಕಾರ ಬ್ರಿಟಿಷರ ಪರವಿದ್ದ ಮಲಬಾರಿನ ಎಲ್ಲಾ ನಾಯಕರುಗಳನ್ನು ಕ್ಷಮಿಸುವುದು. ಎಂಟನೆಯ ಅನುಚ್ಛೇದದ ಪ್ರಕಾರ ಬ್ರಿಟಿಷರು ಮೊದಲು ಕ್ರಿ.ಶ.೧೭೭೦ ಆಗಸ್ಟ್ ೮ ರಂದು ಮಾಡಿಕೊಂಡಿದ್ದ ಕರಾರಿನಂತೆಯೇ ಮಲಬಾರಿನಲ್ಲಿ ವ್ಯಾಪಾರ–ವಾಣಿಜ್ಯ ಸೌಲಭ್ಯಗಳನ್ನು ಪಡೆದರು. ಒಂಬತ್ತನೆಯ ಅನುಚ್ಛೇದವು ಬ್ರಿಟಿಷರು ಕಲ್ಲಿಕೋಟೆ ಮತ್ತು ತಲಚೆರಿಯಲ್ಲಿ ಹೊಂದಿದ್ದ ಕೋಠಿಗಳನ್ನು ಮತ್ತೆ ದೊರಕಿಸಿಕೊಟ್ಟಿತು. ಹತ್ತನೆಯ ಅನುಚ್ಛೇದವು ಒಪ್ಪಂದದ ಪ್ರತಿಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ವಿಧಾನವನ್ನು ತಿಳಿಸಿತು.

ಮಂಗಳೂರು ಒಪ್ಪಂದವು ಟಿಪ್ಪುವಿನ ಘನತೆಯನ್ನು ಮತ್ತಷ್ಟು ಹೆಚ್ಚಿಸಿತು. ಈ ಒಪ್ಪಂದವು ಮರಾಠರಿಗೆ ಭಾರಿ ಆಘಾತ ನೀಡಿತು. ಏಕೆಂದರೆ ಟಿಪ್ಪುವನ್ನು ಸಂಪೂರ್ಣ ಸೋಲಿಸಿ, ಅವನು ವಶಪಡಿಸಿಕೊಂಡಿದ್ದ ಉತ್ತರ ಭಾಗಗಳನ್ನು ಪಡೆಯಲು ಅವರು ಬಯಸಿದ್ದರು. ಅದು ಸಾಧ್ಯವಾಗಲಿಲ್ಲ. ಈ ಒಪ್ಪಂದದಿಂದಾಗಿ ಸಲ್ಬಾಯ್ ಒಪ್ಪಂದವನ್ನು ಟಿಪ್ಪು ಎರಡು ರೀತಿಯಲ್ಲಿ ಸ್ಥಗಿತಗೊಳಿಸಿದನು. ಮೊದಲನೆಯದು ಅವನು ಕರ್ನಾಟಿಕ್ ಪ್ರದೇಶವನ್ನು ತೆರವು ಮಾಡಲು ಮರಾಠರ ಮಧ್ಯಸ್ಥಿಕೆಯನ್ನು ಅಲಕ್ಷಿಸಿದನು. ಎರಡನೆಯದು ಮರಾಠರು ಮೈಸೂರಿನ ಮೇಲೆ ಆಕ್ರಮಣ ಮಾಡಿದರೆ ಬ್ರಿಟಿಷರು ತಟಸ್ಥರಾಗಿರುವಂತೆ ಮಾಡಿದನು. ಈ ಒಪ್ಪಂದವು ಮರಾಠರು ಕಳೆದುಕೊಂಡಿದ್ದ ಪ್ರದೇಶಗಳನ್ನು

ಮತ್ತೆ ಬ್ರಿಟಿಷರ ಸಹಾಯದಿಂದ ಪಡೆಯಬಹುದೆಂಬ ಆಸೆಯನ್ನು ಹುಸಿಗೊಳಿಸಿತು.[೧೦೫] ಟಿಪ್ಪುವು ಮರಾಠರನ್ನು ಬ್ರಿಟಿಷರ ಸಖ್ಯದಿಂದ ದೂರವಿಡುವ ಪ್ರಯತ್ನ ಮಾಡಿದನು. ಭಾರತೀಯ ಅರಸರಿಗೆ ಟಿಪ್ಪುವು ಬ್ರಿಟಿಷ್ ಶಕ್ತಿಯೊಂದಿಗೆ ತುಂಬಾ ತಿರಸ್ಕಾರದಿಂದಲೂ ಅಪಹಾಸ್ಯದಿಂದಲೂ ವರ್ತಿಸಬಲ್ಲೆ ಎಂದು ತೋರಿಸಿಕೊಟ್ಟಿದ್ದನು.[೧೦೬]

ಈ ಒಪ್ಪಂದವು ವಾರನ್ ಹೇಸ್ಟಿಂಗ್ಸ್‌ನಿಗೆ ನಿರಾಶೆ ತಂದಿತು. ಮೊದಲಿನಿಂದಲೂ ಒಪ್ಪಂದದ ಬಗೆಗೆ ಆಕ್ಷೇಪಣೆ ವ್ಯಕ್ತಮಾಡುತ್ತಿದ್ದನು. ಟಿಪ್ಪುವಿನೊಂದಿಗೆ ಸ್ನೇಹ–ಶಾಂತಿಯ ಮಾತುಕತೆಯನ್ನು ವಿರೋಧಿಸುತ್ತಲೇ ಬಂದನು. ಆವನು ಮರಾಠರ ಸಹಾಯ ಪಡೆದು ಟಿಪ್ಪುವನ್ನು ಸೋಲಿಸುವ ಗುಂಗಿನಲ್ಲೇ ಇದ್ದನು. ಆದರೆ ಮದರಾಸು ಸರಕಾರಕ್ಕೆ ಒಪ್ಪಂದ ಅನಿವಾರ್ಯವಾಯಿತು. ಟಿಪ್ಪುವಿನ ಪ್ರಬಲ ಹೋರಾಟವನ್ನು ಎದುರಿಸುವಷ್ಟು ಸೈನ್ಯದ ಲಭ್ಯತೆಯಿರಲಿಲ್ಲ. ಆರ್ಥಿಕವಾಗಿಯೂ ಸಂಕಷ್ಟದ ಪರಿಸ್ಥಿತಿ ಎದುರಾಯಿತು. ಬಂಗಾಳದಿಂದ ನಿರೀಕ್ಷಿತ ಪ್ರಮಾಣದ ಸೌಲಭ್ಯಗಳು ದೊರೆಯದೇ ಇದ್ದುದ್ದು. ಇವೆಲ್ಲ ಕಾರಣಗಳಿಂದ ಮದರಾಸು ಸರಕಾರ ಒಪ್ಪಂದದ ಕಡೆಗೆ ಒಲವು ತೋರಿತು. ಈ ಒಪ್ಪಂದವು ತುಂಬಾ ಹಾನಿಕಾರವೂ ಮತ್ತು ಅಪಮಾನಕರವೂ ಎಂದು ಹೇಸ್ಟಿಂಗ್ಸ್ ಭಾವಿಸಿದನು. ಒಪ್ಪಂದದ ಕರಾರುಗಳನ್ನು ಸಿದ್ಧಪಡಿಸಿದ ಅಧಿಕಾರಿಗಳನ್ನೆ ಕೆಲಸದಿಂದ ವಜಾ ಮಾಡಿದನು.

೪.೩.೨. ಶ್ರೀರಂಗಪಟ್ಟಣ ಒಪ್ಪಂದ–ಮಾರ್ಚ್ ೧೯, ೧೭೯೨

ಮೂರನೆಯ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪುಗೆ ಭಾರೀ ಹಿನ್ನಡೆಯಾಯಿತು. ಬ್ರಿಟಿಷರ ಮಿತ್ರ ಪಡೆಗಳು ಗೆಲುವಿನತ್ತ ಹೆಜ್ಜೆ ಹಾಕಿದವು. ಶ್ರೀರಂಗಪಟ್ಟಣದ ಬಳಿಗೆ ಧಾವಿಸಿದ ಬ್ರಿಟಿಷರ ಸೈನ್ಯವು ಕೋಟೆಯನ್ನು ಮುತ್ತಿಗೆ ಹಾಕಲು ಮುಂದಾಯಿತು. ಕೋಟೆಯ ಗೋಡೆಯನ್ನು ಒಡೆಯಲು ಬತೇರಿಗಳನ್ನು ನಿರ್ಮಿಸಿದರು. ಮುಂದಿನ ಅಪಾಯದ ಮುನ್ಸೂಚನೆಯನ್ನು ತಿಳಿದ ಟಿಪ್ಪುವು ಬ್ರಿಟಿಷರೊಂದಿಗೆ ಸಂಧಿ ಮಾಡಿಕೊಳ್ಳಲು ನಿರ್ಧರಿಸಿದನು. ಶಾಂತಿ ಸಂಧಾನದ ತನ್ನ ಅಪೇಕ್ಷೆಯನ್ನು ಕುರಿತಾದ ಒಂದು ಪತ್ರವನ್ನು ಕಾರನ್‌ವಾಲೀಸ್‌ನಿಗೆ ಕಳುಹಿಸಿಕೊಟ್ಟನು. ಬ್ರಿಟಿಷರು ಸಂಧಿ ಮಾಡಿಕೊಳ್ಳಲು ಉತ್ಸುಕತೆ ತೋರಿದರು. ಟಿಪ್ಪುವನ್ನು ಸಂಪೂರ್ಣ ನಾಶ ಮಾಡಲು ಮರಾಠರು ಮತ್ತು ನಿಜಾಮರು ತನಗೆ ಪೂರ್ಣ ಬೆಂಬಲವನ್ನು ನೀಡಲಾರರು ಎಂಬ ಭಯವು ಕಾರನ್‌ವಾಲೀಸ್‌ನನ್ನು ಕಾಡುತ್ತಿತ್ತು. ಅದಕ್ಕಾಗಿ ಸಂಧಿಗೆ ಒಲವು ತೋರಿದರು.

ಟಿಪ್ಪುವು ಶಾಂತಿ ಸಂಧಾನದ ಮಾತುಕತೆಗಾಗಿ ೧೭೯೨ರ ಮಾರ್ಚ್ ೧೩ನೇ ತಾರೀಕು ತನ್ನ ವಕೀಲರಾದ ಗುಲಾಂ ಆಲಿಖಾನ್ ಮತ್ತು ಅಬ್ದುಲ್ ರೆಜಾರನ್ನು ಕಳುಹಿಸಿಕೊಟ್ಟನು. ಮಾತುಕತೆಗಾಗಿ ಈದ್ಗಾ ಮೈದಾನದ ಬಳಿ ವಿಶೇಷ ಗುಡಾರ ನಿರ್ಮಿಸಲಾಗಿತ್ತು. ಕಾರನ್

ವಾಲೀಸ್‌ನ ಕಡೆಯಿಂದ ಕನ್ನವೆ, ನಿಜಾಮನ ಕಡೆಯಿಂದ ಮೀರ್ ಆಲಂ ಪೇಶ್ವೆಯ ಕಡೆಯಿಂದ ಗೋವಿಂದರಾವ್ ಕಾಳೆ ಮತ್ತು ಬಚಾಡಿ ಪಂತ್ ಇವರು ಪಾಲ್ಗೊಂಡಿದ್ದರು. ಕಾರನ್‌ವಾಲೀಸನು ತನ್ನ ಷರತ್ತುಗಳನ್ನು ಐದು ಅಂಶಗಳಾಗಿ ರೂಪಿಸಿದನು. ಮೊದಲನೆಯದು ಟಿಪ್ಪುವಿನ ರಾಜ್ಯಕ್ಕೆ ಹೊಂದಿಕೊಂಡಂತಿರುವ ಭಾಗವೂ ಸೇರಿದಂತೆ ಅರ್ಧರಾಜ್ಯವನ್ನು ವಹಿಸಿ ಕೊಡತಕ್ಕದ್ದು. ನಷ್ಟ ಭರ್ತಿಗಾಗಿ ನಗದು ರೂಪದಲ್ಲಿ ಆರು ಕೋಟಿ ರೂಪಾಯಿಗಳನ್ನು ಸಲ್ಲಿಸುವುದು. ಮೂರನೆಯದಾಗಿ ಹೈದರಾಲಿಯ ಕಾಲದಿಂದಲೂ ಯುದ್ಧ ಖೈದಿಗಳಾಗಿರುವ ಎಲ್ಲರನ್ನು ಬಿಡುಗಡೆ ಮಾಡುವುದು. ಟಿಪ್ಪುವಿನ ಇಬ್ಬರು ಮಕ್ಕಳನ್ನು ಒತ್ತೆಯಾಳಾಗಿಡುವುದು. ಐದನೆಯ ಷರತ್ತು ಬಹುಬೇಗ ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕು.

ಶ್ರೀರಂಗಪಟ್ಟಣದ ಕರಾರುಗಳನ್ನು ಅಂತಿಮಗೊಳಿಸಲು ಟಿಪ್ಪುವಿನ ವಕೀಲರು ಮತ್ತು ಬ್ರಿಟಿಷ ಅಧಿಕಾರಿಗಳ ಮಟ್ಟದಲ್ಲಿ ಹಲವು ಸುತ್ತಿನ ಮಾತುಕತೆಗಳು, ಚರ್ಚೆಗಳು ನಡೆದವು. ಕಾರನ್‌ವಾಲೀಸನು ಇದಕ್ಕೆ ಸಮ್ಮತಿ ಸೂಚಿಸಿದಂತೆ ನಿರುಪಾಧಿಕವಾದ ಶ್ರೀರಂಗಪಟ್ಟಣದ ಒಪ್ಪಂದಕ್ಕೆ ಮಾರ್ಚ್ ೧೯, ಕ್ರಿ.ಶ.೧೭೯೨ರಂದು ಸಹಿ ಹಾಕಲಾಯಿತು. ಒಪ್ಪಂದದ ಮುಖ್ಯಾಂಶಗಳೆಂದರೆ,

೧. ಮಿತ್ರ ಪಕ್ಷದವರಿಗೆ ಟಿಪ್ಪು ಅರ್ಧ ಭಾಗವನ್ನು ಬಿಟ್ಟು ಕೊಡಬೇಕಾಯಿತು.

೨. ಮೂರು ಕೋಟಿ ನಲವತ್ತು ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು. ಇದರಲ್ಲಿ ಅರ್ಧವನ್ನು ತಕ್ಷಣದಲ್ಲಿಯೇ ಪಾವತಿ ಮಾಡಬೇಕಾಗಿತ್ತು. ಉಳಿದ ಅರ್ಧವನ್ನು ತಲಾ ನಾಲ್ಕು ತಿಂಗಳ ಅವಧಿಯ ಮೂರು ಕಂತುಗಳಲ್ಲಿ ಪಾವತಿ ಮಾಡಬೇಕಾಗಿತ್ತು.

೩. ಯುದ್ಧ ಖೈದಿಗಳಾಗಿ ಬಂಧಿಸಿರುವ ಸೈನಿಕರೆಲ್ಲರನ್ನೂ ಬಿಡುಗಡೆ ಮಾಡಬೇಕಾಯಿತು.

೪. ಒಪ್ಪಂದ ಷರತ್ತುಗಳು ಈಡೇರುವವರೆಗೆ ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಳುಗಳಾಗಿ ಕಳುಹಿಸಿ ಕೊಡಬೇಕಾಯಿತು.

ಈ ಒಪ್ಪಂದದ ಪ್ರಕಾರ ಬ್ರಿಟಿಷರು ಕಣ್ಣಾನೂರು, ಕಲ್ಲಿಕೋಟೆ ಬಂದರುಗಳೂ ಸೇರಿದಂತೆ ಮಲಬಾರ್, ಕೊಡಗು, ದಿಂಡಿಗಲ್, ಸಂಕರಿದುರ್ಗ ಮತ್ತು ಬಾರಾಮಹಲ್‌ಗಳನ್ನು ಪಡೆದುಕೊಂಡರು. ಮರಾಠ ರಾಜ್ಯದ ಗಡಿಗಳನ್ನು ಕೃಷ್ಣಾನದಿಯವರೆಗೂ ವಿಸ್ತರಿಸಲಾಯಿತು. ತುಂಗಭದ್ರ ನದಿಯ ಉತ್ತರ ಭಾಗ, ಕೃಷ್ಣಾನದಿಯ ದಕ್ಷಿಣಕ್ಕೆ ಇದ್ದ ಕಡಪಾ ಮತ್ತು ಗಂಜೀಕೋಟಾಗಳು ನಿಜಾಮನಿಗೆ ದೊರೆತವು. ಒಕ್ಕೂಟದ ಮೂರು ಪಕ್ಷಗಳಿಗೆ ಹೀಗೆ ದೊರೆತ ಪ್ರದೇಶಗಳಿಂದ ದೊರೆಯುವ ರಾಜ್ಯಾದಾಯಗಳು ಸಮಾನವಾಗಿದ್ದವು.[೧೦೭] ಮಿತ್ರಕೂಟಗಳ ಪ್ರದೇಶಗಳ ಹಂಚಿಕೆಯನ್ನು ಕುರಿತು ಮೊಹಿಬ್ಬುಲ್ ಹಸನ್ ಹೀಗೆಂದು ಹೇಳಿದ್ದಾರೆ. ವ್ಯಾಪ್ತಿಯ ವಿಷಯದಲ್ಲಿ ಬ್ರಿಟಿಷರು ತಮ್ಮ ಮಿತ್ರಪಕ್ಷಗಳೂ ಪಡೆದುಕೊಂಡಷ್ಟನ್ನೇ ತಾವು ಪಡೆದುಕೊಂಡಿದ್ದರಾದರೂ, ನಿಜಾಮನಿಗೆ ಮತ್ತು

ಮರಾಠರಿಗೆ ಹಿಂದೊಮ್ಮೆ ತಮಗೆ ಸೇರಿದಂಥ ಪ್ರದೇಶಗಳು ಮರಳಿ ಬಂದರೆ, ಬ್ರಿಟಿಷರು ಹೊಸದಾದ ಬೆಲೆಬಾಳುವ ಪ್ರದೇಶಗಳನ್ನು ಪಡೆದುಕೊಂಡರು. ಮಲಬಾರ್ ಪ್ರಾಂತ್ಯ ತನ್ನ ಸಾಂಬರ ಪದಾರ್ಥಗಳ ಸಮೃದ್ಧಿಯಿಂದಲೂ, ಕಲ್ಲಿಕೋಟೆ ಮತ್ತು ಕಣ್ಣಾನೂರಿನಂಥ ಮತ್ತು ಒಳ್ಳೆಯ ಬಂದರುಗಳಿಂದಲೂ, ತನ್ನ ಸಾಮಾಜಿಕ ಮಹತ್ವದಿಂದಾಗಿಯೂ ವಿಶೇಷವಾಗಿ ತುಂಬಾ ಬೆಲೆಬಾಳುವಂಥ ಗಳಿಕೆಯೇ ಆಗಿತ್ತು.[೧೦೮]

ಟಿಪ್ಪುವಿಗೆ ಯುದ್ಧ ನಷ್ಟ ಭರ್ತಿಯನ್ನು ಕೊಡುವುದೇ ಕಷ್ಟದ ಸಂಗತಿಯಾಗಿತ್ತು. ತನ್ನ ಖಜಾನೆಯಿಂದ ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿಯನ್ನು ಪಾವತಿ ಮಾಡಿದ್ದ. ಉಳಿದ ಹಣವನ್ನು ಮುಂದಿನ ಎರಡು ವರ್ಷಗಳಲ್ಲಿ ಎರಡು ಕಂತುಗಳಲ್ಲಿ ನೀಡಿದನು. ಪೌರ ಅಧಿಕಾರಿಗಳೂ ಮತ್ತು ನಿವಾಸಿಗಳು ಒಂದು ಕೋಟಿ ಅರವತ್ತು ಲಕ್ಷ ರೂ.ಗಳನ್ನು ಸಂಗ್ರಹಿಸಬೇಕಾಗಿತ್ತು. ಈ ಎಲ್ಲ ಹಣವನ್ನು ನಿಗಧಿತ ಅವಧಿಯಲ್ಲಿ ಸಂಗ್ರಹಿಸಿ ಮಿತ್ರಪಕ್ಷಗಳಿಗೆ ಸಂದಾಯ ಮಾಡಲಾಯಿತು. ಈ ಎರಡು ವರ್ಷಗಳ ಅವಧಿಯಲ್ಲಿ ಟಿಪ್ಪು ಇಬ್ಬರು ಮಕ್ಕಳಾದ ಅಬ್ದುಲ್ ಖಲೀದ್ ಮತ್ತು ಮಾಯಿಜುದ್ದೀನ್ ಬ್ರಿಟಿಷರ ಒತ್ತೆಯಾಳಾಗಿ ಮದ್ರಾಸಿನಲ್ಲಿದ್ದರು.[೧೦೯]

ಈ ಒಪ್ಪಂದವು ಟಿಪ್ಪುವಿನ ಪಾಲಿಗೆ ಅನರ್ಥಕಾರಿಯಾಗಿತ್ತು. ಟಿಪ್ಪುವಿನ ಸುಂದರವಾದ ಅರ್ಧರಾಜ್ಯವನ್ನು ಲೂಟಿ ಮಾಡಲಾಯಿತು. ಖಜಾನೆ ಬರಿದು ಮಾಡಿದರು. ವಸಾಹತು ಶಕ್ತಿಯನ್ನು ಭಾರತದಿಂದ ವಿಮುಕ್ತಗೊಳಿಸಬೇಕೆಂಬ ಅವನ ಧ್ಯೇಯ ನಂದಿ ಹೋಯಿತು. ರಾಜ್ಯವು ಕುಗ್ಗಿತು. ಅವನ ಸೈನಿಕ ಶಕ್ತಿಯು ಇಳಿಮುಖ ಕಂಡಿತು. ಮತ್ತೆ ಅದನ್ನು ಸಜ್ಜುಗೊಳಿಸಲು ಹೆಚ್ಚು ಶ್ರಮಪಡಬೇಕಾಯಿತು.

ಅಡಿಟಿಪ್ಪಣಿಗಳು

೧. ಕರ್ನಾಟಕ ವಿಮೋಚನಾರಂಗ, ಹುತಾತ್ಮ ಟಿಪ್ಪು ಸುಲ್ತಾನ್, ೧೯೯೯, ಪು.೧೩.

೨. ಅದೇ, ಪು.೧೪, ೧೫.

೩. ಅದೇ, ಪು.೧೫.

೪. ಅದೇ, ಪು.೧೬

೫. ಅದೇ, ಪು.೧೬, ೧೮.

೬. ಅದೇ, ಪು.೧೮.

೭. ಕೋ.ಚನ್ನಬಸಪ್ಪ, ಪೂರ್ವೋಕ್ತ, ಪು.೩೯.

೮. ಅದೇ, ಪು.೩೯.

೯. ಸುಧಾಕರ್, ಕರ್ನಾಟಕ ಇತಿಹಾಸ ಸಮೀಕ್ಷೆ, ಪ್ರಜ್ವಲ್ ಪ್ರಕಾಶನ, ಬೆಂಗಳೂರು, ೨೦೦೮, ಪು.೪೨೮, ಮೂಲ: ಹೈದರಾಲಿ ಅಂಡ್ ಟಿಪ್ಪು ಸುಲ್ತಾನ್, ಎಲ್.ಬಿ.ಬೌರಿಂಗ್, ಮೊಹಿಬುಲ್ ಹಸನ್, ಹಿಸ್ಟರಿ ಆಫ್ ಟಿಪ್ಪು ಸುಲ್ತಾನ್.

೧೦. ಅದೇ, ಪು.೪೨೯.

೧೧. ಶೇಕ್ ಅಲಿ ಬಿ., ಪೂರ್ವೋಕ್ತ, ಪು.೪೭೨.

೧೨. ಅದೇ, ಪು.೪೭೨-೪೭೩.

೧೩. ಅದೇ, ಪು.೪೭೩.

೧೪. ಗೋವಿಂದರಾಜು ಸಿ.ಆರ್.(ಪ್ರಸಂ.), ಮೋಹನಕೃಷ್ಣ ರೈ(ಲೇಖಕರು), ಚಾರಿತ್ರಿಕ ಕರ್ನಾಟಕ ಗ್ರಂಥಾಲಯ ಸಮಿತಿ, ಕರ್ನಾಟಕ ವಿಧಾನ ಮಂಡಲ, ವಿಧಾನಸೌಧ, ಬೆಂಗಳೂರು, ೨೦೧೦, ಪು.೧೩, ೧೪.

೧೫. ಅದೇ, ಪು.೧೫.

೧೬. ಅದೇ, ಪು.೧೫.

೧೭. ಎಚ್.ಡಿ.ಶರ್ಮ, ಟಿಪ್ಪೂ ನಿಜ ಸ್ವರೂಪ, ಸಾಹಿತ್ಯ ಸಿಂಧು ಪ್ರಕಾಶನ, ಬೆಂಗಳೂರು, ೨೦೧೨, ಪು.೫.

೧೮. ಅದೇ, ಪು.೫-೬.

೧೯. ಅದೇ, ಪು.೬.

೨೦. ಶೇಕ್‌ಅಲಿ ಬಿ., ಪೂರ್ವೋಕ್ತ, ಪು.೧೧೪.

೨೧. ಅದೇ, ಪು.೧೧೫.

೨೨. ಅದೇ, ಪು.೧೧೫.

೨೩. ಅದೇ, ಪು.೧೧೫.

೨೪. ಹೈದರನಿಗೆ ಲ್ಯಾಲಿ ಬರೆದದ್ದು, ತಾರೀಕು ನಮೂದಿಸಿಲ್ಲ, ಆರ್ಮೆಮ್ಯಾನ್ ಸ್ಕ್ರಿಪ್ಟ್, ಸಂಪುಟ ೮, ಪು.೨೦೨೯.

೨೫. ಷೇಕ್‌ಅಲಿ ಬಿ., ಪೂರ್ವೋಕ್ತ, ಪು.೧೧೬.

೨೬. ಅದೇ, ಪು.೧೧೮.

೨೭. ಬೋರ್ಡ್ಸ್‌ಮಿನಿಟ್ಸ್, ಕನ್ಸ್., ೧೨ ಫೆಬ್ರವರಿ ೧೭೬೫, ಸಂಪುಟ ೫೨, ಪು.೧೦೬-೧೦೭.

೨೮. ಷೇಕ್‌ಅಲಿ ಬಿ., ಪು.೧೨೦.

೨೯. ಮದರಾಸಿಗೆ ಹೈದರ್ ಬರೆದದ್ದು ಕನ್ಸ್., ಜೂನ್ ೧೭೬೬, ಎಮ್.ಎಮ್.ಎಸ್.ಪಿ.ರೇಂಜ್, ೨೫೧, ಸಂಪುಟ ೫೫, ಪು.೩೪೨, ೪೦೯.

೩೦. ಷೇಕ್‌ಅಲಿ ಬಿ., ಪೂರ್ವೋಕ್ತ, ಪು.೧೨೧.

೩೧. ಅದೇ, ಪು.೧೨೨.

೩೨. ಅದೇ, ಪು.೧೨೪

೩೩. ಬೋರ್ಡ್ಸ್ ಮಿನಿಟ್ಸ್ ಕನ್ಸ್., ೮ ಡಿಸೆಂಬರ್ ೧೭೬೬, ಸಂಪುಟ ೫೭, ಪು.೩೭೨.

೩೪. ಷೇಕ್ ಅಲಿ ಬಿ., ಪೂರ್ವೋಕ್ತ, ಪು.೧೨೫.

೩೫. ಸ್ಮಿತ್‌ಗೆ, ಬೋರ್ಚಿಯಾರ್ ಬರೆದದ್ದು, ೧ ಏಪ್ರಲ್ ೧೭೬೭, ಅರ್ಮೆಮ್ಯಾನ್ ಸ್ಕ್ರಿಪ್ಟ್, ಸಂಪುಟ ೭೬, ಪು.೫೯.

೩೬. ಷೇಕ್ ಅಲಿ ಬಿ., ಪೂರ್ವೋಕ್ತ, ಪು.೧೨೦.

೩೭. ಅದೇ, ಪು.೧೩೨.

೩೮. ಅದೇ, ಪು.೧೩೫.

೩೯. ಅದೇ, ಪು.೧೩೬, ೧೩೭.

೪೦. ಅದೇ, ಪು.೧೩೭, ೧೩೮.

೪೧. ಅದೇ, ಪು.೧೩೮.

೪೨. ಅದೇ, ಪು.೧೪೦.

೪೩. ಅದೇ, ಪು.೧೪೧.

೪೪. ಅದೇ, ಪು.೧೪೪.

೪೫. ಅದೇ, ಪು.೧೪೪.

೪೬. ಅದೇ, ಪು.೧೫೦.

೪೭. ಬೋರ್ಡ್ ಮಿನಿಟ್ಸ್, ಕನ್ಸ್, ೨೫ ಫೆಬ್ರವರಿ ೧೭೬೯, ಸಂಪುಟ ೬೫, ಪು.೧೧೫.

೪೮. ಷೇಕ್ ಅಲಿ ಬಿ., ಪೂರ್ವೋಕ್ತ, ಪು.೧೫೧–೧೫೨.

೪೯. ಪಾಕ್‌ಗೆ ಗುಡಾಲ್ ಬರೆದದ್ದು, ೩೦ ಜೂನ್ ೧೭೬೯, ರಿಪೋರ್ಟ್ ಆನ್ ಪಾಕ್ ಮ್ಯಾನ್‌ಸ್ಕ್ರಿಪ್ಟ್, ನಂ.೭೯, ಪು.೧೦೯.

೫೦. ಇಂಗ್ಲೆಂಡಿಗೆ ಎಫ್.ಸಿ. ಬ್ರೌನ್ ಬರೆದದ್ದು, ೨೩ ಜುಲೈ, ೧೭೬೯, ಹೋಮ್ ಮಿಲೇನಿಯಸ್, ಸಂಪುಟ, ೭೬೮, ಪು.೩೮೮.

೫೧. ಆರ್ಮೇಗೆ, ಮ್ಯಾಕೇ ಬರೆದದ್ದು, ೪ ಜೂನ್ ೧೭೬೯, ಅರ್ಮೆ ಮ್ಯಾನ್‌ಸ್ಕ್ರಿಪ್ಟ್ ಸಂಪುಟ ೩೦, ಪು.೧೧೨.

೫೨. ಪಾಕ್‌ಗೆ ಜೇಮ್ಸ್ ಬೋರ್ಚಿಯರ್ ಬರೆದದ್ದು, ೨೪ ಜೂನ್ ೧೭೬೯, ಅಡಿಷನಲ್ ಮ್ಯಾನ್ ಸ್ಕ್ರಿಪ್ಟ್, ೩೪, ಪು.೧೦೮.

೫೩. ರುಕ್ನುದ್ದೌಲ, ಮದರಾಸಿಗೆ ಬರೆದದ್ದು, ೧೪ ಮೇ, ೧೭೬೯, ಎಮ್.ಎಮ್.ಎಸ್.ಪಿ., ರೇಂಜ್, ೨೫೧, ಸಂಪುಟ ೬೫, ಪು.೩೦೪.

೫೪. ಹೈದರನು ಮದರಾಸಿಗೆ ಬರೆದದ್ದು, ೨೪ ಜುಲೈ ೧೭೬೯, ಪು.೩೭೪–೩೭೫.

೫೫. ಸ್ಮಿತ್, ಆರ್ಮೆಗೆ ಬರೆದದ್ದು, ೨ ಫೆಬ್ರವರಿ ೧೭೬೯, ಆರ್ಮೇಮ್ಯಾನ್ ಸ್ಕ್ರಿಪ್ಟ್, ಸಂ.೧, ಪು.೧೭೩.

೫೬. ಷೇಕ್ ಅಲಿ ಬಿ., ಪೂರ್ವೋಕ್ತ, ಪು.೧೬೪.

೫೭. ಅದೇ, ಪು.೧೬೬.

೫೮. ಅದೇ, ಪು.೧೬೭

೫೯. ಅದೇ, ಪು.೧೮೩

೬೦. ಅದೇ, ಪು.೧೮೫.

೬೧. ಅದೇ, ಪು.೧೮೭, ೧೮೮.

೬೨. ಬೇಲಿ ಮದರಾಸಿಗೆ ಬರೆದದ್ದು, ೬ ಸೆಪ್ಟೆಂಬರ್ ೧೭೮೦, ಸೆಪ್ಟೆಂಬರ್ ೭, ೧೭೮೦, ಪು.೧೪೩೫.

೬೩. ಷೇಕ್ ಅಲಿ ಜಿ., ಪು.೧೮೮.

೬೪. ಅದೇ, ಪು.೧೯೦.

೬೫. ಅದೇ, ಪು.೧೯೧.

೬೬. ಸಿ.ಸಿ.ಡೇವಿಸ್, ದಿ ಪ್ರವೇಟ್ ಕರ್‌ಸ್ಪಾಂಡೆನ್ಸ್ ಆಫ್ ಲಾರ್ಡ್ ಮೆಕಾರ್ಟ್ನೆ(೧೭೮೧–೮೫), ಲಂಡನ್, ೧೯೫೦, ಪು.೨೪.

೬೭. ಐರ್‌ಕೂಟ್, ಮೆಕಾರ್ಟ್ನೆಗೆ ಬರೆದದ್ದು, ೪ ಜುಲೈ, ೧೭೮೧, ಹೋಮ್ ಮಿಲೇನಿಯಸ್, ಸಂಪುಟ ೨೪೫, ಪು.೧೩.

೬೮. ಷೇಕ್ ಅಲಿ ಬಿ., ಪೂರ್ವೋಕ್ತ, ಪು.೧೯೫.

೬೯. ಅದೇ, ಪು.೨೦೩.

೭೦. ಸಲ್ಲಿವನ್ ಮದರಾಸಿಗೆ ಬರೆದದ್ದು, ೨೯ ಏಪ್ರಿಲ್ ೧೭೮೨, ೯ ಮೇ ೧೭೮೨, ಎಮ್.ಎಮ್.ಎಸ್.ಪಿ., ರೇಂಜ್, ಸಂಪುಟ ೧೩, ಪು.೧೪೨೮, ೧೪೨೯.

೭೧. ಸಲ್ಲಿವನ್ ಮುಂಬಯಿಗೆ ಬರೆದದ್ದು, ೨೨ ಮೇ, ೧೭೮೨, ೧೧ ಜೂನ್ ೧೭೮೨, ಸಂಪುಟ ೧೩, ಪು.೧೮೧೦.

೭೨. ಷೇಕ್ ಅಲಿ ಬಿ., ಪು.೨೦೮.

೭೩. ಅದೇ, ಪು.೨೦೯.

೭೪. ಶಿವರಾಮಯ್ಯ, ಟಿಪ್ಪು ಸುಲ್ತಾನ್, ಧಾತ್ರಿ ಪ್ರಕಾಶನ, ಬೆಂಗಳೂರು, ೨೦೧೧, ಪು.೨೬.

೭೫. ಷೇಕ್ ಅಲಿ ಬಿ., ಪೂರ್ವೋಕ್ತ, ಪು.೩೨೬.

೭೬. ಪಾಂಡಿಚೇರಿ ಅರ್ಕೈವ್ಸ್ ಮ್ಯಾನ್‌ಸ್ಕ್ರಿಪ್ಟ್ ನಂಬರ್ ೧೬೬೪

೭೭. ಷೇಕ್ ಅಲಿ ಬಿ., ಪೂರ್ವೋಕ್ತ, ಪು.೩೪೨.

೭೮. ಅದೇ, ಪು.೩೨೮–೩೨೯.

೭೯. ಗ್ಲಿಗ್ ಜಿ.ಆರ್., ದಿ ಲೈಫ್ ಆಫ್ ಥಾಮಸ್ ಮನ್ರೊ, ಸಂಪುಟ ೧, ಲಂಡನ್, ೧೮೩೦, ಪು.೧೦೮.

೮೦. ಷೇಕ್ ಅಲಿ ಬಿ., ಪು.೩೩೧–೩೩೨.

೮೧. ಅದೇ, ಪು.೩೩೩.

೮೨. ಅದೇ, ಪು.೩೩೪-೩೩೫.

೮೩. ಅದೇ, ಪು.೩೪೧.

೮೪. ಅದೇ, ಪು.೩೪೫

೮೫. ಅದೇ, ಪು.೩೪೬, ೩೪೭.

೮೬. ಅದೇ, ಪು.೩೯೫.

೮೭. ಮಾರ್ಟಿನ್ ಆರ್.ಎಂ., ಡಿಸ್ಪಾಚಸ್, ಮಿನಿಟ್ಸ್ ಆ್ಯಂಡ್ ಕರೆಸ್ಪಾಂಡೆನ್ಸ್ ಆಫ್ ದ ಮಾರ್ಕ್ವಿಸ್ ಆಫ್ ವೆಲ್ಲಸ್ಲಿ, ಲಂಡನ್, ೧೮೩೬-೩೭, ಸಂಪುಟ ೧, ಪು.೬೪೩.

೮೮. ಅದೇ, ಪು.೬೪.

೮೯. ಅದೇ, ಪು.೬೫.

೯೦. ಅದೇ, ಪು.೬೭.

೯೧. ಅದೇ, ಪು.೨೬೯.

೯೨. ಷೇಕ್ ಅಲಿ ಬಿ., ಪು.೪೦೫.

೯೩. ಡಫ್, ಸಂಪುಟ ೨, ಪೊಲಿಟಿಕಲ್ ಕನ್ಸಲ್ಟೇಷನ್ಸ್, ೨೦ ಮೇ, ೧೭೯೯, ಪು.೨೮೫.

೯೪. ಪೊಲಿಟಿಕಲ್ ಕನ್ಸಲ್ಟೇಷನ್ಸ್, ೧೫ ಏಪ್ರಿಲ್, ೧೭೯೯, ಪು.೭

೯೫. ಶಿವರಾಮಯ್ಯ, ಪೂರ್ವೋಕ್ತ, ಪು.೯೦.

೯೬. ಅದೇ, ಪು.೯೦.

೯೭. ಏಷಿಯಾಟಿಕ್ ಆನ್ಯುಯಲ್ ರಿಜಿಸ್ಟಾರ್ ೧೭೯೯, ಪು.೮೪

೯೮. ಷೇಕ್ ಅಲಿ ಬಿ., ಪೂರ್ವೋಕ್ತ, ಪು.೩೯೯

೯೯. ಎಂ.ಎಚ್.ಖಾನ್, ಹಿಸ್ಟರಿ ಆಫ್ ಟಿಪ್ಪು ಸುಲ್ತಾನ್, ಕಲ್ಕತ್ತ, ೧೯೫೧, ಪು.೩೧೫.

೧೦೦. ಫಜಲುಲ್ ಹಸನ್, ಟಿಪ್ಪು ಸುಲ್ತಾನ್, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ೨೦೦೨, ಪು.೪೪.

೧೦೧. ಅದೇ, ಪು.೪೫-೪೬.

೧೦೨. ಟಾರೆನ್ಸ್, ಟಿಪ್ಪು ಸಾಹೇಬ್, ಲಂಡನ್, ೧೮೮೬, ಪು.೨೨೫.

೧೦೩. ಮಾರ್ಟಿನ್ ಆರ್.ಎಂ., ಪೂರ್ವೋಕ್ತ, ಸಂಪುಟ ೨, ಪು.೩೮.

೧೦೪. ಎಚ್.ಡಿ.ಶರ್ಮ, ಪೂರ್ವೋಕ್ತ, ಪು.೨೦.

೧೦೫. ಷೇಕ್ ಅಲಿಬಿ, ಪೂರ್ವೋಕ್ತ, ಪು.೨೪೫-೨೪೬.

೧೦೬. ಮಾರ್ಕ್ ವಿಲ್ಕ್ಸ್, ಪೂರ್ವೋಕ್ತ, ಸಂಪುಟ ೨, ಪು.೬೩.

೧೦೭. ಎಚ್.ಡಿ.ಶರ್ಮ, ಪೂರ್ವೋಕ್ತ, ಪು.೩೮, ೩೯.

೧೦೮. ಮೊಹಿಬುಲ್ ಹಸನ್, ಹಿಸ್ಟರಿ ಆಫ್ ಟಿಪ್ಪು ಸುಲ್ತಾನ್, ಪು.೨೬೪.

೧೦೯. ಎಚ್.ಡಿ.ಶರ್ಮ ಪೂರ್ವೋಕ್ತ, ಪು.೩೯.

ಅಧ್ಯಾಯ ಐದು

ಫ್ರೆಂಚ್ ಮಾದರಿ ಆಧುನೀಕರಣ ಮತ್ತು ಹೊಸ ಆವಿಷ್ಕಾರಗಳು

ಅಧ್ಯಾಯ ಐದು

ಫ್ರೆಂಚ್ ಮಾದರಿ ಆಧುನೀಕರಣ ಮತ್ತು ಹೊಸ ಆವಿಷ್ಕಾರಗಳು

ಹದಿನೆಂಟನೆಯ ಶತಮಾನದ ಜಗತ್ತಿಗೆ ಬೇಕಾದ ಅಗತ್ಯಗಳ ವಾಸ್ತವ ಅರಿವು ಟಿಪ್ಪುವಿಗಿತ್ತು. ಆಧುನಿಕತೆ ಆತನ ಜೀವನದ ಮಹತ್ವದ ಅಂಶಗಳಲ್ಲೊಂದು. ಒಂದು ಕಡೆ ಯುರೋಪ್ ಹೊಸ–ಹೊಸ ಆವಿಷ್ಕಾರ, ಅನ್ವೇಷಣೆ, ಸಮುದ್ರಯಾನ, ಹೊಸ ಜ್ಞಾನ ಮತ್ತು ಪುನರುಜ್ಜೀವನದಲ್ಲಿ ಅಗಾಧ ಪ್ರಗತಿ ಸಾಧಿಸುತ್ತಿದ್ದರೆ, ಭಾರತಕ್ಕೆ ತನ್ನ ವಿಕಾಸದ ನೆಲೆಗಳನ್ನು ಹೊರಜಗತ್ತಿಗೆ ಸಮರ್ಥವಾಗಿ ಬಿಂಬಿಸಲು ಸಾಧ್ಯವಾಗಲಿಲ್ಲ. ಭಾರತದ ಅಂತಹ ಪರಿಸ್ಥಿತಿಗೆ ಟಿಪ್ಪು ಕಾರಣಗಳನ್ನು ಹುಡುಕಿದ. ತಮ್ಮ ನಾಡಿನ ಆದರ್ಶ ನೀತಿಗಳ ಜೊತೆ ಪಾಶ್ಚಾತ್ಯ ಪರಿಕಲ್ಪನೆಗಳ ಸಂಕರವು ಊರ್ಜಿತವಾಗದೆ ಸಾಯುವುದನ್ನು ಆತ ಮನಗಂಡ. ಟಿಪ್ಪು ಫ್ರಾನ್ಸ್ ಜೊತೆ ಪತ್ರವ್ಯವಹಾರ ಇಟ್ಟುಕೊಳ್ಳಲು, ಜಾಕೋಬಿನ್ ಕ್ಲಬ್‌ನ ಸದಸ್ಯನಾಗಲು, ತನ್ನ ಅರಮನೆಯ ಆವರಣದಲ್ಲಿ ಸ್ವಾತಂತ್ರ್ಯ ವೃಕ್ಷ ನೆಡಲು ಮತ್ತು ತನ್ನನ್ನು ಪ್ರಜೆ ಎಂದು ಕರೆದುಕೊಳ್ಳಲು ಇದೇ ಕಾರಣ. ಒಂದೇ ಬಗೆಯ ಅಧಿಕಾರ ಮತ್ತು ನಿರಂಕುಶ ಪ್ರಭುತ್ವ ರಾಜಕೀಯ ವ್ಯವಸ್ಥೆಯನ್ನೇ ಹಾಳುಮಾಡುತ್ತದೆ, ಜಾತಿಯ ಕಟ್ಟುಪಾಡುಗಳು ಸಾಮಾಜಿಕ ವ್ಯವಸ್ಥೆಗೆ ಊನ ತರುತ್ತವೆ. ಪ್ರತಿ ಸಂಸ್ಥಾನ ತನ್ನದೇ ಅಧಿಕಾರ ಸ್ಥಾಪಿಸಬೇಕೆಂಬ ಹಠ ರಾಷ್ಟ್ರವನ್ನು ಛಿದ್ರಗೊಳಿಸುತ್ತದೆ ಎಂಬುದನ್ನು ಅರಿತಿದ್ದನು. ಅಖಂಡ ರಾಷ್ಟ್ರದ ಬಗೆಗಿನ ಆತನ ಕಲ್ಪನೆ, ಮಧ್ಯವರ್ತಿಗಳ ನಿರ್ಮೂಲನೆ, ಸುವ್ಯವಸ್ಥೆಯ ಕಾನೂನು ರಚನೆ, ಸಮರ್ಥ ಆಡಳಿತ ವ್ಯವಸ್ಥೆ ಇತ್ಯಾದಿ ಆತನ ಕಾಲವನ್ನು ಮೀರಿದ ಆಧುನಿಕ ವಿಚಾರಗಳಾಗಿದ್ದವು. ಟಿಪ್ಪುವಿನ ಬದ್ಧ ದ್ವೇಷಿಗಳೇ ಆತನ ಆದರ್ಶಗಳನ್ನು ಪಾಲಿಸಿದ್ದು ಆತನಿಗೆ ಸಂದ ಅಪ್ರತಿಮ ಗೌರವವಾಗಿದೆ.[೧]

೫.೧. ಕೃಷಿಕೇಂದ್ರಿತ ಆಧುನೀಕರಣ

ಆಧುನಿಕ ಮೈಸೂರಿನ ಅರ್ಥವ್ಯವಸ್ಥೆಯು ಕೃಷಿಯನ್ನೇ ಅವಲಂಬಿಸಿರುವುದರಿಂದ ಟಿಪ್ಪುವಿನ ಮುಖ್ಯವಾದ ಉದ್ದೇಶವೂ ಕೃಷಿ ಉತ್ಪನ್ನಗಳ ಅಭಿವೃದ್ಧಿಯೇ ಆಗಿತ್ತು. ಇಂತಹ ದೃಷ್ಟಿಕೋನವನ್ನಿಟ್ಟು

ಕೊಂಡು ಹೊರಡಿಸಿದ ಒಂದು ಆಜ್ಞೆಯು ಆತನು ರೈತರ ಕ್ಷೇಮದ ಬಗ್ಗೆ ತಳೆದಿರುವ ನೀತಿಯನ್ನು ತಿಳಿಸುತ್ತವೆ. ಅದೇನೆಂದರೆ ರಾಜ್ಯದ ಖಜಾನೆಗೆ ಭೂಕಂದಾಯವೇ ಮೂಲ ಸಂಪತ್ತು ಆಗಿರುವುದರಿಂದ ರೈತರಿಂದ ಕ್ಲುಪ್ತ ಸಮಯಕ್ಕೆ ಸರಿಯಾಗಿ ವಸೂಲಿ ಮಾಡುವುದು ಮುಖ್ಯ. ಆದರೆ ಅವರು ಬಿಕ್ಕಟ್ಟಿನಲ್ಲಿರುವಾಗ ವಸೂಲಿ ಮಾಡಿದರೆ ರಾಜ್ಯದಲ್ಲಿ ಸರಕಾರದ ನಿಯಮಗಳನ್ನು ಪಾಲಿಸುವ ರೈತರು ತಮ್ಮ ಜಾನುವಾರುಗಳನ್ನು ಮಾರಾಟ ಮಾಡಿ ಕಂದಾಯವನ್ನು ಸಲ್ಲಿಸುವ ಪರಿಸ್ಥಿತಿ ಉದ್ಭವವಾಗುತ್ತದೆ. ಹಾಗಾದಾಗ ರಾಜ್ಯವು ಆರ್ಥಿಕ ಮುಗ್ಗಟ್ಟು ಎದುರಿಸಬೇಕಾಗುತ್ತದೆ. ಅಂಥ ಅಕಾಲ ವಸೂಲಿಯನ್ನು ಬಿಟ್ಟು ನಿಲ್ಲಿಸಿರುವುದಲ್ಲದೆ ಆದಾಯವಿಲ್ಲದ ರೈತ ವರ್ಗಕ್ಕೆ ಜಾನುವಾರು ಮತ್ತು ಧಾನ್ಯಗಳನ್ನು ಸಾಲವಾಗಿ ನೀಡಿ ಅವರನ್ನು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಿದನು. ಹಳೆಯ ಕಾಲುವೆಗಳನ್ನು, ಅಣೆಕಟ್ಟುಗಳನ್ನು ದುರಸ್ತಿ ಮಾಡಿದುದಲ್ಲದೆ ಕೆಲವು ಹೊಸದನ್ನು ಕಟ್ಟಿಸಿದನು. ಹಾಗೆಯೇ ನದಿಗಳ ನೀರನ್ನು ಸಂಗ್ರಹಿಸಲು ಮಾಡಿರುವ ಹಳೆಯ ಡ್ಯಾಮ್‌ಗಳನ್ನು ದುರಸ್ತಿ ಮಾಡಿಸಿದನು ಮತ್ತು ಹೊಸದವುಗಳನ್ನು ಕಟ್ಟಿಸಿದನು. ಗ್ರಾಮದ ಮುಖ್ಯಸ್ಥರಾದ ಪಟೇಲರು, ಶಾನುಭೋಗರು ರೈತರಿಗೆ ಕಿರುಕುಳ ಕೊಡುವುದನ್ನು ತಡೆಗಟ್ಟಿದನು.[೨] ಅಂಥವರನ್ನು ಶಿಕ್ಷೆಗೆ ಗುರಿಪಡಿಸಿದನು. ಈ ಎಲ್ಲಾ ರೀತಿ ರಿವಾಜುಗಳು ಹೊಸದೇನೂ ಆಗಿರಲಿಲ್ಲ, ಬದಲಾಗಿ ಪೂರ್ವಕಾಲದಿಂದಲೂ ಚಾಲನೆಯಲ್ಲಿದ್ದವುಗಳಾಗಿದ್ದವು. ಟಿಪ್ಪು ಅವುಗಳನ್ನು ಯಥಾವತ್ತಾಗಿ ಮುಂದುವರೆಸಿದನು.[೩]

ಟಿಪ್ಪು ರಾಜ್ಯದಲ್ಲಿ ಪಾಳು ಬಿದ್ದಿದ್ದ ಸಾವಿರಾರು ಎಕರೆ ಭೂಮಿಯನ್ನು ಕೃಷಿ ಯೋಗ್ಯ ಮಾಡಲು ಶ್ರಮಿಸಿದನು. ನಿಖಿಲೇಶ್ ಗುಹಾ ಬರೆಯುವಂತೆ "ಟಿಪ್ಪು ತನ್ನ ಸಾಮ್ರಾಜ್ಯದ ಕೃಷಿ ವಿಸ್ತರಣೆ ಬಗ್ಗೆ ಹಲವು ಕ್ರಮ ಕೈಗೊಂಡ. ಹತ್ತು ವರ್ಷಗಳಿಂದಲೂ ಬೀಳುಬಿದ್ದ ಭೂಮಿಯನ್ನು ರೈತರಿಗೆ ಕೂಲಿಯ ಆಧಾರದಲ್ಲಿ ಉಳಲು ನೀಡಲಾಗುತ್ತಿತ್ತು. ಮೊದಲ ವರ್ಷ ಯಾವುದೇ ತೆರಿಗೆ ವಿಧಿಸುತ್ತಿರಲಿಲ್ಲ. ಬೆಟ್ಟ-ಗುಡ್ಡಗಳ ಜಮೀನನ್ನು ರೈತರಿಗೆ ಹಂಚಿ ತೆರಿಗೆ ರಹಿತ ಉಳುಮೆಗೆ ಅವಕಾಶ ನೀಡಿ ಉತ್ತೇಜಿಸಲಾಗುತ್ತಿತ್ತು. ಕೃಷಿಯ ವಾಣಿಜ್ಯೀಕರಣ ತೀವ್ರಗೊಂಡಿತು. ವ್ಯಾಪಾರಿ ಆರ್ಥಿಕತೆ ಹಳ್ಳಿಗಳಿಗೂ ಕಾಲಿಟ್ಟು ಊಳಿಗಮಾನ್ಯ ಶಕ್ತಿಗಳ ಹಿಡಿತ ಮತ್ತಷ್ಟು ಸಡಿಲಗೊಂಡಿತು." ಬುಕಾನನ್ ಗುರುತಿಸಿದಂತೆ ದೇಶದ ಇತರೆಡೆ ಭೂಕಂದಾಯ ಧಾನ್ಯ ರೂಪದಲ್ಲಿ ಪಾವತಿ ಮಾಡುತ್ತಿದ್ದರೆ, ಮೈಸೂರು ಪ್ರಾಂತದಲ್ಲಿ ಹಣದ ರೂಪದ ಪಾವತಿ ಇತ್ತು. ತೆರಿಗೆ ಪ್ರಗತಿ ಪರವಾಗಿತ್ತು. ಪ್ರತಿ ಎರಡು-ಮೂರು ಮೈಲಿಗೊಂದು ಸಂತೆ ಸೇರುತ್ತಿತ್ತು. ಗುಬ್ಬಿ ಮತ್ತು ಹರಿಹರ ಸಂತೆಗಳು ಇಡೀ ಸಂಸ್ಥಾನದಲ್ಲೇ ಅತಿ ದೊಡ್ಡ ಸಂತೆಯಾಗಿತ್ತು. ರೈತರು ಸರಕನ್ನು ತಂದು ಸಗಟಾಗಿ ಅಥವಾ ಚಿಲ್ಲರೆಯಾಗಿ ಮಾರುತ್ತಿದ್ದರು. ವಾಣಿಜ್ಯ ಬೆಳೆಗಳ ಉತ್ಪಾದನೆ ಹೆಚ್ಚಿತು. ಕಬ್ಬು, ಅಡಿಕೆ, ವೀಳ್ಯೆದೆಲೆ ರೇಷ್ಮೆ, ತಂಬಾಕು, ನೀಲಿ, ಮಾವು, ಮೆಣಸುಗಳ ಕೃಷಿಯನ್ನು ಟಿಪ್ಪು

ವಿಶೇಷವಾಗಿ ಪ್ರೋತ್ಸಾಹಿಸಿದ. ಬುಕಾನನ್ ಗುರುತಿಸಿದಂತೆ ಬೆಂಗಳೂರು ಬಳಿ ನಾಲ್ಕು ಬಗೆಯ ತೋಟಗಳಿದ್ದವು. ತರಕಾರಿ ತೋಟ, ತೆಂಗಿನ ತೋಟ, ಎಲೆ ತೋಟ, ಹೂವಿನ ತೋಟ, ಕರಾವಳಿ ಪ್ರಾಂತ್ಯದಲ್ಲಿ ವೀಳ್ಯದೆಲೆ, ಗೋಡಂಬಿ, ತಂಬಾಕು, ಭತ್ತದ ಉತ್ಪಾದನೆ ವಿಶೇಷ ಪ್ರೋತ್ಸಾಹ ಪಡೆದುಕೊಂಡಿತ್ತು.[೪]

ಶ್ರೀರಂಗಪಟ್ಟಣದಿಂದ ಒಂಭತ್ತು ಕಿ.ಮೀ.ದೂರದಲ್ಲಿ ಕಾವೇರಿ ನದಿಗೆ ಕೃಷ್ಣರಾಜಸಾಗರ ಅಣೆಕಟ್ಟನ್ನು ಕಟ್ಟಲಾಗಿದೆ. ಈ ಸ್ಥಳದಲ್ಲಿ ೧೯೧೧ರಲ್ಲಿ ಉತ್ಖನನ ಆರಂಭವಾದಾಗ ಮಣ್ಣಿನಡಿಯಿಂದ ಒಂದು ಶಿಲಾಚಪ್ಪಡಿ ದೊರೆಕಿದ್ದು ಈ ಶಿಲಾಶಾಸನ ೧೭೯೮ ಜೂನ್ ೧೨ರ ದಿನಾಂಕದಲ್ಲಿ ಬರೆಸಲಾಗಿದೆ. ಈ ಶಾಸನದಲ್ಲಿ ಎರಡು ಪ್ರಮುಖ ವಿಷಯಗಳು ಗಮನಾರ್ಹವೆನಿಸಿವೆ ಮತ್ತು ಐತಿಹಾಸಿಕ ಮಹತ್ವ ಪಡೆದಿವೆ. ೧. ಇದೇ ಸ್ಥಳದಲ್ಲಿ ಟಿಪ್ಪು ಒಂದು ಅಣೆಕಟ್ಟಿಗೆ ಅಡಿಪಾಯ ಹಾಕಿದ್ದು. ೨. ಈ ನೀರಾವರಿಯನ್ನು ಉಪಯೋಗಿಸಿ ಹೊಸ ಬಯಲು ಪ್ರದೇಶಗಳಲ್ಲಿ ಕೃಷಿಯನ್ನು ಆರಂಭಿಸುವ ರೈತರಿಗೆ ಸರಕಾರ ಕಂದಾಯದಲ್ಲಿ ೧/೨ ಭಾಗವನ್ನು ಮನ್ನಾ ಮಾಡುತ್ತದೆ ಎಂದು ಘೋಷಿಸಿರುವ ವಿಷಯವನ್ನು ಈ ಶಾಸನ ತಿಳಿಸುತ್ತದೆ. ಇಷ್ಟಾಗ್ಯೂ ಟಿಪ್ಪುವಿನ ದೂರಾಲೋಚನೆಯನ್ನು ಪ್ರಶಂಸಿಸಲೇ ಬೇಕು. ಏಕೆಂದರೆ ನೂರಾರು ವರ್ಷಗಳ ನಂತರ ಅದೇ ಸ್ಥಳದಲ್ಲಿ ಇಂಜಿನಿಯರ್‌ಗಳು ಹೊಸ ಆಣೆಕಟ್ಟನ್ನು ಕಟ್ಟಲು ಸ್ಥಳ ಗುರುತಿಸಿದರು.

ಟಿಪ್ಪು ಕೃಷಿ ಉತ್ಪನ್ನಗಳ ತಯಾರಿಕೆಗೂ ಹೆಚ್ಚು ಪ್ರೋತ್ಸಾಹ ನೀಡಿದನು.[೫] ಟಿಪ್ಪು ಇದೇ ದೃಷ್ಟಿಕೋನದಿಂದ ಒಂದು ಆಜ್ಞೆಯನ್ನು ಹೊರಡಿಸಿ ಉತ್ತಮ ಬಗೆಯ ಸಕ್ಕರೆ ತಯಾರಿಸಲು ಪ್ರಾದೇಶಿಕ ಮಟ್ಟದಲ್ಲಿ ತರಬೇತಿ ನೀಡಿದನು. ಟಿಪ್ಪುವಿನ ಮತ್ತೊಂದು ಆವಿಷ್ಕಾರವೆಂದರೆ ಮೈಸೂರಿನಲ್ಲಿ ರೇಷ್ಮೆ ಕೃಷಿ ಆರಂಭಿಸಿರುವುದು. ಇದು ಒಂದು ಲಾಭದಾಯಕ ಬೆಳೆ ಮತ್ತು ಉದ್ಯಮವಾಗಿ ಯಶಸ್ವಿಯಾಯಿತು. ರೇಷ್ಮೆ ಹುಳುವಿಗೆ ಮೇವಿಗಾಗಿ ಬೇಕಾಗಿರುವ ಹಿಪ್ಪನೇರಳೆ ಗಿಡಗಳ ಕೃಷಿಯನ್ನು ಆರಂಭಿಸಿ, ಅದನ್ನು ನಿರ್ದಿಷ್ಟವಾದ ಮಾಲೀಕರಿಗೆ ಅಥವಾ ತಾಲೂಕು ದಾರ್‌ಗಳಿಗೆ ಮೀಸಲು ನೀಡಿದ್ದ. ರೇಷ್ಮೆ ಹುಳುಗಳ ಕೃಷಿಗೆ ಸುಮಾರು ೨೧ ಕಾರ್ಖಾನೆಗಳನ್ನು ಸ್ಥಾಪಿಸಿದ್ದನು. ರೇಷ್ಮೆ ಹುಳುಗಳನ್ನು ಮಾಸಿಕವಾಗಿ ಬೆಳೆಸಿ ಅದನ್ನು ಮಾರಾಟ ಮಾಡಲಾಗುತ್ತಿತ್ತು. ಇದರಿಂದ ಬಂದ ಲಾಭ ಖಜಾನೆಗೆ ಹೋಗುತ್ತಿತ್ತು. ಇದರ ಲಾಭವನ್ನು ಅರಿತು ಟಿಪ್ಪು ವರ್ಷದಿಂದ ವರ್ಷಕ್ಕೆ ರೇಷ್ಮೆ ಉತ್ಪನ್ನವನ್ನು ವೃದ್ದಿಸಿದನು.[೬] ಟಿಪ್ಪು ಸದಾ ಕೈಗಾರಿಕೆಗೆ ಸಂಬಂಧಿಸಿದ ಹೊಸ ಪದ್ಧತಿಗಳು ಅಥವಾ ಅನ್ವೇಷಣೆಗಳನ್ನು ಕಂಡರೂ ಕೂಡಲೇ ರಾಯಭಾರಿಗಳನ್ನು ಕಳುಹಿಸಿ ತರಿಸಿಕೊಂಡು ಉತ್ಪಾದನೆಗೆ ಹಚ್ಚುತ್ತಿದ್ದ. ಟಿಪ್ಪುವಿನ ಈ ಅದಮ್ಯ ಅಭಿವೃದ್ಧಿಶೀಲ ಗುಣದಿಂದಲೇ ವಿದೇಶಿ ರೇಷ್ಮೆ ಬೆಳೆ ಕರ್ನಾಟಕದಲ್ಲಿ ಪರಿಚಯಗೊಂಡಿತು. ಟಿಪ್ಪು ರೇಷ್ಮೆ ಕೃಷಿಯ ಬಗ್ಗೆ ಎಷ್ಟು ಜತನ ವಹಿಸಿದನೆಂದರೆ ೧೭೮೬ರಲ್ಲಿ ಯುದ್ಧದ ಮಧ್ಯೆ ಸುತ್ತುವರೆಯಲ್ಪಟ್ಟಿದ್ದರೂ

ತನ್ನ ಬಿಡುವಿಲ್ಲದ ದಿನಚರಿಯ ನಡುವೆಯೂ ವಿದೇಶದಿಂದ ತರುವ ರೇಷ್ಮೆ ಗೂಡುಗಳನ್ನು ಹೇಗೆ ಕಾಪಾಡಿ ಬೆಳೆಸಬೇಕು ಎಂಬುದರ ಬಗ್ಗೆ ಅಧಿಕಾರಿಗಳಿಗೆ ಸುದೀರ್ಘ ಪತ್ರ ಬರೆದು ಮಾರ್ಗದರ್ಶನ ಮಾಡುತ್ತಿದ್ದ. ಟಿಪ್ಪುವಿನ ಈ ಕಾಳಜಿಯಿಂದ ೧೮ನೇ ಶತಮಾನದ ಕೊನೆಯ ವೇಳೆಗೆ ಮೈಸೂರು ಪ್ರಾಂತ್ಯದಲ್ಲಿ ೩೧೮ ರೇಷ್ಮೆ ಉತ್ಪಾದನಾ ಕುಟುಂಬಗಳಿದ್ದವು.[೭]

ವಾಣಿಜ್ಯ ಬೆಳೆಯ ಉತ್ಪಾದನೆಯಿಂದ ನಿಧಾನವಾಗಿ ಕೃಷಿಯಲ್ಲಿ ಗ್ರಾಮೀಣ ಆರ್ಥಿಕತೆಯಲ್ಲಿ ಬಂಡವಾಳಶಾಹಿ ಸಂಬಂಧಗಳು ಕಾಣಿಸಿಕೊಳ್ಳಲು ಪ್ರಾರಂಭವಾಗಿ ಊಳಿಗಮಾನ್ಯ ಶೋಷಣಾ ವಿಧಾನಗಳು ನಿಧಾನವಾಗಿ ಕಣ್ಮರೆಯಾಗಲು ಪ್ರಾರಂಭಿಸಿದವು. ಕೃಷಿ ಸುಧಾರಣೆ, ನೀರಾವರಿ, ಹೊಸ ತಳಿಗಳ ಪ್ರಚಾರ, ವಾಣಿಜ್ಯ ಕೃಷಿ ವಿಸ್ತರಣೆ ರೈತರಿಗೆ ತಕ್ಕಾವಿ ಸಾಲ ಇವು ಭೂ-ಆಸ್ತಿ ಸಂಬಂಧಗಳಲ್ಲೂ ವಿಶೇಷ ಪ್ರಭಾವ ಬೀರಿದವು. ಕರ್ನಾಟಕದ ಜನತೆಯ ಹೋರಾಟಗಳ ಇತಿಹಾಸವನ್ನು ಸಮಗ್ರವಾಗಿ ಕಟ್ಟಿಕೊಟ್ಟಿರುವ "ಮೇಕಿಂಗ್ ಹಿಸ್ಟರಿ" ಎಂಬ ಪುಸ್ತಕದಲ್ಲಿ ಅದರ ಕರ್ತೃ ಸಾಕಿಯವರು ವಿವರಿಸಿರುವಂತೆ ಟಿಪ್ಪುವಿನ ಈ ಎಲ್ಲಾ ಕ್ರಮಗಳಿಂದ ಕರ್ನಾಟಕದಲ್ಲಿ ಊಳಿಗಮಾನ್ಯತೆಯ ಆಧಾರವಾಗಿದ್ದ ಭೂಮಿಯ ಒಡೆತನದ ಮೇಲೆ ಊಳಿಗಮಾನ್ಯ ವರ್ಗಗಳ ಸಂಪೂರ್ಣ ಏಕಸ್ವಾಮ್ಯ ಮುರಿಯಿತು. ಅದರ ಜಾಗದಲ್ಲಿ ೩ ರಿಂದ ೪ ಲಕ್ಷ ರೈತರೇ ಭೂ ಒಡೆಯರಾಗಿ ಸಣ್ಣ ರೈತ ಹಿಡುವಳಿಗಳು ಹುಟ್ಟಿಕೊಂಡು ಕೃಷಿ ಸರಕು ಆರ್ಥಿಕತೆ ತೀವ್ರಗತಿ ಪಡೆದುಕೊಂಡಿತು. ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಭೂಮಿಯನ್ನು ತಮ್ಮ ಹೆಸರಿನಲ್ಲಿ ರೈತರು ಪಡೆದುಕೊಂಡರು. ಅವರು ಬೇಕಾದವರಿಗೆ ಭೂಮಿಯನ್ನು ಹಸ್ತಾಂತರ ಮಾಡಬಹುದಿತ್ತು. ಟಿಪ್ಪುವಿನ ಕಾನೂನಿನಂತೆ ಈ ಭೂಮಿಯಿಂದ ಯಾರೂ ರೈತರನ್ನು ಸ್ಥಳಾಂತರಿಸುವಂತಿರಲಿಲ್ಲ. ಈ ಬಗೆಯ ರೈತ ಖಾಸಗಿ ಆಸ್ತಿ ಹಿಡುವಳಿಯೂ ಭೂಮಾಲೀಕ ವರ್ಗಗಳ ರಾಜಕೀಯ, ಆರ್ಥಿಕ, ಏಕಸ್ವಾಮ್ಯಕ್ಕೆ ಬಲವಾದ ಪೆಟ್ಟು ನೀಡಿತು.[೮]

೧೭೯೨ರಲ್ಲಿ ಮೂರನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ತನ್ನ ಇಬ್ಬರು ಮಕ್ಕಳನ್ನು ಒತ್ತೆ ಇಟ್ಟಿದ್ದರೂ ಎದೆಗುಂದದೆ ಅದೇ ವರ್ಷ ಭೂಕಂದಾಯ ಕಾಯ್ದೆಯನ್ನು ಜಾರಿಗೆ ತಂದನು. ಭಾರತದಲ್ಲಿ ಪ್ರಪ್ರಥಮವಾಗಿ ಭೂಸುಧಾರಣೆ ಕಾಯ್ದೆ ತಂದಿದ್ದು ಟಿಪ್ಪು. ಉಳುವವನಿಗೆ ಭೂಮಿ ಸಿಗಬೇಕು ಎನ್ನುವುದು ಟಿಪ್ಪುವಿನ ಕೃಷಿ ನೀತಿಯಾಗಿತ್ತು. ಇದರಿಂದ ಊಳಿಗಮಾನ್ಯ ಶಕ್ತಿಗಳ ಭೂ ಒಡೆತನ ಮುರಿದುಬಿತ್ತು. ಮೈಸೂರು ಸಂಸ್ಥಾನದಲ್ಲಿ ೩೯೦೦೦ ಕೆರೆಗಳು ಮತ್ತು ೧೪೦೦೦ ಬಾವಿಗಳು ಇದ್ದವು. ಟಿಪ್ಪು ನದಿಗಳಿಗೆ ೨೪ ಒಡ್ಡುಗಳನ್ನು ಕಟ್ಟಿಸಿ ಕಾಲುವೆಗಳ ಮೂಲಕ ನೀರು ಹರಿಸಿ ಕೃಷಿಗೆ ಬಳಕೆಯಾಗುವಂತೆ ವ್ಯವಸ್ಥೆ ಕಲ್ಪಿಸಿದ. ಕೆರೆ-ಕಟ್ಟೆಗಳಲ್ಲಿ ನೀರು ಬಿಡುವುದಕ್ಕೆ ದಲಿತರನ್ನು ನೇಮಿಸಿದ. ೧೮೯೯ರಲ್ಲಿ ಮೈಸೂರು ರಾಜ್ಯದಲ್ಲಿ ಶೇ.೩೫ರಷ್ಟು ಭೂಮಿ ನೀರಾವರಿ ಸೌಲಭ್ಯ ಹೊಂದಿತ್ತು.

ನಂಜನಗೂಡಿನಲ್ಲಿ ೫೦೦ ಮನೆಗಳಲ್ಲಿ ಮತ್ತು ಜಮೀನುಗಳಲ್ಲಿ ೭೦೦ ದಲಿತ ಮತ್ತು ಶೂದ್ರರು ಬಿಟ್ಟಿ ಚಾಕರಿ ಮಾಡುತ್ತಿದ್ದುದನ್ನು ಟಿಪ್ಪು ನಿಲ್ಲಿಸಿದ. ಬ್ರಾಹ್ಮಣರಲ್ಲಿದ್ದ ಹೆಚ್ಚುವರಿ ಭೂಮಿಯನ್ನು ಶೂದ್ರರಿಗ, ದಲಿತರಿಗೆ ಹಂಚಿದ. ಈಗಿನ ಮಂಡ್ಯ ಪಟ್ಟಣವು ಅಂದು ಬ್ರಾಹ್ಮಣರ ಅಗ್ರಹಾರವಾಗಿತ್ತು. ಶೂದ್ರರಿಗೆ, ರೈತರಿಗೆ ಹಂಚಿದ ಹಳ್ಳಿಗಳಲ್ಲಿ ಪಟೇಲರು ಹಾಗೂ ಶಾನುಭೋಗರು ರೈತರನ್ನು ಶೋಷಣೆ ಮಾಡುತ್ತಿದ್ದನ್ನು ಅರಿತ ಟಿಪ್ಪು ಪಟೇಲರ ಮತ್ತು ಶಾನುಭೋಗರ ಜಮೀನುಗಳಲ್ಲಿ ಬಿಟ್ಟಿ ಚಾಕರಿಗೆ ಕಡಿವಾಣ ಹಾಕಿದ ಅವರೂ ಸಾಮಾನ್ಯ ರೈತರೇ ಹೊರತು ಊರಗೌಡರಲ್ಲ ಎಂದು ಹೇಳಿದ.[೯]

ಟಿಪ್ಪುವಿನ ಆಳ್ವಿಕೆ ಪರಿಚಯಿಸಿದ ಮತ್ತೊಂದು ಸುಧಾರಣೆ ಸೈನಿಕರಿಗೆ ಭೂಮಿ ನೀಡಿದ್ದು. ೩ ಲಕ್ಷ ಸೈನಿಕರಿಗೆ ಭೂಮಿ ನೀಡಲಾಯಿತು.[೧೦] ಅಪಾರ ಸಂಖ್ಯೆಯಲ್ಲಿ ಸೈನ್ಯ ಸೇರುತ್ತಿದ್ದ ಶೋಷಿತ ಜಾತಿಗಳಾದ ಬೇಡ, ಕುರುಬ, ಒಕ್ಕಲಿಗ, ಈಡಿಗ, ಲಿಂಗಾಯಿತ ಮತ್ತು ರೈತ ಮಕ್ಕಳು ಜಾತಿ ಶೋಷಣೆಯಿಂದ ಸ್ವಲ್ಪ ಮಟ್ಟಿಗೆ ಮುಕ್ತವಾದರು. ಮೈಸೂರು ರಾಜ್ಯದ ಒಟ್ಟಾರೆ ಜನಸಂಖ್ಯೆಯ ಶೇ.೧೫ ಭಾಗದಷ್ಟು ರೈತರೇ ಭೂ ಒಡೆಯರೂ ಆಗಿದ್ದ ಸಣ್ಣ ರೈತಾಪಿವರ್ಗ ಸೃಷ್ಟಿಯಾಯಿತು. ಈ ವರ್ಗದೊಳಗೆ ಮತ್ತೆ ಶ್ರೀಮಂತ, ಮಧ್ಯಮ ಹಾಗೂ ಬಡ ರೈತ ವರ್ಗಗಳು ರೂಪುಗೊಂಡವು.[೧೧] ಸಣ್ಣ ರೈತವರ್ಗದ ಉಗಮದಿಂದ ಊಳಿಗಮಾನ್ಯತೆ ಮತ್ತು ಜಾತಿ ಹಿಡಿತದಿಂದ ಜನರು ಬಿಡುಗಡೆ ಹೊಂದಿದರು. ಈ ೩ ಲಕ್ಷ ಸೈನಿಕರಲ್ಲಿ ಅರ್ಧ ಜನರು ಯುದ್ಧಾನಂತರದ ಅವಧಿಯಲ್ಲಿ ಕೃಷಿ ಕಾರ್ಯದಲ್ಲಿ ತೊಡಗಿದರು. ಈಗಿನ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಟಿಪ್ಪು, ಇಂಗ್ಲೆಂಡ್, ದಕ್ಷಿಣ ಆಫ್ರಿಕ, ಮೆಕ್ಸಿಕೋಗಳಿಂದ ಸಸ್ಯಗಳ ತಳಿಗಳನ್ನು ತರಿಸಿ ಬೆಳೆಸಲು ವ್ಯವಸ್ಥೆ ಮಾಡಿದನು. ಇದರಲ್ಲಿ ದೇಶಿಯ ತಳಿಗಳೂ ಇದ್ದವು. ಕಿತ್ತಳೆ ಮತ್ತು ನೀಲಿ ಬೆಳೆಗೂ[೧೨] ಆದ್ಯತೆ ನೀಡಿದ್ದನು.

ಸಾಕಿಯವರು ಬಹಳ ದೀರ್ಘ ಹಾಗೂ ಸಮಗ್ರ ಅಧ್ಯಯನದಿಂದ ಸ್ಪಷ್ಟಪಡಿಸಿರುವಂತೆ ಹೊಸ ಬಗೆಯ ಆಸ್ತಿ ಸಂಬಂಧಗಳು ಕೃಷಿಯಲ್ಲಿ ಹೊಸ ಉತ್ಪಾದನಾ ಸಂಬಂಧಗಳಿಗೆ ದಾರಿ ಮಾಡಿದವು. ಕೃಷಿರಂಗದಲ್ಲಿ ಉಳಿಗಮಾನ್ಯ ವ್ಯವಸ್ಥೆಗೆ ಹೊರತಾದ ಹೊಸ ವರ್ಗಗಳು ಹುಟ್ಟಿಕೊಂಡವು. ಜೀತಗಾರ ಪದ್ಧತಿ ಬದಲಾಗುತ್ತಾ ದಿನಗೂಲಿ ಆಧಾರದ ಚೆಂಗೂಲಿ ಕೃಷಿ ಕಾರ್ಮಿಕವರ್ಗ ಅಸ್ತಿತ್ವಕ್ಕೆ ಬಂದಿತು. ಇದರೊಡನೆ ಜೀತಗಾರರನ್ನು ಮಾಸಿಕ ಅಥವಾ ವಾರ್ಷಿಕ ಲೆಕ್ಕದಲ್ಲಿ ಇಟ್ಟುಕೊಳ್ಳುವ ವ್ಯವಸ್ಥೆ ಬಂದಿತು. ಇದು ಜೀವನ ಪರ್ಯಂತ ಭೂಮಾಲೀಕರ ಸೇವೆಯಲ್ಲಿ ಬದುಕು ಸವೆಸಬೇಕಾದ ಜೀತಗಾರರಿಗೆ ಅಲ್ಪ ಬಿಡುಗಡೆ ತಂದುಕೊಟ್ಟಿತು. ಇದಲ್ಲದೆ ಸ್ವತಂತ್ರ ಗೇಣಿದಾರವರ್ಗವು ಉದಯಿಸಿತು.

ಈ ಎಲ್ಲಾ ಬೆಳವಣಿಗೆ ಗಮನಿಸಿದರೆ ಸಾಕಿಯವರು "ಮೇಕಿಂಗ್ ಹಿಸ್ಟರಿ" ಪುಸ್ತಕದಲ್ಲಿ ಪ್ರತಿಪಾದಿಸಿರುವಂತೆ ಬ್ರಿಟಿಷರ ಆಕ್ರಮಣಕ್ಕೆ ಮುಂಚೆಯೇ ಕನಿಷ್ಠ ಪಕ್ಷ ಮೈಸೂರು ಪ್ರಾಂತ್ಯದಲ್ಲಿ ಊಳಿಗಮಾನ್ಯತೆ ಬಿರುಕು ಬಿಟ್ಟ ಸಮಾಜವು ಅರೆ-ಊಳಿಗಮಾನ್ಯತೆ ಕಡೆ ಸರಿಯುತ್ತಿತ್ತು. ಈ ಪ್ರಕ್ರಿಯೆಯನ್ನು ಕೃಷಿಯಲ್ಲಿ ಕ್ರಾಂತಿಕಾರಿ ಬದಲಾವಣೆ ತರುವ ಮೂಲಕ ತ್ವರಿತಗೊಳಿಸಿದ್ದು ಟಿಪ್ಪು ಹಾಗೂ ಹೈದರಾಲಿ.[೧೩] ಟಿಪ್ಪು ಕೃಷಿ ಮತ್ತು ನೀರಾವರಿ ಸಂಬಂಧಿಸಿದ ಆಧುನೀಕರಣಕ್ಕೆ ಯುರೋಪಿನ ಮಾದರಿಗಳನ್ನು ಅನುಸರಿಸಿದನು. ರಾಜ್ಯದ ತ್ವರಿತ ಆರ್ಥಿಕಾಭಿವೃದ್ಧಿಗೆ ಹಾಗೂ ಕೃಷಿಯ ಅಭಿವೃದ್ಧಿಗೆ ಪ್ರಾಥಮಿಕ ಆದ್ಯತೆ ನಿಡಿದನು.

೫.೨. ಕೈಗಾರಿಕಾಕೇಂದ್ರಿತ ಆಧುನೀಕರಣ

ಟಿಪ್ಪು ಸುಲ್ತಾನನಂತೆ ಕೆಲವೇ ಭಾರತೀಯ ರಾಜರು ಮಾತ್ರ ಕರಕುಶಲ ವಸ್ತು ಉತ್ಪಾದನೆ ಮತ್ತು ಕೈಗಾರಿಕಾಭಿವೃದ್ಧಿಗೆ ಆಸಕ್ತಿ ತೋರಿದ್ದರು. ಯುರೋಪಿನ ಶಕ್ತಿಯ ಪ್ರಭಾವಕ್ಕೆ ಒಳಗಾದ ಟಿಪ್ಪು ಮಾತ್ರ ದೇಶ ಸದೃಢವಾಗಿರಬೇಕಾದರೆ ಅದರ ವಾಣಿಜ್ಯ ಮತ್ತು ಕೈಗಾರಿಕೆ ಅಭಿವೃದ್ಧಿಯಾಗಬೇಕು ಎಂದು ಪರಿಭಾವಿಸಿದನು. ಬ್ರಿಟಿಷ್ ಮತ್ತು ಫ್ರೆಂಚ್ ಯುದ್ಧ ಖೈದಿಗಳನ್ನು ತನ್ನ ದೇಶದಲ್ಲಿ ಯುರೋಪಿಯನ್ ಕರಕುಶಲ ವಸ್ತು ಮತ್ತು ಅದರ ಉತ್ಪಾದನೆಯನ್ನು ಪರಿಚಯಿಸಲು ಉಪಯೋಗಿಸಿ ಕೊಂಡನು. ಮೈಸೂರಿನಲ್ಲಿ ತಾನೇ ಆ ವಸ್ತುಗಳನ್ನು ಉಪಯೋಗಿಸಲು ತನ್ನ ಅಧಿಕಾರಿಗಳು ಅವುಗಳನ್ನು ಉಪಯೋಗಿಸುವಂತೆ ಪ್ರೋತ್ಸಾಹಿಸಿದನು. ಈ ವಸ್ತುಗಳನ್ನು ತಮಗೆ ಸಾಕಾಗುವಷ್ಟು ಉತ್ಪಾದಿಸುವಂತೆ ಆಪೇಕ್ಷಿಸಿದನು. ಮೈಸೂರಿನಲ್ಲಿ ಕುಶಲ ಕೈಗಾರಿಕೆ ಬೆಳಸಲು ಹದಿನಾರನೇ ಲೂಯಿ ಕಳುಹಿಸಿಕೊಟ್ಟ ಫ್ರೆಂಚ್ ತಂತ್ರಜ್ಞರನ್ನು ಮತ್ತು ಕೆಲಸಗಾರರನ್ನು ನೇಮಿಸಿಕೊಂಡನು. ಅಟೋಮನ್ ಸುಲ್ತಾನನಿಗೆ ಪತ್ರ ಬರೆದು ತನ್ನ ರಾಜಧಾನಿಗೆ ಈ ಕೈಗಾರಿಕೆಗಳನ್ನು ಬೆಳೆಸಲು ಉತ್ತಮ ಪರಿಣಿತ ಕೆಲಸಗಾರರನ್ನು ಕಳುಹಿಸಿ ಕೊಡುವಂತೆ ಮನವಿ ಮಾಡಿದನು. ವಿದೇಶಗಳಿಂದ ತಂತ್ರಜ್ಞರನ್ನು ಕರೆಸಿ ತನ್ನ ದೇಶದಲ್ಲಿ ಕರಕುಶಲವಸ್ತು ಉತ್ಪಾದನೆ ಮತ್ತು ಅಭಿವೃದ್ಧಿಗೆ ಪೂರ್ಣಪ್ರಯತ್ನಪಟ್ಟನು. ಇದರ ಸಲುವಾಗಿ ಫ್ರಾನ್ಸ್, ಮಸ್ಕತ್, ಕಾನ್‌ಸ್ಟಾಂಟಿನೋಪಲ್ ಇತ್ಯಾದಿ ದೇಶಗಳಿಗೆ ರಾಯಭಾರಿಗಳನ್ನು ಕಳುಹಿಸಿಕೊಟ್ಟನು. ಯುದ್ಧ ಖೈದಿಗಳಲ್ಲಿ ಕುಶಲ ವಸ್ತುಗಳ ತಯಾರಿಕಾ ನೈಪುಣ್ಯತೆ ಇದ್ದರೆ ಅವರನ್ನು ಗುರುತಿಸಿ ಒತ್ತಾಯ ಮಾಡಿದನು. ತನ್ನ ದೇಶದ ಕುಶಲಕರ್ಮಿಗಳಿಗೆ ಅವುಗಳನ್ನು ಕಲಿಸಿಕೊಡುವಂತೆ ಒತ್ತಡ ಹೇರಿದನು. ೧೭೮೪ರಲ್ಲಿ ತುರ್ಕಿ ದೇಶಕ್ಕೆ ಕಳುಹಿಸಿದ ತನ್ನ ಮೊದಲ ರಾಯಬಾರಿಗೆ ರಾಜಕೀಯ ವ್ಯವಹಾರಗಳ ಜೊತೆಗೆ ಕರಕುಶಲ ವಸ್ತುಗಳ ಕೈಗಾರಿಕಾಭಿವೃದ್ಧಿಗೆ ಹೆಚ್ಚು ಗಮನ ಕೊಡುವಂತೆ ತಿಳಿಸಿದನು. ತುರ್ಕಿಯು ಬಂದೂಕು, ಗಾಜು, ಹಡಗು ನಿರ್ಮಾಣ ಹಾಗೂ ಇತರೆ ಉಪಯುಕ್ತ ವಸ್ತುಗಳ ತಯಾರಿಕೆಗೆ ತರಬೇತುದಾರರನ್ನು ಕಳುಹಿಸುವಂತೆ ಒತ್ತಾಯಿಸಿದನು. ವ್ಯಾಪಾರಿ ನೌಕೆಯನ್ನು ತಯಾರುಮಾಡಿದ

ಮೊದಲ ಭಾರತೀಯ ರಾಜ ಟಿಪ್ಪು. ಮೈಸೂರು ಹಡಗು ನಿರ್ಮಾಣದಲ್ಲಿ ಮುಂಚೂಣಿಯಲ್ಲಿರಬೇಕು ಎಂದು ಕನಸು ಕಂಡಿದ್ದನು. ಇದರಿಂದ ಸಾಗರ ವ್ಯಾಪಾರ ಅಭಿವೃದ್ಧಿಯಾಗುತ್ತದೆ ಎಂದು ತಿಳಿದಿದ್ದನು.

ಶ್ರೀರಂಗಪಟ್ಟಣ, ಚಿತ್ರದುರ್ಗ, ಬೆಂಗಳೂರು ಮತ್ತು ಬಿದನೂರಿನಲ್ಲಿ ವಿವಿಧ ರೀತಿಯ ಕಾರ್ಖಾನೆಗಳನ್ನು ಕಟ್ಟಿಸಿದನು. ಇದರಲ್ಲಿ ಭಾರತೀಯ ಮತ್ತು ಯುರೋಪಿಯನ್ ಕೆಲಸಗಾರರನ್ನು ನೇಮಿಸಿದನು. ಅವರು ಕತ್ತರಿ, ಚಾಕು, ಗಾಜು, ಬಂದೂಕು, ಕಾಗದ ಗಡಿಯಾರ ಇತ್ಯಾದಿ ವಸ್ತುಗಳನ್ನು ತಯಾರಿಸುತ್ತಿದ್ದರು. ಫ್ರೆಂಚ್ ತಂತ್ರಜ್ಞರು ಕ್ಯಾನನ್‌ಗಳನ್ನು ಕೊರೆಯಲು ನೀರಿನಿಂದ ಚಾಲಿತ ಯಂತ್ರವೊಂದನ್ನು ತಯಾರಿಸಿದರು. ಈ ತಯಾರಿಕಾ ವಸ್ತುಗಳು ಗುಣಮಟ್ಟದಲ್ಲಿ ಉತ್ಕೃಷ್ಟವಾಗಿದ್ದು ರಫ್ತು ಯೋಗ್ಯವಾಗಿದ್ದವು. ಇವುಗಳ ಜೊತೆಗೆ ಕರಕುಶಲ ನೆಯ್ಗೆ, ಪಿಂಗಾಣಿ ಪಾತ್ರೆ, ಗಾಜು, ಗೃಹಬಳಕೆ ವಸ್ತುಗಳು, ಎಣ್ಣೆ, ಕಾಗದ, ಸಕ್ಕರೆ, ಬೆಲ್ಲ, ಚರ್ಮ ಮತ್ತು ಲೋಹ ತಯಾರಿಕಾ ಘಟಕಗಳು ಸೇರಿದ್ದವು.

ಹೈದರ್ ಹಾಗೂ ಟಿಪ್ಪು ಪಾಳೆಯಗಾರರ ವಿರುದ್ಧ ವ್ಯಾಪಾರ ವರ್ಗಕ್ಕೆ ಬೆಂಬಲ ನೀಡಿದಂತೆ ಕೈಗಾರಿಕೋದ್ಯಮಿಗಳಿಗೂ ಒತ್ತಾಸೆಯಾಗಿ ನಿಂತರು. ಈಗಾಗಲೇ ಅವರು ಜಾರಿಗೆ ತಂದಿದ್ದ ಆರ್ಥಿಕ ನೀತಿಗಳಿಂದ ಹಾಗೂ ಪ್ರಭುತ್ವದ ರಚನೆಯಿಂದಾಗಿ ಸರಕುಗಳಿಗೆ ಬೃಹತ್ ಬೇಡಿಕೆ ಉಂಟಾಗಿತ್ತು. ಸುಮಾರು ೧.೫ ಲಕ್ಷದಷ್ಟು ಶಾಶ್ವತ ಸೈನ್ಯ, ೧.೫. ಲಕ್ಷದಷ್ಟು ಅನಿಯಮಿತ ಸೈನಿಕರು, ತಿಂಗಳ ವೇತನದ ಮೇಲೆ ಜೀವಿಸುವ ಸುಮಾರು ಒಂದು ಲಕ್ಷ ಸರ್ಕಾರಿ ನೌಕರರು ಸಿಬ್ಬಂದಿ ವರ್ಗಗಳು, ಒಂದು ಲಕ್ಷದಷ್ಟು ನಗರವಾಸಿ ಕುಶಲಕರ್ಮಿಗಳು ಮತ್ತು ವ್ಯಾಪಾರಿಗಳು ಮತ್ತೊಂದೆಡೆ ಸತತವಾಗಿ ವಿಸ್ತರಿಸುತ್ತಿದ್ದ ಗ್ರಾಮೀಣ ಮಾರುಕಟ್ಟೆ, ಸಾಗರೋತ್ತರ ಮಾರುಕಟ್ಟೆಗಳು ಕೈಗಾರಿಕೆ ಹಾಗೂ ವಾಣಿಜ್ಯೋದ್ಯಮದ ವಿಸ್ತರಣೆಗೆ ಸ್ಫೂರ್ತಿ ನೀಡಿದ ಅಂಶಗಳಾಗಿದ್ದವು.[೧೪]

ಕೈಗಾರಿಕಾ ಕ್ಷೇತ್ರದಲ್ಲಿ ಟಿಪ್ಪುವಿನ ಅತ್ಯುತ್ತಮ ಉದ್ಯಮಶೀಲತೆ ವ್ಯಕ್ತವಾಯಿತು. ಕೃಷಿ ಸುಧಾರಣೆಗಳಲ್ಲಿ ಅವನು ಹೊಸತನ್ನು ಅನ್ವೇಷಿಸುವ ಚೈತನ್ಯವು ಉತ್ತಮವಾಗಿ ಕಂಡುಬಂದಿತು. ಅದರ ಅತ್ಯುತ್ತಮ ಹಂತವು ಔದ್ಯಮಿಕ ಹಾಗೂ ಕೈಗಾರಿಕಾ ವಲಯದಲ್ಲಿ ಕಂಡುಬಂತು. ವಾಸ್ತವವಾಗಿ ಉತ್ಪಾದಕ ಸಂಪತ್ತಿನ ಎರಡು ನಿಜವಾದ ಮೂಲಗಳೆಂದರೆ ಕೃಷಿ ಭೂಮಿ ಮತ್ತು ಕಾರ್ಖಾನೆ. ಆದ್ದರಿಂದ ಚಿಂತನ ಜೀವಿಯಾದ ಟಿಪ್ಪುವು ತನ್ನ ರಾಜ್ಯದಲ್ಲಿ ಕೈಗಾರಿಕೋದ್ಯಮಕ್ಕೆ ಹೆಚ್ಚು ಆದ್ಯತೆ ನೀಡಿದನು.

ಜನರ ಕಸುಬು ಮೂಲ ಕೃಷಿಯೇ ಆಗಿತ್ತು. ಆದರೂ ಮೈಸೂರಿನಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಟಿಪ್ಪು ಅಗತ್ಯವಾದ ಎಲ್ಲ ಕ್ರಮಗಳನ್ನು ಕೈಗೊಂಡನು. ವಿದೇಶಗಳಿಂದ

ನುರಿತ ಕುಶಲಕರ್ಮಿಗಳನ್ನು, ತಂತ್ರಜ್ಞರನ್ನು ಕರೆಸಿಕೊಳ್ಳಲು ಅತಿಹೆಚ್ಚಿನ ಪ್ರಯತ್ನ ನಡೆಸಿದನು. ಕೈಗಾರಿಕಾ ವಲಯದಲ್ಲಿ ಹೊಸ ಹೊಸ ಆವಿಷ್ಕಾರಗಳಿಗೆ ಆದ್ಯತೆ ನೀಡಿದನು. ಯುರೋಪೀಕರಣ ಪ್ರಕ್ರಿಯೆಗೆ ಚಾಲನೆ ನೀಡಿದನು. ವಿದೇಶಿ ಗಣ್ಯರಿಗೆ ಅವನು ಬರೆದ ಪ್ರತಿಯೊಂದು ಪತ್ರದಲ್ಲಿಯೂ, ನಿಪುಣರಾದ ತಂತ್ರಜ್ಞರನ್ನು, ಕುಶಲಕರ್ಮಿಗಳನ್ನೂ ಕಳುಹಿಸಿಕೊಡಬೇಕೆಂಬ ಕೋರಿಕೆ ಇದ್ದಿತು. ೧೭೮೪ರಲ್ಲಿ ತುರ್ಕಿಗೆ ನಿಯೋಗವೊಂದನ್ನು ಕಳುಹಿಸಿದಾಗ ಅವರಿಗೆ ಹಿಂದಿರುಗಿ ಬರುವಾಗ ತಮ್ಮೊಂದಿಗೆ ಹಡಗು ನಿರ್ಮಾಣ, ಬಂದೂಕು ತಯಾರಿಕೆ, ಗಾಜು ತಯಾರಿಕೆ ಹಾಗೂ ಇತರೆ ಉಪಯುಕ್ತ ವಸ್ತುಗಳ ತಯಾರಿಕೆಯಲ್ಲಿ ನಿಪುಣರಾದವರನ್ನು ಕರೆತರುವಂತೆ ಆದೇಶಿಸಿದನು. ಆಧುನಿಕ ಕಾಲದಲ್ಲಿ ವ್ಯಾಪಾರಿ ಹಡಗು ಪಡೆಯನ್ನು ಕಟ್ಟಿದ ಮೊದಲನೆಯ ಅರಸ ಟಿಪ್ಪುವೇ. ರೇಷ್ಮೆ ಉದ್ಯಮ, ಹತ್ತಿ ಬಟ್ಟೆಗಳ ಉದ್ಯಮ, ಕಬ್ಬಿಣ ಕರಗಿಸುವುದು, ಎರಕ ಹೊಯ್ಯುವುದು, ಬಂದೂಕು ಮತ್ತು ಫಿರಂಗಿಗಳ ತಯಾರಿಕೆ ಸಕ್ಕರೆ ತಯಾರಿಕೆ, ಎಣ್ಣೆ ಹಿಂಡುವಿಕೆ ಹಾಗೆಯೇ ಇತರ ವಸ್ತುಗಳ ತಯಾರಿಕೆ ವಿಷಯದಲ್ಲಿ ಹೆಚ್ಚು ಆಸಕ್ತನಾಗಿದ್ದನು.[೧೫]

೧೭೮೭ ಏಪ್ರಿಲ್ ೨ ರಂದು ಟಿಪ್ಪು ಫ್ರಾನ್ಸಿಗೆ ತೆರಳಿದ್ದ ತನ್ನ ನಿಯೋಗಕ್ಕೆ ಇನ್ನೂ ಹೆಚ್ಚಿನ ತಂತ್ರಜ್ಞರು, ಕುಶಲಕರ್ಮಿಗಳನ್ನು ಕರೆತರಲು ಆದೇಶಿಸಿದನು. ಹತ್ತು ಜನ ಫಿರಂಗಿ ನಿರ್ಮಿಸುವವರು, ಹತ್ತು ಜನ ಹಡಗು ಕಟ್ಟುವವರು, ಹತ್ತು ಮಂದಿ ಗಾಜು, ಕನ್ನಡಿ ತಯಾರಕರು, ಹಡಗು ಗಡಿಯಾರಗಳು ಮತ್ತು ಗಾಲಿಗಳನ್ನು, ನೀರೆತ್ತುವುದಕ್ಕೆ ಮತ್ತು ಇತರ ಕೆಲಸ ಮಾಡುವವರು ಹತ್ತುಮಂದಿ ಎಲ್ಲಾ ಬಗೆಯ ಕಸುಬುಗಳಲ್ಲಿ ನಿಪುಣರಾದ ತಲಾ ಹತ್ತು ಕುಶಲಕರ್ಮಿಗಳನ್ನು ಕಳುಹಿಸುವಂತೆ ಕೋರುವುದು. ಅಲ್ಲಿಂದ ಹೊರಡುವುದಕ್ಕಿಂತ ಮುಂಚಿತವಾಗಿಯೇ ಅವರಿಗೆ ಸೂಕ್ತ ವೇತನ ನಿಗದಿಪಡಿಸತಕ್ಕದ್ದು.[೧೬] ಮೂರ್(moore) ಬೆಂಗಳೂರಿನಲ್ಲಿ ಒಂದು ಸರಳ ರಚನೆಯಿದ್ದ ಯಂತ್ರವನ್ನು ಗಮನಿಸಿದನು ಇದು ಏಕಕಾಲದಲ್ಲಿ ೫೦ ಕೋವಿಗಳ ಮತ್ತು ಒಂದು ಬಂದೂಕಿನ ನಳಿಕೆಯನ್ನು ಕೊರೆಯುತ್ತಿದ್ದಿತು.[೧೭] ಟಿಪ್ಪು ಸದಾಕಾಲವೂ ಯುದ್ಧದಲ್ಲೇ ನಿರತನಾಗಿದ್ದ ಅವನಿಗೆ ಸಮೃದ್ಧವಾಗಿ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು ಬೇಕಾಗಿದ್ದವು ಆದ್ದರಿಂದ ಅವನು ಕಬ್ಬಿಣದ ಅದಿರಿಗಾಗಿ ವ್ಯಾಪಕ ಶೋಧ ನಡೆಸಿದನು. ಸೀಸ ಮತ್ತು ಬೆಳ್ಳಿಯ ಶೋಧವೂ ನಡೆದಿತ್ತು. ಕಬ್ಬಿಣ ಅದಿರಿನ ಗಣಿಗಳು ಮತ್ತು ಅಲ್ಲಿನ ಅಭಿವೃದ್ಧಿ ಕಾರ್ಯಗಳ ಬಗ್ಗೆ ಬುಕಾನನ್ ವಿಸ್ತಾರವಾಗಿ ತಿಳಿಸಿದ್ದಾನೆ. ಈ ದಾಖಲೆಗಳ ಆಧಾರದಿಂದ ಬೆಚೆರೋವ್ ಹೇಳುತ್ತಾನೆ, ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಮೈಸೂರಿನಲ್ಲಿ ಅಭಿವೃದ್ಧಿಗೊಂಡ ಕೈಗಾರಿಕೆಗಳು ಮಾದರಿ ಬಂಡವಾಳಶಾಹಿ ಉದ್ಯಮಗಳಾಗಿದ್ದವು.[೧೮]

ಕಬ್ಬಿಣ ಕಾರ್ಖಾನೆಗಳಿಗೆ ಕೊಟ್ಟ ಪ್ರಾಮುಖ್ಯತೆಯನ್ನು ೧೭೯೫ರಲ್ಲಿ ಜಿಲ್ಲಾ ಆಡಳಿತ ನಿಯಮಾವಳಿಯಿಂದಲೂ, ಅಧಿಕೃತ ಪತ್ರ ವ್ಯವಹಾರದಿಂದಲೂ ತಿಳಿಯಬಹುದು. ಕಬ್ಬಿಣ

ಅದಿರು ಕರಗಿಸುವುದು ಮತ್ತು ಎರಕ ಹೊಯ್ಯುವ ಕೆಲಸವನ್ನು ಮದುಗಿರಿ, ಚೆನ್ನರಾಯದುರ್ಗ, ಹಾಗಲವಾಡಿ ಮತ್ತು ದೇವರಾಯ ದುರ್ಗಗಳಲ್ಲಿ ಕೈಗೊಳ್ಳಲಾಗಿದ್ದಿತು. ಶ್ರೀರಂಗಪಟ್ಟಣವು ಇವುಗಳ ಮುಖ್ಯ ಕೇಂದ್ರವಾಗಿತ್ತು. ಬಂದೂಕುಗಳು, ಕೋವಿಗಳು, ಫಿರಂಗಿಗಳು, ಚಾಕುಗಳು, ಕತ್ತರಿಗಳು ಮತ್ತು ಕೈಗಡಿಯಾರಗಳನ್ನು ಅಲ್ಲಿ ತಯಾರಿಸಲಾಗುತ್ತಿತ್ತು. ತುರ್ಕಿ ಸುಲ್ತಾನನಿಗೆ ಉಡುಗೊರೆಯಾಗಿ ಕಳುಹಿಸಿದ ಮೈಸೂರಿನಲ್ಲಿ ತಯಾರಾದ ವಸ್ತುಗಳು ಅಲ್ಲಿ ಬಾರಿ ಮೆಚ್ಚುಗೆ ಪಡೆದವು. ಇಂದು ಕ್ಷಿಪಣಿ ಮತ್ತು ರಾಕೆಟುಗಳ ಇತಿಹಾಸ ಗಮನಿಸುವಾಗ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಈ ಕ್ಷೇತ್ರದಲ್ಲಿ ಕೆಲಸ ಮಾಡಿದ ಮೊದಲಿಗರೆಂದು ಹೇಳಲಾಗುತ್ತದೆ. ಸಮಕಾಲೀನ ಚರಿತ್ರೆಕಾರ ಕೀರ್ಮಾನಿಯು ಶ್ರೀರಂಗಪಟ್ಟಣದ ಕಬ್ಬಿಣ ಕಾರ್ಖಾನೆಯು ದೇಶಾದ್ಯಂತ ಪ್ರಸಿದ್ಧವಾಗಿತ್ತು ಎಂದು ಬರೆಯುತ್ತಾನೆ. ಅಲ್ಲಿ ತಯಾರಿಸಲಾದ ವಸ್ತುಗಳು ಯುರೋಪಿನ ವಸ್ತುಗಳಿಗೆ ಸರಿಸಮನಾಗಿದ್ದವು. ತನ್ನ ಕಬ್ಬಿಣದ ಕಾರ್ಖಾನೆಗಳಿಗೆ ಟಿಪ್ಪು ತಾರಾಮಂಡಲಗಳೆಂದು ಹೆಸರಿಟ್ಟಿದ್ದನು. ಅಂಥವು ರಾಜ್ಯದಲ್ಲಿ ನಾಲ್ಕು ಇದ್ದವು. ಶ್ರೀರಂಗಪಟ್ಟಣ, ಬೆಂಗಳೂರು, ಚಿತ್ರದುರ್ಗ ಮತ್ತು ಬಿದನೂರು. ಶ್ರೀರಂಗಪಟ್ಟಣದಲ್ಲಿ ಕಬ್ಬಿಣವನ್ನು ಉಕ್ಕಾಗಿ ಪರಿವರ್ತಿಸುವ ಐದು ಘಟಕಗಳಿದ್ದವು. ಚನ್ನಪಟ್ಟಣದಲ್ಲಿ ಕಬ್ಬಿಣದ ಅದಿರು ಕರಗಿಸುವ ಮತ್ತು ಎರಕ ಹೊಯ್ಯುವ ಘಟಕವಿತ್ತು.

ಮಂಗಳೂರಿನಲ್ಲಿದ್ದ ಒಂದು ದೊಡ್ಡ ಸರ್ಕಾರಿ ಕಬ್ಬಿಣ ತಯಾರಿಕಾ ಘಟಕದ ಕಾರ್ಯ ವೈಖರಿ ಬಗೆಗೆ ಸ್ವಲ್ಪ ತಿಳಿದುಬರುತ್ತದೆ. ಟಿಪ್ಪು ೧೭೮೬ ಜೂನ್ ೧೩ರಂದು ರಾಜಾ ರಾಮಚಂದ್ರನಿಗೆ ಬರೆದ ಪತ್ರದಲ್ಲಿ, "ಕಂಕನಹಳ್ಳಿಯ ಬಂದೂಕು ಕಾರ್ಖಾನೆಗೆ ೮೦ ಜನ ಕಮ್ಮಾರರ ಅವಶ್ಯಕತೆಯಿದೆಯೆಂದು ನೀವು ಬರೆದಿದ್ದೀರಿ. ಸುತ್ತಮುತ್ತಲ ಅಮೀಲರಿಗೆ ಈ ವಿಷಯವಾಗಿ ಅರ್ಜಿ ಕಳಿಸಿದ್ದರೆಂದೂ, ಉಳುಮೆ ಸಮಯವಾದ್ದರಿಂದ ಅವರನ್ನು ಒದಗಿಸಲು ರೈತರು ನಿರಾಕರಿಸಿದರೆಂದೂ ಅವರು ಉತ್ತರ ಕೊಟ್ಟಿರುವುದಾಗಿಯೂ ತಿಳಿಸಿರುತ್ತೀರಿ. ಉಳುಮೆಗೆ ಕಮ್ಮಾರರ ಅವಶ್ಯಕತೆಯಿಲ್ಲ ಎನ್ನುವುದು ಎಲ್ಲರಿಗೂ ತಿಳಿದೇ ಇದೆ. ಆದ್ದರಿಂದ ಒಡನೆಯೇ ಈ ಕಟ್ಟಾಜ್ಞೆಯನ್ನು ಅಮೀಲರಿಗೆ ಕಳುಹಿಸತಕ್ಕದ್ದು."[೧೯]

ಇಪ್ಪತ್ತನೆಯ ಶತಮಾನದ ಮಧ್ಯಭಾಗದವರೆಗೂ ಒಂದು ಗುಂಡುಸೂಜಿ ಕೂಡ ಷೆಫೀಲ್ಡಿನಿಂದ ಬರಬೇಕಾಗಿತ್ತು. ೧೫ ಮತ್ತು ೧೬ನೆಯ ಶತಮಾನಗಳಲ್ಲಿ ಯುರೋಪು ಎಚ್ಚೆತ್ತುಕೊಂಡಿತು. ಭಾರತವು ೧೮ನೆಯ ಶತಮಾನದ ಕೊನೆಯ ಭಾಗದಲ್ಲೂ ಆ ಕಾಲದ ಯುರೋಪು ಇದ್ದ ಮಟ್ಟಕ್ಕೆ ಏರಲಾರದ ಮಟ್ಟದಲ್ಲಿ ಜಡವಾಗಿದ್ದಿತು. ಹಲವು ಅಡ್ಡಿಗಳ ನಡುವೆಯೂ ಟಿಪ್ಪು ಪಶ್ಚಿಮ ದೇಶಗಳ ಸಾಲಿಗೆ ಕೊಂಡೊಯ್ಯಲು ಪ್ರಯತ್ನಿಸಿದನು. ಮೈಸೂರಿನಲ್ಲಿ ತಯಾರಿಸಲ್ಪಡುತ್ತಿದ್ದ ವಸ್ತುಗಳು ಯುರೋಪಿನಲ್ಲಿ ತಯಾರಾಗುತ್ತಿದ್ದ ವಸ್ತುಗಳೊಂದಿಗೆ ಹೋಲಿಕೆಗೆ ನಿಲ್ಲುತ್ತಿದ್ದವು

ಎಂಬುದು ಟಿಪ್ಪುವಿಗೆ ಕೀರ್ತಿಯ ವಿಷಯವಾಗಿತ್ತು. ಟಿಪ್ಪು ಶಕ್ತಿಮೀರಿ ಕೈಗಾರಿಕೋದ್ಯಮವನ್ನು ಪ್ರೋತ್ಸಾಹಿಸಿದನು ಎಂದು ಬುಕಾನನ್ ದಾಖಲಿಸಿದ್ದಾನೆ.[೨೦]

ನೌಕಾನಿರ್ಮಾಣವನ್ನು ಟಿಪ್ಪು ಪ್ರೋತ್ಸಾಹಿಸಿದನು. ಸಾಗರೋತ್ತರ ವಾಣಿಜ್ಯದಲ್ಲಿ ವ್ಯಾಪಾರ ನೌಕೆಗಳ ತಂಡವು ತುಂಬಾ ಸಹಾಯಕವಾಗಿತ್ತು. ೧೭೯೩ರಲ್ಲಿ ಟಿಪ್ಪು ೧೦೦ ಹಡಗುಗಳನ್ನು ಕಟ್ಟಲು ಆದೇಶ ನೀಡಿದನು. ಅವುಗಳಲ್ಲಿ ಎರಡಕ್ಕೆ ಕ್ಲುಯಿಜೆರಿ ಮತ್ತು ಇಲ್ಯಾಸಿ ಎಂದು ಹೆಸರಿಟ್ಟಿದ್ದನು. ಹಡಗು ನಿರ್ಮಾಣಕ್ಕೆ ಅಗತ್ಯವಾದ ಕಬ್ಬಿಣ, ಮರಮುಟ್ಟು, ಹಗ್ಗಗಳು ಮೊದಲಾದ ಎಲ್ಲವನ್ನೂ ಸ್ಥಳೀಯವಾಗಿಯೇ ಕೊಳ್ಳತಕ್ಕದ್ದು ಎಂದು ಆದೇಶಿಸಿದ್ದನು. ಸದಾಶಿವಗಡ ಹಾಗೂ ಬಾಸ್ಕೊರಾಜಿ ಎಂಬ ಎರಡು ಸ್ಥಳಗಳಲ್ಲಿ ಹಡಗು ಕಟ್ಟುವ ಕೆಲಸ ನಡೆಯುತ್ತಿತ್ತು. ಇಲ್ಲಿ ಮೂವತ್ತು ಹಡಗುಗಳ ನಿರ್ಮಾಣಕ್ಕೆ ಆದೇಶ ನೀಡಲಾಗಿತ್ತು. ಬೇರೆ ಬೇರೆ ದೇಶಗಳಿಂದ ನಿಷ್ಣಾತರಾದವರು ಇಲ್ಲಿಗೆ ಬರಬೇಕೆಂದು ಟಿಪ್ಪು ಬಯಸಿದನು. ಮಸ್ಕತ್ತಿನಲ್ಲಿದ್ದ ತನ್ನ ಪ್ರತಿನಿಧಿಗೆ ಅವನು ಬರೆದ ಪತ್ರದಲ್ಲಿ ಹಡಗು ಕಟ್ಟುವ ಕೆಲಸವನ್ನು ಬಲ್ಲ ಹತ್ತು ಮಂದಿ ಕೆಲಸಗಾರರ ಅವಶ್ಯಕತೆ ನಮಗಿದೆ. ಅವರಿಗೆ ಉತ್ತಮವಾದ ಹುದ್ದೆಯನ್ನು ನೀಡಲಾಗುತ್ತದೆ ಎಂದೂ ತಿಳಿಸಿದನು. ಮಂಗಳೂರಿನಲ್ಲಿ ನಿರ್ಮಾಣವಾದ ಹಡಗುಗಳು ಉತ್ಕೃಷ್ಟವಾಗಿದ್ದವು ಎಂದೂ ಕಿರ್ಕ್‌ಪ್ಯಾಟ್ರಿಕ್ ತಿಳಿಸಿದ್ದಾನೆ.

ಟಿಪ್ಪು ಪೋರ್ಚುಗೀಸ್, ಡಚ್, ಫ್ರೆಂಚ್ ಬ್ರಿಟಿಷ್ ನೌಕಾ ವ್ಯವಸ್ಥೆಯ ಆಳವಾದ ಅಧ್ಯಯನ ನಡೆಸಿದನು. ಈ ದೇಶಗಳಿಂದ ತಂತ್ರಜ್ಞರನ್ನು ಮೈಸೂರಿಗೆ ಆಕರ್ಷಿಸಲು ಸಮರ್ಥನಾಗಿದ್ದನು. ಟಿಪ್ಪು ರೂಪಿಸಿದ ನೌಕಾವ್ಯವಸ್ಥೆಯಲ್ಲಿ ೧೦೦೦೦ ಜನ ಸೇವೆಯಲ್ಲಿದ್ದರು.[೨೧] ಅವನ ಬಳಿ ೪೦ ಯುದ್ಧ ನೌಕೆಗಳಿದ್ದವು. ಅವು ಕಲ್ಲಿಕೋಟೆ, ಸದಾಶಿವಗಡ ಮತ್ತು ಮಂಗಳೂರಿನಲ್ಲಿದ್ದವು.

ಮೈಸೂರಿನಲ್ಲಿ ರೇಷ್ಮೆ ಉದ್ಯಮವನ್ನು ಅಭಿವೃದ್ಧಿ ಪಡಿಸಿದವನು ಟಿಪ್ಪು. ತನ್ನ ರಾಜ್ಯದಲ್ಲಿ ವ್ಯಾಪಕ ಪ್ರಮಾಣದಲ್ಲಿ ರೇಷ್ಮೆ ಹುಳು ಸಾಗಣಿಕೆಯನ್ನು ಪ್ರೋತ್ಸಾಹಿಸಿದನು. ಶ್ರೀರಂಗಪಟ್ಟಣದ ಕೋಟೆಯ ಸೇನಾಪತಿಗೆ ಬರೆದ ಪತ್ರದಲ್ಲಿ(೧೭೮೬ ಸೆಪ್ಟೆಂಬರ್, ೨೭) ಬಂಗಾಳಕ್ಕೆ ರೇಷ್ಮೆ ಹುಳುಗಳನ್ನು ತರಲೆಂದು ಕಳುಹಿಸಿದ್ದ ಬರ್ಹನುದ್ದೀನ್ ಮತ್ತು ಕಸ್ತೂರಿರಂಗ ಇವರಿಬ್ಬರೂ ಹಿಂದಿರುಗುತ್ತಿದ್ದಾರೆಂದು, ಆ ಹುಳುಗಳನ್ನು ಬಹು ಜಾಗರೂಕತೆಯಿಂದ ನೋಡಿಕೊಳ್ಳಬೇಕೆಂದು ತಿಳಿಸಿದನು. ಇಪ್ಪತ್ತೊಂದು ರೇಷ್ಮೆ ಕೃಷಿ ಕೇಂದ್ರಗಳನ್ನು ಸ್ಥಾಪಿಸಿದನು.[೨೨] ಬಂಗಾಳ ಮಾತ್ರವಲ್ಲದೆ ಮಸ್ಕತ್‌ನಿಂದಲೂ ರೇಷ್ಮೆ ಹುಳುಗಳನ್ನು ತರಿಸಲಾಗಿತ್ತು. ರೇಷ್ಮೆ ವಸ್ತುಗಳನ್ನು ನೇಯುವ ಕಸುಬು ಮಾಡುತ್ತಿದ್ದ ಪಟ್ವೇಗಾರರು ಮತ್ತು ಖತ್ರಿಗಳು ಎಂಬ ಪಂಗಡದ ಜನರು ಬಹಳ ಬೇಡಿಕೆಯಿರುತ್ತಿದ್ದ ಅತ್ಯಂತ ನಯವಾದ ರೇಷ್ಮೆ ಬಟ್ಟೆಗಳನ್ನು ನೇಯುತ್ತಿದ್ದರು. ಬೆಂಗಳೂರಿನ ನೇಕಾರರು ಇತರ

ಭಾಗಗಳಿಗಿಂತ ಹೆಚ್ಚು ಪರಿಣತಿ ಪಡೆದಿದ್ದರು ಎಂದು ಬುಕಾನನ್ ಬರೆದಿದ್ದಾನೆ. ರೇಷ್ಮೆಗೆ ಬೇಕಾದ ಕಚ್ಚಾವಸ್ತುವನ್ನು ಸ್ಥಳೀಯವಾಗಿಯೇ ಬೆಳೆಸಲಾಗುತ್ತಿತ್ತು. ಟಿಪ್ಪುವಿನ ತೋಟದಲ್ಲಿದ್ದ ಹಿಪ್ಪನೇರಳೆ ಮರಗಳು ಎಷ್ಟು ಸೊಂಪಾಗಿ ಬೆಳೆದಿದ್ದವೆಂದರೆ ಈ ಸಸ್ಯವು ಭಾರತದ ಹವಾಗುಣಕ್ಕೆ ಹೊಂದಿಕೊಳ್ಳುತ್ತದೆ ಎಂಬುದು ತಿಳಿಯುತ್ತದೆ.[೨೩] ಟಿಪ್ಪುವಿನ ಅದಮ್ಯವಾದ ಅಭಿವೃದ್ಧಿಶೀಲ ಗುಣದಿಂದಲೇ ವಿದೇಶಿ ರೇಷ್ಮೆ ಬೆಳೆ ಕರ್ನಾಟಕದಲ್ಲಿ ಪರಿಚಯಗೊಂಡಿತು. ಟಿಪ್ಪು ರೇಷ್ಮೆ ಕೃಷಿಯ ಬಗ್ಗೆ ಎಷ್ಟು ಜತನವಹಿಸಿದ್ದನೆಂದರೆ ೧೭೮೬ರಲ್ಲಿ ಯುದ್ಧದ ಮಧ್ಯೆ ಸುತ್ತುವರೆಯಲ್ಪಟ್ಟರೂ ತನ್ನ ಬಿಡುವಿಲ್ಲದ ದಿನಚರಿಯ ನಡುವೆಯೂ ವಿದೇಶದಿಂದ ತರುವ ರೇಷ್ಮೆ ಗೂಡುಗಳನ್ನು ಹೇಗೆ ಕಾಪಾಡಿ ಬೆಳೆಸಬೇಕು ಎಂಬುದರ ಬಗ್ಗೆ ಅಧಿಕಾರಿಗಳಿಗೆ ಪತ್ರ ಬರೆದು ಮಾರ್ಗದರ್ಶನ ಮಾಡುತ್ತಿದ್ದ. ಟಿಪ್ಪುವಿನ ಈ ನಿರಂತರ ಕಾಳಜಿಯಿಂದ ಹದಿನೆಂಟನೆಯ ಕೊನೆಭಾಗದ ವೇಳೆಗೆ ಮೈಸೂರು ಪ್ರಾಂತ್ಯದಲ್ಲಿ ೩೧೮ ರೇಷ್ಮೆ ಉತ್ಪಾದನಾ ಕೇಂದ್ರಗಳಿದ್ದವು.[೨೪]

ಟಿಪ್ಪುವು ಹೆಚ್ಚು ಪ್ರೋತ್ಸಾಹ ನೀಡಿದ್ದ ಇನ್ನೊಂದು ಉದ್ಯಮವೆಂದರೆ ಜವಳಿ ಉದ್ಯಮ. ಹತ್ತಿ ಬಟ್ಟೆಯಲ್ಲಿ ರಾಜ್ಯವು ಏಕಸ್ವಾಮ್ಯ ಪಡೆದಿತ್ತು. ಶಾಲುಗಳು, ಕಿಂಕಾವುಗಳು(ಚಿನ್ನದ ಬಟ್ಟೆ) ಬ್ರಾಡ್‌ಕ್ಲಾತ್(ಯುರೋಪಿಯನ್) ಮೊದಲಾದ ಎಲ್ಲಾ ದೇಶಗಳ ಬಟ್ಟೆಯನ್ನು ನೇಯಿಸುತ್ತಿದ್ದನು. ಈ ಉದ್ಯಮಗಳಿಗಾಗಿ ಸಹಸ್ರಾರು ಪೌಂಡುಗಳ ಹಣವನ್ನು ವೆಚ್ಚ ಮಾಡಿದನು.[೨೫] ಪ್ರಸಿದ್ಧವಾದ ಭಾರತೀಯ ಮಸ್ಲಿನ್ ಬಟ್ಟೆಯೂ ಮೈಸೂರಿನಲ್ಲಿ ತಯಾರಾಗುತ್ತಿತ್ತು. ಜವಳಿ ಉದ್ಯಮಕ್ಕೆ ಬೆಂಗಳೂರು ಪ್ರಸಿದ್ಧವಾಗಿತ್ತು. ಮುಸ್ಲಿಂ ನೇಕಾರರ ಒಂದು ಪಂಗಡ ಪಟ್ಟೇಗಾರರೆಂದು ಪ್ರಸಿದ್ಧಿ ಪಡೆದಿದ್ದರು. ಶ್ರೀರಂಗಪಟ್ಟಣ ಸಮೀಪದ ನೆಲಘಟ್ಟ ಬಹುಮುಖ್ಯವಾದ ಜವಳಿ ಉದ್ಯಮದ ಕೇಂದ್ರವಾಗಿತ್ತು. ಇಲ್ಲಿ ಸಾಧಾಶಿಳ್ಳಿ ಎಂಬ ಹೆಸರಿನ ಬಟ್ಟೆ ತಯಾರಾಗುತ್ತಿತ್ತು. ಗುಬ್ಬಿಯು ಸೀರೆ ತಯಾರಿಕೆಗೆ ಪ್ರಸಿದ್ಧವಾಗಿತ್ತು. ಸತ್ಯಮಂಗಲದಲ್ಲಿ ೮೦೦ ಮಗ್ಗಗಳಿದ್ದವು. ಕೊಯಮತ್ತೂರಿನಲ್ಲಿ ೪೬ ಮಗ್ಗಗಳಿದ್ದವು. ಇದು ಬಟ್ಟೆ ಉದ್ಯಮದ ಕೇಂದ್ರವಾಗಿತ್ತು. ಹರಿಹರವು ಹತ್ತಿ ನೂಲಿಗೆ ಪ್ರಸಿದ್ಧಿಯಾಗಿತ್ತು. ಸೇಲಂ–ಬೆಂಗಳೂರು ನಡುವಿನ ವೇಲೂರು ಪ್ರಮುಖ ಜವಳಿ ಕೇಂದ್ರವಾಗಿತ್ತು.[೨೬]

ರಾಜ್ಯದಲ್ಲಿ ಎಲ್ಲ ಬಗೆಯ ಕುಶಲಕರ್ಮಿಗಳಿದ್ದರು. ಚಿನವಾರ, ಬಡಗಿ, ಮೇಸ್ತ್ರಿ, ಕುಂಬಾರ, ಕಮ್ಮಾರ, ಚಮ್ಮಾರ ಮೊದಲಾದ ಪರಿಣಿತ ಕುಶಲಕರ್ಮಿಗಳಿದ್ದರು. ಇವರು ವಂಶಪಾರಂಪರ್ಯವಾಗಿ ಬೆಳೆದು ಬಂದವರು. ಈ ಭಾಗದಲ್ಲಿ ಹೆಚ್ಚು ಮರಗಳು ಲಭ್ಯವಿದ್ದು, ಹಲವು ವಸ್ತುಗಳನ್ನು ತಯಾರು ಮಾಡಲಾಗುತ್ತಿತ್ತು. ಬಡಗಿಗಳು ಮನೆಗೆ ಬೇಕಾದ ಬಾಗಿಲು, ಕಿಟಕಿ ಬೀಮ್‌ಗಳು, ಪಿಠೋಪಕರಣಗಳನ್ನು ಮತ್ತು ದೋಣಿಗಳು ಇತ್ಯಾದಿ ತಯಾರು ಮಾಡುತ್ತಿದ್ದರು. ಚನ್ನಪಟ್ಟಣವು ಬೊಂಬೆಗಳ ತಯಾರಿಕೆಗೆ ದೇಶದಲ್ಲೇ ಪ್ರಸಿದ್ಧವಾಗಿತ್ತು.

ಇತರ ಕೈಗಾರಿಕೆಗಳ ಅಭಿವೃದ್ಧಿಗೂ ಟಿಪ್ಪು ಪ್ರೋತ್ಸಾಹಿಸಿದನು. ಮುತ್ತು ಆಯುವ ಉದ್ಯಮದಲ್ಲಿ ಟಿಪ್ಪುವಿಗೆ ಆಸಕ್ತಿಯಿತ್ತು. ಮಸ್ಕತ್ತಿನಲ್ಲಿದ್ದ ತನ್ನ ವ್ಯಾಪಾರಿ ಪ್ರತಿನಿಧಿಗಳಿಗೆ ಒಳ್ಳೆಯ ಮುಳುಗು ಈಜುಗಾರರನ್ನು ಕರೆತರುವಂತೆ ತಿಳಿಸಿದನು. ಅಲ್ಲಿ ದೊರಕದಿದ್ದರೆ ಬೆಹರೇನ್ ಮತ್ತು ಆರ್ಮುಜ್‌ಗಳಲ್ಲಿ ಹುಡುಕಿ ತರಬೇಕೆಂದು ಸೂಚಿಸಿದನು. ಎಣ್ಣೆ ಹಿಂಡುವ(ಗಾಣ) ಕಾರ್ಖಾನೆ ಸಾಮಾನ್ಯವಾಗಿತ್ತು. ಶ್ರೀರಂಗಪಟ್ಟಣದಲ್ಲಿ ಕಾಗದದ ಕಾರ್ಖಾನೆಯಿತ್ತು. ಮುತ್ತೋಡಿ ಮತ್ತು ಚನ್ನಪಟ್ಟಣಗಳಲ್ಲಿ ಗಾಜಿನ ವಸ್ತುಗಳು ತಯಾರಾಗುತ್ತಿದ್ದವು. ಕಲ್ಲಿಗೆ ಹೊಳಪು ಕೊಡುವ ಮತ್ತುಕೊರೆಯುವ ಕೆಲಸ ನಡೆಯುತ್ತಿತ್ತು. ಕಲ್ಲಿನಿಂದ ಕಂಬಗಳನ್ನು ತೆಗೆಯುತ್ತಿದ್ದರು. ಮದ್ದಿನ ಪುಡಿಯು ಇಂಗ್ಲೆಂಡಿನಲ್ಲಿ ತಯಾರಾಗುತ್ತಿದ್ದಕ್ಕಿಂತ ಉತ್ತಮ ಗುಣಮಟ್ಟದ್ದಾಗಿತ್ತು. ಚನ್ನಪಟ್ಟಣದಲ್ಲಿ ಸಂಗೀತ ವಾದ್ಯಗಳಿಗೆ ಬಳಸುವ ತಂತಿಯನ್ನು ತಯಾರಿಸಲಾಗುತ್ತಿತ್ತು. ಮೈಸೂರು ಭಾಗದಲ್ಲಿ ಹಲವು ಸಕ್ಕರೆ ಉದ್ಯಮಗಳಿದ್ದವು. ಚಿಕ್ಕಬಳ್ಳಾಪುರವು ಕಲ್ಲುಸಕ್ಕರೆ ತಯಾರಿಕೆಗೆ ಪ್ರಸಿದ್ಧವಾಗಿತ್ತು. ಚೈನಾ ತಂತ್ರಜ್ಞರ ನೆರವು ಪಡೆದು ಉತ್ತಮ ಮಟ್ಟದ ಸಕ್ಕರೆ ತಯಾರಿಸಲಾಗುತ್ತಿತ್ತು.

ಕೈಗಾರಿಕೆಯ ಹಿತದೃಷ್ಟಿಯಿಂದ ಹೆಚ್ಚು ವಿಸ್ತೃತವಾದ್ದುದು ಜವಳಿ ವಲಯವಾಗಿದೆ. ಕಂಬಳಿ, ಕಬ್ಬಿಣ, ಸಕ್ಕರೆ ಮತ್ತು ಬೆಲ್ಲ ಹಾಗೂ ಎಣ್ಣೆ ಉತ್ಪಾದನೆಗಳು ನಂತರದ ಸ್ಥಾನಗಳನ್ನು ಪಡೆದಿದ್ದವು. ಈ ಐದು ಬಗೆಯ ಕೈಗಾರಿಕೆಗಳು ಆ ಕಾಲದ ಪ್ರಧಾನ ಉದ್ಯಮಗಳಾಗಿದ್ದವು. ಸಾಕಿಯವರು ವಿವರಿಸುವಂತೆ ಈ ಉದ್ಯಮಗಳು ಪ್ರಮಾಣದಲ್ಲಾಗಲಿ ಉನ್ನತ ಗುಣಮಟ್ಟದಲ್ಲಾಗಲೀ ಯಾವ ಯುರೋಪಿಯನ್ ದೇಶಗಳಿಗೂ ಸರಿಸಾಟಿಯಾಗಿದ್ದವು. ಆ ಕಾಲದ ಯುರೋಪಿಗೆ ಹೋಲಿಸಿದರೆ ಭೌತಿಕ, ಬೌದ್ಧಿಕ ಹಾಗೂ ಐತಿಹಾಸಿಕ ಅಭಿವೃದ್ಧಿಯ ಗತಿಯಲ್ಲಿ ಭಾರತವು ತುಂಬಾ ಹಿಂದೆ ಉಳಿದಿತ್ತೆಂಬ ವಸಾಹತುಶಾಹಿಗಳ ಹಾಗೂ ಅವರ ಗುಲಾಮ ಬುದ್ಧಿಜೀವಿಗಳ ಮಾತುಗಳಲ್ಲಿ ಎಳ್ಳಷ್ಟು ಹುರುಳಿಲ್ಲವೆಂದು ತಿಳಿಯುತ್ತದೆ. ಇವೆಲ್ಲವನ್ನು ಮೀರಿಸುವಂತೆ ಟಿಪ್ಪುವಿನ ಪ್ರಭುತ್ವವೇ ಬಂಡವಾಳ ಹೂಡಿಕೆ ಮಾಡುತ್ತಾ ಉತ್ಪಾದನಾ ಸಾಧನಗಳನ್ನು ಅಭಿವೃದ್ಧಿಪಡಿಸುವ ಪ್ರಗತಿಪರ ಬಂಡವಾಳಶಾಹಿ ಪಾತ್ರ ನಿರ್ವಹಿಸಿತು.[೨೭]

ಟಿಪ್ಪುವಿನ ಪ್ರಭುತ್ವಕ್ಕೆ ಈ ಸ್ವರೂಪ ಬರಲು ಸ್ವತಃ ಟಿಪ್ಪುವಿನ ಉದ್ಯಮಶೀಲ ವ್ಯಕ್ತಿತ್ವವೂ ಕಾರಣವಾಗಿತ್ತು. ಇತರ ರಾಜರಂತಲ್ಲದೆ ಟಿಪ್ಪು ಸದಾ ಜ್ಞಾನದಾಹಿಯಾಗಿದ್ದನು. ವಿಶ್ವದೆಲ್ಲಡೆ ನಡೆಯುವ ಯಾವುದೇ ವೈಜ್ಞಾನಿಕ ಸಂಶೋಧನೆ ಹಾಗೂ ಅದರ ಪ್ರಾಯೋಗಿಕತೆಗಳ ಬಗ್ಗೆ ಆತನಿಗೆ ತೀರದ ಜ್ಞಾನದಾಹವಿತ್ತು. ಟಿಪ್ಪುವಿನ ಅರಮನೆಯಲ್ಲಿ ೨೦೦೦ಕ್ಕೂ ಹೆಚ್ಚು ಪುಸ್ತಕಗಳಿದ್ದ ಗ್ರಂಥಾಲಯ, ವಿವಿಧ ಅಳತೆಯ ಕನ್ನಡಕ ಹಾಗೂ ದೂರದರ್ಶಕಗಳು ತುಂಬಿದ್ದವು. ಬುಕಾನನ್ ವಿವರಿಸುವಂತೆ ಅವನ ಅರಮನೆಯು ಒಂದು ಗ್ರಂಥಾಲಯ, ಪ್ರಯೋಗಾಲಯ, ವಸ್ತು ಸಂಗ್ರಹಾಲವು ಆಗಿತ್ತು.

ಟಿಪ್ಪು ತನ್ನ ರಾಯಭಾರಿಗಳನ್ನು ಎಲ್ಲಿಗೆ ಕಳುಹಿಸಿದರೂ ಆಯಾ ದೇಶಗಳಲ್ಲಿ ಅಭಿವೃದ್ಧಿ ಹೊಂದಿದ್ದ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳುವ ವ್ಯವಸ್ಥೆ ಇರುತ್ತಿತ್ತು. ಫ್ರಾನ್ಸ್‌ಗೆ ಸೇನಾ ಸಹಾಯಕ್ಕೆಂದು ತೆರಳಿದ್ದ ರಾಯಭಾರಿಗಳು ತಮ್ಮೊಡನೆ ಫ್ರಾನ್ಸಿನ ಉತ್ತಮ ವೈದ್ಯ, ಶಸ್ತ್ರ ಚಿಕಿತ್ಸಕ, ಬಡಗಿ, ಕಮ್ಮಾರ, ಕೈಗಡಿಯಾರ ತಯಾರಕ, ಬಣ್ಣ ತಯಾರಕ ಹಾಗೂ ತೋಟಗಾರಿಕಾ ತಜ್ಞರನ್ನು ಮೈಸೂರಿಗೆ ಕರೆತಂದರು. ೧೭೮೭ರಲ್ಲಿ ಫ್ರಾನ್ಸಿಗೆ ಕಳುಹಿಸಿದ ಎರಡನೇ ರಾಯಭಾರದಲ್ಲಿ ತಮ್ಮೊಡನೆ ೧೦ ಮದ್ದುಗುಂಡು ತಜ್ಞರು, ೧೦ ಮಂದಿ ಪಿಂಗಾಣಿ ತಯಾರಕರು, ೧೦ ಮಂದಿ ಗಾಜು ಮತ್ತು ಕನ್ನಡಿ ತಯಾರಕರು, ೧೦ ಮಂದಿ ನೀರು ಮೇಲೆತ್ತುವ ಯಂತ್ರ ತಯಾರಕರು ಹಾಗೂ ಇತರ ತಂತ್ರಜ್ಞರನ್ನು ಕರೆತರುವಂತೆ ಟಿಪ್ಪು ಆದೇಶಿಸಿದ್ದ. ಯುರೋಪಿನ ಚಿತ್ರಣವನ್ನೇ ಬದಲಾಯಿಸಿದ ಹಬೆಯಂತ್ರವನ್ನು ಮೈಸೂರಿಗೆ ತರುವಂತೆ ಆದೇಶ ನೀಡಿದ್ದನು.[೨೮] ಈ ಆಲೋಚನೆಯು ಟಿಪ್ಪುವಿನ ವೈಜ್ಞಾನಿಕ ಮನೋಭಾವ ಹಾಗೂ ಅಭಿವೃದ್ಧಿ ಚಿಂತನೆಯನ್ನು ತಿಳಿಸುತ್ತದೆ.

ಕೈಗಾರಿಕಾ ಆರ್ಥಿಕತೆಗೆ ಬೇಕಾದ ಸ್ವತಂತ್ರ ಕಾರ್ಮಿಕರನ್ನು ಊಳಿಗಮಾನ್ಯ ಬಂಧನ ಹಾಗೂ ಹೊರೆಗಳಿಂದ ವಿಮೋಚನೆ ಮಾಡಲು ಟಿಪ್ಪು ಸತತವಾಗಿ ಕ್ರಮಗಳನ್ನು ಕೈಗೊಂಡನು. ಟಿಪ್ಪುವಿನಡಿ ಕೋರ್‍ವಿ ಇತ್ಯಾದಿ ಊಳಿಗಮಾನ್ಯ ಶ್ರಮಶೋಷಣಾ ಪದ್ಧತಿಗಳೆಲ್ಲಾ ನಾಶಗೊಂಡವು. ಆಧುನಿಕ ಕೈಗಾರಿಕೋದ್ಯಮಕ್ಕೆ ಬೇಕಾದ ಎಲ್ಲಾ ಅಗತ್ಯಗಳನ್ನು ಟಿಪ್ಪುವಿನ ಪ್ರಭುತ್ವ ಪೂರೈಸಿತು. ಇದರಿಂದಾಗಿ ಕ್ರಮೇಣ ಯಂತ್ರ ಬಳಸಿ ಉತ್ಪಾದನೆ ಮಾಡುವ ಕಾರ್ಖಾನೆ ಪದ್ಧತಿಯು ವಿಕಾಸಗೊಂಡಿತು. ಫ್ರಾನ್ಸಿಸ್ ಫರ್ಡಿನಾಂಡೀಸ್ ದಾಖಲಿಸುವಂತೆ ಕೆಲವೇ ವರ್ಷಗಳಲ್ಲಿ ಹಲವು ಬಗೆಯ ಉತ್ಪಾದನಾ ಕೇಂದ್ರಗಳೂ ಹುಟ್ಟಿಕೊಂಡವು. ಗಡಿಯಾರ, ಪಾತ್ರೆಸಾಮಾನು, ಕತ್ತರಿ ಹಾಗೂ ವೈಜ್ಞಾನಿಕ ಸಾಧನಗಳನ್ನು ಉತ್ಪಾದನೆ ಮಾಡುವ ಕಾರ್ಖಾನೆಗಳು ಸ್ಥಾಪನೆಗೊಂಡವು. ಯುದ್ಧ ಶಸ್ತ್ರಾಸ್ತ್ರಗಳು, ಬಂದೂಕು, ರಾಕೆಟು, ಮದ್ದು-ಗುಂಡು ತಯಾರಿಕಾ ಕಾರ್ಖಾನೆಗಳು ಸತತವಾಗಿ ಹುಟ್ಟಿಕೊಂಡವು. ಫ್ರೆಂಚರು, ಜರ್ಮನರು, ತುರ್ಕರು, ಅರಬ್ಬರು, ಚೀನೀಯರು ಇತರ ದೇಶಗಳ ಹಲವಾರು ತಂತ್ರಜ್ಞರು ಈ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು.[೨೯]

ಬೆಂಗಳೂರು ಹಾಗೂ ಶ್ರೀರಂಗಪಟ್ಟಣದಲ್ಲಿ ಸ್ಥಾಪಿಸಲಾಗಿದ್ದ "ತಾರಾ ಮಂಡಲಗಳೆಂಬ" ಕೈಗಾರಿಕಾ ಸಮುಚ್ಚಯಗಳಲ್ಲೂ ಹೆಚ್ಚಿನ ಯಾಂತ್ರೀಕರಣವಾಗಿತ್ತು. ೧೮ನೇ ಶತಮಾನದ ವೇಳೆಗೆ ಮೈಸೂರಿನಲ್ಲಿ ಆಧುನಿಕ ಬಂಡವಾಳಶಾಹಿ ಉತ್ಪಾದನಾ ವಿಧಾನಗಳು ಅಸ್ತಿತ್ವದಲ್ಲಿದ್ದವು. ಟಿಪ್ಪು ಪರಿಚಯಿಸಿದ ಪ್ರಭುತ್ವ ಬಂಡವಾಳವು ಆಗ ಚಾಲ್ತಿಯಲ್ಲಿದ್ದ ಕೈಕೆಲಸದ ಉತ್ಪಾದನಾ ಕ್ರಮಗಳಿಗೆ ಗುಣಾತ್ಮಕ ಬದಲಾವಣೆ ತಂದು ಕೈಗಾರಿಕೀಕರಣಗೊಂಡು ಅಂದಿನ ಯುರೋಪಿಗೆ ಸರಿಸಮನಾದ ಯಂತ್ರಾಧರಿತ ಕಾರ್ಖಾನೆ ಪದ್ಧತಿಯನ್ನು ಅಸ್ತಿತ್ವಕ್ಕೆ ತಂದಿತು. ಟಿಪ್ಪುವಿನ ಪ್ರಭುತ್ವ ಬಂಡವಾಳವು

ಕೈಗಾರಿಕಾ ಬೆಳವಣಿಗೆಗೆ ಬೇಕಾದ ಬಂಡವಾಳ ಸಂಚಯ ಹಾಗೂ ಸೂಕ್ತ ತಂತ್ರಜ್ಞಾನಗಳ ಅಗತ್ಯವನ್ನು ಪೂರೈಸಿತು. ಈ ರೀತಿಯ ಬಂಡವಾಳ ಮತ್ತು ತಂತ್ರಜ್ಞಾನ ಕೇಂದ್ರೀಕರಣಗಳು ಹೆಚ್ಚು ಉನ್ನತಮಟ್ಟದ ಉತ್ಪಾದಕತೆಗೆ ದಾರಿ ಮಾಡಿಕೊಟ್ಟವು. ಉದಾಹರಣೆಗೆ ತಾರಮಂಡಲಗಳು ಉತ್ಪಾದಿಸುತ್ತಿದ್ದ ಕ್ಷಿಪಣಿ ವಿಶ್ವದಲ್ಲೇ ಮೊದಲನೆಯದಾಗಿತ್ತು.[೩೦]

ಟಿಪ್ಪು ಕೈಗಾರಿಕಾ ವಲಯದಲ್ಲಿ ಆಧುನಿಕ ತಾಂತ್ರಿಕತೆ ಅಳವಡಿಸಿ ಉತ್ಪಾದನೆಯನ್ನು ದ್ವಿಗುಣಗೊಳಿಸಲು ಅಗತ್ಯ ಕ್ರಮಕೈಗೊಂಡನು. ಫ್ರಾನ್ಸಿಗೆ ರಾಯಭಾರಿಗಳನ್ನು ಕಳುಹಿಸಿ ಯುರೋಪಿನ ತಾಂತ್ರಿಕತೆಯನ್ನು ತಿಳಿಯುವ ಪ್ರಯತ್ನ ನಡೆಸಿದನು. ಗಡಿಯಾರ ತಯಾರಕರು, ಚೈನಾವ್ಯಾರ್ ತಯಾರಕರು, ಗಾಜು ಮತ್ತು ಕನ್ನಡಿ ತಯಾರಕರನ್ನು ಮೈಸೂರಿಗೆ ಸ್ವಾಗತಿಸಿ ಅವರ ಸೇವೆಯನ್ನು ಪಡೆದನು.[೩೧] ೧೭೯೧ರ ವೇಳೆಗೆ ಫ್ರೆಂಚ್ ಸರ್ಕಾರಕ್ಕೆ ಪತ್ರದ ಮೂಲಕ ಹಲವು ಬೇಡಿಕೆ ಸಲ್ಲಿಸಿದನು. ೧೦ ಮಂದಿ ತೋಪು ತಯಾರಕರು, ೧೦ ಮಂದಿ ಹಡಗು ನಿರ್ಮಾಪಕರು, ೧೦ ಮಂದಿ ಚೈನಾವ್ಯಾರ್ ತಯಾರಕರು, ೧೦ ಮಂದಿ ಗ್ಲಾಸ್ ಮತ್ತು ಕನ್ನಡಿ ತಯಾರಕರು ೧೦ ಮಂದಿ ಹಡಗಿಗೆ ಇಂಜಿನ್‌ಗಳು ಮತ್ತು ಗಾಲಿಗಳನ್ನು ತಯಾರಿಸುವ ಹಾಗೂ ಗೋಲ್ಡ್ ಪ್ಲೇಟಿಂಗ್‌ನಲ್ಲಿ ಪರಿಣಿತಿ ಪಡೆದವರನ್ನು ಮೈಸೂರಿಗೆ ಕಳುಹಿಸುವಂತೆ ಮನವಿ ಮಾಡಿದನು.[೩೨]

೫.೩. ವ್ಯಾಪಾರ ಮತ್ತು ವಾಣಿಜ್ಯಕೇಂದ್ರಿತ ಆಧುನೀಕರಣ

ಸುಧಾರಣಾ ಕ್ರಮಗಳನ್ನು ಕೈಗೊಳ್ಳುವುದೆಂದರೆ ಟಿಪ್ಪುವಿಗೆ ಬಹಳ ಇಷ್ಟ. ಅವನ ಮನಸ್ಸು ಪ್ರತಿಸಾರಿಯೂ ಏನಾದರೂ ಹೊಸದೊಂದನ್ನು ಆಲೋಚಿಸುತ್ತಿತ್ತು. ರಾಜ್ಯದಲ್ಲಿ ವ್ಯಾಪಾರ–ವಾಣಿಜ್ಯದ ಅಭಿವೃದ್ಧಿಗೆ ಸಮಗ್ರವಾಗಿ ಕಾಯಕಲ್ಪ ನೀಡಿದನು. ಅದರ ರಚನೆಯನ್ನು ಕೇಂದ್ರೀಕರಿಸಿದನು. ಸರ್ಕಾರಿ ವ್ಯಾಪಾರ ವ್ಯವಸ್ಥೆಯ ಒಂದು ಮಾದರಿಯನ್ನು ವಿಕಾಸಪಡಿಸಿದನು. ಆಮದಿಗಿಂತ ರಫ್ತಿಗೆ ಹೆಚ್ಚಿನ ಉತ್ತೇಜನ ನೀಡಿದನು. ಮೈಸೂರು ಸರಕುಗಳಿಗೆ ವಿದೇಶಗಳಲ್ಲಿ ವ್ಯಾಪಾರಿ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ಯೋಚಿಸಿದನು. ಅಟೋಮನ್ ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ವಿಶೇಷತಃ ಪಶ್ಚಿಮ ಏಷ್ಯಾದಲ್ಲಿ ಮರಾಠ ಕೇಂದ್ರಗಳನ್ನು ತೆರೆಯಲು ಬಯಸಿದನು. ಯುರೋಪು ಯಾವ ಅನುಭವವನ್ನು ಶತಮಾನಗಳ ಕಾಲ ಶ್ರಮಪಟ್ಟು ಸಂಪಾದಿಸಿತ್ತೊ ಅದನ್ನು ತನ್ನ ಜೀವತ ಕಾಲದಲ್ಲೆ ಸಾಧಿಸಲು ಆಲೋಚಿಸಿದನು.

ಮೈಸೂರು ರಾಜ್ಯದಲ್ಲಿ ವಾಣಿಜ್ಯ ಬೆಳೆಗಳು ಹೇರಳವಾಗಿದ್ದವು. ಅಲ್ಲಿನ ಸುದೀರ್ಘವಾದ ಕರಾವಳಿ ಅಮದು ಮತ್ತು ರಫ್ತಿಗೆ ಉತ್ತಮವಾದ ಸೌಲಭ್ಯಗಳು ಒದಗಿ ಬಂದಿತು. ಮೆಣಸು, ಏಲಕ್ಕಿ, ರೇಷ್ಮೆ, ತೆಂಗಿನಕಾಯಿ, ಅಡಕೆ, ಶ್ರೀಗಂಧ, ದಂತ ಮೊದಲಾದ ವಸ್ತುಗಳಿಗೆ ಮೈಸೂರು ತುಂಬಾ ಪ್ರಸಿದ್ಧವಾಗಿತ್ತು. ಪಾಶ್ಚಿಮಾತ್ಯ ಮಾರುಕಟ್ಟೆಯಲ್ಲಿ ಅವಕ್ಕೆ ಹೆಚ್ಚು ಬೇಡಿಕೆಯಿತ್ತು. ಮೈಸೂರು

ಈ ವಸ್ತುಗಳ ಅತ್ಯಧಿಕ ರಫ್ತುಗಾರ ರಾಜ್ಯವಾಯಿತು. ಸಾಗರೋತ್ತರ ವ್ಯಾಪಾರವನ್ನು ಸುವ್ಯವಸ್ಥಿತ ರೀತಿಯಲ್ಲಿ ಟಿಪ್ಪು ನಿರ್ವಹಿಸಿದನು. ಹೊರದೇಶಗಳಲ್ಲಿ ವ್ಯಾಪಾರ ಕೋಠಿಗಳನ್ನು ಸ್ಥಾಪಿಸಿ ತನ್ನ ವಾಣಿಜ್ಯ ಪ್ರತಿನಿಧಿಗಳನ್ನು ನೇಮಿಸಿ ವ್ಯಾಪಕ ಪ್ರಮಾಣದಲ್ಲಿ ನಿರ್ವಹಿಸಿದನು. ಭಾರತಕ್ಕೆ ಹೋಲಿಸಿದರೆ ಯುರೋಪಿನ ಸಂಪದಭ್ಯುದಯಕ್ಕೆ ಮುಖ್ಯ ಕಾರಣ ವಾಣಿಜ್ಯ ಮತ್ತು ಕೈಗಾರಿಕೆಯೇ ಹೊರತು ಭಾರತದಲ್ಲಿ ಮೆಲುಗೈ ಆಗಿದ್ದ ಕೃಷಿ ವಲಯವಲ್ಲ. ಭಾರತದಲ್ಲಿ ಅಗಾಧ ಪ್ರಮಾಣದ ನೈಸರ್ಗಿಕ ಸಂಪನ್ಮೂಲಗಳು ಇದ್ದವು. ಎಲ್ಲಾ ಬೆಳೆಗಳನ್ನು ಬೆಳೆಯುತ್ತಿದ್ದರೂ ಭಾರತ ಬಡರಾಷ್ಟ್ರವಾಗಿತ್ತು. ಅದಕ್ಕೆ ಕಾರಣ ಇಲ್ಲಿಯ ಪ್ರಜೆಗಳ ವ್ಯಾಪಾರ ಮತ್ತು ವಾಣಿಜ್ಯಗಳಲ್ಲಿ ಯುರೋಪಿಯರಂತೆ ವ್ಯವಹಾರಿಕ ಕೌಶಲ್ಯ ಇರಲಿಲ್ಲ. ಈ ದಿಕ್ಕಿನಲ್ಲಿ ಟಿಪ್ಪು ಸುಧಾರಣಾ ಕ್ರಮಗಳನ್ನು ಕೈಗೊಂಡನು. ನೆರೆಯ ದೇಶಗಳೊಡನೆ ನಿಕಟ ವಾಣಿಜ್ಯ ಸಂಪರ್ಕಗಳನ್ನು ಬೆಳೆಸಿಕೊಂಡನು. ವಿದೇಶಿ ವರ್ತಕ ಸಮುದಾಯವನ್ನು ಆಕರ್ಷಿಸಲು ಅಗತ್ಯ ಕ್ರಮಕೈಗೊಂಡನು. ಮೈಸೂರಿನ ಬಂದರುಗಳಲ್ಲಿ ಅವರು ವ್ಯಾಪಾರ ವಾಣಿಜ್ಯ ಚಟುವಟಿಕೆಗಳನ್ನು ಪ್ರಾರಂಭಿಸಲು ಹಲವು ಸೌಲಭ್ಯಗಳನ್ನು ರಿಯಾಯ್ತಿಗಳನ್ನು ನೀಡಿದನು.[೩೩]

ವಿದೇಶಿ ವರ್ತಕರು ತಮ್ಮ ವ್ಯಾಪಾರಿ ಕೋಠಿಯನ್ನು ಕಟ್ಟಿಕೊಳ್ಳಲು ಅನುಮತಿಸಿದನು. ಅವರಿಗೆ ಸೌಲಭ್ಯಗಳನ್ನು ಒದಗಿಸಿದನು. ಅವರಿಗೆ ರಕ್ಷಣೆ ಮತ್ತು ಭದ್ರತೆಯ ಭರವಸೆ ನೀಡಲಾಗಿತ್ತು. ಇದರಲ್ಲಿ ಟಿಪ್ಪುವಿನ ಆಶಯಗಳಿದ್ದವು. ಅದೇನೆಂದರೆ ಮೈಸೂರಿನ ವಸ್ತುಗಳಿಗೆ ಬೇಡಿಕೆಯಿರುವ ಅವರ ದೇಶಗಳಲ್ಲಿ ತನ್ನ ರಾಜ್ಯದ ವ್ಯಾಪಾರಿಗಳಿಗೆ ಇದೇ ತೆರನಾದ ಸೌಲಭ್ಯಗಳು ಮತ್ತು ರಿಯಾಯ್ತಿಗಳನ್ನು ಕೊಡಬಹುದು ಎಂಬ ನಿರೀಕ್ಷೆಯಿತು. ವಸಾಹತುಗಾರರು ಮೈಸೂರು ರಾಜ್ಯವನ್ನು ಕಸಿದುಕೊಳ್ಳದಂತೆ ಮಾಡುವುದು. ಹೀಗೆ ಮೈಸೂರು ರಾಜ್ಯದಲ್ಲಿ ಟಿಪ್ಪು ವಿದೇಶಿ ವರ್ತಕರಿಗೆ ಪ್ರೋತ್ಸಾಹ ನಿಡಿದ್ದರ ಪರಿಣಾಮ ದೂರಸ್ಪರ್ಶಿಯಾಗಿದ್ದವು. ಅದು ಬ್ರಿಟಿಷರ ವ್ಯಾಪಾರ ವಾಣಿಜ್ಯ ಚಟುವಟಿಕೆಗಳ ಮೇಲೆ ನಿರ್ಬಂಧ ಏರಿತು. ಮಲಬಾರಿನ ಕರಿಮೆಣಸು ವ್ಯಾಪಾರವನ್ನು ಬಹುವಾಗಿ ಅವಲಂಬಿಸಿದ್ದ ಬ್ರಿಟಿಷರಿಗೆ ಇದರಿಂದ ತೊಂದರೆಯಾಯಿತು. ಯುರೋಪಿನ ಮಾರುಕಟ್ಟೆಯಲ್ಲಿ ಏಲಕ್ಕಿಗೆ ಭಾರಿ ಬೇಡಿಕೆಯಿತ್ತು. ಇದರ ರಫ್ತನ್ನು ಬದಲಿಸಿ ಅರೆಬಿಯಾ, ಮಧ್ಯಪ್ರಾಚ್ಯ ದೇಶಗಳಿಗೆ ಕಳುಹಿಸಲಾಯಿತು.[೩೪]

ಹೈದರಾಲಿ ಬ್ರಿಟಿಷರ ವಿರುದ್ಧ ತನ್ನ ಹಡಗುಗಳಿಂದ ನಡೆಸುವ ವ್ಯಾಪಾರ ಚಟುವಟಿಕೆಗಳ ರಕ್ಷಣೆಗೆ ನೌಕೆಗಳ ಉಪಯುಕ್ತತೆ ಕಂಡುಕೊಂಡಿದ್ದನು. ಟಿಪ್ಪು ಕೂಡ ಈಸ್ಟ್ ಇಂಡಿಯಾ ಕಂಪನಿಯ ಮಾದರಿಯಲ್ಲೆ ಸಾಗರೋತ್ತರ ವ್ಯಾಪಾರ ಅಭಿವೃದ್ಧಿಯಲ್ಲಿ ಹೊಸ ತಂತ್ರಗಾರಿಕೆಗೆ ಉತ್ತೇಜನ ನೀಡಿ ಕರಾವಳಿಯಲ್ಲಿ ನೌಕಾನೆಲೆಗಳನ್ನು ಸ್ಥಾಪಿಸಿದನು. ಟಿಪ್ಪುವಿಗೆ ಐರೋಪ್ಯ ರಾಷ್ಟ್ರಗಳ ಅಭಿವೃದ್ಧಿಗೆ ಆಧುನಿಕ ತಂತ್ರಜ್ಞಾನವು ಒಂದು ಮುಖ್ಯವಾಹಿನಿಯಾಗಿತ್ತು ಎಂಬುದು

ಅರಿವಿತ್ತು. ಐರೋಪ್ಯ ರಾಷ್ಟ್ರಗಳ ಪ್ರಾಬಲ್ಯಕ್ಕೆ ಮುಖ್ಯವಾಗಿ ಆ ದೇಶಗಳಲ್ಲಿ ಸ್ಥಾಪಿತವಾಗಿದ್ದ ಹಣಕಾಸು ಮತ್ತು ವಾಣಿಜ್ಯ ಸಂಸ್ಥೆಗಳು ಮತ್ತು ಪ್ರಬುದ್ಧ ಸಾಮಾಜಿಕ ವ್ಯವಸ್ಥೆಗಳು ಕಾರಣವಾಗಿದ್ದವು. ಆಧುನಿಕ ನೌಕೆಗಳ ಮತ್ತು ಹಡಗುಗಳ ನಿರ್ಮಾಣದಿಂದ ಜಲಸಂಪರ್ಕವನ್ನು ಆ ರಾಷ್ಟ್ರಗಳು ಸುಗಮಗೊಳಿಸಿದವು. ಇದು ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೆರಿಕದಂಥ ದೇಶಗಳೊಂದಿಗೆ ವ್ಯಾಪಾರ ಸಂಪರ್ಕ ಬೆಳೆಸಲು ಸಹಕಾರಿಯಾದವು ಮತ್ತು ಸಂಪನ್ಮೂಲಗಳನ್ನು ಒಗ್ಗೂಡಿಸಲು ಸಾಧ್ಯವಾಯಿತು. ಈ ಬೆಳವಣಿಗೆಗೆ ಮುಖ್ಯ ಕಾರಣ ಆ ದೇಶಗಳ ರಾಜ್ಯದ ಸಹಾಯ ಮತ್ತು ಪ್ರೋತ್ಸಾಹ. ಇದರ ಸ್ವರೂಪವನ್ನು ಅರಿತುಕೊಂಡ ಟಿಪ್ಪು ಮೈಸೂರು ರಾಜ್ಯದಲ್ಲಿಯೂ ಇದೇ ರೀತಿಯ ಪ್ರೋತ್ಸಾಹ ಮತ್ತು ಸಹಾಯ ನೀಡಿ ಯುರೋಪ್ ಮಾದರಿಯ ಆಧುನೀಕರಣಕ್ಕೆ ಚಾಲನೆ ನೀಡಿದನು. ಕೃಷಿ ಉತ್ಪನ್ನಗಳ ಅಭಿವೃದ್ಧಿ, ಸಂಪನ್ಮೂಲಗಳ ಕ್ರೋಢೀಕರಣ, ನೌಕೆ ಮತ್ತು ಹಡಗು ನಿರ್ಮಾಣ, ಸಿದ್ಧವಸ್ತುಗಳ ಉತ್ಪಾದನೆ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ಟಿಪ್ಪು ಸರಕಾರ ಆದ್ಯತೆ ನೀಡಿತು.[೩೫] ಇದರಿಂದ ಸಮಕಾಲೀನ ಸಂದರ್ಭದ ಇತರ ರಾಜ್ಯಗಳಿಗಿಂತ ಮೈಸೂರು ಭಿನ್ನವಾಗಿ ಅಭಿವೃದ್ಧಿ ಸಾಧಿಸಿತು.

೧೭೯೨ರಲ್ಲಿ ಬ್ರಿಟಿಷರು ಹೊನ್ನಾವರವನ್ನು ಆಕ್ರಮಿಸಿದಾಗ ಟಿಪ್ಪು ಸ್ಥಾಪಿಸಿದ್ದ ನೌಕಾನೆಲೆಗಳು, ಗೋದಾಮುಗಳು, ಹಡಗು ನಿರ್ಮಾಣ ಕಾರ್ಖಾನೆಗಳನ್ನು ನೋಡಿ ಅಚ್ಚರಿ ವ್ಯಕ್ತಪಡಿಸಿದುದು ಬ್ರಿಟಿಷ್ ಬರಹಗಾರರಿಂದಲೇ ವರದಿಯಾಗಿದೆ. ೧೭೯೨ರ ನಂತರವೂ ಟಿಪ್ಪು ಹೊಸದಾಗಿ ನೌಕಾನೆಲೆಗಳನ್ನು ಸ್ಥಾಪಿಸಿ ೭ ಯುದ್ಧ ಹಡಗುಗಳನ್ನು ನಿರ್ಮಿಸಿದನು. ಪ್ರತಿಯೊಂದು ಹಡಗಿನಲ್ಲಿ ೩೦ ರಿಂದ ೫೦ ಬಂದೂಕುಗಳಿದ್ದವು. ಟಿಪ್ಪು ಹಡಗು ನಿರ್ಮಾಣಕ್ಕೆ ಉತ್ತೇಜನ ನೀಡಲು ಮೂರು ಕಾರಣಗಳಿದ್ದವು. ೧. ವಿದೇಶಿ ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟು ನಡೆಸಲು, ೨. ಕರಾವಳಿ ತೀರದಿಂದ ಬರಬಹುದಾದ ವೈರಿಗಳ ಹಠಾತ್ ಆಕ್ರಮಣದಿಂದ ರಾಜ್ಯದ ರಕ್ಷಣೆ, ೩. ನೌಕಾದಳವನ್ನು ಬಲಪಡಿಸಿ ಯುದ್ಧದ ಸಮಯದಲ್ಲಿ ನೌಕೆಗಳನ್ನು ಬಳಸುವ ಅನಿವಾರ್ಯತೆ.[೩೬] ಇದು ವಾಣಿಜ್ಯ ವಿಸ್ತರಣೆಗೂ ಸಹಕಾರಿಯಾಯಿತು. ರಾಜ್ಯದ ಅಭಿವೃದ್ಧಿಯನ್ನು ತ್ವರಿತಗೊಳಿಸಿತು.

೧೭೮೪ರಲ್ಲಿ ಟಿಪ್ಪು ಪ್ರಪ್ರಥಮವಾಗಿ ಪ್ರಭುತ್ವದ ವಾಣಿಜ್ಯ ನಿಗಮ ಸ್ಥಾಪಿಸಿದನು. ಇದರಲ್ಲಿ ರೈತರು, ವ್ಯಾಪಾರಸ್ಥರು ಹಾಗೂ ಶೇರುದಾರರಾದರು. ಬಂದ ಲಾಭವನ್ನು ಹಂಚಿಕೊಳ್ಳುತ್ತಿದ್ದರು. ಇದರಿಂದ ಖಾಸಗಿ ಬಂಡವಾಳ ಮತ್ತು ಪ್ರಭುತ್ವದ ಬಂಡವಾಳ ಹತ್ತಿರವಾದವು. ಇಂದಿನ ಗುಬ್ಬಿ, ಹರಿಹರ ಅವನ ಕಾಲದಲ್ಲಿ ಭಾರತದ ದೊಡ್ಡ ವ್ಯಾಪಾರಕೇಂದ್ರಗಳಾಗಿದ್ದವು. ಗುಬ್ಬಿಯಲ್ಲಿ ೩೬೦ ಮನೆಗಳು ೧೫೬ ಅಂಗಡಿಗಳಿದ್ದವು. ವಾಣಿಜ್ಯ ವ್ಯಾಪಾರ ಚಟುವಟಿಕೆ ವೃದ್ಧಿಯಾದಂತೆ ರಸ್ತೆಗಳ ಅಭಿವೃದ್ಧಿ ಮತ್ತು ನಗರೀಕರಣ ವ್ಯವಸ್ಥೆಗಳು ಕಂಡುಬಂದವು. ಮೈಸೂರು ರಾಜ್ಯದಲ್ಲಿ ೨೧ ಕಿ.ಮೀ.ಗೆ ಒಂದರಂತೆ ೯೦ ಪಟ್ಟಣಗಳಿದ್ದವು. ಟಿಪ್ಪು ತನ್ನ ವಸಾಹತುಶಾಹಿ ವಿರೋಧವನ್ನು

ಆರ್ಥಿಕ ರಂಗದಲ್ಲಿ ಮುಂದುವರೆಸಿದನು. ಯುದ್ಧದ ಪರಿಣಾಮವಾಗಿ ತನ್ನ ಇಬ್ಬರು ಮಕ್ಕಳನ್ನು ಒತ್ತೆಬಿಟ್ಟನು. ತನ್ನ ಸಂಸ್ಥಾನದ ಭೂಭಾಗವನ್ನು ಬಿಟ್ಟುಕೊಟ್ಟನು. ಆದರೆ ಮಾರುಕಟ್ಟೆಯನ್ನು ಮಾತ್ರ ಬಿಟ್ಟು ಕೊಡಲಿಲ್ಲ ಏಕೆಂದರೆ ವಸಾಹತುಶಾಹಿ ವ್ಯಾಪಾರಸ್ಥರು ನಾಡಿನೊಳಗೆ ದೇಶಪ್ರೇಮವಿಲ್ಲದ, ರಾಷ್ಟ್ರೀಯತೆ ತಿಳಿಯದ ದಲ್ಲಾಳಿ ವ್ಯಾಪಾರಿ ವರ್ಗವನ್ನು ಸೃಷ್ಟಿಸಿ ಮತ್ತೆ ರೈತರನ್ನು ಶೋಷಣೆ ಮಾಡುತ್ತಾರೆ ಎಂಬ ಕಾರಣದಿಂದ ಟಿಪ್ಪು ಬ್ರಿಟಿಷರ ಮದ್ರಾಸ್ ಪ್ರಾಂತ್ಯದ ವ್ಯಾಪಾರ ವಹಿವಾಟನ್ನು ಬಹಿಷ್ಕರಿಸಿದ. ದೇಶದಲ್ಲಿ ಬ್ರಿಟಿಷ್ ಸರಕುಗಳನ್ನು ಬಹಿಷ್ಕರಿಸಿದ ಮೊದಲ ಸ್ವಾತಂತ್ರ್ಯ ಹೋರಾಟಗಾರ ಟಿಪ್ಪು. ಈ ರೀತಿಯ ಅಭಿವೃದ್ಧಿ ಕಾರ್ಯಗಳಿಂದ ಮೈಸೂರು ಸಂಸ್ಥಾನದಲ್ಲಿ ರಾಷ್ಟ್ರಪ್ರೇಮವಿರುವ, ರಾಷ್ಟ್ರೀಯತೆ ಬಗ್ಗೆ ಅರಿವಿರುವ ರೈತಾಪಿವರ್ಗ, ಕುಶಲಕರ್ಮಿಗಳು, ವ್ಯಾಪಾರಸ್ಥರು ಹಾಗೂ ಉದ್ಯಮಿಗಳು ಉದಯಿಸಿದರು.[೩೭]

ಟಿಪ್ಪುವಿನ ವ್ಯಾಪಾರಿ ಹಡಗುಗಳು ಮಸ್ಕತ್‌ನಿಂದ ನಿರಂತರವಾಗಿ ಪ್ರಯಾಣಿಸುತ್ತಿದ್ದವು. ಅಲ್ಲಿ ವ್ಯಾಪಾರ ಕೇಂದ್ರಗಳನ್ನು ೧೭೮೫ರ ಹಿಂದೆಯೇ ತೆರೆಯಲಾಗಿತ್ತು. ಇಂಥ ವ್ಯಾಪಾರ ಕೇಂದ್ರಗಳನ್ನು ಕಾನ್‌ಸ್ಟಾಂಟಿನೋಪೆಲ್‌ನಲ್ಲಿ ತೆರೆಯಲು ಒಂದು ನಿಯೋಗವನ್ನು ಕಳುಹಿಸಿದನು. ಈ ನಿಯೋಗ ಆ ದೇಶದೊಂದಿಗೆ ಅಂತರಾಷ್ಟ್ರೀಯ ರಾಜತಾಂತ್ರಿಕತೆ ಮತ್ತು ವ್ಯಾಪಾರ ವ್ಯವಹಾರಗಳನ್ನು ಬೆಳೆಸುವ ಪ್ರಯತ್ನ ಮಾಡಿತು. ಮಾರ್ಚ್ ೨೦, ೧೭೮೬ರಲ್ಲಿ ಈ ನಿಯೋಗವು ಮೂರು ಹಡಗುಗಳೊಂದಿಗೆ ಪ್ರಯಾಣ ಬೆಳೆಸಿತು. ಪಕ್‌ರುಲ್ ಮರಕಿಬ್, ಪಾತ್ ಇ ಶಾಹಿಮಯಿದ್, ನಭಿ ಭಕ್ಷ್ ಮತ್ತು ಗಲ್ಲಿಯೋಟ್ ಸುರಕೀ ಎಂಬ ಹೆಸರಿನ ಹಡಗುಗಳು ತೌದ್ರಿಯಿಂದ ಮಸ್ಕತ್‌ಗೆ ಹೊರಟಿದ್ದವು. ಈ ಹಡಗುಗಳಲ್ಲಿ ಕರಿಮೆಣಸು, ಗಂಧದ ಸಿದ್ಧವಸ್ತುಗಳು, ಎಳ್ಳು, ಬಟ್ಟೆಗಳನ್ನು ತುಂಬಿಕೊಂಡು ಮಸ್ಕತ್, ಇರಾನ್, ಬಾಸ್ರಾದಲ್ಲಿ ಮಾರಾಟ ಮಾಡುವ ಉದ್ದೇಶವಿತ್ತು. ಬಾಸ್ರಾದಲ್ಲಿ ಖಾಯಂ ವ್ಯಾಪಾರಕೇಂದ್ರ ತೆರೆಯುವ ಉದ್ದೇಶವನ್ನು ಟಿಪ್ಪು ಹೊಂದಿದ್ದ. ಇದೇ ರೀತಿ ಅಟೋಮನ್ ಸಾಮ್ರಾಜ್ಯದ ಪ್ರಸಿದ್ಧಸ್ಥಳಗಳಲ್ಲಿ ವ್ಯಾಪಾರ ಕೇಂದ್ರ ತೆರೆಯುವ ಉದ್ದೇಶ ಹೊಂದಿದ್ದನು. ಈ ಎಲ್ಲಾ ವ್ಯಾಪಾರ ವಾಣಿಜ್ಯ ವಹಿವಾಟುಗಳಲ್ಲಿ ಯುರೋಪ್ ಮಾದರಿಯ ಕಂಪನಿಗಳ ಮತ್ತು ಸಂಸ್ಥೆಗಳ ಸಹಯೋಗದ ಮೂಲಕ ನಿರ್ವಹಿಸಲಾಗುತ್ತಿತ್ತು.

ಟಿಪ್ಪು ಸಾಮ್ರಾಜ್ಯದ ವ್ಯಾಪಾರ ಚಟುವಟಿಕೆಗಳು ಕೇವಲ ಭಾರತೀಯ ಸಮುದ್ರಕ್ಕೆ ಸೀಮಿತವಾಗಿರಲಿಲ್ಲ. ಬದಲಾಗಿ ಯುರೋಪ್ ದೇಶಗಳೊಂದಿಗೂ ಅಧಿಕೃತ ಹಡಗು ವ್ಯಾಪಾರ ಸಂಬಂಧವನ್ನು ಬೆಳೆಸುವ ಪ್ರಯತ್ನ ನಡೆದಿತ್ತು. ೧೭೮೭ರಲ್ಲಿ ಫ್ರಾನ್ಸಿಗೆ ಒಂದು ಹಡಗಿನಲ್ಲಿ ೪೦೦ ಭಾರತೀಯರನ್ನು ತನ್ನ ನಿಯೋಗದೊಂದಿಗೆ ಕಳುಹಿಸಲು ಟಿಪ್ಪು ಪ್ರಯತ್ನಿಸಿದ. ಈ ಪ್ರಯತ್ನ ಫಲಿಸಿದ್ದರೆ ಭಾರತದಿಂದ ಐರೋಪ್ಯ ರಾಷ್ಟ್ರಕ್ಕೆ ಕಳುಹಿಸಿದ ಪ್ರಥಮ ಹಡಗು ಅದಾಗುತ್ತಿತ್ತು.[೩೮]

೧೭೯೦-೯೨ರ ಮೈಸೂರು ಯುದ್ಧದಲ್ಲಿ ಟಿಪ್ಪು ಹೀನಾಯ ಸೋಲು ಕಂಡರೂ ಟಿಪ್ಪು ತನ್ನ ರಾಜ್ಯದ ವ್ಯಾಪಾರ-ವಾಣಿಜ್ಯ ಅಭಿವೃದ್ಧಿ ಚಟುವಟಿಕೆಗಳನ್ನು ಎಲ್ಲಿಯೂ ಕುಂಠಿತಗೊಳಿಸಲಿಲ್ಲ. ಇದರ ಪರಿಣಾಮವಾಗಿ ೧೭೯೩ರಲ್ಲಿ ಸ್ವತಂತ್ರ ವಾಣಿಜ್ಯ ಕಾರ್ಪೋರೇಷನ್ ಅನುಷ್ಠಾನಕ್ಕೆ ಬಂದಿತು. ಈ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ನೋಡಿಕೊಳ್ಳಲು ೯ ಅಧಿಕಾರಿಗಳನ್ನು ಒಳಗೊಂಡ ಮಂಡಳಿ ನೇಮಕ ಮಾಡಲಾಗಿತ್ತು. ಈ ಅಧಿಕಾರಿಗಳ ಸ್ಥಾನವನ್ನು ಮಾಲಿಕುತ್ ತುಜ್ಜಾರ ಎಂದು ಹೆಸರಿಸಲಾಗಿತ್ತು. ಅವರಿಗೆ ನಿರ್ದಿಷ್ಟ ಹಕ್ಕುಗಳಿದ್ದವು. ಈ ಸಂಸ್ಥೆಯ ಮೂಲ ಉದ್ದೇಶ ದೇಶದ ಒಳಗೆ ಮತ್ತು ಹೊರಗೆ ವ್ಯಾಪಾರಿ ಕೇಂದ್ರಗಳನ್ನು ಸ್ಥಾಪಿಸಿ ವ್ಯಾಪಾರ-ವಾಣಿಜ್ಯ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು, ಅಧಿಕೃತವಾಗಿ ಈ ಎಲ್ಲಾ ಕೇಂದ್ರಗಳಲ್ಲಿ ವರ್ತಕ ಪ್ರತಿನಿಧಿಗಳನ್ನು ನೇಮಿಸುವುದು ಮತ್ತು ಲೆಕ್ಕಪತ್ರಗಳನ್ನು ನಿರ್ವಹಿಸುವುದು.[೬೫] ಆರ್ಥಿಕ ಕಾರ್ಯಕ್ರಮಗಳನ್ನು ಸರಿಯಾಗಿ ಅನುಷ್ಠಾನಗೊಳಿಸುವುದು, ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಸಾಧಿಸುವ ಉದ್ದೇಶ ಟಿಪ್ಪುವಿನದಾಗಿತ್ತು.

ಆರ್ಥಿಕ ತಾರತಮ್ಯ ನಿರ್ಮೂಲನೆಗೆ ಟಿಪ್ಪು ಅನೇಕ ಕ್ರಮಗಳನ್ನು ಕೈಗೊಂಡನು. ಅವನು ಬಂಡವಾಳ ವ್ಯವಸ್ಥೆಯೊಂದನ್ನು ರೂಪಿಸಿದನು. ರಾಜ್ಯದಲ್ಲಿ ವಾಣಿಜ್ಯ ನಿಯಮಗಳು ಮತ್ತು ಬ್ಯಾಂಕಿಂಗ್ ವ್ಯವಸ್ಥೆಯನ್ನು ಜಾರಿಗೆ ತಂದನು. ಇದರಿಂದ ಸಣ್ಣ ಬಂಡವಾಳಗಾರರು ಅಧಿಕ ಲಾಭ ಪಡೆದರು. ಅದು ಉಳಿತಾಯವನ್ನು ಪ್ರೋತ್ಸಾಹಿಸುವ ಹೊಸ ಬಗೆಯ ಸಹಕಾರಿ ಬ್ಯಾಂಕಿನ ಪ್ರಯೋಗವಾಗಿತ್ತು. ಈ ವ್ಯವಸ್ಥೆಯನ್ನು ಬಲಪಡಿಸಲು ವಾಣಿಜ್ಯ ಉದ್ದಿಮೆ ಮತ್ತು ವ್ಯಾಪಾರವನ್ನು ರಾಜ್ಯದ ನಿಯಂತ್ರಣಕ್ಕೆ ಒಳಪಡಿಸಿದನು. ರೇಷ್ಮೆ, ಶ್ರೀಗಂಧ, ಏಲಕ್ಕಿ, ಮೆಣಸು, ಆನೆದಂತ ಇತ್ಯಾದಿಗಳಲ್ಲಿ ಮೈಸೂರು ರಾಜ್ಯ ಶ್ರೀಮಂತವಾಗಿತ್ತು. ಈ ಉತ್ಪನ್ನಗಳಿಗೆ ಪಾಶ್ಚಾತ್ಯ ಮಾರುಕಟ್ಟೆಯಲ್ಲಿ ಅಧಿಕ ಬೇಡಿಕೆ ಇತ್ತು. ಈ ವಸ್ತುಗಳ ವಾಣಿಜ್ಯ ವ್ಯವಹಾರ-ವಿದೇಶಿಯರ ಕೈಗೆ ಬೀಳಬಾರದೆಂದು ಟಿಪ್ಪು ಉದ್ದೇಶಿಸಿದ. ತನ್ನ ಹಡಗುಗಳನ್ನು ಬಳಸಿ ಈ ವಸ್ತುಗಳನ್ನು ರಫ್ತು ಮಾಡಿ ಅಗತ್ಯ ವಸ್ತುಗಳನ್ನು ಆಮದು ಮಾಡಿಕೊಳ್ಳುವ ವ್ಯವಸ್ಥೆ ಜಾರಿಗೆ ತಂದನು. ಖಾಸಗಿ ಬ್ಯಾಂಕರ್‌ಗಳನ್ನು, ಲೇವಾದೇವಿಗಾರರು ಮತ್ತು ಮಧ್ಯವರ್ತಿ ದಲ್ಲಾಳಿಗಳನ್ನು ಬಹುಪಾಲು ತೊಡೆದು ಹಾಕಿದನು.

ಟಿಪ್ಪು ಸರಕಾರ ರಾಜ್ಯದ ವಾಣಿಜ್ಯವಹಿವಾಟುಗಳ ವೃದ್ಧಿಗೆ ಆದ್ಯತೆ ನೀಡಿರುವುದನ್ನು ೧೭೯೪ ಏಪ್ರಿಲ್ ೩ ರಂದು ಹೊರಡಿಸಿದ ನಡಾವಳಿಗಳು ವಿವರಿಸುತ್ತವೆ. ವಾಣಿಜ್ಯ ಸಂಸ್ಥೆಯ ಶ್ರಮ ಮತ್ತು ಸರಕಾರದ ಪ್ರೋತ್ಸಾಹದಿಂದ ಮೈಸೂರು ರಾಜ್ಯದಲ್ಲಿ ಸುಮಾರು ೩೦ ವ್ಯಾಪಾರಿ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಅವುಗಳಲ್ಲಿ ಬೆಂಗಳೂರು, ಶ್ರೀರಂಗಪಟ್ಟಣ ಹಾಗೂ ಮಂಗಳೂರು ಪ್ರಧಾನವಾಗಿತ್ತು. ರಾಜ್ಯದ ಹೊರಗೆ ಹದಿನೇಳು ಕೇಂದ್ರಗಳನ್ನು ತೆರೆಯಲಾಗಿತ್ತು. ಮದ್ರಾಸ್,

ಪಾಂಡಿಚೇರಿ, ಮಾಹೆ, ಕರಾಚಿ, ಪೂನಾ, ಕಚ್, ಜೆಡ್ಡಾ, ಮಸ್ಕತ್ ಮುಖ್ಯವಾದವು. ಬುಷೈರ್, ಇಡನ್ ಮತ್ತು ಮಸ್ಕತ್ ಕೇಂದ್ರಗಳ ಮೂಲಕ ಮೈಸೂರು ರಾಜ್ಯದ ರಫ್ತಿನ ಪದಾರ್ಥಗಳನ್ನು ಪರ್ಷಿಯಾ ಕೊಲ್ಲಿಯಲ್ಲಿ ಮಾರಾಟ ಮಾಡಲಾಗುತ್ತಿತ್ತು. ಪರ್ಷಿಯಾ ಕೊಲ್ಲಿಯಿಂದ ಹಲವು ಪದಾರ್ಥಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಇದರಿಂದ ಈ ಕೇಂದ್ರಗಳು ಪ್ರಧಾನವಾಗಿದ್ದವು.[೪೦] ಶ್ರೀಗಂಧ, ರೇಷ್ಮೆ, ಏಲಕ್ಕಿ, ದಂತ, ಅಕ್ಕಿ, ಮೆಣಸು, ಮುತ್ತು, ಬಟ್ಟೆ, ರಫ್ತು ಪದಾರ್ಥಗಳಾಗಿದ್ದವು. ಕೇಸರಿ ಬೀಜ, ರೇಷ್ಮೆ ಹುಳು, ಕುದುರೆ, ಪಿಸ್ತಾಕಾಯಿ, ಒಣದ್ರಾಕ್ಷಿ, ಕಲ್ಲುಪ್ಪು, ಮುತ್ತುಗಳು, ಗಂಧಕ, ತಾಮ್ರ, ಖರ್ಜೂರ, ಪಿಂಗಾಣಿ ವಸ್ತುಗಳು ಆಮದಾಗುತ್ತಿದ್ದವು. ಕುದುರೆಗಳು ಸೈನ್ಯಕ್ಕೂ, ಗಂಧಕವು ಕೋವಿಯ ಮದ್ದಿಗೂ ಅಗತ್ಯವಾಗಿತ್ತು. ರೇಷ್ಮೆ ಅಭಿವೃದ್ಧಿಗೆ ರೇಷ್ಮೆ ಹುಳು ಅವಶ್ಯವಿತ್ತು. ಮಲಬಾರಿನಲ್ಲಿ ದೊರೆಯುತ್ತಿದ್ದ ತೇಗವನ್ನು ಪರ್ಷಿಯಾ ಕೊಲ್ಲಿಯಲ್ಲಿ ನೌಕಾ ನಿರ್ಮಾಣಕ್ಕೆ ಉಪಯೋಗಿಸುತ್ತಿದ್ದರು.[೪೧]

ಫ್ರೆಂಚರು ಟಿಪ್ಪುವಿನೊಂದಿಗೆ ರಾಜಕೀಯ ಮತ್ತು ಮಿಲಿಟರಿ ಸಂಬಂಧಗಳನ್ನು ಹೊಂದಲು ಮನಸ್ಸಿಲ್ಲದೆ ಹೋದರೂ ವಾಣಿಜ್ಯ ಸೌಲಭ್ಯ ಪಡೆಯಲು ಹೆಚ್ಚು ಕಾತರರಾಗಿದ್ದರು. ಭಾರತದಲ್ಲಿನ ಫ್ರೆಂಚ್ ಕಂಪನಿಯನ್ನು ಪೂರ್ಣ ವಾಣಿಜ್ಯ ಸಂಸ್ಥೆಯಾಗಿ ಪರಿವರ್ತಿಸಲು ಲುಜರಿನ್ ಬಯಸಿದನು. ಮೈಸೂರು ರಾಜ್ಯ ಸಂಬಾರು ಬೆಳೆಗಳಿಗೆ ಪ್ರಸಿದ್ಧವಾಗಿತ್ತು. ಇದರಿಂದ ಫ್ರೆಂಚರು ನಿಕಟ ಸಂಬಂಧ ಸಾಧಿಸಲು ಪ್ರಯತ್ನಿಸಿದರು. ಚಂದ್ರನಗರವೊಂದು ಹೊರತು ದಕ್ಷಿಣದ ಫ್ರೆಂಚರ ನೆಲೆಗಳೆಲ್ಲವೂ ಟಿಪ್ಪುವಿನ ರಾಜ್ಯಕ್ಕೆ ಸಮೀಪದಲ್ಲಿದ್ದವು. ಅದಕ್ಕೆ ಮೈಸೂರಿನೊಂದಿಗೆ ಸಮೃದ್ಧ ಪ್ರಮಾಣದ ವ್ಯಾಪಾರ ನಡೆಸಲು ಚೆನ್ನಾಗಿ ಹೊಂದಿಕೊಂಡಿದ್ದಂಥವು. ಟಿಪ್ಪುವಿಗೂ ತನ್ನ ರಾಜ್ಯದ ವಾಣಿಜ್ಯ ಮತ್ತು ಕೈಗಾರಿಕೆಗಳನ್ನು ಬೆಳೆಸುವುದರಲ್ಲಿ ತುಂಬಾ ಆಸಕ್ತಿಯಿತ್ತು. ಈ ಉದ್ದೇಶಗಳಿಂದ ಫ್ರೆಂಚರು ೧೭೮೮ರಲ್ಲಿ ಒಂದು ವಾಣಿಜ್ಯ ಕರಾರು ಮಾಡಿಕೊಳ್ಳಲು ಬಯಸಿದರು. ಕಂಪನಿಯು ಟಿಪ್ಪುವಿನಿಂದ ಮೆಣಸು, ಶ್ರೀಗಂಧ, ಏಲಕ್ಕಿ ಹತ್ತಿದಾರ, ಉಣ್ಣೆದಾರ ಮತ್ತು ಅವನ ದೇಶದ ಇತರ ವಸ್ತುಗಳ ರಫ್ತು ಹಾಗೂ ವಿವಿಧ ವಸ್ತುಗಳನ್ನು ಯುರೋಪಿನಿಂದ ಆಮದುಗಳ ಸ್ವಾಮ್ಯವನ್ನು ಟಿಪ್ಪು ಸುಲ್ತಾನನಿಂದ ಕೋರುತ್ತದೆ ಎಂದೂ ಬರೆದರು. ಅದಕ್ಕೆ ಪ್ರತಿಯಾಗಿ ಅವರು ತೋಪುಗಳು, ಬಂದೂಕುಗಳು, ಮತ್ತಿತರ ಯುದ್ಧ ಸಾಮಗ್ರಿಗಳನ್ನು ಒದಗಿಸಲು ಒಪ್ಪಿದರು. ಬಾಕಿ ನಗದು ಪಾವತಿ ಮಾಡುವ ಸಂದರ್ಭವಿದ್ದರೆ ಅದನ್ನು ಚಿನ್ನದ ಗಟ್ಟಿ ಅಥವಾ ಬೆಳ್ಳಿಯ ನಾಣ್ಯಗಳ ರೂಪದಲ್ಲಿ ಕೊಡುವಂತಾಯಿತು. ಟಿಪ್ಪುವಿನ ಶತ್ರುಗಳಿಗೆ ಸಹಾಯಮಾಡುವುದಿಲ್ಲ. ಮಲಬಾರಿನ ಬಂಡುಕೋರ ನಾಯಕರಿಗೆ ಆಶ್ರಯ ಕೊಡುವುದಿಲ್ಲ ಎಂದು ಫ್ರೆಂಚರು ಭರವಸೆ ಕೊಟ್ಟರು. ಸಾಗರಗಳ ಮೇಲೆ ಎರಡೂ ಪಕ್ಷಗಳನ್ನು ಸಂರಕ್ಷಿಸುವಂಥ ಒಂದು ರಕ್ಷಕ ಒಪ್ಪಂದವನ್ನು ಅವರು

ಸೂಚಿಸಿದರು. ಮೈಸೂರು ರಾಜ್ಯದಲ್ಲಿ ಉತ್ಪತ್ತಿಯಾಗುವ ವಸ್ತುಗಳನ್ನು ಟಿಪ್ಪು ನಿಗದಿಮಾಡುವ ಬೆಲೆಗೆ ಕೊಳ್ಳಲು ಅವರು ಸಿದ್ಧರಾಗಿದ್ದರು. ಕರಾವಳಿ ಸೇರಿದಂತೆ ಇತರ ಸ್ಥಳಗಳಲ್ಲೂ ಉಗ್ರಾಣಗಳನ್ನು ಕಟ್ಟಲು ಅವರಿಗೆ ಅನುಮತಿ ಅಗತ್ಯವಿತ್ತು. ತೆರಿಗೆ ವಿನಾಯ್ತಿ ಬೇಕಾಗಿತ್ತು. ಚಿನ್ನ ಬೆಳ್ಳಿಗಳಿಗೆ ಸುಂಕದ ರದ್ಧತಿಯೂ ಬೇಕಿತ್ತು. ಫ್ರಾನ್ಸಿಗೆ ಬಂದಿದ್ದ ಮಹಮದ್ ಹುಸೇನ್‌ಖಾನ್ ಎಂಬ ರಾಯಭಾರಿಯ ಸಂಗಡ ಇಷ್ಟು ಸಲಹೆಗಳನ್ನು ಫ್ರೆಂಚರು ಟಿಪ್ಪುವಿಗೆ ಹೇಳಿ ಕಳುಹಿಸಿದರು.

ಟಿಪ್ಪುವು ಅಂತರ್ದೇಶಿಯ ವ್ಯಾಪಾರಕ್ಕೂ ಪ್ರಾಮುಖ್ಯತೆ ನೀಡಿದನು. ತನ್ನ ರಾಜ್ಯದ ಎಲ್ಲಾ ಭಾಗಗಳಲ್ಲೂ ಡಿಪೋಗಳನ್ನು ತೆರೆದನು. ಇವು ೩೦ ಕಡೆ ಇದ್ದವು. ಇವುಗಳಲ್ಲಿ ಮುಖ್ಯವಾದವು ಶ್ರೀರಂಗಪಟ್ಟಣ, ಕೋಲಾರ, ಬೆಂಗಳೂರು, ಸತ್ಯಮಂಗಲ, ಮುಳುಬಾಗಿಲು, ಮದನಪಲ್ಲಿ, ಗುರ್ರಮಕೊಂಡ, ಪುಂಗನೂರು, ಚಿತ್ರದುರ್ಗ, ಬಿದನೂರು, ಶಿಕಾರಿಪುರ, ಸುಂದಾ, ಮಂಗಳೂರು, ಕುಶಾಲಪುರ, ಕಾರವಾರ, ಭಟ್ಕಳ, ಜಮಾಲಾಬಾದ್, ಕಲ್ಲಿಕೋಟೆ, ಬನವಾಸಿ ಹಾಗೂ ನಂದಿದುರ್ಗಗಳಾಗಿದ್ದವು. ಈ ಡಿಪೋಗಳ ನಿರ್ವಹಣೆಗೆ ಸೂಕ್ತ ಸಿಬ್ಬಂದಿಯನ್ನೂ ನೇಮಿಸಲಾಗಿತ್ತು. ಸಗಟು ವ್ಯಾಪಾರಕ್ಕೆ ಸಂಬಂಧಿಸಿದಂತೆ ಅದು ಸರಕಾರದ ಸ್ವಾಮ್ಯವಾಯಿತು. ಚಿಲ್ಲರೆ ವ್ಯಾಪಾರಿಗಳಾದರೋ ಮಾರುಕಟ್ಟೆಯ ಅಗತ್ಯವನ್ನು ಕ್ರಮವಾಗಿ ಪೂರೈಸುತ್ತಿದ್ದರು. ಟಿಪ್ಪು ೧೭೯೨–೯೪ರ ವಾಣಿಜ್ಯ ಕಾಯಿದೆಯು ಅಂತರ್ದೇಶಿ ವ್ಯಾಪಾರಕ್ಕೆ ಅವಕಾಶ ಕಲ್ಪಿಸಿತು.[43]

ಟಿಪ್ಪು ಮೈಸೂರು ರಾಜ್ಯದಲ್ಲಿ ಅನುಷ್ಠಾನಕ್ಕೆ ತಂದ ವಾಣಿಜ್ಯ ನೀತಿಗಳು ಹಾಗೂ ಹೊಸ ಆವಿಷ್ಕಾರಗಳು ಚರ್ಚೆಗೆ ಗ್ರಾಸವಾಗಿವೆ. ವ್ಯಾಪಾರ–ವಾಣಿಜ್ಯ ವೃದ್ಧಿಯಾದಂತೆ ರಾಜ್ಯದ ಬೊಕ್ಕಸ ತುಂಬುತ್ತಿದೆ. ಜನರ ಕಲ್ಯಾಣ ಕಾರ್ಯಗಳಿಗೆ ಈ ಹಣ ವಿನಿಯೋಗಿಸಬಹುದು, ದೇಶಿಯ ಮತ್ತು ಅಂತರ್ದೇಶಿ ವ್ಯಾಪಾರದಲ್ಲಿ ವಸಾಹತುಶಾಹಿ ಶಕ್ತಿಗಳನ್ನು ದೂರವಿರಿಸಬಹುದು, ಇದು ಟಿಪ್ಪುವಿನ ಆರ್ಥಿಕ ನೀತಿಯಾಗಿತ್ತು. ಇಂಥ ನೀತಿಯು ವ್ಯಾಪಾರ–ವಾಣಿಜ್ಯಗಳನ್ನು "ನಿರಂಕುಶ ರಾಜಕೀಯ ಶಕ್ತಿಯ ಅತಿರೇಕ ಕ್ರಮಗಳಿಗೆ ಅಧೀನಪಡಿಸಿದೆ ಎಂದು ಕೆಲವು ವಿದ್ವಾಂಸರು ವಾದಿಸಿದ್ದಾರೆ.[44] ಬುಕಾನನ್ ಹಾಗೂ ಇತರ ವಸಾಹತು ಚರಿತ್ರೆಕಾರರು ಟಿಪ್ಪುವಿನ ವಾಣಿಜ್ಯ ಕಾರ್ಯ ಚಟುವಟಿಕೆಗಳಿಗೆ ವಿರೂಪಗೊಂಡ ಚಿತ್ರಣ ನೀಡಿದ್ದಾರೆ.[45] ಟಿಪ್ಪು ರೂಪಿಸಿದ ವ್ಯಾಪಾರ–ವಾಣಿಜ್ಯವು ದೋಷಯುಕ್ತವಾಗಿತ್ತು ಎಂದೂ ಟೀಕಿಸಿದ್ದಾರೆ. ಟಿಪ್ಪುವಿನ ರಾಜ್ಯವು ಆರ್ಥಿಕವಾಗಿ ಸಶಕ್ತಗೊಳ್ಳುವುದು ಈ ಚರಿತ್ರೆಕಾರರಿಗೆ ಸಹಿಸದ ಸಂಗತಿಯೂ ಆಗಿದ್ದಿರಬೇಕು. ಆರ್ಥಿಕ ರಂಗದಲ್ಲಿ ಟಿಪ್ಪು ನಡೆಸಿದ ಆಧುನೀಕರಣದ ಪ್ರಕ್ರಿಯೆಗಳು ಸರಕಾರದ ಸಂಘಟನಾಶಕ್ತಿ, ತಂತ್ರಗಾರಿಕೆ ಮತ್ತು ಸಂಪತ್ತು ವೃದ್ಧಿಸಲು ಹೆಚ್ಚು ಸಹಕಾರಿಯಾಗಿದ್ದವು. ಐರೋಪ್ಯರ ಆಧುನಿಕ ವಿಜ್ಞಾನ, ತಂತ್ರಜ್ಞಾನವನ್ನು ತನ್ನ ರಾಜ್ಯದ ಆರ್ಥಿಕಾಭಿವೃದ್ಧಿಗೆ ಅಳವಡಿಸುವ ಹಂಬಲವಿತ್ತು. ಆದರೆ ಅದು ಸಂಪೂರ್ಣ ಯಶಸ್ಸು ಕಾಣಲು ಸಾಧ್ಯವಾಗಲಿಲ್ಲ.

೫.೪. ಶಸ್ತ್ರಾಸ್ತ್ರ ಮತ್ತು ಮಿಲಿಟರಿ ಆಧುನೀಕರಣ

ಟಿಪ್ಪು ಬೃಹತ್ ಪ್ರಮಾಣದಲ್ಲಿ ಸಿದ್ಧವಸ್ತುಗಳ ಉತ್ಪಾದನೆಯಲ್ಲಿಯೂ ಯಶಸ್ಸು ಕಂಡಿದ್ದನು. ಈ ಪ್ರಕ್ರಿಯೆ ಹೈದರಾಲಿ ಕಾಲದಲ್ಲಿಯೇ ಆರಂಭವಾಗಿದ್ದು ಅವನು ಸೈನ್ಯಾಡಳಿತದ ಆಧುನೀಕರಣಕ್ಕೆ ಹೆಚ್ಚು ಒತ್ತು ನೀಡಿದ ಕಾರಣ ಅವನ ಸೈನ್ಯ ಉತ್ತಮ ಶ್ರೇಣಿಯ ಬಂದೂಕುಗಳನ್ನು ಹೊಂದಿತ್ತು. ೧೭೮೭ರಲ್ಲಿ ಮೈಸೂರಿನಿಂದ ಫ್ರಾನ್ಸ್ ದೇಶಕ್ಕೆ ರಾಯಭಾರಿಯನ್ನು ಕಳುಹಿಸಿ ಅಲ್ಲಿ ಪ್ರಭುವಿಗೆ ತನ್ನ ಸಾಮ್ರಾಜ್ಯದಲ್ಲಿ ೧೦ ಮದ್ದುಗುಂಡು ತಯಾರಿಸುವ ಕಾರ್ಖಾನೆಗಳಿದ್ದು ಇಲ್ಲಿ ಲೆಕ್ಕವಿಲ್ಲದಷ್ಟು ಬಂದೂಕುಗಳನ್ನು ತಯಾರಿಸುತ್ತಿದ್ದೇವೆ ಎಂದು ತಿಳಿಸಿದನು. ಈ ಬಂದೂಕುಗಳನ್ನು ಯುರೋಪ್ ಮಾದರಿಯಲ್ಲೆ ತಯಾರಿಸಲಾಗಿತ್ತು. ೧೭೮೬ರಲ್ಲಿ ಪಾಂಡಿಚೇರಿಯ ಫ್ರೆಂಚ್ ರಾಜ್ಯಪಾಲ ಕೋಸಿಗ್ನಿ ಈ ಕಾರ್ಖಾನೆಗಳಲ್ಲಿ ತಯಾರಾಗುವ ಮದ್ದುಗುಂಡುಗಳನ್ನು ಪರಿಶೀಲಿಸಿ ಗುಣಮಟ್ಟದಲ್ಲಿ ಯುರೋಪಿನ ಮದ್ದುಗುಂಡುಗಳಿಗೆ ಏನೂ ವ್ಯತ್ಯಾಸವಿಲ್ಲ ಎಂಬ ಅಭಿಪ್ರಾಯಪಟ್ಟನು. ಇದೇ ರೀತಿಯ ಅಭಿಪ್ರಾಯವನ್ನು ೧೭೮೮ರಲ್ಲಿ ಟಿಪ್ಪು ರಾಯಭಾರಿ ಮೂಲಕ ಉಡುಗೊರೆಯಾಗಿ ಎರಡು ಪಿಸ್ತೂಲುಗಳನ್ನು ಸ್ವೀಕರಿಸಿದ್ದ ಹದಿನಾರನೆಯ ಲೂಯಿಯ ವ್ಯಕ್ತಪಡಿಸಿದನು.

೧೭೮೫-೮೬ರಲ್ಲಿ ಆಟೋಮಾನ್ ಸಾಮ್ರಾಟನ ಅರಮನೆಗೆ ಭೇಟಿ ನೀಡಿದ ಟಿಪ್ಪು ರಾಯಭಾರಿಗಳು ಮೈಸೂರಿನಲ್ಲಿ ತಯಾರಿಸಿದ ಬಂದೂಕುಗಳನ್ನು ಹೆಮ್ಮೆಯಿಂದ ಪ್ರದರ್ಶನ ಮಾಡಿದ್ದರು. ಆದರೂ ಇನ್ನೂ ಹೆಚ್ಚಿನ ಅಭಿವೃದ್ಧಿ ಹೊಂದಲು ಪ್ಯಾರಿಸ್‌ನಿಂದ ಪರಿಣಿತ ಕುಶಲಕರ್ಮಿಗಳನ್ನು ಮೈಸೂರಿಗೆ ಬರಮಾಡಿಕೊಂಡು ಉತ್ಕೃಷ್ಟವಾದ ಬಂದೂಕುಗಳನ್ನು ತಯಾರಿಸಲು ಅಧಿಕಾರಿಗಳಿಗೆ ಆಜ್ಞೆ ಮಾಡಿದ್ದನು. ಅವರ ಸೇವೆಗೆ ಉತ್ತಮ ಸಂಬಳ ಮತ್ತು ಸಹಕಾರ ನೀಡುವ ಭರವಸೆಯನ್ನು ಅವನ ಸರಕಾರ ನೀಡಿತು. ಇದಕ್ಕೆ ಪೂರಕವೆಂಬಂತೆ ಬುಕಾನನ್ ತನ್ನ ವರದಿಯಲ್ಲಿ ಶ್ರೀರಂಗಪಟ್ಟಣದಲ್ಲಿ ಫ್ರೆಂಚ್ ಕರಕುಶಲಗಾರರು ನಿರ್ಮಿಸಿದ ತೋಪುಗಳನ್ನು ಉಲ್ಲೇಖಿಸಿ ಅವುಗಳನ್ನು ಬಂಡಿಯ ಸಹಾಯದಿಂದ ಯುದ್ಧಕಾಲದಲ್ಲಿ ಸಾಗಿಸಲಾಗುತ್ತಿತ್ತು ಎಂದು ತಿಳಿಸಿದ್ದಾರೆ.[೪೭]

ಟಿಪ್ಪು ಹೈದರ್‌ಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಆಧುನಿಕ ತಾಂತ್ರಿಕ ಕಾರ್ಯವಿಧಾನ ಗಳನ್ನು ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ಬಳಸಿಕೊಂಡಿದ್ದನು. ರಾಯಭಾರಿಗಳನ್ನು ಫ್ರಾನ್ಸ್‌ಗೆ ಕಳುಹಿಸಿ ಪುಸ್ತಕ ಮುದ್ರಿಸುವವರ ಸೇವೆಯನ್ನು ಪಡೆಯಲು ಯಶಸ್ವಿಯಾದನು. ೧೭೯೭ರಲ್ಲಿ ಫ್ರೆಂಚ್ ಸರಕಾರಕ್ಕೆ ಒಂದು ಬೇಡಿಕೆ ಸಲ್ಲಿಸಿ ೧೦ ಮಂದಿ ತೋಪು ತಯಾರಕರು, ೧೦ ಮಂದಿ ಹಡಗು ನಿರ್ಮಾಪಕರು ೧೦ ಮಂದಿ ಚೈನಾವ್ಯಾರ್ ತಯಾರಕರು ೧೦ ಮಂದಿ ಗ್ಲಾಸ್ ಮತ್ತು ಕನ್ನಡಕ ತಯಾರಕರು ೧೦ ಮಂದಿ ಹಡಗಿಗೆ ಬೇಕಾದ ಇಂಜಿನ್‌ಗಳನ್ನು ಮತ್ತು ಗಾಲಿಗಳನ್ನು ತಯಾರಿಸುವ

ಮತ್ತು ಗೋಲ್ಡ್ ಪ್ಲೇಟಿಂಗ್‌ನಲ್ಲಿ ಪರಿಣತಿ ಪಡೆದ ತಂತ್ರಜ್ಞರನ್ನು ಮೈಸೂರಿಗೆ ಕಳುಹಿಸಿ ಕೊಡುವಂತೆ ಮನವಿ ಮಾಡಿದನು.[೪೮]

ಹೈದರಾಲಿ ಆರಂಭಿಸಿದ ಮಾದರಿಯಂತೆ ಟಿಪ್ಪು ಕೂಡ ನೌಕಾನೆಲೆಗಳನ್ನು ಕರಾವಳಿಯಲ್ಲಿ ಸ್ಥಾಪಿಸಿದ್ದನು. ಆದರೆ ೧೭೮೦-೮೪ರ ಎರಡನೇ ಮೈಸೂರು ಯುದ್ಧದಲ್ಲಿ ಅವು ಧ್ವಂಸಗೊಂಡವು. ಬ್ರಿಟಿಷರು ೧೭೯೨ರಲ್ಲಿ ಹೊನ್ನಾವರವನ್ನು ಆಕ್ರಮಿಸಿದಾಗ ಟಿಪ್ಪು ಸ್ಥಾಪಿಸಿರುವ ನೌಕಾನೆಲೆಗಳನ್ನು, ಗೋದಾಮುಗಳನ್ನು ಮತ್ತು ಹಡಗು ನಿರ್ಮಾಣ ನೆಲೆಗಳನ್ನು ನೋಡಿ ಆಶ್ಚರ್ಯ ವ್ಯಕ್ತಪಡಿಸಿರುವುದು ಬ್ರಿಟಿಷ್ ಬರಹಗಾರರಿಂದಲೇ ವ್ಯಕ್ತವಾಗಿದೆ.[೪೯] ಜೊತೆಗೆ ಅವರಿಗೆ ಅಲ್ಲಿ ೬೦ ಬಂದೂಕುಗಳು ದೊರೆತಿದ್ದವು. ಟಿಪ್ಪು ಸರಕಾರಕ್ಕೆ ಇದರಿಂದ ಹಿಂದೇಟು ಬಿದ್ದರೂ ೧೭೯೨ರ ನಂತರ ಹೊಸದಾಗಿ ನೌಕಾನೆಲೆಗಳನ್ನು ಸ್ಥಾಪಿಸಿ ೭ ಯುದ್ಧ ಹಡಗುಗಳನ್ನು ನಿರ್ಮಾಣ ಮಾಡಿಸಿದನು. ಪ್ರತಿಯೊಂದು ಹಡಗಿನಲ್ಲಿ ೩೦ ರಿಂದ ೫೦ ಬಂದೂಕುಗಳು ಇದ್ದವು. ಟಿಪ್ಪು ಹೆಚ್ಚು ಹಡಗುಗಳ ನಿರ್ಮಾಣಕ್ಕೆ ಉತ್ತೇಜನ ನೀಡಲು ಮೂರು ಪ್ರಮುಖ ಕಾರಣಗಳಿದ್ದವು. ೧. ವಿದೇಶಿ ವ್ಯಾಪಾರ ವೃದ್ಧಿಸಲು, ೨. ಕರಾವಳಿ ಕಡೆಯಿಂದ ವೈರಿಗಳ ಹಠಾತ್ ಆಕ್ರಮಣದಿಂದ ರಾಜ್ಯದ ರಕ್ಷಣೆ, ೩. ನೌಕಾದಳ ಬಲಪಡಿಸಿ ಯುದ್ಧದ ಸಮಯದಲ್ಲಿ ಬಳಸುವ ಅನಿವಾರ್ಯತೆಗಳಿದ್ದವು.[೫೦]

ಟಿಪ್ಪು ಸ್ಥಾಪಿಸಿದ್ದ ಸೈನಿಕ ಇಲಾಖೆಯು ಪೂರ್ಣಯ್ಯ ಅವರ ನೇತೃತ್ವದಲ್ಲಿತ್ತು. ಅದು ಹೆಚ್ಚು ಯುದ್ಧ ಸಲಕರಣೆ ಹೊಂದಿ ಶಿಸ್ತುಬದ್ಧವಾಗಿತ್ತು. ೩ ಲಕ್ಷ ಸೈನಿಕರು ಟಿಪ್ಪು ಸೈನ್ಯದಲ್ಲಿದ್ದರು. ಮೂರನೆಯ ಆಂಗ್ಲೋ-ಮೈಸೂರು ಯುದ್ಧಕ್ಕೂ ಮುಂಚೆ ೫೦೦೦೦ ನಿಯತ ಪದಾತಿಗಳು, ೧೦೦೦೦ ಯುದ್ಧ ಬಂಧಿಗಳಿಂದ ಕೂಡಿದ ಅಸದ್ ಇಲಾಹಿಗಳು. ಕತ್ತಿ, ಮದ್ದಿನ ಕೋವಿಗಳನ್ನು ಹಿಡಿದ ೬೦೦೦೦ ಸಿಪಾಯಿಗಳು, ೩೦೦೦ ಕಮಾಟಿಗಳು ಇದ್ದರು.

ಟಿಪ್ಪು ಸೈನ್ಯದಲ್ಲಿ ಐರೋಪ್ಯರು, ಆಫ್ರಿಕಾದ ಬಂಟುಕುಲದ ಲಾಲಿಯಾ ಗುಂಪಿನವರು, ಹಿಂದೂ ಮತ್ತು ಮುಸ್ಲಿಮರು ಹೆಚ್ಚು ಸಂಖ್ಯೆಯಲ್ಲಿದ್ದರು. ಬ್ರಿಟಿಷ್ ಸೈನ್ಯದ ಮುಖಂಡ ಕ್ಯಾಂಬೆಲ್ಲನ ಪ್ರಕಾರ ಟಿಪ್ಪು ಕ್ರಿಯಾಶೀಲನೂ, ಮಹತ್ವಾಕಾಂಕ್ಷಿ ಮತ್ತು ಉದ್ಯಮಶೀಲನಾಗಿದ್ದ. ನಮಗೆ ತಿಳಿಸಿದಂತೆ ಏಷ್ಯಾದ ರಾಜ್ಯಗಳಲ್ಲಿ ಯಾವುದಲ್ಲಿಯೂ ಕಂಡುಬರದ ಹೆಚ್ಚಿನ ಗುಣಮಟ್ಟದ ಮಿಲಿಟರಿ ಅವನಲ್ಲಿತ್ತು ಎಂದು ತಿಳಿಸಿದ್ದಾನೆ. ವಿಲಿಯಂ ಮ್ಯಾಕ್ಲಾಮ್ಡ್‌ನು ಟಿಪ್ಪುವಿನ ಮಿಲಿಟರಿ ವ್ಯವಸ್ಥೆ ಕುರಿತು ಒಂದು ಸಕ್ರಮವಾದ ಯೋಜನೆಯಂತೆ ತನ್ನ ಸೈನ್ಯದಲ್ಲಿ ಶಿಸ್ತನ್ನು ಏರ್ಪಡಿಸುವುದರಲ್ಲಿ ಜಾಣನಾದ ದೊರೆಯೆಂದರೆ ಟಿಪ್ಪು ಮಾತ್ರ, ಈ ವಿಷಯದಲ್ಲಿ ಅವನು ಪೂರ್ವಗ್ರಹಪೀಡಿತನಾಗದೆ ತನ್ನ ಪಡೆಗಳ ಅಭಿವೃದ್ಧಿಗಾಗಿ ಶುದ್ಧಾಂಗವಾಗಿ ಯವುದೇ ಬದಲಾವಣೆ ತರಲು ಸಿದ್ಧನಾಗಿದ್ದನು.[೫೧]

ಟಿಪ್ಪು ತನ್ನ ಸೈನಿಕರಿಗೆ ಯುರೋಪ್ ಯುದ್ಧ ಮಾದರಿ ತರಬೇತಿ ಕೊಡಿಸಿದ್ದನು. ಸೈನ್ಯದಲ್ಲಿ ಶಿಸ್ತನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದನು. ಕಾರ್ಯಾಚರಣೆಯ ಸಂದರ್ಭದಲ್ಲಿ ಯಾರಾದರೂ ಸೈನಿಕ ತಪ್ಪಿಸಿಕೊಂಡರೆ ಅಥವಾ ಪಲಾಯನ ಮಾಡಿದರೆ ಗುಂಡಿಟ್ಟು ಕೊಲ್ಲಲು ಅಪ್ಪಣೆ ಮಾಡಿದ್ದನು. ಪ್ರತಿತಿಂಗಳು ಬಟವಾಡೆಯನ್ನು ತಪ್ಪದೆ ವಿತರಿಸುತ್ತಿದ್ದನು. ಹೈದರಾಲಿ ಯಾವುದೇ ಕಾರಣಕ್ಕೂ ಸೈನಿಕರಿಗೆ ಸಂಬಳ ನೀಡುವುದನ್ನು ನಿಲ್ಲಿಸುತ್ತಿರಲಿಲ್ಲ. ಟಿಪ್ಪು ಇದನ್ನೇ ಅನುಸರಿಸಿದ. ಯುದ್ಧ ಮತ್ತು ಶಾಂತಿ ಈ ಎರಡೂ ಸಂದರ್ಭಗಳಲ್ಲೂ ಟಿಪ್ಪು ಸದಾ ಸೈನ್ಯದೊಂದಿಗೆ ಇರುತ್ತಿದ್ದ.[೫೨] ಟಿಪ್ಪುವಿನ ಅಶ್ವಪಡೆಗಳು ಸಣ್ಣಕೋವಿ ಮತ್ತು ಕತ್ತಿಗಳನ್ನು ಹಿಡಿದು ಹೋರಾಡುತ್ತಿದ್ದವು. ಹೈದರನ ಕಾಲದಿಂದಲೂ ಪರಿಣತಿ ಪಡೆದ ಅನಿಯಮಿತ ಅಶ್ವಪಡೆಗಳು ಹೆಚ್ಚು ಅನುಭವದಿಂದಲೂ ಮತ್ತು ಅನುಕೂಲಕರವಾಗಿದ್ದವು. ಇವು ಗೆರಿಲ್ಲಾ ಮಾದರಿಯ ಆಕ್ರಮಣಕ್ಕೆ ಸಮರ್ಥವಾಗಿದ್ದವು.

ಟಿಪ್ಪುವಿನ ಪದಾತಿದಳವು ಐರೋಪ್ಯ ಮಾದರಿಯ ಬಂದೂಕು ಹಾಗೂ ಸನೀನುಗಳನ್ನು ಧರಿಸುತ್ತಿದ್ದಿತು. ಅವುಗಳನ್ನು ಫ್ರೆಂಚ್ ಮಾದರಿಯಲ್ಲಿ ರಾಜ್ಯದಲ್ಲಿಯೇ ತಯಾರಿಸಲಾಗುತ್ತಿತ್ತು. ಟಿಪ್ಪು ಬಳಿ ಬ್ರಿಟಿಷರು ಮತ್ತು ಫ್ರೆಂಚರ ಸಾಕಷ್ಟು ಶಸ್ತ್ರಾಸ್ತ್ರಗಳಿದ್ದವು. ಫಿರಂಗಿಗಳನ್ನು ಫ್ರೆಂಚರ ಸಹಾಯದಿಂದ ಮೈಸೂರಿನಲ್ಲಿಯೇ ಎರಕ ಹುಯ್ಯಲಾಗುತ್ತಿತ್ತು. ಇವು ಬ್ರಿಟಿಷರ ಫಿರಂಗಿಗಳಿಗಿಂತ ಹೆಚ್ಚು ದೂರಕ್ಕೆ ಸಿಡಿಯಬಲ್ಲ ಸಾಮರ್ಥ್ಯವನ್ನು ಹೊಂದಿದ್ದವು. ಟಿಪ್ಪು ಪದಾತಿದಳಕ್ಕೆ ಪಾಶ್ಚಾತ್ಯ ಮಾದರಿಯ ಯುದ್ಧ ತರಬೇತಿ ಮತ್ತು ಶಿಕ್ಷಣ ಕೊಡಿಸಿದ್ದನು.[೫೩]

ಟಿಪ್ಪು ದಿವಾನ್ ಪೂರ್ಣಯ್ಯನ ನೇತೃತ್ವದಲ್ಲಿ ಪ್ರತ್ಯೇಕ ಸೈನಿಕ ಇಲಾಖೆಯನ್ನು ಸ್ಥಾಪಿಸಿದ್ದನು. ಇದು ಹೆಚ್ಚು ಶಸ್ತ್ರಾಸ್ತ್ರ ಮತ್ತು ಸಲಕರಣೆಗಳನ್ನು ಹೊಂದಿ ಶಿಸ್ತುಬದ್ಧವಾಗಿತ್ತು. ಸುಮಾರು ೩ ಲಕ್ಷ ಸೈನಿಕರು ಇದ್ದರು. ೧೭೮೨ರ ವೇಳೆಗೆ ಟಿಪ್ಪುವಿನ ಬಳಿ ೧,೮೦,೦೦೦ ದಷ್ಟು ಶಾಶ್ವತ ಸೈನ್ಯವಿತ್ತು. ಇವರೆಲ್ಲರಿಗೂ ತಿಂಗಳ ಸಂಬಳವನ್ನು ಸರಿಯಾಗಿ ಪಾವತಿ ಮಾಡುತ್ತಿದ್ದವು. ಪ್ರತಿದಿನ ಹಗಲು ಮತ್ತು ಸಂಜೆಯ ವೇಳೆಯಲ್ಲಿ ಸೈನ್ಯದ ಅಧಿಕಾರಿಗಳು ಸೈನ್ಯದೊಡನೆ ಕವಾಯಿತು ನಡೆಸಬೇಕಿತ್ತು. ವಿಶ್ವಾಸದ್ರೋಹ ಹೊರತುಪಡಿಸಿ ಇನ್ನೂ ಯಾವುದೇ ಅಪರಾಧಗಳಿಗೂ ದೈಹಿಕ ಶಿಕ್ಷೆ ವಿಧಿಸುವುದನ್ನು ಟಿಪ್ಪುವಿನ ಆಳ್ವಿಕೆಯಲ್ಲಿ ಸಂಪೂರ್ಣ ನಿಷೇಧಿಸಲಾಗಿತ್ತು. ಶಸ್ತ್ರಾಸ್ತ್ರ ಬಲದಲ್ಲೂ, ಪ್ರಮಾಣ ಮತ್ತು ಗುಣಮಟ್ಟದಲ್ಲಿ ಟಿಪ್ಪುವಿನ ಸೈನ್ಯ ಸಾಕಷ್ಟು ಸಜ್ಜುಗೊಂಡಿತು.[೫೪] ಯಾವುದೇ ಸಂದರ್ಭದಲ್ಲೂ ಯುದ್ಧಕ್ಕೆ ತಯಾರಾಗಿರುತ್ತಿತ್ತು.

ಟಿಪ್ಪು ಸೈನಿಕರ ನೇಮಕಾತಿ ವ್ಯವಸ್ಥೆಯನ್ನು ಶಿಸ್ತುಬದ್ಧವಾಗಿ ರೂಪಿಸಿದ್ದನು. ಸೈನಿಕರನ್ನು ನೊಂದಾಯಿಸುವಾಗ ಟಿಪ್ಪುವಿನ ಉಸ್ತುವಾರಿಯಲ್ಲೆ ಸೈನಿಕರ ಜಾತಿ, ಧರ್ಮ, ಕುಟುಂಬದ ಹಿನ್ನಲೆ ಎಲ್ಲವನ್ನೂ ಪರಿಶೀಲಿಸಿ ಸಂದರ್ಶನ ನಡೆಸಿ ನೊಂದಾಯಿಸಿಕೊಳ್ಳುತ್ತಿದ್ದರು. ಇದಲ್ಲದೆ

ಟಿಪ್ಪುವಿನ ಶಾಶ್ವತವಾದ ಸೈನ್ಯಕ್ಕೆ ಬೆಂಬಲವಾಗಿ ಅನಿಯಮಿತ ರೈತ ಪಡೆ ಕಟ್ಟಲಾಗಿತ್ತು. ೧೭೮೬ರ ವೇಳೆಗೆ ಇದರ ಸಂಖ್ಯೆಯು ೧,೮೦,೦೦೦ ದಷ್ಟಾಗಿತ್ತು. ಈ ಸೈನ್ಯವು ರಸ್ತೆಗಳನ್ನು ಸುಗಮಗೊಳಿಸುವುದು, ಸಿಡಿಮದ್ದುಗಳನ್ನು ಸಿದ್ಧಗೊಳಿಸುವುದು, ವಶಪಡಿಸಿಕೊಂಡ ಪಟ್ಟಣಗಳನ್ನು ಕಾಯುವುದು ಇತ್ಯಾದಿ ಕರ್ತವ್ಯಗಳನ್ನು ನಿರ್ವಹಿಸುತ್ತಿತ್ತು.

ಮೂರನೆಯ ಆಂಗ್ಲೋ-ಮೈಸೂರು ಯುದ್ಧಕ್ಕೂ ಮೊದಲು ಟಿಪ್ಪುವಿನ ಬಳಿ ೫೦,೦೦೦ ನಿಯತ ಪದಾತಿಗಳು, ೧,೮೦೦೦ ಅಶ್ವಪಡೆ, ೩೦೦೦೦ ನಿಯತಾಶ್ವಗಳು, ೫೦೦೦೦ ಅನಿಯತಾಶ್ವಗಳು, ೩೦೦೦ ಒಂಟೆಗಳು, ೪೮೦೦೦ ನಿಯತ ಪದಾತಿಗಳು, ೧೦೦೦೦ ಯುದ್ಧ ಬಂದಿಗಳಿಂದ ಕೂಡಿದ ಅಸದ್ ಇಲಾಹಿಗಳು ಕತ್ತಿ, ಮದ್ದಿನ ಕೋವಿಗಳನ್ನು ಹಿಡಿದ ೬೦,೦೦೦ ಸಿಪಾಯಿಗಳು, ೩೦,೦೦೦ ಕಮಾಟಿಗಳು ಇದ್ದರು.[೫೬] ಟಿಪ್ಪು ಆಯುಧಗಳ ಹಾಗೂ ಸೈನ್ಯದ ಚಲನೆಗೆ ತ್ವರಿತ ಮತ್ತು ಉತ್ತಮ ಸಂಚಾರ-ಸಾಗಾಣಿಕೆ ವ್ಯವಸ್ಥೆಯನ್ನು ನಿರ್ಮಿಸಿದ್ದನು. ೧೭೮೬ರ ವೇಳೆಗೆ ಟಿಪ್ಪುವಿನ ಸೈನ್ಯ ೪ ಲಕ್ಷ ಎತ್ತುಗಳನ್ನು ಹೊಂದಿತು.

ಟಿಪ್ಪುವಿನ ಸೈನ್ಯದಲ್ಲಿ ಬಹುಪಾಲು ಸೈನಿಕರು ಶೂದ್ರ ಹಾಗೂ ದಲಿತ ವರ್ಗಕ್ಕೆ ಸೇರಿದವರಾಗಿದ್ದರು. ಸೈನ್ಯಕ್ಕೆ ಸೇರುವುದು ಊಳಿಗಮಾನ್ಯ ಶೋಷಣೆಯಿಂದ ವಿಮೋಚನೆಗೊಳ್ಳುವುದಕ್ಕೆ ಸಮನಾಗಿತ್ತು. ಇದಲ್ಲದೆ ಪ್ರತಿಯೊಬ್ಬ ಸೈನಿಕನಿಗೂ ಸ್ವಂತಕ್ಕೆ ಭೂಮಿ ನೀಡುತ್ತಿದ್ದರು. ಇದರಿಂದ ಅವರು ಮುಂದೆ ಜೀತಗಾರರಾಗಿಯೋ, ಭೂಮಾಲೀಕರ ಸ್ವತ್ತಾಗಿಯೋ ಬದುಕು ನಡೆಸುವಂತಿರಲಿಲ್ಲ. ಇದರಿಂದ ಟಿಪ್ಪುವಿನ ಸೈನ್ಯ ಹೊಸ ವಿಮೋಚಿತ ಸ್ಫೂರ್ತಿಯಿಂದ ಕೂಡಿದ್ದ ಸೈನಿಕರೊಂದಿಗೆ ಮೈಸೂರಿಗೆ ಹೊಸ ಬಲ ತಂದುಕೊಟ್ಟಿತು. ಹಾಗೆ ನೋಡಿದರೆ ಟಿಪ್ಪು-ಹೈದರಾಲಿ ನಡೆಸಿದ ವಸಾಹತುಶಾಹಿ ವಿರೋಧಿ ಸಂಗ್ರಾಮವು ಊಳಿಗಮಾನ್ಯ ವಿರೋಧಿ ವಿಜಯದ ಮೇಲೆ ಕಟ್ಟಲ್ಪಟ್ಟಿತ್ತು. ಟಿಪ್ಪುವಿನ ಸೈನಿಕರ ತರಬೇತಿಯಲ್ಲಿ ಬ್ರಿಟಿಷ್ ವಸಾಹತುಶಾಹಿ ವಿರೋಧಿ ತರಬೇತಿ ಅಂತರ್ಗತವಾಗಿ ಅಡಕವಾಗಿತ್ತು. ಆದ್ದರಿಂದಲೇ ೧೭೯೯ರ ಯುದ್ಧದ ನಂತರ ಬ್ರಿಟಿಷರು ಬೇರೆ ಸೈನ್ಯದಂತೆ ಟಿಪ್ಪುವಿನ ಸೈನ್ಯವನ್ನು ಉಳಿಸಿಕೊಳ್ಳದೆ ವಿಸರ್ಜಿಸಿದರು.[೫೮] ಟಿಪ್ಪುವಿನ ಐರೋಪ್ಯ ಮಾದರಿಯ ಯುದ್ಧ ಕಲೆ ಹಾಗೂ ಸೈನ್ಯದ ಶಿಸ್ತು ಬ್ರಿಟಿಷರನ್ನು ಚಕಿತಗೊಳಿಸಿತು.

೫.೫. ನೌಕಾಪಡೆ ರಚನೆ

ಸುಸಂಘಟಿತ ನೌಕಾಪಡೆ ಮೈಸೂರು ಸಂಸ್ಥಾನದಲ್ಲಿ ಹಿಂದೊಮ್ಮೆ ಇತ್ತು ಎನ್ನುವುದು ಇಂದಿಗೂ ಮೈಸೂರಿನವರಿಗೆ ತಿಳಿದಿಲ್ಲ. ವರ್ತಕರ ಒಂದು ದಂಡು, ಯುದ್ಧನೌಕೆ, ತೀರ ಪ್ರದೇಶ, ಚಿಕ್ಕ ನೌಕೆಗಳು, ಅನೇಕ ಬಂದರುಗಳು, ಮೂರು ಹಡಗು ನಿರ್ಮಾಣ ಕೇಂದ್ರಗಳು,

ಇತರೆ ರಾಷ್ಟ್ರಗಳಿಗೆ ಸಂಬಂಧಿಸಿದಂತೆ ಹಡಗು ನಿರ್ಮಾಣ ಪ್ರದೇಶಗಳಿದ್ದವು. ನೌಕಾಪಡೆಯ ಅಧಿಕಾರಿಗಳು ಮತ್ತು ಸೇವಕರಿಗೆ ತರಬೇತಿ ಕೊಡುವ ಶಾಲೆಯೂ ಇತ್ತು. ನೌಕಾ ಸಿಬ್ಬಂದಿಯನ್ನು ಆಗತ್ಯಕ್ಕೆ ತಕ್ಕಂತೆ ರಾಜನು ಆಯ್ಕೆ ಮಾಡುತ್ತಿದ್ದನು. ಸಂದರ್ಶನಕ್ಕೆ ಅಭ್ಯರ್ಥಿಗಳನ್ನು ಶ್ರೀರಂಗಪಟ್ಟಣಕ್ಕೆ ಕರೆಸಿಕೊಳ್ಳುತ್ತಿದ್ದರು. ಆಯ್ಕೆಯು ಪೂರ್ಣದರ್ಬಾರಿನಲ್ಲಿ ನಡೆಯುತ್ತಿತ್ತು. ಪ್ರಾರಂಭದಲ್ಲಿ ಹೈದರಾಲಿ ವರ್ತಕ ನೌಕೆಯಾಗಿ ವ್ಯಾಪಾರದ ಉದ್ದೇಶದಿಂದ ಪ್ರಾರಂಭಿಸಿದರೂ ಕೊನೆಗೆ ಅವು ಯುದ್ಧ ನೌಕೆಗಳಾಗಿ ಮಾರ್ಪಾಟಾದವು. ಹೈದರಾಲಿಯ ಯುದ್ಧವು ನೆಲದ ಮೇಲೆ ನಡೆಸಿದ್ದರೂ ಬ್ರಿಟಿಷರನ್ನು ಸದೆಬಡಿಯಲು ಫ್ರೆಂಚರ ಜೊತೆ ತನ್ನ ನೌಕೆಗಳನ್ನು ಸಾಗರಕ್ಕೆ ಕಳಹಿಸಿದ್ದನು. ಹೈದರ್ ತಾನು ಅತ್ಯಂತ ಸಮರ್ಥ ಸೈನ್ಯ ಕಟ್ಟಿ ಜಯಸಾಧಿಸಬೇಕಾದರೆ ನೌಕಾಪಡೆಯ ರಚನೆ ಅತಿ ಅಗತ್ಯ. ಇಲ್ಲದಿದ್ದರೆ ಬ್ರಿಟಿಷರನ್ನು ಎದುರಿಸಲು ಸಾಧ್ಯವಿಲ್ಲ ಎಂಬ ಅರಿವಿತ್ತು. ಬ್ರಿಟಿಷರನ್ನು ಭೂಮಿ ಮೇಲೆ ಸೋಲಿಸಬಲ್ಲೆ, ಆದರೆ ಸಾಗರದ ಮೇಲೆ ಅವರನ್ನು ಸೋಲಿಸಲು ಸಾಧ್ಯವಿಲ್ಲ ಎಂದೂ ಹೈದರಾಲಿ ಹತಾಶನಾಗಿ ಹೇಳುತ್ತಿದ್ದನು. ಏಕೆಂದರೆ ಬ್ರಿಟಿಷರು ವಿವಿಧ ದೇಶಗಳಿಂದ ಸಮರ್ಥ ಪಡೆಗಳನ್ನು ಹೊಂದಿ ಸುತ್ತಮುತ್ತಲೂ ತಮ್ಮ ಸ್ವಾಮ್ಯವನ್ನು ದಿನೇ ದಿನೇ ಹೆಚ್ಚಿಸುತ್ತಾ ಹೋಗುವುದನ್ನು ಅರಿತುಕೊಂಡಿದ್ದನು.[೫೯]

ನೌಕಾನಿರ್ಮಾಣವನ್ನು ಟಿಪ್ಪು ಕೂಡ ಪ್ರೋತ್ಸಾಹಿಸಿದನು. ಅವನ ವ್ಯಾಪಾರ ನೌಕೆಗಳ ತಂಡವು ಸಾಗರೋತ್ತರ ವಾಣಿಜ್ಯದಲ್ಲಿ ಅವನಿಗೆ ತುಂಬಾ ಸಹಾಯಕವಾಗಿತ್ತು. ೧೭೯೩ರಲ್ಲಿ ಟಿಪ್ಪು ೧೦೦ ಹಡಗುಗಳನ್ನು ಕಟ್ಟಲು ಆದೇಶ ನೀಡಿದನು. ಅವುಗಳಲ್ಲಿ ಎರಡಕ್ಕೆ ಕ್ಲುಯಿಜಿರಿ ಮತ್ತು ಇಲ್ಯಾಸಿ ಎಂದೂ ಹೆಸರಿಸಿದನು. ಹಡಗು ನಿರ್ಮಾಣಕ್ಕೆ ಅಗತ್ಯವಾದ ಕಬ್ಬಿಣ, ಮರಮುಟ್ಟು, ಹಗ್ಗಗಳು ಇತ್ಯಾದಿ ಎಲ್ಲವನ್ನೂ ಸ್ಥಳೀಯವಾಗಿಯೇ ಕೊಳ್ಳತಕ್ಕದ್ದು ಎಂದು ಆದೇಶಿಸಿದನು. ಮರವನ್ನು ಕಲ್ಲಿಕೋಟೆಯಿಂದ ಮಂಗಳೂರಿಗೆ ಕಳುಹಿಸಲಾಗಿತ್ತು. ಇದರ ಜೊತೆಗೆ ಸದಾಶಿವಗಡ ಮತ್ತು ಬಾಸ್ಕೋರಾಜಿ ಎಂಬ ಎರಡು ಸ್ಥಳಗಳಲ್ಲಿಯೂ ಹಡಗು ಕಟ್ಟುವ ಕೆಲಸ ನಡೆಯುತ್ತಿತ್ತು. ಈ ಎರಡು ಸ್ಥಳಗಳಲ್ಲಿ ೩೦ ಹಡಗುಗಳ ನಿರ್ಮಾಣಕ್ಕೆ ಆದೇಶ ನೀಡಲಾಗುತ್ತಿತ್ತು. ಬೇರೆ ಬೇರೆ ದೇಶಗಳಿಂದ ಹಡಗು ಕಟ್ಟುವ ಕೆಲಸದಲ್ಲಿ ನಿಷ್ಣಾತರಾದರು ಇಲ್ಲಿಗೆ ಬರಬೇಕೆಂದು ಬಯಸಿದನು. ಮಸ್ಕತ್ತಿನಲ್ಲಿದ್ದ ತನ್ನ ಪ್ರತಿನಿಧಿಗೆ ಅವನು ಒಂದು ಪತ್ರ ಬರೆದನು. 'ಹಡಗು ಕಟ್ಟುವ ಕೆಲಸದಲ್ಲಿ ನೈಪುಣ್ಯತೆ ಪಡೆದ ಹತ್ತು ಜನ ಕೆಲಸಗಾರರ ಅವಶ್ಯಕತೆ ನಮಗಿದೆ. ಇವರಲ್ಲದೆ ಕೆಲಸಗೊತ್ತಿರುವ ೧೦೦ಕ್ಕೂ ಹೆಚ್ಚು ಜನ ತಂತ್ರಜ್ಞರು ಬೇಕಾಗಿದ್ದಾರೆ. ಅವರು ಇಲ್ಲಿಗೆ ಬಂದಾಗ ಅವರಿಗೆ ಉತ್ತಮ ವಾದ ಹುದ್ದೆಯನ್ನು ಕೊಡಲಾಗುತ್ತದೆ.' ಟಿಪ್ಪು ಕಾಲದಲ್ಲಿ ಮಂಗಳೂರಿನಲ್ಲಿ ನಿರ್ಮಿಸಿದ ಹಡಗುಗಳು ತಮ್ಮ ದಾರ್ಢ್ಯಕ್ಕೂ, ಬಾಳಿಕೆಗೂ ಪ್ರಸಿದ್ಧವಾಗಿದ್ದವು ಎಂದು ಕಿರ್ಕ್‌ಪ್ಯಾಟ್ರಿಕ್ ಒಪ್ಪಿಕೊಂಡಿದ್ದಾನೆ.[೬೦]

ಟಿಪ್ಪುವು ಪೋರ್ಚುಗೀಸ್, ಡಚ್, ಫ್ರೆಂಚ್ ಮತ್ತು ಬ್ರಿಟಿಷರ ನೌಕಾವ್ಯವಸ್ಥೆಯನ್ನು ಸೂಕ್ಷ್ಮವಾಗಿ ಅಧ್ಯಯನ ನಡೆಸಿದನು. ಯುರೋಪ್ ಮಾದರಿಯಲ್ಲಿ ನೌಕಾಪಡೆಯ ರಚನೆಗೆ ಒತ್ತು ನೀಡಿದನು. ಈ ದೇಶಗಳಿಂದ ನೌಕಾ ತಂತ್ರಜ್ಞರನ್ನು ಮೈಸೂರಿಗೆ ಆಕರ್ಷಿಸಲು ಪ್ರಯತ್ನಿಸಿದನು. ಆದರೆ ಅವನು ರೂಪಿಸಿದ ನೌಕಾವ್ಯವಸ್ಥೆಯು ಅವನ ಬುದ್ಧಿಯ ಕೂಸು, ಯಾವುದೇ ವಿದೇಶಿ ಮಾದರಿಯ ನಕಲಲ್ಲ.[೬೧] ಟಿಪ್ಪುವು ಹೈದರಾಲಿ ಆರಂಭಿಸಿದ ಮಾದರಿಯಂತೆ ನೌಕಾನೆಲೆಗಳನ್ನು ಕರಾವಳಿಯಲ್ಲಿ ಸ್ಥಾಪಿಸಿದನು. ಆದರೆ ೧೭೮೦–೮೪ರ ಎರಡನೆಯ ಮೈಸೂರು ಯುದ್ಧದಲ್ಲಿ ಅವುಗಳು ಧ್ವಂಸಗೊಂಡವು. ಬ್ರಿಟಿಷರು ೧೭೮೨ರಲ್ಲಿ ಹೊನ್ನಾವರ ಆಕ್ರಮಿಸಿದಾಗ ಟಿಪ್ಪು ಸ್ಥಾಪಿಸಿದ ನೌಕಾನೆಲೆಗಳನ್ನು, ಗೋದಾಮುಗಳನ್ನು ಮತ್ತು ಹಡಗು ನಿರ್ಮಾಣ ನೆಲೆಗಳನ್ನು ನೋಡಿ ಆಶ್ಚರ್ಯ ವ್ಯಕ್ತಪಡಿಸಿರುವುದು ಬ್ರಿಟಿಷ್ ಬರಹಗಾರದಿಂದಲೇ ವರದಿಯಾಗಿದೆ.[೬೨] ಜೊತೆಗೆ ಅವರಿಗೆ ಅಲ್ಲಿ ೬೦ ಬಂದೂಕುಗಳು ದೊರೆತಿದ್ದವು. ಟಿಪ್ಪು ಸರಕಾರಕ್ಕೆ ಇದರಿಂದ ಹಿಂದೇಟು ಬಿದ್ದರೂ ೧೭೮೨ರ ನಂತರವೂ ಹೊಸದಾಗಿ ನೌಕಾ ನೆಲೆಗಳನ್ನು ಪುನರ್‌ಸ್ಥಾಪಿಸಿ ಏಳು ಯುದ್ಧ ಹಡಗುಗಳನ್ನು ನಿರ್ಮಿಸಿದನು. ಪ್ರತಿಯೊಂದು ಹಡಗಿನಲ್ಲಿ ೩೦ರಿಂದ ೫೦ ಬಂದೂಕುಗಳಿದ್ದವು. ಟಿಪ್ಪು ಸರಕಾರ ಹೆಚ್ಚು ಹೆಚ್ಚು ಹಡಗುಗಳ ನಿರ್ಮಾಣಕ್ಕೆ ಉತ್ತೇಜನ ನೀಡಲು ಮೂರು ಕಾರಣಗಳಿದ್ದವು ೧. ವಿದೇಶಿ ಮಾರುಕಟ್ಟೆಗಳಲ್ಲಿ ವ್ಯಾಪಾರ ವಹಿವಾಟು ನಡೆಸಲು. ೨. ಕರಾವಳಿ ತೀರದಿಂದ ಬರಬಹುದಾದ ವೈರಿಗಳ ಹಠಾತ್ ಆಕ್ರಮಣದಿಂದ ರಾಜ್ಯದ ರಕ್ಷಣೆ. ೩. ನೌಕಾದಳವನ್ನು ಬಲಪಡಿಸಿ ಯುದ್ಧದ ಸಮಯದಲ್ಲಿ ಬಳಸುವ ಅನಿವಾರ್ಯತೆಗಳಿದ್ದವು.[೬೩]

ಟಿಪ್ಪು ಒಂದು ನೌಕಾದಳ ವಿಭಾಗವನ್ನು ರೂಪುಗೊಳಿಸಿದನು. ಬಗೆ ಬಗೆಯ ಹಡಗುಗಳನ್ನು ಹೊಂದಿದ್ದ ಸುಮಾರು ೧೦,೦೦೦ ಜನ ಈ ಸೇವೆಯಲ್ಲಿದ್ದರು. ಅವನ ಬಳಿ ೪೦ ಯುದ್ಧ ನೌಕೆಗಳಿದ್ದವು. ಇವು ಕಲ್ಲಿಕೋಟೆ, ಮಂಗಳೂರು ಮತ್ತು ಸದಾಶಿವಗಡದಲ್ಲಿದ್ದವು.[೬೪] ಟಿಪ್ಪು ನೌಕಾಪಡೆಯ ರಚನೆ, ಬಲವರ್ಧನೆ ಮತ್ತು ಸಂಘಟನೆಯ ಮಹತ್ವ ಅರಿತಿದ್ದನು. ಇದನ್ನು ತಡವಾಗಿ ಆರಂಭಿಸಿದನು. ತನ್ನ ಅವನತಿಗೆ ಸ್ವಲ್ಪವೇ ಮುಂಚೆ ೧೦೦ ಹಡಗುಗಳ ಒಂದು ಸೈನ್ಯ ಕಟ್ಟಬೇಕೆಂದು ಬಯಸಿದನು. ಆದರೆ ಅದು ಈಡೇರಲಿಲ್ಲ. ಕಾರಣ ಮೂರನೆಯ ಆಂಗ್ಲೋ–ಮೈಸೂರು ಯುದ್ಧದಲ್ಲಿ ಸೋಲು ಉಂಟಾಗಿ ನಷ್ಟ ಅನುಭವಿಸಿದನು. ಇದೇ ಸಮಯಕ್ಕೆ ಮಲಬಾರ್ ಪ್ರಾಂತ್ಯ ಬ್ರಿಟಿಷರಿಗೆ ಸೇರಿತು. ಕೆನರಾ ಭಾಗ ಮಾತ್ರ ಟಿಪ್ಪುವಿನ ಹತೋಟಿಯಲ್ಲಿತ್ತು. ಈ ವೇಳೆಗೆ ತನ್ನ ನೌಕಾ ನಿರ್ಮಾಣ ಕೇಂದ್ರಗಳನ್ನು ಮಂಗಳೂರು, ಭಟ್ಕಳ ಹಾಗೂ

ಹೊಸೂರಿನಲ್ಲಿ ಸ್ಥಾಪಿಸಿದ್ದನು. ಈ ಸಮಯದಲ್ಲಿ ಟಿಪ್ಪು ರಾಜ್ಯವು ಮುಳುಗುತ್ತಲಿತ್ತು. ಅದನ್ನು ಉಳಿಸಲು ಅವನಿಗೆ ಸಮಯ ಸಾಕಾಗಲಿಲ್ಲ. ಸಹಾಯಕ್ಕಾಗಿ ಫ್ರಾನ್ಸಿಗೆ ರಾಯಭಾರಿಗಳನ್ನು ಕಳುಹಿಸಿ ಸಹಾಯ ಕೋರಿದ. ಆದರೆ ಪ್ರಯೋಜನವಾಗಲಿಲ್ಲ. ತನ್ನೆಲ್ಲ ಪ್ರಯತ್ನಕ್ಕೆ ದೊರೆತ ತಕ್ಕ ಫಲ ಎಂದರೆ ನೆಪೋಲಿಯನ್ ಬೋನಾಪಾರ್ಟೆಯ ಸಹಿ ಇರುವ ಪತ್ರ ಮತ್ತು ಸುಳ್ಳು ಭರವಸೆಗಳು ಅಷ್ಟೇ. ನಾಲ್ಕನೆಯ ಮೈಸೂರು ಯುದ್ಧದ ಪರಿಣಾಮ ಟಿಪ್ಪುವಿನ ಅಂತ್ಯ ಮತ್ತು ಕೆನರಾ ಪ್ರಾಂತ್ಯದ ಸಮಸ್ತ ಹಿಡಿತ ತಪ್ಪಿಹೋಯಿತು. ಕಾಲುಶತಮಾನದವರೆಗೆ ಮೈಸೂರು ಸಂಸ್ಥಾನದ ನೌಕಾಪಡೆಗಳು ಕ್ರಿಯಾಶೀಲವಾಗಿದ್ದು, ನೌಕೆಗಳು ಪರ್ಶಿಯಾ, ಗಲ್ಫ್ ಮತ್ತು ಪರ್ಶಿಯಾ ದೇಶಗಳ ತೀರ ಪ್ರದೇಶಗಳಿಗೆ ಸಂಚರಿಸುತ್ತಿದ್ದವು. ಫೆಗು ಕಡೆಗೆ ಮೂರು ಬಾರಿ ಪ್ರಯಾಣಿಸಿದ ದಾಖಲೆ ಇದೆ. ಜೊತೆಗೆ ರಾಯಭಾರ ತಂಡ ಕಳುಹಿಸಿದ್ದ ದಾಖಲೆಯೂ ಇದೆ.[೬೫]

ಟಿಪ್ಪುವು ತಾನು ಸಿಂಹಾಸನ ಪಡೆಯಬೇಕೆಂದು ಘಾಟಿಗಳಲ್ಲಿ ಕಾರ್ಯಾಚರಣೆ ಮಾಡಿದನು. ಹೀಗೆ ಮುಂದುವರೆಯುತ್ತಿದ್ದಾಗ ಬಿದನೂರಿನ ಮುಖಾಂತರ ಮೈಸೂರನ್ನು ಆಕ್ರಮಿಸಲು ಬಾಂಬೆಯಲ್ಲಿ ಬೃಹತ್‌ಸೈನ್ಯ ಸೇರತೊಡಗಿತು. ಬ್ರಿಟಿಷರ ಯೋಜನೆ ಮೊದಲು ಭಟ್ಕಳ ಮತ್ತು ಮಂಗಳೂರನ್ನು ವಶಪಡಿಸಿಕೊಂಡು ಅನಂತರ ಘಾಟಿ ಮೇಲೇರುವ ಉದ್ದೇಶವಿತ್ತು. ಸೈನ್ಯದ ನಾಯಕ ಮ್ಯಾಥೂಸ್ ಮೈಸೂರು ಸೇರಿದ ಮೇಲೆ ಮುಂದೇನು ಮಾಡುವುದೆಂದು ಬ್ರಿಟಿಷರಿಗೆ ತಿಳಿದಿರಲಿಲ್ಲ. ರಾಜಮಹೇಂದ್ರಿ, ಹನೋರ್ ಮತ್ತು ಮಿರ್ಜಾಗಳನ್ನು ಸುಲಭದಲ್ಲಿ ವಶಪಡಿಸಿಕೊಂಡರು. ಅವು ಪ್ರಮುಖ ಬಂದರು ಆಗಿರಲಿಲ್ಲ. ಈ ಆಕ್ರಮಣದಲ್ಲಿ ಮೆಕ್‌ಲಿಯೋಸ್ ಮೈಸೂರಿಗೆ ಸೇರಿದ ೫ ಹಡಗುಗಳನ್ನು ವಶಪಡಿಸಿಕೊಂಡನೆಂದು ದಾಖಲೆ ಹೇಳುತ್ತದೆ.[೬೬]

ಟಿಪ್ಪು ಬ್ರಿಟಿಷರನ್ನು ಭೂಮಿಯ ಮೇಲೆ ಮತ್ತು ಸಾಗರದ ಮೇಳೆ ಸಮರ್ಥವಾಗಿ ಎದುರಿಸಲು ಸೈನ್ಯವನ್ನು ಸಜ್ಜುಗೊಳಿಸಲು ಯೋಚಿಸಿದನು. ಹೊಸ ನೌಕಾನಿಯಂತ್ರಣ ಜಾರಿಗೆ ತಂದನು. ಟಿಪ್ಪು ನೌಕೆಗಳನ್ನು ವ್ಯಾಪಾರಕ್ಕಾಗಿ 'ಬೋರ್ಡ್ ಆಫ್ ಟ್ರೇಡ್' ಎನ್ನುವ ನಿಯಂತ್ರಣದಲ್ಲಿ ಹಡಗುಗಳು ಇದ್ದವು. ಆದರೆ ಬ್ರಿಟಿಷರಿಂದ ಪಾಠ ಕಲಿತು ಯುದ್ಧದಲ್ಲಿ ನೌಕೆಗಳನ್ನು ಬಳಸಬೇಕಾಯಿತು. ೧೭೯೬ವರೆಗೆ ತನ್ನ ಕನಸಿನ ನೌಕಾಬಲ ಅಭಿವೃದ್ಧಿಪಡಿಸಲು ಆಸಕ್ತಿ ತೋರಲಿಲ್ಲ. ಸಂಪನ್ಮೂಲದ ಕೊರತೆಯಿಂದ ೧೭೯೬ರಲ್ಲಿ ಕೇವಲ ೨೦ ಹಡಗುಗಳು ನಿರ್ಮಾಣವಾದವು. ಬ್ರಿಟಿಷರ ನೌಕಾ ಮಾದರಿಯಲ್ಲೇ ತನ್ನ ಹಡಗನ್ನು ನಿರ್ಮಿಸಿದನು. ಬ್ರಿಟಿಷರ ನೌಕಾಶಕ್ತಿಯನ್ನು ಅಧ್ಯಯನ ಮಾಡಲು ತನ್ನ ಅಧಿಕಾರಿಗಳನ್ನು ಮದ್ರಾಸಿಗೆ ಕಳುಹಿಸಿದ. ನೌಕಾನೆಲೆಯ ಮುಖ್ಯಸ್ಥನನ್ನು ಮೀರ್ ಎಯಾಮ್ಸ್ ಎಂದು ಕರೆಯುತ್ತಿದ್ದರು. ಅವರು ಯುದ್ಧಕ್ಕೆ ಹೋಗುವಂತಿರಲಿಲ್ಲ. ಅವರ

ಅಧೀನ ಅಧಿಕಾರಿಗಳಾಗಿ ಮೀರ್ ಭಕ್ಷ್‌ಗಳು ಇದ್ದರು. ಇವರು ಮೂವತ್ತು ಮಂದಿ ಇದ್ದರು. ಅವರಲ್ಲಿ ೨೦ ಮಂದಿ ನೌಕಾಯಾನಕ್ಕಾಗಿ ಹೋಗಬೇಕಿತ್ತು. ಉಳಿದ ೧೦ ಮಂದಿ ತೋರುಗಾಣಿಕೆಗೆ ನೌಕಾನೆಲೆಯಲ್ಲಿ ಇರಬೇಕಿತ್ತು. ಟಿಪ್ಪು ನೌಕಾ ತರಬೇತಿಗೆ ಒಂದು ಶಾಲೆಯನ್ನು ತೆರೆದಿದ್ದನು.

ಟಿಪ್ಪುವಿನ ನೌಕಾಪಡೆಯಲ್ಲಿ ವಿವಿಧ ಶಕ್ತಿಯ ಬಂದೂಕುಗಳ ನೌಕೆಗಳು ಇದ್ದವು. ೭೨ ಬಂದೂಕು ನೌಕೆಗಳು, ೨೪ ಪೌಂಡರ್‌ಗಳು ಇದ್ದು ಪ್ರತಿ ಹಡಗಿನಲ್ಲಿ ೪ ಪ್ರಮುಖ ಅಧಿಕಾರಿಗಳಿದ್ದರು. ಮೊದಲ ಅಧಿಕಾರಿ ಹಡಗಿನ ಚಲನೆಯನ್ನು, ಎರಡನೆಯ ಅಧಿಕಾರಿ ಬಂದೂಕುಗಳನ್ನು, ಮೂರನೆಯ ಅಧಿಕಾರಿ ಸಣ್ಣ ತುಕಡಿಯನ್ನು, ನಾಲ್ಕನೆಯ ಅಧಿಕಾರಿ ಇತರೆ ಕೆಲಸಗಳನ್ನು ಮತ್ತು ಹಡಗಿನ ಸಂಚಾರ ನೋಡಿಕೊಳ್ಳುತ್ತಿದ್ದನು.

ವ್ಯಾಪಾರ-ವಾಣಿಜ್ಯ ಮತ್ತು ನೌಕಾಪಡೆಗೆ ಒಂದಕ್ಕೊಂದು ಸಂಬಂಧವಿದೆ ಎಂದು ಟಿಪ್ಪು ಅರಿತುಕೊಂಡನು. ವ್ಯಾಪಾರದಲ್ಲಿ ಅನೇಕ ಮಾದರಿ ಬುದ್ಧಿವಂತಿಕೆ ಪ್ರದರ್ಶನ ಮಾಡಿದನು. ಜೆಡ್ಡಾ ಮತ್ತು ಮಸ್ಕಟ್‌ನಲ್ಲಿ ತನ್ನ ಮಳಿಗೆಗಳನ್ನು ಅಭಿವೃದ್ಧಿಪಡಿಸಿದನು. ಕಚ್ ಮತ್ತು ನವನಗರಗಳಿಂದ ಆಮದು ಮಾಡುತ್ತಿದ್ದ ಮುಖ್ಯ ವಸ್ತುಗಳೆಂದರೆ ಅಕ್ಕಿ, ಶ್ರೀಗಂಧ, ಮೆಣಸಿಕಾಳು, ಯುದ್ಧ ಸಾಮಗ್ರಿಗಳು, ಗಂಧಕ, ತಾಮ್ರ, ಕುದುರೆಗಳು, ಮುತ್ತು, ರತ್ನ, ವಜ್ರ, ವೈಡೂರ್ಯಗಳು ಟಿಪ್ಪುವಿನ ಗಮನ ಸೆಳೆದಿದ್ದವು. ಇದರ ಅಭಿವೃದ್ಧಿಯ ದೃಷ್ಟಿಕೋನದಿಂದ ನೌಕಾಭಿವೃದ್ಧಿಗೆ ಹೆಚ್ಚು ಒತ್ತು ನೀಡಿದನು.[೬೭]

ಟಿಪ್ಪು ತನ್ನ ಪತನಕ್ಕೆ ಎರಡು ವರ್ಷ ಮುಂಚೆ ನೌಕಾ ಇಲಾಖೆಯ ನಿಯಂತ್ರಣ ಕಾಯಿದೆ ಜಾರಿಗೆ ತಂದನು. ಭಟ್ಕಳ ಮತ್ತು ಮಂಗಳೂರಿನಲ್ಲಿ ತನ್ನ ಕನಸಿನ ನೌಕಾನೆಲೆಯನ್ನು ಸ್ಥಾಪಿಸಲು ಯೋಜನೆ ರೂಪಿಸಿದನು. ಇದಕ್ಕೆ ಸಂಬಂಧಪಟ್ಟಂತೆ ಅಧಿಕಾರಿಗಳನ್ನು ಮಸ್ಕತ್‌ಗೆ ಕಳುಹಿಸಲು ಒಪ್ಪಂದ ಮಾಡಿಕೊಂಡಿದ್ದನು. ಮಸ್ಕತ್‌ಗೆ ಪತ್ರ ಬರೆದು ತನಗೆ ೧೦೦ ನುರಿತ ಲಷ್ಕರ್‌ಗಳು ೧೦ ಶಿಫ್‌ರೈಡ್‌ಗಳನ್ನು ಕಳುಹಿಸುವಂತೆ ತಿಳಿಸಿದ. ಮತ್ತೆ ಸೆಪ್ಟೆಂಬರ್‌ನಲ್ಲಿ ಮಿರ್‌ಗುಲಾಂ ಹುಸೇನ್‌ಗೆ ಪತ್ರ ಬರೆದು ೪೦ ಹಡಗುಗಳನ್ನು ಜರೂರು ಕಳುಹಿಸುವಂತೆ ತಿಳಿಸಿದನು.[೬೮]

ಟಿಪ್ಪು ಮೀರ್ ಎಯಾಮ್ಸ್‌ಗೆ ಈ ಕೆಳಕಂಡಷೇಕ್ ನಿರ್ದೇಶನಗಳನ್ನು ನೀಡಿದ್ದನು.

ಅ. ೧೦೦ ಹಡಗುಗಳನ್ನು ಯುದ್ಧಕ್ಕಾಗಿ ಕಟ್ಟಬೇಕು. ೧೦ ನೌಕೆಗಳು ಪೂರ್ಣ ಮಾನವರಿಂದ ನಡೆಸುವುದು. ಅದರಲ್ಲಿ ಪೂರ್ಣ ಯುದ್ಧ ಸಾಮಗ್ರಿಗಳನ್ನು ಇಡಲು ಅವಕಾಶವಿರಬೇಕು.

ಆ. ಇದಕ್ಕೆ ತಕ್ಕಂತೆ ಅನುಭವಿ ಕೆಲಸಗಾರರನ್ನು ನೀವೇ ನೇಮಿಸಿಕೊಳ್ಳಬೇಕು. ಅವರಿಗೆ ನೌಕಾಬಲದ ತರಬೇತಿಯೂ ಇರಬೇಕು. ಹಾಗೇ ಇವರು ವ್ಯಾಪಾರ ವಾಣಿಜ್ಯದ ಅನುಭವ ಹೊಂದಿರಬೇಕು.

೩. ಹಣಕ್ಕಾಗಿ ಮಾರುಕಟ್ಟೆಯಲ್ಲಿ ಯುದ್ಧ ಸಾಮಗ್ರಿಗಳನ್ನು ಇಡಲು ಅಗತ್ಯ ವಸ್ತು ಲಭ್ಯವಿಲ್ಲದಿದ್ದರೆ ಅದನ್ನು ರಾಜನ ಗಮನಕ್ಕೆ ತರತಕ್ಕದ್ದು. ಅಗತ್ಯಕ್ಕೆ ತಕ್ಕಂತೆ ಪೂರೈಕೆ ಮಾಡಲಾಗುವುದು.

೧೭೯೬ರ ಸೆಪ್ಟೆಂಬರ್‌ನಲ್ಲಿ ನೌಕಾಬಲದ ಅಧಿಕಾರಿಗಳ ಪುನರ್ ಸಂಘಟನೆಗೆ ಆದೇಶ ನೀಡಲಾಯಿತು. ಅದೇ ವರ್ಷ ಟಿಪ್ಪು ನೌಕಾಬಲದ ಕಾರ್ಯಕ್ರಮವು ೪೦ ಹಡಗುಗಳಿಗೆ ಕುಸಿಯಿತು. ಅದು ಕೂಡ ಮೂರು ವಿಭಾಗಗಳಲ್ಲಿ ಹಂಚಿಹೋಯಿತು. ಮಂಗಳೂರು ನೌಕಾ ವಿಭಾಗಕ್ಕೆ ೧೨ ಹಡಗುಗಳು, ವಾಜಿದಾಬಾದ್‌ಗೆ ೧೪, ಮಜಿದಾಬಾದ್‌ಗೆ ೧೪ ಹಡಗುಗಳು ಕೊಡಲ್ಪಟ್ಟವು. ಮೀರ್ ಎಯಾಮ್ಸ್ ನಾಯಕತ್ವದಲ್ಲಿ ಅವೆಲ್ಲವೂ ಮಂಗಳೂರಿನಲ್ಲಿ ಲಂಗರು ಹಾಕಬೇಕೆಂದೂ ಆದೇಶಿಸಿದನು. ಇದರಲ್ಲಿ ೨೦ ಹಡಗುಗಳು ಸಮರ ನೌಕೆಗಳಾಗಿರಬೇಕು. ಇನ್ನೂ ೨೦ ನೌಕೆಗಳು ಫ್ರಿಗೇಟ್(Frigate) ಆಗಿರಬೇಕೆಂದು ಸೂಚಿಸಿದನು. ಜೊತೆಗೆ ೧೦ ಸಮರನೌಕೆ ಕಟ್ಟಲು ಯೋಜಿಸಿದನು. ಅದರಲ್ಲಿ ೧೦ ನೌಕೆಗಳಲ್ಲಿ ೭೦ ಬಂದೂಕುಗಳು ೧೦ ನೌಕೆಗಳಲ್ಲಿ ೬೨ ಬಂದೂಕುಗಳು, ಇರುವಂತೆ ಕಟ್ಟಬೇಕು, ಪ್ರತಿ ಫ್ರಿಗೇಟ್‌ನಲ್ಲಿ ೧೮೦ ಜನರಿರಬೇಕು,[೬೯] ಅಧಿಕಾರಿಗಳು ಮುಖ್ಯ ಕಚೇರಿಯಿಂದ ನಿರ್ದೇಶನ ಪಡೆಯಬೇಕು, ನೌಕೆಯಲ್ಲಿ ಗನ್‌ಮೆನ್‌ಗಳು, ಮಸ್ಕೈಟೀರ್‌ಗಳು ಹಾಗೂ ಟೆಂಪಾಡರ್ಸ್‌ಗಳು ಇರತಕ್ಕದ್ದು, ಸರ್ದಾರ್‌ಗಳು, ಸಹಾಯಕರೂ, ಪೈಲಟ್‌ಗಳು, ಸರ್ಜನ್‌ಗಳೂ ಇರತಕ್ಕದ್ದು, ಸಮರ ನೌಕೆಯ ಖರ್ಚು ತಿಂಗಳಿಗೆ ೯೦೫ ರೂಪಾಯಿಗಳು ಮಾತ್ರ ಇರತಕ್ಕದ್ದು. ಇದರಲ್ಲಿ ವಿವಿಧ ರೀತಿಯ ಸಂಬಳ ಪಡೆಯುವ ೩೪೬ ಮಂದಿ ಇರತಕ್ಕದ್ದು ಎಂಬುದಾಗಿ ಆದೇಶಿಸಿದನು.

೧೭೯೪ರಲ್ಲಿ ಟಿಪ್ಪು ತನ್ನ ಸಮರ ನೌಕೆ ಮುಖ್ಯಸ್ಥನನ್ನು ೮೦ ಗನ್‌ಗಳಿರುವ ೨೦ ನೌಕೆಗಳು ಹಾಗೂ ೩೫ ಗನ್‌ಗಳಿರುವ ೨೦ ಫ್ರಿಗೇಟ್‌ಗಳನ್ನು ಕೊಡುವಂತೆ ಕೇಳಿದ್ದನು. ಬಹುಶಃ ಈ ಬದಲಾವಣೆಗಳಿಗೆ ಕಾರಣ ಫ್ರಾನ್ಸಿನ ನುರಿತ ವ್ಯಕ್ತಿಗಳ ಸಲಹೆ ಎನ್ನುವುದು ತಿಳಿಯುತ್ತದೆ. ಈ ನೌಕೆ ಮತ್ತು ಫ್ರಿಗೇಟ್‌ಗಳ ಖರ್ಚು ವರ್ಷಕ್ಕೆ ೧,೮೨,೪೦೦ ಪೌಂಡ್ ಸರ್ಲಿಂಗ್‌ಗಳಷ್ಟು ಎಂದೂ ಲೆಕ್ಕಹಾಕಲಾಗಿತ್ತು.

ಟಿಪ್ಪು ನೌಕಾಬಲದ ಬಲವರ್ಧನೆಗೆ ಒತ್ತು ನೀಡಿದನು. ನೌಕಾಪಡೆಯ ಸಿಬ್ಬಂದಿಗೆ ತರಬೇತಿ ನೀಡುವ ಶಾಲೆಗಳನ್ನು ಸ್ಥಾಪಿಸಿದನು. ನೌಕಾ ಸಿಬ್ಬಂದಿಯನ್ನು ಶ್ರೀರಂಗಪಟ್ಟಣದಲ್ಲಿ ಸುಲ್ತಾನನಿಂದ ಪ್ರತಿಜ್ಞೆ ಸ್ವೀಕರಿಸಿ ಕರ್ತವ್ಯಗಳಿಗೆ ನೇಮಿಸಲಾಗುತ್ತಿತ್ತು. ವೈರಿ ಪಡೆಗಳ ಮೇಲೆ ಹೇಗೆ ಆಕ್ರಮಿಸಬೇಕೆಂದು ಸುಲ್ತಾನ ಸಭೆಯಲ್ಲಿ ಚರ್ಚಿಸಿ ನಂತರ ಆದೇಶ ಕೊಡುತ್ತಿದ್ದನು.[೭೦]

ಅಡಿಟಿಪ್ಪಣಿಗಳು

೧. ಗೌರಿಸುಂದರ್(ಸಂ), ಷೇಕ್ ಅಲಿ ಬಿ.(ಲೇ), ಟಿಪ್ಪು ಸುಲ್ತಾನ್ ಕನ್ನಡ ದ್ರೋಹಿಯೆ?, ಸುಂದರ ಪ್ರಕಾಶನ, ಬೆಂಗಳೂರು, ೨೦೦೬, ಪು.೧೯೧.

೨. ನಿಖಿಲೇಶ್ ಗುಹಾ, ಪ್ರಿ ಬ್ರಿಟಿಷ್ ಸಿಸ್ಟಮ್ ಆಫ್ ಸೌತ್ ಇಂಡಿಯಾ, ಕಲ್ಕತ್ತ, ೧೯೮೫, ಪು. ೧೭೫-೨೧೯.

೩. ಫ್ರಾನ್ಸಿಸ್ ಬುಕಾನನ್, ಎ ಜರ್ನಿ ಫ್ರಮ್ ಮೆಡ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್ ಕೆನರಾ ಆ್ಯಂಡ್ ಮಲಬಾರ್, ೧೮೦೦-೦೧, ಸಂಪುಟ ೧, ಪು.೭೦-೭೧, ಸಂಪುಟ ೨, ಪು.೮೨-೮೩, ೧೬೪.

೪. ಕರ್ನಾಟಕ ವಿಮೋಚನಾ ರಂಗ, ಹುತಾತ್ಮ ಟಿಪ್ಪು ಸುಲ್ತಾನ್, ಬೆಳ್ಳಿ ಚುಕ್ಕಿ ಬುಕ್ ಟ್ರಸ್ಟ್, ಬೆಂಗಳೂರು, ೧೯೯೯, ಪು.೨೬

೫. ಫ್ರಾನ್ಸಿಸ್ ಬುಕಾನನ್, ಪೂರ್ವೋಕ್ತ, ಪು.೧, ಪು.೨೦೨.

೬. ಶ್ರೀಧರನ್ ಎಂ.ಪಿ., ಟಿಪ್ಪೂಸ್ ಲೆಟರ್ಸ್ ಟು ಫ್ರೆಂಚ್ ಅಫೀಶಿಯಲ್ಸ್, ಪ್ರೊಸೀಡಿಂಗ್ಸ್ ಆಫ್ ದಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ೪೫ನೇ ಸೆಶನ್ಸ್, ೧೯೮೪, ಪು.೫೦೬

೭. ಕರ್ನಾಟಕ ವಿಮೋಚನಾ ರಂಗ, ಪೂರ್ವೋಕ್ತ, ಪು.೨೫.

೮. ಅದೇ, ಪು.೨೬-೨೭.

೯. ಕೋ.ಚನ್ನಬಸಪ್ಪ, ಅಪ್ರತಿಮ ದೇಶಭಕ್ತ ಟಿಪ್ಪು ಸುಲ್ತಾನ್, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೩, ಪು.೪೩.

೧೦. ಅದೇ, ಪು.೪೩.

೧೧. ಕರ್ನಾಟಕ ವಿಮೋಚನಾರಂಗ, ಪೂರ್ವೋಕ್ತ, ಪು.೨೭.

೧೨. ಕೋ.ಚನ್ನಬಸಪ್ಪ, ಪೂರ್ವೋಕ್ತ, ಪು.೪೪

೧೩. ಕರ್ನಾಟಕ ವಿಮೋಚನಾರಂಗ, ಪೂರ್ವೋಕ್ತ, ಪು.೨೭.

೧೪. ಅದೇ, ಪು.೩೩.

೧೫. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ, ಸಂಪುಟ ೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪು.೪೭೮-೪೭೯.

೧೬. ಏಷಿಯಾಟಿಕ್ ಆನ್ಯುಯಲ್ ರಿಜಿಸ್ಟರ್ ಫಾರ್, ಸಂಪುಟ ೧, ಸ್ಟೇಟ್ ಪೇಪರ್, ಪು.೯೭.

೧೭. ಮೂರ್, ಎಡ್ವರ್ಡ್, ಎ ನರೇಟಿವ್ಸ್ ಆಫ್ ದಿ ಆಪರೇಶನ್ಸ್ ಆಫ್ ಕ್ಯಾಪ್ಟನ್ ಲಿಟ್ಸ್ ಡಿಟ್ಯಾಚ್‌ಮೆಂಟ್ ಎಂಡ್ ಆಫ್ ದಿ ಮರಾಠ ಆರ್ಮಿ, ಕಮಾಂಡೆಡ್ ಬೈ ಪುರ್ಸೆರಾಮ್ ಭಾವೋ, ಡ್ಯೂರಿಂಗ್ ದಿ ಲೇಟ್ ಕಾನ್‌ಪಿಡರಸಿ ಇನ್ ಇಂಡಿಯಾ ಎಗೈಂಸ್ಸ್ ದಿ ನವಾಬ್ ಟಿಪ್ಪು ಸುಲ್ತಾನ್ ಬಹದ್ದೂರ್, ಲಂಡನ್ ೧೭೯೪, ಪು.೪೫.

೧೮. ಅಶೋಕ್ ಸೆನ್, ಪೂರ್ವೋಕ್ತ, ಪು.೯೭

೧೯. ಕಿರ್ಕ್‌ಪ್ಯಾಟ್ರಿಕ್, ಅನುಬಂಧ –ಇ, ಪತ್ರಸಂಖ್ಯೆ ೨೯೪, ಪು.೩೧೬.

೨೦. ಫ್ರಾನ್ಸಿಸ್ ಬುಕಾನನ್, ಸಂಪುಟ ೧, ಪು.೭೦.

೨೧. ರಾಜ್‌ಕುಮಾರ್, ನೇವೆಲ್ ಅಂಡ್ವೆಂಚರ್ಸ್ ಆಫ್ ಟಿಪ್ಪು ಸುಲ್ತಾನ್, ಬೆಂಗಳೂರು, ೧೯೯೩, ಪು.೧೫೬.

೨೨. ಕಿರ್ಕ್‌ಪ್ಯಾಟ್ರಿಕ್, ಪತ್ರಗಳು, ೧೫೫, ೧೫೯, ೩೭೫, ೧೮೬, ೪೧೮.

೨೩. ಫ್ರಾನ್ಸಿಸ್ ಬುಕಾನನ್, ಸಂಪುಟ ೧, ಪು.೨೨೨.

೨೪. ಕರ್ನಾಟಕ ವಿಮೋಚನಾ ರಂಗ, ಪೂರ್ವೋಕ್ತ, ಪು.೨೫.

೨೫. ಕಿರ್ಮಾನಿ, ಹಿಸ್ಟರಿ ಆಫ್ ಹೈದರ್‌ನಾಯ್ಕ, ಲಂಡನ್ ೧೮೪೨, ಪು.೨೮೬.

೨೬. ಫ್ರಾನ್ಸಿಸ್ ಬುಕಾನನ್, ಸಂಪುಟ ೨, ಪು.೨೩೯–೨೪೦.

೨೭. ಕರ್ನಾಟಕ ವಿಮೋಚನಾರಂಗ, ಪೂರ್ವೋಕ್ತ, ಪು.೩೩.

೨೮. ಅದೇ, ಪು.೩೪.

೨೯. ಅದೇ, ಪು.೩೪, ೩೫.

೩೦. ಅದೇ, ಪು.೩೫–೩೬.

೩೧. ಶ್ರೀಧರನ್, ಪುರ್ವೋಕ್ತ, ಪು.೫೦೫.

೩೨. ಏಶಿಯಾಟಿಕ್ ಆನ್ವಲ್ ರೆಜಿಸ್ಟರ್ ಫಾರ್, ೧೭೯೯, ಲಂಡನ್, ೧೮೦೧, ಪು.೯೭, ಅಶೋಕ್ ಸೇನ್, ಎ ಪ್ರಿ–ಬ್ರಿಟಿಷ್ ಎಕಾನೋಮಿಕ್ ಪಾರಮೇಶನ್ ಇನ್ ಇಂಡಿಯಾ ಆಪ್ ದಿ ಲೇಟ್ ಎಯಿಟೆಂತ್ ಸೆಂಚುರಿ, ಟಿಪ್ಪು ಸುಲ್ತಾನ್ಸ್ ಮೈಸೂರ್, ಇನ್ ಪರ್ಸ್‌ಫೆಕ್ಟಿವ್ಸ್ ಇನ್ ಸೋಶಿಯಲ್ ಸೈಯನ್ಸ್ ಸಂಪುಟ–೧, ಸಂಪಾದಕರು, ಬರುನ್ ಡೇ, ಕಲ್ಕತ್ತ, ೧೯೭೭, ಪು.೯೬

೩೩. ಷೇಕ್ ಅಲಿ ಬಿ, ಪೂರ್ವೋಕ್ತ, ಪು.೪೬೫.

೩೪. ಅದೇ, ಪು.೪೬೬.

೩೫. ಬಾರ್ಕೂರು ಉದಯ, ಪೂರ್ವೋಕ್ತ, ಪು.೮೫–೮೬.

೩೬. ಅದೇ, ಪು.೮೬.

೩೭. ಕೋ ಚನ್ನಬಸಪ್ಪ, ಅಪ್ರತಿಮ ದೇಶಭಕ್ತ, ಟಿಪ್ಪು ಸುಲ್ತಾನ್, ಪೂರ್ವೋಕ್ತ, ಪು.೪೪.

೩೮. ಶ್ರೀಧರನ್, ಪೂರ್ವೋಕ್ತ, ಪು.೫೦೪.

೩೯. ಕಿರ್ಕ್‌ಪ್ಯಾಟ್ರಿಕ್, ಸಿಲೆಕ್ಟ್ ಲೆಟರ್ಸ್ ಆಫ್ ಟಿಪ್ಪು ಸುಲ್ತಾನ್, ಲಂಡನ್, ೧೮೧೧, ನಿಖಿಲೇಶ್ ಗುಹಾ, ಪುರ್ವೋಕ್ತ, ಪು.೧೬೦–೧೭೪.

೪೦. ಮೊಹಿಬುಲ್ ಹಸನ್, ಟಿಪ್ಪು ಸುಲ್ತಾನನ ಇತಿಹಾಸ, ಕನ್ನಡ ಆವೃತ್ತಿ, ಮೈಸೂರು, ಪು.೫೦೯.

೪೧. ಅದೇ, ಪು.೫೦೯.

೪೨. ಷೇಕ್ ಅಲಿ ಬಿ., ಪೂರ್ವೋಕ್ತ, ಪು.೪೩೬–೪೮೭.

೪೩. ಅದೇ, ಪು.೪೭೨.

೪೪. ಅದೇ, ಪು.೪೭೩.

೪೫. ಅದೇ ಪು.೪೭೪.

೪೬. ಶ್ರೀಧರನ್ ಎಂ.ಪಿ., ಟಿಪ್ಪೂಸ್ ಲೆಟರ್ಸ್ ಟು ಫ್ರೆಂಚ್ ಅಫೀಶಿಯಲ್ಸ್, ಪ್ರೋಸಿಡಿಂಗ್ಸ್ ಆಫ್ ದಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ೪೫ ಸೆಶನ್ಸ್, ೧೯೮೪, ಪು.೫೦೬.

೪೭. ಫ್ರಾನ್ಸಿಸ್ ಬುಕಾನನ್, ಪೂರ್ವೋಕ್ತ, ಸಂಪುಟ ೧, ಪು.೭೦.

೪೮. ಬರುನ್ ಡೇ, ಏಶಿಯಾಟಿಕ್ ಆ್ಯನ್ವಲ್ ರಿಜಿಸ್ಟರ್ ಫಾರ್ ೧೭೯೯, ಲಂಡನ್, ೧೮೦೧, ಪೂರ್ವೋಕ್ತ, ಪು.೯೬.

೪೯. ಮೇಜರ್ ದಿ ರೋಮ್, ಎ ನರೇಟಿವ್ಸ್ ಆಫ್ ದಿ ಕ್ಯಾಂಪೈನ್ ಇನ್ ಇಂಡಿಯಾ, ವಿಚ್ ಟರ್ಮಿನೇಟ್ಸ್ ದಿ ವಾರ್ ವಿಥ್ ಟಿಪ್ಪು ಸುಲ್ತಾನ್ ಇನ್ ೧೭೯೨, ಎರಡನೆಯ ಆವೃತ್ತಿ, ೧೭೯೪, ಪು.೧೦೭.

೫೦. ಬಾರ್ಕೂರು ಉದಯ, ಪೂರ್ವೋಕ್ತ, ಪು.೮೬.

೫೧. ತಲಕಾಡು ಚಿಕ್ಕರಂಗೇಗೌಡ, ಟಿಪ್ಪು ಸುಲ್ತಾನ್, ಚಂದ್ರಗಿರಿ ಪ್ರಕಾಶನ, ಬೆಂಗಳೂರು, ೨೦೦೦, ಪು.೮೦–೮೧.

೫೨. ಅದೇ, ಪು.೮೧.

೫೩. ಶಿವರಾಮಯ್ಯ, ಟಿಪ್ಪು ಸುಲ್ತಾನ್, ಧಾತ್ರಿ ಪ್ರಕಾಶನ ಮಾಲೆ ೫೯, ಬೆಂಗಳೂರು ೨೦೧೧, ಪು.೧೨೪.

೫೪. ಕರ್ನಾಟಕ ವಿಮೋಚನಾ ರಂಗ, ಪೂರ್ವೋಕ್ತ, ಪು.೩೭.

೫೫. ಅದೇ, ಪು.೩೭.

೫೬. ತಲಕಾಡು ಚಿಕ್ಕರಂಗೇಗೌಡ, ಪೂರ್ವೋಕ್ತ, ಪು.೮೦–೮೧

೫೭. ಕರ್ನಾಟಕ ವಿಮೋಚನಾರಂಗ, ಪೂರ್ವೋಕ್ತ, ಪು.೩೭.

೫೮. ಅದೇ, ಪು.೩೮.

೫೯. ನಂಬಿಯಾರ್ ಓ.ಕೆ., ಮೈಸೂರು ನೇವಿ, ಬೆಂಗಳೂರು ಪ್ರೆಸ್, ಬೆಂಗಳೂರು, ೧೯೪೭, ಪು.೧.

೬೦. ಷೇಕ್‌ಅಲಿ ಬಿ., ಪೂರ್ವೋಕ್ತ, ಪು.೪೮೧–೪೮೨.

೬೧. ರಾಜ್‌ಕುಮಾರ್, ನೇವಲ್ ಅಡ್ವೆಂಚರ್ ಆಫ್ ಟಿಪ್ಪು ಸುಲ್ತಾನ್, ಬೆಂಗಳೂರು, ೧೯೯೩, ಪು.೧೫೬.

೬೨. ಮೇಜರ್ ಡಿರೋಮ್, ಪೂರ್ವೋಕ್ತ, ಪು.೧೦೭.

೬೩. ಬಾರ್ಕೂರು ಉದಯ, ಪೂರ್ವೋಕ್ತ, ಪು.೮೬.

೬೪. ರಾಜ್‌ಕುಮಾರ್, ಪೂರ್ವೋಕ್ತ, ಪು.೧೫೬.

೬೫. ನಂಬಿಯಾರ್ ಓ.ಕೆ., ಮೈಸೂರು ನೇವಿ, ಪೂರ್ವೋಕ್ತ, ಪು.೧–೨.

೬೬. ಅದೇ, ಪು.೧೨.

೬೭. ಅದೇ, ಪು.೧೩–೧೪.

೬೮. ಅದೇ, ಪು.೧೪.

೬೯. ಅದೇ, ಪು.೧೫.

೭೦. ಅದೇ, ಪು.೧೫–೧೬.

ಅಧ್ಯಾಯ ಆರು

ಟಿಪ್ಪು ಹೊರ ರಾಷ್ಟ್ರಗಳೊಂದಿಗಿನ ಸಂಪರ್ಕ

ಅಧ್ಯಾಯ ಆರು

ಟಿಪ್ಪು ಹೊರ ರಾಷ್ಟ್ರಗಳೊಂದಿಗಿನ ಸಂಪರ್ಕ

ಬ್ರಿಟಿಷರನ್ನು ಹೊರದೂಡುವ ಮಹತ್ವದ ಧ್ಯೇಯವನ್ನು ಹೊಂದಿದ್ದ ಟಿಪ್ಪು ತನ್ನ ಧ್ಯೇಯ ಸಾಧನೆಗಾಗಿ ಸ್ಥಳೀಯ ನಾಯಕರಾದ ಮರಾಠರು ಮತ್ತು ಹೈದರಾಬಾದಿನ ನಿಜಾಮರ ಬೆಂಬಲ ಕೋರಿದನು. ಆದರೆ ಬ್ರಿಟಿಷರ ರಾಜಕೀಯ ತಂತ್ರಗಾರಿಕೆಗೆ ಒಳಗಾಗಿದ್ದ ಈ ನಾಯಕರು ಟಿಪ್ಪು ವಿರುದ್ಧವೇ ಯುದ್ಧ ಮಾಡಿದ್ದು ಅವನಿಗೆ ನಿರಾಶೆ ಉಂಟುಮಾಡಿತ್ತು. ಬ್ರಿಟಿಷರನ್ನು ಎದುರಿಸಲು ಅವನು ಹೊರಜಗತ್ತಿನೊಂದಿಗೆ ಸಂಪರ್ಕ ಬೆಳೆಸಲು ಮುಂದಾದನು. ಫ್ರಾನ್ಸ್, ಟರ್ಕಿ, ಅಫ್ಘಾನಿಸ್ಥಾನ, ಇರಾನ್, ಪರ್ಶಿಯ ಮುಂತಾದ ವಿದೇಶಿ ಶಕ್ತಿಗಳ ಬೆಂಬಲ ಪಡೆಯಲು ಪ್ರಯತ್ನಿಸಿದನು. ಪ್ರಧಾನವಾಗಿ ಫ್ರೆಂಚರ ಸಂಪರ್ಕ ಹೊಂದಲು ಅವಣಿಸಿದನು. ಏಕೆಂದರೆ ಯುರೋಪ್ ಮತ್ತು ಭಾರತದಲ್ಲಿ ಫ್ರೆಂಚರು ಮತ್ತು ಬ್ರಿಟಿಷರು ಪರಸ್ಪರ ಕಾದಾಡುತ್ತಿದ್ದರು. ಇದರಿಂದ ಹೆಚ್ಚು ಲಾಭವಾಗಬಹುದೆಂಬ ದೃಷ್ಟಿಕೋನದಿಂದ ಟಿಪ್ಪು ಫ್ರೆಂಚರೊಡನೆ ಸ್ನೇಹಕ್ಕೆ ಮುಂದಾದನು. ಭಾರತದಲ್ಲಿ ಫ್ರೆಂಚ್ ಅಧಿಕಾರಿಗಳು ತನಗೆ ನೆರವಾಗಲು ನಿರಾಕರಿಸಿದರೆ ಫ್ರಾನ್ಸಿನ ಚಕ್ರವರ್ತಿಯನ್ನೆ ಸಂಪರ್ಕಿಸುವ ಯೋಜನೆ ಹೊಂದಿದ್ದನು. ಫ್ರೆಂಚರು ನಿರಾಶೆಗೊಳಿಸಿದರೆ ಏಷ್ಯಾದ ಇತರ ಶಕ್ತಿಗಳಾದ ಟರ್ಕಿ, ಇರಾನ್ ಮತ್ತು ಅಫ್ಘಾನಿಸ್ಥಾನಗಳೊಂದಿಗೆ ಸಂಪರ್ಕ ಹೊಂದುವ ಉದ್ದೇಶವಿತ್ತು. ಏಕೆಂದರೆ ಮಧ್ಯಕಾಲೀನ ಸಂದರ್ಭದಲ್ಲೇ ಆಫ್ಘಾನ್, ಟರ್ಕಿ ಮತ್ತು ಪರ್ಶಿಯನ್ ಸೈನ್ಯಗಳು ಭಾರತವನ್ನು ಪ್ರವೇಶಿಸಿ ಇಲ್ಲಿನ ರಾಜಕೀಯ ದಿಕ್ಕನ್ನೇ ಬದಲಾಯಿಸಿದವು. ಇದರ ಚಿತ್ರಣ ಟಿಪ್ಪುವಿನ ಮೇಲೆ ಪರಿಣಾಮ ಬೀರಿ ಈ ಶಕ್ತಿಗಳೊಂದಿಗೆ ಸಂಪರ್ಕ ಹೊಂದುವಂತೆ ಪ್ರೇರೇಪಿಸಿತು. ಇವರ ಸೈನಿಕ ನೆರವು ಪಡೆದರೆ ಬ್ರಿಟಿಷರನ್ನು ಮಣಿಸಬಹುದೆಂದು ಭಾವಿಸಿದನು.

ಹೈದರಾಲಿಯೂ ಎರಡು ಬಾರಿ ಪರ್ಶಿಯಾಕ್ಕೆ ರಾಯಬಾರಿಗಳನ್ನು ಕಳುಹಿಸಿದ್ದನು. ೧೭೭೦ರಲ್ಲಿ ಸಾವಿರ ಪರ್ಶಿಯನ್ ಸೈನ್ಯವನ್ನು ಷಿರಾಜಿನಿಂದ ಬರುವಂತೆ ಮಾಡಿಕೊಂಡಿದ್ದನು. ಆದರೆ ಟಿಪ್ಪುವಿನ ಪ್ರಯತ್ನಗಳು ಅಸಾಧಾರಣ. ಏಕೆಂದರೆ ಅವನು ಎಲ್ಲೆಲ್ಲಿ ಹೋದರೂ

ಬ್ರಿಟಿಷರ ಕಟುವಾದ ವಿರೋಧ ಎದುರಿಸಬೇಕಾಯಿತು. ಆದರೂ ಸ್ವಲ್ಪವೂ ಎದೆಗುಂದದೆ ಧೈರ್ಯವಾಗಿ ಮುನ್ನುಗ್ಗಿದನು. ಇದು ಟಿಪ್ಪುವಿನ ದೃಢ ಸಂಕಲ್ಪ ಮತ್ತು ಬ್ರಿಟಿಷರನ್ನು ಹೇಗಾದರೂ ಸರಿಯೇ ಹೊರದೂಡುವ ಪ್ರಯತ್ನವನ್ನು ಸೂಚಿಸುತ್ತದೆ.

ಟಿಪ್ಪುವಿನ ರಾಜತಾಂತ್ರಿಕ ಕೌಶಲ್ಯದ ಫಲವಾಗಿ ಅವನ ರಾಜ್ಯ ಮತ್ತು ಹೊರಜಗತ್ತಿಗೂ ಹೆಚ್ಚಿನ ಸಂಬಂಧ ಬೆಳೆಯಿತು. ಯುರೋಪಿಯನ್ನರು ರಾಜಕೀಯ ಹುನ್ನಾರಗಳನ್ನಿಟ್ಟುಕೊಂಡು ಮೇಲ್ಮಟ್ಟದ ಸೇನಾ ಕೌಶಲದೊಂದಿಗೆ ಭಾರತವನ್ನು ಪ್ರವೇಶಿಸಿದಾಗ ಇಲ್ಲಿನ ಸಾಂಪ್ರದಾಯಿಕ ರಾಜಕೀಯ ದೃಷ್ಟಿಯಲ್ಲಿ ಪರಿವರ್ತನೆ ಅಗತ್ಯವಾಯಿತು. ಭಾರತೀಯ ಅರಸರ ರಕ್ತಗತ ದೌರ್ಬಲ್ಯ ಹಾಗೂ ರಾಷ್ಟ್ರೀಯ ಗಂಡಾಂತರವು ಎದುರಾದಾಗಲೂ ಒಗ್ಗಟ್ಟಾಗಿ ಸೇರಲು ವಿಫಲರಾಗುವ ಅವರ ಪರಿಸ್ಥಿತಿ ಇವು ಹೊರಗಿನ ಶಕ್ತಿಗಳ ನೆರವನ್ನು ಕೋರಲು ಟಿಪ್ಪುವನ್ನು ಪ್ರಚೋದಿಸಿದವು.

ವಿದೇಶಿ ಸಂಪರ್ಕಗಳಿಂದ ರಾಜಕೀಯ ಫಲಗಳು ದೊರಕಲಿಲ್ಲವಾದರೂ ಕೊನೆಪಕ್ಷ ರಾಜ್ಯದ ವ್ಯಾಪಾರ–ವಾಣಿಜ್ಯ, ಕೈಗಾರಿಕೆಗಳನ್ನು ಬೆಳೆಸಲು ಸಹಾಯಕವಾಗುತ್ತಿದ್ದಿತು. ರಾಜ್ಯವು ನೈಸರ್ಗಿಕ ಬಂದರುಗಳಿಂದ ಕೂಡಿತ್ತು. ಇಲ್ಲಿ ದೊರೆಯುತ್ತಿದ್ದ ಮೆಣಸು, ಏಲಕ್ಕಿ, ಶ್ರೀಗಂಧ, ದಂತ, ರೇಷ್ಮೆ, ತಂಬಾಕುಗಳಿಗೆ ವಿದೇಶಗಳಲ್ಲಿ ಬಾರಿ ಬೇಡಿಕೆಯಿದ್ದಿತು. ಆರ್ಥಿಕ ವಲಯದಲ್ಲೂ ಮೂಲಭೂತ ಬದಲಾವಣೆಗಳನ್ನು ಮಾಡುವುದರಲ್ಲಿ ಟಿಪ್ಪು ಆಸಕ್ತನಾಗಿದ್ದನು. ಇತರೆ ದೇಶಗಳೊಡನೆ ಸಂಪರ್ಕ ಬೆಳೆಸಿದ್ದರಲ್ಲಿ ಅವನ ಉದ್ದೇಶ ಶುದ್ಧಾಂಗವಾಗಿ ವಾಣಿಜ್ಯವಾಗಿತ್ತು ಎಂದೂ ಹೇಳಲು ಸಾಧ್ಯವಿಲ್ಲ. ಅಮ್ಮಾನ್, ಟರ್ಕಿ, ಪರ್ಶಿಯಾ, ಅಫ್ಘಾನಿಸ್ಥಾನ, ಇತ್ಯಾದಿ ಏಷ್ಯಾ ದೇಶಗಳೊಂದಿಗೆ ನಿಕಟ ಸಂಪರ್ಕದಿಂದ ದೊರಕುವ ಆಪಾರವಾದ ರಾಜಕೀಯ, ಆರ್ಥಿಕ ಮತ್ತು ಮಿಲಿಟರಿ ಅನುಕೂಲಗಳ ಸ್ಪಷ್ಟವಾದ ಗ್ರಹಿಕೆ ಟಿಪ್ಪುವಿಗಿತ್ತು. ಯುರೋಪ್ ಹಾಗೂ ಅಟ್ಲಾಂಟಿಕ್ ಸಾಗರವೇ ವಿಶ್ವವ್ಯಾಪಾರ ವಾಣಿಜ್ಯದ ಗುರುತ್ವ ಬಿಂದುವಾದರೂ ಹದಿನೆಂಟನೇ ಶತಮಾನದಲ್ಲಿ ರಾಜಕೀಯ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಪಶ್ಚಿಮ ಏಷ್ಯಾವು ಮಹತ್ವದ ಕೇಂದ್ರವಾಗಿತ್ತು. ಇದರಿಂದ ಟಿಪ್ಪು ಏಷ್ಯಾದ ಆ ವಲಯಗಳೊಂದಿಗೆ ಸಂಪರ್ಕ ಹೊಂದಲು ವಿಶೇಷ ಗಮನಹರಿಸಿದನು.

ಕೊಲ್ಲಿ ಪ್ರದೇಶದಲ್ಲಿ ಆಗುತ್ತಿದ್ದ ರಾಜಕೀಯ ಮತ್ತು ಆರ್ಥಿಕ ಪರಿವರ್ತನೆಗಳು ಟಿಪ್ಪುವನ್ನು ತನ್ನತ್ತ ಸೆಳೆದವು. ಆ ಭಾಗದ ಆದಿವಾಸಿ ಮುಖ್ಯಸ್ಥರೆಲ್ಲ ಒಗ್ಗೂಡಿ ಯುರೋಪಿಯನ್ ರಾಜಕೀಯ ಮತ್ತು ಆರ್ಥಿಕ ಪ್ರಭುತ್ವಕ್ಕೆ ಪ್ರಬಲವಾದ ಪ್ರತಿರೋಧ ತೋರಿದ್ದರು. ಇದರಿಂದ ಆ ಪ್ರದೇಶಗಳಲ್ಲಿ ಕೆಲವು ಮಹತ್ವದ ಬದಲಾವಣೆಗಳಾದವು. ಅವೆಂದರೆ ಪ್ರಾದೇಶಿಕ ವಾಣಿಜ್ಯ ಕೇಂದ್ರವಾಗಿ ಮಸ್ಕತ್ ಪ್ರವರ್ಧಮಾನಕ್ಕೆ ಬಂದಿತು. ಹಥಾರ್‌ಮೌತ್ ಹಾಗೂ ಹೆಡನ್‌ಗಳನ್ನು ಜೈದಿಯೆಮೆನ್‌ನಿಂದ ಪ್ರತ್ಯೇಕಿಸಲಾಯಿತು. ಪರ್ಶಿಯಾವನ್ನು ಒಗ್ಗೂಡಿಸಲು ನಾದಿರ್‌ಷಾ ಪ್ರಯತ್ನಿಸಿದನು. ಬಾರಿ

ವ್ಯಾಪಾರ ಕೇಂದ್ರವಾಗಿ ಕುವೈತ್ ಸ್ಥಾಪನೆಗೊಂಡಿತು. ಸೌದಿಗಳ ನೇತೃತ್ವದಲ್ಲಿ ವಹಾಭಿ ಚಳುವಳಿ ಉದಯಿಸಿತು. ಈ ಮಹತ್ವದ ಬೆಳವಣಿಗೆಗಳು ಟಿಪ್ಪು ಈ ಪ್ರದೇಶಗಳೊಂದಿಗೆ ವಾಣಿಜ್ಯ ಸಂಪರ್ಕ ಹೊಂದುವಂತೆ ಪ್ರೇರೇಪಿಸಿದವು. ಈ ಪ್ರದೇಶಗಳ ಅರಸ ಟರ್ಕಿ ಸುಲ್ತಾನನೊಂದಿಗೆ ಸಂಬಂಧ ಬೆಳೆಸಿದನು. ಏಕೆಂದರೆ ಈ ಪ್ರದೇಶಗಳಲ್ಲಿ ಬ್ರಿಟಿಷರು ತಮ್ಮ ವ್ಯಾಪಾರ ಏಕಸ್ವಾಮ್ಯ ಹೊಂದಲು ಪ್ರಯತ್ನಿಸುತ್ತಿದ್ದರು. ಇದರಿಂದ ಟಿಪ್ಪು ಆಟೋಮನ್ ಸಾಮ್ರಾಜ್ಯ, ಚೈನಾ, ಫೆಗು, ಅರ್ಮೇನಿಯಾ, ಜಿದ್ದಾ, ಅರ್ಮೇಜ್, ಇರಾನ್ ಇತ್ಯಾದಿ ದೇಶಗಳೊಂದಿಗೆ ಸಂಪರ್ಕ ಬೆಳೆಸಿದನು.

೬.೧. ಟಿಪ್ಪು ಮತ್ತು ಫ್ರಾನ್ಸ್ ನಡುವಿನ ಸಂಬಂಧ

ಹದಿನೆಂಟನೆಯ ಶತಮಾನದಲ್ಲಿ ಫ್ರಾನ್ಸ್ ದೇಶವು ಮೈಸೂರು ರಾಜ್ಯದ ಸಹಜ ಮಿತ್ರ ದೇಶವಾಗಿತ್ತು. ೧೭೫೨ರಲ್ಲಿ ಮಹಮದ್ ಅಲಿ ತಿರುಚನಾಪಳ್ಳಿ ವಿಷಯದಲ್ಲಿ ಮೋಸ ಮಾಡಿದ ಮೇಲೆ ಮೈಸೂರಿಗೂ ಮತ್ತು ಫ್ರೆಂಚರಿಗೂ ನಡುವೆ ರಾಜಕೀಯವಾಗಿ ಬೇರ್ಪಡಿಸಲಾಗದ ಸಂಪರ್ಕ ಏರ್ಪಟ್ಟಿತು. ಹೈದರ್ ಮತ್ತು ಟಿಪ್ಪು ಇಬ್ಬರು ಫ್ರೆಂಚರನ್ನು ತಮ್ಮ ಅತ್ಯಂತ ಆಪ್ತ ಗೆಳೆಯರಂತೆ ಪರಿಗಣಿಸಿದರು. ಅವರು ಪರಸ್ಪರ ಆಕರ್ಷಿತರಾಗಲು ಮುಖ್ಯ ಕಾರಣ ಇಬ್ಬರ ನಡುವೆ ಒಂದು ಸಮಾನವಾದ, ಬಲವಾದ ಮನೋಧರ್ಮ ಅದು ಬ್ರಿಟಿಷರ ವಿರುದ್ಧ ಇಬ್ಬರಿಗೂ ಇದ್ದ ವೈಮನಸ್ಸು. ಈ ರೀತಿಯ ಉದ್ದೇಶ ಸಮಾನತೆಯ ಮೈಸೂರು ಮತ್ತು ಫ್ರಾನ್ಸ್‌ನ್ನೂ ಪರಸ್ಪರ ಸಮೀಪಿಸಿತು. ತಮ್ಮ ಶತ್ರುವನ್ನು ಸದೆಬಡಿಯಲು ತಮ್ಮ ಮಿತ್ರನು ಉಪಯುಕ್ತ ಹಾಗೂ ಪರಿಣಾಮಕಾರಿ ಸಾಧನವಾಗುತ್ತಾನೆ ಎಂದು ಪರಿಗಣಿಸಿದ್ದರು. ಟಿಪ್ಪುವಿಗೆ ಮೊದಲ ಎರಡು ಯುದ್ಧಗಳಲ್ಲಿ ಫ್ರೆಂಚರ ನಡವಳಿಕೆಯಿಂದ ನಿರಾಶೆಯಾದರೂ ಅವರ ಸ್ನೇಹ ಉಳಿಸಿಕೊಂಡಿದ್ದನು. ಏಕೆಂದರೆ ಫ್ರೆಂಚರು ಅಮೆರಿಕನ್ನರಿಗೆ ಅವರ ಸ್ವಾತಂತ್ರ್ಯ ಹೋರಾಟಕ್ಕೆ ಸಹಾಯ ಮಾಡಿದ್ದರು. ಅದರಂತೆ ಟಿಪ್ಪು ಬ್ರಿಟಿಷರನ್ನು ಭಾರತದಿಂದ ಹೊರಗಟ್ಟಲು ಫ್ರೆಂಚರು ನೆರವು ನೀಡುವರೆಂದು ತಿಳಿದಿದ್ದನು. ಆದರೆ ಫ್ರೆಂಚರು ಭಾರತದಲ್ಲಿ ಸರಿಯಾದ ನಿರ್ದೇಶನವಿಲ್ಲದ, ಅಸಂಬದ್ಧವೆನಿಸುವ ನೀತಿಯನ್ನು ಪ್ರದರ್ಶಿಸಿದರು.

ಎರಡನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಫ್ರೆಂಚರ ನಡೆಯು ಟಿಪ್ಪುವಿಗೆ ಸಂತೋಷ ತರಲಿಲ್ಲ. ತನ್ನನ್ನು ಸಲಹೆ ಕೇಳದೆಯೇ ಬ್ರಿಟಿಷರೊಂದಿಗೆ ಫ್ರೆಂಚರು ಮೈತ್ರಿ ಮಾಡಿಕೊಂಡಿದ್ದು ಟಿಪ್ಪುವಿಗೆ ಬಾರಿ ಆಘಾತವಾಯಿತು. ಈಗ ಅವರು ಸ್ವಹಿತಾಸಕ್ತಿ ನೀತಿ ಅನುಸರಿಸಿ ಕರ್ನಾಟಕದ ಕುರಿತ ವಿವಾದದಲ್ಲಿ ಬ್ರಿಟಿಷರು ಮತ್ತು ಟಿಪ್ಪು ನಡುವೆ ಮಧ್ಯಸ್ಥಗಾರರಾಗಿರುವಂತೆ ತೋರಿಸಿಕೊಂಡು ತಾವು ಒಂದು ಸುರಕ್ಷಿತ ನೆಲೆಯನ್ನು ಪಡೆದುಕೊಳ್ಳಲು ಫ್ರೆಂಚರು ಬಯಸಿದರು. ಯುದ್ಧದಿಂದ ಗಳಿಸಲಾರದೆ ಹೋದುದನ್ನು ರಾಜಕಾರಣದಿಂದ ಗಳಿಸಲು ಪ್ರಯತ್ನಿಸಿದರು. ಆದರೆ ಕೊನೆಗೆ

ತಮ್ಮ ಏಕೈಕ ನಿಷ್ಠಾವಂತನೂ, ಬಲಿಷ್ಠ ಮಿತ್ರನೂ ಆದ ಟಿಪ್ಪುವಿಗೆ ಅಸಮಧಾನ ಉಂಟು ಮಾಡಿದರು. ಹೈದರನೂ, ಟಿಪ್ಪುವೂ ಅವರಿಗೆ ವಿಶೇಷ ಸವಲತ್ತುಗಳನ್ನು ನೀಡಿದ್ದರು. ಮರಾಠರೊಂದಿಗೆ ಯುದ್ಧವು ಪ್ರಾರಂಭವಾದಾಗ ಟಿಪ್ಪು ತನಗೆ ಫ್ರೆಂಚರು ನೆರವು ನೀಡುತ್ತಾರೆಂದು ನಿರೀಕ್ಷಿಸಿದ್ದನು. ಬ್ರಿಟಿಷರು ರಹಸ್ಯವಾಗಿ ಮರಾಠರಿಗೆ ಬೆಂಬಲದ ಭರವಸೆ ಕೊಟ್ಟಿದ್ದರು. ಈ ಸಂದರ್ಭದಲ್ಲೂ ಫ್ರೆಂಚರು ಟಿಪ್ಪುವನ್ನು ಕೈಬಿಟ್ಟರು. ತಟಸ್ಥ ನೀತಿ ಅನುಸರಿಸಿದರು. ಅದನ್ನು ಟಿಪ್ಪು ಖಚಿತವಾಗಿ ತನ್ನನ್ನು ಕುರಿತ ಹಗೆಯೆಂದೇ ಅರ್ಥ ಕಲ್ಪಿಸಿದನು. ಫ್ರೆಂಚರು ಇನ್ನೂ ಹೆಜ್ಜೆ ಮುಂದೆ ಹೋಗಿ ಮರಾಠರನ್ನು ಸೇರಿಕೊಳ್ಳಲು ಪ್ರಯತ್ನಿಸಿದರು.

ಫ್ರೆಂಚರ ವರ್ತನೆ ವಿಚಿತ್ರವಾಗಿತ್ತು. ಮಂಗಳೂರು ಒಪ್ಪಂದವಾದ ಮೇಲೆ ಭಾರತೀಯ ಅರಸರ ನಡುವೆ ಶಾಂತಿಯನ್ನು ಮೂಡಿಸಲು ಅವರು ಪ್ರಯತ್ನಿಸಿದರು. ಬುಸ್ಸಿಯ ಫ್ರೆಂಚ್ ಮಂತ್ರಿಯಾದ ಮಾರ್ಷೆಲ್ ಕ್ಯಾಸ್ಟ್ರೀಸ್‌ಗೆ ಪತ್ರ ಬರೆದು ತಾನು ಮುಖ್ಯರಾದ ಮೂವರು ಭಾರತೀಯ ಶಕ್ತಿಗಳನ್ನು ಒಂದುಗೂಡಿಸಲು ತನ್ನಿಂದ ಸಾಧ್ಯವಿರುವ ಎಲ್ಲ ಪ್ರಯತ್ನ ಮಾಡಿರುವುದಾಗಿ ತಿಳಿಸಿದನು. ವಾಸ್ತವವಾಗಿ ಮರಾಠರು ಮತ್ತು ನಿಜಾಮ ಇವರೇ ಟಿಪ್ಪುವಿನ ವಿರೋಧಿಗಳಾಗಿರುವುದಾಗಿಯೂ ಪ್ರಸ್ತಾಪಿಸಿದ್ದನು. ಫ್ರೆಂಚ್ ನೀತಿಯು ತಟಸ್ಥದ ಕಡೆಗೆ ಬಾಗಿದರೂ ಟಿಪ್ಪುವಿನ ಕಡೆಗೆ ಇನ್ನೂ ಒಲವು ಹೊಂದಿದ್ದರು. ಭಾರತದಲ್ಲಿ ಫ್ರೆಂಚರಿಗೆ ತಮ್ಮದೇ ಭದ್ರ ನೆಲೆಯಿರಲಿಲ್ಲ. ಯುರೋಪ್ ಮತ್ತು ಭಾರತಗಳಲ್ಲಿ ಅವರಿಗೆ ಒದಗಿದ ಸ್ಥಿತ್ಯಂತರದಿಂದ ಭಾರತದ ರಾಜಕಾರಣದಲ್ಲಿ ಯಾವುದೇ ಪರಿಣಾಮಕಾರಿ ಪಾತ್ರವಹಿಸಲು ಫ್ರೆಂಚರಿಗೆ ಕಷ್ಟವಾಯಿತು. ಈಗ ಅವರಿಗಿದ್ದ ಮುಖ್ಯವಾದ ಗುರಿಯು ಬ್ರಿಟಿಷರು ಭಾರತದಲ್ಲಿ ಇನ್ನಷ್ಟು ಗಟ್ಟಿಗೊಳ್ಳದಂತೆ ತಡೆಯುವುದೇ ಆಗಿತ್ತು.

ಭಾರತೀಯ ಅರಸರ ನಡುವೆ ಹೊಂದಾಣಿಕೆ ಮೂಡಿಸಲು ಬುಸ್ಸಿ ಬಹಳ ಪ್ರಯತ್ನಿಸಿದನು.[೧] ಫ್ರೆಂಚ್ ಗೌರ್ನರ್ ಮೈಕೋಮ್ಡಿ ಸೋಲಾಯಿಕ್ ಕೂಡ ನಾನಾ ಫಡ್ನವೀಸನಿಗೆ ಪತ್ರ ಬರೆದನು. ದೇಶದ ರಾಜರುಗಳ ನಡುವೆ ಇರುವ ಅನೈಕ್ಯಮತ್ಯ ಒಂದು ದಿನ ಬ್ರಿಟಿಷರು ಪೂರ್ಣ ಲಾಭ ಮಾಡಿಕೊಳ್ಳುತ್ತಾರೆ.[೨] ಮೂರು ಶಕ್ತಿಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ಒಂದಾಗಬೇಕೆಂದು ಒತ್ತಾಯಪಡಿಸಿದನು. ಪಾಂಡಿಚೇರಿ ಗೌರ್ನರ್ ಕೂಡ ಟಿಪ್ಪುವಿನೊಂದಿಗೆ ಸಂಬಂಧ ಕಡಿದುಕೊಳ್ಳಬಾರದು ಎಂದು ಪೇಶ್ವೆಗೆ ಒತ್ತಾಯಿಸಿದ. ನಾನಾ ಫಡ್ನವೀಸ್ ಟಿಪ್ಪು ವಿರುದ್ಧವಾಗಿ ಬ್ರಿಟಿಷರ ನೆರವು ಪಡೆಯಲು ಪ್ರತ್ನಿಸಿದಾಗ ಕೊಸಿಗ್ನಿ ಸ್ಪಷ್ಟವಾಗಿ ಫ್ರೆಂಚರು ನಿಷ್ಕ್ರಿಯರಾಗಿ ಕುಳಿತುಕೊಳ್ಳುವುದಿಲ್ಲ 'ಟಿಪ್ಪು ಆಕ್ರಮಣ ಮಾಡಿದ್ದಾನೆ ಎಂಬುದು ನಾನು ಖಂಡಿತವಾಗಿ

ಭಾವಿಸುವುದಿಲ್ಲ ಎಂದು ಅಭಿಪ್ರಾಯಪಟ್ಟನು. ಟಿಪ್ಪು ಫ್ರೆಂಚರ ಮಧ್ಯಸ್ಥಿಕೆಯನ್ನು ಒಪ್ಪಿಕೊಂಡು ಮರಾಠರೊಂದಿಗೆ ಸಂಧಿ ಮಾಡಿಕೊಳ್ಳಲು ಒಲವು ತೋರಿದನು.[೪]

ಆರಂಭದಲ್ಲಿ ಫ್ರೆಂಚರು ಟಿಪ್ಪುವಿನ ಪರವಾಗಿಯೇ ಇರುವಂತೆ ತೋರಿದರು. ಆದರೆ ವಾಸ್ತವವಾಗಿ ಯುದ್ಧವು ಕೈಗಟ್ಟಿದಾಗ ಅವರು ದಿಢೀರನೆ ತಮ್ಮ ನಿಲುವು ಬದಲಿಸಿದರು. ಟಿಪ್ಪುವಿಗೆ ತೀರಾ ಅಗತ್ಯವಾಗಿದ್ದ ಸಮಯದಲ್ಲಿ ನೆರವು ನೀಡುವುದಕ್ಕೆ ಬದಲಾಗಿ ಅವರು ಮರಾಠರು ಬ್ರಿಟಿಷರ ಸಹಾಯ ಪಡೆಯುವುದನ್ನು ತಡೆಯಲು ಏನೆಲ್ಲ ಪ್ರಯತ್ನಿಸಿದರು. ಪ್ಯಾರಿಸ್ ಒಪ್ಪಂದದ ಹದಿನಾರನೆಯ ಅನುಚ್ಛೇದ ಉಲ್ಲೇಖಿಸಿ ಫ್ರೆಂಚರು ಭಾರತೀಯ ಅರಸರು ಪರಸ್ಪರ ಯುದ್ಧದಲ್ಲಿ ತೊಡಗಿದಾಗ ಫ್ರೆಂಚರಾಗಲಿ, ಬ್ರಿಟಿಷರಾಗಲಿ ಯಾರಿಗೂ ನೆರವು ನೀಡುವಂತಿಲ್ಲ ಎಂದು ಹೇಳಿದರು.[೫]

ಭಾರತೀಯ ಶಕ್ತಿಗಳ ನಡುವೆ ಹೊಂದಾಣಿಕೆ ಮೂಡಿಸಲು ಫ್ರೆಂಚರು ವಿಫಲರಾದರು. ಮನವೊಲಿಕೆಯ ಪತ್ರಗಳನ್ನು ಮರಾಠರಿಗೆ ಬರೆಯುತ್ತಾ ಅವರ ಒಲವು ಗಳಿಸಲು ಪ್ರಯತ್ನಿಸಿದರು. ಫ್ರೆಂಚರ ಅಸಂಗತ ವರ್ತನೆಯೂ, ಸಮಯ ಸಾಧಕವೂ ತಮ್ಮ ಪರಂಪರಾಗತ ಮಿತ್ರನ ಹಿತವನ್ನು ಬಲಿಕೊಟ್ಟಾಗ ಚೆನ್ನಾಗಿಯೇ ವ್ಯಕ್ತವಾಯಿತು. ಮಾರ್ಷೆಲ್ ಕ್ಯಾಸ್ಟ್ರೀಸನಿಗೆ ಟಿಪ್ಪುವು ಫ್ರೆಂಚರಿಗೆ ಅಷ್ಟೊಂದು ಸಹಾಯಕವಾಗಲಾರ ಎಂದು ತೋರಿತು. ಅವನು ಬರೆದ ಪತ್ರದಲ್ಲಿ ನಮಗೆ ದೊರೆತಿರುವ ವರದಿಗಳ ಪ್ರಕಾರ ಹೈದರಾಲಿ ಖಾನನ ಮಗನು ತನ್ನ ತಂದೆಯ ಶಕ್ತಿ ಸಾಮರ್ಥ್ಯಗಳನ್ನೆ ಉಳಿಸಿಕೊಂಡಿದ್ದಾನೆ ಎಂದು ನಾವು ಭಾವಿಸಲು ಆಸ್ಪದ ಕೊಡುವುದಿಲ್ಲ. ಟಿಪ್ಪು ತಂದೆಯ ಹಗೆತನ ಮಾತ್ರ ಉಳಿಸಿಕೊಂಡಿದ್ದಾನೆ. ಅವನ ಅಧಿಕಾರ ಹೊಸದು. ಆದರೆ ಮರಾಠರು ಹೆಚ್ಚು ಬಲಶಾಲಿಗಳು. ಭಾರತದಲ್ಲಿ ಒಂದು ಕ್ರಾಂತಿಯನ್ನೇ ಉಂಟುಮಾಡಲು ತಕ್ಕವರಾಗಿದ್ದಾರೆ.[೬] ಹೀಗೆ ಫ್ರೆಂಚರು ಟಿಪ್ಪುವಿಗಿಂತ ವಿಶಾಲ ಮರಾಠ ಸಾಮ್ರಾಜ್ಯದಿಂದ ಪ್ರಭಾವಿತರಾದರು. ಭಾರತೀಯ ಪರಿಸ್ಥಿತಿಯ ಬಗೆಗ ಅವರಿಗಿದ್ದ ಗ್ರಹಿಕೆ ಅಲ್ಪದೃಷ್ಟಿಯದಾಗಿತ್ತು.

ಫ್ರೆಂಚರ ನೀತಿಯು ದೋಷಯುಕ್ತವಾಗಿತ್ತು. ಅವರು ಟಿಪ್ಪುವನ್ನೂ ಸಂತೋಷಪಡಿಸಲಿಲ್ಲ, ನಾನಾ ಪಡ್ನವೀಸನಿಗೂ ಸಂತೋಷಕೊಡಲಿಲ್ಲ. ಬ್ರಿಟಿಷರ ನೆರವು ಪಡೆಯಬೇಕೆಂಬ ಆಸೆಯಿದ್ದ ನಾನಾಪಡ್ನವೀಸ್ ಫ್ರೆಂಚರ ಸ್ನೇಹವನ್ನು ಪ್ರೋತ್ಸಾಹಿಸಲಿಲ್ಲ.[೭] ಅವರಿಗೆ ಮೈತ್ರಿಯ ಹುಸಿ ಭರವಸೆಗಳನ್ನು ನೀಡುತ್ತಾ ಅವರನ್ನು ಟಿಪ್ಪುವಿನಿಂದ ಅಗಲಿಸಿದನು. ಫ್ರೆಂಚರ ವರ್ತನೆಯಿಂದ ಟಿಪ್ಪುವಿಗೆ ಬೇಸರ ಮತ್ತು ನಿರಾಶೆಯಾಯಿತು.[೮] ನಾನಾಫಡ್ನವೀಸ್ ಫ್ರೆಂಚರ ಪ್ರಾಮಾಣಿಕತೆಯನ್ನು ಸಂದೇಹಿಸಿದನು. ಅವರಿಗೂ ಮತ್ತು ಟಿಪ್ಪು ನಡುವೆ ರಹಸ್ಯ ಒಪ್ಪಂದವಾಗಿರಬಹುದು ಎಂದು

ಅನುಮಾನಿಸಿದನು. ಬ್ರಿಟಿಷರ ನೆರವು ಹೆಚ್ಚು ಪರಿಣಾಮಕಾರಿ ಮತ್ತು ವಿಶ್ವಾಸಾರ್ಹ ಎಂದು ಪರಿಗಣಿಸಿದನು.

ಫ್ರೆಂಚರ ಈ ದೋಷಯುಕ್ತ ನೀತಿಗೆ ಕಾರಣ ಭಾರತದಲ್ಲಿದ್ದ ಫ್ರೆಂಚ್ ಅಧಿಕಾರಿಗಳ ತಪ್ಪು ಲೆಕ್ಕಾಚಾರ. ಯುರೋಪಿನಲ್ಲಿರುವ ಅವರ ಸರ್ವೋನ್ನತ ಅಧಿಕಾರಿಯನ್ನು ಸಂಪರ್ಕಿಸುವುದರಿಂದ ಫ್ರೆಂಚರ ನೆರವನ್ನು ಗಟ್ಟಿಗೊಳಿಸಬಹುದು ಎಂದು ಟಿಪ್ಪು ಆಲೋಚಿಸಿದ. ಆದರಿಂದ ಹದಿನಾರನೆ ಲೂಯಿಯ ಬಳಿಗೆ ಒಂದು ರಾಯಬಾರ ನಿಯೋಗ ಕಳುಹಿಸಲು ನಿರ್ಧರಿಸಿದ.[೧೦] ಪ್ಯಾರಿಸ್ಸಿಗೆ ರಾಯಬಾರ ನಿಯೋಗವೊಂದನ್ನು ಕಳುಹಿಸಲು ಟಿಪ್ಪುವಿಗೆ ಹೆಚ್ಚು ಉತ್ಸುಕತೆ ಮೂಡಲು ಕಾರಣ ಪಾಂಡಿಚೆರಿಯಲ್ಲಿ ನೆಲೆಸಿದ್ದ ಪಿವೆರಾನ್ ಮೈಸೂರಿನ ಬಗೆಗೆ ವಿಶ್ವಾಸ ಹೊಂದಿದ್ದನು. ಫ್ರಾನ್ಸ್ ದೇಶವು ಅಮೆರಿಕದಲ್ಲಿ ಮಾಡಿದಂತೆಯೇ ಭಾರತದಲ್ಲಿ ಬ್ರಿಟಿಷರನ್ನು ದಮನ ಮಾಡಲು ಇಚ್ಛಿಸುತ್ತದೆ ಎಂದೂ ಆ ಉದ್ದೇಶಕ್ಕಾಗಿ ಟಿಪ್ಪುವಿನೊಂದಿಗೆ ಒಂದು ಮೈತ್ರಿ ಒಪ್ಪಂದ ಮಾಡಿ ಕೊಳ್ಳುವುದು ಉಪಯುಕ್ತ ಎಂದು ಹೇಳಿ ಟಿಪ್ಪುವಿನ ಆಸೆಯನ್ನು ಹೆಚ್ಚಿಸಿದನು. ಕೊನೆಗೆ ಟಿಪ್ಪುವಿನ ಬಳಿಗೆ ಮೊನೆರಾನ್ ಎಂಬ ಏಜೆಂಟನನ್ನು ೧೭೮೬ ಜುಲೈನಲ್ಲಿ ಕಳುಹಿಸಿದನು. ಮೈಸೂರಿನಲ್ಲಿ ವ್ಯಾಪಾರ ಸ್ವಾಮ್ಯವನ್ನು ಪಡೆದುಕೊಳ್ಳುವುದು ಅದರ ಉದ್ದೇಶವಾಗಿತ್ತು. ಮೊನೆರಾನ್ ಟಿಪ್ಪುವಿನ ಜೊತೆ ಹಲವು ದಿನಗಳ ಮಾತುಕತೆ ನಡೆಸಿದನು. ಈ ಮಾತುಕತೆಗಳಿಂದ ಟಿಪ್ಪುವಿಗೆ ಪಾಂಡಿಚೆರಿಯಲ್ಲಿ ಫ್ರೆಂಚರ ಸುಮಾರು ೪೦೦೦ ಸೇನಾಬಲವಿರುವುದಾಗಿಯೂ, ಫ್ರಾನ್ಸ್‌ನಲ್ಲಿನ ದ್ವೀಪದಲ್ಲಿ ಅದಕ್ಕಿಂತ ದೊಡ್ಡ ಸೈನ್ಯವಿರುವುದಾಗಿ ಯುದ್ಧದ ಮೊದಲ ಸೂಚನೆ ದೊರೆತ ತಕ್ಷಣ ಆ ಸೇನೆಯನ್ನು ಫ್ರೆಂಚರು ಭಾರತಕ್ಕೆ ಕಳಿಸಲು ಸಾಧ್ಯವಿರುವುದಾಗಿಯೂ ಭಾವನೆ ಬಂದಿತು. ಫ್ರಾನ್ಸ್ ತನಗೆ ನೆರವು ಕೊಡಲು ಸಮರ್ಥವಾಗಿದೆ, ಸ್ವಲ್ಪ ಪ್ರೋತ್ಸಾಹಿಸಿದರೆ ತನಗೆ ಬೆಂಬಲ ಕೊಡಲು ಸಿದ್ಧವಾಗಿದೆ ಎಂದು ಆಲೋಚಿಸಿದನು. ರಾಯಭಾರ ನಿಯೋಗವೊಂದನ್ನು ಕಳುಹಿಸುವ ಆಲೋಚನೆಯಿದೆ ಎಂದು ದ್ವೀಪದ ಗವರ್ನರ್ ಜನರಲ್ ಸೊಲಾಯಿಕ್ ತಿಳಿಸಿದಾಗ ಟಿಪ್ಪುವಿಗೆ ತುಂಬಾ ಸಂತೋಷವಾಯಿತು. ತನ್ನ ಉಪಯೋಗಕ್ಕಾಗಿ ಒಂದು ನೌಕೆಯನ್ನು ಟಿಪ್ಪು ಉಪಯೋಗಕ್ಕೆ ಮೀಸಲಿಡುವುದಾಗಿ ತಿಳಿಸಿದನು. ಅದು ಯುರೋಪಿನಲ್ಲಿ ಕಾಣಿಸಿಕೊಳ್ಳುವ ಮೊದಲನೆಯ ಭಾರತೀಯ ನೌಕೆಯಾಗಿರುತ್ತದೆ. ಅತ್ಯಂತ ಶಕ್ತಿಶಾಲಿಯಾದ ಯುರೋಪಿಯನ್ ಸಾರ್ವಭೌಮನ ಸಾಮ್ರಾಜ್ಯದಲ್ಲಿ ಮೊತ್ತಮೊದಲು ಪ್ರದರ್ಶಿತವಾಗುತ್ತದೆ. ಅತಿ ಶ್ರೇಷ್ಠ ಭಾರತೀಯ ಅರಸನ ಧ್ವಜವಾಗಿರುತ್ತದೆ ಎಂದೂ ತಿಳಿಸಿದನು. ಹೀಗೆ ಯುರೋಪಿನ ವರಿಷ್ಠರನ್ನು ಸಂಪರ್ಕಿಸಿದರೆ ತನಗೆ ಖಚಿತವಾದ ಫಲ ದೊರಕುತ್ತದೆ ಎಂದು ಟಿಪ್ಪು ಭಾವಿಸಿದನು. ರಾಯಭಾರ ನಿಯೋಗ ಕಳುಹಿಸಲು ಮುಂದಾದನು.[೧೧]

ಟಿಪ್ಪು ಮತ್ತು ಬ್ರಿಟಿಷರ ನಡುವೆ ನಡೆದ ಎರಡು ಮತ್ತು ಮೂರನೆಯ ಆಂಗ್ಲೋ-ಮೈಸೂರು ಯುದ್ಧಗಳಲ್ಲಿ ಫ್ರೆಂಚರು ಟಿಪ್ಪುವಿಗೆ ನೆರವು ನೀಡದೇ ಹೋದರೂ ಕೂಡ ಅವರು ತಮ್ಮ ಮಿತ್ರರೆಂದು, ಬ್ರಿಟಿಷರ ಎದುರಾಗಿ ತಾನು ನಡೆಸುವ ಹೋರಾಟದಲ್ಲಿ ನೆರವಾಗುವರೆಂದೂ ನಂಬುತ್ತಲೇ ಹೋದನು. ಒಂದು ಫ್ರೆಂಚ್ ಸೇನಾ ತುಕಡಿಯನ್ನು ತನ್ನ ಸೈನ್ಯದಲ್ಲಿ ಇರಿಸಿಕೊಂಡು ಸಾಕುತ್ತಿದ್ದನು. ಅದು ಅವನ ಸೈನ್ಯದ ಪ್ರತಿಷ್ಠಿತ ಭಾಗವಾಗಿತ್ತು. ಫ್ರಾನ್ಸಿಗೆ ಹಲವು ನಿಯೋಗಗಳನ್ನು ಕಳುಹಿಸಿ ಮೈತ್ರಿ ಸಂಬಂಧಗಳನ್ನು ತನ್ನೊಂದಿಗೆ ಮಾಡಿಕೊಳ್ಳುವಂತೆ ಫ್ರೆಂಚರನ್ನು ಕೋರಿದನು. ಅಂಥ ಪ್ರತಿಯೊಂದು ಸಂದರ್ಭದಲ್ಲೂ ಅವರು ಟಿಪ್ಪುವನ್ನು ನಿರಾಶೆಗೊಳಿಸಿದರು. ೧೭೮೩ರಲ್ಲಿ ಅವರು ಟಿಪ್ಪುವಿನೊಡನೆ ಸಮಾಲೋಚಿಸದೆಯೇ ಬ್ರಿಟಿಷರೊಂದಿಗೆ ಒಂದು ಒಪ್ಪಂದ ಮಾಡಿಕೊಂಡರು. ೧೭೮೬ರಲ್ಲಿ ಟಿಪ್ಪು ಎಷ್ಟು ಮನವಿ ಮಾಡಿಕೊಂಡರೂ ನೆರವಿಗೆ ಬರದೆ ತಟಸ್ಥವಾಗಿ ಉಳಿದರು. ೧೭೮೮ರಲ್ಲಿ ಅವನು ಮುಂದಿಟ್ಟ ಸಂಧಿಯ ಪ್ರಸ್ತಾಪವನ್ನು ನಿರಾಕರಿಸಿದರು. ಇಷ್ಟಾದರೂ ಪ್ರತಿಯೊಂದು ಸಲವೂ ಟಿಪ್ಪು ಅವರ ಅಸಹಕಾರವನ್ನು ಗಮನಕ್ಕೆ ತಂದುಕೊಳ್ಳಲಿಲ್ಲ. ಅವರಿಗಿದ್ದ ಕಷ್ಟಗಳನ್ನು ಅರಿತಿದ್ದನು. ಮುಂದೆ ತನಗೆ ಫ್ರೆಂಚರು ಸಹಕಾರ ನೀಡುವರೆಂದು ನಂಬಿದ್ದನು.

ಮೂರನೆಯ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪುವಿಗೆ ಸಹಾಯ ಮಾಡಲಾರದೆ ಹೋದುದ್ದಕ್ಕಾಗಿ ಫ್ರೆಂಚರು ವಿಷಾದಿಸಿದರು. ಮಹಾರಾಣಿಯ ಕ್ಲೇಶ ಸಂಕಟಗಳಲ್ಲಿ ಮುಳುಗಿ ಹೋಗಿದ್ದರಿಂದ ಹಾಗಾಯಿತು ಎಂದು ವಿವರಣೆ ಕೊಟ್ಟರು. ತಮ್ಮ ಬಳಿ ಇರುವ ಫ್ರೆಂಚ್ ಸೇನೆಗೆ ೬೦೦ ಯುರೋಪಿಯನ್ ಸೈನಿಕರನ್ನು ಒದಗಿಸಿ ಒಟ್ಟು ೧೭೦೦ ಪಡೆಯಾಗಿ ಅದನ್ನು ಹೆಚ್ಚಿಸಬೇಕೆಂದು ಟಿಪ್ಪು ಸಲಹೆ ಮಾಡಿದಾಗ ಅವರು ತಕ್ಷಣವೇ ಸಮ್ಮತಿಸಿದರು.[೧೨] ಆ ಪರಿಸ್ಥಿತಿ ಬಳಸಿಕೊಂಡು ಫ್ರೆಂಚರೊಂದಿಗೆ ಸೇರಿಕೊಂಡು ಟಿಪ್ಪು ತಾನು ಯದ್ಧದಲ್ಲಿ ಕಳೆದುಕೊಂಡಿದ್ದ ಭಾಗಗಳನ್ನು ಮರಳಿ ಪಡೆಯಬೇಕೆಂದು ಪಾಂಡಿಚೇರಿ ಗೌರ್ನರ್ ಟಿಪ್ಪು ಸೈನ್ಯದಲ್ಲಿದ್ದ ದಳಪತಿ ಮೂಲಕ ಹೇಳಿಸಿದನು.[೧೩] ಆದರೆ ಆಗ ತಾನೇ ಟಿಪ್ಪು ಬ್ರಿಟಿಷರೊಂದಿಗೆ ಸಂಧಿ ಮಾಡಿಕೊಂಡಿದ್ದರಿಂದ ಅದಕ್ಕೆ ಗಮನಕೊಡಲಿಲ್ಲ. ಆದರೂ ಒಂದು ಸಹಕಾರ ಒಪ್ಪಂದ ಮಾಡಿಕೊಳ್ಳಬಹುದು ಎಂದು ಅದನ್ನು ಪ್ಯಾರಿಸ್ಸಿನ ರಾಷ್ಟ್ರೀಯ ಸಭೆ ಸ್ವೀಕರಿಸಬೇಕೆಂದು ಬಯಸಿದನು.[೧೪] ಫ್ರೆಂಚರೊಂದಿಗೆ ಅವನಿಗಾಗಿದ್ದ ಹಿಂದಿನ ಅನುಭವವು ಹಾಗೆ ಷರತ್ತು ಹಾಕಲು ಪ್ರೇರಣೆ ನೀಡಿತು. ೧೦,೦೦೦ ಸೈನಿಕರು, ಸೂಕ್ತ ಪ್ರಮಾಣದ ಶಸ್ತ್ರಾಸ್ತ್ರಗಳು ಹಾಗೂ ಮದ್ದುಗುಂಡುಗಳನ್ನು ಒದಗಿಸಿ ಅದನ್ನು ತನ್ನ ಅಧೀನದಲ್ಲಿಡಬೇಕೆಂದು ಒತ್ತಾಯಪಡಿಸಿದನು. ಬ್ರಿಟಿಷರಿಗೆ ಸೇರಿದ ಪ್ರದೇಶಗಳನ್ನು ಗೆದ್ದ ಮೇಲೆ ಅದರಲ್ಲಿ ಕರಾವಳಿ ಭಾಗಗಳನ್ನು ಫ್ರೆಂಚರಿಗೆ ವಹಿಸಿಕೊಡುವುದು ಹಾಗೂ ಒಳನಾಡಿನ ಭಾಗಗಳು ಟಿಪ್ಪುವಿಗೆ ಸೇರುವುದು ಎಂಬುದಾಗಿ ತೀರ್ಮಾನಿಸಲಾಯಿತು.[೧೫] ಈ ಉದ್ದೇಶಗಳನ್ನು

ಕಾರ್ಯಗತ ಮಾಡಲು ಒಂದು ಪ್ರತ್ಯೇಕ ರಾಯಭಾರವನ್ನು ಫ್ರಾನ್ಸಿಗೆ ಕಳುಹಿಸಲು ಬಯಸಿದನು. ಆದರೆ ಆವನ ಸಲಹೆಗಳನ್ನು ಫ್ರೆಂಚರು ತಿರಸ್ಕರಿಸಿದರು.

ಫ್ರೆಂಚ್ ಗೌರ್‍ನರ್ ಡಿ ಫ್ರಸ್ನೆ ಟಿಪ್ಪು ತನ್ನ ರಾಯಭಾರ ತಂಡ ಕಳುಹಿಸುವುದನ್ನು ಒಪ್ಪಲಿಲ್ಲ. ಪ್ಯಾರಿಸ್ಸಿನ ಸಾಗರ ವ್ಯವಹಾರಗಳ ಬಗ್ಗೆ ಅವನು ಒಂದು ಪತ್ರ ಬರೆದನು. ೧೭೮೭ರಲ್ಲಿ ನಾನು ಇಂಥದೊಂದು ಪ್ರಯತ್ನವನ್ನು ನಿಂದಿಸಿದ್ದೆನು. ಯುರೋಪಿನಲ್ಲಿ ತಮಗೆ ಇದಕ್ಕಿಂತ ಹೆಚ್ಚು ಮುಜುಗರ ತರುವುದು ಹಾಗೂ ಭಾರತದಲ್ಲಿ ನಮಗೆ ಹೆಚ್ಚು ತೊಡಕ್ಕುಂಟು ಮಾಡುವಂತಹುದು ಬೇರೊಂದಿಲ್ಲ ಎಂಬುದಾಗಿ ಅಭಿಪ್ರಾಯಪಟ್ಟನು.[೧೭] ಇದು ಟಿಪ್ಪುವಿಗೆ ನಿರಾಶೆ ತಂದಿತು. ಬ್ರಿಟಿಷರು ೧೭೯೩ ಆಗಸ್ಟ್ ೨೩ ರಂದು ಪಾಂಡಿಚೇರಿ ಆಕ್ರಮಿಸಿದಾಗ ಟಿಪ್ಪು ನಿರ್ಲಿಪ್ತತೆ ತೋರಿದ. ಫ್ರೆಂಚರ ಸೇನಾಪತಿ ಚೆರ್‌ಮಾಂಟ್ ಟಿಪ್ಪು ನೆರವು ಕೋರಿದಾಗ ಆ ಪತ್ರಕ್ಕೆ ಟಿಪ್ಪು ಉತ್ತರ ಕೊಡಲಿಲ್ಲ.[೧೮]

೧೭೯೩ರಲ್ಲಿ ಪಾಂಡಿಚೇರಿಯನ್ನು ಕಳೆದುಕೊಂಡ ಮೇಲೆ ಫ್ರೆಂಚರಿಗೂ ಮತ್ತು ಟಿಪ್ಪು ನಡುವೆ ತೃಪ್ತಿಕರ ಸಂಬಂಧಗಳು ಬೆಳೆಯಲಿಲ್ಲ. ಒಂದು ಖಾಸಗಿ ಹಡಗಿನ ಕ್ಯಾಪ್ಟನ್ ಆಗಿದ್ದ ರಿಪಾಡ್ ಭಾರತಕ್ಕೆ ಬಂದು ಮತ್ತೆ ಫ್ರೆಂಚರ ಬಗ್ಗೆ ಟಿಪ್ಪುವಿನ ಆಸಕ್ತಿ ಕೆರಳಿಸಿದನು. ರಿಪಾಡ್ ಶ್ರೀರಂಗಪಟ್ಟಣಕ್ಕೆ ಬಂದು ತಾನು ಫ್ರೆಂಚ್ ರಾಯಭಾರಿ ಎಂದು ಪರಿಚಯ ಮಾಡಿಕೊಂಡನು. ದೊಡ್ಡದೊಂದು ಫ್ರೆಂಚ್ ಸೇನೆಯು ಮಾರಿಷಸ್ ದ್ವೀಪಕ್ಕೆ ಬಂದಿಳಿದಿದೆ. ಟಿಪ್ಪು ಮನವಿ ಮಾಡಿಕೊಂಡಿದ್ದೇ ಆದರೆ ಕಳುಹಿಸಿಕೊಡಬಹುದು. ಅದನ್ನು ಟಿಪ್ಪುವಿಗೆ ತಿಳಿಸಲೆಂದೇ ತನ್ನನ್ನು ಕಳುಹಿಸಲಾಗಿದೆ ಎಂದು ತಿಳಿಸಿದನು. ಅವನ ಮಾತುಗಳನ್ನು ನಂಬಿದ ಟಿಪ್ಪು ಸೈನ್ಯವು ಯಾವ ಪ್ರಕಾರದ ಷರತ್ತುಗಳ ಮೂಲಕ ದೊರಕಬಹುದು ಎಂದು ತಿಳಿದುಕೊಳ್ಳಲು ನಿರ್ಧರಿಸಿದನು.[೧೯] ಟಿಪ್ಪುವಿನ ಮಂತ್ರಿಗಳು ರಿಪಾಡನ ಮಾತನ್ನು ನಂಬಲಿಲ್ಲ. ಅವನನ್ನು ಒಬ್ಬ ಮೋಸಗಾರ ಎಂದು ಭಾವಿಸಿದರು. ಫ್ರೆಂಚರೊಂದಿಗೆ ಮೈತ್ರಿ ಒಪ್ಪಂದ ಮಾಡಿಕೊಳ್ಳುವುದು ಅಗತ್ಯವೆಂಬುದು ಮನವರಿಕೆಯಾಗಿದ್ದರೂ ಫ್ರೆಂಚರಿಗೆ ಟಿಪ್ಪುವಿನ ಮೈತ್ರಿ ಬಗೆಗೆ ಯಾವ ಧೋರಣೆಯಿದೆ ಎನ್ನುವುದು ಅವರಿಗೆ ತಿಳಿದಿರಲಿಲ್ಲ. ಫ್ರೆಂಚರ ಮಾತಿನ ಮೇಲೆ ವಿಶ್ವಾಸವಿಡುವುದು ಅಪಾಯಕಾರಿ ಎಂದು ಮಹಮದ್ ಜಾ ಮತ್ತು ಪೂರ್ಣಯ್ಯ ಅಭಿಪ್ರಾಯಪಟ್ಟರು. ಕಂದಾಯ ಸಚಿವ ಶಾಖೆ ಮಾರಿಷಸ್ ನಲ್ಲಿ ಫ್ರೆಂಚ್‌ಸೇನೆ ನಿಜವಾಗಿ ಬಂದಿದೆಯೇ ಎನ್ನುವುದನ್ನು ಮೊದಲು ಖಚಿತಪಡಿಸಿಕೊಳ್ಳಬೇಕೆಂದು ಸಲಹೆ ನೀಡಿತು. ಸಾಗರ ವ್ಯವಹಾರಗಳ ಸಚಿವ ಶಾಖೆಯು ಅವರೊಂದಿಗೆ ಖಾಯಂ ಒಪ್ಪಂದ ಮಾಡಿಕೊಳ್ಳುವುದರ ಪರವಾಗಿ ಅಭಿಪ್ರಾಯ ನೀಡಿತು. ವಾಣಿಜ್ಯ ಸಚಿವಾಲಯವು ರಿಫಾಡನ ಸಲಹೆಯನ್ನು ತಿರಸ್ಕರಿಸಬೇಕು ಎಂದಿತು.[೨೦] ಹೀಗೆ

ಉದಾರವಾದ ಭರವಸೆಗಳನ್ನು ನೀಡುವುದರ ಹಿಂದೆ ಯಾವುದೇ ರಹಸ್ಯಕಾರ್ಯಸ್ಥಾನವಿರಬಹುದು ಎಂದು ಟಿಪ್ಪುವಿನ ಮಂತ್ರಿಗಳು ಎಚ್ಚರಿಸಿದರು.

ಟಿಪ್ಪುವಿನ ಇಚ್ಛೆಗೆ ವಿರುದ್ಧವಾದ ಸಲಹೆಗಳನ್ನು ಮಂತ್ರಿಗಳೂ ಕೊಟ್ಟರು. ಟಿಪ್ಪು ತನಗೆ ತುಂಬಾ ವಿಶ್ವಾಸಾರ್ಹರಾದ ನಾಲ್ವರನ್ನು ಆರಿಸಿದನು. ಮಿರ್ಜಾಬಾಬರ್, ಹುಸೇನ್ ಆಲಿಖಾನ್, ಮೀರ್‌ಗುಲಾಂ ಆಲಿ, ಮೀರ್‌ಯೂಸೆಫ್ ಇವರುಗಳನ್ನು ಮಾರಿಷಸ್‌ಗೆ ರಾಯಭಾರಿಗಳಾಗಿ ಕಳುಹಿಸಲು ನಿರ್ಧರಿಸಿದನು. ಅವರು ಮಾರಿಷಸ್‌ನ ಮುಖ್ಯ ಅಧಿಕಾರಿಗಳಿಗೆ ಟಿಪ್ಪುವಿನ ಪತ್ರಗಳನ್ನು ಒಯ್ದರು. ಅಲ್ಲಿ ತಮ್ಮ ವ್ಯವಹಾರಗಳನ್ನು ರಹಸ್ಯವಾಗಿ ನಡೆಸಬೇಕೆಂದು ಆದೇಶವಿದ್ದಿತು. ರಾಜಕೀಯ ಕಾರ್ಯದ ಜೊತೆಗೆ ಅಲ್ಲಿಂದ ಫಿರಂಗಿಗಳನ್ನು ಎರಕಹಾಕುವವರು, ಹಡಗು ನಿರ್ಮಿಸುವವರು, ಗಾಜು ತಯಾರಿಸುವವರು ಮೊದಲಾದ ಕುಶಲಕರ್ಮಿಗಳನ್ನು, ತಂತ್ರಜ್ಞರನ್ನು ಕರೆತರುವ ಕರ್ತವ್ಯ ನಿರ್ವಹಿಸಬೇಕಿತ್ತು. ಆದರೆ ಪ್ರಧಾನ ಕಾರ್ಯೋದ್ದೇಶ ರಾಜಕೀಯ ಹಾಗೂ ಮಿಲಿಟರಿಯಾಗಿತ್ತು. ಮೂವತ್ತರಿಂದ ನಲವತ್ತು ಸಾವಿರ ಸೈನಿಕರ ಒಂದು ಸೇನಾ ಪಡೆಯನ್ನು, ಅದಕ್ಕೆ ಹೊಂದುವಷ್ಟು ನೌಕಾದಳ ಕಳುಹಿಸಿಕೊಡಬೇಕೆಂದು ಒತ್ತಾಯಿಸುವುದು ಹಾಗೂ ಒಂದು ಒಪ್ಪಂದ ರೂಪಿಸುವುದು ಅದರ ಗುರಿಯಾಗಿತ್ತು. ಸೈನ್ಯದ ಸಮಸ್ತ ವೆಚ್ಚಗಳನ್ನು ಟಿಪ್ಪು ವಹಿಸಲಿದ್ದನು. ಅವನು ಸಲಹೆ ಮಾಡಿದ್ದ ಒಪ್ಪಂದದ ಷರತ್ತುಗಳು ಪ್ರಜಾಸತ್ತೆಯ ಪ್ರಾಮಾಣಿಕತೆ ಮತ್ತು ವಿಶ್ವಾಸ ತತ್ವಗಳ ಆಧಾರದ ಮೇಲೆ ರೂಪುಗೊಂಡಿತ್ತು. ಅವನು ಒಂದು ಪತ್ರದಲ್ಲಿ ಹೀಗೆ ಬರೆದಿದ್ದನು, "ನೀವು ನನಗೆ ಸಹಾಯ ಮಾಡಿದ್ದೇ ಆದರೆ ಅನತಿ ಕಾಲದಲ್ಲೇ ಭಾರತದಲ್ಲಿ ಒಬ್ಬನೇ ಒಬ್ಬ ಬ್ರಿಟಿಷ್ ಪ್ರಜೆಯನ್ನು ಉಳಿಸುವುದಿಲ್ಲ. ಇಡೀ ಭಾರತ ದೇಶವನ್ನು ಅವರ ಹೆಸರಿಲ್ಲದಂತೆ ತೊಳೆದು ಬಿಡುತ್ತೇನೆ. ಈಗ ನಾನು ಮುಟ್ಟುವ ಸ್ಪ್ರಿಂಗುಗಳು ಚಿಮ್ಮಿ ಇಡೀ ಭಾರತವನ್ನು ಕ್ರಿಯೋನ್ಮುಕವಾಗಿಸುತ್ತವೆ. ಬ್ರಿಟಿಷರ ಮೇಲೆ ಎರಗಿ ಬೀಳಲು ನನ್ನ ಮಿತ್ರರೆಲ್ಲ ಸಿದ್ಧರಾಗಿದ್ದಾರೆ. ಒಂದು ಎಚ್ಚರಿಕೆ ಮಾತನ್ನು ಸೇರಿಸಿದನು. 'ನಿಮ್ಮ ರಾಷ್ಟ್ರದೊಂದಿಗೆ ನನಗಿರುವ ಸಂಬಂಧವನ್ನು ಬಯಲಿಗೆಳೆಯ ಬೇಡಿ ಹಾಗೆ ಒಮ್ಮೆ ನಡೆದು ನಾನು ಸಾಕಷ್ಟು ಕಷ್ಟ ಅನುಭವಿಸಿದ್ದೇನೆ."

ಭಾರತದಲ್ಲಿ ಆಗ ಬ್ರಿಟಿಷರ ಪರಿಸ್ಥಿತಿ ತುಂಬಾ ಅಹಿತಕರವಾಗಿದೆ ಎಂದು ಟಿಪ್ಪು ವಿವರಿಸಿದ. ನಿಜಾಮ ಮುದುಕನಾಗಿದ್ದಾನೆ. ಅವನ ಮರಣದ ನಂತರ ಅಧಿಕಾರಕ್ಕಾಗಿ ನಡೆಯುವ ಕಲಹವು ಹೈದರಾಬಾದನ್ನು ಕ್ಷೋಭೆಗೀಡು ಮಾಡಲಿದೆ. ಮುಂದೆ ಅಲ್ಲಿನ ಸಿಂಹಾಸನ ಏರಲಿರುವವನು ಟಿಪ್ಪುವಿನ ಮಿತ್ರನು. ಈಗಾಗಲೇ ಅಂತಃಕಲಹಗಳಿಂದ ಜರ್ಜರಿತವಾಗಿರುವ ಮರಾಠರು, ಜಮಾನ್ ಶಹಾ ದಂಡಯಾತ್ರೆಯ ಸಾಧ್ಯತೆ, ಕಲ್ಲಿಕೋಟೆ ಅಸ್ಥವ್ಯಸ್ಥ ಪರಿಸ್ಥಿತಿ ಇವೆಲ್ಲ ಕೂಡಿ ಫ್ರೆಂಚರು ಉಪಯೋಗ ಮಾಡಿಕೊಳ್ಳಲು ಅನುಕೂಲ ಸಂದರ್ಭ ಇದಾಗಿದೆ. ಫ್ರೆಂಚರು ನನಗೆ ಸಹಾಯ ಮಾಡಲೇಬೇಕು ಎಂದು ಟಿಪ್ಪು ನಿರೂಪಿಸಿದನು. ಅದೇ ಸಮಯಕ್ಕೆ ಅವರು ತನಗೆ ನೀಡಿದ

ಭರವಸೆಗಳನ್ನು ನೀಡಬಾರದೆಂದೂ ಎಚ್ಚರಿಸಿದನು. ಫ್ರೆಂಚರಿಗೆ ಮುಂಬಯಿಯನ್ನು ವಹಿಸಿಕೊಡಲಾಗುತ್ತದೆ. ತಾನು ಗೋವಾವನ್ನು ಉಳಿಸಿಕೊಳ್ಳುತ್ತೇನೆ ಎಂದು ತಿಳಿಸಿದನು.[೨೨]

ಫ್ರೆಂಚ್ ಸಾಹಸಿ ರಿಪಾಡನು ಟಿಪ್ಪುವಿನ ಆಸ್ಥಾನಕ್ಕೆ ಭೇಟಿ ನೀಡಿದುದು ಅತ್ಯಂತ ಅನಿರೀಕ್ಷಿತ ಘಟನೆಗಳಿಗೆ ದಾರಿ ಮಾಡಿತು. ಮಾರಿಷಸ್‌ನಲ್ಲಿ ೧೦೦೦೦ ಫ್ರೆಂಚ್ ಸೇನೆ ಸರ್ವಸಿದ್ಧ ಸ್ಥಿತಿಯಲ್ಲಿದೆ. ಬಯಸಿದಾಗ ನಿಮ್ಮ ನೆರವಿಗೆ ಬರುತ್ತದೆ ಎಂಬ ಮಾತಿಗೆ ಟಿಪ್ಪು ಉದ್ವೇಗಗೊಂಡನು. ಈ ವಿಷಯವಾಗಿ ತನ್ನ ಮಂತ್ರಿಗಳ ಜೊತೆ ಚರ್ಚಿಸಿದಾಗಲೂ ಅವರು ರಿಪಾಡನ ಮಾತನ್ನು ನಂಬದಂತೆ ಸೂಚಿಸಿದರೂ ತನ್ನ ಅದೃಷ್ಟವನ್ನು ಅಲ್ಲಿ ಪರೀಕ್ಷಿಸಬೇಕೆಂದು ನಿರ್ಧರಿಸಿದನು. ಮಾರಿಷಸ್‌ನ ಫ್ರೆಂಚ್ ಗೌರ್ನರ್ ಮಲಾರ್ಟಿಕ್ ಕೂಡ ಬ್ರಿಟಿಷರನ್ನು ಭಾರತದಿಂದ ಹೊರದೂಡುವ ವಿಷಯದಲ್ಲಿ ಟಿಪ್ಪು ನಿರ್ಧಾರವನ್ನು ಬಹಿರಂಗವಾಗಿ ಪ್ರಕಟಿಸಿದನು. ಮಲಾರ್ಟಿಕನಲ್ಲೂ ಟಿಪ್ಪುವಿನಂತೆ ಕ್ರಾಂತಿಕಾರಿ ಭಾವನೆಗಳು ತುಂಬಿದ್ದವು. ಫ್ರಾನ್ಸ್ ದೇಶವು ಸ್ವಾತಂತ್ರ್ಯದ ಹರಿಕಾರ ದೇಶವಾಗಿದೆ. ಫ್ರಾನ್ಸ್ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಅಮೆರಿಕಾದಲ್ಲಿ ಯಶಸ್ವಿಯಾಗಿ ಬೇರೂರುವಂತೆ ಮಾಡಿತು. ಅದರ ಸ್ವಾತಂತ್ರ್ಯದ ಚಳುವಳಿಗೆ ಸಹಕರಿಸಿತು. ಅದನ್ನು ಭಾರತದಲ್ಲೂ ಸಾಧಿಸಬಹುದು ಎಂಬುದು ಫ್ರೆಂಚರ ಆಲೋಚನೆಯೂ ಆಗಿದ್ದಿರಬೇಕು. ಇದನ್ನು ಯಶಸ್ವಿಗೊಳಿಸಿಕೊಳ್ಳಲು ಟಿಪ್ಪುವೆ ಸೂಕ್ತ ವ್ಯಕ್ತಿ ಎಂಬ ಭಾವನೆ ಅವರದಾಯಿತು. ಅವನೊಂದಿಗೆ ಸಂಪರ್ಕ ಹೊಂದಲು ಬಯಸಿದರು.

೬.೨. ಟಿಪ್ಪು ಮತ್ತು ಅಫ್ಘಾನಿಸ್ಥಾನ ನಡುವಿನ ಸಂಬಂಧ

ಟಿಪ್ಪುವು ಅಫ್ಘಾನಿಸ್ಥಾನದ ಅರಸ ಜಮಾನ್‌ಶಹಾನ ಸಂಪರ್ಕ ಬೆಳೆಸಿದನು. ಜಮಾನ್ ಶಹಾನು ಅಹಮದ್ ಶಹಾ ಅಬ್ದಾಲಿಯ ಮೊಮ್ಮಗ. ಜಮಾನ್ ಶಾಹನು ಭಾರತದ ಮೇಲೆ ದಂಡಯಾತ್ರೆ ಮಾಡಿ ಇಲ್ಲಿನ ಮೊಗಲರ ಪ್ರಾಬಲ್ಯವನ್ನು ಮರಳಿ ಸ್ಥಾಪಿಸಬೇಕೆಂದು ಇಚ್ಛಿಸಿದನು. ಅವನಿಗೆ ಮೊಗಲರೊಂದಿಗೆ ವೈವಾಹಿಕ ಸಂಬಂಧಗಳು ಇದ್ದವು. ಭಾರತದ ಮೇಲೆ ದಂಡಯಾತ್ರೆ ಮಾಡಿ ಅಪಾರ ಶ್ರೀಮಂತಿಕೆ ಪಡೆದು ತನ್ನ ಪ್ರಾಚೀನ ಮೇಲುಪಂಕ್ತಿಯನ್ನೇ ತಾನು ಪಡೆಯಬೇಕು ಎಂದು ಬಯಸಿದನು. ಜಮಾನ್‌ಶಾಹನು ಅಧಿಕಾರಕ್ಕೆ ಬರುವುದಕ್ಕಿಂತ ಮೊದಲೇ ಟಿಪ್ಪು ಸುಲ್ತಾನನು ಕಾಬುಲ್‌ನೊಂದಿಗೆ ಸಂಪರ್ಕ ಬೆಳೆಸಿದನು. ಅವರಿಂದ ನೆರವು ಪಡೆಯಲು ಬಯಸಿದನು. ೧೭೯೦-೯೧ರಲ್ಲಿ ಅಫ್ಘಾನಿಸ್ಥಾನದೊಂದಿಗೆ ಪತ್ರ ವ್ಯವಹಾರ ನಡೆಸಿ ಸಹಕಾರ ವಿಷಯ ಪ್ರಸ್ತಾಪಿಸಿದನು.

ಜಮಾನ್ ಶಹಾ ಸಿಂಹಾಸವನ್ನೇರಿದ ಮೇಲೆ ಸಂಧಾನಗಳು ಚುರುಕುಗೊಂಡವು. ಕಾರಣ ಅವನೂ ಟಿಪ್ಪುವಿನಂತೆ ಬ್ರಿಟಿಷರನ್ನು ದ್ವೇಷಿಸುತ್ತಿದ್ದನು. ಟಿಪ್ಪು ೧೭೯೬ರಲ್ಲಿ ಹಬೀಬುಲ್ಲಾ ಮತ್ತು

ಮಹಮದ್ ಎಂಬ ಇಬ್ಬರು ರಾಯಭಾರಿಗಳನ್ನು ಕಾಬೂಲಿಗೆ ಅಮೂಲ್ಯವಾದ ಉಡುಗೊರೆ, ಆನೆಗಳು ಮತ್ತು ಸ್ನೇಹಪೂರಕ ಪತ್ರಗಳೊಂದಿಗೆ ಕಳುಹಿಸಿದನು. ಈ ರಾಯಭಾರಿಗಳನ್ನು ಕಳುಹಿಸಿದ ಉದ್ದೇಶ ಜಮಾನ್‌ಶಾಹನು ಯೋಜಿಸಿದ್ದ ದಂಡಯಾತ್ರೆಯನ್ನು ಕಾರ್ಯಗತಗೊಳಿಸುವಂತೆ ಪ್ರೇರೇಪಿಸುವುದು ಹಾಗೂ ಬ್ರಿಟಿಷರ ವಿರುದ್ಧ ತನ್ನೊಂದಿಗೆ ಸಹಕಾರದ ಯೋಜನೆಯನ್ನು ರೂಪಿಸುವುದು. ಜೊತೆಗೆ ಅವರು ಹೋದ ಕಡೆಯಲ್ಲೆಲ್ಲ ಮೈಸೂರಿನ ಉತ್ಪನ್ನಗಳನ್ನು ಕುರಿತು ಪ್ರಚಾರ ಮಾಡುವಂತೆಯೂ ನಿರ್ದೇಶನ ನೀಡಿದ್ದನು. ಹೀಗೆ ರಾಯಬಾರಿಗಳ ಉದ್ದೇಶ ರಾಜಕೀಯವೂ, ವಾಣಿಜ್ಯವೂ ಆಗಿತ್ತು. ಉದ್ದೇಶಿತ ದಂಡಯಾತ್ರೆಯನ್ನು ಕೈಗೊಳ್ಳಬೇಕೆಂದು ರಾಯಭಾರಿಗಳು ಒತ್ತಾಯಿಸಿದರು.[೨೩] ಟಿಪ್ಪುವು ಖುದ್ದಾಗಿ ಶಹಾನಿಗೆ ಒಂದು ಪತ್ರ ಬರೆದು ಕಳುಹಿಸಿದ್ದನು. ಅದರಲ್ಲಿ ಅವನ ಆಸ್ಥಾನದಲ್ಲಿ ತನ್ನ ಇಬ್ಬರು ರಾಯಬಾರಿಗಳನ್ನು ಖಾಯಂ ಆಗಿ ಇಡಲು ಇಚ್ಛಿಸಿರುವುದಾಗಿಯೂ, ಅಲ್ಲಿನ ಗೋಪ್ಯ ವಿದ್ಯಮಾನಗಳನ್ನು ನಿರ್ವಹಿಸಲು ಸಾಧ್ಯ ಎಂದೂ ಬರೆದಿದ್ದನು.

ಟಿಪ್ಪುವಿನ ಪತ್ರಗಳಿಗೆ ಉತ್ತರವಾಗಿ ಶಹಾನು ಭಾರತದ ಮೇಲೆ ದಂಡಯಾತ್ರೆ ಹೊರಡಲು ನಿರ್ಧರಿಸಿರುವುದಾಗಿಯೂ, ತನ್ನ ಆಸ್ಥಾನದಲ್ಲಿ ಟಿಪ್ಪುವಿನ ಇಬ್ಬರು ರಾಯಭಾರಿಗಳನ್ನು ಖಾಯಂ ಆಗಿ ಇರಿಸಿಕೊಳ್ಳಲು ಸಮ್ಮತಿ ಇರುವುದಾಗಿ ತಿಳಿಸಿದನು. ನಮ್ಮ ವಿಜಯಶಾಲಿಯಾದ ಸೈನ್ಯದೊಡನೆ ಇಲ್ಲಿಂದ ಹೊರಟು ಬರುತ್ತೇನೆ. ಆ ಪ್ರದೇಶದಲ್ಲಿನ ನಿವಾಸಿಗಳು ಬಂಧಮುಕ್ತವಾಗಿ ಸಂತೋಷವಾಗಿರುವಂತೆ ಮಾಡುವುದಕ್ಕೆ ಯುದ್ಧ ಮಾಡುತ್ತೇನೆಂದು ತಿಳಿಸಿದನು.[೨೪] ೧೭೯೯ ಜನವರಿ ೩೦ ರಂದು ಟಿಪ್ಪು ಮತ್ತೆ ಉತ್ತರ ಕಳಹಿಸಿದ ಅದರಲ್ಲಿ ಬ್ರಿಟಿಷರು ಸದ್ಯದಲ್ಲಿ ತನ್ನ ಮೇಲೆ ಯುದ್ಧ ಹೂಡಲಿರುವುದಾಗಿಯೂ ಈ ವಿಷಯದಲ್ಲಿ ವೆಲ್ಲೆಸ್ಲಿಯ ಯೋಜನೆಗಳು ರಹಸ್ಯವಾಗೇನು ಇಲ್ಲವೆಂದು ತಿಳಿಸಿದನು. ಮತ್ತೆ ಅದೇ ರಾಯಭಾರಿಗಳನ್ನು ಶಹಾನ ಆಸ್ಥಾನಕ್ಕೆ ಕಳುಹಿಸಿ ಬ್ರಿಟಿಷರ ಗಮನವನ್ನು ತನ್ನೆಡೆಗೆ ಸೆಳೆಯಬೇಕೆಂದೂ ಮನವಿ ಮಾಡಿಕೊಂಡನು. ಹೀಗೆ ಮೈಸೂರು ಮತ್ತು ಅಫ್ಘಾನಿಸ್ಥಾನಗಳ ನಡುವೆ ಸುದೀರ್ಘ ಪತ್ರವ್ಯವಹಾರ ನಡೆಯಿತು.

ಟಿಪ್ಪುವು ಅಫ್ಘಾನಿಸ್ಥಾನದ ನೆರವು ಪಡೆಯಲು ವಿಫಲನಾದನು. ಅದರ ಮೇಲೆ ಅವನು ಮಹದಾಶೆ ಇಟ್ಟುಕೊಂಡಿರಲಿಲ್ಲ. ಬ್ರಿಟಿಷರಿಗೆ ಅಸಮಾಧಾನ ಉಂಟಾಗುವಂತೆ ಮಾಡಲು ಶಹಾನನ್ನು ಪ್ರಚೋದಿಸುವುದಕ್ಕೆ ಪ್ರಯತ್ನಿಸಿದನು. ಅಫ್ಘನರೂ ಬ್ರಿಟಿಷರನ್ನು ದ್ವೇಷಿಸುತ್ತಿದ್ದರು. ಭಾರತದಲ್ಲಿ ಅವರ ಪ್ರಭಾವ ಹರಡದಂತೆ ಕಂಪನಿ ತಡೆಯಾಗಿತ್ತು. ಟಿಪ್ಪು ನೇರವಾಗಿ ಅವರ ಸಹಾಯ ಕೋರಿರಲ್ಲಿಲ್ಲ. ೧೭೯೮ರ ಕೊನೆಯಲ್ಲಿ ಶಹಾನು ಸೈನ್ಯದ ಸಮೇತ ಲಾಹೋರ್‌ವರೆಗೆ ಬಂದಿದ್ದನು. ಅಷ್ಟರಲ್ಲಿ ತನ್ನ ದೇಶದ ಪಶ್ಚಿಮ ಗಡಿಯಲ್ಲಿ ಗಂಭೀರ ಸ್ವರೂಪದ ದಂಗೆ ಆರಂಭವಾದ್ದರಿಂದ

ಮತ್ತೆ ಕಾಬೂಲಿಗೆ ಹಿಂತಿರುಗಿದನು. ಇರಾನ್–ಅಫ್ಘಾನಿಸ್ಥಾನ ನಡುವೆ ಗಡಿ ವಿವಾದ ಉಂಟಾಗಲು ವೆಲ್ಲೆಸ್ಲಿ ಕೈವಾಡ ಇದ್ದಿತ್ತು.[೨೬]

ಜಮಾನ್ ಶಹಾನು ಕೈಗೊಂಡ ದಂಡಯಾತ್ರೆ ಎನ್ನುವುದೇ ವೆಲ್ಲೆಸ್ಲಿಯ ಕಲ್ಪನೆಯು ಹಡೆದ ಕೂಸು ಎಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ.[೨೭] ೧೭೯೮ರಲ್ಲಿ ಜಮಾನ್ ಶಹಾನ ಸೈನ್ಯವು ವಾಸ್ತವವಾಗಿ ಭಾರತದತ್ತ ನಡೆದು ಬಂದದ್ದು, ಆ ಸೈನ್ಯದ ಅತ್ಯುತ್ತಮ ಸ್ಥಿತಿ ಟಿಪ್ಪುವಿನ ಜೀವನ ಕಾಲದಲ್ಲೇ ಹಿಂದೆ ಹಲವು ಸಾರಿ ಅಫ್ಘನ್ ದಾಳಿಗಳು ನಡೆದಿದ್ದು, ಇವೆಲ್ಲ ಗಮನಿಸಿದರೆ ಶಹಾನ ದಂಡಯಾತ್ರೆ ವಾಸ್ತವವಾಗಿರಲಿಲ್ಲ ಎಂದು ನಂಬುವುದು ಕಷ್ಟವಾಗುತ್ತದೆ.[೨೮]

ಅಫ್ಘಾನ್ ದಾಳಿಯ ಸಾಧ್ಯತೆಯನ್ನು ಎರಡು ಕಾರಣಗಳಿಂದ ಸಂದೇಹಿಸಲಾಯಿತು. ಒಂದು ಅಂಥದೊಂದು ದಂಡಯಾತ್ರೆ ನಿರ್ವಹಿಸಲು ಅಗತ್ಯವಾದ ಸಂಪನ್ಮೂಲದ ಕೊರತೆ ಅವರಿಗಿದ್ದುದು. ಎರಡನೆಯನದು ಆ ದಂಡಯಾತ್ರೆ ಸುದ್ದಿಯು ಎಷ್ಟೋ ಕಾಲದಿಂದ ಸುದ್ದಿಯಾಗೇ ಹರಡಿಕೊಂಡುದು. ಆದರೆ ಶಹಾನಿಗೆ ಇವು ಯಾವುವು ಅಡ್ಡಿಯಾಗಿರಲಿಲ್ಲ. ವಾಸ್ತವವಾಗಿ ೧೭೯೮ರಲ್ಲಿ ಲಾಹೋರ್‌ಗೆ ಅವನು ಸೈನ್ಯ ಸಮೇತ ಧಾವಿಸಿದ್ದನು. ಸಿಖ್ಖರು ಅವನ ಮುನ್ನಡೆಯನ್ನು ತಡೆಯಲಿಲ್ಲ. ಬ್ರಿಟಿಷರು ಟಿಪ್ಪುವಿನೊಂದಿಗೆ ವೈರತ್ವ ಬೆಳೆಸಿಕೊಂಡದ್ದು ಅನುಕೂಲವೇ ಆಯಿತು. ಆದರೆ ಅಫ್ಘಾನಿಸ್ಥಾನದಿಂದ ಟಿಪ್ಪುವಿಗೆ ನಿರೀಕ್ಷಿತ ಫಲಿತಗಳು ದೊರೆಯಿಲಿಲ್ಲ.

೬.೩. ಟಿಪ್ಪು ಮತ್ತು ಟರ್ಕಿ ನಡುವಿನ ಸಂಬಂಧ

ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿ ಟರ್ಕಿಯು ಮುಸ್ಲಿಂ ಜಗತ್ತಿನ ಅತ್ಯಂತ ದೊಡ್ಡದಾದ ಮತ್ತು ಮುಖ್ಯವಾದ ರಾಜಕೀಯ ಶಕ್ತಿಯಾಗಿತ್ತು. ಟರ್ಕಿ ಸುಲ್ತಾನನ ಬಗೆಗೆ ಟಿಪ್ಪುವಿಗೆ ತುಂಬಾ ಗೌರವವಿತ್ತು. ಪ್ರಾಚ್ಯದಲ್ಲಿ ಬ್ರಿಟಿಷ್ ಪ್ರಭಾವದ ವಿಸ್ತರಣೆಯು ಇಸ್ಲಾಂ ಧರ್ಮಕ್ಕೆ ಒಡ್ಡಿದ ಬೆದರಿಕೆ ಎಂಬುದಾಗಿ ಅವನು ಪರಿಗಣಿಸಿದನು. ಬ್ರಿಟಿಷರು ಧರ್ಮದ ಶತ್ರುಗಳು ಎಂದು ಕರೆದು ಅವರೊಂದಿಗಿನ ತನ್ನ ಹೋರಾಟವನ್ನು ಇಡೀ ಇಸ್ಲಾಂ ಜಗತ್ತಿನ ಸಾಮಾನ್ಯ ಉದ್ದೇಶಕ್ಕಾಗಿ ನಡೆಸುವ ಹೋರಾಟ ಎಂದು ಬಣ್ಣಿಸಿದನು.[೩೦] ಇಸ್ಲಾಮಿಕ್ ರಾಷ್ಟ್ರಗಳಿಗೆ ಪ್ರಾಶ್ಚಾತ್ಯರ ಪ್ರವೇಶದಿಂದ ಉಂಟಾಗಬಹುದಾದ ಅಪಾಯಗಳ ಬಗ್ಗೆ ಎಚ್ಚರಿಕೆ ಕೊಡುವುದು ತನ್ನ ಕರ್ತವ್ಯವೆಂದು ಟಿಪ್ಪು ಭಾವಿಸಿದನು. ಯುರೋಪಿಯನ್ನರ ವಿರುದ್ಧದ ಈ ಧರ್ಮಯುದ್ಧದಲ್ಲಿ ಟರ್ಕಿಯ ಸುಲ್ತಾನನು ತನ್ನೊಂದಿಗೆ ಸೇರಿಕೊಳ್ಳಬೇಕೆಂದು ಅಪೇಕ್ಷಿಸಿದನು.

ಮೊದಲನೆಯ ರಾಯಭಾರವನ್ನು ಕಾನ್‌ಸ್ಟಾಂಟಿನೋಪಲ್‌ಗೆ ೧೭೮೪ರಲ್ಲಿ ಕಳಿಸಿದನು.[೩೧] ಉಸ್ಮಾನ್‌ಖಾನ್ ಈ ರಾಯಭಾರದ ನೇತೃತ್ವ ವಹಿಸಿದ್ದನು. ಈ ನಿಯೋಗ ಕಳುಹಿಸಿದ ಉದ್ದೇಶ

ಟರ್ಕಿಯ ಸುಲ್ತಾನನು ತನ್ನ ಕಡೆಯಿಂದ ವಿಧ್ಯುಕ್ತವಾದ ರಾಯಭಾರ ಹೊಂದಲು ಆಸಕ್ತನಾಗಿದ್ದಾನೆಯೇ ಎಂಬುದನ್ನು ತಿಳಿಯುವುದಾಗಿತ್ತು.[೨೮] ಟರ್ಕಿ ಸುಲ್ತಾನನಿಂದ ಉತ್ತಮ ಪ್ರತಿಕ್ರಿಯೆ ಬಂದ ಕಾರಣ ಎರಡನೆಯ ರಾಯಭಾರ ನಿಯೋಗವನ್ನು ೧೭೮೫ರಲ್ಲಿ ಕಳುಹಿಸಿದನು. ಗುಲಾ ಅಲಿಖಾನ್, ಲತೀಫ್ ಅಲಿ ಬೇಗ್, ಷಹಾನೂರುಲ್ಲಾ ಮತ್ತು ಮಹಮದ್ ಹನೀಫ್ ಈ ತಂಡದಲ್ಲಿದ್ದರು. ಈ ರಾಯಭಾರ ನಿಯೋಗ ಟರ್ಕಿಯಲ್ಲಿ ತಮ್ಮ ಕೆಲಸ ಪೂರೈಸಿಕೊಂಡು ಮುಂದೆ ಫ್ರಾನ್ಸಿಗೆ ತೆರಳಬೇಕೆಂದು ಟಿಪ್ಪು ನಿರ್ದೇಶನ ನೀಡಿದ್ದನು. ಆದರೆ ಉಸ್ಮಾನ್ ಖಾನನ ಖಾಸಗಿ ವರದಿಯನ್ನು ಕೇಳಿದ ಮೇಲೆ ರಾಯಭಾರಿಗಳ ಮುಂದಿನ ಪ್ರಯಾಣ ರದ್ದುಪಡಿಸಿದನು.[೨೯]

ಟಿಪ್ಪು ಟರ್ಕಿಗೆ ರಾಯಭಾರ ನಿಯೋಗ ಕಳುಹಿಸಿದ ಹಿನ್ನೆಲೆ ಹಲವಾರು ಉದ್ದೇಶಗಳನ್ನು ಹೊಂದಿತ್ತು. ರಾಜಕೀಯ ಮತ್ತು ವ್ಯಾಪಾರ–ವಾಣಿಜ್ಯವೂ ಇದ್ದಿತಾದರೂ ರಾಜಕಾರಣ ಪ್ರಧಾನ ಉದ್ದೇಶವಾಗಿತ್ತು. ಬ್ರಿಟಿಷರ ವಿರುದ್ಧವಾಗಿ ಟರ್ಕಿ ಸುಲ್ತಾನನೊಂದಿಗೆ ಒಂದು ಯುದ್ಧ ಒಪ್ಪಂದ ಮಾಡಿಕೊಳ್ಳುವುದಾಗಿತ್ತು. ಟರ್ಕಿ ಸುಲ್ತಾನ ಅಬ್ದುಲ್ ಹಮೀದ್‌ಗೆ ಟಿಪ್ಪು ಹೀಗೆ ಪತ್ರ ಬರೆದನು.

"ಮೂವತ್ತೈದು ವರ್ಷಗಳ ಹಿಂದೆ ತೈಮೂರ್ ವಂಶದ ಸುಲ್ತಾನತೆಯು ದುರ್ಬಲವಾಗಿ, ಕೆಲವು ಕ್ರಿಶ್ಚಿಯನ್‌ರು ಹಿಂದೂಸ್ಥಾನದ ಅಂಚಿನಲ್ಲಿ ಕರಾವಳಿ ಪ್ರದೇಶದ ಸ್ವಲ್ಪ ಭಾಗವನ್ನು ಪಡೆದುಕೊಂಡರು. ಅದಕ್ಕೆ ಅವರು ಕೊಟ್ಟ ಕಾರಣ ವ್ಯಾಪಾರ. ಹಾಗೆಯೇ ಅವರು ಈ ನೆಲದ ಪರಿಸ್ಥಿತಿಯ ಬಗೆಗೆ ವಿವರವಾಗಿ ತಿಳುವಳಿಕೆ ಪಡೆದುಕೊಂಡರು. ಕ್ರಮೇಣ ಬಹುಸಂಖ್ಯೆಯಲ್ಲಿ ಹಡಗುಗಳ ಮೂಲಕ ಯುರೋಪಿಯನ್ನರು ಬಂದರು. ಮೋಸ, ವಂಚನೆ, ಕುಯುಕ್ತಿಗಳಿಂದ ಅನೇಕ ನಗರಗಳನ್ನೂ, ವಾರ್ಷಿಕ ಮೂವತ್ತೈದು ಕೋಟಿ ವರಮಾನ ತರುವ ಬಂಗಾಳ ಮೊದಲಾದ ಪ್ರದೇಶಗಳನ್ನು ಸ್ವಾದೀನಪಡಿಸಿಕೊಂಡರು. ಧಾರ್ಮಿಕ ವಿರೋಧ ಕಾರಣವಾಗಿ ಅವರಲ್ಲಿದ್ದ ಸಹಜ ಕುಟಿಲತೆಯಿಂದ ಆ ದುಷ್ಟ ಕ್ರಿಶ್ಚಿಯನ್ನರು ಇನ್ನೂ ನಾಡಿನಲ್ಲಿ ತಮ್ಮ ದುರ್ವಿಚಾರಗಳನ್ನು ಕಾರ್ಯರೂಪದಲ್ಲಿ ತೋರಿಸುತ್ತಿದ್ದಾರೆ. ಕತ್ತಲ ದಾರಿಯನ್ನು ಹಿಡಿದಿರುವ ಈ ವಿರೋಧಗಳ ಅನುಚಿತ ವರ್ತನೆಗೆ ಕೊನೆಯಿಲ್ಲ. ಈ ಕಾರಣದಿಂದಾಗಿ ಈ ದೇಶದಲ್ಲಿನ ಸ್ಥಿತಿಗತಿಗಳನ್ನು ತಮಗೆ ವಿವರಿಸುವ ಸಲುವಾಗಿ ರಾಯಭಾರಿಗಳನ್ನು ಕಳುಹಿಸುತ್ತಿದ್ದೇನೆ. ಪ್ರಜ್ವಲಮಾನವಾದ ಇಸ್ಲಾಂ ಧರ್ಮವನ್ನು ಮರಳಿ ನೆಲೆಗೊಳಿಸಿ ಬಲಪಡಿಸುವುದಕ್ಕೆ ಹಾಗೂ ದುಷ್ಟರ ಸೈನ್ಯವನ್ನು ನಾಶಪಡಿಸುವುದಕ್ಕೆ ತಮ್ಮ ನೆರವು ಕೋರಿ ಕಳುಹಿಸುತ್ತಿದ್ದೇವೆ."[೩೦]

ಟಿಪ್ಪು ಟರ್ಕಿಯೊಂದಿಗೆ ಮೈತ್ರಿ ಸಿದ್ಧಿಸುವುದರಲ್ಲಿ ಸಂದೇಹ ಇರಲಿಲ್ಲವಾದ್ದರಿಂದ ಒಂದು ಕರಡು ಒಪ್ಪಂದ ತಯಾರಿಸಿ ಸುಲ್ತಾನನ ಸಹಿಗಾಗಿ ಕಳುಹಿಸಿಕೊಟ್ಟನು. ಈ ಒಪ್ಪಂದದ ನಾಲ್ಕನೆಯ ಅನುಚ್ಛೇದವು ಮೈಸೂರು ಮತ್ತು ಟರ್ಕಿಗಳ ನಡುವೆ ಮಿಲಿಟರಿ ಸಹಕಾರವನ್ನು

ಉಲ್ಲೇಖಿಸಿತ್ತು. ಅದರಂತೆ "ಹಡಗುಗಳ ಮೂಲಕ ಟರ್ಕಿಯ ಸುಲ್ತಾನನು ಎಷ್ಟು ಸೇನಾಪಡೆಗಳನ್ನು ಕಳುಹಿಸಲು ಸಿದ್ಧವಾಗಿದ್ದಾನೆ. ಅದಷ್ಟೂ ಸೇನೆಯ ವೆಚ್ಚಗಳನ್ನು ಟಿಪ್ಪು ವಹಿಸುತ್ತಾನೆ. ಈ ಸೇನಾ ಪಡೆಗಳನ್ನು ಯಾವಾಗ ಹಿಂದಕ್ಕೆ ಕಳುಹಿಸಬೇಕೆಂದು ಸುಲ್ತಾನ ಬಯಸಿದರೂ ತನ್ನ ವೆಚ್ಚದಲ್ಲಿ ಕಳುಹಿಸಲಾಗುತ್ತದೆ ಎಂಬ ಭರವಸೆ ನೀಡುತ್ತಾನೆ.[೬೫] ರಾಯಭಾರಿಗಳು ಸುಲ್ತಾನನ ಮುಂದೆ ಬ್ರಿಟಿಷರ ಧಾರ್ಮಿಕ ದೌರ್ಜನ್ಯ ಕುರಿತು ಗಮನಸೆಳೆಯಬೇಕು, ಬ್ರಿಟಿಷರು ಮೊಗಲರಿಗೆ ಸೇರಿದ್ದ ಬಂಗಾಳ, ಬಿಹಾರ ಮತ್ತು ಕರ್ನಾಟಕ ಭಾಗಗಳನ್ನು ವಶಪಡಿಸಿಕೊಂಡಿರುವ ವಿಷಯವನ್ನು ವಿವರಿಸುವಂತೆ ನಿರ್ದೇಶನ ನೀಡಿದ್ದ. ಟಿಪ್ಪುವಿನ ಆದೇಶದಂತೆ ರಾಯಭಾರಿಗಳು ಟರ್ಕಿ ಸುಲ್ತಾನನ ಆಸ್ಥಾನದಲ್ಲಿ ಮನವಿಯನ್ನು ಸಮರ್ಪಿಸಿದರು. ಐದು ಅನುಚ್ಛೇದ ಒಳಗೊಂಡ ಒಪ್ಪಂದದ ಕರಡನ್ನು ಸುಲ್ತಾನನ ಮುಂದಿಟ್ಟರು. ಅವು ಹೀಗಿದ್ದವು.

೧. ಒಂದನೆಯ ಅನುಚ್ಛೇದ: ಎರಡೂ ದೇಶಗಳ ನಡುವೆ ಸಾಮರಸ್ಯ ಸೂರ್ಯಚಂದ್ರರಿರುವವರೆಗೆ ಬೆಳೆಯುತ್ತಿರಲಿಲ್ಲ.

೨. ಎರಡನೆಯ ಅನುಚ್ಛೇದ: ಟರ್ಕಿಯ ಸುಲ್ತಾನನು ಬಸ್ರಾ ನೆಲವನ್ನು ಅದರ ಅಧಿಕಾರಿಗಳೊಂದಿಗೆ ಮೈಸೂರು ಸರ್ಕಾರ್ ಉಪಯೋಗಕ್ಕಾಗಿ ವಹಿಸಿಕೊಡುತ್ತಾನೆ.

೩. ಮೂರನೆಯ ಅನುಚ್ಛೇದ: ತುರ್ಕಿ ಸುಲ್ತಾನನು ಮೈಸೂರು ಸರ್ಕಾರಕ್ಕೆ ಸೇರಿದ ಯಾವ ಬಂದರನ್ನು ಬಯಸುವನೋ ಅದನ್ನು ನೆಲ, ಅಧಿಕಾರಿಗಳ ಸಮೇತ ಸಂಪೂರ್ಣ ಉಪಯೋಗಕ್ಕಾಗಿ ಟಿಪ್ಪು ಸುಲ್ತಾನನಿಂದ ಪಡೆಯುತ್ತಾನೆ. ಇಸ್ಲಾಂ ಜನರ ನಡುವೆ ಸಂಪರ್ಕ ವ್ಯವಸ್ಥೆಯು ನಿರಂತರವಾಗಿರಲಿ. ಆ ಮೂಲಕ ಇಸ್ಲಾಂ ಧರ್ಮ(ದೀನ್ ಎ ಅಹಮದಿ) ಮಂತ್ರ ಸದಾ ಪ್ರವರ್ಧಮಾನಕ್ಕೆ ಬರುತ್ತಿರಲಿ.

೪. ನಾಲ್ಕನೆಯ ಅನುಚ್ಛೇದ: ಹಡಗುಗಳ ಮೂಲಕ ಎಷ್ಟು ಸೈನ್ಯವನ್ನು ಟರ್ಕಿ ಸುಲ್ತಾನನು ಕಳುಹಿಸಿಕೊಡುತ್ತಾನೋ ಆ ಸೈನ್ಯದ ಸಂಪೂರ್ಣ ವೆಚ್ಚವನ್ನು ಸರಕಾರವು ವಹಿಸಿಕೊಳ್ಳುತ್ತದೆ. ಈ ಸೇನೆಯು ತನ್ನ ಉಪಯೋಗಕ್ಕಾಗಿ ಬೇಕಾಗಿದೆ ಎಂದು ಸುಲ್ತಾನ ಬಯಸಿದರೆ ತನ್ನ ವೆಚ್ಚದಲ್ಲಿ ಹಡಗುಗಳ ಮೂಲಕ ಕಳುಹಿಸಿಕೊಡುತ್ತೇನೆ.

೫. ಐದನೆಯ ಅನುಚ್ಛೇದ: ಟರ್ಕಿಯಲ್ಲಿ ದೊರಕುವ ತಂತ್ರಜ್ಞರು ಮತ್ತು ಕುಶಲಕರ್ಮಿಗಳಲ್ಲಿ ಬಂದೂಕು ಮತ್ತು ತೋಪುಗಳನ್ನು ತಯಾರಿಸಲು ಪರಿಣತಿ ಪಡೆದಿರುವ ಕೆಲವರನ್ನು ಆರಿಸಿ ಕಳುಹಿಸಿಕೊಡಬೇಕು. ಮೈಸೂರಿನಿಂದ ಯಾವ ತಂತ್ರಜ್ಞಾನ ಸೇವೆಯನ್ನು ಬೇಕಾದರೂ ಟರ್ಕಿಯು ಪಡೆಯಬಹುದು. ಸಿಡಿಮದ್ದು ತಯಾರಿಕೆ ಪರಿಣತಿ ಪಡೆದ ಇಬ್ಬರನ್ನು ರಾಯಭಾರಿಗಳು ಖುದ್ದಾಗಿ ತಮ್ಮೊಂದಿಗೆ ಕರೆತರಬೇಕು.

ಈ ಕರಡು ಒಪ್ಪಂದವು ಮಹತ್ವಪೂರ್ಣವಾಗಿದೆ. ಇದರಲ್ಲಿ ಕೆಲವು ಸುಧಾರಕ ಹಾಗೂ ಕಾರ್ಯಸಾಧ್ಯವಲ್ಲದ ಸಲಹೆಗಳೂ ಇವೆ. ಟರ್ಕಿಯ ಸುಲ್ತಾನನು ಕರ್ನಾಟಕದ ಯಾವುದೇ ಒಂದು ಬಂದರನ್ನು ವಿನಿಮಯವಾಗಿ ಪಡೆದು ಬಸ್ರಾ ಬಂದರು ನಗರವನ್ನು ವಹಿಸಿಕೊಡಬೇಕೆಂದು ಟಿಪ್ಪು ಕೇಳಿದನು. ಬ್ರಿಟಿಷರಾಗಲಿ, ಫ್ರೆಂಚರಾಗಲಿ, ಡಚ್ಚರಾಗಲಿ ತಮ್ಮ ವಾಣಿಜ್ಯ ವ್ಯವಹಾರ ಸಂಸ್ಥೆಗಳನ್ನು ಕೊಡಬೇಕೆಂದು ಭಾರತೀಯ ಅರಸರನ್ನು ಒತ್ತಾಯ ಪಡಿಸುತ್ತಿದ್ದುದು ಟಿಪ್ಪು ಅರಿವಿಗೆ ಬಂದಿತ್ತು. ಬಸ್ರಾ ನಗರ ಕರ್ನಾಟಕದ ವಸ್ತುಗಳನ್ನು ಪಶ್ಚಿಮ ಏಷ್ಯಾ ಮಾರುಕಟ್ಟೆಗೆ ವಿತರಿಸಲು ಮುಖ್ಯ ಕೇಂದ್ರವಾಗಿ ಅಥವಾ ಕೋಠಿಯಾಗಿ ರೂಪಿತವಾಗಬೇಕು ಎಂದು ಟಿಪ್ಪು ಬಯಸಿದ. ಈ ಅನುಕೂಲತೆಯನ್ನು ಯಾರೂ ಅವನಿಗೆ ಉಚಿತವಾಗಿ ಕೊಡ ಬೇಕಾಗಿರಲಿಲ್ಲ. ಅದೇ ಬಗೆಯ ಸೌಲಭ್ಯವನ್ನು ಟರ್ಕಿಗೆ ನೀಡಲು ಇಚ್ಛಿಸಿದನು. ಪರಸ್ಪರ ಅನುಕೂಲಗಳು ಇದರಲ್ಲಿದ್ದವು. ಈ ದೇಶಗಳ ನಡುವೆ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ವಾಣಿಜ್ಯ ಸಂಬಂಧಗಳು ವೃದ್ಧಿಸುತ್ತಿದ್ದವು.

ಕರಡು ಒಪ್ಪಂದದ ನಾಲ್ಕನೆಯ ಅನುಚ್ಛೇದ ರಾಜಕಾರಣದ ದೃಷ್ಟಿಕೋನ ಹೊಂದಿದೆ. ದೂರದ ವಿದೇಶಿ ಶಕ್ತಿಯೊಂದಿಗೆ ಟಿಪ್ಪು ಯುದ್ಧ ಮತ್ತು ರಕ್ಷಣಾ ಒಪ್ಪಂದ ಮಾಡಿಕೊಳ್ಳಲು ಸಲಹೆ ಮಾಡಿದನು. ಬಹುದೂರದ ಇಂಗ್ಲೆಂಡ್, ಫ್ರಾನ್ಸ್ ಸಾಗರದಾಚೆ ಕೋಟ್ಯಾಂತರ ಜನರ ಭವಿಷ್ಯ ರೂಪಿಸಲು ಶಕ್ತವಾದರೆ ಏಷ್ಯಾದ ಒಂದು ಶಕ್ತಿಯನ್ನು ಭಾರತೀಯರೊಂದಿಗೆ ಸಾಂಸ್ಕೃತಿಕ ಸಂಬಂಧ ಹೊಂದಿರುವ ಶಕ್ತಿಯನ್ನು ಏಕೆ ತೊಡಗಿಸಬಾರದು ಎಂಬ ಆಲೋಚನೆ ಟಿಪ್ಪುವಿನದಾಗಿತ್ತು. ಟರ್ಕಿ ವಿಷಯದಲ್ಲಿ ಟಿಪ್ಪು ತಪ್ಪು ರಾಜಕೀಯ ಲೆಕ್ಕ ಹಾಕಿದನು. ಟರ್ಕಿ ರಷ್ಯಾದ ದುರಾಕ್ರಮಣಕ್ಕೆ ಒಳಗಾಗಿದ್ದ ದೇಶವಾಗಿತ್ತು. ರಷ್ಯಾದ ಆಕ್ರಮಣ ತಡೆಯಲು ತಾನೇ ಬ್ರಿಟಿಷರ ನೆರವು ಕೋರುವ ಸ್ಥಿತಿಯಲ್ಲಿದ್ದ ಟರ್ಕಿಯನ್ನು ಭಾರತದಲ್ಲಿ ಬ್ರಿಟಿಷರನ್ನು ಎದುರಿಸಲು ನೆರವು ಕೇಳಿದ್ದುದು ತಪ್ಪು ಲೆಕ್ಕಚಾರವಾಗಿತ್ತು.[೨೨]

ಟಿಪ್ಪುವು ೧೭೮೬ ಮಾರ್ಚ್ ೧೦ರಂದು ೧೦೦೦ ಜನರಿದ್ದ ದೊಡ್ಡ ರಾಯಭಾರ ತಂಡವನ್ನು ಮೀರ್‌ಗುಲಾಂ ಅಲಿಖಾನ್ ನೇತೃತ್ವದಲ್ಲಿ ಕಳುಹಿಸಿದನು. ಟರ್ಕಿಯ ಖಲೀಫರಿಗೆ ಅರ್ಪಿಸಲು ಅಮೂಲ್ಯ ಉಡುಗೊರೆಗಳನ್ನು, ಮೈಸೂರಿನ ಉತ್ಪನ್ನಗಳ ಮಾದರಿಗಳನ್ನು ನಾಲ್ಕು ಹಡಗುಗಳಲ್ಲಿ ತುಂಬಿ ಕಳುಹಿಸಿದನು. ವಿವಿಧ ಕೋಠಿಗಳಲ್ಲಿ ಮಾರಾಟ ಮಾಡಲು ಮೆಣಸು, ಬಟ್ಟೆ, ಅರಿಶಿಣ, ಶುಂಠಿ, ಏಲಕ್ಕಿ, ಶ್ರೀಗಂಧ, ಸುಗಂಧ ದ್ರವ್ಯ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಜೊತೆಗೆ ನಾಲ್ಕು ಆನೆಗಳೂ, ಮೂರು ಬೆಳ್ಳಿಯ ಹೌದಾಗಳು, ಎರಡು ಪಲ್ಲಕ್ಕಿಗಳು ಇದ್ದವು. ಇವೆಲ್ಲವನ್ನು ಮಾರಾಟ ಮಾಡಿ ಪ್ರಯಾಣ ವೆಚ್ಚ ತುಂಬಿಕೊಳ್ಳಬೇಕಿತ್ತು. ಈ ರಾಯಭಾರ

ತಂಡವು ೧೭೮೬ ಜೂನ್ ೨೪ ರಂದು ಮಸ್ಕತ್ ತಲುಪಿತು. ಅಲ್ಲಿ ಸಂದರ್ಶಿಸಿದ ಸ್ಥಳಗಳ ವಾಯುಗುಣ, ಸಸ್ಯಸಂಪತ್ತು, ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಗಳು, ತೆರಿಗೆ, ವ್ಯಾಪಾರ, ವಿನಿಮಯ ದರಗಳು ಸೇರಿದಂತೆ ಹಲವು ವಿವರಗಳು ರಾಯಭಾರ ತಂಡದ ಕಾರ್ಯದರ್ಶಿ ಅಬ್ದುಲ್ ಕಾದಿರ್ ದಿನಚರಿಯಲ್ಲಿದೆ.[೩೮]

ರಾಯಭಾರ ತಂಡವು ಟರ್ಕಿಯ ರಾಜಧಾನಿ ಬಾಗ್‌ದಾದ್‌ಗೆ ಭೇಟಿ ನೀಡಿತು. ಅವರನ್ನು ಬಹಳ ಗೌರವದಿಂದ, ಸೌಜನ್ಯದಿಂದ ಸತ್ಕರಿಸಲಾಯಿತು. ಆದರೆ ಟರ್ಕಿಯೊಂದಿಗೆ ಯುದ್ಧ ರಕ್ಷಕ ಒಪ್ಪಂದ ಮಾಡಿಕೊಳ್ಳುವ ಟಿಪ್ಪುವಿನ ಆಸಕ್ತಿಗೆ ಉತ್ತರ ಕೊಡುವ ವಿಷಯದಲ್ಲಿ ಮಾತ್ರ ಉಪಾಯವಾಗಿ ಮಾತನ್ನು ತೇಲಿಸಿದನು. ಸುಲ್ತಾನ ಅಬ್ದುಲ್ ಹಮೀದ್ ಟಿಪ್ಪುವಿನ ಪತ್ರಕ್ಕೆ ಪ್ರತ್ಯುತ್ತರ ಬರೆದುಕೊಟ್ಟನು. ಅದರಲ್ಲಿ ಟಿಪ್ಪು ಮೂರನೆಯ ಯುದ್ಧವನ್ನು ಯಶಸ್ವಿಯಾಗಿ ಮುಗಿಸಿದ್ದಕ್ಕಾಗಿ ಹರ್ಷ ವ್ಯಕ್ತಪಡಿಸಿದನು. ನಜಾಬ್‌ನಲ್ಲಿ ಕಾಲುವೆ ನಿರ್ಮಿಸಲು ಟಿಪ್ಪು ಆಸಕ್ತನಾಗಿದ್ದರ ಬಗೆಗೆ ತುಂಬಾ ಸಂತೋಷಪಟ್ಟನು. ಟಿಪ್ಪುವನ್ನು ನಸೀರುಲ್-ಇಸ್ಲಾಂ-ವಾಲ್-ಮುಸ್ಲಿಮಿನ್, ಇಸ್ಲಾಂ ಮತ್ತು ಮುಸ್ಲಿಮರ ರಕ್ಷಕ ಎಂದು ಸಂಬೋಧಿಸಿದ್ದನು.[೩೯] ರಾಯಭಾರಿಗಳ ಭೇಟಿಯ ಉದ್ದೇಶವನ್ನು ಕುರಿತು ಸುಲ್ತಾನನು ಹೀಗೆ ಬರೆದನು. "ಈ ಗೆಳೆಯನೂ ಅಪಾರ ಧೈರ್ಯ ಪರಾಕ್ರಮಗಳಿಂದ ಧರ್ಮಯುದ್ಧದ ದಾರಿಯನ್ನು ಹಾಗೂ ತನ್ನ ಹಿರಿಯರ ಸಂಪ್ರದಾಯಗಳನ್ನು ಹಿಡಿದಿದ್ದಾನೆ. ಆದರೆ ರಷ್ಯನರು ಮುಸ್ಲಿಮರನ್ನು ಅಪಮಾನಿಸುವುದನ್ನೇ ತಮ್ಮ ವೃತ್ತಿ ಮಾಡಿಕೊಂಡಿದ್ದಾರೆ.[೪೦] ಅವರನ್ನು ಎದುರಿಸಲು ಟರ್ಕಿಯು ಸೇನಾ ಸಿದ್ಧತೆಯಲ್ಲಿ ತೊಡಗಿದೆ. ಈ ಸನ್ನಿವೇಶದಲ್ಲಿ ಟಿಪ್ಪುವಿಗೆ ಸೈನಿಕ ನೆರವು ನೀಡುವುದು ಕಷ್ಟ ಎಂಬಂತೆ ಟರ್ಕಿ ಸುಲ್ತಾನನು ತೇಲಿಕೆಯ ಉತ್ತರ ಕೊಟ್ಟದ್ದರಿಂದ ಮೈತ್ರಿ ಒಪ್ಪಂದ ಏರ್ಪಡಲಿಲ್ಲ.

ಟರ್ಕಿಯು ಇಂಗ್ಲೆಂಡಿಗೆ ಎದುರು ನಿಲ್ಲಲು ಇಚ್ಛಿಸಲಿಲ್ಲ. ಕಾರಣ ಅದಕ್ಕೆ ಟರ್ಕಿಯ ಆಂತರಿಕ ಸಮಸ್ಯೆಗಳೇ ಕಾರಣ. ರಷ್ಯಾವು ಅದರ ಮೇಲೆ ನಿರಂತರ ಆಕ್ರಮಣ ನೀತಿ ಅನುಸರಿಸುತ್ತಿತ್ತು. ಕಾನ್‌ಸ್ಟಾಂಟಿನೋಪಲ್ ನಗರ ಹಿಡಿಯುವುದೇ ರಷ್ಯನ್ನರ ಮುಖ್ಯ ಧ್ಯೇಯವಾಗಿತ್ತು. ಜರ್ಮನಿಯಲ್ಲಿ ಎರಡನೆಯ ಕ್ಯಾಥರಿನ್ ಅಧಿಕಾರಕ್ಕೆ ಬರುತ್ತಿದ್ದಂತೆ ಟರ್ಕಿ ಅಖಂಡತೆಗೆ ಬಾರಿ ಗಂಡಾಂತರ ಎದುರಾಯಿತು. ೧೭೮೭ರಲ್ಲಿ ಓಮನ್ ಸಾಮ್ರಾಜ್ಯವನ್ನು ಛಿದ್ರಗೊಳಿಸುವ ಗಂಭೀರ ಯೋಜನೆಯನ್ನು ಸಿದ್ಧಪಡಿಸಿದಳು. ಯುರೋಪಿನ ರಾಜಕೀಯ ಮೇಲಾಟದಲ್ಲಿ ಟರ್ಕಿಯು ಹಲವು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಈ ಸನ್ನಿವೇಶದಲ್ಲಿ ಇಂಗ್ಲೆಂಡಿಗೆ ಟರ್ಕಿಯ ವಿಷಯದಲ್ಲಿ ಹಸ್ತಕ್ಷೇಪ ಮಾಡಿ ತನ್ನ ಹಿರಿತನ ಪ್ರದರ್ಶಿಸಲು ಅವಕಾಶ ಒದಗಿ ಬಂದಿತು. ಟರ್ಕಿಯ ಸುಲ್ತಾನನು ಟಿಪ್ಪುವಿನೊಂದಿಗೆ ಈ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ಒಪ್ಪಂದ ಮಾಡಿಕೊಂಡು ಅವರ ವಿರೋಧ ಕಟ್ಟಿಕೊಳ್ಳಲು ಇಚ್ಚಿಸಲಿಲ್ಲ.[೪೧]

ಟಿಪ್ಪುವು ಬಯಸಿದಂತೆ ಟರ್ಕಿಯೊಡನೆ ಯುದ್ಧರಕ್ಷಕ ಒಪ್ಪಂದವು ಮುರಿದುಬಿದ್ದರೂ ಮತ್ತೊಂದು ಮುಖ್ಯವಾದ ಉದ್ದೇಶವು ಈಡೇರಿತು. ಟಿಪ್ಪುವನ್ನು ಟರ್ಕಿ ಸುಲ್ತಾನನು ಸ್ವತಂತ್ರ ಅರಸನೆಂದು ಮಾನ್ಯ ಮಾಡಿದನು. ಇಸ್ಲಾಮಿಕ್ ಜಗತ್ತಿನ ನಾಯಕನಿಂದ ಹೀಗೆ ರಾಜ್ಯದ ಸ್ವತಂತ್ರ ಅರಸನೆಂದು ಸಂಬೋಧಿಸಲ್ಪಟ್ಟದ್ದು ದೊಡ್ಡ ಸಾಧನೆಯೇ. ನಾಣ್ಯಗಳನ್ನು ಟಂಕಿಸಲು ಹಾಗೂ ತನ್ನ ಹೆಸರಿನಲ್ಲಿ ಖುತ್ಬಾ(ಧರ್ಮೋಪದೇಶ) ಹೊರಡಿಸಲು ಹಕ್ಕು ಪಡೆದನು.[೪೨] ಆದರೆ ಟಿಪ್ಪುವಿನ ರಾಜಕೀಯ ಮತ್ತು ವಾಣಿಜ್ಯ ಉದ್ದೇಶಗಳು ಈಡೇರಲಿಲ್ಲ.

ಟಿಪ್ಪು ಟರ್ಕಿಗೆ ಕಳುಹಿಸಿದ್ದ ರಾಯಭಾರ ತಂಡವು ೧೭೮೯ ಡಿಸೆಂಬರ್ ೨೯ ರಂದು ಕಲ್ಲಿಕೋಟೆ ತಲುಪಿತು. ಇಲ್ಲಿಂದ ತೆರಳಿದ್ದ ೧೦೦೦ ಜನ ಪೈಕಿ ೬೮ ಜನರು ಹಿಂತಿರುಗಿದ್ದರು. ಉಳಿದವರು ಸಾಂಕ್ರಾಮಿಕ ರೋಗ, ಪ್ರತಿಕೂಲ ಹವಾಮಾನ, ನೌಕೆಗಳ ಮುಳುಗಡೆ ಇವೇ ಮೊದಲಾದ ಅವಗಡಗಳಿಗೆ ತುತ್ತಾಗಿ ಅಸುನೀಗಿದರು. ಈ ರಾಯಭಾರಿ ವ್ಯವಸ್ಥೆಯಿಂದ ಟಿಪ್ಪುವಿಗೆ ೨೦ ಲಕ್ಷ ರೂಪಾಯಿ ವೆಚ್ಚವುಂಟಾಯಿತು.[೪೩] ಆದರೆ ನಿರೀಕ್ಷಿತ ಫಲ ದೊರೆಯಲಿಲ್ಲ. ಟರ್ಕಿಯೊಂದಿಗೆ ಅವನ ಉದ್ದೇಶಿತ ಮೈತ್ರಿ ಒಪ್ಪಂದ ನಡೆದಿದ್ದರೆ ಇಂಗ್ಲೆಂಡಿಗೆ ರಾಜಕಾರಣವೇ ಅಲ್ಲದೆ ವಾಣಿಜ್ಯೋದ್ಯಮದ ಮೇಲೂ ನಿರ್ಬಂಧ ಹೇರುವ ಅವನ ಪ್ರಯತ್ನಕ್ಕೆ ತಕ್ಕ ಪ್ರತಿಕ್ರಿಯೆ ಟರ್ಕಿ ಸುಲ್ತಾನನಿಂದ ದೊರೆಯಲಿಲ್ಲ. ಟಿಪ್ಪುವಿನ ದೂರದೃಷ್ಟಿ, ರಾಜಕೀಯ ಚಿಂತನೆ, ಹೊರಜಗತ್ತಿನ ಸಂಪರ್ಕದಿಂದ ತನ್ನ ರಾಜ್ಯದ ಸ್ವಾತಂತ್ರ್ಯ ಹಾಗೂ ಏಕಸ್ವಾಮ್ಯ ಉಳಿಸಲು ಇಂಥ ಪ್ರಯತ್ನ ನಡೆಸಿದನು.

೬.೪. ಟಿಪ್ಪು ಮತ್ತು ಇರಾನಿನ ನಡುವಿನ ಸಂಬಂಧ

ಟಿಪ್ಪುವು ಇರಾನಿನೊಂದಿಗೆ ವಾಣಿಜ್ಯ ಸಂಬಂಧಗಳನ್ನು ವೃದ್ಧಿಸಿಕೊಳ್ಳಲು ಆಸಕ್ತನಾದನು. ಮಿಲಿಟರಿ ಶಕ್ತಿ ದೃಷ್ಟಿಯಿಂದ ಅದು ಬಲಿಷ್ಠತೆ ಹೊಂದಿರಲಿಲ್ಲ ಎಂಬ ಆಲೋಚನೆಯೂ ಇದಕ್ಕೆ ಕಾರಣ. ಭಾರತದ ವಸ್ತುಗಳನ್ನು ಯುರೋಪಿಗೆ ಇರಾನ್ ಮತ್ತು ತುರ್ಕಿಗಳ ಮೂಲಕವಾಗಿ ಸಾಗಿಸುತ್ತಿದ್ದ ಹಳೆಯ ಭೂಮಾರ್ಗವನ್ನು ಮತ್ತೆ ಚಾಲನೆಗೆ ತರಲು ಬಯಸಿದನು. ಇರಾನ್ ದೇಶವು ತನ್ನ ತೀರಪ್ರದೇಶಗಳಲ್ಲಿ ಮೈಸೂರು ಕೆಲವು ಕೋಠಿಗಳನ್ನು ಸ್ಥಾಪಿಸಿಕೊಳ್ಳಲು ಅನುಮತಿ ಕೊಡಬೇಕೆಂದು ಟಿಪ್ಪು ಬಯಸಿದನು. ಇದರಿಂದ ಎರಡೂ ದೇಶಗಳ ನಡುವೆ ವಾಣಿಜ್ಯ ಹಾಗೂ ರಾಜಕೀಯ ಅರಿವು ಅಧಿಕವಾಗುತ್ತದೆ ಎಂದೂ ಭಾವಿಸಲಾಯಿತು. ಟಿಪ್ಪು ಈ ಉದ್ದೇಶಿತ ವಿಷಯವಾಗಿ ಇರಾನಿನ ಷಹಾನಿಗೆ ಒಂದು ಪತ್ರವನ್ನು ಬರೆದನು. ವಾಣಿಜ್ಯ ಮತ್ತು ರಾಜಕೀಯ ಸಂಪರ್ಕಗಳ ಪ್ರಾಮುಖ್ಯತೆಯನ್ನು ಷಹಾನಿಗೆ ಮನವರಿಕೆ ಮಾಡಿಕೊಡಲು ತನ್ನ ಪ್ರತಿನಿಧಿ ನೂರುಲ್ಲಾನನ್ನು ಕಳುಹಿಸಿಕೊಟ್ಟನು.[೪೪] ಟಿಪ್ಪುವಿನ ಪ್ರಯತ್ನಗಳನ್ನು ವಿಫಲಗೊಳಿಸಲು

ಬ್ರಿಟಿಷರು ಧರ್ಮದ ಅಸ್ತ್ರ ಬಳಸಿದರು. ಟಿಪ್ಪುವಿನ ಮತ್ತು ಸುನ್ನಿ ಭಿನ್ನಾಭಿಪ್ರಾಯಗಳನ್ನು ಪ್ರಚೋದಿಸಿದರು. ಇದರಿಂದಾಗಿ ಟಿಪ್ಪುವಿಗೆ ಇರಾನಿನೊಂದಿಗೆ ರಾಜಕೀಯ ಮತ್ತು ವಾಣಿಜ್ಯ ಸಂಪರ್ಕವನ್ನು ಏರ್ಪಡಿಸಿಕೊಂಡು ತನ್ನ ಯೋಜನೆಗಳನ್ನು ಯಶಸ್ವಿಗೊಳಿಸಲು ಸಾಧ್ಯವಾಗಲಿಲ್ಲ.

ಟಿಪ್ಪುವು ಅತ್ಯಧಿಕ ಪ್ರಮಾಣದಲ್ಲಿ ಗೌಪ್ಯತೆಯನ್ನು ಪಾಲಿಸಿದನು. ಫ್ರೆಂಚರಿಗೆ ಬರೆದ ಪತ್ರಗಳಲ್ಲಿ ಬ್ರಿಟಿಷರನ್ನು ತನ್ನೊಬ್ಬನಿಂದಲೇ ಬಗ್ಗುಬಡಿಯಲು ಸಾಧ್ಯವಿಲ್ಲ ಎಂದೂ ಒಪ್ಪಿಕೊಂಡಿದ್ದನು. ಅವನಿಗೆ ಯುರೋಪಿಯನ್ ನೆರವು ಬೇಕಾಗಿದ್ದಿತು. ಯುರೋಪ್‌ನಲ್ಲಿ ಬ್ರಿಟಿಷರ ಶತ್ರುಗಳು ಫ್ರೆಂಚರು. ಈ ಅರಿವು ಟಿಪ್ಪುವಿಗಿದ್ದಿತು. ಸಮಾನ ಶಕ್ತಿಗಳನ್ನು ಎದುರು ನಿಲ್ಲಿಸುವ ಹಾಗೂ ಆ ಮೂಲಕ ಭಾರತದಲ್ಲಿ ಬ್ರಿಟಿಷರ ಅಧಿಪತ್ಯವನ್ನು ಕೊನೆಗೊಳಿಸುವ ಸ್ಪಷ್ಟ ನಿಲುವನ್ನು ಟಿಪ್ಪು ಹೊಂದಿದ್ದನು.

ಅಡಿಟಿಪ್ಪಣಿಗಳು

೧. ಪಾಂಡಿಚೇರಿ ಆರ್ಕೈವ್ಸ್ ಮ್ಯಾನ್‌ಸ್ಕ್ರಿಪ್ಟ್, ನಂ.೪೪೨.

೨. ಅದೇ, ನಂ.೮೯೪.

೩. ಅದೇ, ನಂ.೮೯೪.

೪. ಅದೇ, ನಂ.೯೫೨.

೫. ಅದೇ, ನಂ.೯೫೧.

೬. ಅದೇ, ನಂ.೯೬೧.

೭. ಅದೇ, ನಂ.೯೫೦.

೮. ಅದೇ, ನಂ.೯೬೦.

೯. ಸಿ.ಪಿ.ಸಿ.VII, ಸಂಖ್ಯೆ ೩೬೧.

೧೦. ಕಿರ್ಕಪ್ಯಾಟ್ರಿಕ್, ಸಂಖ್ಯೆ ೧೬೮.

೧೧. ಪಿ.ಆರ್.ಸಿ.II, ಸಂಖ್ಯೆ ೫೪.

೧೨. ಪಾಂಡಿಚೇರಿ ಆರ್ಕೈವ್ಸ್ ಮ್ಯಾನ್‌ಸ್ಕ್ರಿಪ್ಟ್, ಸಂಖ್ಯೆ ೧೬೬೪.

೧೩. ಅದೇ, ಸಂಖ್ಯೆ ೨೧೪೦.

೧೪. ಅದೇ, ಸಂಖ್ಯೆ ೨೨೦೦.

೧೫. ಅದೇ, ಸಂಖ್ಯೆ ೨೨೦೦.

೧೬. ಅದೇ, ಸಂಖ್ಯೆ ೧೮೦೭.

೧೭. ಅದೇ, ಸಂಖ್ಯೆ ೧೮೦೭.

೧೮. ಅದೇ, ಸಂಖ್ಯೆ ೨೧೯೫.

೧೯. ಡಾಕ್ಯೂಮೆಂಟ್ಸ್ ಅಂಡ್ ಸ್ಟೇಟ್ ಪೇಪರ್ಸ್ ವೆಲ್ಲಸ್ಲಿ ೧೭೯೯, ಪ್ರಕಟ, ಪು.೨.

೨೦. ಅದೇ, ಪು.೨.

೨೧. ಅದೇ, ಪು.೭.

೨೨. ಅದೇ, ಪೇಪರ್ ಬಿ, ಪು.೩.

೨೩. ಮಾರ್ಟಿನ್, ಸಂಪುಟ ೫, ಪು.೧೫.

೨೪. ಅದೇ, ಪು.೨೫, ೨೭.

೨೫. ಅದೇ, ಪು.೧೯.

೨೬. ಪರ್ಷಿಯನ್ ಸಪ್ಲಿಮೆಂಟರಿ ಪೇಪರ್ಸ್, ಮಾರ್ಟಿನ್ ಸಂಪುಟ ೫, ಪು.೮೨, ೮೫.

೨೭. ಎಂ.ಎಚ್.ಖಾನ್,ಪು.೩೦೬, ೩೦೭.

೨೮. ಜಮಾನ್ ಶಹಾನು ಸರ್‌ಜಾನ್ ಶೋರ್‌ಗೆ, ಮಾರ್ಟಿನ್ ಸಂಪುಟ–೧, ಅನುಬಂಧ ಡಿ, ಪು.೬೭೦.

೨೯. ಗವರ್ನರ್ ಜನರಲ್ ಡಂಡಾಸ್‌ಗೆ, ಅದೇ ೬, ಜುಲೈ ೧೭೯೮, ಅನುಬಂಧ ಇ, ಸಂಪುಟ–೧.

೩೦. ಕಿರ್ಕ್‌ಪ್ಯಾಟ್ರಿಕ್, ಅನುಬಂಧ, ಸಂಖ್ಯೆ ೭೧.

೩೧. ಸಿ.ಪಿ.ಸಿ.VI, ಸಂಖ್ಯೆ ೧೧೧೮.

೩೨. ವಿಲ್ಕ್ಸ್, ಹಿಸ್ಟಾರಿಕಲ್ ಸ್ಕೆಚ್ಚಸ್ ಆಫ್ ಸೌತ್ ಇಂಡಿಯಾ ಇನ್ ಆ್ಯನ್ ಅಟೆಂಪ್ಟ್ ಟು ಟ್ರೇಸ್ ದಿ ಹಿಸ್ಟರಿ ಆಫ್ ಮೈಸೂರು ಸಂಪುಟ–೨, ಮದರಾಸು–೧೮೬೯, ಪು.೧೪೭.

೩೩. ನಡೆವಳಿ, ೫ ಜನವರಿ, ೧೭೮೭

೩೪. ಹಿಕ್ಮತ್ ಖಾಯೂರ್ ಸೀರೀಸ್ ೧, ದಾಖಲೆ ಸಂಖ್ಯೆ ೨.

೩೫. ಹುಕುಂನಾಮ, ಆರ್.ಎ.ಎಸ್.ಬಿ. ಮ್ಯಾನ್‌ಸ್ಕ್ರಿಪ್ಟ್, ೧೬೭೭, ಟಿಪ್ಪಣಿ ೪.

೩೬. ಅದೇ, ಟಿಪ್ಪಣಿ ೨ ಎ ೨ ಬಿ.

೩೭. ಅದೇ, ೧೭ ಎ.

೩೮. ಆರ್.ಎ.ಎಸ್.ಬಿ. ಮ್ಯಾನ್‌ಸ್ಕ್ರಿಪ್ಟ್, ನಂ.೧೬೭೮, ಟಿಪ್ಪಣಿ ೧೩ ಎ.

೩೯. ಹಿಕ್ಮತ್ ಖಾಯೂರ್ ಸೀರಿಸ್ ೧, ಎ ದಾಖಲೆ ೧೧೧

೪೦. ಅದೇ.

೪೧. ಕಿರ್ಕ್‌ಪ್ಯಾಟ್ರಿಕ್ ಎಲ್. ನಂ.CXCI

೪೨. ಸಿ.ಪಿ.ಸಿ.VII, ೨೧ ಜೂನ್, ೧೭೮೭.

೪೩. ಬಿರೇಂದ್ರವರ್ಮ, ಟಿಪ್ಪು ಸುಲ್ತಾನ್ಸ್ ಎಂಬೆಸ್ಸೀಸ್ ಟು ಕಾನ್‌ಸ್ಟಾಂಟಿನೋಪಲ್ ಅಂಡ್ ಕಾಬೂಲ್, ಜರ್ನಲ್ ಆಫ್ ಹಿಸ್ಟಾರಿಕಲ್ ರಿಸರ್ಚ್, ಸಂ.೧೬, ಪು.೫೧, ೫೬.

೪೪. ಮಹಮೂದ್ ಖಾನ್, ಸುಲ್ತಾನತ್ ಎ ಖುದಾದ್, ಪು.೫೫೬.

ಅಧ್ಯಾಯ ಏಳು

ಟಿಪ್ಪು ಮತ್ತು ಫ್ರೆಂಚರ ರಾಜಕೀಯ ಸಂಬಂಧಗಳು

ಅಧ್ಯಾಯ ಏಳು

ಟಿಪ್ಪು ಮತ್ತು ಫ್ರೆಂಚರ ರಾಜಕೀಯ ಸಂಬಂಧಗಳು

ಭಾರತದಿಂದ ಬ್ರಿಟಿಷರನ್ನು ಹೊರಹಾಕಬೇಕೆಂಬ ಅಪೇಕ್ಷೆ ಹೊಂದಿದ್ದ ಟಿಪ್ಪು ಅದನ್ನು ನೆರವೇರಿಸಲು ದೇಶೀಯ ಅರಸರ ಬೆಂಬಲ ಕೋರಿದನು. ಅವನ ನಿರೀಕ್ಷೆಯನ್ನು ಸ್ಥಳೀಯ ರಾಜರು ಹುಸಿಗೊಳಿಸಿದರು. ಅವನ ನೆರವಿಗೆ ಬರದೆ ಅವನ ವಿರುದ್ಧವೇ ಅಪ್ರಚೋದಿತರಾಗಿ ಯುದ್ಧ ಮಾಡಿದರು. ಇದು ಟಿಪ್ಪುವಿನ ಸ್ವಾತಂತ್ರ್ಯದ ಕನಸ್ಸನ್ನು ಭಗ್ನಗೊಳಿಸಿತು. ಇಂಗ್ಲಿಷರು ಭಾರತೀಯ ಅರಸರ ಬೆಂಬಲದೊಂದಿಗೆ ಮತ್ತಷ್ಟು ಪ್ರಬಲಗೊಂಡರು. ಹೆಚ್ಚಿನ ಸೈನಿಕ ಬಲ ಹೊಂದಿದ್ದರು. ಅಷ್ಟೇ ಪ್ರಮಾಣದಲ್ಲಿ ಯುದ್ಧ ಸಾಮಗ್ರಿಗಳನ್ನು ಹೊಂದಿದ್ದರು. ಇಂಥ ಪ್ರಬಲ ವಿದೇಶಿ ಶಕ್ತಿಯನ್ನು ಎದುರಿಸಲು ತನ್ನೊಬ್ಬನಿಂದಲೇ ಸಾಧ್ಯವಿಲ್ಲವೆಂದು ತೀರ್ಮಾನಿಸಿ ಟಿಪ್ಪು, ಬ್ರಿಟಿಷರಷ್ಟೇ ಶಕ್ತಿಯುತ ಮತ್ತೊಂದು ವಿದೇಶಿಯ ಶಕ್ತಿಯೊಂದಿಗೆ ಸಂಬಂಧಗಳನ್ನು ಬೆಳೆಸಲು ಮುಂದಾದನು. ಫ್ರಾನ್ಸ್, ಟರ್ಕಿ, ಇರಾನ್ ಮತ್ತು ಅಫ್ಘಾನಿಸ್ಥಾನ ಮೊದಲಾದ ದೇಶಗಳನ್ನು ಸಂಪರ್ಕಿಸಿದನು. ಭಾರತದಲ್ಲಿ ಫ್ರಾನ್ಸಿನ ಅಧಿಕಾರಿಗಳು ಇವನನ್ನು ಬೆಂಬಲಿಸದಿದ್ದಾಗ ಟಿಪ್ಪು ನೇರವಾಗಿ ಫ್ರಾನ್ಸ್ ಚಕ್ರವರ್ತಿಯನ್ನೆ ಸಂಪರ್ಕಿಸಲು ಮುಂದಾದನು. ರಾಯಭಾರಿಗಳನ್ನು ಫ್ರಾನ್ಸಿಗೆ ಕಳುಹಿಸಿ ಅವರ ಅಭಿಪ್ರಾಯ ಸಂಗ್ರಹಣೆ ಮತ್ತು ನೆರವು ಪಡೆಯಲು ಪ್ರಯತ್ನಿಸಿದನು. ಟಿಪ್ಪುವಿನ ಈ ಆಲೋಚನೆಗೆ ಮುಖ್ಯ ಕಾರಣವೂ ಇದೆ. ಯುರೋಪಿನ ರಾಜಕೀಯ ಚಿತ್ರಣ ಟಿಪ್ಪುವಿಗೆ ಪ್ರೇರಣೆ ನೀಡಿತು. ಯುರೋಪಿನ ಶಕ್ತಿ ರಾಜಕಾರಣದಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳು ಪ್ರತಿಸ್ಪರ್ಧಿಗಳಾಗಿ ಕಾದಾಡುತ್ತಿದ್ದವು. ಜೊತೆಗೆ ಭಾರತದಲ್ಲಿಯೂ ಫ್ರೆಂಚರು ಮತ್ತು ಬ್ರಿಟಿಷರು ತಮ್ಮಗಳ ಪ್ರಭುತ್ವ ಸ್ಥಾಪನೆಗೆ ಪೈಪೋಟಿ ನಡೆಸುತ್ತಿದ್ದವು. ಯುರೋಪಿನಲ್ಲಿ ಈ ಎರಡು ಪಕ್ಷಗಳ ನಡುವೆ ಯಾವುದೇ ಯುದ್ಧ ಅಥವಾ ಶಾಂತಿ ಒಪ್ಪಂದಗಳನ್ನು ಜರುಗಿದರೆ ಅದರ ಪ್ರಭಾವ ಭಾರತದಲ್ಲಿಯೂ ಪ್ರತಿಧ್ವನಿಸುತ್ತಿತ್ತು. ಈ ಅಂಶವನ್ನು ಗಮನಿಸಿಯೇ ಟಿಪ್ಪು ಫ್ರಾನ್ಸಿನ ನೆರವು ಪಡೆಯಲು ಯೋಚಿಸಿದನು.

ಟಿಪ್ಪುವಿನ ವಿದೇಶ ಸಂಪರ್ಕಗಳಿಂದಾಗಿ ಭಾರತಕ್ಕೂ ಹೊರ ಜಗತ್ತಿಗೂ ಹೆಚ್ಚಿನ ಸಂಬಂಧ ಬೆಳೆಯಿತು. ಪ್ರಪಂಚದ ಬೇರೆ ಭಾಗಗಳಲ್ಲಿಯೂ ಟಿಪ್ಪುವಿನ ಹೆಸರು ಕೇಳಿಬಂದಿತು. ಪಾಶ್ಚಾತ್ಯ ವಸಾಹತುಶಾಹಿ ಶಕ್ತಿಗಳು ಭಾರತದ ಮೇಲೆ ಏಕೆ ಕಣ್ಣಿಟ್ಟಿದ್ದಾರೆ ಎಂಬುದು ಜಗತ್ತಿಗೆ ಮನವರಿಕೆ ಮಾಡಿದಂತಾಯಿತು. ಭಾರತೀಯ ಆಳರಸರಿಗೆ ರಕ್ತಗತವಾಗಿ ಬಂದಿದ್ದ ಅನೈಕ್ಯಮತತೆ ಹೇಗೆ ಅವರನ್ನು ನಾಶಪಡಿಸುತ್ತದೆ ಎಂಬ ಅರಿವು ಟಿಪ್ಪುವಿಗೆ ಮೊದಲು ಕಂಡುಬಂದಿತು. ಇದರಿಂದಲೇ ಭಾರತೀಯ ಅರಸರ ಬೆಂಬಲದ ವಿಷಯದಲ್ಲಿ ಅವನಿಗೆ ನಂಬಿಕೆ ಉಳಿಯಲಿಲ್ಲ. ಮರಾಠರು, ಹೈದರಾಬಾದಿನ ನಿಜಾಮ, ಆರ್ಕಾಟ್ ನವಾಬರು ಬ್ರಿಟಿಷರ ಪರವಾಗಿಯೇ ನಿಂತರು. ಟಿಪ್ಪು ಇವರನ್ನು ತನ್ನತ್ತ ಸೆಳೆಯಲು ನಡೆಸಿದ ಪ್ರಯತ್ನಗಳೆಲ್ಲವು ವಿಫಲವಾದವು. ಇದರಿಂದ ಅನಿವಾರ್ಯವಾಗಿಯೇ ವಿದೇಶಿ ಸಂಪರ್ಕ ಬೆಳೆಸಿದನು. ಹದಿನೆಂಟನೆಯ ಶತಮಾನದಲ್ಲಿ ಫ್ರಾನ್ಸ್ ದೇಶವು ಮೈಸೂರಿನ ಸಹಜ ಮಿತ್ರ ದೇಶವಾಗಿತ್ತು. ೧೭೫೨ರಲ್ಲಿ ಆರ್ಕಾಟ್ ನವಾಬ ಮಹಮ್ಮದ್ ಅಲಿಯು ತಿರುಚನಾಪಳ್ಳಿ ವಿಚಾರದಲ್ಲಿ ಮೋಸ ಮಾಡಿದ ಮೇಲೆ ಫ್ರೆಂಚರು ಮತ್ತು ಮೈಸೂರು ನಡುವೆ ಉತ್ತಮ ರಾಜಕೀಯ ಸಂಬಂಧಗಳು ಬೆಳೆದವು. ಹೈದರಾಲಿಯು ಕೂಡ ಫ್ರೆಂಚರೊಂದಿಗೆ ಸಂಬಂಧಗಳನ್ನು ಹೊಂದಿದ್ದನು. ಮೊದಲ ಎರಡು ಆಂಗ್ಲೊ–ಮೈಸೂರು ಯುದ್ಧದಲ್ಲಿ ಹೈದರನು ಫ್ರೆಂಚರ ನೆರವನ್ನು ನಿರೀಕ್ಷಿಸಿದರೂ ಅವರು ಸೈನಿಕ ನೆರವು ನೀಡಲಿಲ್ಲ. ಆದರೂ ಹೈದರ್ ಮತ್ತು ಟಿಪ್ಪು ಫೆಂಚರನ್ನು ತಮ್ಮ ಆಪ್ತ ಮಿತ್ರರಂತೆಯೇ ಪರಿಗಣಿಸಿದರು. ಮುಂದೊಂದು ದಿನ ಆಂಗ್ಲೋ–ಫ್ರೆಂಚರ ವೈರತ್ವವನ್ನು ತನ್ನ ಪ್ರಯೋಜನಕ್ಕೆ ಬಳಸಿಕೊಳ್ಳಬಹುದೆಂದು ಟಿಪ್ಪು ಭಾವಿಸಿದನು. ಅಮೆರಿಕನ್ನರ ಸ್ವಾತಂತ್ರ್ಯ ಹೋರಾಟಕ್ಕೆ ಫ್ರೆಂಚರು ನೆರವು ನೀಡಿದ್ದರು. ಭಾರತದಲ್ಲಿಯೂ ಇಂಗ್ಲಿಷರನ್ನು ಹೊರಹಾಕಲು ಸಹಾಯ ಮಾಡುವನೆಂದು ಟಿಪ್ಪುವು ತಿಳಿದುಕೊಂಡಿದ್ದನು. ಎರಡನೆಯ ಆಂಗ್ಲೊ–ಮೈಸೂರು ಯುದ್ಧ ನಡೆದಾಗ ಫ್ರೆಂಚರು ಮೈಸೂರಿಗೆ ನೆರವು ನೀಡಲಿಲ್ಲ.

ಫ್ರೆಂಚರು ಭಾರತದಲ್ಲಿ ಟಿಪ್ಪು ಮತ್ತು ಇಂಗ್ಲಿಷರ ನಡುವಿನ ಮಧ್ಯಸ್ಥಗಾರರಂತೆ ಕಾಣಿಸಿಕೊಂಡರು. ಭಾರತದಲ್ಲಿ ಸುರಕ್ಷಿತವಾದ ನೆಲೆಯನ್ನು ಹೊಂದಲು ಫ್ರೆಂಚರು ಬಯಸಿದರು. ಯುದ್ಧದಲ್ಲಿ ಪಡೆಯಲಾಗದಿದ್ದನ್ನು ರಾಜಕಾರಣದಿಂದ ಪಡೆದುಕೊಳ್ಳಲು ಯತ್ನಿಸಿದರು. ಭಾರತದಲ್ಲಿ ಫ್ರೆಂಚರ ಶಕ್ತಿಯು ಕ್ಷೀಣಿಸಿದ್ದಿತು. ಎಲ್ಲ ಭಾರತೀಯ ಶಕ್ತಿಗಳನ್ನು ಒಟ್ಟುಗೂಡಿಸಿ ಇಂಗ್ಲಿಷರ ವಿರುದ್ಧ ನಿಲ್ಲಿಸಬೇಕೆಂದು ಆಲೋಚಿಸಿದರು. ಬುಸ್ಸಿಯು ಮಾರ್ಸೆಲ್ ಡಿ ಕ್ಯಾಸ್ಟ್ರಿಗೆ ಪತ್ರ ಬರೆದು ಮರಾಠರು, ನಿಜಾಮ ಮತ್ತು ಟಿಪ್ಪುವನ್ನು ಒಟ್ಟುಗೂಡಿಸಿ ಇಂಗ್ಲಿಷರ ವಿರುದ್ಧ ಯುದ್ಧ ಹೂಡುವಂತೆ ಮಾಡಲು ನಾನು ಶಕ್ತಿಮೀರಿ ಪ್ರಯತ್ನಿಸಿರುವುದಾಗಿ ತಿಳಿಸಿದನು.[೧] ಬುಸ್ಸಿಯು ಕಾಮ್ಟೆ ಡಿ

ವರ್ಜೆನೆಸ್‌ಗೆ ಒರೆದ ಪತ್ರದಲ್ಲಿ ಮರಾಠರು ಮತ್ತು ನಿಜಾಮ ಇಬ್ಬರು ಕೂಡಿ ಟಿಪ್ಪುವನ್ನು ನಾಶ ಮಾಡಲು ಹೊರಟಿದ್ದಾರೆ. ಈ ಯೋಜನೆಯು ಇಂಗ್ಲಿಷರಿಗೆ ಅತ್ಯಂತ ಸಂತೋಷಕರವಾಗಿದೆ. ಅದನ್ನು ಮುರಿಯಲು ನಾನು ಕಷ್ಟಪಡುತ್ತಿದ್ದೇನೆ. ಈ ಮೂರು ಪ್ರಬಲ ಭಾರತೀಯ ಶಕ್ತಿಗಳನ್ನು ಇಂಗ್ಲಿಷರ ವಿರುದ್ಧ ಒಟ್ಟುಗೂಡಿಸಿ ನಾವು ರಾಜಿ ಮಾಡಿಕೊಳ್ಳದೆಯೇ ನಮ್ಮ ಕೆಲಸವಾಗುವಂತೆ ಮಾಡಲು ಪ್ರಯತ್ನಿಸುತ್ತಿದ್ದೇನೆ' ಎನ್ನುವ ಮಾಹಿತಿಯನ್ನು ತಿಳಿಸಿದನು.[೨] ಫ್ರೆಂಚರ ಧ್ಯೇಯವು ಭಾರತೀಯ ಆಳರಸರು ತಮ್ಮ ತಮ್ಮ ನಡುವಿನ ಭಿನ್ನಾಭಿಪ್ರಾಯಗಳಿಂದ ಕಚ್ಚಾಡುತ್ತಿದ್ದು, ಅದರ ಲಾಭವನ್ನು ಇಂಗ್ಲಿಷರು ಪಡೆಯಲು ಅವಕಾಶ ಮಾಡಿಕೊಡುತ್ತದೆ ಎಂಬುದಾಗಿ ಎಚ್ಚರಿಸುವುದಾಗಿತ್ತು. ಫ್ರೆಂಚರು ಯಾವುದೇ ಶಕ್ತಿಯೊಂದಿಗೆ ಸೇರಿಕೊಳ್ಳುವ ಬದಲಾಗಿ ಭಾರತೀಯ ಅರಸರ ನಡುವಿನ ವೈಮನಸ್ಸುಗಳನ್ನು ಹೋಗಲಾಡಿಸಲು ಪ್ರಯತ್ನಿಸಿದರು. ಶಾಂತಿ ಸ್ಥಾಪನೆಗೆ ತಕ್ಕ ಭೂಮಿಕೆಯನ್ನು ರೂಪಿಸಲು ಪ್ರಯತ್ನಿಸಿದರು.[೩]

ಯುರೋಪಿನಲ್ಲಿ ನಡೆದ ವರ್ಸೇಲ್ಸ್ ಒಪ್ಪಂದದ ೧೬ನೆಯ ಅನುಚ್ಛೇದವು ಭಾರತೀಯ ಅರಸರು ಪರಸ್ಪರ ಯುದ್ಧ ಮಾಡುವಾಗ ಫ್ರೆಂಚರಾಗಲಿ, ಇಂಗ್ಲಿಷರಾಗಲಿ ಅದರಲ್ಲಿ ಭಾಗವಹಿಸುವಂತಿಲ್ಲ ಎಂದು ಷರತ್ತು ವಿಧಿಸಲಾಗಿತ್ತು. ಹೀಗಾಗಿ ಫ್ರೆಂಚರು ಭಾರತೀಯರ ಯಾವುದೇ ರಾಜರ ಪಕ್ಷವಹಿಸುವುದು ಕಷ್ಟವೇ ಆಗಿತ್ತು. ಫ್ರೆಂಚರ ನೀತಿಯು ಮೂಲಭೂತವಾದ ಬದಲಾವಣೆ ಹೊಂದಿತ್ತು. ಅವರು ಟಿಪ್ಪುವನ್ನು ಬೆಂಬಲಿಸುವುದಕ್ಕಿಂತ ಮರಾಠರ ಸ್ನೇಹ ಬೆಳೆಸುವುದು ಸೂಕ್ತವೆಂದು ಭಾವಿಸಿದರು. ಇದಕ್ಕೆ ಕಾರಣ ಟಿಪ್ಪುವಿನ ಅಧಿಕಾರ ಹೊಸದು ಮತ್ತು ಸ್ಥಿರವಾಗಿಲ್ಲ, ಮರಾಠರಿಗೆ ಅನುಭವ ಹೆಚ್ಚಿದೆ, ಸ್ಥಿರವಾಗಿದೆ ಎನ್ನುವುದಾಗಿತ್ತು.[೪] ಹೀಗಾಗಿ ಮರಾಠರ ಸಖ್ಯ ಬೆಳೆಸಲು ಒಲವು ತೋರಿದರು. ಟಿಪ್ಪು ಹೈದರಾಲಿಯಷ್ಟು ಶಕ್ತಿಸಾಮರ್ಥ್ಯ ಪಡೆದುಕೊಂಡಿಲ್ಲ, ಆದರೆ ಹಗೆತನವನ್ನು ಮಾತ್ರ ರೂಢಿಸಿಕೊಂಡಿದ್ದಾನೆ ಎಂದು ವಿಮರ್ಶಿಸಿದರು. ಮರಾಠರು ಮನಸ್ಸು ಮಾಡಿದರೆ ಭಾರತದಲ್ಲಿ ಒಂದು ಕ್ರಾಂತಿಯನ್ನೆ ಮಾಡಬಲ್ಲರು ಎಂದು ಭಾವಿಸಿದರು. ಫ್ರೆಂಚರ ವರ್ತನೆಯು ಟಿಪ್ಪುವಿಗೆ ವಿವಂಚನೆಯಿಂದ ಕೂಡಿದ್ದಿತು. ಹೈದರಾಲಿಯ ಕಾಲದಿಂದಲು ಮೈಸೂರಿಗೆ ಮಿತ್ರರಂತಿದ್ದ ಫ್ರೆಂಚರು ಟಿಪ್ಪುವನ್ನು ಕೈಬಿಟ್ಟು ದೊಡ್ಡ ಆಘಾತವನ್ನುಂಟು ಮಾಡಿದರು. ಮರಾಠ ನಾಯಕ ನಾನಾಫಡ್ನವೀಸ್ ಫ್ರೆಂಚರೊಂದಿಗೆ ಸ್ನೇಹ ಬೆಳೆಸಲು ಎಂದೂ ಇಚ್ಛೈಸಲಿಲ್ಲ. ಏಕೆಂದರೆ ಫ್ರೆಂಚರು ಮತ್ತು ಟಿಪ್ಪುವಿನೊಂದಿಗೆ ನಡುವೆ ರಹಸ್ಯ ಒಪ್ಪಂದವಾಗಿದೆ ಎಂದು ಭಾವಿಸಿದನು. ಇಂಗ್ಲಿಷರೊಂದಿಗೆ ಸ್ನೇಹದಿಂದಿರಲು ಇಚ್ಛೈಸಿದನು. ಟಿಪ್ಪು ಫ್ರೆಂಚರ ನೆರವು ಪಡೆಯಲು ಫ್ರಾನ್ಸಿನ ಚಕ್ರವರ್ತಿ ಹದಿನಾರನೆಯ ಲೂಯಿಯ ಆಸ್ಥಾನಕ್ಕೆ ರಾಯಭಾರ ನಿಯೋಗವನ್ನು ಕಳುಹಿಸಿದನು. ಇಂಗ್ಲಿಷರ ವಿರುದ್ಧದ ಯುದ್ಧದಲ್ಲಿ ಫ್ರೆಂಚರು ಯಾವ ನೆರವನ್ನು ನೀಡಬಹುದು ಎಂಬುದನ್ನು ತಿಳಿದುಕೊಳ್ಳಲು ಬಯಸಿದನು.[೫]

೭.೧. ಟಿಪ್ಪುವಿನ ರಾಯಭಾರ ಸಂಬಂಧ

ಭಾರತದಲ್ಲಿ ಇಂಗ್ಲಿಷರ ವಸಾಹತುಶಾಹಿ ಶಕ್ತಿಯನ್ನು ಸಂಪೂರ್ಣವಾಗಿ ದಮನ ಮಾಡಲು ಟಿಪ್ಪು ಯೋಚಿಸಿದನು. ಇವರ ವಿರುದ್ಧದ ಯುದ್ಧದಲ್ಲಿ ಫ್ರಾನ್ಸಿನ ನೆರವು ಪಡೆಯಲು ಪ್ರಯತ್ನಿಸಿದನು. ಪ್ಯಾರಿಸ್ಸಿಗೆ ತನ್ನ ರಾಯಭಾರ ನಿಯೋಗವನ್ನು ಕಳುಹಿಸಲು ಉತ್ಸುಕತೆ ತೋರಿದನು. ಟಿಪ್ಪುವಿನ ಈ ಆಸಕ್ತಿಗೆ ಕಾರಣ ಪಾಂಡಿಚೇರಿಯಲ್ಲಿದ್ದ ಪೀವರಾನ್ ಮೈಸೂರು ಬಗೆಗೆ ಹೆಚ್ಚು ವಿಶ್ವಾಸ ಹೊಂದಿದ್ದದ್ದು. ಫ್ರಾನ್ಸ್ ದೇಶವು ಅಮೆರಿಕಾ ಸ್ವಾತಂತ್ರ್ಯ ಹೋರಾಟಕ್ಕೆ ನೆರವು ನೀಡಿದಂತೆ ಭಾರತದಲ್ಲೂ ಇಂಗ್ಲಿಷರನ್ನು ಹೊರಹಾಕಲು ಇಚ್ಛಿಸುತ್ತದೆ, ಈ ಉದ್ದೇಶ ಸಾಧನೆಗಾಗಿ ಟಿಪ್ಪುವಿನೊಂದಿಗೆ ಮೈತ್ರಿ ಮಾಡಿಕೊಳ್ಳಲು ಆಸಕ್ತಿ ತೋರಿದೆ ಎಂದು ಹೇಳಿ ಟಿಪ್ಪುವಿನ ಆಸೆಯನ್ನು ಹೆಚ್ಚಿಸಿದನು. ಕೊಸಿಗ್ನಿಯು ೧೭೮೬ ಜುಲೈನಲ್ಲಿ ಮೊನ್ನೆರಾನ್ ಎಂಬ ತನ್ನ ಏಜೆಂಟನನ್ನು ಟಿಪ್ಪುವಿನ ಬಳಿಗೆ ಕಳುಹಿಸಿದನು. ಇದರ ಉದ್ದೇಶವೂ ಮೈಸೂರಿನಲ್ಲಿ ವ್ಯಾಪಾರ ಸ್ವಾಮ್ಯವನ್ನು ಸಾಧಿಸುವುದಾಗಿತ್ತು. ಮೊನ್ನೆರಾನ್ ಟಿಪ್ಪುವಿನೊಂದಿಗೆ ಹಲವು ದಿನಗಳ ಕಾಲ ಮಾತುಕತೆ ನಡೆಸಿದನು. ಪಾಂಡಿಚೇರಿಯಲ್ಲಿ ೪೦೦೦ ಫ್ರೆಂಚರ ಸೇನಾಬಲವಿರುವುದಾಗಿಯೂ, ಫ್ರಾನ್ಸ್ ದ್ವೀಪದಲ್ಲಿ ಬೃಹತ್ ಸೈನ್ಯವಿದೆ, ಯುದ್ಧದ ಮುನ್ಸೂಚನೆ ದೊರೆತ ಕೂಡಲೇ ಟಿಪ್ಪುವಿನ ನೆರವಿಗೆ ಭಾರತಕ್ಕೆ ಕಳುಹಿಸಿಕೊಡಲಾಗುತ್ತದೆ ಎಂದು ತಿಳಿಸಿದನು. ಟಿಪ್ಪು ಇದನ್ನೆ ಬಲವಾಗಿ ನಂಬಿದನು. ಫ್ರಾನ್ಸ್ ದೇಶಕ್ಕೆ ತನ್ನ ರಾಯಭಾರ ನಿಯೋಗ ಕಳುಹಿಸುವ ಆಲೋಚನೆಯಿದೆ ಎಂದು ಸೋಲಾಯಿಕ್‌ಗೆ ತಿಳಿಸಿದನು.[1] ಹೀಗೆ ಯುರೋಪಿನ ವರಿಷ್ಠರನ್ನು ಸಂಪರ್ಕಿಸಿದರೆ ತನಗೆ ನಿರೀಕ್ಷಿತ ಫಲಗಳು ದೊರೆಯುತ್ತದೆ ಎಂದು ಟಿಪ್ಪು ಭಾವಿಸಿದನು. ಟಿಪ್ಪು ಫ್ರಾನ್ಸಿನೊಂದಿಗೆ ರಾಯಭಾರ ಸಂಬಂಧ ಏರ್ಪಡಿಸಿಕೊಳ್ಳುವುದರಲ್ಲಿ ಎರಡು ಪ್ರಮುಖ ಉದ್ದೇಶಗಳಿದ್ದವು. ಮೊದಲನೆಯದು ಫ್ರೆಂಚರ ಸೈನಿಕ ನೆರವು ಪಡೆಯುವುದು. ಅವರೊಂದಿಗೆ ರಕ್ಷಕ ಒಪ್ಪಂದ ಮಾಡಿಕೊಳ್ಳುವುದು. ಎರಡನೆಯದು ಮೈಸೂರು ರಾಜ್ಯದ ವಾಣಿಜ್ಯ ಮತ್ತು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು. ವಿವಿಧ ಕಸುಬುಗಳಲ್ಲಿ ಹೆಚ್ಚು ನೈಪುಣ್ಯತೆ ಪಡೆದಿದ್ದ ಫ್ರೆಂಚ್ ಕುಶಲಕರ್ಮಿಗಳು ಮತ್ತು ತಂತ್ರಜ್ಞರನ್ನು ಮೈಸೂರಿಗೆ ಕರೆಸಿಕೊಳ್ಳಲು ಇಚ್ಛಿಸಿದನು. ಫಿರಂಗಿಗಳನ್ನು ತಯಾರಿಸುವವರು, ಹಡಗು ನಿರ್ಮಿಸುವವರು, ಚೈನಾ ಪಾತ್ರೆಗಳನ್ನು ತಯಾರಿಸುವವರು, ಗಾಜು ಮತ್ತು ಕನ್ನಡಿ ತಯಾರಕರು, ಚಿನ್ನದ ಮುಲಾಮು ಕೊಡುವವರು, ಎಂಜಿನಿಯರ್‌ಗಳು ಮತ್ತು ಕುಶಲಕರ್ಮಿಗಳನ್ನು ಕಳುಹಿಸುವಂತೆ ಕೋರಿ ಹದಿನಾರನೆಯ ಲೂಯಿಗೆ ಪತ್ರ ಕಳುಹಿಸಿದನು. ಟಿಪ್ಪುವಿನ ರಾಯಬಾರವು ವ್ಯಾಪಾರ, ವಾಣಿಜ್ಯ, ಕೈಗಾರಿಕೆ, ತಾಂತ್ರಿಕತೆ ಆಗಿದ್ದಂತೆ ಇಂಗ್ಲಿಷರನ್ನು ಭಾರತದಿಂದ ಹೊರಹಾಕಲು ಸೈನಿಕ ನೆರವು ಪಡೆದುಕೊಳ್ಳುವ ರಾಜಕಾರಣದ ಉದ್ದೇಶವೂ[2] ಪ್ರಧಾನವಾಗಿತ್ತು.

ಟಿಪ್ಪು ಫ್ರಾನ್ಸಿಗೆ ಕಳುಹಿಸಿದ ರಾಯಭಾರ ತಂಡದಲ್ಲಿ ೪೫ ಜನರಿದ್ದರು. ಅದರಲ್ಲಿ ಮೂವರು ಪ್ರಧಾನವಾಗಿದ್ದರು. ಮಹಮದ್ ದರವೇಶ್ ಖಾನ್, ಅಕ್ಬರ್ ಅಲಿಖಾನ್ ಮತ್ತು ಉಸ್ಮಾನ್‌ಖಾನ್, ಈ ರಾಯಭಾರ ತಂಡವು ಪಾಂಡಿಚೇರಿಯಿಂದ ಬಾಯಲ್ ಅರೋರ ಎಂಬ ಹಡಗಿನಲ್ಲಿ ೧೭೮೭ ಜುಲೈ ತಿಂಗಳಲ್ಲಿ ಯಾನವನ್ನು ಪ್ರಾರಂಭಿಸಿತು. ಪಾಂಡಿಚೇರಿಯ ಪಿಯರೆ ಮೊನೆರಾವ್ ಇದರ ಮಾರ್ಗದರ್ಶಕನಾಗಿದ್ದನು. ೧೭೮೮ರ ಜೂನ್ ೯ನೆಯ ತಾರೀಕು ಟೌಲಾನ್ ತಲುಪಿತು. ಅವರ ಸ್ವಾಗತಕ್ಕೆ ಫ್ರಾನ್ಸ್ ಚಕ್ರವರ್ತಿಯು ವಿಶೇಷ ವ್ಯವಸ್ಥೆ ಮಾಡಿದ್ದನು. ತನ್ನ ರತ್ನಗಂಬಳಿಗಳನ್ನೂ ಕಳುಹಿಸಿದ್ದನು.[೮] ಜನರು ಶುಭಕೋರಿದರು. ಜೂನ್ ೨೫ರಂದು ಟೌಲಾನ್‌ನಿಂದ ಹೊರಟು ಮಾರ್ಸೆಲ್ಸ್, ಸೇಂಟ್ ವಲ್ಲಿಯರ್, ಲಯನ್ಸ್ ಮತ್ತು ಮೌಲಿನ್ಸ್ ಮಾರ್ಗವಾಗಿ ೧೭೮೮ ಜುಲೈ ೧೬ ರಂದು ಪ್ಯಾರಿಸ್ ತಲುಪಿತು.[೯]

ಫ್ರಾನ್ಸಿನ ಚಕ್ರವರ್ತಿ ಹದಿನಾರನೆಯ ಲೂಯಿ ೧೭೮೮ ಆಗಸ್ಟ್ ೩ ರಂದು ರಾಯಭಾರಿಗಳನ್ನು ಬಹಿರಂಗ ಸಭೆಯಲ್ಲಿ ತುಂಬಾ ಗೌರವದಿಂದಲೇ ಸ್ವಾಗತಿಸಿದನು. ರಾಯಭಾರಿಗಳು ಟಿಪ್ಪುವಿನ ಉದ್ದೇಶ ಮತ್ತು ಪರಸ್ಪರ ಒಪ್ಪಂದದ ಸಲಹೆಯನ್ನು ಮಂಡಿಸಿದರು. ಲೂಯಿಯು ಮೈಸೂರಿನೊಂದಿಗೆ ಒಪ್ಪಂದದ ವಿಷಯವನ್ನು ನಮ್ರವಾಗಿಯೇ ತೇಲಿಸಿದನು. ಫ್ರಾನ್ಸಿನಲ್ಲಿ ಕ್ರಾಂತಿಯು ಘಟಿಸುವ ಸಂದರ್ಭವಿತ್ತು. ಚಕ್ರವರ್ತಿಯೇ ಸಂಕಷ್ಟದಲ್ಲಿದ್ದನು. ಇಂಥ ಸನ್ನಿವೇಶದಲ್ಲಿ ಟಿಪ್ಪುವಿನೊಂದಿಗೆ ಕರಾರು ಮಾಡಿಕೊಳ್ಳಲು ಸೂಕ್ತವಲ್ಲ ಎಂದು ತೀರ್ಮಾನಿಸಿದಂತಿತ್ತು. ನೌಕಾಪಡೆಯ ಮಂತ್ರಿ ಕಾಮ್ಟೆ ಡಿ ಲುಚೇರಿನ್ ಸ್ವದೇಶದಲ್ಲಿ ಫ್ರೆಂಚ್ ಶಕ್ತಿಯನ್ನು ವೃದ್ಧಿಸಲು ಇಚ್ಛಿಸಿದನು.[೧೦] ಬ್ರಿಟಿಷರೊಂದಿಗೆ ಯುದ್ಧ ಮಾಡುವುದರಲ್ಲಿ ಭಾರತೀಯ ಅರಸರು ಎಷ್ಟರ ಮಟ್ಟಿಗೆ ಸಾಮರಸ್ಯ ಕಾಯ್ದುಕೊಂಡಿದ್ದಾರೆ ಎಂಬುದರ ಬಗ್ಗೆ ಸಂದೇಹಪಟ್ಟನು. ಕ್ರಾಂತಿಯ ಸಮಯವಾದ್ದರಿಂದ ಫ್ರೆಂಚ್ ಸೇನೆಯನ್ನು ಬೇರೆಲ್ಲೂ ಕಳುಹಿಸದೆ ಎಲ್ಲ ಸೈನ್ಯವನ್ನು ಫ್ರಾನ್ಸಿನಲ್ಲಿಯೆ ನೆಲೆಗೊಳಿಸಲು ತೀರ್ಮಾನಿಸಿದನು. ಇದು ಟಿಪ್ಪುವಿಗೆ ಸ್ವಲ್ಪ ನಿರಾಶೆ ತಂದಿತು.

ಟಿಪ್ಪುವು ರಾಯಭಾರಿಗಳಿಗೆ ರಾಜಕಾರಣದ ಉದ್ದೇಶಗಳನ್ನು ಫ್ರೆಂಚರಿಗೆ ಮನವರಿಕೆ ಮಾಡಿಕೊಡುವಂತೆಯು ಸ್ಪಷ್ಟ ನಿರ್ದೇಶನ ನೀಡಿದ್ದನು. ಅವರು ಫ್ರೆಂಚರಿಗೆ, ಭಾರತದಲ್ಲಿ ಇಂಗ್ಲಿಷರು ನಡೆಸುತ್ತಿರುವ ದೌರ್ಜನ್ಯವನ್ನು ವಿವರಿಸಬೇಕು, ಎರಡನೆಯ ಆಂಗ್ಲೊ–ಮೈಸೂರು ಯುದ್ಧದ ಸಮಯದಲ್ಲಿ ಫ್ರೆಂಚರು ನೆರವು ನೀಡದೆ ತಪ್ಪು ಮಾಡಿದ್ದನ್ನು ತಿಳಿಸಬೇಕು. ಮುಂದೆ ಟಿಪ್ಪು ಇಂಗ್ಲಿಷರೊಂದಿಗೆ ನಡೆಸುವ ಹೋರಾಟಕ್ಕೆ ಸಹಾಯ ನೀಡುವಂತೆ ಫ್ರೆಂಚರ ಮನವೊಲಿಸಬೇಕು, ಫ್ರೆಂಚರ ೧೦,೦೦೦ ಸೈನ್ಯವನ್ನು ಭಾರತಕ್ಕೆ ಕಳುಹಿಸಬೇಕು, ಆ ಸೈನ್ಯವು ಟಿಪ್ಪುವಿನ ಆಜ್ಞೆಯಂತೆ ನಡೆಯಬೇಕು ಎಂದೂ ಸೂಚಿಸಲಾಯಿತು. ಈ ಒಪ್ಪಂದವು ಹತ್ತು ವರ್ಷಗಳ ಕಾಲ ಜಾರಿಯಲ್ಲಿರುತ್ತದೆ ಎಂಬುದಾಗಿ ತೀರ್ಮಾನಿಸಲಾಯಿತು. ಸೂಚಿತ ಒಪ್ಪಂದದಲ್ಲಿ ಐದು ಅನುಚ್ಛೇದಗಳಿದ್ದವು.[೧೧]

ಮೊದಲನೆಯ ಅನುಚ್ಛೇದ: ಇಂಗ್ಲಿಷರ ವಿರುದ್ಧವಾಗಿ ಒಂದು ಯುದ್ಧವನ್ನು ನಡೆಸಲು ಆಲೋಚಿಸಲಾಗಿದೆ. ಮದರಾಸು ಕರ್ನಾಟಕ, ಮುಂಬಯಿ ಮತ್ತು ಬಂಗಾಳಗಳನ್ನು ಗೆದ್ದುಕೊಳ್ಳುವ ವರೆಗೂ ಆ ಯುದ್ಧವನ್ನು ಮುಂದುವರೆಸುವುದು, ಯುದ್ಧ ಹತ್ತು ವರ್ಷಗಳು ನಡೆದರೂ ಯಾವುದೇ ಪಕ್ಷವು ಅವರೊಂದಿಗೆ ಸಂಧಿ ಮಾಡಿಕೊಳ್ಳತಕ್ಕದ್ದು. ಇಂಗ್ಲಿಷರು ಸಂಧಿಗೆ ಬಯಸಿದರೂ ಕೋಟೆಗಳು ಮತ್ತು ಅವರ ವಶದಲ್ಲಿದ್ದ ಸ್ಥಳಗಳನ್ನು ಪಡೆಯುವವರೆಗೂ ಅವರ ಪ್ರಸ್ತಾಪಗಳನ್ನು ಒಪ್ಪಿಕೊಳ್ಳಕೂಡದು.

ಎರಡನೆಯ ಅನುಚ್ಛೇದ: ಫ್ರೆಂಚರು ಹತ್ತು ಸಾವಿರ ಸೈನಿಕರನ್ನು ಸಮರ್ಥರೂ, ಅನುಭವಿಗಳೂ ಆದ ಅಧಿಕಾರಿಗಳ ನೇತೃತ್ವದಲ್ಲಿ ಕಳುಹಿಸಿಕೊಡತಕ್ಕದ್ದು. ಅವರು ಪಾಂಡಿಚೇರಿಯಲ್ಲೋ, ಕಲ್ಲಿಕೋಟೆಯಲ್ಲೋ ಅಥವಾ ಬೇರಾವುದೋ ಸ್ಥಳದಲ್ಲೋ ಇಳಿದರೆ ಟಿಪ್ಪುವು ಫಿರಂಗಿಗಳನ್ನೆಳೆಯಲು ಎತ್ತುಗಳನ್ನೂ, ಅಗತ್ಯವಾದ ಆಹಾರ ಸಾಮಗ್ರಿಗಳನ್ನು, ಗುಡಾರಗಳೂ, ಸಿಡಿಮದ್ದು ಮತ್ತು ತೋಪುಗಳನ್ನೂ ಒದಗಿಸುವುದು.

ಮೂರನೆಯ ಅನುಚ್ಛೇದ: ಫ್ರೆಂಚ್ ಅಧಿಕಾರಿಗಳೂ, ಸೈನ್ಯವೂ ಯುದ್ಧ ನಿರ್ವಹಣೆಗೆ ಸಂಬಂಧಿಸಿದಂತೆ ಟಿಪ್ಪುವಿನ ಅಧೀನದಲ್ಲಿರತಕ್ಕದ್ದು. ಈ ಕರ್ತವ್ಯದಲ್ಲಿ ಯಾರೇ ವಿಫಲಗೊಂಡರೂ ಟಿಪ್ಪುವಿನ ಸರಕಾರದ ಕಾನೂನುಗಳಿಗೆ ಅನುಗುಣವಾಗಿ ಅವರನ್ನು ಶಿಕ್ಷಿಸಲಾಗುವುದು.

ನಾಲ್ಕನೆಯ ಅನುಚ್ಛೇದ: ಕರ್ನಾಟಕವನ್ನು ಗೆದ್ದ ಮೇಲೆ ಮದರಾಸು ಕೋಟೆಯನ್ನೂ, ಅದರ ಆಸುಪಾಸಿನ ಪ್ರದೇಶಗಳನ್ನು ಫ್ರೆಂಚರಿಗೆ ವಹಿಸಿಕೊಡತಕ್ಕದ್ದು, ತಿರುಚನಾಪಳ್ಳಿ ಮತ್ತು ತಂಜಾವೂರು ಕೋಟೆಗಳನ್ನು ಟಿಪ್ಪುವಿಗೆ ವಹಿಸತಕ್ಕದ್ದು.

ಐದನೆಯ ಅನುಚ್ಛೇದ: ಮದರಾಸು ಗೆದ್ದ ನಂತರ ಒಟ್ಟುಗೂಡಿದ ಸೈನ್ಯವು ಭೂಮಾರ್ಗವಾಗಿ ಮತ್ತು ಸಮುದ್ರಮಾರ್ಗವಾಗಿ ಮುಂಬಯಿ ಮತ್ತು ಬಂಗಾಳಗಳನ್ನು ಗೆಲ್ಲಲು ಉತ್ತರ ಭಾಗಕ್ಕೆ ನಡೆಯತಕ್ಕದ್ದು. ಈ ಪ್ರದೇಶಗಳನ್ನು ಗೆದ್ದನಂತರ ಇಬ್ಬರೂ ಸಮನಾಗಿ ಹಂಚಿಕೊಳ್ಳತಕ್ಕದ್ದು.[೨]

ಟಿಪ್ಪು ಫ್ರೆಂಚರ ಸೈನಿಕ ನೆರವು ಪಡೆಯಲು ನಡೆಸಿದ ಪ್ರಯತ್ನಗಳು ಸಫಲವಾಗುತ್ತದೆ ಎಂದೇ ನಂಬಿದ್ದನು. ಆದರೆ ಲುಜೆರಿನ್ ಭಾರತದಲ್ಲಿದ್ದ ಫ್ರೆಂಚ್ ಸೈನ್ಯವನ್ನೆಲ್ಲ ಸಂಪೂರ್ಣವಾಗಿ ಹಿಂತೆಗೆದುಕೊಂಡು ಫ್ರಾನ್ಸಿನಲ್ಲಿ ನೆಲೆಗೊಳಿಸಲು ತೀರ್ಮಾನಿಸಿದನು. ಇದು ಟಿಪ್ಪುವಿಗೆ ನಿರಾಶೆ ಮೂಡಿಸಿತು. ಟಿಪ್ಪು ಫ್ರಾನ್ಸಿಗೆ ರಾಯಬಾರಿಗಳನ್ನು ಕಳುಹಿಸಿದ ಸಮಯ ಅನುಕೂಲಕರವಾಗಿರಲಿಲ್ಲ. ಫ್ರಾನ್ಸ್ ದೇಶವು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಅವ್ಯವಸ್ಥೆಯಿಂದ ಕೂಡಿತ್ತು. ಮಹಾಕ್ರಾಂತಿ ಸಂಭವಿಸುವ ಸ್ಥಿತಿ ನಿರ್ಮಾಣವಾಗಿತ್ತು. ಇಂಥ ಸಮಯದಲ್ಲಿ ಫ್ರೆಂಚರು ಯುದ್ಧ-ಒಪ್ಪಂದ ಮಾಡಿಕೊಳ್ಳುವುದು ಸಾಧ್ಯವಿರಲಿಲ್ಲ. ಆದ್ದರಿಂದ ಟಿಪ್ಪುವಿಗೆ ಕೇವಲ ನೆರವಿನ ಭರವಸೆಯಿತ್ತರು.

ಫ್ರಾನ್ಸಿನಲ್ಲಿ ಮೂರು ತಿಂಗಳು ತಂಗಿದ್ದ ರಾಯಭಾರಿಗಳು ೧೭೮೮ ಆಕ್ಟೋಬರ್ ೯ ರಂದು ಅಲ್ಲಿಂದ ಹೊರಟು ೧೭೮೯ ಮೇ ೧೦ ರಂದು ಪಾಂಡಿಚೇರಿ ತಲುಪಿದರು. ಇವರ ರಾಜಕಾರಣದ ಉದ್ದೇಶವು ವಿಫಲವಾದರೂ ಅವರು ಕೆಲವು ತಂತ್ರಜ್ಞರು, ಒಬ್ಬ ಬಡಗಿ, ಒಬ್ಬ ನೇಯ್ಗೆಯವ, ಒಬ್ಬ ಕಮ್ಮಾರ, ಒಬ್ಬ ಜೀಗ ತಯಾರಿಸುವವನು, ಚೂರಿ, ಕತ್ತರಿ, ಗಡಿಯಾರ ತಯಾರಿಸುವವರು, ಬಣ್ಣಗಾರ, ವೈದ್ಯ, ಒಬ್ಬ ಶಸ್ತ್ರವೈದ್ಯ ಇವರನ್ನು ಕರೆತರಲು ಸಾಧ್ಯವಾಯಿತು.[೧೩]

೭.೨. ಟಿಪ್ಪು ಮತ್ತು ಹದಿನಾರನೆಯ ಲೂಯಿ

ಹದಿನಾರನೆಯ ಲೂಯಿಯು ತನ್ನ ಪ್ರತಿನಿಧಿ ಮೆಕ್ನಮರಾನನ್ನು ಟಿಪ್ಪುವಿನ ಬಳಿಗೆ ಶಿಷ್ಟಾಚಾರದ ಭೇಟಿಗಾಗಿ ಕಳುಹಿಸಿದನು. ಟಿಪ್ಪು ಮತ್ತೆ ಲೂಯಿಗೆ ಪತ್ರ ಬರೆದನು. ಅದರಲ್ಲಿ ರಾಜಕೀಯ ಮತ್ತು ಮಿಲಿಟರಿ ವಿಚಾರದಲ್ಲಿ ತನಗಾದ ನಿರಾಶೆಯನ್ನು ವ್ಯಕ್ತಪಡಿಸಲಿಲ್ಲ. ಫ್ರೆಂಚ್ ಸೇನೆಯನ್ನು ಭಾರತದಿಂದ ಹಿಂದಕ್ಕೆ ಕರೆಸಿಕೊಂಡುದ್ದರ ಬಗೆಗೆ ತನ್ನ ಅಸಮಾಧಾನ ವ್ಯಕ್ತಮಾಡಿದ್ದನು. ಇಂದು ಹಿಂದೆಂದಿಗಿಂತಲೂ ಮಿಗಿಲಾಗಿ ಒಂದು ಫ್ರೆಂಚ್ ಸೈನ್ಯವು ಪಾಂಡಿಚೇರಿಯನ್ನು ಬಿಟ್ಟು ತೆರಳುತ್ತಿರುವುದನ್ನು; ಇನ್ನೊಂದು ಕಡೆ ನಮ್ಮ ಎರಡು ದೇಶಗಳ ನಡುವೆ ರಾಯಭಾರ ಸಂಬಂಧವು ವೃದ್ಧಿಸುತ್ತಿರುವುದನ್ನು ಕಂಡು ನಮ್ಮ ಸಮಾನ ಶತ್ರುವಿನ ಅನುಚಿತ ಮಾತ್ಸರ್ಯವು ಬಲಗೊಂಡು ಅವರು ಯುದ್ಧದ ಹಾದಿಯನ್ನು ಹಿಡಿಯುವಂತೆ ಮಾಡಿದೆ.[೧೪] ತಿರುವಾಂಕೂರು ವಿಚಾರವಾಗಿ ಇಂಗ್ಲಿಷರು ವ್ಯಾಜ್ಯ ತೆಗೆದಾಗ ಟಿಪ್ಪುವು ಮತ್ತೆ ಫ್ರೆಂಚರ ನೆರವು ಕೋರಿ ಪತ್ರ ಬರೆದನು. ಅದರಲ್ಲಿ ಫ್ರಾನ್ಸ್ ಚಕ್ರವರ್ತಿಯು ಪಾಂಡಿಚೇರಿಯ ತಮ್ಮ ಸೇನಾಧಿಕಾರಿಗಳಿಗೆ ಹಾಗೂ ದ್ವೀಪದ ಅಧಿಕಾರಿಗಳಿಗೆ, ನಮ್ಮ ಕೋರಿಕೆಯ ಮೇರೆಗೆ ೨೦೦೦ ಸೈನಿಕರನ್ನು ಕಳುಹಿಸಿಕೊಡಬೇಕು ಎಂದು ಒಡನೆಯೆ ಆದೇಶ ಕೊಡಬೇಕು. ಯಾವುದೇ ಕಾರಣ ಕೊಡದೇ ಸೈನ್ಯವು ಚಲಿಸಿ ನಮ್ಮ ಆಜ್ಞೆಯನ್ನು ಪಾಲಿಸಲು ಸಿದ್ದರಾಗಿರುವಂತೆ ಸೂಚಿಸಬೇಕು ಎಂಬುದಾಗಿ ತಿಳಿಸಲಾಗಿತ್ತು. ಇಷ್ಟೆಲ್ಲ ವಕ್ಕಣೆ ಇದ್ದ ಟಿಪ್ಪುವಿನ ಪತ್ರವು ತಲುಪುವ ವೇಳೆಗೆ ಫ್ರಾನ್ಸ್ ಮಹಾಕ್ರಾಂತಿ ಆರಂಭವಾಗಿ ಚಕ್ರವರ್ತಿಯ ಸ್ಥಿತಿಯು ಸಂಕಷ್ಟದಲ್ಲಿತ್ತು. ಇದರಿಂದ ಟಿಪ್ಪುವಿನ ಬೇಡಿಕೆಗಳು ಈಡೇರಲಿಲ್ಲ. ಫ್ರೆಂಚರು ಟಿಪ್ಪುವಿನೊಂದಿಗೆ ರಾಜಕೀಯ ಮತ್ತು ಮಿಲಿಟರಿ ಸಂಬಂಧಗಳನ್ನು ಇಟ್ಟುಕೊಳ್ಳಲು ಬಯಸಿದರು. ಭಾರತದಲ್ಲಿದ್ದ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯನ್ನು ಸಂಪೂರ್ಣವಾಗಿ ಒಂದು ವಾಣಿಜ್ಯ ಕಂಪನಿಯಾಗಿ ಪರಿವರ್ತಿಸಲು ಲಜರೀನ್ ಇಚ್ಛಿಸಿದನು. ಮೈಸೂರು ರಾಜ್ಯವು ಸಂಬಾರ ಪದಾರ್ಥಗಳಿಗೆ ಪ್ರಸಿದ್ಧವಾಗಿತ್ತು. ಇವುಗಳಿಗೆ ಯುರೋಪಿನ ಮಾರುಕಟ್ಟೆಗಳಲ್ಲಿ ಬಾರಿ ಬೇಡಿಕೆ ಇತ್ತು. ಇದರಿಂದ ಮೈಸೂರಿನೊಂದಿಗೆ ನಿಕಟ ವಾಣಿಜ್ಯ ವ್ಯವಹಾರಗಳನ್ನು ವೃದ್ಧಿಸಲು ಪ್ರಯತ್ನಿಸಿದರು. ಟಿಪ್ಪುವು ಕೂಡ ರಾಜ್ಯದ ವಾಣಿಜ್ಯೋದ್ಯಮದ ಅಭಿವೃದ್ಧಿ ಹೆಚ್ಚು ಒಲವು ತೋರಿದನು.[೧೫] ಶೀಘ್ರಗತಿಯಲ್ಲಿ ರಾಜ್ಯವು ಆರ್ಥಿಕಾಭಿವೃದ್ಧಿ

ಹೊಂದುವಂತೆ ಮಾಡುವ ಉದ್ದೇಶ ಹೊಂದಿದ್ದನು. ಮೈಸೂರಿಗೆ ಹೊರನಾಡುಗಳೊಂದಿಗೆ ವಾಣಿಜ್ಯ ಸಂಪರ್ಕಗಳನ್ನು ಕಲ್ಪಿಸಿದನು.

ಫ್ರೆಂಚರು ೧೭೮೮ರಲ್ಲಿ ಟಿಪ್ಪುವಿನೊಂದಿಗೆ ವಾಣಿಜ್ಯ ಒಪ್ಪಂದ ಮಾಡಿಕೊಳ್ಳಲು ಮುಂದಾದರು. ಕಂಪನಿಯು ಮೈಸೂರಿನಿಂದ ಶ್ರೀಗಂಧ, ಏಲಕ್ಕಿ, ಮೆಣಸು, ಹತ್ತಿ, ಎಣ್ಣೆ, ಉಣ್ಣೆಯದಾರ ಇತರ ವಸ್ತುಗಳನ್ನು ರಫ್ತು ಮತ್ತು ಯುರೋಪಿನಿಂದ ಆಮದು ಸ್ವಾಮ್ಯವನ್ನು ಟಿಪ್ಪುವಿನಿಂದ ಕೋರುತ್ತದೆ ಎಂದು ಪತ್ರ ಬರೆದರು. ಟಿಪ್ಪುವಿಗೆ ತೋಪುಗಳು, ಬಂದೂಕುಗಳು ಮತ್ತಿತರ ಯುದ್ಧ ಸಾಮಗ್ರಿಗಳನ್ನು ನೀಡಲು ಒಪ್ಪಿದರು. ಟಿಪ್ಪುವಿನ ಶತ್ರುಗಳಿಗೆ ಯಾವುದೇ ಸಹಾಯ ಮಾಡುವುದಿಲ್ಲ, ಮಲಬಾರಿನ ಬಂಡುಕೋರ ನಾಯಕರಿಗೆ ಆಶ್ರಯ ಕೊಡುವುದಿಲ್ಲ ಎಂದು ಭರವಸೆ ನೀಡಿದರು. ಸಾಗರಗಳ ಮೇಲಿನ ವ್ಯವಹಾರದಲ್ಲಿ ಎರಡೂ ಪಕ್ಷಗಳನ್ನು ಸಂರಕ್ಷಿಸುವ ಒಂದು ರಕ್ಷಕ ಒಪ್ಪಂದ ಮಾಡಿಕೊಳ್ಳುವಂತೆ ಸೂಚಿಸಿದರು. ಈ ವಿಚಾರವನ್ನು ಟಿಪ್ಪುವಿನ ರಾಯಭಾರಿ ಮಹಮದ್ ಹುಸೇನ್‌ಖಾನ್ ಸಂಗಡ ಕಳುಹಿಸಿದರು.[೧೬]

ಫ್ರೆಂಚರು ಮೈಸೂರು ರಾಜ್ಯದ ಮೇಲೆ ವಾಣಿಜ್ಯ ಏಕಸ್ವಾಮ್ಯ ಹೊಂದಲು ಬೇಕಾದ ವ್ಯವಸ್ಥೆಯನ್ನು ಮಾಡಿಕೊಂಡಿರುವುದು ಟಿಪ್ಪುವಿಗೆ ಅರ್ಥವಾಯಿತು. ಟಿಪ್ಪುವಿನ ರಾಜಕೀಯ ಮತ್ತು ಆರ್ಥಿಕ ಸೈನಿಕ ಸಹಕಾರದ ವಿಚಾರದಲ್ಲಿ ಫ್ರೆಂಚರು ದೂರ ಸರಿಸಿದರು. ಅದರಿಂದ ರಾಜ್ಯದ ಆರ್ಥಿಕ, ಹಿತಾಸಕ್ತಿಗಳನ್ನು ಬಲಿಕೊಡಲು ಟಿಪ್ಪು ನಿರಾಕರಿಸಿದನು. ತನ್ನ ರಾಜ್ಯದ ಸಂಬಾರು ಪದಾರ್ಥಗಳು ನಿಗದಿತ ಬೆಲೆ ಮಾರಾಟ ಮಾಡುವ ಷರತ್ತಿಗೆ ಒಳಪಡಿಸಿ ರಫ್ತು ಮಾಡಲು ಒಪ್ಪಿಗೆ ಸೂಚಿಸಿದನು. ಇದು ಫ್ರೆಂಚರಿಗೆ ನಿರಾಸೆ ತಂದಿತು. ಹೀಗಾಗಿ ಮಾತುಕತೆಗಳು ಮುರಿದುಬಿದ್ದವು.[೧೭] ಫ್ರೆಂಚರು ಸೂಚಿಸಿದ ವಾಣಿಜ್ಯ ಒಪ್ಪಂದವು ಮೈಸೂರಿನ ಆರ್ಥಿಕ ಸಂಪನ್ಮೂಲಗಳ ಸಂಪೂರ್ಣ ಶೋಷಣೆಯ ರೂಪದಲ್ಲಿತ್ತು.

೭.೩. ಟಿಪ್ಪು ಮತ್ತು ನೆಪೋಲಿಯನ್ ಬೋನಾಪಾರ್ಟ

ಟಿಪ್ಪುವಿಗೆ ಫ್ರಾನ್ಸ್ ಚಕ್ರವರ್ತಿ ಹದಿನಾರನೆಯ ಲೂಯಿಯಿಂದ ನಿರೀಕ್ಷಿತ ಫಲ ದೊರೆಯಲಿಲ್ಲ. ಆದರೂ ಫ್ರೆಂಚರ ನೆರವು ಯಾಚಿಸುವ ಪ್ರಯತ್ನವನ್ನು ಮುಂದುವರೆಸಿದ. ೧೭೮೯ರಲ್ಲಿ ನಡೆದ ಫ್ರಾನ್ಸ್ ಮಹಾಕ್ರಾಂತಿಯ ನಂತರದ ರಾಜಕೀಯ ಬದಲಾವಣೆಗಳು ಮತ್ತೆ ಟಿಪ್ಪು ಫ್ರಾನ್ಸ್‌ನೊಂದಿಗೆ ನಿಕಟ ಸಂಪರ್ಕ ಬೆಳೆಸಲು ಪ್ರೇರಣೆ ನೀಡಿತು. ಫ್ರಾನ್ಸಿನ ಮಧ್ಯಮ ವರ್ಗದ ಜನರು ಹದಿನಾರನೆಯ ಲೂಯಿಯ ವಿಲಾಸಿ ಜೀವನದಿಂದ ಬೇಸತ್ತರು. ಫ್ರಾನ್ಸಿನಲ್ಲಿ ಪ್ರತಿಷ್ಠಿತ ವರ್ಗದವರೆಂದು ಬಿಂಬಿಸಿಕೊಂಡಿದ್ದ ರಾಜ ಮತ್ತು ಅವನ ಸಂಬಂಧಿಕರು, ಶ್ರೀಮಂತರು ಹಾಗೂ ಚರ್ಚಿನ ಪಾದ್ರಿಗಳು ಮಧ್ಯಮ ವರ್ಗದವರನ್ನು ಆರ್ಥಿಕವಾಗಿಯೂ ಮತ್ತು ಸಾಮಾಜಿಕವಾಗಿಯೂ

ಶೋಷಣೆಗೆ ಗುರಿಪಡಿಸಿದರು. ಹದಿನಾರನೆಯ ಲೂಯಿಯ ಪತ್ನಿ ಮೇರಿ ಆಂಟಾಯಿನೆಟ್‌ಳ ಭೋಗಜೀವನ ಶ್ರೀಮಂತರು ಮತ್ತು ಪಾದ್ರಿಗಳ ಅಟ್ಟಹಾಸ ಮಿತಿಮೀರಿತ್ತು. ಲೂಯಿಯು ರಾಣಿಯ ಕೈಗೊಂಬೆಯಂತೆ ಅಧಿಕಾರ ನಡೆಸಿದ. ಫ್ರಾನ್ಸ್ ಆರ್ಥಿಕವಾಗಿ ದಿವಾಳಿಯಾಯಿತು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಫ್ರಾನ್ಸಿನ ಘನತೆ-ಗೌರವಗಳು ಕುಗ್ಗಿದವು. ಹದಿನಾರನೆಯ ಲೂಯಿಯ ದುರಾಡಳಿತವನ್ನು ಪ್ರಶ್ನಿಸಿದವರನ್ನು ಬ್ಯಾಸ್ಟಿಲೆ ಕಾರಾಗೃಹಕ್ಕೆ ತಳ್ಳಲಾಯಿತು. ಬಂಧಿತರನ್ನು ಗಿಲೋಟಿನ್ ಯಂತ್ರಕ್ಕೆ ಕೊಟ್ಟು ಕೊಲ್ಲಲಾಯಿತು. ಫ್ರಾನ್ಸ್‌ನಲ್ಲಿ ಅರಾಜಕತೆ ವಾತಾವರಣ ಉದ್ಭವಿಸಿತು. ಕೊನೆಗೆ ಎಚ್ಚೆತ್ತುಕೊಂಡ ಮಧ್ಯಮವರ್ಗದವರು ರುಸೋನ ಮೂರು ತತ್ವಗಳಾದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳಿಂದ ಪ್ರಭಾವಿತರಾಗಿ ಮಹಾಕ್ರಾಂತಿಗೆ ಮುಂದಾದರು.

೧೭೮೯ರಲ್ಲಿ ಫ್ರಾನ್ಸ್ ಮಹಾಕ್ರಾಂತಿ ನಡೆದು ಹದಿನಾರನೆಯ ಲೂಯಿ ಮತ್ತು ಅವನ ಪತ್ನಿ ಮೇರಿ ಆಂಟಾಯಿನೆಟ್‌ಳನ್ನು ಗಿಲೋಟಿನ್ ಯಂತ್ರಕ್ಕೆ ಕೊಟ್ಟು ಕೊಲ್ಲಲಾಯಿತು.[೧೮] ಫ್ರಾನ್ಸ್‌ನಲ್ಲಿ ಅರಸೊತ್ತಿಗೆಯ ಆಡಳಿತ ಕೊನೆಗೊಂಡಿತು. ಗಣತಂತ್ರ ಸರಕಾರ ರಚನೆಯಾಯಿತು. ಫ್ರಾನ್ಸ್ ಕ್ರಾಂತಿಯ ಸಮಯದಲ್ಲಿ ಹದಿನಾರನೆಯ ಲೂಯಿಯ ಸೈನ್ಯದಲ್ಲಿ ಸಾಮಾನ್ಯ ಸೈನಿಕನಾಗಿದ್ದ ನೆಪೋಲಿಯನ್ ಬೋನಾಪಾರ್ಟೆ ಸ್ವಸಾಮರ್ಥ್ಯದಿಂದ ಸೈನ್ಯದ ದಂಡನಾಯಕನಾಗಿ ಬಡ್ತಿ ಪಡೆದನು. ಮಹಾಕ್ರಾಂತಿಯ ನಂತರ ಫ್ರಾನ್ಸ್ ರಾಜಕಾರಣದಲ್ಲಿ ಪ್ರವೇಶಿಸಿದನು. ಬಹುಬೇಗ ಫ್ರಾನ್ಸ್ ಜನತೆಯಿಂದ ಮೆಚ್ಚುಗೆ ಪಡೆದು ಕಾನ್ಸುಲೇಟ್ ಸರಕಾರ ರಚಿಸಿದನು. ಇಡೀ ಫ್ರಾನ್ಸ್ ರಾಜಕಾರಣವನ್ನು ತನ್ನ ಹಿಡಿತದಲ್ಲಿಟ್ಟುಕೊಂಡನು. ಫ್ರಾನ್ಸ್ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೋರ್ಬನ್ ಅರಸರ ಕಾಲದಲ್ಲಿ ಕಳೆದುಕೊಂಡಿದ್ದ ಘನತೆ, ಗೌರವ ಮತ್ತೆ ಪುನರ್ ಸ್ಥಾಪಿಸಲು ಮುಂದಾದನು.

ನೆಪೋಲಿಯನ್ ಯುರೋಪಿನಲ್ಲಿ ಫ್ರಾನ್ಸ್‌ನ ಪ್ರತಿಷ್ಠೆಯನ್ನು ಹೆಚ್ಚಿಸಲು ಹಾಗೂ ಇಡೀ ಯುರೋಪಿನ ರಾಜಕಾರಣವನ್ನು ಫ್ರಾನ್ಸ್ ಹಿಡಿತಕ್ಕೆ ಒಳಪಡಿಸಲು ಪ್ರಯತ್ನಿಸಿದನು. ಅದಕ್ಕಾಗಿ ನಿರಂತರ ದಂಡಯಾತ್ರೆಗಳನ್ನು ನಡೆಸಿದನು. ಆಸ್ಟ್ರೀಯಾ, ಪ್ರಷ್ಯಾ, ಇಟಲಿ ಹಾಗೂ ಇಂಗ್ಲೆಂಡ್ ಇತ್ಯಾದಿ ದೇಶಗಳು ದಂಗುಬಡಿದವು. ಭೂಸಮರದಲ್ಲಿ ನೆಪೋಲಿಯನ್‌ನನ್ನು ಸೋಲಿಸುವುದು ಕಷ್ಟಕರವಾದ ಸನ್ನಿವೇಶವನ್ನು ಸೃಷ್ಟಿಸಿದನು. ನೆಪೋಲಿಯನ್‌ನ ಏಳಿಗೆಯನ್ನು ಸಹಿಸಲಾರದೆ ಇಂಗ್ಲೆಂಡ್ ಅವನ ವಿರುದ್ಧ ಕ್ಷುಲ್ಲಕ ಕಾರಣವೊಡ್ಡಿ ಯುದ್ಧ ಸಾರಿತು. ಹೀಗೆ ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳು ಯುರೋಪಿನಲ್ಲಿ ಪ್ರತಿಸ್ಪರ್ಧಿಗಳಾಗಿ ಯುದ್ಧದಲ್ಲಿ ಧುಮುಕಿದವು. ಅದರ ಪರಿಣಾಮ ಭಾರತಕ್ಕೂ ತಟ್ಟಿತು. ಇಂಥ ಪರಿಸ್ಥಿತಿಯ ಲಾಭವನ್ನು ಪಡೆಯಲು ಟಿಪ್ಪು ನಿರ್ಧರಿಸಿದನು. ನೆಪೋಲಿಯನ್ ಬೋನಾಪಾರ್ಟೆಯ ನೆರವು ಪಡೆಯಲು ಪ್ರಯತ್ನಿಸಿದನು. ಅದಕ್ಕಾಗಿ ಪತ್ರ ವ್ಯವಹಾರ ಮತ್ತು ರಾಯಭಾರ ಸಂಬಂಧ ಏರ್ಪಡಿಸಿಕೊಂಡನು.

ಟಿಪ್ಪುವು ತನ್ನ ರಾಯಭಾರಿ ಖಾನ್ ಜಹಾನಖಾನನನ್ನು ಫ್ರೆಂಚ್ ಪ್ರತಿನಿಧಿ ದುಭಾಷಿ ಡ್ಯುಬೆಕ್ ನೊಡನೆ ಫ್ರಾನ್ಸ್‌ಗೆ ಕಳುಹಿಸಿಕೊಟ್ಟನು. ರಾಯಭಾರಿಗೆ ಟಿಪ್ಪುವು ನೆಪೋಲಿಯನ್ನನಿಗೆ ಕಾಣಿಕೆಯಾಗಿ ಶ್ರೇಷ್ಠವಾದ ದೇಶಿ ಉಕ್ಕಿನಿಂದ ನಿರ್ಮಿತವಾದ ಒಂದು ಖಡ್ಗವನ್ನೂ, ನವರತ್ನಗಳನ್ನು ಒಳಗೊಂಡ ಹಿಡಿಕೆಯುಳ್ಳ ಒಂದು ಕಠಾರಿಯನ್ನು, ಬೆಲೆ ಬಾಳುವ ಮುತ್ತಿನ ಹಾರವನ್ನು ಕಳುಹಿಸಿಕೊಟ್ಟನು. ಜೊತೆಗೆ ನೆಪೋಲಿಯನ್ ಬೋನಾಪಾರ್ಟೆಯೊಂದಿಗೆ ಸ್ನೇಹ ಸಂಬಂಧಗಳನ್ನು ಬೆಳೆಸುವ ಸಂಬಂಧವಾಗಿ ಪತ್ರವನ್ನು ಕಳುಹಿಸಿಕೊಟ್ಟನು. ನೆಪೋಲಿಯನ್ ಟಿಪ್ಪುವಿನ ಖಡ್ಗ ಮತ್ತು ಪತ್ರದ ಸುರುಳಿಯನ್ನು ಪ್ರೀತಿಯಿಂದಲೇ ಸ್ವೀಕರಿಸಿದನು. ದುಭಾಷಿ ಡ್ಯುಬೆಕನು ಟಿಪ್ಪುವಿನ ಪತ್ರವನ್ನು ಓದಿದನು.[೧೯] ಪತ್ರದಲ್ಲಿ ಟಿಪ್ಪು ಹೀಗೆ ಬರೆದಿದ್ದನು.

"ಏಕಮೇವ ಅವಿಭಾಜ್ಯ ಫ್ರೆಂಚ್ ರಿಪಬ್ಲಿಕ್ ಸರಕಾರದ ನ್ಯಾಷನಲ್ ಕೌನ್ಸಿಲ್ ಸಭೆಯ ಅಧ್ಯಕ್ಷರೂ ಫ್ರೆಂಚ್ ಗಣರಾಜ್ಯದ ಮಹಾದಂಡನಾಯಕನೂ ಆಗಿರುವ ನೆಪೋಲಿಯನ್ ಬೋನಪಾರ್ಟೆ ಅವರಿಗೆ, ಟಿಪ್ಪು ಸುಲ್ತಾನ ಬಾದಷಹನು ಮಾಡುವ ಸಲಾಂ.

ನಿಮ್ಮ ಸರಕಾರದ ನೌಕಾಪಡೆಯಲ್ಲಿ ಕ್ಯಾಪ್ಟನ್ ಆಗಿರುವ ಸಿಟಿಜನ್ ಡ್ಯುಬೆಕರು ತೋರಿಸಿದ ದೇಶಪ್ರೇಮ ಹಾಗೂ ನಿಷ್ಠೆಗಳನ್ನು ಮನಗಂಡು ಅವರನ್ನು ನಮ್ಮ ಸಮ್ಮುಖದ ರಾಯಭಾರಿ ಖಾನ್‌ಜಹಾನ ಖಾನನ ಜತೆಯಲ್ಲಿ ಪ್ಯಾರಿಸ್ಸಿಗೆ ಎಕ್ಸಿಕ್ಯೂಟಿವ್ ಡೈರಕ್ಟರಿಗೆ ರಾಯಭಾರಿಯ ದುಭಾಷಿಯಾಗಿ ನೇಮಿಸಿದ್ದೇನೆ. ಅವರು ನಮ್ಮ ಆಜ್ಞೆಯಂತೆ ನಡೆಯತಕ್ಕದ್ದು. ಅವರಿಗೆ ನಾನು ವಹಿಸಿರುವ ರಾಯಭಾರದ ಯಶಸ್ಸಿಗೆ ಬೇಕಾಗುವ ಎಲ್ಲ ಅಧಿಕಾರಗಳನ್ನು ಕೊಟ್ಟಿದ್ದೇನೆ. ಅಂದರೆ ಏಕಮೇವ, ಅವಿಭಾಜ್ಯ ಫ್ರೆಂಚ್ ಸರಕಾರದೊಂದಿಗೆ ಎಲ್ಲ ಕರಾರು ಒಪ್ಪಂದಗಳಿಗೆ ನಾನು ಬದ್ಧವಾಗಿದ್ದೇನೆ. ಅಲ್ಲಿ ಅವರು ಆರಿಸಿಕೊಳ್ಳುವ ಕುಶಲ ಕೆಲಸಗಾರರನ್ನೂ, ಕಲಾವಿದರನ್ನೂ, ಸಂತೋಷದಿಂದ ಸ್ವೀಕರಿಸುತ್ತೇವೆ ಎಂದು ಬರೆದುಕೊಟ್ಟ ಅಧಿಕಾರ ಪತ್ರ.[೨೦]

ಟಿಪ್ಪುವು ನೆಪೋಲಿಯನ್‌ಗೆ ಬರೆದ ಪತ್ರದ ಸಾರಾಂಶವು ಹೀಗಿದೆ.

"ಖುದಾದದ್ ಸರಕಾರದ ಹಾಗೂ ಫ್ರೆಂಚ್ ಸರಕಾರದ ಪ್ರಜೆಗಳ ಸ್ನೇಹದ ಹೆಸರಿನಲ್ಲಿ, ಯಾವ ಪವಿತ್ರವಾದ ಸ್ನೇಹ ಸೌಹಾರ್ದವು ಸೂರ್ಯಚಂದ್ರರು ಇರುವವರೆಗೂ ಚಿರಕಾಲವು ಉಳಿಯುವುದೋ, ಯಾವುದೇ ಅಸಾಮಾನ್ಯ ಘಟನೆ ಇದನ್ನು ನಾಶಪಡಿಸಲಾರದೊ, ಬೇರ್ಪಡಿಸಲಾರದೋ, ಅಸ್ಥಿರ ಸ್ನೇಹದ ಹೆಸರಿನಲ್ಲಿ ಬರೆಯುವದೇನೆಂದರೆ,

ಇಂಗ್ಲಿಷರು ಬಹಳ ಕಾಲದಿಂದ ಇರುವ ನಮ್ಮ ನಿಮ್ಮ ಸ್ನೇಹ ಬಂಧದಿಂದ ಅಸೂಯೆಗೊಂಡು ಕೆಲವು ವರ್ಷಗಳ ಹಿಂದೆ ನನ್ನ ವಿರುದ್ಧ ಮರಾಠರು, ನಿಜಾಮಾಲಿಖಾನ ಮತ್ತು ಇತರ ಶತ್ರುಗಳೊಡನೆ ಸೇರಿಕೊಂಡು ಯುದ್ಧ ಘೋಷಿಸಿದರು. ಇದು ಅತ್ಯಂತ ಅನ್ಯಾಯದ, ವಿನಾಕಾರಣ

ವಾದುದು. ಇದು ಅನೇಕ ವರ್ಷಗಳವರೆಗೆ ನಡೆದು ನನ್ನ ಅಮೂಲ್ಯ ಪ್ರದೇಶಗಳೂ ಹಾಗೂ ಮೂರು ಕೋಟಿ ಮೂವತ್ತು ಲಕ್ಷ ರೂಪಾಯಿ ಕೈಬಿಟ್ಟು ಹೋಗುವಂತೆ ಮಾಡಿತು.

ರಿಪಬ್ಲಿಕನ್ ಸರಕಾರವು ಈ ಎಲ್ಲ ದುರ್ಘಟನೆಗಳನ್ನಾಗಲೀ, ನಾನು ಶತ್ರುಗಳಿಗೆ ಬಿಟ್ಟು ಕೊಟ್ಟಿರುವ ಪ್ರದೇಶಗಳನ್ನು ಉಳಿಸಿಕೊಳ್ಳುವ ಶ್ರಮದ ಪ್ರಯತ್ನವಾಗಲೀ ಅರಿಯದೇ ಇಲ್ಲ. ನನ್ನ ಹಳೆಯ ಮಿತ್ರರಾಗಿದ್ದ ಫ್ರೆಂಚರು ನನಗೆ ಸಹಾಯ ಮಾಡಿದ್ದರೆ ನಾನು ಇಂತಹ ಕ್ರೂರವಾದ ಬಲಿದಾನ ಮಾಡಬೇಕಾದ ಪ್ರಸಂಗ ಒದಗುತ್ತಿರಲಿಲ್ಲ. ಆದರೆ ದುರ್ದೈವಕ್ಕೆ ಪಾಂಡಿಚೇರಿಯ ಗೌರ್ನರ್ ಜನರಲ್ ಕಾಸ್ಸಿ, ಮದರಾಸಿನ ಗೌರ್ನರ್ ಜನರಲ್ ಕ್ಯಾಂಬೆಲನೊಡನೆ ಪಿತೂರಿ ಮಾಡಿ ನನ್ನ ಕೈಬಿಟ್ಟರು. ರಿಪಬ್ಲಿಕನ್ ಸರಕಾರವು ಮಾಡಿದ ತಪ್ಪುಗಳನ್ನು ಸರಿಪಡಿಸಿಕೊಂಡು ಇಂಗ್ಲಿಷರು ಭಾರತದಲ್ಲಿ ಪಡೆದಿರುವ ಪ್ರದೇಶಗಳಿಂದ ಓಡಿಸಲು ನೆರವಾಗುವುದೆಂದು ನಂಬಿದ್ದೇನೆ. ಈ ನನ್ನ ಭಾವನೆಗಳನ್ನು ನಾನು ಐಲ್ ಆಫ್ ಫ್ರಾನ್ಸ್ ಗೌರ್ನರಿಗೆ ನನ್ನ ಇಬ್ಬರು ರಾಯಭಾರಿಗಳ ಮೂಲಕ ತಿಳಿಸಿದ್ದೇನೆ. ಅವರಿಂದ ರಿಪಬ್ಲಿಕನ್ ಬಾವುಟವನ್ನು ಚಾಪಿಯಸ್‌ನ ಮೂಲಕವೂ, ನೌಕಾ ಕ್ಯಾಪ್ಟನ್ ಡ್ಯುಬೇಕರ ಮೂಲಕ ಅನೇಕ ಅಧಿಕಾರಿಗಳನ್ನು ಪಡೆದಿದ್ದೇನೆ. ಸಾಧ್ಯವಾದರೆ ಇನ್ನೂ ಹೆಚ್ಚಿನ ಜನರನ್ನು ಕಳುಹಿಸಿಕೊಡುವುದಾಗಿ ಮಲಾರ್ಟಿಕ್ ಸಾಹೇಬರೂ ಮತ್ತು ರೇರ್ ಅಡ್ಮಿರಲ್ ಸೆರ್ಸಿ ತಿಳಿಸಿದ್ದಾರೆ. ಇವರಲ್ಲಿ ಒಬ್ಬರನ್ನು ನನ್ನ ಬಳಿ ಉಳಿಸಿಕೊಂಡು, ಇನ್ನೊಬ್ಬರನ್ನು ನಿಮ್ಮ ಬಳಿಗೆ ಕಳುಹಿಸಿದ್ದೇನೆ. ಇದರ ಉದ್ದೇಶ ನಮ್ಮ ಶತ್ರುಗಳನ್ನು ಏಷಿಯಾದಿಂದ ಹೊರಗಟ್ಟಬಲ್ಲ ಶಸ್ತ್ರಾಸ್ತ್ರಗಳನ್ನೂ, ಮದ್ದುಗುಂಡುಗಳನ್ನೂ ಪಡೆಯುವುದೇ ಆಗಿದೆ. ನಾನು ನಮ್ಮಿಬ್ಬರ ಸ್ನೇಹಕ್ಕೆ ಗುರುತಾಗಿ ನನ್ನ ಲಾಂಚನವನ್ನು ಕಳುಹಿಸಿಕೊಟ್ಟು, ಉಳಿದ ವಿವರಗಳನ್ನು ಮಾತನಾಡಲು ಡ್ಯುಬೇಕರಿಗೂ ತಿಳಿಸಿದ್ದೇನೆ. ಇವರ ಸಂಗಡ ಶೇಕ್ ಅಬ್ದುಲ್ ರಹೀಂ, ಮಹಮದ್ ಬಿಸ್ಮಿಲ್ಲಾ ಮತ್ತು ಖಾನ್ ಜಹಾನಖಾನರನ್ನು ಕಳುಹಿಸಿದ್ದೇನೆ. ಮುಂದೆ ನಮ್ಮೆರಡು ದೇಶಗಳ ಭವಿಷ್ಯ ಹೇಗೆ ಇರಲಿ, ಒಟ್ಟಾಗಿರಲಿ, ಬೇರೆಯಾಗಿರಲಿ, ಅವರು ಯಾವುದೇ ಒಪ್ಪಂದ ಮಾಡಿಕೊಳ್ಳಲಿ, ಪರಸ್ಪರ ಕೀರ್ತಿ ಏಳಿಗೆಗಳು ಅವುಗಳ ಉದ್ದೇಶವಾಗಿರಲಿ, ಪರಸ್ಪರ ನಂಬಿಕೆಗಳಿಂದ ಅವುಗಳಿಗೆ ಶಾಶ್ವತವಾದ ಬೆಲೆ ದೊರಕಲಿ; ಭೂಮಿ ಆಕಾಶಗಳು ಒಂದಾಗಿ ಸೇರಲಿ, ನಮ್ಮೆರಡು ರಾಷ್ಟ್ರಗಳ ಸ್ನೇಹ ಬಂಧನ ಕಡಿದು ಬೀಳದಿರಲಿ.

ಈ ಪತ್ರವನ್ನು ಓದಿಕೊಂಡು ನೆಪೋಲಿಯನ್ ಬೋನಪಾರ್ಟಿ ಸಂತೋಷಪಟ್ಟನು. ಟಿಪ್ಪುವಿನ ಕೋರಿಕೆಯನ್ನು ನನ್ನ ಡೈರಕ್ಟರಿ ಸದಸ್ಯರೊಡನೆ ಚರ್ಚಿಸಿ ನಂತರ ನಿರ್ಧಾರವನ್ನು ತಿಳಿಸುತ್ತೇನೆ ಎಂಬ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದನು. ಈ ಕುರಿತು ಚರ್ಚಿಸಲು ರಾಜ್ಯಯೋಗ್ಯವಾದ ಸ್ಥಳ ಮತ್ತು ದಿನಾಂಕವನ್ನು ನಿಗದಿಮಾಡಲು ತನ್ನ ಅಧಿಕಾರಿಗಳಿಗೆ ಆಜ್ಞೆ ಮ್ಮಾಡಿದನು. ಒಂದು ವಾರ ಕಳೆದರೂ ನೆಪೋಲಿಯನ್ನನಿಂದ ಉತ್ತರ ಸಿಗಲಿಲ್ಲ. ರಾಯಭಾರ ತಂಡವು ಫ್ರೆಂಚರ

ನಾಟಕ, ನೃತ್ಯ, ಕಲಾಶಾಲೆ, ಪಾನಕೂಟ, ಸ್ನೇಹಕೂಟಗಳಲ್ಲಿ ಪಾಲ್ಗೊಂಡು ದಿನ ಕಳೆಯಿತು. ಆದರೆ ಖಾನ್‌ಜಹಾನಖಾನನು ಮಾತ್ರ ಆತಂಕದಲ್ಲಿಯೇ ದಿನ ಕಳೆಯುತ್ತಿದ್ದನು. ಇದಕ್ಕೆ ಕಾರಣವೂ ಇತ್ತು. ಟಿಪ್ಪು ಈ ಬಾರಿ ಹೆಚ್ಚು ಭರವಸೆ ಇಟ್ಟು ರಾಯಭಾರಿಗಳನ್ನು ಕಳುಹಿಸಿದ್ದನು. ಇದರ ಯಶಸ್ಸಿನ ಮೇಲೆ ಮೈಸೂರು ರಾಜ್ಯ ಏಕೆ ಭಾರತದ ಭವಿಷ್ಯವೂ ನಿಂತಿದೆ[೨೧] ಎಂಬ ಆಲೋಚನೆ ಅವನದಾಗಿತ್ತು. ನೆಪೋಲಿಯನ್‌ನಿಂದ ನಿರೀಕ್ಷಿತ ಉತ್ತರ ದೊರೆಯದಿದ್ದಾಗ ಮತ್ತೆ ನೇರವಾಗಿ ನೆಪೋಲಿಯನ್‌ನನ್ನು ಸಂದರ್ಶಿಸಿದನು. ಟಿಪ್ಪು ಕಳುಹಿಸಿದ್ದ ಮತ್ತೊಂದು ಖಾಸಗಿ ಪತ್ರವನ್ನು ನೀಡಿದನು. ಈ ಪತ್ರದಲ್ಲಿ ಟಿಪ್ಪು ಹೀಗೆ ಬರೆದಿದ್ದನು.

"ನಾನು ನಿಮ್ಮ ಸರಕಾರದ ಪಾವಿತ್ರ್ಯತೆಯನ್ನು ಅಂಗೀಕರಿಸುತ್ತೇನೆ. ನನ್ನ ನಿಷ್ಠೆಗೆ ಪ್ರಮಾಣವಾಗಿ ನಾನು ರಿಪಬ್ಲಿಕನ್ ತತ್ವಗಳ ಮೇಲೆ ನಿಂತ ಪ್ರಾಮಾಣಿಕತೆ ಹಾಗೂ ಭ್ರಾತೃತ್ವ ಭಾವಗಳ ಮೇಲೆ ನಿಂತು ಎಂದೆಂದಿಗೂ ವಿಸರ್ಜನೆಯಾಗದಿರುವ ಸ್ನೇಹ ಸಂಬಂಧದ ಒಪ್ಪಂದವನ್ನು ಮಾಡಿಕೊಳ್ಳಲು ಬಯಸುತ್ತೇನೆ. ಅಂದರೆ ನಮ್ಮ ರಾಷ್ಟ್ರವೂ, ನಿಮ್ಮ ರಾಷ್ಟ್ರವೂ, ನಮ್ಮ ಜನತೆಯೂ, ನಿಮ್ಮ ಜನತೆಯೂ, ಒಂದು ಕುಟುಂಬವಾಗಲೆಂಬ ಹಿರಿಯ ದರ್ಶನ ನನ್ನದು. ಇದೇ ಪ್ರತಿಜ್ಞೆ ನಮ್ಮ ಸಾವು ಬದುಕುಗಳಲ್ಲಿ ನಮ್ಮನ್ನು ಒಂದಾಗಿ ಬೆಸೆಯಲಿ ನಿಮ್ಮ ಶತ್ರುಗಳು ನಮ್ಮ ಶತ್ರುಗಳಾಗಲಿ, ನಮ್ಮ ಜನತೆಯ ಶತ್ರುಗಳು ನಿಮ್ಮ ಜನತೆಯ ಶತ್ರುಗಳಾಗಲಿ, ಅದೆಂಥ ಅಮೃತಗಳಿಗೆ! ಮಾನವ ಜನಾಂಗವನ್ನು ತುಳಿಯುತ್ತಿರುವ ಈ ಬ್ರಿಟಿಷರ ವಿರುದ್ಧ ನಾನು ತಳೆದಿರುವ ದ್ವೇಷವನ್ನೆಲ್ಲಾ ನನ್ನ ಗೆಳೆಯರ ಹೃದಯದಲ್ಲಿ ತೋಡಿಕೊಳ್ಳುವ ಕಾಲ ಬಂದಿದೆ. ನೀವು ನನಗೆ ಸಕಾಲದಲ್ಲಿ ಸಹಾಯ ಮಾಡಿದರೆ ಅತ್ಯಲ್ಪ ಕಾಲದಲ್ಲಿ ಭಾರತದಲ್ಲಿ ಒಬ್ಬ ಬ್ರಿಟಿಷರನು ಇರುವುದಿಲ್ಲ. ಇದನ್ನು ಸಾಧಿಸುವ ಅಧಿಕಾರ, ಸಾಧನ ಸಂಪತ್ತು ನಿಮಗೆ ಇದೆ. ನೀವು ನಮ್ಮೊಡನೆ ಸೇರಿದರೆ ಇಂಡಿಯಾದಿಂದ ಈ ದೂರ್ತರನ್ನು ಹೊಡೆದೋಡಿಸಬಹುದು. ನಿಮಗೆ ನನ್ನ ಮನಸ್ಸಿನ ಯೋಜನೆಗಳು ತಿಳಿದಿರುವುದರಿಂದ ನಿಮ್ಮ ಯೋಜನೆಗಳನ್ನು ತಿಳಿಸಲು ತಡ ಮಾಡಬೇಡಿ. ಆದರೆ ಒಂದು ಭಿನ್ನಹ ನಿಮ್ಮಿಂದ ನೆರವೇರಿಸಲು ಅಸಾಧ್ಯವಾದ ಯಾವುದೇ ವಾಗ್ದಾನಗಳನ್ನು ನೀವು ನೀಡಬಾರದು."[೨೨]

ಟಿಪ್ಪುವಿನ ರಾಯಭಾರಿ ಖಾನ್‌ಜಹಾನ್‌ಖಾನನು ಈ ಪತ್ರಕ್ಕೆ ನೆಪೋಲಿಯನ್ನನ ಉತ್ತರವನ್ನು ಎದುರು ನೋಡಿದನು. ನೆಪೋಲಿಯನ್ ಈ ಪತ್ರಕ್ಕೆ ಪ್ರತಿಕ್ರಿಯೆ ನೀಡಿದ್ದು ಹೀಗೆ. ಟಿಪ್ಪುವಿಗೆ ನಮ್ಮ ಶತ್ರುಗಳ ವಿರುದ್ಧ ಸಹಾಯ ಮಾಡಲು ಮನಸ್ಸಿದೆ ಆದರೆ ನಮ್ಮ ಸೈನ್ಯವು ನಿರಂತರ ಯುದ್ಧದಲ್ಲಿ ತೊಡಗಿದೆ. ಫ್ರಾನ್ಸ್‌ನ ಘನತೆ, ಗೌರವವನ್ನು ಯುರೋಪಿನಲ್ಲಿ ಮತ್ತೆ ಎತ್ತಿ ಹಿಡಿಯಲು ಪ್ರಯತ್ನಿಸುತ್ತಿದ್ದೇನೆ. ರಷ್ಯಾವು ನನ್ನ ಮಾರ್ಗದಲ್ಲಿ ಪ್ರಬಲ ಶತ್ರುವಾಗಿದೆ. ಇಂಗ್ಲಿಷರೂ ಯುರೋಪಿನಲ್ಲಿ ಫ್ರಾನ್ಸ್‌ನ ಶತ್ರು ರಾಷ್ಟ್ರಗಳ ನೆರವಿಗೆ ನಿಂತಿದೆ. ಇದರಿಂದ ಫ್ರಾನ್ಸ್‌ನ ಸೈನಿಕ ದಳಗಳು ಫ್ರಾನ್ಸಿನ

ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ತತ್ವಗಳನ್ನು ಎತ್ತಿ ಹಿಡಿಯಲು ಹೋರಾಡುತ್ತಿವೆ. ತನಗೆ ಬಿಡುವು ದೊರೆತಾಗ ಖಂಡಿತವಾಗಿಯೂ ಭರತ ಖಂಡದಿಂದ ಇಂಗ್ಲಿಷರನ್ನು ಓಡಿಸಲು ನೆರವು ನೀಡುತ್ತೇನೆಂಬ ಭರವಸೆ ನೀಡಿದನು.

ಟಿಪ್ಪುವಿನ ರಾಯಭಾರಿ ಖಾನ್‌ಜಹಾನ್ ಖಾನರು ಟಿಪ್ಪು ಕೊಟ್ಟು ಕಳುಹಿಸಿದ್ದ ಮತ್ತೊಂದು ಪತ್ರವನ್ನು ನೆಪೋಲಿಯನ್ನನಿಗೆ ನೀಡಿದರು. ಆ ಪತ್ರದ ಸಾರಾಂಶವು ಹೀಗಿತ್ತು.

ಪ್ಯಾರಿಸ್ಸಿನಲ್ಲಿರುವ ಎಕ್ಸಿಕ್ಯೂಟಿವ್ ಡೈರಕ್ಟರಿಗೆ ಟಿಪ್ಪು ಸುಲ್ತಾನನು ಮಾಡುವ ಸಲಾಂ,

ನನ್ನ ರಾಯಭಾರಿಗಳು ತಮಗೆ ಸಲ್ಲಿಸಬೇಕಾಗಿರುವ ಬೇಡಿಕೆಗಳ ವಿವರ ಇಂತಿವೆ.

ಪದಾತಿ, ಅಶ್ವ, ತುಪಾಕಿ, ಸೈನ್ಯ ಮುಂತಾದವು ಕನಿಷ್ಠ ಹತ್ತರಿಂದ ಹದಿನೈದು ಸಾವಿರ ಮಂದಿ. ತೀರದ ಪ್ರದೇಶದಲ್ಲಿ ಈ ಸೈನ್ಯಕ್ಕೆ ಕೊರತೆ ಬಿದ್ದಾಗ ಸಾಮಾನುಗಳನ್ನು ಒದಗಿಸಲು ಒಂದು ನೌಕಾದಳ, ರಿಪಬ್ಲಿಕನ್ ಸೈನ್ಯಕ್ಕೆ ಬೇಕಾಗುವ ಮಿಲಿಟರಿ ಹಾಗೂ ಇನ್ನಿತರ ಶಸ್ತ್ರಾಸ್ತ್ರಗಳು ಅಂದರೆ ಕುದುರೆ, ಗಾಡಿಗಳು, ಡೇರೆಗಳು ಮುಂತಾದ ಎಲ್ಲ ಬಗೆಯ ಸಾಮಾನು ಸರಂಜಾಮುಗಳನ್ನೂ, ವಿದೇಶಿ ಮದ್ಯದ ಹೊರತು ಉಳಿದೆಲ್ಲ ವಸ್ತುಗಳನ್ನು ಒದಗಿಸಲಾಗುತ್ತದೆ. ಪ್ರತಿಯೊಂದು ದಂಡಯಾತ್ರೆ ಹಾಗೂ ಸೈನಿಕ ಚಟುವಟಿಕೆಗಳಲ್ಲಿ ದೊರೆಯ ಆಜ್ಞೆಯಂತೆ ಅಂದರೆ ಸುಲ್ತಾನರ ಆಜ್ಞೆಯಂತೆ ಪಾಲಿಸತಕ್ಕದ್ದು. ದಂಡಯಾತ್ರೆ, ಕೋರಮಂಡಲ ತೀರದಲ್ಲಿ ಅಂದರೆ ಮುಖ್ಯವಾಗಿ ಪೋರ್ಟ್‌ನೋವೋ ದಂಡೆಯಲ್ಲಿ ನಡೆಯಲ್ಲಿದ್ದು, ಆ ಪ್ರದೇಶದ ಜನ ಫ್ರೆಂಚರ ಸೈನ್ಯವನ್ನು ಸ್ವಾಗತಿಸುತ್ತಾರೆ.

ಸುಲ್ತಾನರಿಗೆ ಈ ಬಗ್ಗೆ ಪೂರ್ವಭಾವಿಯಾಗಿ ಸುದ್ದಿ ಕೊಟ್ಟರೆ ಫ್ರೆಂಚ್ ರಿಪಬ್ಲಿಕನ್ ಸೈನ್ಯಕ್ಕೆ ಬೇಕಾಗುವುದನ್ನೆಲ್ಲಾ ಒದಗಿಸುತ್ತಾರೆ. ಮರಾಟೆಯವರೂ, ನಿಜಾಮರೂ ಹಾಗೂ ಇಂಗ್ಲಿಷರು ಸುಲ್ತಾನರು ಬಿಟ್ಟುಕೊಟ್ಟ ಪ್ರದೇಶಗಳ ಹೊರತು ಉಳಿದ ಗೆದ್ದ ಪ್ರದೇಶಗಳನ್ನು ಸಮನಾಗಿ ಹಂಚಿಕೊಳ್ಳತಕ್ಕದ್ದು. ಎರಡೂ ಸೈನ್ಯಗಳಿಗೆ ವೈಮನಸ್ಸುಂಟಾದರೆ ಆಯಾ ದೇಶದ ಸಂಪ್ರದಾಯ ಹಾಗೂ ಶಾಸನಗಳಿಗೆ ಅನುಸಾರವಾಗಿ ನಡೆಯತಕ್ಕದ್ದು. ಚರ್ಚೆಯಿಂದ ಅಂತಹ ವಿಷಯಗಳನ್ನು ಪರಿಹರಿಸ ತಕ್ಕದ್ದು. ಇದು ಸಾಧ್ಯವಾದಷ್ಟೂ ಲಿಖಿತದಲ್ಲಿ ಇರತಕ್ಕದ್ದು. ಯುರೋಪಿನಲ್ಲಾಗಲೀ, ಬೇರೆಡೆಯಲ್ಲಾಗಲೀ ಶಾಂತಿ ಒಪ್ಪಂದ ಮಾಡಿಕೊಳ್ಳಬೇಕಾದ ಪ್ರಸಂಗ ಬಂದರೆ ಸುಲ್ತಾನರನ್ನು ಸ್ನೇಹಿತರೆಂದು ತಿಳಿದು ಅದಕ್ಕೆ ಅನುಗುಣವಾಗಿ ನಡೆದುಕೊಳ್ಳತಕ್ಕದ್ದು.

ಫ್ರೆಂಚರು ಯಾರೇ ಇರಲಿ, ಸುಲ್ತಾನರ ರಾಜ್ಯಕ್ಕೆ ಕಾಲಿರಿಸಿದ ಮೇಲೆ ಅವರಿಗೆ ಪ್ರವಾಸ ಮಾಡಲು ಯಾವುದೇ ಬಗೆಯ ಪ್ರತಿಬಂಧಕ ತಡೆಗಳಿಲ್ಲದೆ ಅವಕಾಶ ಕೊಡತಕ್ಕದ್ದು. ಅವರು ಎಲ್ಲ ಬಗೆಯ ಸೌಲಭ್ಯಗಳಿಗೆ, ಸಹಾಯಗಳಿಗೆ ಪಾತ್ರರಾಗತಕ್ಕದ್ದು. ಸುಲ್ತಾನರಿಗೆ ನಾಲ್ಕು ಕಂಚಿನ

ತೋಟಿನ ಅಚ್ಚುಗಳನ್ನೂ, ನಾಲ್ಕು ಕಬ್ಬಿಣದ ತೋಟಿನ ಅಚ್ಚುಗಳನ್ನೂ, ನಾಲ್ವರು ಕಾಗದ ತಯಾರಿಕೆಗಾರರನ್ನೂ, ಹನ್ನೆರಡು ಜನ ಗಾಜು ತಯಾರಿಕೆಗಾರರನ್ನೂ, ಇನ್ನೂ ಇತರ ಕೈಗಾರಿಕೆಗಳಲ್ಲಿ ತೊಡಗಿರುವ ಕುಶಲ ಶಿಲ್ಪಿಗಳನ್ನೂ ಇಬ್ಬರು ನೌಕಾ ಶಿಲ್ಪಿಗಳನ್ನೂ, ಇಬ್ಬರು ನೌಕಾ ನಿರ್ಮಾಪಕರನ್ನು ಕಳುಹಿಸುವ ಕೃಪೆ ಮಾಡತಕ್ಕದ್ದು.[೨೩]

ನೆಪೋಲಿಯನ್ ಬೋನಾಪಾರ್ಟೆ ಕೈರೊ ನಗರ ಮುಟ್ಟುವುದಕ್ಕೆ ಮೊದಲು ಸೂಯೆಜ್ ಕಾಲುವೆಯ ಸಮೀಪ ಅವನಿಗೆ ಸಾಕಷ್ಟು ಸಾರಿಗೆ ಸೌಕರ್ಯ ದೊರೆತಿದ್ದರೆ ತನ್ನ ಸೈನ್ಯದಲ್ಲಿ ಆರಿಸಿದ ಹತ್ತು ಸಾವಿರ ಯೋಧರನ್ನು ಮಲಬಾರು ಕರಾವಳಿಗೆ ಕಳುಹಿಸುತ್ತಿದ್ದ; ಅವರೆಲ್ಲ ಟಿಪ್ಪುವಿನ ನೆರವಿಗೆ ಸಿಗುತ್ತಿದ್ದರು. ಅಲೆಗ್ಝಾಂಡ್ರಿಯಾದಲ್ಲಿ ಫ್ರೆಂಚರ ಸೈನ್ಯ ಬಂದಿಳಿತೆಂಬ ಸುದ್ದಿ ತಲುಪಿದ ಕೂಡಲೇ ಈ ಕೆಲಸವಾಗಿ ಹೋಗುತ್ತಿತ್ತು ಎಂದು ಕರ್ನಲ್ ಎಂ. ವುಡ್ ತಾನು ೧೮೦೦ರಲ್ಲಿ ಬರೆದ 'ಮೈಸೂರಿನಲ್ಲಿ ಸಂಗ್ರಾಮ' ಎಂಬ ಪುಸ್ತಕದಲ್ಲಿ ತಿಳಿಸಿದ್ದಾನೆ.[೨೪] ೨೬-೧-೧೭೯೯ ದಿನ ನೆಪೋಲಿಯನ್ ಕೈರೊ ನಗರದಿಂದ ಟಿಪ್ಪುವಿಗೊಂದು ಪತ್ರ ಬರೆದ, ಅದನ್ನು ಮೆಕ್ಕಾದ ಷರೀಫನ ಸಂಗಡ ಕಳುಹಿಸಿ ಟಿಪ್ಪುವಿಗೆ ತಲುಪಿಸುವಂತೆ ಸೂಚಿಸಿದ. ಈ ಪತ್ರ ಟಿಪ್ಪುವಿನ ಕೈ ಸೇರುವುದು ತಡವಾಯಿತು. ಈ ಪತ್ರದ ಕನ್ನಡ ಅನುವಾದ ಹೀಗಿದೆ.

ಫ್ರೆಂಚ್ ಗಣರಾಜ್ಯ

ಗುರಿ-ಸ್ವಾತಂತ್ರ್ಯ, ಸಮಾನತೆ, ಸೋದರತೆ

ತಂಗವೀಡು, ಕೈರೋ

ಗಣರಾಜ್ಯದ ಏಳನೆಯ ಸಂವತ್ಸರ

೨೬-೦೧-೧೭೯೯

ಐಕ್ಯೈಕ ಮತ್ತು ಅವಿಭಾಜ್ಯ ನೆಪೋಲಿಯನ್ ·ಬೋನಾಪಾರ್ಟೆ, ರಾಷ್ಟ್ರೀಯ ಪರಿಷತ್ತಿನ ಸದಸ್ಯ ಮತ್ತು ದಂಡನಾಯಕನಿಂದ.

ಮಹೋನ್ನತ ಉದಾರಿ ಸುಲ್ತಾನ ಮತ್ತು ನಮ್ಮ ಪರಮೋತ್ತಮ ಮಿತ್ರ ಟಿಪ್ಪು ಸಾಹೇಬರಿಗೆ;

ಅಸಂಖ್ಯಾತವೂ, ಅಜೇಯವೂ ಆದ ಸೈನ್ಯದಿಂದೊಡಗೂಡಿ ಇಂಗ್ಲೆಂಡಿನ ಕಬ್ಬಿಣದ ನೊಗದಿಂದ ತಮ್ಮನ್ನು ಮುಕ್ತಗೊಳಿಸುವ ಉತ್ಕಟ ಅಪೇಕ್ಷೆಯಿಂದ ನಾನು ಕೆಂಪು ಸಮುದ್ರದ ತೀರ ಪ್ರದೇಶಕ್ಕೆ ಬಂದಿರುವನೆಂಬ ವಿಚಾರವನ್ನು ಈಗಾಗಲೇ ತಮಗೆ ತಿಳಿಸಲಾಗಿದೆ. ತಮ್ಮ ರಾಜಕೀಯ ಪರಿಸ್ಥಿತಿಯೇನೆಂಬುದನ್ನು ಮಸ್ಕತ್, ಮಕ್ಕಾ ಮೂಲಕ ತಮ್ಮಿಂದ ತಿಳಿಯಲು ಈ ಸಮಯದಲ್ಲಿ ವಿಶೇಷ ಕುತೂಹಲದಿಂದ ಕೂಡಿದ್ದೇನೆ. ತಮ್ಮ ಅಂತರಂಗಕ್ಕೆ ಸೇರಿದ

ಬುದ್ಧಿವಂತನಾದೊಬ್ಬ ಗೃಹಸ್ಥನನ್ನು ನನ್ನ ಬಳಿಗೆ ಕಳುಹಿಸಬೇಕೆಂದು ಆಶಿಸುತ್ತೇನೆ. ಆತನೊಂದಿಗೆ ನಾನು ಮಾತುಕತೆ ನಡೆಸಬಹುದು.

ಜಗದೀಶ್ವರನು ತಮ್ಮ ಬಲವನ್ನು ಬೆಳಸಲಿ

ತಮ್ಮ ಶತ್ರುಗಳನ್ನು ಧ್ವಂಸ ಮಾಡಲಿ

ಸಹಿ: ನೆಪೋಲಿಯನ್ ಬೋನಾಪಾರ್ಟೆ

ಈ ಪತ್ರವು ಟಿಪ್ಪು–ನೆಪೋಲಿಯನ್ ನಡುವಿನ ಸ್ನೇಹ–ಬಾಂಧವ್ಯಕ್ಕೆ ಸಾಕ್ಷಿಯಂತಿದೆ. ಟಿಪ್ಪು ಪತನದೊಂದಿಗೆ ರಾಜ್ಯಾಪಹಾರದೊಂದಿಗೆ ಗ್ರಂಥ ಭಂಡಾರವೂ ಬ್ರಿಟಿಷರ ವಶವಾಯಿತು. ಅಪಹೃತ ಸಾಹಿತ್ಯದಲ್ಲಿ ಬ್ರಿಟಿಷರು ತಮಗೆ ಅನುಕೂಲವಾದಷ್ಟನ್ನು ಪ್ರಕಟಿಸಿದರು. ಕಿರ್ಕ್‌ಪ್ಯಾಟ್ರಿಕ್ ಎಂಬಾತ ಟಿಪ್ಪುವಿನ ಪರ್ಶಿಯನ್ ಪತ್ರಗಳಲ್ಲಿ ಹಲವನ್ನಾಯ್ದು ಇಂಗ್ಲಿಷಿಗೆ ಭಾಷಾಂತರ ಮಾಡಿ ಪ್ರಕಟಿಸಿದ.[೨೫] ಇನ್ನೂ ಅಪ್ರಕಟಿತ ಸಾಹಿತ್ಯ ಅಪಾರವಾಗಿದೆ.

ನೆಪೋಲಿಯನ್ನನ ಈ ಪತ್ರವು ಕಾಲದ ಪದಾಘಾತಕ್ಕೆ ಸಿಕ್ಕ ಇತಿಹಾಸದ ಬಳುವಳಿಯಾಗಿ ಇದುವರೆಗೆ ಉಳಿದುಕೊಂಡು ಬಂದಿದ್ದರೂ ಅದು ಟಿಪ್ಪು ಸುಲ್ತಾನನನ್ನು ತಲುಪೇ ಇಲ್ಲ. ಮಕ್ಕಾದ ಷರೀಪನ ಮೂಲಕ ಬರಬೇಕಾಗಿದ್ದ ಅದನ್ನು ಜೆಡ್ಡಾದಲ್ಲಿ ತಡೆ ಹಿಡಿಯಲಾಯಿತು. ಈ ಪತ್ರದಲ್ಲಿ ಟಿಪ್ಪುವು ಯಾವುದೇ ಸಂಧಿ ಪ್ರಸ್ತಾಪ ಮಾಡಿದುದರ ಬಗ್ಗೆಯಾಗಲಿ ಅಥವಾ ಟಿಪ್ಪು ಮತ್ತು ಫ್ರೆಂಚರ ನಡುವೆ ಆದ ಯಾವುದೇ ಆಕ್ರಮಣಾತ್ಮಕ ಮತ್ತು ರಕ್ಷಣಾತ್ಮಕ ಒಪ್ಪಂದದ ಬಗೆಗಾಗಲೀ ಪ್ರಸ್ತಾಪವಿರಲಿಲ್ಲ. ಆದರೂ ವೆಲ್ಲೆಸ್ಲಿ ದೃಷ್ಟಿಯಲ್ಲಿ ಇದೆಲ್ಲ ಅಪ್ರಸ್ತುತ.

ಟಿಪ್ಪುವು ಇಂಗ್ಲಿಷರ ವಿರುದ್ಧ ಫ್ರೆಂಚರ ನೆರವು ಪಡೆಯಲು ತನ್ನ ಪ್ರಯತ್ನವನ್ನು ತೀವ್ರಗೊಳಿಸಿದಂತೆ ಇಂಗ್ಲಿಶ್ ಈಸ್ಟ್ ಇಂಡಿಯಾ ಕಂಪನಿಯ ಕೋರ್ಟ್ ಆಫ್ ಡೈರಕ್ಟರ್‌ಗಳ ರಹಸ್ಯ ಸಮಿತಿಯವರು ಬಂಗಾಳದ ಗೌವರ್ನರ್ ಜನರಲ್‌ನಿಗೆ ದೀರ್ಘವಾದ ಪತ್ರವೊಂದನ್ನು ಬರೆದರು. ಅದು ಹೀಗಿದೆ.

ಪೂರ್ವದೇಶದ ನಮ್ಮ ಸಾಮ್ರಾಜ್ಯ ಕುರಿತು ಫ್ರೆಂಚರಿಗೆ ಮೊದಲಿನಿಂದಲೂ ಅಸೂಯೆ ಇದೆ. ಗುಡ್‌ಹೋಪ್ ಭೂಶಿರ ಬಳಸಿ ಬರುವ ಮಾರ್ಗಕ್ಕಿಂತ ಹತ್ತಿರದ ಮಾರ್ಗವೊಂದನ್ನು ಹುಡುಕುವುದರಲ್ಲಿ ಸರಕಾರದವರು ಕುತೂಹಲಿಗಳಾಗಿದ್ದರು. ಇಂದಿನ ಫ್ರೆಂಚ್ ಸರಕಾರದವರು ಎಂತಹ ಕಷ್ಟಗಳನ್ನಾದರೂ ಸಹಿಸಿ ಎಂತಹ ವಿಪತ್ತನ್ನಾದರೂ ಎದುರಿಸಿ ಅಸಾಧಾರಣ ಸಾಹಸೋದ್ಯಮಗಳನ್ನು ಹೂಡಿ ಪ್ರಪಂಚದ ಆ ಭಾಗದಲ್ಲಿ ಬ್ರಿಟಿಷರ ಪ್ರಭುತ್ವವನ್ನು ನಿರ್ಮೂಲನ ಮಾಡಲು ಸಾಧ್ಯವಾಗದಿದ್ದರೂ ದುರ್ಬಲಗೊಳಿಸಲು ಪ್ರಯತ್ನ ಮಾಡುತ್ತಿದ್ದಾರೆ. ಈ ಕಾರ್ಯಸಾಧನೆಗೆ ಭಾರತದ ಪ್ರಭುತ್ವಗಳ ಪೂರ್ವಭಾವಿ ಸಂಪರ್ಕ, ಸಹಾಯಗಳು ಬೇಕು ಅದಿಲ್ಲದೆ ಯಾವ

ಕಾರ್ಯಸಾಧನೆಯೂ ಸಾಧ್ಯವಿಲ್ಲ. ಭಾರತದ ಇಂದಿನ ಪರಿಸ್ಥಿತಿಯಲ್ಲಿ ಫ್ರೆಂಚರ ಮಹಾದಾಶಯ ಸಾಧನೆಗೆ ಟಿಪ್ಪು ಸುಲ್ತಾನನೊಬ್ಬನೆ ಬಲಯುತ ಸಾಧನವೆಂದೂ ಅವನನ್ನೆ ಅವರು ಉಪಯೋಗಿಸಿಕೊಳ್ಳುವರು ಎಂದು ತಿಳಿಸಲಾಗಿತ್ತು.

೧೬-೧೧-೧೭೯೮ನೆಯ ದಿನ ರಹಸ್ಯ ಸಮಿತಿಯವರು ಇಂಡಿಯಾ ಸರಕಾರಕ್ಕೊಂದು ಪತ್ರ ಬರೆದು ಫ್ರೆಂಚರು ಈಜಿಪ್ಟನ್ನು ವಶಪಡಿಸಿಕೊಂಡರೆ ಆ ದೇಶದಲ್ಲಿ ಫ್ರೆಂಚ್ ಪ್ರಭುತ್ವ ಸ್ಥಾಪಿತವಾದರೆ ಅವರು ಕೆಂಪು ಕಡಲು, ಕ್ಯಾಂಬೆ ಕೊಲ್ಲಿ ಮಾರ್ಗವನ್ನು ಆಕ್ರಮಿಸುವುದು ಖಂಡಿತ. ಫ್ರೆಂಚರು ಪೆರು ದ್ವೀಪವನ್ನು ಹಿಡಿದು ಅಲ್ಲಿ ಬಲಗೊಳ್ಳುವುದು ಖಂಡಿತ. ಪೆರು ದ್ವೀಪವನ್ನು ಆಕ್ರಮಿಸದಂತೆ ನೋಡಿಕೊಳ್ಳಬೇಕು. ಇದು ಫ್ರೆಂಚರಿಗೆ ದಕ್ಕಿದರೆ ನೆಪೋಲಿಯನ್ನನು ಟಿಪ್ಪುವಿನ ನೆರವಿಗೆ ಸೈನ್ಯ ಕಳುಹಿಸಲು ದಾರಿ ಸುಗಮವಾಗುತ್ತದೆ. ಹಿಂದೂ ಸಾಗರಕ್ಕೆ ಹಡಗುಗಳು ಹೋಗಬಾರದೆಂದು ನಿಶ್ಚಯವಾದರೆ ಪೆರು ದ್ವೀಪವನ್ನು ಬ್ರಿಟಿಷರು ಆಕ್ರಮಿಸಬೇಕು. ಫ್ರೆಂಚರಿಗೆ ಇದರ ಸುಳಿವು ಸಿಕ್ಕಿದರೆ ಮೊದಲು ಅವರು ಆಕ್ರಮಿಸುತ್ತಾರೆ. ಈ ಕಾರ್ಯವು ತ್ವರಿತವಾಗಿ ನಡೆಯಬೇಕು ಎಂದು ತಿಳಿಸಲಾಗಿತ್ತು.[೨೬] ಈ ಪತ್ರದ ಕಡೆಯ ವಾಕ್ಯವು ಗಮನಾರ್ಹವಾಗಿದೆ.

ಭಾರತದಲ್ಲಿ ನಮ್ಮ ಇರುವಿಕೆಯೇ ಅಲ್ಲದಿದ್ದರೂ ನಮ್ಮ ಅಮೂಲ್ಯ ಪ್ರದೇಶಗಳ ಸಂರಕ್ಷಣೆಯು ನಮ್ಮ ಈ ಸರ್ವಸ್ವದ ಮೇಲೆ ಕಣ್ಣಿಟ್ಟು ಘೋರ ಸಂಚುಗಳನ್ನು ಹೂಡುತ್ತಿರುವ ಫ್ರೆಂಚರ ಅಜೇಯ ಬಲವನ್ನು ಹಿಂಗಿಸಿ, ಅವರನ್ನು ಸೋಲಿಸುವುದರ ಮೇಲೆ ನಿಂತಿದೆ.[೨೭] ಟಿಪ್ಪುವು ಫ್ರೆಂಚರೊಂದಿಗೆ ನಡೆಸುತ್ತಿರುವ ಪತ್ರವ್ಯವಹಾರಗಳು ಇಂಗ್ಲಿಷರಿಗೆ ನುಂಗಲಾರದ ತುತ್ತಾಯಿತು. ಫ್ರಾನ್ಸ್ ದ್ವೀಪದ ಗವರ್ನರ್ ಜನರಲ್ ಮತ್ತು ದಂಡನಾಯಕ ಮಲಾರ್ಟಿಕ್ ೩೦-೧-೧೭೯೮ರಲ್ಲಿ ಹೊರಡಿಸಿದ ಪ್ರಕಟಣೆಯನ್ನು ಆಧಾರವಾಗಿಟ್ಟುಕೊಂಡು ಇಂಗ್ಲಿಷರು ಟಿಪ್ಪುವಿನ ಮೇಲೆ ಹಲವು ಆಪಾದನೆಗಳನ್ನು ಹೊರಿಸಿದರು.

೭.೪. ಟಿಪ್ಪು ಮತ್ತು ಜಾಕೋಬಿನ್

ಫ್ರಾನ್ಸ್ ಮಹಾಕ್ರಾಂತಿಯ ಸಮಯದಲ್ಲಿ ಜಾಕೋಬಿನ್ ಪಕ್ಷವು ಮಹತ್ವದ ಪಾತ್ರ ವಹಿಸಿತ್ತು. ಫ್ರಾನ್ಸಿನ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ೧೪೦ ಜನ ಜಾಕೋಬಿಯನ್ನರಿದ್ದರು. ಇವರನ್ನು ಎಡಪಂಥೀಯರು ಎಂತಲೂ ಮತ್ತು ಮೌಂಟೆನ್ಸ್ ಎಂತಲೂ ಕರೆಯಲಾಗಿತ್ತು. ಈ ಪಕ್ಷದ ಸದಸ್ಯರು ಜಾಕೋಬಿನ್ ಕ್ಲಬ್‌ಗೆ ಸೇರಿದ್ದರಿಂದ ಇವರನ್ನು ಜಾಕೋಬಿಯನ್ನರು ಎನ್ನಲಾಗಿದೆ. ಫ್ರಾನ್ಸಿನಲ್ಲಿ ಮಾರಬ್, ಡಾಂಟನ್, ರಾಬೆಸ್ಪಿಯರ್, ಸೆಂಟ್‌ಜಸ್ಟ್, ರಾಬರ್ಟ್, ಕರ್ನಾಟ್, ಗ್ರೆಗರಿ ಮುಂತಾದವರು ಜಾಕೋಬಿನ್ ಪಕ್ಷದ ಪ್ರಸಿದ್ಧ ನಾಯಕರಾಗಿದ್ದರು. ಪ್ರಾರಂಭದಲ್ಲಿ ಮಂದಗಾಮಿಗಳಾಗಿದ್ದ ಜಾಕೋಬಿನ್ನರು ಕ್ರಮೇಣ ತೀವ್ರವಾದಿಗಳಾದರು. ಫ್ರಾನ್ಸಿನಲ್ಲಿ ಬೋರ್ಬನ್

ಅರಸರ ರಾಜಪ್ರಭುತ್ವವನ್ನು ಕೊನೆಗೊಳಿಸಲು ಬಯಸಿದರು. ಇವರು ಗಣತಂತ್ರ ವ್ಯವಸ್ಥೆಯ ಮೇಲೆ ನಂಬಿಕೆ ಹೊಂದಿದ್ದರು. ರುಸೋವಿನ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ತತ್ವಗಳ ಆಧಾರದ ಮೇಲೆ ಫ್ರಾನ್ಸಿನಲ್ಲಿ ಹೊಸ ಗಣರಾಜ್ಯ ಸ್ಥಾಪಿಸಲು ಪ್ರಯತ್ನಿಸಿದರು. ಜಾಕೋಬಿಯನ್ನರು ಫ್ರಾನ್ಸಿನಾದ್ಯಂತ ಜಾಕೋಬಿನ್ ಕ್ಲಬ್‌ಗಳನ್ನು ಸ್ಥಾಪಿಸಿದರು. ಫ್ರಾನ್ಸ್‌ನಲ್ಲಿ ೨೬೦೦ ಜಾಕೋಬಿನ್ ಕ್ಲಬ್‌ಗಳು ಸ್ಥಾಪನೆಯಾದವು. ಇವು ಜನತೆಯ ಸಾರ್ವಭೌಮತ್ವದಲ್ಲಿ ಹೆಚ್ಚು ನಂಬಿಕೆ ಇಟ್ಟು ಕೆಲಸ ಮಾಡಿದವು. ಫ್ರಾನ್ಸ್‌ನ ಲೆಜಿಸ್ಲೇಟಿವ್ ಪಾರ್ಲಿಮೆಂಟ್‌ನಲ್ಲಿ ಗಿರಾಂಡಿಸ್ಟರ ಪ್ರಭಾವವನ್ನು ಕಡಿಮೆ ಮಾಡಲು ಪ್ರಯತ್ನಿಸಿದರು. ೧೭೯೩ರ ಸಮಯದಲ್ಲಿ ಜಾಕೋಬಿಯನ್ನರು ಗಿರಾಂಡಿಸ್ಟರನ್ನು ಕಗ್ಗೊಲೆಗಳನ್ನು ನಡೆಸಿ ಪದಚ್ಯುತಗೊಳಿಸಲು ಯತ್ನಿಸಿದರು. ೧೭೯೩ ರಿಂದ ೧೭೯೪ರವರೆಗೆ ಜಾಕೋಬಿಯನ್ನರು ಫ್ರಾನ್ಸ್‌ನಲ್ಲಿ ಭಯಾನಕ ಆಳ್ವಿಕೆ ನಡೆಸಿದರು. ಜಾಕೋಬಿನ್ ಪಕ್ಷದ ನಾಯಕ ರಾಬೆಸ್ಪಿಯರ್ ರಾಜಪ್ರಭುತ್ವದ ವಿರೋಧಿಯಾಗಿದ್ದನು. ಫ್ರಾನ್ಸ್ ಉಳಿಯಬೇಕಾದರೆ ಹದಿನಾರನೆಯ ಲೂಯಿ ನಾಶವಾಗಲೇ ಬೇಕು ಎಂದು ಹೇಳಿದನು. ಫ್ರಾನ್ಸಿನಾದ್ಯಂತ ಜಾಕ್ಲೋಬಿನ್ ಕ್ಲಬ್‌ಗಳನ್ನು ಸ್ಥಾಪಿಸಿ ಮಧ್ಯಮವರ್ಗದ ಜನರನ್ನು ಕ್ರಾಂತಿಗೆ ಸಜ್ಜುಗೊಳಿಸಿದನು. ೧೭೮೯ರ ಫ್ರಾನ್ಸ್ ಮಹಾಕ್ರಾಂತಿಯ ಸಮಯದಲ್ಲಿ ಹದಿನಾರನೆಯ ಲೂಯಿ ಮತ್ತು ಅವನ ಪತ್ನಿ ಮೇರಿ ಅಂಟಾಯಿನೆಟ್‌ಳನ್ನು ಗಿಲೋಟಿನ್ ಯಂತ್ರಕ್ಕೆ ಬಲಿಕೊಡಲಾಯಿತು. ರಾಬೆಸ್ಪಿಯರ್‌ನ ನಾಯಕತ್ವದಲ್ಲಿ ಫ್ರಾನ್ಸ್‌ನಲ್ಲಿ ಭಯಾನಕ ಆಳ್ವಿಕೆ ಆರಂಭವಾಯಿತು. ಗಿರಾಂಡಿಸ್ಟರ ಕಗ್ಗೊಲೆ ಮುಂದುವರೆಯಿತು. ಗಿರಾಂಡಿಸ್ಟ್ ನಾಯಕಿ ಮೇಡಂ ರೋಲ್ಯಾಂಡಳನ್ನು ಗಿಲೋಟಿನ್ ಯಂತ್ರಕ್ಕೆ ಹಾಕಿ ಸಾಯಿಸಲಾಯಿತು. ಪ್ಯಾರಿಸ್ಸಿನಲ್ಲಿ ೧೭೦೦೦ ಮಂದಿ ಬಲಿಯಾದರು. ಕೊನೆಗೆ ಫ್ರಾನ್ಸ್ ರಾಷ್ಟ್ರೀಯ ಸಭೆಯು ರಾಬೆಸ್ಪಿಯರ್‌ನನ್ನು ಜೂನ್ ೨೮, ೧೭೯೪ರಲ್ಲಿ ಗಿಲೋಟಿನ್ ಯಂತ್ರಕ್ಕೆ ಬಲಿಕೊಡಲು ಆದೇಶಿಸಿತು. ಇದರೊಂದಿಗೆ ಜಾಕೋಬಿಯನ್ನರ ಭಯಾನಕ ಆಳ್ವಿಕೆ ಕೊನೆಗೊಂಡಿತು.

ಟಿಪ್ಪುವಿನ ಆಳ್ವಿಕೆಯ ಕಾಲದಲ್ಲಿ ಮೈಸೂರು ರಾಜ್ಯದಲ್ಲಿಯೂ ಜಾಕೋಬಿನ್ ಕ್ಲಬ್‌ನ ಸ್ಥಾಪನೆಯ ಪ್ರಯತ್ನಗಳು ನಡೆದವು. ಮೇ ೧೫, ೧೭೯೭ರಲ್ಲಿ ಫ್ರೆಂಚ್ ಗಣರಾಜ್ಯ ಸ್ಥಾಪನೆಯ ೫ನೆಯ ವಾರ್ಷಿಕೋತ್ಸವದಂದು ಶ್ರೀರಂಗಪಟ್ಟಣದಲ್ಲಿ ಫ್ರೆಂಚ್ ಸೈನಿಕರು ಜಾಕೋಬಿನ್ ಕ್ಲಬ್ ಸ್ಥಾಪಿಸಿದರು. ಇದಕ್ಕೆ ಟಿಪ್ಪು ಅಪಾರ ಪೋಷಣೆ ನೀಡಿದನು. ತನ್ನ ಅರಮನೆಯ ಮುಂಭಾಗ "ಗಣರಾಜ್ಯ ವೃಕ್ಷ"ವನ್ನು ನೆಡುವ ವಿಚಾರ ಮಾಡಿದ್ದು, ತನ್ನನ್ನು "ಪೌರ ಟಿಪ್ಪು" ಎಂದು ಕರೆಸಿಕೊಳ್ಳಲು ಬಯಸಿದ್ದು, ಪಾಶ್ಚಾತ್ಯ ಸಿದ್ಧಾಂತಗಳನ್ನು ಹೆಚ್ಚು ಇಚ್ಛಿಸಿದ್ದನ್ನು ಸೂಚಿಸುತ್ತದೆ. ಈ ಸಂಭ್ರಮಾಚರಣೆಗಾಗಿ ೨೩೦೦ ಕುಶಾಲ ತೋಪುಗಳ, ೫೦೦ ರಾಕೆಟುಗಳ ಉಡಾವಣೆಗೆ ಆದೇಶ ನೀಡಿದನು. ಫ್ರಾನ್ಸ್ ನನ್ನ ಮಿತ್ರ ದೇಶವಾಗಿದೆ. ನಿಮಗೆ ನಿಮ್ಮ ದೇಶದಲ್ಲಿ ಹೇಗೋ ಹಾಗೆಯೇ ಇಲ್ಲಿಯೂ ಬೆಂಬಲು ದೊರಕುತ್ತದೆ ಎಂಬುದಾಗಿ ತಿಳಿಸಿದನು.[೨೮]

೧೭೯೧ರ ಮೇ ೧೫ ರಂದು ಫ್ರೆಂಚ್ ಗಣರಾಜ್ಯ ಸ್ಥಾಪನೆಯ ೫ನೆಯ ವಾರ್ಷಿಕೋತ್ಸವ ಆಚರಿಸಲು ಶ್ರೀರಂಗಪಟ್ಟಣದಲ್ಲಿ ಭರದ ಸಿದ್ಧತೆ ನಡೆಯಿತು. ಫ್ರೆಂಚ್ ಸೈನಿಕರು ಸ್ಥಾಪಿಸಿಕೊಂಡಿದ್ದ ಜಾಕೋಬಿನ್ ಕ್ಲಬ್ ಇದರಲ್ಲಿ ಪ್ರಧಾನ ಪಾತ್ರವಹಿಸಿತು. ಈ ಉತ್ಸವಕ್ಕೆ ಟಿಪ್ಪುವನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಿದರು. ಜಾಕೋಬಿನ್ ಸದಸ್ಯರು ಫ್ರೆಂಚ್ ಮತ್ತು ಉರ್ದು ಭಾಷೆಗಳಲ್ಲಿ ಫ್ರಾನ್ಸ್ ದೇಶದ ಮಹಾಕ್ರಾಂತಿಯ ಘೋಷಣೆಗಳಾದ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ತತ್ವಗಳನ್ನು ದೊಡ್ಡ ಹಲಗೆಗಳಲ್ಲಿ ಬರೆದು ಶ್ರೀರಂಗಪಟ್ಟಣದ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಅವುಗಳಲ್ಲಿ ನೆಪೋಲಿಯನ್ ಮತ್ತು ಟಿಪ್ಪು ಭಾವಚಿತ್ರಗಳಿದ್ದವು.[೨೯] ಈ ಉತ್ಸವದ ಪವಿತ್ರ ಸ್ಮರಣೆಗಾಗಿ ಟಿಪ್ಪುವಿನ ಕೈಯಿಂದ ಗಣರಾಜ್ಯ ವೃಕ್ಷವನ್ನು ನೆಡಿಸಿದರು. ಫ್ರಾನ್ಸ್ ಮತ್ತು ಮೈಸೂರಿನ ಧ್ವಜಗಳು ಹಾರಾಡುತ್ತಿದ್ದವು. ಚಿನ್ನದ ಎಳೆಯಿಂದ ಮಾಡಿದ ಸುಂದರ ಟೋಪಿಯನ್ನು ರೈಪಾಡನು ಟಿಪ್ಪುವಿಗೆ ತೊಡಿಸಿ "ಸಿಟಿಜನ್ ಟಿಪ್ಪು" ಎಂದು ಘೋಷಿಸಿದನು.

ಟಿಪ್ಪುವು ಈ ವಾರ್ಷಿಕೋತ್ಸವ ಸಮಾರಂಭದ ವೇದಿಕೆ ಮೇಲೆ ಭಾಷಣ ಮಾಡಲು ಬಂದಾಗ ೨೩೦೦ ತೋಪುಗಳು, ಎರಡನೂರು ರಾಕೆಟುಗಳು ಹಾರಿದವು. ಶ್ರೀರಂಗಪಟ್ಟಣದ ತುಪಾಕಿ ದಳದ ಸೈನಿಕರು ಬತೇರಿಯಿಂದ ಗೌರವ ಸೂಚಕವಾಗಿ ಐದುನೂರು ತೋಪುಗಳನ್ನು ಹಾರಿಸಿದರು. ಈ ಸಮಾರಂಭದ ಎತ್ತರದ ವೇದಿಕೆ ಮೇಲೆ ನಿಂತು ಟಿಪ್ಪು ಫ್ರೆಂಚ್ ಸೈನಿಕರನ್ನು ಉದ್ದೇಶಿಸಿ ಮಾಡಿದ ಭಾಷಣ ಹೀಗಿದೆ.[೩೦]

ಮಾನ್ಯ ಮಿತ್ರರೇ ನೀವು ಸಾವಿರಾರು ಮೈಲುಗಳ ಪ್ರಯಾಣ ಮಾಡಿ ನಮ್ಮ ಸ್ನೇಹಿತರಾಗಿ ಇಲ್ಲಿ ನಿಂತಿದ್ದೀರಿ. ಇದರಿಂದ ನಿಮಗೆ ನಮ್ಮ ಮೇಲಿರುವ ವಿಶ್ವಾಸ ಎಷ್ಟಿದೆಯೆಂದು ತಿಳಿಯುತ್ತದೆ. ನಿಮ್ಮನ್ನು ಫ್ರೆಂಚ್ ಜನತೆಯನ್ನು ನಾನು ನನ್ನ ಪರಮಾಪ್ತ ಮಿತ್ರರೆಂದು ತಿಳಿದಿದ್ದೇನೆ. ನಿಮ್ಮ ದೇಶದ ಶಕ್ತಿ–ಸಾಧನಗಳ ಬಗ್ಗೆ ನನಗೆ ತುಂಬಾ ಗೌರವವಿದೆ. ಅಂತಲೇ ನಮ್ಮೆರಡು ದೇಶಗಳಿಗೂ, ಸರಕಾರಗಳಿಗೂ ಹಿಂದಿನಿಂದಲೂ ನಿಕಟವಾದ ಸ್ನೇಹ, ಸೌಹಾರ್ದಗಳು ಬೆಳೆದಿವೆ. ಈ ನಮ್ಮ ಸ್ನೇಹಕ್ಕೆ ಎರಡು ದೇಶಗಳ ಜನತೆಯ ಪೂರ್ಣ ಸಹಕಾರ ಬೆಂಬಲಗಳಿವೆ. ಸಹೋದರರೇ, ಇಂದಿನ ನಿಮ್ಮ ಸ್ವಾತಂತ್ರ್ಯೋತ್ಸವ ಜಯಪ್ರದವಾಗಲೆಂದು ಆಶಿಸುತ್ತೇನೆ.

ಟಿಪ್ಪುವು ಜಾಕೋಬಿನ್ ಕ್ಲಬ್‌ನ ಫ್ರೆಂಚ್ ಸೈನಿಕರನ್ನು ಗೌರವದಿಂದ ನಡೆಸಿಕೊಂಡನು. ಈ ಉತ್ಸವವನ್ನು ವೈಭವದಿಂದ ನಡೆಸಿಕೊಟ್ಟನು. ಇದರ ವರದಿಗಳು ಫ್ರಾನ್ಸಿಗೂ ತಲುಪಿದವು. ನೆಪೋಲಿಯನ್ ಟಿಪ್ಪುವಿನ ನೆರವಿಗೆ ಧಾವಿಸುವ ಭರವಸೆಯೂ ದೊರೆಯಿತು. ಆದರೆ ನೆಪೋಲಿಯನ್ ಯುರೋಪಿನ್ ಶಕ್ತಿರಾಜಕಾರಣದ ಹೋರಾಟದಲ್ಲಿ ಭಾಗಿಯಾಗಿದ್ದನು. ನಿರಂತರ ಕದನದಲ್ಲಿ ಫ್ರಾನ್ಸ್ ಸೈನ್ಯವು ತೊಡಗಿಕೊಂಡಿತ್ತು. ನೆಪೋಲಿಯನ್ ಈಜಿಪ್ಟಿನ ಪಿರಮಿಡ್ ಕದನದಲ್ಲಿ ತನ್ನ

ವಿರುದ್ಧ ರಾಷ್ಟ್ರಗಳೊಂದಿಗೆ ಸೆಣಸಾಡಬೇಕಾಯಿತು. ಇಂಗ್ಲೆಂಡ್ ಮಿತ್ರ ರಾಷ್ಟ್ರಗಳ ಒಕ್ಕೂಟದಲ್ಲಿ ನಿಂತು ನೆಪೋಲಿಯನ್ ಅಧಿಕಾರವನ್ನು ಅಂತ್ಯಗೊಳಿಸಲು ಯುದ್ಧವನ್ನು ತೀವ್ರಗೊಳಿಸಿತು. ಆದ್ದರಿಂದ ಟಿಪ್ಪುವಿಗೆ ಸಕಾಲದಲ್ಲಿ ಫ್ರಾನ್ಸಿನ ನೆರವು ದೊರೆಯದೆ ಹೋಯಿತು. ನೆಪೋಲಿಯನ್ ಸೈನಿಕ ನೆರವು ಟಿಪ್ಪುವಿಗೆ ದೊರತ್ತಿದ್ದರೆ. ಬ್ರಿಟಿಷರೊಂದಿಗಿನ ಅವನ ಹೋರಾಟಗತಿಯೇ ಬದಲಾಗುತ್ತಿತ್ತು. ಪೂರ್ವಾತ್ಯ ರಾಷ್ಟ್ರಗಳಲ್ಲಿ ಬ್ರಿಟಿಷರ ವಸಾಹತುಶಾಹಿ ವಿಸ್ತರಣೆಗೆ ಕಡಿವಾಣ ಹಾಕಲು ನೆಪೋಲಿಯನ್ ಟಿಪ್ಪುವಿಗೆ ನೀಡಿದ ರಾಜಕಾರಣದ ಉದ್ದೇಶಗಳು ಫಲಕಾರಿಯಾಗಲಿಲ್ಲ. ಯುರೋಪಿನ ರಾಜಕೀಯ ವೈರುಧ್ಯಗಳ ಬಿಸಿ ಭಾರತಕ್ಕೂ ತಟ್ಟಿತು.

ಅಡಿಟಿಪ್ಪಣಿಗಳು

೧. ಪಾಂಡಿಚೇರಿ ಆರ್ಕೈವ್ಸ್ ಮ್ಯಾನ್ಸ್ಕ್ರಿಪ್ಟ್, ಪು.೪೪೨, ೪ ಆಗಸ್ಟ್, ೧೭೮೪

೨. ಅದೇ, ಪು.೪೩೭

೩. ಅದೇ, ಪು.೯೪೪

೪. ಅದೇ, ಪು.೯೫೦

೫. ಷೇಕ್ ಅಲಿ ಬಿ., ಪೂರ್ವೋಕ್ತ, ಪು.೨೮೧

೬. ಅದೇ, ಪು.೨೮೨

೭. ಅದೇ, ಪು.೨೮೨

೮. ಹೊಲ್ಡನ್ ಫರ್ಬರ್, ಜಾನ್ ಕಂಪನಿ ಆಟ್ ವರ್ಕ್, ಪು.೭೪

೯. ಷೇಕ್‌ಅಲಿ ಬಿ., ಪೂರ್ವೋಕ್ತ, ಪು.೨೨೪

೧೦. ಹೊಲ್ಡನ್ ಫರ್ಬರ್, ಪೂರ್ವೋಕ್ತ, ಪು.೭೪

೧೧. ಹುಕುಂ ನಾಮ, ಆರ್.ಎ.ಎಸ್.ಬಿ.ಸಂಖ್ಯೆ ೧೬೭೭, ೭೯

೧೨. ಷೇಕ್‌ಅಲಿ, ಪು.೨೮೩

೧೩. ಅದೇ, ಪು.೨೮೫-೨೮೬

೧೪. ರೇ, ಸಮ್ ಇಂಡಿಯಾ ಆಫೀಸ್ ಲೆಟರ್ಸ್ ಆಫ್ ಟಿಪ್ಪು ಸುಲ್ತಾನ್, ಪು.೨೫

೧೫. ಷೇಕ್ ಅಲಿ ಬಿ., ಪು.೨೮೬

೧೬. ಪಿ.ಎ.ಎಮ್.ಎಸ್., ಸಂಖ್ಯೆ ೧೦೯೦

೧೭. ಅದೇ, ಸಂಖ್ಯೆ ೪೬೭೯

೧೮. ಕೊರಟಿ ಶ್ರೀನಿವಾಸರಾವ್, ಹೈದರ್-ಟಿಪ್ಪು, ಪ್ರಕಾಶಕರು, ಶ್ರೀಮತಿ ಸುಕನ್ಯ, ಬೆಂಗಳೂರು, ೨೦೧೦, ಪು.೪೯೩

೧೯. ಅದೇ, ಪು.೫೪೨

೨೦. ಅದೇ, ಪು.೫೪೨-೫೪೩

೨೧. ಅದೇ, ಪು.೫೪೩-೫೪೫

೨೨. ಅದೇ, ಪು.೫೪೮

೨೩. ಅದೇ, ಪು.೫೫೦-೫೫೨

೨೪. ಕೋ. ಚನ್ನಬಸಪ್ಪ, ಅಪ್ರತಿಮ ದೇಶಭಕ್ತ ಟಿಪ್ಪು ಸುಲ್ತಾನ್, ಪು.೨೨

೨೫. ಅದೇ, ಪು.೨೩, ೨೪

೨೬. ಅದೇ, ಪು.೨೪, ೨೫

೨೭. ಮಾರ್ಕ್‌ವುಡ್, ರೀವ್ ಆಫ್ ದಿ ವಾರ್ ಇನ್ ಮೈಸೂರ್, ಪು.೬೩

೨೮. ಅಫೀಷಿಯಲ್ ಡ್ಯಾಕುಮೆಂಟ್ಸ್ ರಿಲೇಟೆಡ್ ಟು ದಿ ನೆಗೋಷಿಯೇಷನ್ಸ್ ಕ್ಯಾರೀಡ್ ಆನ್ ಬೈ ಟಿಪ್ಪು ಸುಲ್ತಾನ್ ವಿದ್ ದಿ ಫ್ರೆಂಚ್ ನೇಷನ್ಸ್ ಅಂಡ್ ಅದರ ಫಾರಿನ್ ಸ್ಟೇಟ್ಸ್, ಫೋರ್ಟ್‌ಸೆಲಿಟ್ ಜಾರ್ಜ್, ಮದರಾಸು, ೧೭೯೯, ಪು.೧೩೮

೨೯. ಕೊರಟಿ ಶ್ರೀನಿವಾಸರಾವ್, ಪೂರ್ವೋಕ್ತ, ಪು.೫೧೭

೩೦. ಅದೇ, ೫೧೭

೩೧. ಅದೇ, ಪು.೫೧೮

ಅಧ್ಯಾಯ ಎಂಟು

ಟಿಪ್ಪು ಮತ್ತು ಫ್ರೆಂಚರ ಮಿಲಿಟರಿ ಸಂಬಂಧಗಳು

ಅಧ್ಯಾಯ ಎಂಟು

ಟಿಪ್ಪು ಮತ್ತು ಫ್ರೆಂಚರ ಮಿಲಿಟರಿ ಸಂಬಂಧಗಳು

ಯೂರೋಪಿನಲ್ಲಿ ಫ್ರೆಂಚ್ ಸೈನ್ಯವು ತನ್ನದೇ ಆದ ವಿಶಿಷ್ಟವಾದ ಛಾಪನ್ನು ಮೂಡಿಸಿತ್ತು. ಫ್ರೆಂಚ್ ಸೈನ್ಯದ ವಿರುದ್ಧ ಹೋರಾಡುವುದು ಯುರೋಪಿನ ಇತರೆ ದೇಶಗಳಿಗೆ ಅತ್ಯಂತ ಕಠಿಣ ಹಾಗೂ ಪ್ರಯಾಸದ ಸಂಗತಿಯಾಗಿತ್ತು. ಇದಕ್ಕೆ ನೆಪೋಲಿಯನ್ ಬೋನಾಪಾರ್ಟೆಯ ದಿಗ್ವಿಜಯಗಳೇ ಸಾಕ್ಷಿಯಾಗಿವೆ. ಮೈಸೂರಿನ ಹೈದರಾಲಿ ಹಾಗೂ ಟಿಪ್ಪು ಸುಲ್ತಾನ್ ಫ್ರೆಂಚ್ ಮಿಲಿಟರಿಯ ನೆರವು ಯಾಚಿಸುವುದಕ್ಕೂ ಇದೇ ಮೂಲ ಕಾರಣವಾಗಿತ್ತು. ಮೈಸೂರು ಸಂಸ್ಥಾನ ಮತ್ತು ಫ್ರೆಂಚರ ನಡುವೆ ಹದಿನೆಂಟನೆಯ ಶತಮಾನದಲ್ಲಿ ಸೌಹಾರ್ದಯುತ ಸಂಬಂಧ ಏರ್ಪಟ್ಟಿತ್ತು. ಎರಡನೆಯ ಆಂಗ್ಲೋ–ಮೈಸೂರು ಯುದ್ಧದಲ್ಲಿ ಹೈದರಾಲಿ ಸೇನಾ ಶಿಬಿರದಲ್ಲಿ ಫ್ರೆಂಚ್ ಸೇನೆಯ ಅಧಿಕಾರಿಗಳು ಹಾಗೂ ಫ್ರೆಂಚರಿಗೂ ಸ್ನೇಹ ಕೂಡಿ ಬರಲು ಕಾರಣವೆಂದರೆ ಇವರಿಬ್ಬರಿಗೂ ಬ್ರಿಟಿಷರ ವಿರುದ್ಧ ಸಮಾನ ವೈರುತ್ವ ಭಾವನೆಯಿದ್ದದ್ದು. ಯುರೋಪಿನಲ್ಲಿ ಫ್ರೆಂಚರು ಮತ್ತು ಬ್ರಿಟಿಷರು ಬಹಳ ಕಾಲದಿಂದಲೂ ದ್ವೇಷದಿಂದ ಕಾದಾಡುತ್ತಿದ್ದರು. ಯುರೋಪಿನಲ್ಲಿ ಇವರಿಬ್ಬರ ನಡುವೆ ಯುದ್ಧಗಳು ನಡೆದರೆ, ಒಪ್ಪಂದಗಳು ಏರ್ಪಟ್ಟರೆ ಅದರ ಪರಿಣಾಮ ಭಾರತದಲ್ಲೂ ಪ್ರತಿಧ್ವನಿಸುತ್ತಿತ್ತು. ಫ್ರಾನ್ಸ್ ಮಿಲಿಟರಿ ಶಕ್ತಿಯಲ್ಲಿ ಸೇನಾಕೌಶಲ್ಯಗಳಲ್ಲಿ ಬ್ರಿಟಿಷರಷ್ಟೇ ಪ್ರಾಬಲ್ಯ ಸಾಧಿಸಿತು. ಭಾರತದ ಸಂದರ್ಭದಲ್ಲಿ ನೋಡುವುದಾದರೆ, ದಖ್ಖನಿನ ಸಾರ್ವಭೌಮತ್ವಕ್ಕಾಗಿ ಬ್ರಿಟಿಷರು ಮತ್ತು ಫ್ರೆಂಚರು ತೀವ್ರ ಪೈಪೋಟಿ ನಡೆಸಿದರು. ಕರ್ನಾಟಿಕ್ ಯುದ್ಧಗಳಲ್ಲಿ ಬ್ರಿಟಿಷರ ವೈಸರಾಯಿ ರಾಬರ್ಟ್ ಕ್ಲೈವ್ ಮತ್ತು ಫ್ರೆಂಚರ ಪಾಂಡಿಚೇರಿಯ ಗೌರ್ನರ್ ಡೂಪ್ಲೆ ತಮ್ಮ ರಾಜತಾಂತ್ರಿಕತೆ ಮತ್ತು ಸೇನಾ ವಿಕ್ರಮಗಳನ್ನು ಪ್ರದರ್ಶಿಸಿದರು. ಅಂದರೆ ಹೈದರಾಲಿ ಮತ್ತು ಟಿಪ್ಪುವಿನ ಆಳ್ವಿಕೆ ಪೂರ್ವದಿಂದಲೂ ಬ್ರಿಟಿಷರು ಮತ್ತು ಫ್ರೆಂಚರ ನಡುವೆ ವೈರತ್ವ ಬೆಳೆದಿತ್ತು. ಈ ಸೂಕ್ಷ್ಮತೆಗಳನ್ನು ಟಿಪ್ಪು ಬಹುಬೇಗ ಅರಿತುಕೊಂಡಿದ್ದನು. ಬ್ರಿಟಿಷರನ್ನು ಹೊರ ಹಾಕಲು ದೇಶಿಯ ಆರಸರು ಟಿಪ್ಪುವಿಗೆ ಸಹಾಯ ಮಾಡಲಿಲ್ಲ. ಬದಲಾಗಿ ಅವನ ವಿರುದ್ಧ ಒಳಸಂಚು ನಡೆಸಿದರು. ಬ್ರಿಟಿಷರ ಸಖ್ಯ ಬೆಳೆಸಿದರು. ಟಿಪ್ಪು ಅನ್ಯ ಮಾರ್ಗವಿಲ್ಲದೆ

ಫ್ರೆಂಚರ ನೆರವು ಕೇಳಬೇಕಾಯಿತು. ಫ್ರಾನ್ಸ್‌ನೊಂದಿಗೆ ಟಿಪ್ಪು ಪತ್ರವ್ಯವಹಾರ ಮತ್ತು ರಾಯಭಾರ ಸಂಬಂಧಗಳನ್ನು ಏರ್ಪಡಿಸಿಕೊಂಡನು.

ಟಿಪ್ಪು ಫ್ರಾನ್ಸಿನೊಂದಿಗೆ ಸಖ್ಯ ಬೆಳೆಸಿದ್ದರ ಹಿಂದೆ ಹಲವು ಆಶಯಗಳಿದ್ದವು. ಮುಖ್ಯವಾಗಿ ವ್ಯಾಪಾರ-ವಾಣಿಜ್ಯವನ್ನು ವೃದ್ಧಿಸುವುದು. ಕೈಗಾರಿಕೀಕರಣ ಮತ್ತು ಮಿಲಿಟರಿ ನೆರವು ಪಡೆಯುವುದು ಮತ್ತು ಶಸ್ತ್ರಾಸ್ತ್ರದಲ್ಲಿ ಬದಲಾವಣೆ ತರುವುದು ಫ್ರೆಂಚ್ ಮಾದರಿಯ ಆಧುನಿಕತೆಗೆ ಒತ್ತು ನೀಡುವುದು. ಇದರ ಹಿನ್ನೆಲೆಯಲ್ಲಿ ಮಿಲಿಟರಿ ಒಪ್ಪಂದಗಳು, ಕಾಯ್ದೆದೆಗಳು, ಸೈನಿಕ ಸಲಕರಣೆಗಳ ಬದಲಾವಣೆ ಮತ್ತು ಸೈನಿಕ ಆಡಳಿತಕ್ಕೆ ಆದ್ಯತೆ ನೀಡಿದನು.

೮.೧. ಮಿಲಿಟರಿ ಒಪ್ಪಂದಗಳು

ಟಿಪ್ಪು ಮೊದಲಿಗೆ ಫ್ರೆಂಚ್ ಅಧಿಕಾರಿಗಳನ್ನು ಸಂಪರ್ಕಿಸಿದನು. ಪಾಂಡಿಚೇರಿಯ ಫ್ರೆಂಚ್ ಅಧಿಕಾರಿ ಪ್ರಿವೆರಾನ್ ಟಿಪ್ಪುವಿನ ಬಗ್ಗೆ ವಿಶ್ವಾಸದಿಂದಿದ್ದನು. ಪ್ರಿವೆರಾನ್ ಫ್ರಾನ್ಸ್‌ನೊಂದಿಗೆ ಸ್ನೇಹ ಹೊಂದುವಂತೆ ಪ್ರೇರೇಪಿಸಿದನು. ಅವನು ಅಮೆರಿಕಾದ ಸ್ವಾತಂತ್ರ್ಯ ಹೋರಾಟಕ್ಕೆ ಫ್ರಾನ್ಸ್ ಸಹಾಯಸ್ತ ನೀಡಿದೆ. ಹಾಗೆಯೇ ಬ್ರಿಟಿಷರ ಅಸ್ತಿತ್ವವನ್ನು ಅಲುಗಾಡಿಸಲು ಫ್ರೆಂಚರು ನೆರವು ನೀಡುತ್ತಾರೆಂದು ಹೇಳಿ ಟಿಪ್ಪುವಿಗೆ ಆಸೆ ಹುಟ್ಟಿಸಿದನು. ಫ್ರೆಂಚ್ ಅಧಿಕಾರಿ ಕೊಸಿಗ್ನಿ ತನ್ನ ಏಜೆಂಟ್ ಮೊನ್ನೆರಾನನ ಮೂಲಕ ಟಿಪ್ಪುವಿನ ಆಸೆಯ ಕುಡಿಗಳನ್ನು ಮತ್ತಷ್ಟು ಚಿಗುರುವಂತೆ ಮಾಡಿದನು. ಮೊನ್ನೆರಾನನು ಪಾಂಡಿಚೇರಿಯಲ್ಲಿ ನಾಲ್ಕು ಸಾವಿರ ಫ್ರೆಂಚ್ ಸೈನ್ಯವಿದೆ, ಫ್ರಾನ್ಸಿನಲ್ಲೂ ಬೃಹತ್ ಸೈನ್ಯವಿರುವುದಾಗಿಯೂ ಟಿಪ್ಪು ಫ್ರಾನ್ಸಿನ ಚಕ್ರವರ್ತಿ ಹದಿನಾರನೆಯ ಲೂಯಿಯನ್ನು ಸಂಪರ್ಕಿಸಿದರೆ ಮೈಸೂರಿನ ಸಹಾಯಕ್ಕೆ ಈ ಎಲ್ಲ ಸೈನ್ಯದ ನೆರವು ದೊರೆಯಲಿದೆ ಎಂದು ಹೇಳಿದನು. ಇದನ್ನೆ ಟಿಪ್ಪು ನಂಬಿಕೊಂಡನು. ಫ್ರಾನ್ಸಿನಿಂದ ಸೈನಿಕ ನೆರವು ಪಡೆಯಲು ಹೆಚ್ಚು ಉತ್ಸುಕತೆ ತೋರಿದನು.

ಟಿಪ್ಪು ತನ್ನ ರಾಯಭಾರಿಗಳ ಮೂಲಕ ಫ್ರೆಂಚರೊಂದಿಗೆ ಸೈನಿಕ ಸಹಾಯಕ ಒಪ್ಪಂದ ಮಾಡಿಕೊಳ್ಳುವಂತೆ ಸೂಚಿಸಿದ್ದ. ರಾಯಭಾರಿಗಳು ಫ್ರಾನ್ಸ್ ದ್ವೀಪದ ಗವರ್ನರ್ ಜನರಲ್ ಮತ್ತು ದಂಡನಾಯಕ ಮಲಾರ್ಟಿಕ್‌ನೊಂದಿಗೆ ಚರ್ಚಿಸಿದರು. ನಂತರ ಮಿಲಿಟರಿ ಒಪ್ಪಂದವನ್ನು ಮಾಡಿಕೊಂಡರು. ಮಲಾರ್ಟಿಕ್ ೩೦.೧.೧೭೯೮ನೆಯ ದಿನ ಈ ಒಪ್ಪಂದವನ್ನು ಸಾರ್ವಜನಿಕ ವಾಗಿಯೇ ಪ್ರಕಟಿಸಿದನು.

೧. ಟಿಪ್ಪು ರಾಯಭಾರಿ ಸಂಗಡ ಕಳುಹಿಸಿದ್ದ ಪತ್ರಗಳನ್ನು ಮಲಾರ್ಟಿಕ್ ಫ್ರಾನ್ಸ್‌ಗೆ ಕಳುಹಿಸ ಕೊಡತಕ್ಕದ್ದು.

೨. ಬ್ರಿಟಿಷರನ್ನು ಓಡಿಸಲು ಹೆಚ್ಚು ಸೈನ್ಯವನ್ನು ಫ್ರಾನ್ಸ್ ಟಿಪ್ಪುವಿನ ನೆರವಿಗೆ ಕಳುಹಿಸುವುದು

೩. ಮೈಸೂರು ಮತ್ತು ಫ್ರಾನ್ಸ್ ಸೈನ್ಯವು ಒಟ್ಟುಗೂಡಿ ಬ್ರಿಟಿಷರ ವಿರುದ್ಧ ವ್ಯವಸ್ಥಿತವಾಗಿ ಹೋರಾಟ ನಡೆಸುವುದು.

ರಾಯಭಾರಿಗಳು ಮಾಲಾರ್ಟಿಕ್‌ನೊಂದಿಗೆ ಮಾಡಿಕೊಂಡ ಮಿಲಿಟರಿ ಕರಾರಿನ ಷರತ್ತುಗಳಿಗೆ ಟಿಪ್ಪು ಒಪ್ಪಿಗೆ ಸೂಚಿಸಿದನು. ಬ್ರಿಟಿಷರು ಟಿಪ್ಪುವಿನ ಈ ನಡೆಯನ್ನು ಟೀಕಿಸಿದರು. ಟಿಪ್ಪುವಿನ ನಡತೆಯು ಅಂತಾರಾಷ್ಟ್ರೀಯ ನೀತಿ-ನಿಯಮಗಳಿಗೆ ವಿರುದ್ಧವಾಗಿದೆ ಎಂದು ಹೇಳಿದರು. ಹೀಗೆ ಹೇಳುವ ವೇಳೆಗೆ ಬ್ರಿಟಿಷರು ಭಾರತದಲ್ಲೇ ಇತರ ಪ್ರಭುತ್ವಗಳೊಂದಿಗೆ ಮಾಡಿಕೊಂಡ ಕರಾರುಗಳ ವಿಧಿಗಳನ್ನು ಎಷ್ಟೋ ಬಾರಿ ಉಲ್ಲಂಘಿಸಿದ್ದರು.[೧] ಆದರೂ ಟಿಪ್ಪುವಿನ ಮೇಲೆ ಅಪಾದನೆಗಳನ್ನು ಹೊರಿಸಿದರು.

ಟಿಪ್ಪು ಬ್ರಿಟಿಷರನ್ನು ಸಮರ್ಥವಾಗಿ ಎದುರಿಸಲು ಫ್ರಾನ್ಸಿನ್ ಸೈನಿಕ ನೆರವು ಪಡೆಯಲು ನಿರ್ದೇಶಿಸಿದರು. ಫ್ರಾನ್ಸ್ ಉನ್ನತಮಟ್ಟದ ಸೇನಾ ಕೌಶಲ್ಯ ಹೊಂದಿತು. ಇದರ ಅರಿವು ಟಿಪ್ಪುಗಿತ್ತು. ಫ್ರಾನ್ಸಿನ ಚಕ್ರವರ್ತಿ ಹದಿನಾರನೆಯ ಲೂಯಿಯನ್ನು ಸಂಪರ್ಕಿಸಿ ಸೈನಿಕ ನೆರವು ಕೋರುವಂತೆ ಸೂಚಿಸಿ ತನ್ನ ರಾಯಭಾರ ನಿಯೋಗವನ್ನು ಫ್ರಾನ್ಸಿಗೆ ಕಳುಹಿಸಿದ. ಫ್ರೆಂಚರೊಂದಿಗೆ ಯುದ್ಧ ಮತ್ತು ರಕ್ಷಕ ಒಪ್ಪಂದ ಮಾಡಿಕೊಳ್ಳುವಂತೆ ಆದೇಶಿಸಿದ್ದ. ಎರಡನೆಯ ಆಂಗ್ಲೋ-ಮೈಸೂರು ಯುದ್ಧದ ಸಮಯದಲ್ಲಿ ಫ್ರೆಂಚರು ಸರಿಯಾದ ನಿರ್ಧಾರಗಳನ್ನು ಪ್ರಕಟಿಸದೆ ತಪ್ಪು ಮಾಡಿದರು ಎನ್ನುವ ವಿಷಯವನ್ನು ಚಕ್ರವರ್ತಿಗೆ ಮನವರಿಕೆ ಮಾಡಿಕೊಡುವುದು, ಭಾರತದಲ್ಲಿ ಬ್ರಿಟಿಷರು ನಡೆಸುತ್ತಿರುವ ದೌರ್ಜನ್ಯಗಳನ್ನು ವಿವರಿಸುವುದು, ಫ್ರಾನ್ಸ್ ಮತ್ತು ಮೈಸೂರು ಸೈನ್ಯದ ಒಕ್ಕೂಟ ರಚಿಸುವುದು, ಫ್ರಾನ್ಸ್ ಹತ್ತು ಸಾವಿರ ಸೈನಿಕರನ್ನು ಸಮರ್ಥರೂ, ಅನುಭವಿಗಳೂ ಆದ ಅಧಿಕಾರಿಗಳ ನೇತೃತ್ವದಲ್ಲಿ ಭಾರತಕ್ಕೆ ಕಳುಹಿಸಿಕೊಡುವುದು ಎಂಬಿತ್ಯಾದಿ ಅಂಶಗಳು ಟಿಪ್ಪುವಿನ ಆದೇಶದಲ್ಲಿ ಸೇರಿದ್ದವು. ೧೭೯೭ರಲ್ಲಿ ಟಿಪ್ಪು ಫ್ರೆಂಚರೊಂದಿಗೆ ನಿರ್ದೇಶಿಸಿದ ಮಿಲಿಟರಿ ಒಪ್ಪಂದದಲ್ಲಿ ಮುಖ್ಯವಾಗಿ ಐದು ಅನುಚ್ಛೇದಗಳಿದ್ದವು ಅವೆಂದರೆ:

ಅನುಚ್ಛೇದ: ೧

ಬ್ರಿಟಿಷರ ವಿರುದ್ಧ ಒಂದು ಯುದ್ಧವನ್ನು ಹೂಡಬೇಕೆಂದು ಅಲೋಚಿಸಲಾಗಿದೆ. ಮದರಾಸು, ಕರ್ನಾಟಕ, ಮುಂಬೈ ಮತ್ತು ಬಂಗಾಳಗಳನ್ನು ಗೆದ್ದುಕೊಳ್ಳುವವರೆಗೆ ಆ ಯುದ್ಧವನ್ನು ಮುಂದುವರಿಸತಕ್ಕದ್ದು. ಯುದ್ಧವು ಹತ್ತು ವರ್ಷಗಳ ಕಾಲ ನಡೆದರೂ ಯಾವುದೇ ಒಂದು ಪಕ್ಷವು ಅವರೊಂದಿಗೆ ಸಂಧಿ ಯತ್ನವನ್ನು ಬಯಸಿದರೂ ಸೂಚಿತ ಕೋಟೆಗಳು ಮತ್ತು ಸ್ಥಳಗಳನ್ನು ವಶಪಡಿಸಿಕೊಳ್ಳುವವರೆಗೂ ಆ ಪ್ರಸ್ತಾವಗಳನ್ನು ಒಪ್ಪಿಕೊಳ್ಳುವುದು.

ಅನುಚ್ಛೇದ: ೨

ಫ್ರೆಂಚರು ಹತ್ತು ಸಾವಿರ ಸೈನಿಕರನ್ನು ಸಮರ್ಥರೂ, ಅನುಭವಿಗಳೂ ಆದ ಅಧಿಕಾರಿಗಳೊಡನೆ ಕಳುಹಿಸಿಕೊಡತಕ್ಕದ್ದು. ಅವರು ಪಾಂಡಿಚೇರಿ, ಕಲ್ಲಿಕೋಟೆ ಅಥವಾ ಬೇರಾವುದೇ ಸ್ಥಳದಲ್ಲಿ ಇಳಿದರೂ ಟಿಪ್ಪುವು ಫಿರಂಗಿಗಳನ್ನು ಎಳೆಯಲು ಎತ್ತುಗಳನ್ನು, ಅಗತ್ಯವಾದ ಆಹಾರ ಸಾಮಗ್ರಿಗಳನ್ನು, ಗುಡಾರಗಳನ್ನು, ಸಿಡಿಮದ್ದು ಮತ್ತು ತೋಪುಗಳನ್ನು ಒದಗಿಸತಕ್ಕದ್ದು.

ಅನುಚ್ಛೇದ: ೩

ಫ್ರೆಂಚ್ ಅಧಿಕಾರಿಗಳ ಸೈನ್ಯವು ಯುದ್ಧ ನಿರ್ವಹಣೆಗೆ ಸಂಬಂಧಿಸಿದಂತೆ ಟಿಪ್ಪುವಿನ ಆಜ್ಞೆಯಂತೆ ನಡೆದುಕೊಳ್ಳತಕ್ಕದ್ದು. ಈ ಕರ್ತವ್ಯದಲ್ಲಿ ಯಾರೇ ವಿಫಲಗೊಂಡರೂ ಟಿಪ್ಪುವಿನ ಸರಕಾರದ ಕಾನೂನುಗಳಿಗೆ ಅನುಗುಣವಾಗಿ ಅವರನ್ನು ಶಿಕ್ಷಿಸಲಾಗುವುದು.

ಅನುಚ್ಛೇದ: ೪

ಇಡೀ ಕರ್ನಾಟಕವನ್ನು ಗೆದ್ದ ಮೇಲೆ ಮದರಾಸು ಕೋಟೆಯನ್ನೂ ಅದರ ಅಸುಪಾಸಿನ ಪ್ರದೇಶಗಳನ್ನೂ ಫ್ರೆಂಚರಿಗೆ ವಹಿಸಿಕೊಡತಕ್ಕದ್ದು. ಹಿಂದೆ ಮುಸ್ಲಿಮರಿಗೆ ಸೇರಿದ್ದ ತಿರುಚನಾಪಳ್ಳಿ ಮತ್ತು ಪಾಂಡಿಚೇರಿ ಕೋಟೆಗಳನ್ನು ಟಿಪ್ಪುವಿಗೆ ವಹಿಸುವುದು.

ಅನುಚ್ಛೇದ: ೫

ಮದರಾಸನ್ನು ಗೆದ್ದ ನಂತರ ಒಟ್ಟುಗೂಡಿದ ಸೈನವು ಭೂಮಾರ್ಗವಾಗಿಯೂ, ಸಮುದ್ರ ಮಾರ್ಗವಾಗಿಯೂ ಮುಂಬೈ ಮತ್ತು ಬಂಗಾಳಗಳನ್ನು ಗೆಲ್ಲಲ್ಲು ಉತ್ತರ ಭಾಗಕ್ಕೆ ಸಾಗುವುದು. ಈ ಸ್ಥಳಗಳನ್ನು ಗೆದ್ದನಂತರ ಸಮನವಾಗಿ ಎರಡು ಪಕ್ಷಗಳು ಹಂಚಿಕೊಳ್ಳತಕ್ಕದ್ದು.

ಟಿಪ್ಪುವಿನ ನಿರ್ದೇಶಿತ ಈ ಒಪ್ಪಂದವು ಹಲವು ಟೀಕೆಗಳಿಗೆ ಗುರಿಯಾಗಿದೆ. ಬ್ರಿಟಿಷರನ್ನು ಭಾರತದಿಂದ ಕಾಲ್ತೆಗೆಸಲು ಮತ್ತೊಂದು ಯುರೋಪಿನ ಶಕ್ತಿಯನ್ನು ಬಳಸಿಕೊಳ್ಳಲು ಅಲೋಚಿಸಿದ್ದು, ಪರೋಕ್ಷವಾಗಿ ಬೇರೊಂದು ವಸಾಹತುಶಾಹಿಯ ಆಳ್ವಿಕೆಯು ಮುಂದುವರಿಯಲು ಅವಕಾಶ ಕೊಟ್ಟಂತಾಗಲಿಲ್ಲವೇ ಎಂಬ ಪ್ರಶ್ನೆಗಳನ್ನು ಎತ್ತಲಾಗಿದೆ. ಅದಕ್ಕೆ ಸಮರ್ಥನೆ ಎಂಬಂತೆ ಬ್ರಿಟಿಷರನ್ನು ಹೇಗಾದರೂ ಸರಿಯೇ ಭಾರತದಿಂದ ಹೊರದೂಡಬೇಕೆಂಬ ಕುದಿತ ಟಿಪ್ಪುವಿನದು.[೨] ಇಂಥ ಉದ್ದೇಶ ಸಾಧನೆಗಾಗಿಯೇ ಮಿಲಿಟರಿ ಒಪ್ಪಂದಗಳನ್ನು ಏರ್ಪಡಿಸಿಕೊಳ್ಳಲು ಉತ್ಸುಕತೆಯನ್ನು ತೋರಿದನು.

ಫ್ರಾನ್ಸ್ ಚಕ್ರವರ್ತಿ ಹದಿನಾರನೆಯ ಲೂಯಿ ಮತ್ತು ಟಿಪ್ಪು ಸರಕಾರದ ನಡುವೆ ಮಿಲಿಟರಿ ಒಪ್ಪಂದಗಳು ಏರ್ಪಟ್ಟವು. ಟಿಪ್ಪುವು ಬ್ರಿಟಿಷರ ವಿರುದ್ಧ ಹೋರಾಡಲು ಫ್ರೆಂಚರ ಸೈನಿಕ ನೆರವು

ಪಡೆಯುವ ಉದ್ದೇಶದಿಂದಲೇ ಕೆಲವು ಷರತ್ತುಬದ್ಧ ಒಪ್ಪಂದವನ್ನು ಮಾಡಿಕೊಂಡನು. ಫ್ರಾನ್ಸ್ ಚಕ್ರವರ್ತಿಗೆ ಟಿಪ್ಪು ಕಳುಹಿಸಿದ ಒಪ್ಪಂದದ ಕರಡು ಪ್ರತಿಯಲ್ಲಿ ಐದು ಅಂಶಗಳು ಪ್ರಧಾನವಾಗಿದ್ದವು. ಈ ಸ್ನೇಹ-ಸಂಬಂಧದ ಒಪ್ಪಂದವು ಟಿಪ್ಪು ಮತ್ತು ಫ್ರಾನ್ಸ್‌ನೊಂದಿಗೆ ಸೂರ್ಯಚಂದ್ರರಿರುವ ವರೆವಿಗೂ ಮುಂದುವರೆಯುತ್ತದೆ ಎಂಬ ಒಕ್ಕಣೆಯು ಇತ್ತು. ಒಪ್ಪಂದವು ಐದು ಅನುಚ್ಛೇದಗಳನ್ನು ಹೊಂದಿತ್ತು. ಅವೆಂದರೆ,

ಅನುಚೇದ: ೧

ಬ್ರಿಟಿಷರ ಹಿಡಿತದಲ್ಲಿದ್ದ ಮದ್ರಾಸಿನ ಚನ್ನಪಟ್ಟಣಮ್, ಕರ್ನಾಟಿಕ್ ಪ್ರದೇಶಗಳನ್ನು ವಶಪಡಿಸಿ ಕೊಳ್ಳುವವರೆಗೂ ಇಂಗ್ಲಿಷ್‌ರೊಂದಿಗೆ ಯಾವುದೇ ಶಾಂತಿ ಒಪ್ಪಂದ ಮಾಡಿಕೊಳ್ಳುವಂತಿಲ್ಲ. ಬಾಂಬೆ, ಬೆಂಗಾಲ್ ಬಂದರುಗಳ ಸರ್ದಾರರು ಮತ್ತು ಇತರ ಅವಲಂಬಿತರು ಬ್ರಿಟಿಷರೊಂದಿಗೆ ಶಾಂತಿ ಒಪ್ಪಂದಗಳನ್ನು ಮಾಡಿಕೊಳ್ಳುವಂತಿಲ್ಲ.

ಅನುಚೇದ: ೨

ಹತ್ತು ಸಾವಿರ ಯುರೋಪಿಯನ್ನರು ಮತ್ತು ಯುದ್ಧ ತರಬೇತಿ ಹೊಂದಿದ ಸೇನಾಧಿಕಾರಿಗಳನ್ನು ಫ್ರಾನ್ಸ್‌ನಿಂದ ಕಳುಹಿಸಬೇಕು. ಅವರು ಪಾಂಡಿಚೇರಿ, ಕ್ಯಾಲಿಕಟ್ ಅಥವಾ ದೇಶದ ಇನ್ನಾವುದೇ ಭಾಗದಲ್ಲಿದ್ದರೂ ಅವರಿಗೆ ಫಿರಂಗಿಗಳನ್ನು ಎಳೆಯುವ ಎತ್ತುಗಳು, ಆಹಾರ ಸಾಮಗ್ರಿಗಳು, ಟೆಂಟ್, ಕ್ಯಾನನ್ ಬಾಲ್ ಹಾಗೂ ಗನ್‌ಪೌಡರ್ ಒದಗಿಸಲಾಗುವುದು.

ಅನುಚೇದ: ೩

ಫ್ರೆಂಚ್ ಸೈನಿಕರು ಮತ್ತು ಸೇನಾಧಿಕಾರಿಗಳು ಟಿಪ್ಪುವಿನ ಖುದಾದ್ ಸರಕಾರದ ನಿಯಂತ್ರಣ ದಲ್ಲಿರಬೇಕು. ಯಾರಾದರೂ ತಪ್ಪು ಮಾಡಿದಲ್ಲಿ ಅವರಿಗೆ ಶಿಕ್ಷಿಸಲಾಗುವುದು. ಈ ಸರಕಾರದ ಸೇವಕರು ಮತ್ತು ಫ್ರೆಂಚ್ ಸೇವಕರು ಒಂದೇ ಅಧಿಕಾರದ ನಿಯಂತ್ರಣದಲ್ಲಿರಬೇಕು.

ಅನುಚೇದ: ೪

ಕರ್ನಾಟಕ್ ಮತ್ತು ಚನ್ನಪಟ್ಟಣಮ್‌ನ್ನು ಆಕ್ರಮಿಸಿದ ಮೇಲೆ ಪಾಂಡಿಚೇರಿಗೆ ಸೇರಿದ ಜಹಗೀರುಗಳು ಫ್ರೆಂಚ್ ಕಮಾಂಡರ್‌ಗೆ ಸೇರಬೇಕು. ಕರ್ನಾಟಿಕ್ ಪ್ರದೇಶಕ್ಕೆ ಸೇರಿದ ತಂಜಾವೂರು ಮತ್ತು ತಿರುಚನಾಪಳ್ಳಿ ಕೋಟೆಗಳು ತುಂಬಾ ದಿನಗಳಿಂದ ಮುಸ್ಲಿಮರ ನಿಯಂತ್ರದಲ್ಲಿದಂಥವು, ಅವು ಟಿಪ್ಪುವಿನ ಸರಕಾರದ ಹಿಡಿತದಲ್ಲಿರಬೇಕು.

ಅನುಚೇದ: ೫

ಚನ್ನಪಟ್ಟಣಮ್ ಆಕ್ರಮಿಸಿದ ನಂತರ ಈ ಸರಕಾರದ ಸೈನ್ಯ ಮತ್ತು ಫ್ರೆಂಚ್ ಸೈನ್ಯವನ್ನು ಅಗತ್ಯ ಸಾಮಗ್ರಿಗಳೊಂದಿಗೆ ಸಮುದ್ರದ ಮೂಲಕ ಮತ್ತು ಭೂಮಾರ್ಗದ ಮೂಲಕ ಮುಂಬೈ

ಹಾಗೂ ಕಲ್ಕತ್ತಗಳನ್ನು ಆಕ್ರಮಿಸಲು ಕಳುಹಿಸಬೇಕು. ಈಗ ತಿಳಿಸಿದ ಪ್ರದೇಶಗಳನ್ನು ಆಕ್ರಮಿಸಿದ ನಂತರ ಬಂದರುಗಳು ಮತ್ತು ಅದಕ್ಕೆ ಸಂಬಂಧಿಸಿದ ಪ್ರದೇಶಗಳನ್ನು ಫ್ರೆಂಚರಿಗೆ ವಹಿಸುವುದು. ಉಳಿದೆಲ್ಲ ಪ್ರದೇಶಗಳೂ ಖುದಾದ್ ಸರ್ಕಾರದ ನಿಯಂತ್ರಣಕ್ಕೆ ಒಪ್ಪಿಸುವುದು.

ಈ ಒಪ್ಪಂದವು ರಾಜನ ಕಾರ್ಯದರ್ಶಿಯ ಕೈಬರಹದಲ್ಲಿರಬೇಕು. ಸಹಿ, ಮುದ್ರೆ, ರಾಜ, ಮಂತ್ರಿ ಹಾಗೂ ಪ್ರಮುಖ ವ್ಯಕ್ತಿಗಳದ್ದಾಗಿರಬೇಕು. ಇದನ್ನು ಪಡೆದುಕೊಂಡು ನಿಮ್ಮ ಸ್ವಾಧೀನದಲ್ಲಿಟ್ಟು ಕೊಳ್ಳಬೇಕು. ನಿಮಗೆ ಸರಿ ಎನಿಸಿದರೆ ಪ್ರಮುಖ ಫ್ರೆಂಚ್ ಅಧಿಕಾರಿಗಳ ಸಹಿ ಪಡೆಯುವುದು. ನಾಲ್ಕು ಮಂದಿ ಇದನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು. ಅದನ್ನು ಫ್ರೆಂಚರಿಗೆ ಹಸ್ತಾಂತರಿಸಬೇಕು.[೩]

ಫ್ರೆಂಚರ ಕೇಂದ್ರವಾದ ಮಾರಿಷಸ್‌ನ ಫ್ರೆಂಚ್ ಪ್ರತಿನಿಧಿ ರಿಫಾಡ್ ಟಿಪ್ಪುವಿನ ಸರಕಾರದೊಂದಿಗೆ ಸೈನಿಕ ಒಪ್ಪಂದವನ್ನು ಏರ್ಪಡಿಸಿಕೊಳ್ಳಲು ಉತ್ಸುಕತೆ ತೋರಿದನು. ಏಪ್ರಿಲ್ ೨, ೧೭೯೭ರಲ್ಲಿ ಈ ಒಪ್ಪಂದವು ರಚಿತವಾಯಿತು. ರಿಫಾಡ್ ಈ ಒಪ್ಪಂದದಲ್ಲಿ ಫ್ರೆಂಚರಗೆ ಪರವಾಗಿ ಹಲವು ಅಂಶಗಳನ್ನು ಸೇರಿಸಿದ್ದನು. ಅವೆಂದರೆ

ಅನುಚ್ಛೇದ–೧

ಫ್ರೆಂಚ್ ಸೈನಿಕರು ಮೈಸೂರು ರಾಜ್ಯವನ್ನು ಪ್ರವೇಶಿಸಿದ ತಕ್ಷಣವೇ ಎಲ್ಲಾ ಅಗತ್ಯ ಸಾಮಗ್ರಿಗಳನ್ನು ಸರಬರಾಜು ಮಾಡುವುದು.

ಅನುಚ್ಛೇದ–೨

ಭೂದಳ ಮತ್ತು ನೌಕಾಪಡೆಗೆ ಬೇಕಾದ ಅಗತ್ಯ ಸಾಮಗ್ರಿಗಳು ಮತ್ತು ಹಣವನ್ನು ಮೈಸೂರು ಸರಕಾರ ಮುಂಗಡವಾಗಿ ನೀಡಬೇಕು.

ಅನುಚ್ಛೇದ: ೩

ಫ್ರೆಂಚ್ ಸೈನ್ಯದ ಉನ್ನತ ಅಧಿಕಾರಿಗಳಿಗೆ ಪಾಲಿಕೆಗಳು ಮತ್ತು ಇತರರಿಗೆ ಕುದುರೆಗಳನ್ನು ಒದಗಿಸುವುದು.

ಅನುಚ್ಛೇದ: ೪

ಯುದ್ಧದ ಸಮಯದಲ್ಲಿ ಮದ್ದಿನ ಪುಡಿಯ ಕೊರತೆ ಎದುರಾದಾಗ ಅದನ್ನು ಒದಗಿಸಬೇಕು.

ಫ್ರೆಂಚ್ ಸೈನಿಕರ ಆಗಮನದ ನಂತರ ವೈರಿಗಳನ್ನು ಎದುರಿಸಲು ನಾನೇ ವೈಯಕ್ತಿಕವಾಗಿ ಮಿಲಿಟರಿ ಜೊತೆಯಲ್ಲೆ ಇರುತ್ತೇನೆ.[೪]

ಅನುಚ್ಛೇದ: ೧

ಫ್ರೆಂಚ್ ಸೈನಿಕರು ಟಿಪ್ಪು ಸುಲ್ತಾನ್ ಮತ್ತು ಅವರ ಅಧಿಕಾರಿಗಳ ಒಪ್ಪಿಗೆ ಇಲ್ಲದೆ ಯಾವುದೇ ರೀತಿಯಲ್ಲಿ ಮುಂದುವರೆಯುವಂತಿಲ್ಲ ಹಾಗೂ ಅವಿಧೇಯರಾಗಿ ವರ್ತಿಸುವಂತಿಲ್ಲ ವಿಧೇಯರಾಗಿಯೇ ಮುಂದುವರೆಯಬೇಕು.

ಅನುಚ್ಛೇದ: ೨

ಫ್ರೆಂಚ್ ಸೈನ್ಯ ಮತ್ತು ಅಧಿಕಾರಿಗಳು ನನ್ನ ಅನುಮತಿ ಇಲ್ಲದೆ ಯಾವ ಕಾರ್ಯವನ್ನು ನಿರ್ವಹಿಸುವಂತಿಲ್ಲ.

ಅನುಚ್ಛೇದ: ೩

ಮೈಸೂರು ಸೈನ್ಯದಲ್ಲಿದ್ದಾಗ ಫ್ರೆಂಚ್ ಸೈನಿಕರು ಮತ್ತು ಅಧಿಕಾರಿಗಳು ಮೋಸ, ವಂಚನೆ ಮಾಡಿದಲ್ಲಿ ತಕ್ಷಣವೇ ವರದಿ ಮಾಡುವುದು. ಆರೋಪಿಯನ್ನು ಬಂಧಿಸಿ ಶಿಸ್ತುಕ್ರಮ ಕೈಗೊಳ್ಳುವಂತೆ ಫ್ರೆಂಚ್ ಮೇಲಾಧಿಕಾರಿಗಳಿಗೆ ತಿಳಿಸುವುದು. ಮೈಸೂರು ಸೈನಿಕರು ಫ್ರೆಂಚ್ ಸೈನ್ಯದಲ್ಲಿದ್ದಾಗ ತಪ್ಪು ಮಾಡಿದಲ್ಲಿ ಅವರನ್ನು ಬಂಧಿಸಿ ಶಿಸ್ತುಕ್ರಮ ಕೈಗೊಳ್ಳಲು ನನಗೆ ತಿಳಿಸುವುದು.

ಅನುಚ್ಛೇದ: ೪

ಯುದ್ಧ ಮುಗಿದ ಮೇಲೆ ನಾನು ಮಾಡಿದ ಖರ್ಚನ್ನು ಹಿಂತಿರಿಗಿಸಬೇಕು.

ಅನುಚ್ಛೇದ: ೫

ಖುದಾದ್ ಸರಕಾರ ಆಕ್ರಮಿಸಿದ ಪ್ರದೇಶ, ವಸ್ತುಗಳು, ಹಣವನ್ನು ಫ್ರೆಂಚರು ಸಮಾನವಾಗಿ ಹಂಚಿಕೊಳ್ಳುವುದು.

ಅನುಚ್ಛೇದ: ೬

ಬ್ರಿಟಿಷರಿಗೆ ಸೇರಿದ ಪ್ರದೇಶಗಳನ್ನು ಈ ಒಪ್ಪಂದದ ಮೂಲಕ ಪಡೆಯುವುದು ಮತ್ತು ಹಂಚಿಕೊಳ್ಳುವುದು.

ಅನುಚ್ಛೇದ: ೭

ಗೋವಾ ಕೋಟೆಯನ್ನು ಮೈಸೂರು ಸರಕಾರಕ್ಕೂ, ಮುಂಬೈಯನ್ನು ಫ್ರೆಂಚರಿಗೆ ನೀಡುವುದು.

ಅನುಚ್ಛೇದ: ೮

ಬ್ರಿಟಿಷರು ಮತ್ತು ಪೋರ್ಚುಗೀಸರ ಯುದ್ಧಖೈದಿಗಳ ಅಗತ್ಯಗಳನ್ನು ಪೂರೈಸುವುದು, ಯುದ್ಧ ಮುಗಿಯುವವರೆಗೂ ಅವರನ್ನು ಬಂಧಿಸಿಡುವುದು.

ಅನುಚ್ಛೇದ: ೯

ಆಕ್ರಮಿತ ಪ್ರದೇಶಗಳನ್ನು ಹಂಚಿಕೆ ಮಾಡುವಾಗ ಟಿಪ್ಪುವಿನ ಸರ್ಕಾರದ ಆದೇಶವನ್ನು ಪಾಲಿಸುವುದು. ಇದನ್ನು ಯುರೋಪಿಗೆ ತಿಳಿಸುವ ಅಗತ್ಯವಿಲ್ಲ.

ಅನುಚ್ಛೇದ: ೧೦

ಬ್ರಿಟಿಷರನ್ನು ಮತ್ತು ಪೋರ್ಚುಗೀಸರನ್ನು ಹೊರಹಾಕಲು ಮಾರಿಷನ್‌ನಿಂದ ೧೦೦೦೦ ಯುರೋಪಿಯನ್ನರು, ೩೦,೦೦೦ ನಿಗ್ರೋಗಳು ಮತ್ತು ಇತರ ತರಬೇತಿ ಪಡೆದವರನ್ನು ಒದಗಿಸುವುದು.

ಅನುಚ್ಛೇದ: ೧೧

ಗೋವಾಕ್ಕೆ ಸದಾಶಿವಗಡದ ಮೂಲಕ ಸೈನ್ಯವು ಮುನ್ನುಗ್ಗಿದರೆ ಹಗಡುಗಳನ್ನು ನಿಲ್ಲಿಸಲು ಸೂಕ್ತ ಸ್ಥಳ, ಅಗತ್ಯವಾದ ವಸ್ತುಗಳನ್ನು ಒದಗಿಸಲು ಸುಲಭವಾಗುತ್ತದೆ.

ಅನುಚ್ಛೇದ: ೧೨

ಹಡಗುಗಳ ಬಗ್ಗೆ ಗೌಪ್ಯ ಮಾಹಿತಿ ನೀಡಲು ಆಬೀನ್ ಎಂಬ ಯುರೋಪಿಯನ್ನನನ್ನು ಕಳುಹಿಸುವುದು.

ಅನುಚ್ಛೇದ: ೧೩

ನನ್ನ ಆಪ್ತರಾದ ಇಬ್ಬರನ್ನು ನಿಮ್ಮ ಹಡಗಿನಲ್ಲಿ ಫ್ರಾನ್ಸಿಗೆ ಕಳುಹಿಸುತ್ತಿದ್ದೇನೆ. ಇಬ್ಬರ ನಡುವಿನ ಸಂಧಾನಗಳೂ ಆ ಇಬ್ಬರ ಮೂಲಕ ಫ್ರಾನ್ಸ್‌ನಲ್ಲಿ ನಡೆಯಬೇಕು.

ಅನುಚ್ಛೇದ: ೧೪

ಬ್ರಿಟಿಷರು ಮತ್ತು ಪೋರ್ಚುಗೀಸರನ್ನು ಎದುರಿಸುವಾಗ ಮರಾಠರು, ಮೊಗಲ್‌ರು ಮತ್ತು ನಿಜಾಮ ಸಹಕರಿಸುವುದು.[೫]

೮.೨. ಶಸ್ತ್ರಾಸ್ತ್ರ ಬದಲಾವಣೆ

ಬ್ರಿಟಿಷರು ಸೈನಿಕ ವಲಯದಲ್ಲಿ ಆಧುನಿಕ ಮಾದರಿಗಳನ್ನು ಅಳವಡಿಸಿಕೊಂಡಿದ್ದರು. ಮಿಲಿಟರಿ ತರಬೇತಿ ಶಾಲೆಗಳನ್ನು ತೆರೆದಿದ್ದರು. ಯುದ್ಧ ಭೂಮಿಕೆಯಲ್ಲಿ ಶತ್ರುಗಳನ್ನು ಸಮರ್ಥವಾಗಿ ಎದುರಿಸಲು ಬೇಕಾದ ಯುದ್ಧ ಕೌಶಲ್ಯಗಳನ್ನು ನೀಡಿದರು. ಬ್ರಿಟಿಷರ ಸೈನ್ಯವು ಜಗತ್ತಿನಲ್ಲೆ ಹೆಚ್ಚು ಪ್ರಾಬಲ್ಯ ಸಾಧಿಸಿತ್ತು. ಇಂಗ್ಲೆಂಡನ್ನು ಕಡಲ ರಾಣಿ ಎಂದೇ ಗುರುತಿಸಲಾಗಿತ್ತು. ಇಂಥ ಬಲಾಢ್ಯ

ವಸಾಹತುಶಾಹಿ ಶಕ್ತಿಯನ್ನು ಹತ್ತಿಕ್ಕುವುದು ಟಿಪ್ಪುವಿಗೆ ಸುಲಭದ ಮಾತಾಗಿರಲಿಲ್ಲ. ಬ್ರಿಟಿಷರು ಶಸ್ತ್ರಾಸ್ತ್ರಗಳ ತಯಾರಿಕೆಯಲ್ಲಿ ಹೊಸ ಪ್ರಯೋಗಗಳನ್ನೇ ಮಾಡಿದ್ದರು. ಆ ಸಂದರ್ಭಕ್ಕೆ ಅವು ಆಧುನಿಕವೆನಿಸಿದ್ದವು. ಮೈಸೂರು ಬಹು ಹಿಂದಿನಿಂದಲು ಸಾಂಪ್ರದಾಯಿಕ ಸೈನಿಕ ವ್ಯವಸ್ಥೆಯನ್ನು ರೂಢಿಸಿಕೊಂಡಿತು. ಶಸ್ತ್ರಾಸ್ತ್ರಗಳು ಹಳೆಯ ಮಾದರಿಯವು. ಕತ್ತಿ, ಗುರಾಣಿ, ಬಿಲ್ಲು, ಬಾಕು ಇತ್ಯಾದಿ ಶಸ್ತ್ರಾಸ್ತ್ರಗಳು ಬಳಕೆಯಲ್ಲಿದ್ದವು. ಇಂಥ ಸಾಧನಗಳಿಂದ ಬ್ರಿಟಿಷರನ್ನು ಸೋಲಿಸುವುದು ಸುಲಭವಿರಲಿಲ್ಲ. ಇದನ್ನರಿತ ಟಿಪ್ಪು ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ಯುರೋಪ್ ಮಾದರಿಯನ್ನು ಅಳವಡಿಸಿಕೊಂಡನು. ಫ್ರಾನ್ಸ್‌ನೊಂದಿಗೆ ಸ್ನೇಹ ಸಂಪಾದಿಸಿದನು. ಫ್ರಾನ್ಸಿನ ಚಕ್ರವರ್ತಿಗೆ ಬರೆದ ಪತ್ರಗಳಲ್ಲಿ ಮುಖ್ಯವಾಗಿ ಬ್ರಿಟಿಷರ ವಿರುದ್ಧ ಸೈನಿಕ ನೆರವು ನೀಡುವುದು ಮತ್ತು ಯುದ್ಧ ಕಲೆಯಲ್ಲಿ ನೈಪುಣ್ಯತೆ ಹೊಂದಿದ್ದ ತಂತ್ರಜ್ಞರನ್ನು ಕಳುಹಿಸಿ ಕೊಡುವಂತೆಯು ಕೋರಿದ್ದ. ತನ್ನ ರಾಯಭಾರಿಗಳ ಸಂಗಡ ಬೇರೆ ಬೇರೆ ಕೌಶಲ್ಯವನ್ನು ಹೊಂದಿದ್ದ ತಂತ್ರಜ್ಞರು ಮತ್ತು ಕುಶಲಕರ್ಮಿಗಳನ್ನು ಮೈಸೂರಿಗೆ ಕರೆತರುವಂತೆ ಆಜ್ಞಾಪಿಸಿದ. ಶಸ್ತ್ರಾಸ್ತ್ರಗಳ ಒಂದೊಂದು ಮಾದರಿಗಳನ್ನು ತರುವಂತೆಯೂ ತಿಳಿಸಿದ್ದ.

ಕಿರ್ಮಾನಿಯು ಟಿಪ್ಪುವಿನ ಮಿಲಿಟರಿ ಕೌಶಲ್ಯದ ಬಗ್ಗೆ ಸ್ವವಿವರ ನೀಡಿದ್ದಾನೆ. ಬಂದೂಕು, ತೋಪು, ಕತ್ತಿ, ಚೂರಿಗಳ ತಯಾರಿಕೆ ಬಹು ಉನ್ನತ ಮಟ್ಟದ ಕೌಶ್ಯಲ ಹೊಂದಿತ್ತು. ಆಧುನಿಕ ಮಾದರಿಗಳನ್ನು ಅಳವಡಿಸಿಕೊಳ್ಳಲಾಗಿತ್ತು. ಟಿಪ್ಪುವಿನ ಶಸ್ತ್ರಾಸ್ತ್ರ ಕೆಲಸಗಾರರು ಉತ್ತಮ ಬಂದೂಕುಗಳನ್ನು, ಸಿಂಹದ ಮುಖದ ತುಪಾಕಿಗಳನ್ನು ಎರಡು ಅಥವಾ ಮೂರು ನಳಿಕೆಯ ಕೋವಿಗಳನ್ನು ತಯಾರಿಸುತ್ತಿದ್ದರು. ಕೋವಿಯ ಗುಂಡು ಬೇಧಿಸಲಾಗದಂತಹ ಒಂದು ಬಗೆಯ ಗುರಾಣಿಯನ್ನು ತಯಾರಿಸುತ್ತಿದ್ದರು.[೬] ಬಂದೂಕು ಮತ್ತು ಕೋವಿಗಳನ್ನು ಯುರೋಪಿಯನ್ ಮಾದರಿಯಲ್ಲೇ ವಿಶೇಷವಾಗಿ ಫ್ರೆಂಚ್ ವಿನ್ಯಾಸದಲ್ಲಿ ತಯಾರಿಸುತ್ತಿದರು. ಹೈದರಾಲಿಯ ಸೇವೆಯಲ್ಲಿದ್ದ ಮಾನ್ಸಿಯರ್ ಲಾಪೋಲಿ ಪ್ರಧಾನ ವಿನ್ಯಾಸಕಾರನಾಗಿದ್ದನು.[೭]

ಟಿಪ್ಪುವಿನ ಮನಸ್ಸು ಯಾವಾಗಲೂ ಹೊಸತನ್ನು ಕಂಡುಕೊಳ್ಳಲು ತುಡಿಯುತ್ತಿತ್ತು. ಯುರೋಪ್‌ನಲ್ಲಿ ಆದ ಬದಲಾವಣೆಗಳನ್ನು ಇಲ್ಲಿಯೂ ತರಲು ಬಯಸಿದರು. ಅದರಲ್ಲೂ ಮಿಲಿಟರಿ ವ್ಯವಸ್ಥೆಯನ್ನು ಉತ್ಕೃಷ್ಟ ಮಟ್ಟದಲ್ಲಿ ನವೀಕರಿಸಲು ಕ್ರಮಕೈಗೊಂಡನು. ೧೭೯೭ ಏಪ್ರಿಲ್ ೨ರಂದು ಟಿಪ್ಪುವು ಫ್ರಾನ್ಸ್ ದೇಶದಿಂದ ಇನ್ನೂ ಹೆಚ್ಚು ಜನ ತಂತ್ರಜ್ಞರನ್ನು ಕರೆತರಲು ಆದೇಶಿಸಿದನು. ಹತ್ತು ಮಂದಿ ಫಿರಂಗಿ ನಿರ್ಮಿಸುವವರು, ಹತ್ತು ಜನ ಹಡಗು ಕಟ್ಟುವವರು, ಗಾಜು, ಕನ್ನಡಿ ತಯಾರಕರು, ಎಲ್ಲ ಬಗೆಯ ಕಸುಬುಗಳಲ್ಲಿ ನಿಪುಣರಾದ ತಲಾ ಹತ್ತು ಮಂದಿ ಕುಶಲಕರ್ಮಿಯನ್ನು ಕಳುಹಿಸುವಂತೆ ಕೋರಿದನು. ಮೂರನು ಬೆಂಗಳೂರಿನಲ್ಲಿ ಒಂದು ಸರಳ

ರಚನೆಯ ಯಂತ್ರವನ್ನು ಗುರುತಿಸಿದನು. ಆ ಯಂತ್ರವು ಏಕಕಾಲದಲ್ಲಿ ೫೦ ಕೋವಿಗಳ ಮತ್ತು ಒಂದು ಬಂದೂಕಿನ ನಳಿಕೆಯನ್ನು ಕೊರೆಯುತ್ತಿದ್ದಿತು.[೮] ಫ್ರೆಂಚ್ ಕಲಾವಿದನೊಬ್ಬನು ನೀರಿನಿಂದ ಚಲಿಸುವ ಒಂದು ಯಂತ್ರವನ್ನು ವಿನ್ಯಾಸಗೊಳಿಸಿದನು. ಅದು ಫಿರಂಗಿಯನ್ನು ಕೊರೆಯುತ್ತಿದ್ದಿತು.[೯] ಟಿಪ್ಪು ರಾಜ್ಯದಲ್ಲಿ ಸಮೃದ್ಧವಾದ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳನ್ನು ತಯಾರಿಸಲು ಬೇಕಾದ ವ್ಯವಸ್ಥೆ ಮಾಡಿದನು. ಆಯಕಟ್ಟಿನ ಸ್ಥಳಗಳಲ್ಲಿ ಉಗ್ರಾಣಗಳನ್ನು ನಿರ್ಮಾಣ ಮಾಡಿಸಿದನು. ಶಸ್ತ್ರಾಸ್ತ್ರಗಳ ತಯಾರಿಕೆ ಮುಖ್ಯವಾಗಿ ಬೇಕಾದ ಕಬ್ಬಿಣಕ್ಕಾಗಿ ಅದಿರಿನ ನಿಕ್ಷೇಪಗಳನ್ನು ಪತ್ತೆ ಮಾಡಿಸಿದನು. ಕಬ್ಬಿಣ ತಯಾರಿಕಾ ಘಟಕಗಳಿಗೆ ಉತ್ತೇಜನ ನೀಡಿದನು.

ಟಿಪ್ಪು ನೌಕಾ ನಿರ್ಮಾಣಕ್ಕೆ ಉತ್ತೇಜನ ನೀಡಿದನು. ೧೭೯೩ರಲ್ಲಿ ೧೦೦ ಹಡಗುಗಳನ್ನು ಕಟ್ಟಲು ಆದೇಶಿದನು. ಅವುಗಳಲ್ಲಿ ಎರಡಕ್ಕೆ ಕ್ಲುಯಿಬಿಜಿರಿ ಮತ್ತು ಇಲ್ಯಾಸಿ ಎಂದು ಹೆಸರಿಟ್ಟಿದ್ದನು. ಹಡಗು ನಿರ್ಮಾಣಕ್ಕೆ ಬೇಕಾದ ನೆರವು ಕಲ್ಲಿಕೋಟೆಯಿಂದ ಬರುತ್ತಿತ್ತು. ಮಂಗಳೂರು, ಸದಾಶಿವಗಡ ಮತ್ತು ಬಾಸ್ಕೋರಾಜಿ ಎಂಬಲ್ಲಿ ಹಡಗು ನಿರ್ಮಾಣ ಮಾಡಲಾಗುತ್ತಿತ್ತು.[೧೦] ಟಿಪ್ಪುವು ಬ್ರಿಟಿಷರನ್ನು ಸಮರ್ಥವಾಗಿ ಎದುರಿಸಲು ಪೂರ್ವಸಿದ್ಧತೆಯಲ್ಲಿ ತೊಡಗಿದನು. ಇಂಗ್ಲೆಂಡ್ ನೌಕಾ ಸಮರದಲ್ಲಿ ಬಲಾಢ್ಯವಾಗಿ ಎದುರಿಸಲು ಪೂರ್ವಸಿದ್ಧತೆಯಲ್ಲಿ ತೊಡಗಿದನು. ಇಂಗ್ಲೆಂಡ್ ನೌಕಾ ಸಮರದಲ್ಲಿ ಬಲಾಢ್ಯವಾಗಿತ್ತು. ಉನ್ನತ ಮಟ್ಟದ ಸಮರ ಕೌಶಲ್ಯ ಸಾಧಿಸಿತ್ತು. ಇದನ್ನರಿತ ಟಿಪ್ಪು ಮೈಸೂರಿನಲ್ಲೂ ನೌಕಾ ಪಡೆಯ ಉನ್ನತೀಕರಣಕ್ಕೆ ಚಾಲನೆ ನೀಡಿದನು. ಟಿಪ್ಪು ಪೋರ್ಚುಗೀಸ್, ಡಚ್, ಫ್ರೆಂಚ್ ಮತ್ತು ಇಂಗ್ಲಿಷ್ ನೌಕಾ ವ್ಯವಸ್ಥೆಯ ಆಳವಾದ ಅಧ್ಯಯನ ನಡೆಸಿದನು. ನೌಕಾ ಪಡೆಯ ನಿರ್ಮಾಣದಲ್ಲಿ ವಿದೇಶಿ ಮಾದರಿಯ ಜೊತೆಗೆ ಟಿಪ್ಪು ತನ್ನ ಸ್ವಂತಿಕೆಯ ಆಲೋಚನಾ ಕ್ರಮವನ್ನು ಅಳವಡಿಸಿ ವಿಶೇಷ ಮಾದರಿಯ ನೌಕಾ ಪಡೆಯನ್ನು ರಚಿಸಿದನು. ಅವನ ಬಳಿ ೪೦ ಯುದ್ಧ ನೌಕೆಗಳಿದ್ದವು. ಅವು ಮಂಗಳೂರು, ಕಲ್ಲಿಕೋಟೆ ಮತ್ತು ಸದಾಶಿವಗಡದಲ್ಲಿ ಲಂಗರು ಹಾಕಿದ್ದವು. ಯುದ್ಧ ಸನ್ನಿಹಿತವಾದಾಗ ಅಲ್ಲಿಂದ ತೆರಳುತ್ತಿದ್ದವು. ಮೀರ್–ಇ–ಯಾಮ್ ಎಂಬ ಅಧಿಕಾರಿ ನೌಕಾ ಇಲಾಖೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿತ್ತು.[೧೧]

ಟಿಪ್ಪುವಿನ ಶಸ್ತ್ರಾಸ್ತ್ರ ತಯಾರಿಕೆಯ ಬದಲಾವಣೆಯ ಮಾದರಿಗಳಲ್ಲಿ ಹೆಚ್ಚು ಪ್ರಶಂಸನೀಯವಾದದ್ದು ರಾಕೆಟ್ ತಂತ್ರಜ್ಞಾನ. ಇದನ್ನು ಇವರು ಜಗತ್ತಿಗೆ ಮೊದಲಿಗೆ ಪರಿಚಯಿಸಿದರು. ಹೈದರ್ ಮತ್ತು ಟಿಪ್ಪು ಮೊಟ್ಟ ಮೊದಲು ಕ್ಷಿಪಣಿ ತಯಾರಿಸುವ ಮೂಲಕ ವಿಶ್ವದ ಯುದ್ಧಕಲೆ ಮತ್ತು ವಿಜ್ಞಾನಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. 'ಗಿನ್ನಿಸ್ ಹಿಸ್ಟರಿ ಆಫ್ ಲ್ಯಾಂಡ್ ವಾರ್‌ಫೇರ್'ನಲ್ಲಿ ದಾಖಲಿಸುವಂತೆ ಹೈದರಾಲಿ ಮೊದಲ ಕ್ಷಿಪಣಿಯನ್ನು ೧೭೮೦ರಲ್ಲಿ ಬ್ರಿಟಿಷರ ವಿರುದ್ಧ ಪ್ರಯೋಗಿಸಿದನು.[೧೨] ಆದರೆ ಟಿಪ್ಪು ಸೈನಿಕ ವಲಯದಲ್ಲಿ ಯುರೋಪ್ ಮಾದರಿಗಳಿಗಿಂತ

ಇನ್ನೂ ಒಂದು ಹೆಜ್ಜೆ ಮುಂದೆ ಸಾಗಿದನು ಎನ್ನುವುದು ಇದರಿಂದ ವೇದ್ಯವಾಗುತ್ತದೆ. ಮೈಸೂರಿನಲ್ಲಿ ತಯಾರಾಗುತ್ತಿದ್ದ ಮದ್ದಿನ ಪುಡಿಯು ಇಂಗ್ಲೆಂಡಿನಲ್ಲಿ ತಯಾರಾಗುತ್ತಿದ್ದಕ್ಕಿಂತಲೂ ಉತ್ಕೃಷ್ಟ ಗುಣಮಟ್ಟ ಕಾಯ್ದುಕೊಂಡಿತು. ಟಿಪ್ಪು ಶಸ್ತ್ರಾಸ್ತ್ರ ತಯಾರಿಕೆಯ ಬದಲಾದ ಮಾದರಿಗಳನ್ನು ಗಮನಿಸಿದರೆ ಮಿಲಿಟರಿ ವಲಯವನ್ನು ಒಂದು ಆದ್ಯತಾ ಕ್ಷೇತ್ರವಾಗಿಯೇ ಪರಿಗಣಿಸಿರುವುದು ಕಂಡುಬರುತ್ತದೆ.

ಟಿಪ್ಪುವು ತನ್ನ ಆಳ್ವಿಕೆಯ ಹೆಚ್ಚು ಕಾಲವನ್ನು ಯುದ್ಧ ಮಾಡುತ್ತಲೆ ಕಳೆಯಬೇಕಾಯಿತು. ಬ್ರಿಟಿಷರು ಮೈಸೂರು ರಾಜ್ಯದ ಮೇಲೆ ಕಣ್ಣಿಟ್ಟಿದ್ದರು. ಮೈಸೂರು ನೈಸರ್ಗಿಕ ಸಂಪನ್ಮೂಲಗಳನ್ನು ಹೇರಳವಾಗಿ ಹೊಂದಿತ್ತು. ವಾಣಿಜ್ಯ ಬೆಳೆಗಳು ಸಮೃದ್ಧವಾಗಿದ್ದವು. ಯುರೋಪಿನ ಮಾರುಕಟ್ಟೆಯಲ್ಲಿ ಭಾರಿ ಬೇಡಿಕೆಯಿದ್ದ ಸಂಬಾರ ಪದಾರ್ಥಗಳಿಗೆ ಮೈಸೂರು ಪ್ರಸಿದ್ಧಿಯಾಗಿತ್ತು. ತೆಂಗು, ಅಡಕೆ, ವೀಳ್ಯದೆಲೆ, ಕರಿಮೆಣಸು, ಏಲಕ್ಕಿ ಮುಂದಿನ ಬೆಳೆಗಳು ಸಮೃದ್ಧವಾಗಿದ್ದವು. ಶ್ರೀಗಂಧ, ತೇಗ, ಹೊನ್ನೆ ಮುಂತಾದ ಅರಣ್ಯ ಸಂಪತ್ತು ಇತ್ತು. ಬ್ರಿಟಿಷರು ತನ್ನ ವ್ಯಾಪಾರ–ವಾಣಿಜ್ಯ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ನಡೆಸಲು ಬೇಕಾದ ಆಯಕಟ್ಟಿನ ಕರಾವಳಿಯು ಇತ್ತು. ಮಂಗಳೂರು, ಹೊನ್ನಾವರ, ಭಟ್ಕಳ ಇತ್ಯಾದಿ ವ್ಯಾಪಾರಿ ಕೇಂದ್ರಗಳು ಮತ್ತು ನೌಕಾ ನೆಲೆಗಳು ಬ್ರಿಟಿಷರನ್ನು ಹೆಚ್ಚು ಆಕರ್ಷಿಸಿದವು. ಬ್ರಿಟಿಷರು ಹೇಗಾದರೂ ಸರಿಯೇ ಮೈಸೂರು ರಾಜ್ಯವನ್ನು ಆಕ್ರಮಿಸಿ ತಮ್ಮ ವಸಾಹತುಶಾಹಿ ಪ್ರಭುತ್ವಕ್ಕೆ ಒಳಪಡಿಸಲು ಸತತ ಹೋರಾಟ ನಡೆಸಿದರು. ಬ್ರಿಟಿಷರ ಸಾಮ್ರಾಜ್ಯ ವಿಸ್ತರಣಾ ನೀತಿಗೆ ಟಿಪ್ಪು ಪ್ರಬಲವಾಗಿಯೇ ತಡೆಯೊಡ್ಡಿದ. ಹೈದರಾಲಿಯ ಕಾಲದಲ್ಲೇ ಇದು ಆರಂಭವಾದರೂ ಟಿಪ್ಪು ಅದನ್ನು ತೀವ್ರಗೊಳಿಸಿದ. ಬ್ರಿಟಿಷರು ದುರಾಕ್ರಮಣಕ್ಕಾಗಿ ರೂಪಿಸಿದ ಸಹಾಯಕ ಸೈನ್ಯ ಪದ್ಧತಿಗೆ ಮೈಸೂರು ಶರಣಾಗುವುದನ್ನು ಟಿಪ್ಪು ತಡೆದನು.

ಟಿಪ್ಪು ಬ್ರಿಟಿಷರನ್ನು ಭಾರತದಿಂದಲೇ ಓಡಿಸಬೇಕೆಂಬ ದೃಢ ನಿರ್ಧಾರಕ್ಕೆ ಬಂದನು. ಮೂರನೆಯ ಆಂಗ್ಲೋ–ಮೈಸೂರು ಯುದ್ಧ ಸಮೀಪಿಸುವ ವೇಳೆಗೆ ಭಾರತೀಯ ಶಕ್ತಿಗಳ ಒಕ್ಕೂಟ ರಚಿಸಲು ಪ್ರಯತ್ನಿಸಿ ವಿಫಲನಾದನು. ಟಿಪ್ಪುವಿನ ಧ್ಯೇಯೋದ್ದೇಶಗಳನ್ನು ಸ್ಥಳೀಯ ಅರಸರುಗಳು ಗ್ರಹಿಸದೇ ಹೋದದ್ದು ವಿಪರ್ಯಾಸವೇ ಸರಿ. ದಕ್ಷಿಣ ಭಾರತದ ರಾಜಕೀಯ ಶಕ್ತಿಗಳಾದ ಮರಾಠರು, ಹೈದರಾಬಾದಿನ ನಿಜಾಮ, ಅರ್ಕಾಟ್ ನವಾಬರು ಹಾಗೂ ಸ್ಥಳೀಯ ಪಾಳೆಯಗಾರರು ತಮ್ಮ ಸ್ವಹಿತಾಶಕ್ತಿಗಾಗಿ ಬ್ರಿಟಿಷರ ಸಖ್ಯ ಬೆಳೆಸಿದರು. ಟಿಪ್ಪುವಿನ ವಿರುದ್ಧ ಪಿತೂರಿ ಹಾಗೂ ಒಳಸಂಚು ನಡೆಸಿದರು. ಬ್ರಿಟಿಷ್ ಯುದ್ಧ ಗತಿಸಿದಾಗ ಬ್ರಿಟಿಷರಿಗೆ ನೆರವು ನೀಡಿದರು. ಬ್ರಿಟಿಷರ ಪಕ್ಷಪಾತಿ ನೀತಿಯನ್ನು ಅರ್ಥೈಸಿಕೊಳ್ಳುವಲ್ಲಿ ಇವರು ವಿಫಲರಾದರು. ಟಿಪ್ಪು ಏಕಾಂಗಿಯಾಗಿಯೇ ಹೋರಾಡಬೇಕಾಯಿತು. ಅನಿವಾರ್ಯವಾಗಿ ವಿದೇಶಿ ಶಕ್ತಿಗಳ ನೆರವು ಕೇಳಬೇಕಾಯಿತು.

ಟಿಪ್ಪು ಫ್ರಾನ್ಸ್, ಟರ್ಕಿ, ಅಫಘಾನಿಸ್ತಾನ, ಇರಾನ್ ಹೀಗೆ ಹಲವು ರಾಷ್ಟ್ರಗಳನ್ನೂ ಸಂಪರ್ಕಿಸಿ ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ನೆರವು ನೀಡುವಂತೆಯೂ ಕೋರಿದ. ಪಾಶ್ಚಾತ್ಯ ಯುದ್ಧ ಕಲೆ, ಸೈನ್ಯಾಡಳಿತ ವ್ಯವಸ್ಥೆ, ಶಸ್ತ್ರಾಸ್ತ್ರಗಳ ತಯಾರಿಕೆಯನ್ನು ಅಧ್ಯಯನ ಮಾಡಿದ. ಬ್ರಿಟಿಷರನ್ನು ಎದುರಿಸಬೇಕಾದರೆ ಸೈನ್ಯವನ್ನು ಆಧುನಿಕ ವ್ಯವಸ್ಥೆಗೆ ಒಳಪಡಿಸಲು ಹಲವು ಕ್ರಮಗಳನ್ನು ಕೈಗೊಂಡನು. ಇಲ್ಲಿಯವರೆಗೂ ಮೈಸೂರು ಸೈನ್ಯವು ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳನ್ನು ಹೊಂದಿತ್ತು. ಇದರ ಬದಲಾವಣೆಗೆ ಟಿಪ್ಪು ಶ್ರಮಿಸಿದನು.

ಟಿಪ್ಪು ಹೈದರಾಲಿಗಿಂತ ಒಂದು ಹೆಜ್ಜೆ ಮುಂದೆ ಸಾಗಿ ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ಆಧುನಿಕ ತಾಂತ್ರಿಕ ಕಾರ್ಯವಿಧಾನಗಳನ್ನು ಅಳವಡಿಸಿಕೊಂಡನು. ಫ್ರಾನ್ಸ್, ಟರ್ಕಿ, ಇರಾನ್, ಪರ್ಶಿಯಾ ಇತ್ಯಾದಿ ದೇಶಗಳಿಗೆ ರಾಯಭಾರಿಗಳನ್ನು ಕಳುಹಿಸಿದನು. ಇವರಿಗೆ ಕೆಲವೊಂದು ಸ್ಪಷ್ಟ ನಿರ್ದೇಶನಗಳನ್ನು ನೀಡಿದ್ದನು. ಅವೆಂದರೆ ವಿವಿಧ ಸಿದ್ಧ ವಸ್ತುಗಳ ತಯಾರಿಕೆಯಲ್ಲಿ ಪರಿಣತಿ ಹೊಂದಿದ್ದ ತಂತ್ರಜ್ಞರನ್ನು ಜೊತೆಯಲ್ಲಿಯೇ ಕರೆತರುವಂತೆ ಆದೇಶಿಸಿದ್ದನು. ಯುರೋಪಿನ ಸಿದ್ಧ ಮಾದರಿಗಳನ್ನು ತರುವಂತೆಯೂ ತಿಳಿಸಿದ್ದನು. ಟಿಪ್ಪುವಿನ ಸ್ವಭಾವವೇ ಬದಲಾವಣೆಯನ್ನು ಬಯಸುವುದಾಗಿತ್ತು. ಅವನಲ್ಲಿ ವೈಜ್ಞಾನಿಕ, ಸಂಶೋಧನಾ ಪ್ರವೃತ್ತಿ ರಕ್ತಗತವಾಗಿತ್ತು. ವಿಶ್ವದ ಯಾವುದೇ ಭಾಗದಲ್ಲಿ ಹೊಸ ಬದಲಾವಣೆ ಏರ್ಪಟ್ಟರೆ ಅದನ್ನು ತನ್ನ ರಾಜ್ಯದಲ್ಲೂ ತರಲು ಪ್ರಯತ್ನಿಸುತ್ತಿದ್ದನು. ಅದರಂತೆ ಶಸ್ತ್ರಾಸ್ತ್ರ ಬದಲಾವಣೆಯು ಆಧುನಿಕತೆಗೆ ನೀಡಿದ ಕನ್ನಡಿಯಾಗಿದೆ.

ಟಪ್ಪು ೧೭೯೭ರಲ್ಲಿ ಫ್ರೆಂಚ್ ಸರಕಾರಕ್ಕೆ ಪತ್ರಗಳನ್ನು ಬರೆದನು. ಅದರಲ್ಲಿ ೧೦ ಮಂದಿ ತುಫಾಕಿ ತಯಾರಕರು, ೧೦ ಮಂದಿ ಹಡಗು ತಯಾರಕರು, ೧೦ ಮಂದಿ ಹಡಗುಗಳಿಗೆ ಬೇಕಾದ ಇಂಜಿನ್‌ಗಳು ಮತ್ತು ಗಾಲಿಯನ್ನು ತಯಾರಿಸುವ ಹಾಗೂ ಗೋಲ್ಡ್ ಪ್ಲೇಟಿಂಗ್‌ನಲ್ಲಿ ಪರಿಣತಿ ಪಡೆದ ತಂತ್ರಜ್ಞರನ್ನು ಕಳುಹಿಸಿ ಕೊಡುವಂತೆ ಮನವಿ ಮಾಡಿದನು.[೧೩]

೧೭೮೭ರಲ್ಲಿ ಮೈಸೂರಿನಿಂದ ಫ್ರಾನ್ಸ್‌ಗೆ ರಾಯಭಾರಿಗಳನ್ನು ಕಳುಹಿಸಿ, ಅಲ್ಲಿನ ಚಕ್ರವರ್ತಿ ಹದಿನಾರನೆಯ ಲೂಯಿಗೆ ತನ್ನ ಸಾಮ್ರಾಜ್ಯದಲ್ಲಿ ೧೦ ಮದ್ದುಗುಂಡು ತಯಾರಿಕಾ ಘಟಕಗಳಿದ್ದು ಇಲ್ಲಿ ಲೆಕ್ಕವಿಲ್ಲದಷ್ಟು ಬಂದೂಕುಗಳನ್ನು ತಯಾರಿಸುತ್ತಿದ್ದೇವೆ ಎಂದು ತಿಳಿಸಿದನು. ೧೭೮೬ರಲ್ಲಿಯೆ ಪಾಂಡಿಚೇರಿ ಫ್ರೆಂಚ್ ಗೌರ್ನರ್ ಕೋಸಿಗ್ನಿ ಮೈಸೂರಿನಲ್ಲಿ ತಯಾರಾಗುವ ಮದ್ದುಗುಂಡುಗಳಿಗೆ ಯುರೋಪಿನಲ್ಲಿ ತಯಾರಾಗುವ ಮದ್ದುಗುಂಡುಗಳಿಗೂ ಏನೂ ವ್ಯತ್ಯಾಸವಿಲ್ಲವೆಂದು ತಿಳಿಸಿದನು. ೧೭೮೮ರಲ್ಲಿ ಟಿಪ್ಪು ರಾಯಭಾರಿಗಳ ಮೂಲಕ ಉಡುಗೊರೆಯಾಗಿ ಎರಡು ಪಿಸ್ತೂಲುಗಳನ್ನು ಸ್ವೀಕರಿಸಿದ್ದ ಹದಿನಾರನೆಯ ಲೂಯಿ ಇದೇ ಕೋಸಿಗ್ನಿಯ ಅಭಿಪ್ರಾಯವನ್ನೇ ಪುನರುಚ್ಚರಿಸಿದನು.

೧೭೮೫–೮೬ರಲ್ಲಿ ಅಟೋಮನ್ ಸಾಮ್ರಾಟನ ಅರಮನೆಗೆ ಭೇಟಿ ನೀಡಿದ ಟಿಪ್ಪು ರಾಯಭಾರಿಗಳು ಮೈಸೂರಿನಲ್ಲಿ ತಯಾರಿಸಿದ ಬಂದೂಕುಗಳನ್ನು ಹೆಮ್ಮೆಯಿಂದ ಪ್ರದರ್ಶನ ಮಾಡಿದರು. ಆದರೂ ಇನ್ನೂ ಹೆಚ್ಚಿನ ಅಭಿವೃದ್ಧಿ ಹೊಂದಲು ಪ್ಯಾರಿಸ್‌ನಿಂದ ಪರಿಣಿತ ಕುಶಲ ಕರ್ಮಿಗಳನ್ನು ಮೈಸೂರಿಗೆ ಬರಮಾಡಿಕೊಂಡು ಉತ್ಕೃಷ್ಟವಾದ ಬಂದೂಕುಗಳನ್ನು ತಯಾರಿಸಲು ಅಧಿಕಾರಿಗಳಿಗೆ ಆಜ್ಞೆ ಮಾಡಿದನು. ಅವರ ಸೇವೆಗೆ ಉತ್ತಮ ಸಂಬಳ ಮತ್ತು ಸಹಕಾರ ನೀಡುವ ಭರವಸೆಯನ್ನು ಅವನ ಸರಕಾರ ನೀಡಿತು. ಬುಕಾನನ್ ತನ್ನ ವರದಿಯಲ್ಲಿ ಶ್ರೀರಂಗಪಟ್ಟಣದಲ್ಲಿ ಫ್ರೆಂಚ್ ಕುಶಲಗಾರರು ನಿರ್ಮಿಸಿದ ತೋಪುಗಳನ್ನು ಉಲ್ಲೇಖಿಸಿ ಅವುಗಳನ್ನು ಬಂಡಿಯ ಸಹಾಯದಿಂದ ಯುದ್ಧ ಕಾಲದಲ್ಲಿ ಸಾಗಿಸಲಾಗುತ್ತಿತ್ತು ಎಂದು ತಿಳಿಸಿದ್ದಾನೆ.[೧೪]

ಹೈದರಾಲಿ ಮತ್ತು ಟಿಪ್ಪು ನೌಕಾಪಡೆಯ ರಚನೆಗೆ ಆಸಕ್ತಿ ತೋರಿದನು. ಬ್ರಿಟಿಷರು ಬಲಿಷ್ಠ ನೌಕಾಪಡೆಯನ್ನು ಹೊಂದಿದ್ದರು. ಇದರ ಸಹಾಯದಿಂದಲೇ ಜಗತ್ತಿನ ಹಲವು ಭಾಗಗಳಲ್ಲಿ ವಸಾಹತುಗಳನ್ನು ಸ್ಥಾಪಿಸಲು ಸಾಧ್ಯವಾಗಿತ್ತು. ಬ್ರಿಟನ್ ಅನ್ನು ಕಡಲ ರಾಣಿ ಎಂದೇ ಕರೆಯಲಾಗಿತ್ತು. ಇಂಥ ವಸಾಹತುಶಾಹಿ ಶಕ್ತಿಯ ವಿರುದ್ಧ ಸರಿಸಮನಾಗಿಯೇ ಹೋರಾಡಲು ಹೈದರ್ ಮತ್ತು ಟಿಪ್ಪುವಿಗೆ ನೌಕಾಪಡೆಯ ರಚನೆ ಅನಿವಾರ್ಯವೂ ಆಯಿತು. ೧೭೬೩ರಲ್ಲಿ ಮಂಗಳೂರನ್ನು ಗೆದ್ದ ಹೈದರ್ ಅಲ್ಲಿ ಒಂದು ಹಡಗು ಮತ್ತು ಶಸ್ತ್ರಾಸ್ತ್ರ ಕೋಠಿಯನ್ನು ನಿರ್ಮಿಸಿದ. ೧೭೮೩ರಲ್ಲಿ ಅಲ್ಲಿದ್ದ ಬ್ರಿಟಿಷ್ ಕೋಟೆ ಕೆಡವಿಸಿ ಸುಲ್ತಾನ್ ಬತೇರಿಯನ್ನು ಕಟ್ಟಿಸಿದ. ವಿದೇಶಿ ನೌಕೆಗಳು ಪ್ರವೇಶಿಸುವುದನ್ನು ತಡೆಯಲು ಸಹಕಾರಿಯಾಯಿತು.[೧೫] ಟಿಪ್ಪು ತನ್ನ ತಂದೆಯ ಮಾದರಿಯಂತೆ ನೌಕಾ ನೆಲೆಗಳನ್ನು ಪಶ್ಚಿಮ ಕರಾವಳಿಯಲ್ಲಿ ಸ್ಥಾಪಿಸಿದ್ದನು. ಆದರೆ ೧೭೮೦–೮೪ರ ಎರಡನೆಯ ಆಂಗ್ಲೋ–ಮೈಸೂರು ಯುದ್ಧದಲ್ಲಿ ಅವು ಧ್ವಂಸಗೊಂಡವು.

ಬ್ರಿಟಿಷರು ೧೯೮೨ರಲ್ಲಿ ಹೊನ್ನಾವರ ಆಕ್ರಮಿಸಿದಾಗ ಅಲ್ಲಿ ಟಿಪ್ಪು ಸ್ಥಾಪಿಸಿದ್ದ ಹಡಗು ನಿರ್ಮಾಣ ಕೇಂದ್ರಗಳು ಮತ್ತು ನೌಕಾ ನೆಲೆಗಳನ್ನು, ಹಾಗೂ ಗೋದಾಮುಗಳನ್ನು ನೋಡಿ ಆಶ್ಚರ್ಯ ವ್ಯಕ್ತಪಡಿಸಿರುವುದು ಬ್ರಿಟಿಷ್ ಬರಹಗಾರರಿಂದಲೇ ವ್ಯಕ್ತವಾಗಿದೆ.[೧೬] ಜೊತೆಗೆ ಅವರಿಗೆ ಅಲ್ಲಿ ೬೦ ಬಂದೂಕುಗಳು ದೊರೆತ್ತಿದ್ದವು. ೧೭೯೨ರ ನಂತರ ಹೊಸದಾಗಿ ನೌಕಾ ನೆಲೆಗಳನ್ನು ಸ್ಥಾಪಿಸಿದ ೭ ಯುದ್ಧ ಹಡಗುಗಳನ್ನು ನಿರ್ಮಾಣ ಮಾಡಿಸಿದ. ಪ್ರತಿಯೊಂದು ಹಡಗಿನಲ್ಲಿ ೩೦–೫೦ ಬಂದೂಕುಗಳು ಇದ್ದವು.[೧೭]

ಟಿಪ್ಪುವಿನ ಪದಾತಿದಳವು ಐರೋಪ್ಯ ಮಾದರಿಯ ಬಂದೂಕು ಮತ್ತು ಸನೀನುಗಳನ್ನು ಧರಿಸುತ್ತಿತ್ತು. ಅವುಗಳನ್ನು ಫ್ರೆಂಚ್ ಮಾದರಿಯಲ್ಲಿ ರಾಜ್ಯದಲ್ಲಿಯೇ ತಯಾರಿಸಲಾಗುತ್ತಿತ್ತು. ಟಿಪ್ಪು ಬಳಿ ಬ್ರಿಟಿಷರು ಮತ್ತು ಫ್ರೆಂಚರ ಸಾಕಷ್ಟು ಶಸ್ತ್ರಾಸ್ತ್ರಗಳಿದ್ದವು. ಫಿರಂಗಿಗಳನ್ನು ಫ್ರೆಂಚರ ಸಹಾಯದಿಂದ

ಮೈಸೂರಿನಲ್ಲಿಯೇ ಎರಕ ಹೊಯ್ಯಲಾಗಿತ್ತು. ಇವು ಬ್ರಿಟಿಷರ ಫಿರಂಗಿಗಳಿಗಿಂತ ಹೆಚ್ಚು ದೂರಕ್ಕೆ ಸಿಡಿಯಬಲ್ಲ ಸಾಮರ್ಥ್ಯವನ್ನು ಹೊಂದಿದ್ದವು. ಟಿಪ್ಪು ಪದಾತಿದಳಕ್ಕೆ ಪಾಶ್ಚಾತ್ಯ ಮಾದರಿಯ ಯುದ್ಧ ತರಬೇತಿ ಮತ್ತು ಶಿಕ್ಷಣ ಕೊಡಿಸಿದ್ದ.[೧೮]

ಹೈದರಾಲಿ ಬ್ರಿಟಿಷರ ವಿರುದ್ಧ ಸಮರ್ಥವಾಗಿ ಹೋರಾಡಲು ನೌಕಾಪಡೆಯನ್ನು ಕಟ್ಟಿದನು. ಇದೇ ಮಾದರಿಯಲ್ಲೇ ಮೊದಲು ಟಿಪ್ಪು ಕೂಡ ನೌಕಾಪಡೆಯ ರಚನೆಗೆ ಉತ್ಸುಕತೆ ತೋರಿದನು. ನಂತರ ಫ್ರೆಂಚ್, ಗ್ರೀಕ್, ಡಚ್, ಫ್ರೆಂಚ್ ಮತ್ತು ಬ್ರಿಟಿಷರ ನೌಕಾವ್ಯವಸ್ಥೆಯನ್ನು ಸೂಕ್ಷ್ಮವಾಗಿ ಅಧ್ಯಯನ ನಡೆಸಿದನು. ಯುರೋಪ್ ಮಾದರಿಯಲ್ಲೆ ನೌಕಾಪಡೆ ರಚಿಸಲು ಅಗತ್ಯ ಕ್ರಮಗಳನ್ನು ಕೈಗೊಂಡನು. ಸೈನಿಕರಿಗೆ ಉತ್ತಮ ತರಬೇತಿ ಶಾಲೆಗಳನ್ನು ಆರಂಭಿಸಿದನು. ಮಂಗಳೂರು, ಭಟ್ಕಳ, ಹೊನ್ನಾವರ, ಸದಾಶಿವಗಡ, ಬಾಸ್ಕೋರಾಜಿ ಮುಂತಾದ ಸ್ಥಳಗಳಲ್ಲಿ ನೌಕಾನೆಲೆಗಳನ್ನು ಸ್ಥಾಪಿಸಿದನು. ೧೭೯೨ರ ನಂತರವು ಹೊಸದಾಗಿ ನೌಕಾನೆಲೆಯನ್ನು ಪುನರ್ ಸ್ಥಾಪಿಸಿ ೭ ಯುದ್ಧ ನೌಕೆಗಳನ್ನು ನಿರ್ಮಾಣ ಮಾಡಿಸಿದನು. ಪ್ರತಿಯೊಂದು ಹಡಗಿನಲ್ಲಿ ೩೦ ರಿಂದ ೫೦ ಬಂದೂಕುಗಳಿರುತ್ತಿದ್ದವು. ಟಿಪ್ಪು ನೌಕಾ ಪಡೆಯ ನಿರ್ಮಾಣದ ಬಲವರ್ಧನೆ ಎರಡು ಮುಖ್ಯ ಕಾರಣಗಳಿದ್ದವು. ಒಂದು ಕರಾವಳಿ ತೀರದಿಂದ ಬರಬಹುದಾದ ವೈರಿಗಳ ಹಠಾತ್ ಆಕ್ರಮಣದಿಂದ ರಾಜ್ಯದ ರಕ್ಷಣೆ, ಎರಡನೆಯದು ನೌಕಾದಳವನ್ನು ಬಲಪಡಿಸಿ ಯುದ್ಧದಲ್ಲಿ ಬಳಸುವ ಅನಿವಾರ್ಯತೆಗಳಿದ್ದವು.[೧೯]

ಟಿಪ್ಪುವಿನ ನೌಕಾಪಡೆಯಲ್ಲಿ ವಿವಿಧ ಶಕ್ತಿಯ ಬಂದೂಕು ಹೊಂದಿರುವ ನೌಕೆಗಳಿದ್ದವು. ೭೨ ಬಂದೂಕು ನೌಕೆಗಳು, ೨೪ ಪೌಂಡರ್‌ಗಳೂ ಇದ್ದು, ಪ್ರತಿ ಹಡಗಿನಲ್ಲಿ ೪ ಪ್ರಮುಖ ಅಧಿಕಾಗಳಿದ್ದರು. ಮೊದಲನೆ ಅಧಿಕಾರಿ ಹಡಗಿನ ಚಲನೆಯನ್ನು, ಎರಡನೆಯ ಅಧಿಕಾರಿ ಬಂದೂಕುಗಳನ್ನು, ಮೂರನೆಯ ಅಧಿಕಾರಿ ಸಣ್ಣ ತುಕಡಿಯನ್ನು, ನಾಲ್ಕನೆಯ ಅಧಿಕಾರಿ ಇತರೆ ಕೆಲಸಗಳನ್ನು ನಿರ್ವಹಿಸುತ್ತಿದ್ದರು.[೨೦] ಟಿಪ್ಪು ಮಸ್ಕತ್‌ಗೆ ಪತ್ರ ಬರೆದು ತನ್ನ ೧೦೦ ನುರಿತ ಲಷ್ಕರ್‌ಗಳು ೧೦ ಶಿಫ್ ರೈಡ್‌ಗಳನ್ನು ಕಳುಹಿಸುವಂತೆ ಮನವಿ ಮಾಡಿದ. ಮತ್ತೆ ಸೆಪ್ಟೆಂಬರ್‌ನಲ್ಲಿ ವೀರ್‌ಗುಲಾಂಗೆ ಪತ್ರ ಬರೆದು ೪೦ ಹಡಗುಗಳನ್ನು ತುರ್ತಾಗಿ ಕಳುಹಿಸುವಂತೆ ಕೋರಿದನು.[೨೧]

೮.೩. ಸೈನಿಕ ಆಡಳಿತ

ಟಿಪ್ಪು ಅಧಿಕಾರಕ್ಕೆ ಬಂದ ಮೇಲೆ ಸೈನಿಕ ಆಡಳಿತದಲ್ಲಿ ಸುಧಾರಣೆಗಳನ್ನು ಮಾಡಿದನು. ಸೈನ್ಯದಲ್ಲಿ ದಕ್ಷತೆ ಮತ್ತು ಶಿಸ್ತು ತರುವಲ್ಲಿ ಕಠಿಣ ಕ್ರಮಗಳನ್ನು ಜಾರಿಗೊಳಿಸಿದನು. ಸೈನ್ಯಕ್ಕೆ ನೇಮಕ ಮಾಡಿಕೊಳ್ಳುವಾಗ ಬಹು ಎಚ್ಚರ ವಹಿಸಿದನು. ಮೈಸೂರು ರಾಜ್ಯದಲ್ಲಿ ದಕ್ಷಿಣ

ಭಾರತದ ಎಲ್ಲಾ ಮುಖ್ಯ ಭಾಷೆಗಳನ್ನಾಡುತ್ತಿದ್ದ ಪ್ರದೇಶಗಳು ಸೇರಿದ್ದವು. ಕನ್ನಡ, ತೆಲುಗು, ತಮಿಳು, ಮರಾಠಿ, ಮಲೆಯಾಳಂ, ಉರ್ದು ಭಾಷಿಕ ಜನರನ್ನು ಸೈನ್ಯಕ್ಕೆ ಭರ್ತಿಮಾಡಲಾಯಿತು. ಇದರಿಂದ ಸೈನಿಕರು ತಮ್ಮ ಕುಟುಂಬಗಳನ್ನು ತಮ್ಮ ವಸತಿ ಪ್ರದೇಶಕ್ಕ ಕರೆತಂದಾಗ ಅವರು ಸ್ಥಳೀಯ ಜನರೊಂದಿಗೆ ಬೆರೆತು ಬದುಕುತ್ತಿದ್ದರು. ಇದು ಉದಾರ ಸಾಂಸ್ಕೃತಿಕ ಜೀವನಕ್ಕೆ ಅವಕಾಶ ಮಾಡಿಕೊಟ್ಟಿತು. ಟಿಪ್ಪು ಸೈನಿಕರಿಗೆ ಭೂಮಿ ನೀಡಿದನು. ಸೈನಿಕರು ಯುದ್ಧಕಾಲದಲ್ಲಿ ರಣರಂಗದಲ್ಲಿ ನಿಂತು ಹೋರಾಡುತ್ತಿದ್ದರು. ಬಿಡುವಿನ ಸಮಯದಲ್ಲಿ ಕೃಷಿ ಚಟುವಟಿಕೆ ನಡೆಸುತ್ತಿದ್ದರು.

ಟಿಪ್ಪು ಸೈನ್ಯಾಡಳಿತವು ಆಧುನೀಕವಾಗಿ ಸಜ್ಜುಗೊಂಡಿತ್ತು. ಟಿಪ್ಪು ಯುರೋಪ್ ಮಾದರಿಯಲ್ಲಿ ಸೈನಿಕ ಆಡಳಿತದಲ್ಲಿ ಮಾರ್ಪಾಡುಗಳನ್ನು ಮಾಡಿದನು. ೧೭೮೨ರ ವೇಳೆಗೆ ಟಿಪ್ಪುವಿನ ರಾಜ್ಯದಲ್ಲಿ ೧,೮೦,೦೦೦ದಷ್ಟು ಸೈನ್ಯವಿತ್ತು. ಸೈನಿಕರಿಗೆ ಮಾಸಿಕವಾಗಿ ಸರಿಯಾಗಿ ವೇತನ ನೀಡಲಾಗುತ್ತಿತ್ತು. ವೇತನ ವ್ಯವಸ್ಥೆಯು ಬ್ರಿಟಿಷ್ ಸೈನ್ಯವೂ ಅಸೂಯೆ ಪಟ್ಟುಕೊಳ್ಳುವಷ್ಟು ಶಿಸ್ತುಬದ್ಧವಾಗಿತ್ತು. ಪ್ರತಿನಿತ್ಯ ಹಗಲು ಮತ್ತು ಸಂಜೆಯ ಸಮಯದಲ್ಲಿ ಸೇನಾಧಿಕಾರಿಗಳು ಮತ್ತು ಸೈನಿಕರು ಒಡಗೂಡಿ ಕವಾಯಿತು ನಡೆಸಬೇಕಾಗಿತ್ತು. ನಂಬಿಕೆ ದ್ರೋಹವನ್ನು ಹೊರತುಪಡಿಸಿ ಬೇರಾವುದೇ ಅಪರಾಧಗಳಿಗೂ ದೈಹಿಕ ಶಿಕ್ಷೆ ವಿಧಿಸುವುದನ್ನು ನಿಷೇಧಿಸಲಾಗಿತ್ತು.[೨೨]

ಟಿಪ್ಪುವಿನ ಸೈನಿಕ ಆಡಳಿತವು ಯುರೋಪಿನ ಮಿಲಿಟರಿ ಆಡಳಿತಕ್ಕಿಂತ ಭಿನ್ನವಾಗಿ ರೂಪುಗೊಂಡಿತು. ಸೈನಿಕರ ನೇಮಕಾತಿ ಶಿಸ್ತುಬದ್ಧವಾಗಿತ್ತು. ಟಿಪ್ಪುವಿನ ಮಾರ್ಗದರ್ಶನದಲ್ಲಿ ಸೈನಿಕರ ನೇಮಕ ನಡೆಯುತ್ತಿತ್ತು. ವ್ಯಕ್ತಿಯ ಕೌಟುಂಬಿಕ ಹಿನ್ನೆಲೆ, ಜಾತಿ ಇತ್ಯಾದಿ ಮೂಲಗಳನ್ನು ಪರಿಶೀಲಿಸಿ ಸಂದರ್ಶನದ ಮೂಲಕವೇ ಆಯ್ಕೆ ಪ್ರಕ್ರಿಯೆ ನಡೆಯುತ್ತಿತ್ತು. ಟಿಪ್ಪುವಿನ ಶಾಶ್ವತ ಸೈನ್ಯದ ಬೆಂಬಲಕ್ಕೆ ರೈತರ ಪಡೆಯೂ ಇತ್ತು. ೧೭೮೬ರ ವೇಳೆಗೆ ಈ ಅನಿಯಮಿತ ಸೈನಿಕರ ಸಂಖ್ಯೆಯೂ ೧,೮೦,೦೦೦ದಷ್ಟಿತ್ತು. ಈ ಸೈನ್ಯವು ರಸ್ತೆಗಳನ್ನು ತೆರವುಗೊಳಿಸುವುದು, ಸಿಡಿಮದ್ದುಗಳನ್ನು ಸಿದ್ಧಗೊಳಿಸುವುದು ಆಕ್ರಮಿತ ಪಟ್ಟಣಗಳನ್ನು ಕಾಯುವುದು.[೨೩] ಹೀಗೆ ಹಲವು ಜವಾಬ್ದಾರಿಗಳನ್ನು ನಿರ್ವಹಿಸುತ್ತಿತ್ತು.

ಟಿಪ್ಪುವಿನ ಸೈನ್ಯದಲ್ಲಿ ಬಹುಪಾಲು ಶೂದ್ರ ಹಾಗೂ ದಲಿತ ಸಮುದಾಯಕ್ಕೆ ಸೇರಿದವರಾಗಿದ್ದರು. ಸೈನ್ಯಕ್ಕೆ ಸೇರುವುದು ಊಳಿಗಮಾನ್ಯ ಶೋಷಣೆಯಿಂದ ವಿಮೋಚನೆಗೊಳ್ಳುವುದಕ್ಕೆ ಸಮಾನವಾಗಿತ್ತು. ಪ್ರತಿಯೊಬ್ಬ ಸೈನಿಕನಿಗೂ ಭೂಮಿ ನೀಡುತ್ತಿದ್ದುದರಿಂದ ಇವರು ಭೂಮಾಲೀಕರ ಶೋಷಣೆಗಳಿಂದ ಮುಕ್ತರಾಗಿದ್ದರು. ಜೀತಗಾರ ಪದ್ಧತಿಗೂ ಅವಕಾಶವಿರಲಿಲ್ಲ. ಟಿಪ್ಪುವಿನ ಸೈನ್ಯ ಹೊಸ ವಿಮೋಚಿತ ಸ್ಫೂರ್ತಿಯಿಂದ ಕೂಡಿದ್ದ ಸೈನಿಕರೊಂದಿಗೆ ಮೈಸೂರಿಗೆ ಹೊಸ ಬಲ ತಂದುಕೊಟ್ಟಿತ್ತು. ಹೈದರ್ ಮತ್ತು ಟಿಪ್ಪುವಿನ ವಸಾಹತುಶಾಹಿ ವಿರೋಧಿ ಸಂಗ್ರಾಮವು ಊಳಿಗಮಾನ್ಯ

ವಿರೋಧಿ ವಿಜಯದ ಮೇಲೆ ಕಟ್ಟಲ್ಪಟ್ಟಿತ್ತು.[೨೪] ಟಿಪ್ಪುವಿನ ಸೈನಿಕ ಆಡಳಿತವು ಯುರೋಪ್ ಅಥವಾ ಫ್ರೆಂಚ್ ಮಾದರಿಗಳನ್ನು ಅಳವಡಿಸಿಕೊಂಡಿದ್ದರೂ, ಟಿಪ್ಪುವೇ ದೇಶಿಯವಾಗಿ ಹಲವು ಮಾದರಿಗಳನ್ನು ರೂಢಿಸಿದನು. ಇವು ಯುರೋಪಿನ ಸೈನಿಕ ಆಡಳಿತಕ್ಕಿಂತ ಭಿನ್ನವಾಗಿದ್ದವು.

ಹೈದರ್ ಮತ್ತು ಟಿಪ್ಪು ಸುಲ್ತಾನರು ತಮ್ಮ ಆಳ್ವಿಕೆಯ ಹೆಚ್ಚು ಅವಧಿಯನ್ನು ಯುದ್ಧ ಭೂಮಿಯಲ್ಲೆ ಕಳೆದರು. ಬ್ರಿಟಿಷರನ್ನು ಇಲ್ಲಿಂದ ಸಂಪೂರ್ಣವಾಗಿ ಕಾಲ್ತೆಗೆಸಲು ನಿರಂತರ ಪ್ರಯತ್ನಗಳನ್ನು ನಡೆಸಿದರು. ಬ್ರಿಟಿಷರು ಆರ್ಥಿಕವಾಗಿ ಬಲಾಢ್ಯರಾಗಿದ್ದರು. ಅವರ ಸೈನ್ಯವು ಆಧುನಿಕ ಮಾದರಿಗಳನ್ನು ಹೊಂದಿ ಶಕ್ತಿಯುತವಾಗಿತ್ತು. ವ್ಯವಸ್ಥಿತ ಸೈನ್ಯಾಡಳಿತವನ್ನು ರೂಪಿಸಿದ್ದರು. ಯುರೋಪಿನ ಹಲವು ರಾಷ್ಟ್ರಗಳು ಇದೇ ಮಾದರಿಗಳನ್ನು ಹೊಂದಿದ್ದವು. ಫ್ರಾನ್ಸ್ ದೇಶವು ಯುರೋಪಿನ ಶಕ್ತಿರಾಜಕಾರಣದಲ್ಲಿ ತೀವ್ರ ಪೈಪೋಟಿ ನಡೆಸುತ್ತಿತ್ತು. ಬಲಿಷ್ಠವಾದ ಮಿಲಿಟರಿ ವ್ಯವಸ್ಥೆಯನ್ನು ರಚಿಸಿಕೊಂಡಿತು. ಟಿಪ್ಪು ಫ್ರೆಂಚ್‌ರೊಂದಿಗೆ ಸ್ನೇಹ ಸಂಬಂಧಗಳನ್ನು ವೃದ್ಧಿಸಿಕೊಂಡನು. ಇದರಿಂದ ಟಿಪ್ಪುವಿಗೆ ಯುರೋಪಿನ ಆಧುನಿಕತೆಯ ಪರಿಚಯವಾಯಿತು. ಕೃಷಿ, ವ್ಯಾಪಾರ, ವಾಣಿಜ್ಯ, ಕೈಗಾರಿಕೆ, ಮಿಲಿಟರಿ ಹಾಗೂ ಕರ–ಕುಶಲ ಕಲೆ ಮುಂತಾದ ಕ್ಷೇತ್ರಗಳಲ್ಲಿ ಯುರೋಪ್ ರಾಷ್ಟ್ರಗಳು ಹೆಚ್ಚು ಪ್ರಗತಿ ಸಾಧಿಸಿದ್ದವು. ಟಿಪ್ಪು ಯುರೋಪ್ ಮಾದರಿಯ ಆಧುನಿಕತೆಯ ಬಗ್ಗೆ ಹೆಚ್ಚು ಆಸಕ್ತಿ ತೋರಿಸಿದನು. ಮೈಸೂರು ರಾಜ್ಯಕ್ಕೆ ಶೀಘ್ರಗತಿ ಒದಗಿಸಲು ನಿರ್ಧರಿಸಿದನು.

ಟಿಪ್ಪು ತನ್ನ ರಾಜ್ಯದಲ್ಲಿ ಸಿದ್ಧವಸ್ತುಗಳ ಉತ್ಪಾದನೆಯಲ್ಲಿ ಯಶಸ್ಸು ಕಂಡಿದ್ದನು. ಅದರಂತೆ ಸೈನ್ಯಾಡಳಿತದ ಆಧುನೀಕರಣಕ್ಕೆ ಒತ್ತು ನೀಡಿದನು. ಟಿಪ್ಪು ಸ್ಥಾಪಿಸಿದ್ದ ಸೈನಿಕ ಇಲಾಖೆಯು ಪೂರ್ಣಯ್ಯ ಅವರ ನೇತೃತ್ವದಲ್ಲಿತ್ತು. ಅದು ಹೆಚ್ಚು ಯುದ್ಧ ಸಲಕರಣೆ ಹೊಂದಿ ಶಿಸ್ತುಬದ್ಧವಾಗಿತ್ತು. ೩ ಲಕ್ಷ ಸೈನಿಕರು ಟಿಪ್ಪು ಸೈನ್ಯದಲ್ಲಿದ್ದರು. ಮೂರನೆಯ ಆಂಗ್ಲೋ–ಮೈಸೂರು ಯುದ್ಧಕ್ಕೂ ಮುಂಚೆ ೫೦೦೦ ನಿಯಮಿತ ಪದಾತಿಗಳು, ೧೦೦೦೦ ಯುದ್ಧ ಬಂಧಿಗಳಿಂದ ಕೂಡಿದ ಆಸದ್ ಇಲಾಹಿಗಳು, ಕತ್ತಿ, ಮದ್ದಿನ ಕೋವಿಗಳನ್ನು ಹಿಡಿದು ೬೦೦೦೦ ಸಿಪಾಯಿಗಳು ಹಾಗೂ ೩೦೦೦ ಕಮಾಟಿಗಳು ಇದ್ದರು.

ಟಿಪ್ಪುವಿನ ಸೈನ್ಯದಲ್ಲಿ ಐರೋಪ್ಯರು, ಆಫ್ರಿಕಾದ ಬಂಟುಕುಲದ ಲಾಲಿಯಾ ಗುಂಪಿನವರು, ಹಿಂದೂ ಮತ್ತು ಮುಸ್ಲಿಂಮರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಬ್ರಿಟಿಷ್ ಪಡೆಯ ಮುಖಂಡ ಕ್ಯಾಂಬೆಲ್ಲನ ಪ್ರಕಾರ ಟಿಪ್ಪು ಕ್ರಿಯಾಶೀಲನೂ, ಮಹತ್ವಾಕಾಂಕ್ಷಿಯೂ ಹಾಗೂ ಉದ್ಯಮಶೀಲನೂ ಆಗಿದ್ದನು. ನಮಗೆ ತಿಳಿದಂತೆ ಏಷ್ಯಾದ ರಾಜ್ಯಗಳಲ್ಲಿ ಯಾವುದರಲ್ಲಿಯೂ ಕಂಡುಬರದ ಹೆಚ್ಚಿನ ಗುಣಮಟ್ಟದ ಮಿಲಿಟರಿ ಅವನಲ್ಲಿತ್ತು ಎಂದು ತಿಳಿಸಿದ್ದಾನೆ. ವಿಲಿಯಂ ಮ್ಯಾಕ್ಲಾಯ್ಡ್‌ನು ಟಿಪ್ಪುವಿನ ಮಿಲಿಟರಿ ವ್ಯವಸ್ಥೆ ಕುರಿತು ಒಂದು ಸಕ್ರಮವಾದ ಯೋಜನೆಯಂತೆ ತನ್ನ ಸೈನ್ಯದಲ್ಲಿ ಶಿಸ್ತನ್ನು

ಏರ್ಪಡಿಸುವುದರಲ್ಲಿ ಜಾಣ. ದೊರೆ ಎಂದರೆ ಟಿಪ್ಪು ಮಾತ್ರ. ಈ ವಿಷಯದಲ್ಲಿ ಅವನು ಪೂರ್ವಗ್ರಪೀಡಿತನಾಗದೆ ತನ್ನ ಪಡೆಗಳ ಅಭಿವೃದ್ಧಿಗಾಗಿ ಶುದ್ಧಾಂಗನಾಗಿ ಯಾವುದೇ ಬದಲಾವಣೆ ತರಲು ಸಿದ್ಧನಾಗಿದ್ದನು.[೨೫]

ಟಿಪ್ಪು ತನ್ನ ಸೈನಿಕರಿಗೆ ಯುರೋಪ್ ಯುದ್ಧ ಮಾದರಿ ತರಬೇತಿ ಕೊಡಿಸಿದ್ದನು. ಸೈನ್ಯದಲ್ಲಿ ಶಿಸ್ತನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದನು. ಕಾರ್ಯಚರಣೆಯ ಸಂದರ್ಭದಲ್ಲಿ ಯಾರಾದರೂ ಸೈನಿಕರು ತಪ್ಪಿಸಿಕೊಂಡರೆ ಅಥವಾ ಪಲಾಯನ ಮಾಡಿದರೆ ಗುಂಡಿಟ್ಟು ಕೊಲ್ಲಲು ಅಪ್ಪಣೆ ಮಾಡಿದ್ದನು. ಪ್ರತಿ ತಿಂಗಳು ಬಟವಾಡೆಯನ್ನು ತಪ್ಪದೇ ವಿತರಿಸುತ್ತಿದ್ದ. ಹೈದರಾಲಿ ಯಾವುದೇ ಕಾರಣಕ್ಕೂ ಸೈನಿಕ ಸಂಬಳ ನೀಡುವುದನ್ನು ನಿಲ್ಲಿಸುತ್ತಿರಲಿಲ್ಲ. ಟಿಪ್ಪು ಇದನ್ನೆ ಅನುಸರಿಸಿದ. ಯುದ್ಧ ಮತ್ತು ಶಾಂತಿ ಈ ಎರಡೂ ಸಂದರ್ಭಗಳಲ್ಲೂ ಟಿಪ್ಪು ಸಹ ಸೈನ್ಯದೊಂದಿಗೆ ಇರುತ್ತಿದ್ದ.[೨೬]

ಟಿಪ್ಪು ಸೈನಿಕರ ನೇಮಕಾತಿ ವ್ಯವಸ್ಥೆಯನ್ನು ಶಿಸ್ತುಬದ್ಧವಾಗಿ ರೂಪಿಸಿದ್ದ. ಸೈನಿಕರನ್ನು ನೊಂದಾಯಿಸುವಾಗ ಟಿಪ್ಪುವಿನ ಉಸ್ತುವಾರಿಯಲ್ಲಿ ಸೈನಿಕರ ಜಾತಿ, ಧರ್ಮ, ಕುಟುಂಬದ ಹಿನ್ನಲೆ ಎಲ್ಲವನ್ನೂ ಪರಿಶೀಲಿಸಿ, ಸಂದರ್ಶನ ನಡೆಸಿ ನೊಂದಾಯಿಸಿ ಕಳುಹಿಸುತ್ತಿದ್ದರು. ಇದಲ್ಲದೆ ಟಿಪ್ಪುವಿನ ಶಾಶ್ವತವಾದ ಸೈನ್ಯಕ್ಕೆ ಬೆಂಬಲವಾಗಿ ಅನಿಯಮಿತ ರೈತ ಪಡೆ ಕಟ್ಟಲಾಗಿತ್ತು. ೧೭೮೬ರ ವೇಳೆಗೆ ಇದರ ಸಂಖ್ಯೆಯು ೧,೮೦೦೦೦ದಷ್ಟಿತ್ತು. ಈ ಸೈನ್ಯವು ರಸ್ತೆಗಳನ್ನು ಸುಗಮಗೊಳಿಸುವುದು, ಸಿಡಿಮದ್ದುಗಳನ್ನು ಸಿದ್ದಗೊಳಿಸುವುದು, ವಶಪಡಿಸಿಕೊಂಡ ಪಟ್ಟಣಗಳನ್ನು ಕಾಯುವುದು ಇತ್ಯಾದಿ ಕರ್ತವ್ಯಗಳನ್ನು ನಿರ್ವಹಿಸಿಸುತ್ತಿತ್ತು.[೨೭]

ಟಿಪ್ಪುವಿನ ಸೈನಿಕರ ತರಬೇತಿಯಲ್ಲಿ ಬ್ರಿಟಿಷ್ ವಸಾಹತುಶಾಹಿ ವಿರೋಧಿ ತರಬೇತಿ ಅಂತರ್ಗತವಾಗಿ ಅಡಕವಾಗಿತ್ತು. ಅದರಿಂದಲೇ ೧೭೯೯ರ ಯುದ್ಧದ ನಂತರ ಬ್ರಿಟಿಷರು ಬೇರೆ ಸೈನ್ಯದಂತೆ ಟಿಪ್ಪುವಿನ ಸೈನ್ಯವನ್ನು ಉಳಿಸಿಕೊಳ್ಳದೆ ವಿಸರ್ಜಿಸಿದರು.[೨೮]

ಮೂರನೆಯ ಆಂಗ್ಲೋ-ಮೈಸೂರು ಯುದ್ಧಕ್ಕೂ ಮೊದಲು ಟಿಪ್ಪುವಿನ ಬಳಿ ೫೦,೦೦೦ ನಿಯತ ಪದಾತಿಗಳು, ೧,೮೦೦೦ ಅಶ್ವಪಡೆ, ೩೦೦೦೦ ನಿಯತಾಶ್ವಗಳು, ೫೦,೦೦೦ ಅನಿಯಾವಾಶ್ವಗಳು, ೩೦೦೦ ಒಂಟೆಗಳು, ೪೮೦೦೦ ನಿಯತ ಪದಾತಿಗಳು, ೧೦೦೦೦ ಯುದ್ಧ ಸಿಪಾಯಿಗಳು, ೩೦೦೦೦ ಕಮಾಟಿಗಳು ಇದ್ದರು.[೨೯]

ಹೈದರ್ ಮತ್ತು ಟಿಪ್ಪು ನೌಕಾ ಪಡೆಯ ರಚನೆಗೆ ಒತ್ತು ನೀಡಿದರು. ಬ್ರಿಟನ್ ನೌಕಾ ಸಮರದಲ್ಲಿ ವಿಶ್ವದಲ್ಲೆ ಹೆಚ್ಚು ಪ್ರಾಬಲ್ಯ ಹೊಂದಿತ್ತು. ಬ್ರಿಟಿಷರನ್ನು ಪೂರ್ಣಪ್ರಮಾಣದಲ್ಲಿ

ಸೋಲಿಸಬೇಕಾದರೆ ಸಮರ್ಥ ನೌಕಾಪಡೆಯ ರಚನೆಯು ಮೈಸೂರಿಗೆ ಅನಿವಾರ್ಯವೂ ಆಯಿತು. ಹೈದರಾಲಿ ಮೊದಲು ಮೈಸೂರು ಸಂಸ್ಥಾನದಲ್ಲಿ ನೌಕಾ ಪಡೆಯ ರಚನೆಗೆ ಮುಂದಡಿಯಿಟ್ಟನು. ಟಿಪ್ಪು ತನ್ನ ಆಳ್ವಿಕೆಯ ಕಾಲದಲ್ಲಿ ಇನ್ನೂ ಹೆಚ್ಚು ಪ್ರಮಾಣದಲ್ಲಿ ಹಡಗು ಮತ್ತು ಯುದ್ಧ ನೌಕೆಗಳ ನಿರ್ಮಾಣಕ್ಕೆ ಒತ್ತು ನೀಡಿದನು. ಇದರಲ್ಲಿ ಎರಡು ಉದ್ದೇಶಗಳೂ ಪ್ರಧಾನವಾಗಿದ್ದವು. ಒಂದು ಸಾಗರೋತ್ತರ ವ್ಯಾಪಾರ–ವಾಣಿಜ್ಯವನ್ನು ವೃದ್ಧಿಸುವುದು. ಎರಡನೆಯದು ನೌಕಾಪಡೆಯನ್ನು ಸಮರ್ಥವಾಗಿ ಕಟ್ಟಿ ಬ್ರಿಟಿಷರನ್ನು ಕಡಲ ಯುದ್ಧದಲ್ಲೂ ಸೋಲಿಸುವ ಇರಾದೆ ಹೊಂದಿದ್ದನು. ಮಂಗಳೂರು, ಸದಾಶಿವಗಡ ಹಾಗೂ ಬಾಸ್ಕೋರಾಜಿ ಎಂಬ ಮೂರು ಸ್ಥಳಗಳಲ್ಲಿ ಹಡಗು ನಿರ್ಮಾಣ ಕೇಂದ್ರಗಳಿದ್ದವು. ಟಿಪ್ಪು ನೌಕಾಪಡೆಯ ಅಧಿಕಾರಿಗಳು ಮತ್ತು ಸೇವಕರಿಗೆ ತರಬೇತಿ ಕೊಡುವ ಶಾಲೆಯೂ ಇತ್ತು. ಟಿಪ್ಪು ೧೭೮೬ರಲ್ಲಿ ೧೦೦ ಹಡಗು ಕಟ್ಟಲು ಆದೇಶಿಸಿದನು. ಅವುಗಳಲ್ಲಿ ಎರಡಕ್ಕೆ ಕ್ಲುಯಿಜಿರಿ ಮತ್ತು ಇಲ್ಯಾಸರಿ ಎಂದೂ ಹೆಸರಿಸಿದನು. ಹಡಗು ನಿರ್ಮಾಣಕ್ಕೆ ಬೇಕಾದ ಕಬ್ಬಿಣ ಮತ್ತು ಮರಮುಟ್ಟು, ಹಗ್ಗಗಳು ಇತ್ಯಾದಿಗಳನ್ನು ಸ್ಥಳೀಯವಾಗಿ ಖರೀದಿಸತಕ್ಕದ್ದು ಎಂದು ಆದೇಶಿಸಿದ್ದನು. ಮಂಗಳೂರಿನಲ್ಲಿ ನಿರ್ಮಾಣ ಮಾಡುತ್ತಿದ್ದ ಹಡಗುಗಳು ತಮ್ಮ ದಾರ್ಢ್ಯಕ್ಕೂ, ಬಾಳಿಕೆಗೂ ಪ್ರಸಿದ್ಧವಾಗಿದ್ದವು ಎಂದು ಕಿರ್ಕ್ ಪ್ಯಾಟ್ರಿಕ್ ಒಪ್ಪಿಕೊಂಡಿದ್ದಾನೆ. ಟಿಪ್ಪು ಯುರೋಪ್ ಮಾದರಿಯ ನೌಕಪಡೆಯ ರಚನೆಗೆ ಒತ್ತು ನೀಡಿದ್ದನು.[೨೦]

ಟಿಪ್ಪು ನೌಕಾಪಡೆಯ ರಚನೆ, ಬಲವರ್ಧನೆ ಹಾಗೂ ಸಂಘಟನೆಯ ಮಹತ್ವ ಅರಿತಿದ್ದನು. ಉತ್ತಮವಾದ ನೌಕಾದಳಿತವನ್ನು ರೂಪುಗೊಳಿಸಿದ್ದನು. ಒಂದು ಪ್ರತ್ಯೇಕ ನೌಕಾ ವಿಭಾಗವನ್ನು ರಚಿಸಿದನು. ಇದರಲ್ಲಿ ೧೦೦೦ ಜನ ಸೇವೆ ಸಲ್ಲಿಸುತ್ತಿದ್ದರು. ಟಿಪ್ಪುವಿನ ರಾಜ್ಯದಲ್ಲಿ ೪೦ ಯುದ್ಧ ನೌಕೆಗಳಿದ್ದವು. ಅವು ಕಲ್ಲಿಕೋಟೆ, ಸದಾಶಿವಘಡ ಹಾಗು ಮಂಗಳೂರಿನಲ್ಲಿದ್ದವು.[೨೧] ನೌಕಾಪಡೆಯನ್ನು ಸರ್ವವಿಧದಲ್ಲೂ ಸಜ್ಜುಗೊಳಿಸಲು ಅಗತ್ಯ ಕ್ರಮ ಕೈಗೊಂಡನು. ಹೊಸ ನೌಕಾನಿಯಂತ್ರಣ ಕಾಯಿದೆ ಜಾರಿಗೆ ತಂದನು. ವ್ಯಾಪಾರಿ ಹಡಗುಗಳ ನಿರ್ವಹಣೆಗಾಗಿ 'ಬೋರ್ಡ್ ಆಫ್ ಟ್ರೇಡ್' ಎನ್ನುವ ನಿಗಮವನ್ನು ಸ್ಥಾಪಿಸಿದನು. ಬ್ರಿಟಿಷರ ನೌಕಾಶಕ್ತಿಯನ್ನು ಅಧ್ಯಯನ ಮಾಡಲು ತನ್ನ ಅಧಿಕಾರಿಗಳನ್ನು ಮದ್ರಾಸಿಗೆ ಕಳುಹಿಸಿದನು. ನೌಕಾ ನೆಲೆಯ ಮುಖ್ಯಸ್ಥನನ್ನು ಮೀರ್ ಎಯಾಮ್ಸ್ ಎಂದು ಕರೆಯುತ್ತಿದ್ದರು. ಅವರು ಯುದ್ಧಕ್ಕೆ ಹೋಗುವಂತಿರಲಿಲ್ಲ. ಇದರ ಅಧೀನ ಅಧಿಕಾರಿಗಳಾಗಿ ಮೀರ್ ಭಕ್ಷಿಗಳಿದ್ದರು. ಇವರು ೩೦ ಮಂದಿ ಇದ್ದು ೨೦ ಮಂದಿ ನೌಕಾಯಾನಕ್ಕಾಗಿ ತೆರಳಬೇಕಿತ್ತು. ೧೦ ಮಂದಿ ತೋರುಗಾಣಿಕೆಗೆ ನೌಕಾನೆಲೆಯಲ್ಲೆ ಇರಬೇಕಿತ್ತು.[೨೨]

ಟಿಪ್ಪು ನೌಕಾಪಡೆಯ ಮುಖ್ಯಸ್ಥನಾದ ಮೀರ್ ಎಯಾಮ್ಸ್‌ಗೆ ಕೆಲವು ನಿರ್ದೇಶನಗಳನ್ನು ನೀಡಿದ್ದ. ಅವೆಂದರೆ

೧. ೧೦೦ ಹಡಗುಗಳನ್ನು ಯುದ್ಧಕ್ಕಾಗಿ ಕಟ್ಟಬೇಕು. ೧೦ ನೌಕೆಗಳನ್ನು ಪೂರ್ಣ ಮಾನವರಿಂದಲೇ ನಡೆಸಬೇಕು. ಅವುಗಳಲ್ಲಿ ಪೂರ್ಣಯುದ್ಧ ಸಾಮಗ್ರಿಗಳನ್ನಿಡಲು ಅವಕಾಶವಿರಬೇಕು.

೨. ಇದಕ್ಕೆ ತಕ್ಕಂತೆ ಅನುಭವಿ ಕೆಲಸಗಾರರು, ನೀವೇ ನೇಮಿಸಿಕೊಳ್ಳಬೇಕು. ಅವರಿಗೆ ನೌಕಾ ಬಲದ ತರಬೇತಿಯಾಗಿ ಇರಬೇಕು ಹಾಗೂ ವ್ಯಾಪಾರ-ವಾಣಿಜ್ಯದ ಅನುಭವವೂ ಇರಬೇಕು.

೩. ಹಣಕ್ಕಾಗಿ ಮಾರುಕಟ್ಟೆಯಲ್ಲಿ ಯುದ್ಧ ಸಾಮಗ್ರಿಗಳನ್ನಿಡಲು ಅಗತ್ಯ ವಸ್ತುಗಳು ಲಭ್ಯವಿಲ್ಲದಿದ್ದರೆ ಅದನ್ನು ರಾಜನ ಗಮನಕ್ಕೆ ತರತಕ್ಕದ್ದು.

೧೭೯೬ರ ಸೆಪ್ಟೆಂಬರ್‌ನಲ್ಲಿ ನೌಕಾಬಲದ ಅಧಿಕಾರಿಗಳ ಪುನರ್ ಸಂಘಟನೆಗೆ ಆದೇಶ ನೀಡಲಾಯಿತು. ಅದೇ ವರ್ಷ ಟಿಪ್ಪು ನೌಕಾಬಲದ ಕಾರ್ಯಕ್ರಮವು ೪೦ ಹಡಗುಗಳಿಗೆ ಕೊನೆಯಾಯಿತು. ಅದು ಮೂರು ವಿಭಾಗದಲ್ಲಿ ಹಂಚಿಹೋಯಿತು. ಮಂಗಳೂರು ನೌಕಾ ವಿಭಾಗಕ್ಕೆ ೧೨ ವಾಜಿದಾಬಾದ್‌ಗೆ ೧೪, ಮಜಿವಾಬಾದ್ ೧೪ ಹಡಗುಗಳು ಕೊಡಲ್ಪಟ್ಟವು. ಇವೆಲ್ಲವೂ ನೌಕಾಪಡೆಯ ಮುಖ್ಯಸ್ಥನ ನಾಯಕತ್ವದಲ್ಲಿ ಮಂಗಳೂರಿನಲ್ಲಿ ಲಂಗರು ಹಾಕಬೇಕು ಎಂದು ಆದೇಶಿಸಿದನು. ಇದರಲ್ಲಿ ೨೦ ನೌಕೆಗಳು ಸಮರ ನೌಕೆಯಾಗಿರಬೇಕು. ೨೦ ನೌಕೆಗಳು ಫ್ರಿಗೇಟ್ ಆಗಿರಬೇಕು. ಜೊತೆಗೆ ಈ ೧೦ ನೌಕೆಗಳಲ್ಲಿ ೭೦ ಬಂದೂಕುಗಳು ೧೦ ನೌಕೆಗಳಲ್ಲಿ ೬೨ ಬಂದೂಕು ನೀಡಬೇಕು. ಪ್ರತಿ ಫ್ರಿಗೇಟ್‌ನಲ್ಲಿ ೧೮೦ ಜನರಿರಬೇಕು. ಪ್ರತಿನೌಕೆಯಲ್ಲಿ ಗನ್‌ಮೆನ್‌ಗಳು, ಮಸ್ಕೈಟೆರ್‌ಗಳು, ಟೆಂಪಾಡರ್ಸ್, ಸರ್ದಾರ್‌ಗಳು, ಪೈಲೈಟ್‌ಗಳು, ಸರ್ಜನ್‌ಗಳು, ಸಹಾಯಕರು ಇರತಕ್ಕದ್ದು.[೩೩] ಪ್ರತಿ ತಿಂಗಳಿಗೆ ಇವರಿಗೆ ೧,೯೫೫ ಪಗೋಡ ಖರ್ಚು ಮಾಡಬೇಕು. ವಾರ್ಷಿಕವಾಗಿ ಈ ಎಲ್ಲಾ ಫ್ರಿಗೇಡ್‌ಗಳು ೯ ನೌಕೆಗಳ ಖರ್ಚು ೧೮೨,೪೦೦ ಪೌಂಡ್ ಸರ್ಲಿಂಗ್ ಎಂದು ಲೆಕ್ಕ ಹಾಕಲಾಯಿತು.[೩೪]

ಟಿಪ್ಪು ಸೈನಿಕರಲ್ಲಿ ಶಿಸ್ತು ಹಾಗೂ ಸಂಘಟನೆಯನ್ನು ತರಲು ದೇಶಪ್ರೇಮ ತುಂಬಲು ಪ್ರಯತ್ನಿಸಿದನು. ಅವರ ಸಂಬಳ ಹಾಗೂ ಸಾರಿಗೆಗಳನ್ನು ಉತ್ತಮಪಡಿಸಿದನು. ಅವರ ಪತ್ನಿಯರಿಗೆ ಹಲವು ಸೌಲಭ್ಯಗಳನ್ನು ಕಲ್ಪಿಸಿದನು. ಯುದ್ಧದಲ್ಲಿ ಸಾಹಸ ಮಾಡಿದ ವೀರರಿಗೆ ಬಿರುದು ಬಾವಲಿಗಳನ್ನು ಪಾರಿತೋಷಕ ಗಳನ್ನು, ಉನ್ನತ ಹುದ್ದೆಗಳನ್ನು ನೀಡಿದನು. ಸೈನ್ಯದಲ್ಲಿ ಸ್ವಾಮಿನಿಷ್ಠೆ, ರಾಷ್ಟ್ರಾಭಿಮಾನ ಹೆಚ್ಚಿಸಲು ಒಂದು ಖಾಸಾದಳವನ್ನು ನಿರ್ಮಿಸಿದನು. ಅವರು ಇತರರಿಗೆ ಮೇಲ್ಪಂಕ್ತಿಯಾಗಿದ್ದರು. ಅವರಿಗೆ ಕುರ್ಬೆಲ ನಂತರ ಜಮ್ರಾ ಎಂದು ಕರೆದನು.[೩೫]

ಅಡಿಟಿಪ್ಪಣಿಗಳು

೧. ತಿರುಮಲೆ ತಾತಾಚಾರ್ಯ ಶರ್ಮ, ಮೈಸೂರು ಇತಿಹಾಸದ ಹಳೆಯ ಪುಟಗಳು, ನವನೀತ ಪ್ರಕಾಶನ, ಬೆಂಗಳೂರು, ೧೯೯೬, ಪು.೪೦-೪೧

೨. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ, ಸಂ.೫, ಪು.೨೪೩-೨೪೪

೩. ಇರ್ಫಾನ್ ಹಬೀಬ್, ಸ್ಟೇಟ್ ಆ್ಯಂಡ್ ಡಿಪ್ಲೊಮಸಿ ಅಂಡರ್ ಟಿಪ್ಪು ಸುಲ್ತಾನ್, ತುಲಿಕ, ನ್ಯೂ ಡೆಲ್ಲಿ, ೨೦೦೧, ಪು.೩೩-೩೫.

೪. ಕೌಸರ್ ಕಬೀರ್, ಸೀಕ್ರೇಟ್ ಕರಸ್ಪಾಂಡೆನ್ಸ್ ಆಫ್ ಟಿಪ್ಪು ಸುಲ್ತಾನ್, ಪು.೮೫-೮೬

೫. ಕೌಸರ್ ಕಬೀರ್, ಪೂರ್ವೋಕ್ತ, ಪು.೮೬-೮೯

೬. ಕಿರ್ಮಾನಿ, ನಿಷಾನ್-ಎ-ಹೈದರಿ, ಪು.೨೮೬

೭. ಡಿರೋಮ್, ಪೂರ್ವೋಕ್ತ, ಪು.೧೮೩

೮. ಮೂರ್, ಪೂರ್ವೋಕ್ತ, ಪು.೪೫೯

೯. ಫ್ರಾನ್ಸಿಸ್ ಬುಕಾನನ್, ಪೂರ್ವೋಕ್ತ, ಪು.೧೮೦

೧೦. ಷೇಕ್ ಅಲಿ ಬಿ., ಪೂರ್ವೋಕ್ತ, ಪು.೪೮೧

೧೧. ಕರ್ನಾಟಕ ವಿಮೋಚನಾ ರಂಗ, ಪೂರ್ವೋಕ್ತ, ಪು.೩೮

೧೨. ಅದೇ, ಪು.೩೬

೧೩. ಬರನ್ ಡೇ, ಏಶಿಯಾಟಿಕಲ್ ಆನ್ಯುವಲ್ ರಿಜಿಸ್ಟರ್ ಫಾರ್, ೧೭೯೯, ಲಂಡನ್, ೧೮೦೧, ಪು.೯೬

೧೪. ಫ್ರಾನ್ಸಿಸ್ ಬುಕಾನನ್, ಪೂರ್ವೋಕ್ತ, ಸಂಪುಟ ೧, ಪು.೭೦

೧೫. ಷೇಕ್ ಅಲಿ ಬಿ, ಪೂರ್ವೋಕ್ತ, ಕರ್ನಾಟಕ ಚರಿತ್ರೆ, ಸಂ.೫, ಪು.೫೧೧

೧೬. ಮೇಜರ್ ಡಿರೋಮ್, ಎ ನರೇಟಿವ್ಸ್ ಆಫ್ ದಿ ಕ್ಯಾಂಪೈನ್ ಇನ್ ಇಂಡಿಯಾ ವಿಚ್ ಟರ್ಮಿನೇಟೆಡ್ ಇನ್ ದಿ ವಾರ್ ವಿತ್ ಟಿಪ್ಪು ಸುಲ್ತಾನ್, ೧೭೯೨, ಲಂಡನ್, ಎರಡನೆಯ ಆವೃತ್ತಿ, ೧೭೯೪, ಪು.೧೦೭

೧೭. ಮಿಲಿಟರಿ ಡಿಸ್ಪಾಚಸ್ ಟು ಇಂಗ್ಲೆಂಡ್ ೧೭೮೦-೧೮೦೦, ಪು.೧೮೭

೧೮. ಶಿವರಾಮಯ್ಯ, ಟಿಪ್ಪು ಸುಲ್ತಾನ್, ಧಾತ್ರಿ ಪ್ರಕಾಶನ ಮಾಲೆ ೫೯, ಬೆಂಗಳೂರು, ೨೦೧೧, ಪು.೧೨೪

೧೯. ಬಾರ್ಕೂರು ಉದಯ, ಪೂರ್ವೋಕ್ತ, ಪು.೮೬

೨೦. ನಂಬಿಯಾರ್ ಒ.ಕೆ., ಪೂರ್ವೋಕ್ತ, ಪು.೨೬

೨೧. ಅದೇ, ಪು.೧೪

೨೨. ಕರ್ನಾಟಕ ವಿಮೋಚನಾರಂಗ, ಪೂರ್ವೋಕ್ತ, ಪು.೩೭

೨೩. ಮಲಬಾರ್ ಜಾಯಿಂಟ್ ಕಮಿಷನರ್ ರಿಪೋರ್ಟ್, ಸಂಪುಟ ೧೩, ಪು.೧೨೪

೨೪. ಅದೇ, ಪು.೩೮

೨೫. ತಲಕಾಡು ಚಿಕ್ಕರಂಗೇಗೌಡ, ಟಿಪ್ಪು ಸುಲ್ತಾನ್, ಚಂದ್ರಗಿರಿ ಪ್ರಕಾಶನ, ಬೆಂಗಳೂರು, ೨೦೦೦, ಪು.೮೦–೮೧

೨೬. ಅದೇ, ಪು.೮೧

೨೭. ಸ್ಟುವರ್ಟ್, ಚಾರ್ಲ್ಸ್–ಟಿಪ್ಪು ಓರಿಯಂಟಲ್ ಲೈಬ್ರರಿ ಆ್ಯಂಡ್ ಮೆಮೋರೀಸ್ ಆಫ್ ಹೈದರ್ ಅಲಿ ಆ್ಯಂಡ್ ಟಿಪ್ಪು ಸುಲ್ತಾನ್, ಲಂಡನ್, ೧೮೦೯, ಪು.೨೦೩

೨೮. ಕರ್ನಾಟಕ ವಿಮೋಚನಾರಂಗ, ಪೂರ್ವೋಕ್ತ, ಪು.೩೮

೨೯. ತಲಕಾಡು ಚಿಕ್ಕರಂಗೇಗೌಡ, ಪೂರ್ವೋಕ್ತ, ಪು.೩೮

೩೦. ಷೇಕ್ ಅಲಿ ಬಿ., ಪೂರ್ವೋಕ್ತ, ಪು.೪೮೧–೪೮೨

೩೧. ರಾಜ್‌ಕುಮಾರ್, ನೇನಲ್ ಅಡ್ವೆಂಚರ್ ಆಫ್ ಟಿಪ್ಪು ಸುಲ್ತಾನ್, ಬೆಂಗಳೂರು, ೧೯೯೩, ಪು.೧೫೬

೩೨. ನಂಬಿಯಾರ್ ಒ.ಕೆ., ಮೈಸೂರು ನೇವಿ, ಪೂರ್ವೋಕ್ತ, ಪು.೨೬

೩೩. ಅದೇ, ಪು.೨೯–೩೦

೩೪. ಇರ್ಫಾನ್ ಹಬೀಬ್, ಕಾನ್‌ಪ್ರಾಂಟಿಂಗ್ ಕಲೋನಿಯಾಲಿಸಂ ರೆಸಿಸ್ಟೆನ್ಸ್ ಆ್ಯಂಡ್ ಮಾಡ್ರನೈಜೆಷನ್ ಅಂಡರ್ ಹೈದರಾ ಆ್ಯಂಡ್ ಟಿಪ್ಪು ಸುಲ್ತಾನ್, ತುಲಿಕಾ, ನ್ಯೂಡೆಲ್ಲಿ, ೧೯೯೯, ಪು.೧೭೭

೩೫. ಕೊರಟಿ ಶ್ರೀನಿವಾಸರಾವ್, ಹೈದರ್–ಟಿಪ್ಪು, ಪೂರ್ವೋಕ್ತ, ಪು.೪೮೭

ಅಧ್ಯಾಯ ಒಂಬತ್ತು

ಉಪಸಂಹಾರ

ಅಧ್ಯಾಯ ಒಂಬತ್ತು

ಉಪಸಂಹಾರ

ಭಾರತದ ಚರಿತ್ರೆಯಲ್ಲಿ ಟಿಪ್ಪುವಿಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಆಳ್ವಿಕೆಯನ್ನು ಅವಲೋಕಿಸಿದರೆ ಅವರು ಬಹುತೇಕ ಅವಧಿಯನ್ನು ಯುದ್ಧ ಭೂಮಿಯಲ್ಲೆ ಕಳೆದರು. ಬ್ರಿಟಿಷರ ವಸಾಹತುಶಾಹಿಯು ಬಲಗೊಳ್ಳುವುದನ್ನು ತಡೆಯಲು ಯತ್ನಿಸಿದರು. ಆದರೆ ಅದು ಕಷ್ಟಸಾಧ್ಯ ಎನ್ನುವುದು ತಿಳಿದಾಗ ಅಂತಿಮವಾಗಿ ಬ್ರಿಟಿಷರನ್ನು ಭಾರತದಿಂದಲೇ ಕಾಲ್ತೆಗೆಸುವ ನಿರ್ಧಾರ ಮಾಡಿದರು. ಸಮಕಾಲೀನ ಸಂದರ್ಭದ ಭಾರತೀಯ ರಾಜರುಗಳ ಒಕ್ಕೂಟವನ್ನು ರಚಿಸಲು ಮುಂದಾದರು. ಬ್ರಿಟಿಷರ ವಿರುದ್ಧ ಪ್ರಬಲ ವಿರೋಧಿ ಪಡೆ ರಚಿಸಲು ಸತತ ಪ್ರಯತ್ನ ನಡೆಸಿದರು. ಮುಖ್ಯವಾಗಿ ಹೈದರಾಬಾದಿನ ನಿಜಾಮ, ಆರ್ಕಾಟಿನ ನವಾಬರು, ಮರಾಠರು ಮತ್ತು ಹಲವು ಪಾಳೆಯಗಾರರನ್ನು ಸೇರಿಸಿ ಬ್ರಿಟಿಷ್ ವಿರೋಧಿ ಒಕ್ಕೂಟ ರಚಿಸಲು ನಡೆಸಿದ ಪ್ರಯತ್ನ ವಿಫಲವಾಯಿತು. ಇವರುಗಳು ಟಿಪ್ಪುವಿನ ರಾಜಕಾರಣದ ಸೂಕ್ಷ್ಮತೆಗಳನ್ನು ಅರ್ಥಮಾಡಿಕೊಳ್ಳುವ ಗೋಜಿಗೆ ಹೋಗಲಿಲ್ಲ. ಬದಲಾಗಿ ಟಿಪ್ಪುವನ್ನು ವಿರೋಧಿಸಿದರು. ಮೈಸೂರು ರಾಜ್ಯ ಸ್ವತಂತ್ರವಾಗಿ ತಲೆ ಎತ್ತುವುದನ್ನು ಇಚ್ಛಿಸಲಿಲ್ಲ. ಅದನ್ನು ಆಕ್ರಮಿಸುವ ಧೋರಣೆ ಹೊಂದಿದ್ದರು. ನಿಜಾಮ ಮತ್ತು ಮರಾಠರು ಬ್ರಿಟಿಷರಿಗೆ ಸಹಾಯ ಮಾಡಿದರು. ತಮ್ಮ ಸ್ವಾರ್ಥದ ಅಭಿಷ್ಟೆಗಳನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸಿದರು. ಬ್ರಿಟಿಷರ ಇಬ್ಬಗೆಯ ನೀತಿಯಾಗಲಿ, ರಾಜಕೀಯ ಹುನ್ನಾರಗಳಾಗಲಿ ಇವರಿಗೆ ಅರ್ಥವಾಗಲಿಲ್ಲ. ಭಾರತವನ್ನು ಒಂದು ರಾಷ್ಟ್ರವಾಗಿ ನೋಡುವ ಚಿಂತನೆಯೂ ಇರಲಿಲ್ಲ. ಭಾರತೀಯ ಅರಸರ ರಾಜಕೀಯ ಅನೈಕ್ಯತೆ ಬ್ರಿಟಿಷರಿಗೆ ವರದಾನವಾಯಿತು. ಹೈದರಾಲಿ ಮತ್ತು ಟಿಪ್ಪು ಭಾರತದಲ್ಲಿ ರಾಜಕೀಯ ಅಸ್ಥಿರತೆಯನ್ನು ಹೋಗಲಾಡಿಸಲು ಯತ್ನಿಸಿದರು. ಆದರೆ ಅದು ನಿರೀಕ್ಷಿತ ಫಲ ನೀಡಲಿಲ್ಲ. ಆದರೂ ಹೈದರ್ ಮತ್ತು ಟಿಪ್ಪು ಬ್ರಿಟಿಷರ ವಿರುದ್ಧ ಅವುಡುಕಚ್ಚಿ ಹೋರಾಡಿದರು.

ಟಿಪ್ಪುವಿನಲ್ಲಿ ದೂರದೃಷ್ಟಿಯಿತ್ತು. ಕ್ರೂರತ್ವ ಅವನ ನೈಜ ಗುಣವಾಗಿರಲಿಲ್ಲ. ತನ್ನ ರಾಜ್ಯ ಮತ್ತು ಅಧಿಕಾರದ ವಿರುದ್ಧ ಒಳಸಂಚು ಮಾಡಿದವರ ವಿರುದ್ಧ ಮಾತ್ರ ಕಠಿಣವಾಗಿ ವರ್ತಿಸಿದ.

ಪ್ರಜೆಗಳ ಯೋಗಕ್ಷೇಮವೇ ಅವನ ಧ್ಯೇಯವಾಗಿತ್ತು. ರಾಜ್ಯವನ್ನು ಶತ್ರುಗಳಿಂದ ರಕ್ಷಿಸಿಕೊಳ್ಳಲು ಸಮರ್ಥ ಸೈನ್ಯವನ್ನು ಕಟ್ಟಿ, ಮಿಲಿಟರಿ ಆಧುನೀಕರಣಕ್ಕೆ ಒತ್ತು ನೀಡಿದನು. ಟಿಪ್ಪು ನಡೆಸಿದ ಯುದ್ಧಗಳಲ್ಲಿ ಅವನ ಸೈನಿಕರು ಶಿಸ್ತಿನಿಂದಲೂ, ನಿಷ್ಠೆಯಿಂದಲೂ ವರ್ತಿಸಿದರು. ಟಿಪ್ಪು ಸೈನಿಕರು ಮತ್ತು ಜನರ ಮಧ್ಯೆ ಜನಪ್ರಿಯ ವ್ಯಕ್ತಿಯಾಗಿಯೇ ಜೀವಿತನಾದನು. ರಾಜ್ಯಾಡಳಿತವನ್ನು ಪಾಶ್ಚಾತ್ಯ ಮಾದರಿಯಲ್ಲಿ ಆಧುನೀಕರಿಸಲು ಇಚ್ಛಿಸಿದನು. ರಾಜ್ಯದ ಶೀಘ್ರಗತಿಯ ಪ್ರಗತಿಗೆ ಚಾಲನೆ ನೀಡಿದನು. ಫ್ರೆಂಚ್ ಮಾದರಿಯ ಆಧುನೀಕರಣಕ್ಕೆ ಒತ್ತು ನೀಡಿದನು. ಪಾಶ್ಚಿಮಾತ್ಯ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಅಪಾರ ಆಸಕ್ತಿ ತೋರಿದನು. ಅದನ್ನು ರಾಜ್ಯದ ಆರ್ಥಿಕಾಭಿವೃದ್ಧಿ ಮತ್ತು ಮಿಲಿಟರಿ ಬಲವರ್ಧನೆಗೆ ಅಳವಡಿಸಿಕೊಳ್ಳಲು ಶಕ್ತಿಮೀರಿ ಪ್ರಯತ್ನಿಸಿದನು. ಇವನ ಆಳ್ವಿಕೆಯಲ್ಲಿ ಕೃಷಿ, ವ್ಯಾಪಾರ, ಕೈಗಾರಿಕೆ ಇತ್ಯಾದಿ ವಲಯಗಳ ಆಧುನೀಕರಣಕ್ಕೆ ಚಾಲನೆ ದೊರೆಯಿತು. ಪಾಶ್ಚಾತ್ಯ ತಂತ್ರಜ್ಞರನ್ನು ರಾಜ್ಯಕ್ಕೆ ಆಹ್ವಾನಿಸಿದನು. ಆಡಳಿತದಲ್ಲಿ ಪಾಶ್ಚಾತ್ಯ ಮಾದರಿಗಳನ್ನು ಅಳವಡಿಸಿಕೊಂಡ ಭಾರತೀಯ ಅರಸರುಗಳಲ್ಲಿ ಟಿಪ್ಪು ಮೊದಲಿಗ. ಟಿಪ್ಪುವಿನ ಮನಸ್ಸು ಸದಾ ಚಟುವಟಿಕೆಯಿಂದಲೂ, ಕ್ರಿಯಾತ್ಮಕವಾಗಿಯೂ ಮತ್ತು ಹೊಸತನ್ನು ಹುಡುಕುವ ಕೌಶಲ್ಯದಿಂದ ಕೂಡಿತ್ತು. ರಾಜ್ಯದ ವ್ಯಾಪಾರ-ವಾಣಿಜ್ಯದ ವೃದ್ಧಿಗೆ ಅನೇಕ ಪ್ರಯೋಗಗಳನ್ನು ಮಾಡಿದನು. ಪ್ರತ್ಯೇಕ ವಾಣಿಜ್ಯ ಕಾಯಿದೆ ಜಾರಿಗೆ ತಂದನು. ದೇಶಿಯ ಮತ್ತು ಅಂತರ್ದೇಶಿಯ ವ್ಯಾಪಾರಕ್ಕೂ ಒತ್ತು ನೀಡಿದನು. ವ್ಯಾಪಾರದಲ್ಲಿ ಏಕಸ್ವಾಮ್ಯ ಸ್ಥಾಪಿಸಲು ಕ್ರಮಕೈಗೊಂಡನು. ರಫ್ತು ಮತ್ತು ಆಮದು ನೀತಿಯಲ್ಲಿ ಹಲವು ಸುಧಾರಣೆ ಮಾಡಿದನು. ಹೊಸ ನಾಣ್ಯಗಳ ಚಲಾವಣೆ, ಅಳತೆ ತೂಕ, ಹಣಕಾಸು, ಕಂದಾಯ, ತೆರಿಗೆ, ನ್ಯಾಯಾಂಗ, ಸೈನ್ಯ ಮತ್ತು ನೌಕಾಪಡೆ ಇವುಗಳ ಸುಧಾರಣೆಗೆ ಶ್ರಮಿಸಿದನು. ಮೈಸೂರು ಗೌರವಕ್ಕೆ ಪಾತ್ರವಾಗುವಂತಹ ವ್ಯಾಪಾರಿ ನೌಕಾಪಡೆ ಹೊಂದಿತೆಂಬ ಅಂಶ ಅನೇಕರಿಗೆ ತಿಳಿದಿರಲಾರದು. ರಾಜ್ಯದಲ್ಲಿ ಹಡಗುಕಟ್ಟುವ ಉದ್ದಿಮೆಗಳು ಹಾಗೂ ನೌಕಾಧಿಕಾರಿಗಳಿಗೆ ತರಬೇತಿ ನೀಡುವ ಶಾಲೆಗಳು ಇದ್ದವು.

ಟಿಪ್ಪು ರಾಜ್ಯದ ಕೃಷಿವಲಯದ ಪ್ರಗತಿಗೆ ಶೀಘ್ರಗತಿ ಸುಧಾರಣೆಗಳನ್ನು ರೂಪಿಸಿದನು. ಊಳಿಗಮಾನ್ಯ ಪದ್ಧತಿಯ ನಿರ್ಮೂಲನೆಗೆ ಹಲವು ಕ್ರಮಕೈಗೊಂಡನು. ಉಳುವವನೆ ಭೂಮಿಗೆ ಒಡೆಯ ಎಂಬ ತತ್ವವನ್ನು ಅನುಷ್ಠಾನಗೊಳಿಸಿದನು. ರಾಜ್ಯದ ಬಂಜರು ಭೂಮಿಯನ್ನು ಕೃಷಿ ಯೋಗ್ಯ ಭೂಮಿಯಾಗಿ ಪರಿವರ್ತಿಸಲು ಕ್ರಮಕೈಗೊಂಡನು. ಕಂದಾಯ ವಸೂಲಿಯಲ್ಲಿ ಮಧ್ಯವರ್ತಿ ದಲ್ಲಾಳಿಗಳ ಹಾವಳಿ ತಪ್ಪಿಸಿದನು. ಪ್ರತ್ಯೇಕ ಕಂದಾಯ ಅಧಿಕಾರಿಗಳನ್ನು ನೇಮಿಸಿದನು. ರೈತರಿಗೆ ಸಾಲಸೌಲಭ್ಯ ಕಲ್ಪಿಸಿದನು. ರಾಜ್ಯದಲ್ಲಿ ಮೊದಲಿಗೆ ರೇಷ್ಮೆ ಕೃಷಿಗೆ ಒತ್ತು ನೀಡಿದನು. ಸುಧಾರಿತ ಬಿತ್ತನೆ ಬೀಜನೆಗಳನ್ನು ರೈತರಿಗೆ ಒದಗಿಸಿದನು. ವಿವಿಧ ತಳಿಯ ಮಾವಿನ ಮರಗಳನ್ನು ಬೆಳೆಸಲು ಅಗತ್ಯ ನೆರವು ನೀಡಿದನು. ಬೆಂಗಳೂರಿನ ಲಾಲ್‌ಭಾಗ್‌ನಲ್ಲಿ ವಿವಿಧ ತಳಿಯ

ಮಾವಿನ ಮರಗಳನ್ನು ಬೆಳೆಸಲಾಯಿತು. ಕಾವೇರಿ ನದಿಗೆ ಒಡ್ಡುಗಳನ್ನು ನಿರ್ಮಿಸಿ ನೀರಾವರಿ ಸೌಲಭ್ಯ ಕಲ್ಪಿಸಿದನು. ಟಿಪ್ಪುವಿನ ರಾಜ್ಯದಲ್ಲಿ ಕೃಷಿ, ವ್ಯಾಪಾರ ಮತ್ತು ಕೈಗಾರಿಕೆ ಬಹುಸಮೃದ್ಧಿಯಾಗಿ ಪ್ರಗತಿ ಸಾಧಿಸಿದುದನ್ನು ನೋಡಿದರೆ ರಾಜ್ಯದ ಪ್ರಜೆಗಳಲ್ಲಿ ಸಾಮಾನ್ಯ ಸಂತೃಪ್ತಿ ಮತ್ತು ಸಂತೋಷಗಳು ಇತ್ತೆಂಬುದು ಅರ್ಥವಾಗುತ್ತದೆ.

ಟಿಪ್ಪು ಬ್ರಿಟಿಷರ ವಸಾಹತುಶಾಹಿಯ ವಿಸ್ತರಣೆಯನ್ನು ತಡೆಯಲು ಸ್ಥಳೀಯ ದೇಶಿಯ ಶಕ್ತಿಗಳು ಕೈಜೋಡಿಸದಿದ್ದಾಗ ವಿದೇಶಿಯ ಶಕ್ತಿಗಳ ನೆರವು ಯಾಚಿಸಿದನು. ಇದು ಅನಿವಾರ್ಯವೂ ಆಗಿತ್ತು. ಫ್ರಾನ್ಸ್, ಟರ್ಕಿ, ಆಫ್ಘಾನಿಸ್ತಾನ, ಇರಾನ್ ಇತ್ಯಾದಿ ರಾಷ್ಟ್ರಗಳೊಂದಿಗೆ ವ್ಯಾಪಾರ ಮತ್ತು ಮಿಲಿಟರಿ ಸಹಕಾರವನ್ನು ಪಡೆಯಲು ನಿರ್ಧರಿಸಿದನು. ರಾಯಭಾರ ಸಂಬಂಧಗಳನ್ನು ಏರ್ಪಡಿಸಿಕೊಂಡನು. ಅದರಲ್ಲೂ ಫ್ರಾನ್ಸಿನೊಂದಿಗೆ ನಿಕಟಸಂಪರ್ಕ ಹೊಂದಲು ಇಚ್ಛಿಸಿದನು. ಏಕೆಂದರೆ ಯುರೋಪಿನಲ್ಲಿ ಬ್ರಿಟನ್ ಮತ್ತು ಫ್ರಾನ್ಸ್ ಪ್ರತಿಸ್ಪರ್ಧಿಗಳಾಗಿ ಕಾದಾಡುತ್ತಿದ್ದವು. ಈ ಸೂಕ್ಷ್ಮತೆಗಳನ್ನು ಗಮನಿಸಿಯೇ ಟಿಪ್ಪು ಫ್ರಾನ್ಸಿಗೆ ರಾಯಭಾರ ನಿಯೋಗವನ್ನು ಕಳುಹಿಸಿದನು. ಇದರ ಹಿಂದೆ ಎರಡು ಉದ್ದೇಶಗಳಿದ್ದವು. ಮೊಲನೆಯದು ವ್ಯಾಪಾರ-ವಾಣಿಜ್ಯದ ಅಭಿವೃದ್ಧಿ, ಎರಡನೆಯದು ಸೈನಿಕ ನೆರವು ಪಡೆಯುವುದು. ಫ್ರಾನ್ಸಿನ ಚಕ್ರವರ್ತಿ ಹದಿನಾರನೆಯ ಲೂಯಿ ಅನಂತರ ನೆಪೋಲಿಯನ್ ಬೋನಾಪಾರ್ಟೆ ಇವರುಗಳೊಂದಿಗೆ ಪತ್ರವ್ಯವಹಾರ ನಡೆಸಿದ ರಾಯಭಾರಿಗಳ ನಿಯೋಗವನ್ನು ಕಳುಹಿಸಿದ. ಅಲ್ಲಿನ ಜಾಕೋಬಿನ್ ಕ್ಲಬ್ ಮಾದರಿಯನ್ನು ಶ್ರೀರಂಗಪಟ್ಟಣದಲ್ಲೂ ಸ್ಥಾಪಿಸಿದನು. ಫ್ರಾನ್ಸಿನ ತಂತ್ರಜ್ಞರನ್ನು ಹಾಗೂ ಕುಶಲಕರ್ಮಿಗಳನ್ನು ರಾಜ್ಯಕ್ಕೆ ಕರೆತರುವಂತೆ ರಾಯಭಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಿದ್ದನು. ರಾಜ್ಯವನ್ನು ಫ್ರೆಂಚ್ ಮಾದರಿಯಲ್ಲೆ ಆಧುನೀಕರಿಸಲು ಪ್ರಯತ್ನಿಸಿದನು. ಫ್ರಾನ್ಸಿನಿಂದ ಟಿಪ್ಪುವಿಗೆ ವ್ಯಾಪಾರ ವಾಣಿಜ್ಯಾಭಿವೃದ್ಧಿಗೆ ಅಲ್ಪ ನೆರವು ದೊರೆಯಿತು. ಸೈನಿಕ ನೆರವು ನಿರೀಕ್ಷಿತ ಫಲ ನೀಡಲಿಲ್ಲ. ಯುರೋಪಿನ ಶಕ್ತಿರಾಜಕಾರಣ ಹಾಗೂ ಅಲ್ಲಿನ ಒಪ್ಪಂದಗಳ ಪರಿಣಾಮಗಳು ಇಲ್ಲಿಯೂ ಪ್ರತಿಧ್ವನಿಸಿದವು.

ಟಿಪ್ಪುವಿನ ಭಾಷಾ ನೀತಿ ಮತ್ತು ಧಾರ್ಮಿಕ ನೀತಿಗಳು ಪ್ರಸ್ತುತ ಹೆಚ್ಚು ಚರ್ಚೆಗೆ ಗ್ರಾಸವಾಗಿದೆ. ಟಿಪ್ಪುವಿಗೆ ಕನ್ನಡ ವಿರೋಧಿ, ಹಿಂದೂ ವಿರೋಧಿ, ಕ್ರೂರಿ, ಮತಾಂಧ, ದೇಶದ್ರೋಹಿ ಎಂಬ ಹಣೆಪಟ್ಟಿ ಕಟ್ಟಲಾಗಿದೆ. ಟಿಪ್ಪುವಿನ ವ್ಯಕ್ತಿತ್ವ ಮತ್ತು ಆಡಳಿತ ಕುರಿತಾಗಿ ಹುಟ್ಟಿಕೊಂಡಿರುವ ಬೀಸು ಹೇಳಿಕೆಗಳು ಪರ-ವಿರುದ್ಧ ವಾದಗಳಿಗೆ ಎಡೆಮಾಡಿಕೊಟ್ಟಿದೆ. ಬ್ರಿಟಿಷ್ ವಸಾಹತುಶಾಹಿ ಬರಹಗಾರರು ಹಾಕಿಕೊಟ್ಟ ಹಾದಿಯಲ್ಲೆ ರಾಷ್ಟ್ರೀಯವಾದಿ ಚರಿತ್ರೆಕಾರರು ಸಾಗಿಬಂದರು. ಇವರ ಬರವಣಿಗೆಗಳಲ್ಲಿ ಬಹುತೇಕ ಟಿಪ್ಪು ಒಬ್ಬ ಮತಾಂಧ, ಕ್ರೂರಿ, ದೇಶದ್ರೋಹಿ ಎನ್ನುವ ರೀತಿಯಲ್ಲಿ ಮೂಡಿಬಂದಿದೆ. ಪ್ರಗತಿಪರರು, ಸಾಹಿತಿಗಳು, ಮಾರ್ಕ್ಸ್‌ವಾದಿ ಚಿಂತಕರುಗಳ ಬರವಣಿಗೆಗಳನ್ನು

ಗಮನಿಸಿದರೆ ಟಿಪ್ಪು ಮತಾಂಧನಲ್ಲ, ಧರ್ಮಸಹಿಷ್ಣು, ಜಾತ್ಯಾತೀತನೆಂದೂ, ರಾಷ್ಟ್ರೀಯವಾದಿಯೆಂದೂ ಬ್ರಿಟಿಷರ ವಿರುದ್ಧ ಚಿತ್ರಿಸದೆ ಹೋರಾಡಿದ ಸ್ವಾತಂತ್ರ್ಯ ವೀರನೆಂದೂ ಬರೆಯಲಾಗಿದೆ. ವರ್ತಮಾನದಲ್ಲಿ ಚಾರಿತ್ರಿಕ ಸಂಗತಿಗಳನ್ನು ರಾಜಕೀಕರಣಗೊಳಿಸುವ ಹುನ್ನಾರಗಳು ನಡೆಯುತ್ತಿದೆ. ಟಿಪ್ಪುವಿನ ಚರಿತ್ರೆ ಇದಕ್ಕೆ ಹೊರತಾಗಿಲ್ಲ. ರಾಜಕೀಯ ಪಕ್ಷಗಳು ಚುನಾವಣೆಗಳಲ್ಲಿ ಮತಗಳಿಕೆಗೆ ಚರಿತ್ರೆಯ ಸಂಗತಿ ಮತ್ತು ವ್ಯಕ್ತಿಗಳನ್ನು ಬಳಸಿಕೊಳ್ಳುವ ಪರಿಪಾಠ ಬೆಳೆದುಬಂದಿದೆ. ಇತ್ತೀಚೆಗೆ ಟಿಪ್ಪುವಿನ ಭಾಷಾನೀತಿ ಮತ್ತು ಧಾರ್ಮಿಕ ನೀತಿ ಹೆಚ್ಚು ಚರ್ಚೆಗೆ ಒಳಗಾಗುತ್ತಿದೆ. ವಿಧಾನಸಭೆ ಮತ್ತು ವಿಧಾನಪರಿಷತ್‌ನಲ್ಲಿ ಇದರ ಬಗ್ಗೆ ಪರ–ವಿರುದ್ಧದ ಕಾವೇರಿದ ಚರ್ಚೆಗಳು ನಡೆಯುತ್ತಿದೆ. ಇದಕ್ಕೆಲ್ಲ ಚರಿತ್ರೆಯೇ ಉತ್ತರ ಕೊಡಬೇಕಾಗಿದೆ. ಚರಿತ್ರೆಕಾರರು ಇನ್ನೂ ಹೆಚ್ಚು ಜವಾಬ್ದಾರಿಯಿಂದ ಉತ್ತರ ಕೊಡುವ ಅನಿವಾರ್ಯತೆ ಎದುರಾಗಿದೆ. ಚರಿತ್ರೆಯ ಸಂಗತಿಗಳನ್ನು ತಿರುಚಿದರೆ ಕೋಮುವಾದಕ್ಕೆ ಕಾರಣವಾಗುತ್ತದೆ. ಸಮಾಜದ ಸ್ವಾಸ್ಥ್ಯಕ್ಕೆ ಧಕ್ಕೆ ಬರುತ್ತದೆ. ಇದರಿಂದ ಚರಿತ್ರೆಕಾರರು ಧರ್ಮ, ಜಾತಿ ಮತ್ತು ಭಾಷಿಕ ವಿಚಾರಗಳನ್ನು ಸೂಕ್ಷ್ಮವಾಗಿಯೂ, ಗಂಭೀರವಾಗಿಯೂ ಆಲೋಚಿಸಿ ತಮ್ಮ ಅಗತ್ಯ ಅಭಿಪ್ರಾಯಗಳನ್ನು ವ್ಯಕ್ತಮಾಡಬೇಕಾಗುತ್ತದೆ.

ಟಿಪ್ಪುವಿನ ಚರಿತ್ರೆಯನ್ನು ಬರೆದ ಮಾರ್ಕ್‌ವಿಲ್ಕ್ಸ್ ತನ್ನ ಬರವಣಿಗೆಗಳಲ್ಲಿ ಟಿಪ್ಪು ಒಬ್ಬ ಅಸಹಿಷ್ಣು, ಮತಭ್ರಾಂತ, ಹಿಂದೂವಿರೋಧಿ ಎಂದು ವರ್ಣಿಸಿದನು. ಮುಂದಿನ ಚರಿತ್ರೆಕಾರರು ಇದನ್ನು ಯಥಾವತ್ತಾಗಿ ಬಿಂಬಿಸಿದರು. ವಸಾಹತುಶಾಹಿ ಚರಿತ್ರೆಕಾರರು ಬ್ರಿಟಿಷ್ ಪ್ರಭುತ್ವವನ್ನು ವೈಭವೀಕರಿಸುವ ಗುಂಗಿನಲ್ಲಿ ಟಿಪ್ಪುವಿನ ಆಳ್ವಿಕೆಯನ್ನು ಹೀಯಾಳಿಸುವ ಪ್ರಯತ್ನ ನಡೆಸಿದರು. ಅದಕ್ಕೆ ಕಾರಣವೂ ಇದೆ. ಭಾರತೀಯ ಅರಸರುಗಳಲ್ಲಿ ಬ್ರಿಟಿಷರ ವಸಾಹತುಶಾಹಿ ಸ್ಥಾಪನೆ ಮತ್ತು ವಿಸ್ತರಣೆಗೆ ಬಲವಾದ ತಡೆಗೋಡೆಯಂತಿದ್ದವರು ಹೈದರ್ ಮತ್ತು ಟಿಪ್ಪು. ಅದರಿಂದಲೇ ಬ್ರಿಟಿಷ್ ಚರಿತ್ರೆಕಾರರು ಇಬ್ಬರನ್ನು ತೆಗಳುವ ಚಾಳಿಯನ್ನು ಮುಂದುವರಿಸಿದರು. ಮಾರ್ಕ್ ವಿಲ್ಕ್ಸ್ ಬರವಣಿಗೆಯನ್ನು ಅನುಕರಿಸಿ ಬರೆಯುವ ಇತಿಹಾಸಕಾರರ ಬಹುದೊಡ್ಡ ಗುಂಪು ಜನ್ಮತಾಳಿತು. ಇವರು ವಸಾಹತುಶಾಹಿ ಪ್ರಭುತ್ವವನ್ನು ಪ್ರತಿನಿಧಿಸಿರುವುದು ಮತ್ತು ಭಾರತದ ಚರಿತ್ರೆಯನ್ನು ಪೂರ್ವಗ್ರಹದಿಂದಲೇ ನೋಡಿದ್ದಾರೆ. ಇಂಥವರಲ್ಲಿ ಮುಖ್ಯರಾದವರೆಂದರೆ ಎಲ್.ಬಿ.ಬೌರಿಂಗ್, ಬುಕಾನನ್, ಬಿಟ್ಸನ್, ಎಚ್.ಜಿ.ವೇಲ್ಸ್, ರೈಸ್, ಮಾರ್ಟಿನನ್, ಗ್ರೈನ್, ಮನ್ರೋ, ರಾಬ್ಸನ್, ಸಿ.ಎಚ್.ಫಿಲಿಪ್ಸ್, ಫಾಕ್ರಿಸ್ಟ್ ಡಾಡ್ವೆಲ್, ಹೆಂಡರ್ಸನ್, ಪರ್ಬಿಟ್ ಹೋಲ್ಡನ್, ಎಸ್.ಡಬ್ಲ್ಯೂ.ಲಾರೆನ್ಸ್, ಎಚ್.ಎಲ್.ವಿಲ್ಸನ್ ಮುಂತಾದವರು. ಬ್ರಿಟಿಷರ ಆಳ್ವಿಕೆಯನ್ನು ವೈಭವೀಕರಿಸುವ ಸೋಗಿನಲ್ಲಿ ಹೈದರಾಲಿ ಮತ್ತು ಟಿಪ್ಪುವಿನ ಮೇಲೆ ಟೀಕಾ ಪ್ರಹಾರ ನಡೆಸಿದರು. ಟಿಪ್ಪುವನ್ನು ಕ್ರೂರಿ, ಮತಾಂಧ, ದೇಶದ್ರೋಹಿ ಎಂದೇ ಪ್ರತಿಪಾದಿಸಿದರು. ದಿ ರೋಮ್, ಬೌಸ್, ಮಾಲ್ಕಂ, ಎಡ್ವರ್ಡ್ ಮೂರ್, ಗೂಡಲ್ ಕಿರ್ಕ್‌ಪ್ಯಾಟ್ರಿಕ್ ಟಿಪ್ಪುವನ್ನು ವಿರೋಧಿ ನೆಲೆಯಲ್ಲಿ ನೋಡಿದರು.

ದೇಶದ್ರೋಹಿ ಎಂದು ಬರೆದರೂ ಸಹ ಪರೋಕ್ಷವಾಗಿ ಟಿಪ್ಪು ಒಬ್ಬ ಒಳ್ಳೆಯ ಆಡಳಿತಗಾರ, ಆಧುನಿಕತೆಗೆ ಆದ್ಯತೆ, ಒತ್ತು ನೀಡಿ ರಾಜ್ಯದ ಶೀಘ್ರಗತಿಯ ಪ್ರಗತಿಗೆ ಶ್ರಮಿಸಿದ ಎಂದು ಬರೆದಿದ್ದಾರೆ. ಭಾರತದ ರಾಷ್ಟ್ರೀಯವಾದಿ ಚರಿತ್ರಕಾರರು ಟಿಪ್ಪು ಕುರಿತು ಅವನೊಬ್ಬ ಮತಾಂಧ, ಹಿಂದೂ ವಿರೋಧಿ, ಅಸಂಖ್ಯಾತ ಅನ್ಯಧರ್ಮದ ಪ್ರಜೆಗಳನ್ನು ಬಲವಂತವಾಗಿ ಇಸ್ಲಾಂಗೆ ಮತಾಂತರ ಮಾಡಿದ ಎಂದೂ ಟೀಕಿಸಿದ್ದಾರೆ. ಇನ್ನು ಭಾಷಿಕ ವಿಷಯಕ್ಕೆ ಬಂದಾಗ ಪರ್ಶಿಯನ್ ಭಾಷೆಗೆ ಹೆಚ್ಚು ಒತ್ತು ನೀಡಿದ, ಭಾರತೀಯ ಭಾಷೆಗಳ ಬಗ್ಗೆ ಒಲವು ಕಡಿಮೆಯಿತ್ತು, ಅದರಲ್ಲೂ ಕನ್ನಡ ಭಾಷಾ ವಿರೋಧಿಯಾಗಿದ್ದ ಎಂದೂ ಆರೋಪಿಸಿದರು. ಇದು ಸತ್ಯಕ್ಕೆ ದೂರವಾದುದು. ಟಿಪ್ಪು ಶೃಂಗೇರಿ ಸ್ವಾಮಿಗಳಿಗೆ ಬರೆದ ಪತ್ರಗಳನ್ನು ಗಮನಿಸಿದರೆ ಟಿಪ್ಪು ಹಿಂದೂಧರ್ಮ ಮತ್ತು ದೇವಾನುದೇವತೆಗಳ ಬಗ್ಗೆ ತೋರಿದ ಔದಾರ್ಯ, ಭಕ್ತಿಭಾವಗಳು ತಿಳಿಯುತ್ತದೆ. ರಾಜ್ಯಕ್ಕೆ ಗಂಡಾಂತರ ಬಂದಾಗ ರಾಜ್ಯದ ಪ್ರಜೆಗಳ ಒಳತಿಗಾಗಿ ಪ್ರಾರ್ಥಿಸುವಂತೆ ಶೃಂಗೇರಿ ಪೀಠಾಧಿಪತಿಗಳಿಗೆ ಮನವಿ ಮಾಡಿದ. ಮರಾಠರು ಶೃಂಗೇರಿಯನ್ನು ಮುತ್ತಿ ಅಲ್ಲಿನ ದೇವಾಲಯಗಳಿಗೆ ಹಾನಿವುಂಟು ಮಾಡಲು ಪ್ರಯತ್ನಿಸಿದಾಗ ಟಿಪ್ಪು ಮರಾಠರ ಪ್ರಯತ್ನವನ್ನು ವಿಫಲಗೊಳಿಸಿದ. ಶೃಂಗೇರಿ ಮಠಕ್ಕೆ ಅಪಾರ ದಾನದತ್ತಿ ನೀಡಿದನು. ಆಡಳಿತದ ಅನೇಕ ವಿಚಾರಗಳಿಗೆ ಸಲಹೆ ಪಡೆಯಲು ಹಿಂದೂ ಜೋತಿಷಿಗಳನ್ನು ಆಸ್ಥಾನಕ್ಕೆ ಆಹ್ವಾನಿಸುತ್ತಿದ್ದನು. ಬ್ರಾಹ್ಮಣರಿಗೆ ಔತಣಕೂಟಗಳನ್ನು ಏರ್ಪಡಿಸುತ್ತಿದ್ದನು. ಶ್ರೀರಂಗಪಟ್ಟಣದ ಆರಾಧ್ಯ ದೈವ ಶ್ರೀರಂಗನಾಥನಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದನು. ಕೊಡಗಿನಲ್ಲಿದ್ದ ಹಿಂದೂಗಳನ್ನು ಹಾಗೂ ಮಲಬಾರಿನ ನಾಯರ್‌ಗಳನ್ನು ಹಿಂಸಿಸಿದನು. ಮಾಪಿಳ್ಳೆಗಳನ್ನು ಹಾಗೂ ಮಂಗಳೂರಿನ ಕ್ರೈಸ್ತರನ್ನು ಬಲವಂತವಾಗಿ ಮತಾಂತರ ಮಾಡಿಸಿದನು. ಅದು ರಾಜಕೀಯ ಕಾರಣಕೋಸ್ಕರ. ಅವರು ಬ್ರಿಟಿಷರ ಪರವಾಗಿ ಟಿಪ್ಪು ವಿರುದ್ಧ ಕೆಲಸ ಮಾಡಿದರು. ಅದಕ್ಕೆ ಕಠಿಣವಾಗಿ ವರ್ತಿಸಿದನು. ತನ್ನ ವಿರುದ್ಧ ಅಪರಾಧ ಎಸಗಿದ ಸ್ವಧರ್ಮಿಯರನ್ನು ಅಷ್ಟೇ ಕಠಿಣವಾಗಿ ಶಿಕ್ಷಿಸಿದನು. ಮಾಪಿಳ್ಳೆಗಳು, ಮಹದೀವಿಗಳು, ಕರ್ನೂಲು ಮತ್ತು ಸವಣೂರಿನ ನವಾಬರನ್ನು ಶಿಕ್ಷಿಸಿದ. ಮರಾಠರಿಗಿಂತಲೂ ಟಿಪ್ಪುವಿಗೆ ಹೈದರಾಬಾದಿನ ನಿಜಾಮನ ಮೇಲೆ ಹೆಚ್ಚು ಕೋಪವಿತ್ತು. ಟಿಪ್ಪುವಿನ ಆಡಳಿತದಲ್ಲಿ ಹಲವು ಹಿಂದೂ ಅಧಿಕಾರಿಗಳಿದ್ದರು. ಪೂರ್ಣಯ್ಯನವರಿಗೆ ಪ್ರಧಾನ ಸ್ಥಾನ ಕಲ್ಪಿಸಿದನು. ಇದೆಲ್ಲವನ್ನು ಗಮನಿಸಿದರೆ ಟಿಪ್ಪುವಿನ ಧರ್ಮಸಹಿಷ್ಣುತೆ ಸ್ಪಷ್ಟಪಡುತ್ತದೆ.

ಮೊಗಲ್ ಚಕ್ರವರ್ತಿಯಿಂದ ತನ್ನ ಸ್ಥಾನಕ್ಕೆ ಒಪ್ಪಿಗೆ ಸಿಗದಿದ್ದಾಗ ಅವನು ಟರ್ಕಿಯ ಸುಲ್ತಾನನ ಬಳಿಗೆ ರಾಯಭಾರ ನಿಯೋಗ ಕಳುಹಿಸಿದನು. ಇದು ಕೇವಲ ಧಾರ್ಮಿಕ ಉದ್ದೇಶವಾಗಿರದೆ ರಾಜಕೀಯ ಹಿತಾಸಕ್ತಿ, ವ್ಯಾಪಾರ, ಕೈಗಾರಿಕೆ ಅಭಿವೃದ್ಧಿ ಮತ್ತು ಸೈನಿಕ ನೆರವು ಪಡೆಯುವುದಾಗಿತ್ತು. ಆಟೋಮನ್ ಸುಲ್ತಾನನಿಂದ ನಿರೀಕ್ಷಿತ ಫಲ ದೊರೆಯಲಿಲ್ಲ. ಆಫ್ಘಾನಿಸ್ತಾನದ

ಜಮಲ್ ಹಾಗೂ ಸಹಾಯ ನೀಡುವಂತೆ ಮನವಿ ಮಾಡಿದನು. ಬ್ರಿಟಿಷರ ಇಬ್ಬಗೆಯ ನೀತಿಯಿಂದ ಅದು ಕೈಗೂಡಲಿಲ್ಲ. ಭಾರತದಿಂದ ಬ್ರಿಟಿಷರನ್ನು ಕಾಲ್ತೆಗೆಸಲು ಇಸ್ಲಾಮಿಕ್ ಸುಲ್ತಾನರುಗಳ ಸಹಾಯ ಕೋರಿದುದು ವಾಸ್ತವವೇ ಆದರೂ ಬ್ರಿಟಿಷರ ಹಂಗಿನಲ್ಲಿದ್ದ ಅವರ್‍ಯಾರೂ ಸಹಾಯ ಮಾಡುವ ಸ್ಥಿತಿಯಲ್ಲಿರಲಿಲ್ಲ. ಇದನ್ನು ಸೂಕ್ಷ್ಮತೆಯಿಂದ ಒರೆಹಚ್ಚಿದರೆ ಟಿಪ್ಪುವಿನ ಮತೀಯ ಒಲವು ಕೆಲಸ ಮಾಡಲಿಲ್ಲ ಎಂಬ ನಿರ್ಧಾರಕ್ಕೆ ಬರಬಹುದು.

ವಾಸ್ತವವಾಗಿ ಟಿಪ್ಪು ಮೂಲಭೂತವಾದಿ ಇಸ್ಲಾಂ ಧರ್ಮವನ್ನು ಅನುಕರಿಸಲಿಲ್ಲ. ಬದಲಿಗೆ ಸುಧಾರಿತ ಇಸ್ಲಾಂ ಧರ್ಮ ಪ್ರತಿನಿಧಿಸುವ ಸೂಫಿ ಪಂಥವನ್ನು ಅನುಸರಿಸಿದನು. ಟಿಪ್ಪುವಿನ ಹೆಸರೇ ಟಿಪ್ಪು ಜಾಲಿಯಾ ಎಂಬ ಸೂಫಿ ಪಂಥದ ಧರ್ಮಪ್ರಚಾರಕರ ಹೆಸರಿನಿಂದ ಪಡೆದದ್ದು. ಟಿಪ್ಪುವಿನ ಗ್ರಂಥಾಲಯದಲ್ಲಿ ಹಲವಾರು ಸೂಫಿ ಪಂಥದ ಧರ್ಮಗ್ರಂಥಗಳಿದ್ದವು. ಟಿಪ್ಪು ಸೂಫಿ ಸಂತರಾದ ಖ್ವಾಜ ಬಂದೇ ನವಾಜರಂಥ ಸುಧಾರಕರ ಅನುಯಾಯಿಯಾಗಿದ್ದ. ಹೈದರಾಲಿಯಾಗಲಿ, ಟಿಪ್ಪುವಾಗಲಿ ಮತಾಂಧರೂ ಆಗಿರಲಿಲ್ಲ, ಹಿಂದೂ ಅಥವಾ ಕ್ರಿಶ್ಚಿಯನ್ ಧರ್ಮವಿರೋಧಿಗಳೂ ಆಗಿರಲಿಲ್ಲ. ಅವರ ಜೀವನ ಧ್ಯೇಯ ಬ್ರಿಟಿಷರನ್ನು ಭಾರತದಿಂದ ಹೊಡೆದೋಡಿಸಿ ಕರ್ನಾಟಕದ ಐತಿಹಾಸಿಕ ಮುನ್ನಡೆಗೆ ತ್ವರಿತಗತಿ ಒದಗಿಸುವುದೇ ಆಗಿತ್ತು.

ಟಿಪ್ಪುವಿನ ಭಾಷಾ ನೀತಿಯು ಹೆಚ್ಚು ಟೀಕೆಗೆ ಒಳಗಾಗಿದೆ. ಟಿಪ್ಪು ಕನ್ನಡ ವಿರೋಧಿಯಾಗಿದ್ದ ಎಂಬ ವಿವಾದ ಇತ್ತೀಚೆಗೆ ಹುಟ್ಟಿಕೊಂಡಿದೆ. ಇದರ ಬಗ್ಗೆ ಕರ್ನಾಟಕದ ವಿಧಾನಮಂಡಲ ಮತ್ತು ವಿಧಾನಪರಿಷತ್‌ನಲ್ಲಿಯೂ ಚರ್ಚೆಗಳು ನಡೆದಿವೆ. ಸಾರ್ವಜನಿಕವಾಗಿಯೂ ಟಿಪ್ಪುವಿನ ಭಾಷಾ ನೀತಿ ಹೆಚ್ಚು ಚರ್ಚೆಗೆ ಗ್ರಾಸವಾಗಿದೆ. ಸಮಾಜದ ಚಿಂತಕರು, ಪ್ರಗತಿಪರರು, ಸಾಹಿತಿಗಳು, ರಾಜಕಾರಣಿಗಳು ಹಾಗೂ ಚರಿತ್ರೆಕಾರರು ತಮ್ಮ ಧೋರಣೆಗಳನ್ನು ವ್ಯಕ್ತಪಡಿಸಿದ್ದಾರೆ. ಇವರ ವಾದಗಳಿಗೆ ಚರಿತ್ರೆಯೇ ಉತ್ತರ ನೀಡುತ್ತದೆ. ಹೈದರಾಲಿ ಮತ್ತು ಟಿಪ್ಪು ಪರ್ಶಿಯನ್ ಭಾಷೆಯನ್ನು ಪೋಷಿಸಿದರು. ಟಿಪ್ಪು ತನ್ನ ಓದುವ, ಬರೆಯುವ ಹಾಗೂ ವಿದ್ವಾಂಸರನ್ನು ಪೋಷಿಸುವ ಕಾರ್ಯದಲ್ಲಿ ಎಂದೂ ಹಿಂದೆ ಬಿದ್ದವನಲ್ಲ. ರಾಜ್ಯದಲ್ಲಿ ಗ್ರಂಥ ಭಂಡಾರವನ್ನು ಸ್ಥಾಪಿಸಿದನು. ಭಾರತದಲ್ಲಿ ಮೊದಲಿಗೆ ಉರ್ದು ಪತ್ರಿಕೆಯೊಂದನ್ನು ಪ್ರಕಟಿಸಿದನು. ಟಿಪ್ಪುವಿನ ಖಾಸಗಿ ಗ್ರಂಥ ಭಂಡಾರದಲ್ಲಿ ಅರೆಬಿಕ್, ಪರ್ಶಿಯನ್, ಉರ್ದು, ದಖ್ಖನಿ, ತುರ್ಕಿ ಮುಂತಾದ ಭಾಷೆಗಳ ನೂರಾತೊಂಬತ್ತು ಹಸ್ತಪ್ರತಿಗಳಿದ್ದವು. ಅವನ ಗ್ರಂಥಭಂಡಾರವನ್ನು ಬ್ರಿಟಿಷರು ೧೮೦೦ರಲ್ಲಿ ಕಲ್ಕತ್ತಕ್ಕೆ ಸಾಗಿಸಿ ನಂತರ ಇಂಗ್ಲೆಂಡಿಗೆ ಕೊಂಡೊಯ್ದರು. ಟಿಪ್ಪು ಆಡಳಿತಾವಧಿಯಲ್ಲಿ ೪೫ ಗ್ರಂಥಗಳನ್ನು ಬರೆಯಿಸಿದನು. ಟಿಪ್ಪುವಿನ ಆಳ್ವಿಕೆಯಲ್ಲಿ ಪರ್ಶಿಯನ್ ಅಧಿಕೃತ ಭಾಷೆಯಾಗಿತ್ತು. ಟಿಪ್ಪು ಕೆಲವು ಊರುಗಳ ಹೆಸರುಗಳನ್ನು ಪರ್ಶಿಯನ್‌ಗೆ ಬದಲಿಸಿದನು. ಒಳಾಡಳಿತದಲ್ಲಿ ಟಿಪ್ಪು ಪ್ರಾದೇಶಿಕ ಭಾಷೆಗಳಾದ ಕನ್ನಡ, ತಮಿಳು, ಮರಾಠಿ, ಮಲೆಯಾಳಿ ಭಾಷೆಗಳನ್ನು ಬಳಸುತ್ತಿದ್ದುದು

ಕಂಡುಬರುತ್ತದೆ. ಟಿಪ್ಪು ಶೃಂಗೇರಿ ಮಠಕ್ಕೆ ಬರೆದ ಪತ್ರಗಳು ಕನ್ನಡದಲ್ಲಿವೆ. ಇದನ್ನು ಗಮನಿಸಿದರೆ ಟಿಪ್ಪು ಕನ್ನಡ ವಿರೋಧಿಯಾಗಿರಲಿಲ್ಲ ಎಂಬ ವಾಸ್ತವಾಂಶ ತಿಳಿಯುತ್ತದೆ.

ಟಿಪ್ಪು ಮೈಸೂರು ರಾಜ್ಯದ ಪ್ರಜೆಗಳಿಗೆ ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿದನು. ಬ್ರಾಹ್ಮಣಶಾಹಿಗಳು ಶೂದ್ರವರ್ಗಕ್ಕೆ ನೀಡುತ್ತಿದ್ದ ಕಿರುಕುಳ ತಪ್ಪಿಸಿದನು. ಬ್ರಾಹ್ಮಣರ ವಶದಲ್ಲಿದ್ದ ಹೆಚ್ಚುವರಿ ಭೂಮಿಯನ್ನು ದಲಿತರಿಗೆ ಹಂಚಿದನು. ಸೈನಿಕರಿಗೂ ಭೂಮಿ ನೀಡುವ ಪದ್ಧತಿ ಜಾರಿ ಮಾಡಿದನು. ತನ್ನ ಮೂರು ಲಕ್ಷ ಸೈನಿಕರಿಗೆ ಭೂಮಿಯನ್ನು ಹಂಚಿದನು. ಈ ಸೈನಿಕರು ಯುದ್ಧಾನಂತರದ ಅವಧಿಯಲ್ಲಿ ಕೃಷಿಯನ್ನು ಮಾಡುತ್ತಿದ್ದರು. ರಾಜ್ಯದಲ್ಲಿ ಮದ್ಯಪಾನ ಮತ್ತು ವೇಶ್ಯಾವಾಟಿಕೆಯನ್ನು ನಿಷೇಧಿಸಿದನು. ರೈತರು ಹಾಗೂ ಶೂದ್ರ ಮಕ್ಕಳಿಗೆ ಶಿಕ್ಷಣ ಕಡ್ಡಾಯ ಮಾಡಿ ಮಠಗಳಿಂದ ಅಕ್ಷರ ನೀಡುವಂತೆ ಮಾಡಿದನು. ಟಿಪ್ಪುವಿನ ಈ ಸುಧಾರಣಾ ಕ್ರಮಗಳಿಂದ ಮೈಸೂರು ಭಾಗದ ದಲಿತರು ಮುನ್ನಡೆ ಸಾಧಿಸಲು ಸಹಕಾರಿಯಾಯಿತು.

ಮೈಸೂರು ರಾಜ್ಯವನ್ನು ಬ್ರಿಟಿಷರ ಮುಷ್ಠಿಯಿಂದ ಬಿಡಿಸಲು ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ನಾಲ್ಕು ಹಂತದಲ್ಲಿ ಯುದ್ಧಗಳನ್ನು ನಡೆಸಿದರು. ಬ್ರಿಟಿಷರು ಸುಸಜ್ಜಿತವಾದ ಸೈನ್ಯವನ್ನು ಹೊಂದಿದ್ದರು. ಭೂ ಸಮರ ಮತ್ತು ನೌಕಾ ಸಮರದಲ್ಲಿ ಬ್ರಿಟನ್ ಪ್ರೌಢಿಮೆಯನ್ನು ಸಾಧಿಸಿತ್ತು. ಕಡಲ ರಾಣಿ ಎಂಬ ಹೆಗ್ಗಳಿಕೆಯು ಅದಕ್ಕಿತ್ತು. ಬ್ರಿಟಿಷರದ್ದು ದುರಾಕ್ರಮಣ ನೀತಿಯಾಗಿತ್ತು. ಇಡೀ ಭಾರತವನ್ನು ತನ್ನ ಕೈವಶ ಮಾಡಿಕೊಳ್ಳಲು ಹತ್ತು ಹಲವು ತಂತ್ರಗಾರಿಕೆಗಳನ್ನು ಬಳಸಿದರು. ಆರ್ಥಿಕ ಸಂಪತ್ತನ್ನು ಕೊಳ್ಳೆ ಹೊಡೆದರು. ಭಾರತದ ರಾಜರುಗಳ ಆಂತರಿಕ ರಾಜಕಾರಣದಲ್ಲಿ ಪ್ರವೇಶಿಸಿ ಲಾಭ ಮಾಡಿಕೊಳ್ಳುತ್ತಿದ್ದರು. ಇಲ್ಲಿನ ಆಳರಸರ ವೈಷಮ್ಯಗಳನ್ನು ತನ್ನ ಪ್ರಭುತ್ವ ಸ್ಥಾಪನೆಗೆ ಬಳಸಿದರು. ಬ್ರಿಟಿಷರನ್ನು ಇಲ್ಲಿಂದ ಕಾಲ್ತೆಗೆಸಲು ಹೈದರ್ ಮತ್ತು ಟಿಪ್ಪು ವೀರೋಚಿತ ಹೋರಾಟಗಳನ್ನು ನಡೆಸಿದರು. ಮೈಸೂರು ರಾಜ್ಯದಲ್ಲಿ ಶಿಸ್ತುಬದ್ಧವಾದ ಸೈನ್ಯವನ್ನು ಕಟ್ಟಿದರು. ನೌಕಾ ಪಡೆಯ ಬಲವರ್ಧನೆಗೆ ಚಾಲನೆ ನೀಡಿದರು. ಟಿಪ್ಪು ಸ್ವತಃ ರಾಕೆಟ್ ತಂತ್ರಜ್ಞಾನವನ್ನು ಆವಿಷ್ಕರಿಸಿದನು. ಭಾರತದಲ್ಲಿ ಮೊದಲಬಾರಿಗೆ ಕ್ಷಿಪಣಿ ತಂತ್ರಜ್ಞಾನ ಪರಿಚಯಿಸಿದ ಕೀರ್ತಿ ಟಿಪ್ಪುಗೆ ಸಲ್ಲುತ್ತದೆ. ರಾಜ್ಯದ ಹಲವು ಕಡೆ ಶಸ್ತ್ರಾಸ್ತ್ರಗಳನ್ನು ಸಂರಕ್ಷಿಸಿಡುವ ಉಗ್ರಾಣಗಳನ್ನು ಸ್ಥಾಪಿಸಿದ. ಟಿಪ್ಪು ಮೂರು ಮತ್ತು ನಾಲ್ಕನೆಯ ಆಂಗ್ಲೋ–ಮೈಸೂರು ಯುದ್ಧಗಳಲ್ಲಿ ಬ್ರಿಟಿಷರ ವಿರುದ್ಧ ಹಲವು ರಣತಂತ್ರಗಳನ್ನು ರೂಪಿಸಿದನು. ತನ್ನ ಮಕ್ಕಳನ್ನೆ ಬ್ರಿಟಿಷರಿಗೆ ಒತ್ತೆಯಿಟ್ಟು ರಾಜ್ಯದ ಸ್ವಾತಂತ್ರ್ಯವನ್ನು ಉಳಿಸಲು ಪ್ರಯತ್ನಿಸಿದನು. ಫ್ರಾನ್ಸ್ ಸೈನಿಕರ ನೆರವು ಪಡೆದು ಬ್ರಿಟಿಷರನ್ನು ನಿರ್ಣಾಯಕವಾಗಿ ಸೋಲಿಸಲು ಟಿಪ್ಪು ನಡೆಸಿದ ಸಂಧಾನಗಳು ಹಾಗೂ ರಾಯಭಾರ ಸಂಬಂಧಗಳು ಅವನ ದೂರದೃಷ್ಟಿತನವನ್ನು ತೋರಿಸುತ್ತದೆ.

ಅಧ್ಯಯನದ ಫಲಿತಗಳು

೧. ಮೈಸೂರು ರಾಜ್ಯವನ್ನು ಆಕ್ರಮಿಸಲು ಬ್ರಿಟಿಷರು ನಡೆಸಿದ ರಾಜಕೀಯ ಹುನ್ನಾರಗಳು, ಇಡೀ ದಕ್ಷಿಣ ಭಾರತದ ರಾಜಕಾರಣವನ್ನು ತಮ್ಮ ಪ್ರಭುತ್ವ ಸ್ಥಾಪನೆಗೆ ಮತ್ತು ವಸಾಹತು ವಿಸ್ತರಣೆ ಬಳಸಿಕೊಂಡ ಬಗೆ ತಮ್ಮ ವಸಾಹತುಶಾಹಿಯ ವಿಸ್ತರಣೆಗೆ ತಡೆಯೊಡ್ಡಿದ ಹೈದರಾಲಿ ಮತ್ತು ಟಿಪ್ಪು ಸುಲ್ತಾನರನ್ನು ನಿರ್ಣಾಯಕವಾಗಿ ಮುಗಿಸಲು ವ್ಯೂಹ ರಚಿಸಿರುವುದು, ಒಡೆಯರ ಮನೆತನಕ್ಕೆ ಮರಳಿ ಅಧಿಕಾರ ಗಿಟ್ಟಿಸುವಲ್ಲಿ ರಾಣಿ ಲಕ್ಷ್ಮಮ್ಮಣ್ಣಿ ಬ್ರಿಟಿಷರೊಂದಿಗೆ ಸಹಾಯಕ ಒಪ್ಪಂದಗಳನ್ನು ಏರ್ಪಡಿಸಿಕೊಂಡಿದ್ದು, ಈ ಎಲ್ಲ ಸಂದರ್ಭಗಳನ್ನು ಬ್ರಿಟಿಷರು ಲಾಭ–ನಷ್ಟದ ಪರಿಧಿಯೊಳಗೆ ಹೇಗೆ ತೀರ್ಮಾನಿಸಿದರು ಎಂಬುದನ್ನು ಮಹಾಪ್ರಬಂಧದಲ್ಲಿ ಗ್ರಹಿಸಲಾಗಿದೆ.

೨. ಬ್ರಿಟಿಷರು ಈಸ್ಟ್ ಇಂಡಿಯಾ ಕಂಪನಿಯನ್ನು ಉತ್ಕೃಷ್ಟ ಲಾಭ ತಂದುಕೊಡುವ ಸಂಸ್ಥೆಯಾಗಿ ಬೆಳೆಸಲು ಮತ್ತು ಪ್ರಭುತ್ವ ಸ್ಥಾಪಿಸಲು ಹಲವು ಬೋಧನೋಪಾಯ ನೀತಿಗಳನ್ನು ಜಾರಿಗೆ ತಂದರು. ಒಡೆದು ಆಳುವ ನೀತಿಯೇ ಅವರ ರಾಜಕೀಯ ಅಜೆಂಡವಾಯಿತು. ಭಾರತೀಯ ಅರಸರುಗಳ ಬಲವನ್ನು ದುರ್ಬಲಗೊಳಿಸಲು ಸಹಾಯಕ ಸೈನ್ಯ ಪದ್ಧತಿ ಜಾರಿಗೊಳಿಸಿದರು. ಬ್ರಿಟಿಷರ ಈ ಸೂಕ್ಷ್ಮ ಸಂವೇದನೆಗಳನ್ನು ಅರ್ಥಮಾಡಿಕೊಳ್ಳುವ ಶಕ್ತಿ ಬಹುತೇಕ ಅರಸರಿಗಿರಲಿಲ್ಲ. ಆದರೆ ಟಿಪ್ಪು ಬ್ರಿಟಿಷರ ಸೋಗಲಾಡಿತನದ ಬಗ್ಗೆ ತೀಕ್ಷಣವಾಗಿ ಎಚ್ಚರವಹಿಸಿದ ಹಾಗೂ ಇತರೆ ಸ್ಥಳೀಯ ಅರಸರಿಗೂ ಅರ್ಥೈಸುವ ಪ್ರಯತ್ನ ಮಾಡಿದರೂ ಪ್ರಯೋಜನವಾಗಲಿಲ್ಲ. ಏಕೆಂದರೆ ಸ್ವಾರ್ಥ ಅಧಿಕಾರದ ಅಮಲಿನಿಂದ ರಾಜಕೀಯ ಅನೈಕತೆಯ ಪ್ರಗಾತಕ್ಕೆ ಒಳಗಾಗಿದ್ದ ಹಲವು ರಾಜರುಗಳು ಇದರಿಂದ ಹೊರಬರಲಿಲ್ಲ. ಬ್ರಿಟಿಷರ ದುಷ್ಟ ನೀತಿಗಳನ್ನು ಅರ್ಥಮಾಡಿಕೊಳ್ಳುವ ಶಕ್ತಿಯನ್ನೆ ಕಳೆದುಕೊಂಡಿದ್ದರು. ಇದರ ಲಾಭವು ಬ್ರಿಟಿಷರಿಗೆ ಆಯಿತು ಎಂಬುದನ್ನು ಕಂಡುಕೊಳ್ಳಲಾಗಿದೆ.

೩. ಟಿಪ್ಪು ತನ್ನ ಕೊನೆಯ ಉಸಿರಿರುವವರೆವಿಗೂ ಬ್ರಿಟಿಷರ ರಾಜಕೀಯ ಕುತಂತ್ರಗಳಿಗೆ ಮಣಿಯಲಿಲ್ಲ. ಸಹಾಯಕ ಸೈನ್ಯ ಪದ್ಧತಿಗೆ ರಾಜ್ಯವನ್ನು ಶರಣಾಗತಿ ಮಾಡಲಿಲ್ಲ. ಬ್ರಿಟಿಷರನ್ನು ಸೆಣಸಲಾಗದ ಹಲವು ರಾಜರುಗಳು ತನ್ನ ಅರಸೊತ್ತಿಗೆ ಉಳಿಸಿಕೊಳ್ಳಲು ತಮ್ಮ ನಾಡನ್ನೆ ಬ್ರಿಟಿಷರ ಪಾದಗಳಿಗೆ ಅರ್ಪಿಸಿದರು. ಟಿಪ್ಪುವಿನ ನಂತರ ಅರಸೊತ್ತಿಗೆ ದಯಪಾಲಿಸಿಕೊಂಡ ಮೈಸೂರು ರಾಜ್ಯದ ಸ್ಥಿತಿಯು ಇದಕ್ಕೆ ಭಿನ್ನವಾಗಿಲ್ಲ ಎನ್ನುವ ಸತ್ಯ ವೇದ್ಯವಾಗುತ್ತದೆ.

೪. ನಾಡಿನ ಸ್ವಾಭಿಮಾನಕ್ಕಾಗಿ ದಿಟ್ಟ ಧಿರೋತ್ತರ ಹೋರಾಟ ನಡೆಸಿದ ಟಿಪ್ಪುವಿನ ಜೀವನ ದೃಷ್ಟಿಯೇ ಈ ಪರಮ ಸ್ವಾರ್ಥಿ, ಅಸಮರ್ಥ ರಾಜರುಗಳಿಗಿಂತ ಭಿನ್ನವಾಗಿತ್ತು. ರಾಜ್ಯದ

ಹಿತಕ್ಕಾಗಿ ತನ್ನ ಮಕ್ಕಳನ್ನೆ ಬ್ರಿಟಿಷರಿಗೆ ಒತ್ತೆಯಿಟ್ಟ ಪ್ರಸಂಗವೇ ಇದಕ್ಕೆ ನಿದರ್ಶನ. ನರಿಯಂತೆ ನೂರುವರ್ಷ ಬಾಳುವುದಕ್ಕಿಂತ ಹುಲಿಯಂತೆ ಒಂದು ದಿನ ಬದುಕಿ ಸಾಯುವುದು ಉತ್ತಮ ಎನ್ನುವ ಜೀವನ ಮೌಲ್ಯ ಟಿಪ್ಪುವಿನದಾಗಿತ್ತು. ಎಂಥ ಕಠಿಣ ಸಂದರ್ಭದಲ್ಲಿಯೂ ಹೇಡಿಯಂತೆ ಎಲ್ಲಿಯೂ ರಾಜಿ ಮಾಡಿಕೊಳ್ಳಲಿಲ್ಲ ಎಂಬುದನ್ನು ಕಂಡುಕೊಳ್ಳಲಾಗಿದೆ.

೫. ಟಿಪ್ಪುವಿಗೆ ಮೈಸೂರು ರಾಜ್ಯವನ್ನು ಬ್ರಿಟಿಷರ ಆಕ್ರಮಣಕ್ಕೆ ಒಳಗಾಗದಂತೆ ತಡೆಯುವುದು ಒಂದು ಧ್ಯೇಯವಾದರೆ, ರಾಜ್ಯವನ್ನು ಶೀಘ್ರಗತಿಯಲ್ಲಿ ಪ್ರಗತಿಪಥದತ್ತ ಮುನ್ನಡೆಸುವ ತುಡಿತವಿತ್ತು. ಈ ದೃಷ್ಟಿಕೋನದಿಂದ ಹಲವು ಆರ್ಥಿಕ ಪ್ರಯೋಗಗಳನ್ನು ಕೈಗೊಂಡನು. ವಿದೇಶಗಳೊಂದಿಗೆ ಸಂಪರ್ಕ ಸಾಧಿಸಿದನು. ವ್ಯಾಪಾರ–ವಾಣಿಜ್ಯ, ಕೈಗಾರಿಕೆ, ಕೃಷಿ, ಕುಶಲಕಲೆ ಇತ್ಯಾದಿ ವಲಯಗಳಿಗೆ ಉತ್ತೇಜನ ನೀಡಿದನು. ಅದರಲ್ಲೂ ಫ್ರೆಂಚ್ ಮಾದರಿಯ ಆಧುನೀಕರಣಕ್ಕೆ ಒತ್ತು ನೀಡಿದನು ಎಂಬುದನ್ನು ವಿಸ್ತೃತವಾಗಿ ಕಂಡುಕೊಳ್ಳಲಾಗಿದೆ. ಫ್ರೆಂಚ್ ಮಾದರಿಯ ಆಧುನೀಕರಣವು ಟಿಪ್ಪುವಿಗೆ ವರವಾಯಿತೊ ಅಥವಾ ಶಾಪವಾಯಿತೊ ಎನ್ನುವ ವಿಚಾರವನ್ನು ಕಂಡುಕೊಳ್ಳಲಾಗಿದೆ.

೬. ಟಿಪ್ಪು ರೈತಾಪಿ ವರ್ಗದ ಬಗೆಗೆ ಅಪಾರ ಕಾಳಜಿ ತೋರಿದ. ಭೂ ಸುಧಾರಣೆಗೆ ಒತ್ತು ನೀಡಿದನು. ಅವನು ಜಾರಿಗೆ ತಂದ ಭೂ ಕಂದಾಯ ಕಾಯಿದೆ ೯೯ರ ಕಲಂ ಕೃಷಿ ಕ್ಷೇತ್ರದಲ್ಲಿ ತ್ವರಿತಗತಿಯ ಬದಲಾವಣೆಗಳನ್ನು ತಂದಿತು. ಉಳುವವನಿಗೆ ಭೂ ಒಡೆತನ ನೀಡಿದನು. ರೈತರ ರಕ್ತ ಹೀರುತ್ತಿದ್ದ ಪರಾವಲಂಬಿ ಪಾಳೆಯಗಾರರನ್ನು ನಾಶಪಡಿಸಿದನು. ರೈತರು, ವ್ಯಾಪಾರಸ್ತರು, ಕುಶಲಕರ್ಮಿಗಳು ಪಾಳೆಯಗಾರರ ಊಳಿಗಮಾನ್ಯ ಶೋಷಣೆಯಿಂದ ಮುಕ್ತರಾದರು. ಕಿಂಚಿತ್ತೂ ಶ್ರಮ ಪಡದೆ ರೈತರ ಶೋಷಣೆ ಮತ್ತು ಶ್ರಮದ ಮೇಲೆ ಬದುಕು ಸಾಗಿಸುತ್ತಿದ್ದ ಬ್ರಾಹ್ಮಣರು ಟಿಪ್ಪುವಿನ ಸುಧಾರಣಾ ಕ್ರಮಗಳಿಗೆ ನೇರವಾಗಿ ಗುರಿಯಾದರು. ದೇವಸ್ಥಾನದ ಹಿಡಿತದಲ್ಲಿದ್ದ ಭೂಮಿಯನ್ನು ಶೂದ್ರ, ರೈತಾಪಿಗಳಿಗೆ ಹಂಚಿ ಕ್ರಾಂತಿಕಾರಿ ಬದಲಾವಣೆಗೆ ಕಾರಣನಾದ. ಹೈದರ್ ಮತ್ತು ಟಿಪ್ಪುವಿನ ಪಾಳೆಯಗಾರ ವಿರೋಧಿ ಸೈನಿಕ ಕಾರ್ಯಾಚರಣೆಗಳಿಂದ ಮೈಸೂರು ಸಂಸ್ಥಾನದಲ್ಲಿ ಊಳಿಗಮಾನ್ಯ ಕುಸಿದು ಬಿದ್ದಿತು ಎನ್ನುವುದು ನಿರ್ವಿವಾದ ಸಂಗತಿಯಾಗಿದೆ.

೭. ಕೃಷಿಯ ವಾಣಿಜ್ಯೀಕರಣ, ವಾಣಿಜ್ಯಕಾಯಿದೆ, ರಫ್ತು ಉತ್ತೇಜನ, ರೇಷ್ಮೆ ಉದ್ದಿಮೆ ಸ್ಥಾಪನೆ ಇತ್ಯಾದಿ ಪ್ರಯೋಗಗಳು ಟಿಪ್ಪುವಿನ ಪ್ರಗತಿಪರ ಚಿಂತನೆಗಳನ್ನು ತಿಳಿಸುತ್ತವೆ.

೮. ಟಿಪ್ಪು ನಡೆಸಿದ ಯುದ್ಧಗಳನ್ನು ಆರ್ಥಿಕ ಚಟುವಟಿಕೆಗಳೆಂದು ಪರಿಭಾವಿಸಿ ಮೈಸೂರು ಚರಿತ್ರೆಯನ್ನು ತಿಳಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

೯. ಟಿಪ್ಪುವನ್ನು ಇದುವರೆವಿಗೂ ಕೇವಲ ಮೈಸೂರು ರಾಜ್ಯ ಮತ್ತು ರಾಜಕಾರಣದ ಸೀಮಿತ ಪರಿಧಿಗೆ ಒಳಪಡಿಸಿಯೇ ಅಧ್ಯಯನಗಳಾಗಿವೆ. ಅದರಾಚೆಗೆ ಟಿಪ್ಪುವನ್ನು ಇಡೀ ದಕ್ಷಿಣ ಭಾರತದ ರಾಜಕಾರಣದ ವ್ಯಾಪ್ತಿಗೆ ಒಳಪಡಿಸಿ ಅಧ್ಯಯನ ನಡೆಸಲಾಗಿದೆ. ಇನ್ನೂ ಹೆಚ್ಚಿನ ಅಧ್ಯಯನಗಳು ಈ ಪರಿಕಲ್ಪನೆಯಲ್ಲಿಯೇ ಆಗಬೇಕಿದೆ.

೧೦. ಟಿಪ್ಪುವಿನ ಆಳ್ವಿಕೆಯ ಚಾರಿತ್ರಿಕ ಸತ್ಯಗಳನ್ನು ಮೂಲ ದಾಖಲೆಗಳನ್ನು ಅಧ್ಯಯನ ನಡೆಸಿ ವಸ್ತುನಿಷ್ಠವಾಗಿ ಅವಲೋಕಿಸಲಾಗಿದೆ. ಚರಿತ್ರೆಯ ಸಂಗತಿಗಳನ್ನು ಮತ್ತು ವ್ಯಕ್ತಿಗಳನ್ನು ವರ್ತಮಾನದ ರಾಜಕೀಯ ಲಾಭಗಳ ಲಾಂಛನವಾಗಿ ಬಳಸುವ ಛಾಳಿ ಇತ್ತೀಚಿನದು. ಟಿಪ್ಪು ಚರಿತ್ರೆ ಇದಕ್ಕೆ ಹೊರತಾಗಿಲ್ಲ. ವರ್ತಮಾನದಲ್ಲಿ ರಾಜಕೀಯ ಪಕ್ಷಗಳು ಮತ್ತು ರಾಜಕೀಯ ನಾಯಕರು, ಧಾರ್ಮಿಕ ಮುಖಂಡರು, ಚಾರಿತ್ರಿಕ ಸಂಗತಿಗಳನ್ನು ಧರ್ಮ ಮತ್ತು ಭಾಷಿಕ ನೆಲೆಯಿಂದಲೆ ನೊಡುವ ಮತ್ತು ವ್ಯಾಖ್ಯಾನಿಸುವ ಪ್ರವೃತ್ತಿ ತೋರಿದ್ದಾರೆ. ಪ್ರಸ್ತುತ ಟಿಪ್ಪುವನ್ನು ಮತಬ್ಯಾಂಕಿನ ಸಂಕೇತವಾಗಿ ಬಳಸಲಾಗುತ್ತಿದೆ. ಟಿಪ್ಪುವಿನ ವ್ಯಕ್ತಿತ್ವವನ್ನು ಧರ್ಮ ಮತ್ತು ಭಾಷಿಕ ವಿಚಾರಗಳಿಗೆ ಎಳೆದುತಂದು ಪರ-ವಿರುದ್ಧದ ವಾದಗಳನ್ನು ಅಚಾರಿತ್ರಿಕವಾಗಿ ಮಂಡಿಸಲಾಗುತ್ತಿದೆ. ಇಂಥ ಅಬ್ಬರಗಳು ಜನತೆಯಲ್ಲಿ ಗೊಂದಲಗಳನ್ನು ಹುಟ್ಟಿಸುತ್ತವೆ. ಕೋಮು ಸಂಘರ್ಷಕ್ಕೂ ಎಡೆಮಾಡಿಕೊಟ್ಟಿದೆ ಎಂಬುದನ್ನು ಗ್ರಹಿಸಲಾಗಿದೆ. ಚಾರಿತ್ರಿಕ ಸತ್ಯಗಳನ್ನು ತಿರುಚುವುದು ಸಮಾಜದ ಅಶಾಂತಿಗೆ ಕಾರಣವಾಗುತ್ತದೆ. ಇಂಥ ಸಂದರ್ಭಗಳು ಸಮಾಜಘಾತುಕ ಶಕ್ತಿಗಳಿಗೆ ಆಸ್ತ್ರವಾಗುವುದನ್ನು ಗುರುತಿಸಲಾಗಿದೆ. ಟಿಪ್ಪುವನ್ನು ಪರ-ವಿರುದ್ಧ ವಾದಗಳ ಪೂರ್ವಗ್ರಹ ಚೌಕಟ್ಟನ್ನು ಮೀರಿ ಒಬ್ಬ ರಾಜನನ್ನಾಗಿ ನೋಡಲಾಗಿದೆ.

೧೧. ನಮ್ಮ ಇಂದಿನ ವರ್ತಮಾನಗಳ ತುರ್ತುಗಳ ಹಿನ್ನೆಲೆಯಿಂದ ಟಿಪ್ಪುವನ್ನು ನೋಡುವ ಸಂದರ್ಭದಲ್ಲಿ ಟಿಪ್ಪುವಿನ ಸಂದರ್ಭದ ವರ್ತಮಾನವನ್ನು ಅರ್ಥಮಾಡಿಕೊಂಡು ಖಚಿತ ನಿಲುವುಗಳಿಗೆ ಬರಬೇಕಾಗುತ್ತದೆ.

೧೨. ಟಿಪ್ಪು ಮತಾಂಧ ಹಾಗೂ ಕ್ರೂರಿ ಎಂಬುದಾಗಿ ಚಿತ್ರಿಸುವುದು ಸಾಮಾನ್ಯವಾಗಿ ಬಿಟ್ಟಿದೆ. ಆದರೆ ಟಿಪ್ಪು ಯಾರಿಗೆ ಕ್ರೂರಿ ಹಾಗೂ ಮತಾಂಧ ಮತ್ತು ಯಾಕೆ ಆ ಧೋರಣೆ ತಳೆದ ಎನ್ನುವುದು ಮುಖ್ಯವಾಗುತ್ತದೆ. ತನ್ನ ವಿರುದ್ಧ ಇದ್ದವರಿಗೆ ಹಾಗೂ ಅಸ್ತಿತ್ವಕ್ಕೆ ಧಕ್ಕೆ ತಂದವರನ್ನು ಮಟ್ಟ ಹಾಕಿದ ಹಾಗೂ ಕಠಿಣ ಕ್ರಮ ತೆಗೆದುಕೊಂಡನು. ಏಕೆಂದರೆ ಮಿತ್ರರೇ ಅವನ ಶತ್ರುಗಳಾಗಿದ್ದರು. ಟಿಪ್ಪು ಕ್ರಿಶ್ಚಿಯನ್ ವಿರುದ್ಧ ಎನ್ನುವ ವಾದವೂ ಅಚಾರಿತ್ರಿಕವೇ ಆಗಿದೆ. ಟಿಪ್ಪುವಿನ ಮಿತ್ರರಾದ ಡಚ್ಚರು, ಫ್ರೆಂಚರು ಹಾಗೂ ಕ್ರಿಶ್ಚಿಯನ್ನರೆ ಆಗಿದ್ದರು. ಟಿಪ್ಪು ಅವರೊಂದಿಗೆ

ಸ್ನೇಹದಿಂದಲೇ ವರ್ತಿಸಿದ. ಅಂದರೆ ಟಿಪ್ಪುವಿನ ಹೋರಾಟವಿದ್ದುದು ಧರ್ಮಕ್ಕಾಗಿಯಲ್ಲ ರಾಜ್ಯದ ವಿರುದ್ಧ ಸಂಚು ಮಾಡಿದವರನ್ನು ಶಿಕ್ಷಿಸುವುದಕ್ಕೆ ಎನ್ನುವ ತೀರ್ಮಾನಕ್ಕೆ ಬರಲಾಗಿದೆ.

೧೩. ಟಿಪ್ಪುವಿನ ಬಗೆಗೆ ಇತ್ತೀಚೆಗೆ ಬರುತ್ತಿರುವ ಹೇಳಿಕೆಗಳು, ಚಾರಿತ್ರಿಕ ರಚನೆಗಳು. ಅವು ನೈಜ ಚರಿತ್ರೆಯಲ್ಲ. ನೈಜ ಚರಿತ್ರೆ ಈ ಬಗೆಯ ಪೂರ್ವಗ್ರಹ ಪೀಡಿತ ಅಧ್ಯಯನಕಾರರಿಗೆ ಮುಖ್ಯವೆನಿಸಲಿಲ್ಲ. ಟಿಪ್ಪು ಯಾಕಾಗಿ ಫ್ರೆಂಚರ ನೆರವನ್ನು ಯಾಚಿಸಿದ ಹಾಗೂ ಅವನ ಆಳ್ವಿಕೆಯ ಸಂದರ್ಭದ ರಾಜಕೀಯ ಬಿಕ್ಕಟ್ಟು ಯಾವ ಸ್ವರೂಪದ್ದು ಎನ್ನುವ ವಿಚಾರವನ್ನು ಮಹಾಪ್ರಬಂಧದಲ್ಲಿ ಪ್ರಧಾನವಾಗಿ ಚರ್ಚಿಸಲಾಗಿದೆ.

೧೪. ಟಿಪ್ಪು ಬ್ರಿಟಿಷರನ್ನು ಹೊರಹಾಕಲು ಅವರಷ್ಟೇ ಪ್ರಬಲವಾದ ಸೇನಾ ಕೌಶಲ್ಯ ಹೊಂದಲು ತೀರ್ಮಾನಿಸಿದ. ಸೈನಿಕ ಕ್ಷೇತ್ರದಲ್ಲಿ ಹಲವು ಸುಧಾರಿತ ಕ್ರಮಗಳನ್ನು ಕೈಗೊಂಡನು. ಪಾಶ್ಚಾತ್ಯ ಮಾದರಿಯಲ್ಲೇ ಶಸ್ತ್ರಾಸ್ತ್ರ ತಯಾರಿಕೆಗೆ ಒತ್ತು ನೀಡಿದನು. ಮಿಲಿಟರಿ ಪ್ರಾಬಲ್ಯ ಹೊಂದಲು ಫ್ರಾನ್ಸಿನ ಸಂಪರ್ಕ ಸಾಧಿಸಿದನು. ನೆಪೋಲಿಯನ್ ಬೋನಾಪಾರ್ಟೆಯಂಥ ದೈತ್ಯ ನಾಯಕನೊಂದಿಗೆ ಮುಖಾಮುಖಿಯಾದನು. ಅವನಲ್ಲಿ ಸೈನಿಕ ಮತ್ತು ತಾಂತ್ರಿಕ ನೆರವು ಕೇಳಿದನು. ನೆಪೋಲಿಯನ್‌ಗೆ ಯುರೋಪಿನಲ್ಲಿ ಬ್ರಿಟನ್ ವಿರುದ್ಧವಾಗಿತ್ತು. ಟಿಪ್ಪುವಿಗೆ ನೆರವಿನ ಭರವಸೆ ನೀಡಿದರೂ ಫಲಕಾರಿಯಾಗಲಿಲ್ಲ. ಕೊನೆಗೆ ಟಿಪ್ಪು ಏಕಾಂಗಿ ಹೋರಾಟದಿಂದಲೇ ಹುತಾತ್ಮನಾದ ಸತ್ಯವನ್ನು ಕಂಡುಕೊಳ್ಳಲಾಗಿದೆ.

೧೫. ಟಿಪ್ಪು ಫ್ರೆಂಚರೊಂದಿಗಿನ ತನ್ನ ಸಂಬಂಧವನ್ನು ಗಟ್ಟಿಗೊಳಿಸಲು ತನ್ನ ರಾಯಭಾರಿಗಳನ್ನು ಫ್ರಾನ್ಸ್ ದೇಶಕ್ಕೆ ಕಳುಹಿಸಿಕೊಟ್ಟಿದಷ್ಟೆ ಅಲ್ಲದೆ ಫ್ರೆಂಚ್ ನಡೆ, ನುಡಿ, ಸಂಸ್ಕೃತಿಯನ್ನು ಬೆಂಬಲಿಸುವ ಹಾಗೂ ಅನುಸರಿಸುವ ಪ್ರಯತ್ನಕ್ಕೆ ಮುಂದಾದನು. ಈ ಪ್ರಯತ್ನಗಳನ್ನು ಆತ ಜಾಕೋಬಿನ್ ಕ್ಲಬ್‌ನ ಸದಸ್ಯನಾಗುವುದು, ರಿಪಬ್ಲಿಕನ್ ಟ್ರೀ ನೆಡುವುದು, ಪೌರ ಟಿಪ್ಪು ಎಂಬುದಾಗಿ ಫ್ರೆಂಚರಿಂದಲೇ ಕರೆಯಿಸಿಕೊಳ್ಳುವುದು ಮುಂತಾದವುಗಳಿಂದ ತಿಳಿಯ ಬಹುದು.

೧೬. ಟಿಪ್ಪು ಭಾರತದೊಳಗಿನ ಹಾಗೂ ಹೊರ ದೇಶಗಳಲ್ಲಿನ ಮುಸ್ಲಿಂ ದೊರೆಗಳ ಸೈನಿಕ ನೆರವನ್ನು ಪಡೆಯುವ ಪ್ರಯತ್ನವನ್ನು ನಡೆಸಿದನಾದರೂ, ಅದರಲ್ಲಿ ಯಶಸ್ಸನ್ನು ಪಡೆಯಲಿಲ್ಲ. ಅಂದರೆ ಟಿಪ್ಪುವಿನ ಮತೀಯ ಒಲವು ಅವನಿಗೆ ನೆರವಾಗಲಿಲ್ಲ ಎನ್ನುವುದು ಸ್ಪಷ್ಟ. ಈ ಸಂಗತಿಯೂ ಟಿಪ್ಪು ಫ್ರೆಂಚರೊಂದಿಗೆ ಮಿತ್ರತ್ವವನ್ನು ಬೆಳೆಸುವುದಕ್ಕೆ ಕಾರಣವಾಯಿತು ಎನ್ನುವ ಅಂಶವನ್ನು ಇಲ್ಲಿ ಕಂಡುಕೊಳ್ಳಲಾಗಿದೆ.

೧೭. ಬ್ರಿಟಿಷರನ್ನು ಸೋಲಿಸಲು ಟಿಪ್ಪು ಫ್ರೆಂಚರ ನೆರವನ್ನು ಯಾಚಿಸಿರುವ ಅಂಶವನ್ನು ವಿಮರ್ಶಾತ್ಮಕವಾಗಿ ಮಹಾಪ್ರಬಂಧದಲ್ಲಿ ನೋಡಲಾಗಿದೆ. ಭಾರತದ ಸಂದರ್ಭದಲ್ಲಿ ನೋಡುವಾಗ ಬ್ರಿಟಿಷರಾಗಲಿ ಅಥವಾ ಫ್ರೆಂಚರಾಗಲಿ ವಸಾಹತುಶಾಹಿ ಶಕ್ತಿಗಳೇ ಆಗಿದ್ದು, ಭಾರತದ ಹಿತವನ್ನು ಕಾಪಾಡಲು ಬಂದವರಲ್ಲ. ಹಾಗಾಗಿ ವೈಯಕ್ತಿಕವಾಗಿ ಟಿಪ್ಪುವಿಗೆ ಫ್ರೆಂಚರ ನೆರವಿನ ಅನಿವಾರ್ಯತೆ ಇತ್ತಾದರೂ, ಭಾರತಕ್ಕೆ ಫ್ರೆಂಚರ ಇರುವಿಕೆಯ ಅವಶ್ಯಕತೆ ಇರಲಿಲ್ಲ. ಈ ಅಂಶವನ್ನು ಮಹಾಪ್ರಬಂಧದಲ್ಲಿ ಕಂಡುಕೊಳ್ಳಲಾಗಿದೆ.

ಅನುಬಂಧಗಳು

೧. ಆಕರ ಗ್ರಂಥಗಳು
೨. ನಕ್ಷೆಗಳು
೩. ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು

೧. ಪ್ರಾಥಮಿಕ ಆಕರಗಳು

೧. ಇಂಡಿಯಾ ಆಫೀಸ್(ಇಂ.ಆ.) ಹಸ್ತಪ್ರತಿ ಎಥೆ ೨೯೯೦: ತಾರಿಖ್-ಇ-ಖುದಾದಾದಿ

೨. ಐ.ಓ.೨೬೨೨ ಬುಧ್‌ಸಿಂಗ್, ತ್ವಾರಿಖ್-ಎ-ನವಾಬ್ ಹೈದರ್ ಅಲಿಖಾನ್ ಬಹದೂರ್

೩. ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ್ ಲೈಬ್ರೆರಿ, ಮದರಾಸು, ಹ.ಪ್ರ.೨೮೮: ಸುಲ್ತಾನ್-ಉಲ್-ತವಾರಿಖಾ

೪. ಗವರ್ನರ್ ಜನರಲ್, ಡಂಡಾಸ್‌ಗೆ ಬರೆದದ್ದು, ೬ ಜುಲೈ ೧೭೯೮, ಅನುಬಂಧ ಇ

೫. ಜೇಮ್ಸ್ ಬೋರ್ಬೆಯರ್, ಪಾಕ್‌ಗೆ ಬರೆದದ್ದು ೨೪ ಜೂನ್ ೧೭೯೯, ಅಡಿಷನಲ್ ಮಾನಸ್ಕ್ರಿಪ್ಟ್, ಸಂ.೩೪

೬. ತಮಿಳುನಾಡು ಅರ್ಕೈವ್ಸ್(ಮದ್ರಾಸ್ ರೆಕಾರ್ಡ್ ಆಫೀಸ್)

೭. ತೆಲ್ಲಿಚೆರ್ರಿ ರಿಕಾರ್ಡ್ಸ್: ಡೈರಿ ಎಂಡ್ ಕನ್ಸಲ್ಟೇಷನ್ಸ್(೧೭೭೭-೧೭೮೨), ರೇಂಜ್ ೪೩೦, ಸಂಪುಟಗಳು ೨-೪; ರೇಂಜ್ ೪೩೧, ಸಂ.೧೨.

೮. ದಿ ರೆಕಾಡ್ ಆಫ್ ದಿ ಶೃಂಗೇರಿ ಮಠ್(ಟಿಪ್ಪು ಧಾರ್ಮಿಕ ನೀತಿ)

೯. ಪಾಂಡಿಚೇರಿ ಆರ್ಕೈವ್ಸ್ ಮ್ಯಾನ್‌ಸ್ಕ್ರಿಪ್ಟ್ಸ್

೧೦. ಪಾಂಡಿಚೇರಿ ಆರ್ಕೈವ್ಸ್ ಮ್ಯಾನ್‌ಸ್ಕ್ರಿಪ್ಟ್, ಸಂ.೪೪೨

೧೧. ಪಾಕ್‌ಗೆ ಗುಡಾಲ್ ಬರೆದದ್ದು, ೩೦ ಜೂನ್ ೧೯೯೯, ರಿಪೋರ್ಟ್ ಆನ್ ಪಾಕ್ ಮ್ಯಾನಸ್ಕ್ರಿಪ್ಟ್ ನಂ. ೭೯

೧೨. ಬ್ರೌನ್ ಎಫ್.ಸಿ., ಇಂಗ್ಲೆಂಡಿಗೆ ಬರೆದದ್ದು, ೨೩ ಜುಲೈ ೧೭೯೯ ಹೋಮ್ ಮಿಲೇನಿಯಸ್ ಸಂ.೭೬೮

೧೩. ಬೇಲೀ, ಮದರಾಸಿಗೆ ಬರೆದದ್ದು, ೬ ಸೆಪ್ಟೆಂಬರ್ ೭, ಸೆಪ್ಟೆಂಬರ್, ೧೭೮೦

೧೪. ಬೋರ್ಡ್ಸ್ ವಿನೆಟ್ಸ್ ಕನ್ಸ್, ೧೨ ಫೆಬ್ರವರಿ, ೧೭೬೫ ಸಂ.೫೨

೧೫. ಬೋರ್ಡ್ಸ್ ವಿನೆಟ್ಸ್ ಕನ್ಸ್, ೮ ಡಿಸೆಂಬರ್, ೧೭೬೬, ಸಂ.೫೭

೧೬. ಬೋರ್ಡ್ಸ್ ವಿನೆಟ್ಸ್ ಕನ್ಸ್ ೨೫ ಫೆಬ್ರವರಿ, ೧೭೬೯ ಸಂ.೬೫

೧೭. ಮಿಲಿಟರಿ ಕನ್ಸಲ್ಟೇಷನ್ಸ್(೧೭೬೦-೧೨೦೦)

೧೮. ಮದ್ರಾಸ್ ಮಿಲಿಟರಿ ಎಂಡ್ ಸೀಕ್ರೆಟ್ ಪ್ರೊಸೀಡಿಂಗ್ಸ್ ೫ ಸಂಪುಟಗಳು

೧೯. ಮಲಬಾರ್ ಕಮೀಶನರ್ಸ್ ಡೈರೀಸ್, ಸಂ.೧-೧೧

೨೦. ಮದರಾಸ್ ಮಿಲಿಟರಿ ಎಂಡ್ ಸೀಕ್ರೆಟ್ ಪ್ರೊಸೀಡಿಂಗ್ಸ್(೧೭೪೯-೧೭೭೮), ರೇಂಜ್-ಡಿ, ಸಂಪುಟಗಳು ೪೧-೪೫; ರೇಂಜ್ ೨೫೧, ಸಂಪುಟಗಳು ೪೭-೮೯.

೨೧. ಮದರಾಸ್ ಮಿಲಿಟರಿ ಎಂಡ್ ಸೀಕ್ರೆಟ್ ಪ್ರೊಸೀಡಿಂಗ್ಸ್(೧೭೫೫-೧೭೮೪), ರೇಂಜ್-ಡಿ, ಸಂಪುಟಗಳು ೪೮-೬೯; ರೇಂಜ್ ೨೫೧, ಸಂಪುಟಗಳು ೧-೪೦.

೨೨. ಮದರಾಸಿಗೆ ಹೈದರ್ ಬರೆದದ್ದು, ಜೂನ್ ೧೭೬೬, ಎಮ್‌ಎಮ್‌ಎಸ್‌ಪಿ ರೇಂಜ್, ಸಂ.೫೫

೨೩. ಮ್ಯಾಕೆ, ಆರ್ಮೆಗೆ ಬರೆದದ್ದು, ೪ ಜೂನ್ ೧೭೬೯, ಆರ್ಮೆಮ್ಯಾನ್ ಸ್ಕ್ರಿಪ್ಟ್, ಸಂ.೩೦

೨೪. ಮ್ಯಾನ್‌ಸ್ಕ್ರಿಪ್ಟ್ ಯುರೋ ಡಿ., ೨೯೫ ಪಿಕ್ಸೋಟೋ, ಹಿಸ್ಟರಿ ಆಫ್ ನವಾಬ್ ಹೈದರಾಲಿ ಖಾನ್ ಬಹದೂರ್.

೨೫. ಮ್ಯಾನುಸ್ಕ್ರಿಪ್ಟ್, ಯುರೋ, ಇ-೧ ಎ ನೆರೇಟಿವ್ ಆಫ್ ದಿ ಸೆವೆರಲ್ ಟ್ರಾನ್ಸ್ಕ್ಷನ್ಸ್ ಆಫ್ ದಿ ಫ್ರೆಂಚ್ ಇನ್ ದೇರ್ ಅಟ್ಯಾಕ್ ಅನ್ ಪೋರ್ಟ್ ಸೆಂಟ್ ಜಾರ್ಜ್, ೧೭೫೮-೫೯

೨೬. ಮಿಲಿಟರಿ ಡಿಸ್ಪಾಚಸ್ ಟು ಕೋರ್ಟ್(೧೭೬೦-೧೮೦೦)

೨೭. ಮೈಸೂರು ರಾಜರ ವಂಶಾವಳಿ, ೧೯೭೭

೨೮. ಮೈಸೂರು ಆರ್ಕಿಯಾಜಿಕಲ್ ರಿಪೋರ್ಟ್-೧೯೧೮

೨೯. ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್-೧೯೧೩-೧೪

೩೦. ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್-೧೯೧೬

೩೧. ರುಕ್ನುದ್ದೌಲ, ಮದರಾಸಿಗೆ ಬರೆದದ್ದು, ೧೪ ಮೇ, ೧೭೬೯ ಎಮ್‌ಎಮ್‌ಎಸ್ ರೇಂಜ್, ಸಂ.೬೫

೩೨. ಸೀಕ್ರೆಟ್ ಕನ್ಸಲ್ಟೇಷನ್ಸ್(೧೭೬೦–೧೮೦೦)

೩೩. ಸ್ಮಿತ್‌ಗೆ, ಜೋರ್ಜಿಯಾರ್ ಬರೆದದ್ದು, ೧ ಏಪ್ರಿಲ್ ೧೭೬೭, ಅರ್ಮೆಮ್ಯಾನ್‌ಸ್ಕಿಪ್ಟ್, ಸಂ.೬೭

೩೪. ಸ್ಮಿತ್‌ಗೆ ಆರ್ಮೆಗೆ ಬರೆದದ್ದು, ೨ ಫೆಬ್ರವರಿ ೧೭೬೯, ಆರ್ಮೆಮ್ಯಾನ್ ಸ್ಕ್ರಿಪ್ಟ್, ಸಂ.೧

೩೫. ಸಲ್ಲಿವನ್ ಮದರಾಸಿಗೆ ಬರೆದದ್ದು, ೨೯ ಏಪ್ರಿಲ್ ೧೭೮೨, ೯ ಮೇ ೧೭೮೨, ಎಮ್‌ಎಮ್‌ಎಸ್‌ಪಿ ರೇಂಜ್, ಸಂಪುಟ ೧೩

೩೬. ಸಲ್ಲಿವನ್ ಮುಂಬೈಗೆ ಬರೆದದ್ದು, ೨೨ ಮೇ ೧೭೮೨, ೧೧ ಜೂನ್, ೧೭೮೨

೩೭. ಹೈದರನು ಮದರಾಸಿಗೆ ಬರೆದದ್ದು, ೨೪ ಜುಲೈ, ೧೭೬೯

೩೮. ಹೈದರನಿಗೆ ಲ್ಯಾಲಿ ಬರೆದದ್ದು, ತಾರೀಕು ನಮೂದಿಸಿಲ್ಲ, ಆರ್ಮೆಮಾನ್‌ಸ್ಕ್ರಿಪ್ಟ್, ಸಂ.೮

೨. ಆನುಷಂಗಿಕ ಆಕರಗಳು

೧. ಅಲೆಗ್ಸಾಂಡ್ ಡಿರೋಮ್, ನರೇಟಿವ್ ಆಫ್ ದಿ ಕ್ಯಾಂಪೇನ್ಸ್ ಇನ್ ಇಂಡಿಯಾ ವಿಚ್ ಟರ್ಮಿನೇಟೆಡ್ ದಿ ವಾರ್ ವಿತ್ ಟಿಪ್ಪು ಸುಲ್ತಾನ್, ಇನ್ ಲಂಡನ್, ೧೭೯೪

೨. ಆಲ್ಬರ್ಟ್ ಸಬೂಲ್, ಅಂಡರ್ ಸ್ಟ್ಯಾಂಡಿಂಗ್ ದಿ ಫ್ರೆಂಚ್ ರೆವಲ್ಯೂಷನ್, ಪಿಪಲ್ಸ್ ಪಬ್ಲಿಕೇಶನ್ಸ್, ನ್ಯೂಡೆಲ್ಲಿ, ೧೯೮೯

೩. ಇರ್ಫಾನ್ ಹಬೀಬ್, ಸ್ಟೇಟ್ ಅಂಡ್ ಡಿಪ್ಲೊಮಸಿ ಅಂಡರ್ ಟಿಪ್ಪು ಸುಲ್ತಾನ್ ತುಲಿಕಾ, ನ್ಯೂ ಡೆಲ್ಲಿ, ೨೦೦೧

೪. ಇರ್ಫಾನ್ ಹಬೀಬ್, ಕಾನ್‌ಪ್ರಾಂಟಿಂಗ್ ಕಲೋನಿಯಲಿಸಂ–ರೆಸಿಸ್ಟೆನ್ಸ್ ಎಂಡ್ ಮಾಡ್ರನೈಜೆಷನ್ಸ್ ಅಂಡರ್ ಹೈದರಾಲಿ ಎಂಡ್ ಟಿಪ್ಪು ಸುಲ್ತಾನ್, ತುಲಿಕಾ, ನ್ಯೂಡೆಲ್ಲಿ, ೧೯೯೯

೫. ಕಿರ್ಕ್ ಪ್ಯಾಟ್ರಿಕ್, ಸಿಲೆಕ್ಟ್ ಲೆಟರ್ಸ್ ಆಫ್ ಟಿಪ್ಪು ಸುಲ್ತಾನ್, ಟು ವೇರಿಯಸ್ ಪಬ್ಲಿಕ್ ಪಂಕ್ಷನರೀಸ್, ಲಂಡನ್, ೧೮೧೧

೬. ಕರ್ನಾಟಕ ವಿಮೋಚನಾರಂಗ, ಹುತಾತ್ಮ ಟಿಪ್ಪು ಸುಲ್ತಾನ್, ೧೯೯೯

೭. ಕಾಮ್ಪನ್ ಎಚ್., ಎ ಪರ್ಟಿಕ್ಯೂಲರ್ ಅಕೌಂಟ್ ಆಫ್ ದಿ ಯುರೋಪಿಯನ್ ಮಿಲಿಟರಿ ಅಡ್ವೇನ್ಚರ್ಸ್ ಆಫ್ ದಿ ಹಿಂದೂಸ್ಥಾನ್ ಫ್ರಮ್ ೧೭೮೪–೧೮೦೩, ಲಂಡನ್, ೧೮೯೨.

೮. ಕಿರ್ಮಾನಿ, ಹಿಸ್ಟರಿ ಆಫ್ ಟಿಪ್ಪು ಸುಲ್ತಾನ್, ೧೯೫೮

೯. ಕ್ರಿಸ್ಟ್ ಜಿ., ದಿ ಮೈಸೂರಿಯನ್ ರೆವಿನ್ಯೂ ರೆಗ್ಯುಲೇಶನ್ಸ್, ಕಲ್ಕತ್ತ, ೧೭೯೨

೧೦. ಕರೀಂ ಸಿ.ಕೆ., ಕೇರಳ ಅಂಡರ್ ಹೈದರಾಲಿ ಅ್ಯಂಡ್ ಟಿಪ್ಪು ಸುಲ್ತಾನ್ ಪಬ್ಲಿಷಿಂಗ್ ಹೌಸ್, ಎರ್ನಾಕುಲಂ, ಕೊಚ್ಚಿನ್, ೧೯೭೩

೧೧. ಕೃಷ್ಣರಾವ್ ಪಿ., ಹಿಸ್ಟರಿ ಆಫ್ ಮೈಸೂರು, ಗೌರ‍್ನಮೆಂಟ್ ಪ್ರೆಸ್, ಬೆಂಗಳೂರು, ೧೯೬೮

೧೨. ಕರ್ನಾಟಕ ಥ್ರೂ ದಿ ಏಜಸ್, ದಿ ಗೌರ‍್ನಮೆಂಟ್ ಆಫ್ ಮೈಸೂರ್, ೧೯೬೮

೧೩. ಕೌಸರ್ ಕಜೀರ್, ಸೀಕ್ರೆಟ್ ಕರಸ್ಪಾಂಡೆನ್ಸ್ ಆಫ್ ಟಿಪ್ಪು ಸುಲ್ತಾನ್, ಡಿಪಾರ್ಟ್‌ಮೆಂಟ್ ಆಫ್ ಸ್ಟೇಟ್ ಆರ್ಕೈವ್ಸ್, ಬೆಂಗಳೂರು, ೧೯೯೮

೧೪. ಖಾನ್ ಎಂ.ಎಚ್., ತಾರೀಕ್-ಇ-ಹಮೀದ್‌ಖಾನಿ(ಹಿಸ್ಟರಿ ಆಫ್ ಹೈದರಾಲಿ ಅ್ಯಂಡ್ ಟಿಪ್ಪುಸುಲ್ತಾನ್) ಪ್ರೊಸಿಡಿಂಗ್ಸ್ ಆಫ್ ದಿ ಇಂಡಿಯನ್ ಹಿಸ್ಟರಿ ರೆಕಾರ್ಡ್ಸ್ ಕಮಿಷನ್, ಸಂಪುಟ ೨೩, ೧೯೪೬

೧೫. ಗ್ಲಿಗ್ ಜಿ.ಆರ್., ದಿ ಲೈಫ್ ಆಫ್ ಸರ್ ಥಾಮಸ್ ಮನ್ರೋ, ಸಂಪುಟ ೧-೨, ಲಂಡನ್, ೧೮೩೦

೧೬. ಗೋಡಾರ್ಚ್ ಇ.(ಸಂ) ಕ್ಯಾಟ್‌ಲಾಗ್ ಡೆಸಮ್ಯಾನ್ಸ್ಕ್ರಿಪ್ಟ್ ವಿನ್ಸಿಯನೆಸ್ ಆರ್ಕೈವ್ಸ್ ಪಿ ಇಂಡೆ ಪ್ರಾಂಕೇಯ್ಡ್ ಸಂಪುಟಗಳು ೮, ಪಾಂಡಿಚೇರಿ ೧೯೩೫

೧೭. ಗೋವಿಂದರಾಜು ಸಿ.ಆರ್., ಚರಿತ್ರೆ ಅಧ್ಯಯನ, ಸಂಪುಟ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೧೮. ಗುರುರಾಜ್ ಬಿ., ಟಿಪ್ಪು! ಚಾರಿತ್ರಿಕ ಕಾದಂಬರಿ, ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೦೮

೧೯. ಗೌರಿಸುಂದರ್, ಟಿಪ್ಪುಸುಲ್ತಾನ್ ಕನ್ನಡ ದ್ರೋಹಿಯೇ? ಸುಂದರ ಪ್ರಕಾಶನ, ಬೆಂಗಳೂರು, ೨೦೦೬

೨೦. ಗೋಪಾಲ್ ಆರ್., ಟಿಪ್ಪು ಸುಲ್ತಾನ್ ದಿ ಟೈಗರ್ ಆಫ್ ಮೈಸೂರ್, ಡೈರೆಕ್ಟರೇಟ್ ಆಫ್ ಆರ್ಕಿಯಾಲಜಿ ಅ್ಯಂಡ್ ಮ್ಯೂಸಿಯಂ, ಮೈಸೂರು, ೨೦೧೦

೨೧. ಗೋಪಾಲ್ ಎಂ.ಎಚ್., ಟಿಪ್ಪು ಸುಲ್ತಾನ್ ಮೈಸೂರು ಆ್ಯನ್ ಎಕಾನಮಿಕ್ ಸ್ಟಡಿ, ಪಾಪುಲರ್ ಪ್ರಕಾಶನ, ಬಾಂಬೆ, ೧೯೭೧

೨೨. ಚಿದಾನಂದಮೂರ್ತಿ ಎಂ., ಮೂಲ ದಾಖಲೆಗಳಲ್ಲಿ ಹುದುಗಿದ್ದ ಟಿಪ್ಪು, ಭಾರತ ವಿಕಾಸ ಪರಿಷತ್ತು, ಬೆಂಗಳೂರು, ೨೦೧೩

೨೩. ಚನ್ನಬಸಪ್ಪ ಕೋ., ಟಿಪ್ಪು ಸುಲ್ತಾನ್, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೩

೨೪. ಚನ್ನಬಸಪ್ಪ ಕೋ., ಅಪ್ರತಿಮ ದೇಶಭಕ್ತ ಟಿಪ್ಪು ಸುಲ್ತಾನ್, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೩

೨೫. ಚಂದ್ರಶೇಖರ್ ಎಸ್., ವಸಾಹತುಕಾಲೀನ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೨೬. ಜವಾಹರಲಾಲ್ ನೆಹರೂ, ದಿ ಡಿಸ್ಕವರಿ ಆಫ್ ಇಂಡಿಯಾ, ಅರಮನೆ ಆವೃತ್ತಿ, ಲಂಡನ್, ೧೯೫೬

೨೭. ಜಾನ್‌ವಿಲಿಯಂ ಕೇ., ಹಿಸ್ಟರಿ ಆಫ್ ದಿ ಸಿಪಾಯಿವಾರ್ ಇನ್ ಇಂಡಿಯಾ, ಸಂಪುಟ ೩

೨೮. ಜಾನ್‌ಮಾಲ್ಕೋಮ್, ದಿ ಪೊಲಿಟಿಕಲ್ ಹಿಸ್ಟರಿ ಆಫ್ ಇಂಡಿಯಾ ಸಂಪುಟ ೨, ಅನುಬಂಧ ೩

೨೯. ಟಾರೆನ್ಸ್, ಟಿಪ್ಪು ಸಾಹೇಬ್, ಲಂಡನ್, ೧೮೮೬

೩೦. ಡಪ್, ಪೊಲಿಟಿಕಲ್ ಕನ್ಸಲ್ಟೇಷನ್ಸ್, ೧೫ ಏಪ್ರಿಲ್, ೨೦ ಮೇ ೧೭೯೯, ಸಂಪುಟ ೩

೩೧. ಡಾಡ್‌ವೆಲ್ ಎಚ್(ಸಂ), ದಿ ಪ್ರವೇಟ್ ಡೈರಿ ಆಫ್ ಅನಂದರಂಗಪಿಳ್ಳೆ ಸಂ.೪-೧೨, ಮದರಾಸು ೧೯೦೪

೩೨. ಡಾಡ್ವೆಲ್ ಎಚ್.ಎಚ್., ಕೇಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ, ಸಂಪುಟ ೫, ಕೇಂಬ್ರಿಡ್ಜ್, ೧೯೨೯

೩೩. ಡೇವಿಡ್ ಸಿ.ಪಿ.(ಸಂ), ದಿ ಪ್ರೈವೇಟ್ ಕರೆಸ್ಪಾಂಡೆನ್ಸ್ ಆಫ್ ಲಾಡ್ ಮೆಕಾರ್ಟ್ನೆ(೧೭೮೧-೮೫), ಲಂಡನ್, ೧೯೫೦

೩೪. ಡೇವಿಡ್ ಥಾಮ್ಸನ್, ಯುರೋಪ್ ಸಿನ್ಸ್ ನೆಪೋಲಿಯನ್ ಪೆಲಿಕಾನ್, ೧೯೬೬

೩೫. ಡೇವಿಡ್ ಸಿ.ಪಿ.(ಸಂ) ದಿ ಪ್ರೈವೇಟ್ ಕರೆಸ್ಪಾಂಡೆನ್ಸ್ ಆಫ್ ಲಾರ್ಡ್ ಮೆಕಾರ್ಟ್ನೆ(೧೭೮೧-೮೫) ಲಂಡನ್ ೧೯೫೦

೩೬. ತಲಕಾಡು ಚಿಕ್ಕರಂಗೇಗೌಡ, ಮೈಸೂರು ಹುಲಿ ಟಿಪ್ಪು ಸುಲ್ತಾನ್ ಸಂಯುಕ್ತರಂಗ, ಬೆಂಗಳೂರು

೩೭. ತಾರಾ ಚಂದ್ ಎಸ್., ಹಿಸ್ಟರಿ ಆಫ್ ದಿ ಫ್ರೀಡಂ ಮೂವ್‌ಮೆಂಟ್ ಆಫ್ ಇಂಡಿಯಾ ನ್ಯೂಡಲ್ಲಿ, ಸಂಪುಟ ೧, ೧೯೬೫

೩೮. ತಿರುಮಲೆ ತಾತಾಚಾರ್ಯ ಶರ್ಮ, ಮೈಸೂರು ಇತಿಹಾಸದ ಹಳೆಯ ಪುಟಗಳು, ನವನೀತ ಪ್ರಕಾಶನ, ಬೆಂಗಳೂರು, ೧೯೯೬

೩೯. ಥಾರನ್‌ಟನ್ ಇ., ಎ ಹಿಸ್ಟರಿ ಆಫ್ ದಿ ಬ್ರಿಟಿಷ್ ಇನ್ ಇಂಡಿಯಾ, ಸಂಪುಟ ೨, ೩, ಲಂಡನ್, ೧೮೪೨

೪೦. ಥಾಪ್ಸನ್ ಇ. ಮತ್ತು ಗ್ಯಾರೆಟ್ ಜೆ.ಟಿ., ರೈಸ್ ಆ್ಯಂಡ್ ಫುಲ್‌ಫಿಲ್‌ಮೆಂಟ್ ಆಫ್ ಬ್ರಿಟಿಷ್ ರೂಲ್ ಇನ್ ಇಂಡಿಯಾ, ಲಂಡನ್, ೧೯೩೪

೪೧. ದಾಸಗುಪ್ತ ಎ.ಪಿ., ಸ್ಟಡೀಸ್ ಇನ್ ದಿ ಹಿಸ್ಟರಿ ಆಫ್ ಬ್ರಿಟಿಷ್ ಇನ್ ಇಂಡಿಯಾ ಕಲ್ಕತ್ತ, ೧೯೪೩

೪೨. ನಂಬಿಯಾರ್ ಓ.ಕೆ., ದಿ ಮೈಸೂರ್ ನೇವಿ, ಬೆಂಗಳೂರು ಪ್ರೆಸ್, ಬೆಂಗಳೂರು, ೧೯೪೭

೪೩. ಫ್ರಾನ್ಸಿಸ್ ಬುಕನನ್, ಎ ಜರ್ನಿ ಫ್ರಮ್ ಮದ್ರಾಸ್ ಥ್ರೂ ದಿ ಕಂಟ್ರೀಸ್ ಅಫ್ ಮೈಸೂರ್ ಕೆನರಾ ಆ್ಯಂಡ್ ಮಲಬಾರ್ ೧೮೦೦–೦೨, ಸಂಪುಟ ೧, ಲಂಡನ್, ೧೮೦೭

೪೪. ಪೂಗನೂರಿ, ಮೆಮರ್ಯ್ಸ್ ಆಫ್ ಹೈದರ್ ಆ್ಯಂಡ್ ಟಿಪ್ಪು, ಮದ್ರಾಸ್, ೧೯೪೮

೪೫. ಪ್ರತಾಪಸಿಂಹ, ಟಿಪ್ಪು ಸುಲ್ತಾನ್ ಸ್ವಾತಂತ್ರ್ಯ ವೀರನಾ?, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೨೦೧೩

೪೬. ಫಜಲುಲ್ ಹಸನ್, ಟಿಪ್ಪು ಸುಲ್ತಾನ್, ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೦೨

೪೭. ಬೌರಿಂಗ್ ಲೆವಿನ್ ಬಿ., ಹೈದರ್ ಆ್ಯಂಡ್ ಟಿಪ್ಪು ಸುಲ್ತಾನ್, ಆಕ್ಸ್‌ಫರ್ಡ್ ೧೮೯೩, ಎಸ್. ಚಾಂದ್, ದೆಹಲಿ, ೧೯೭೬

೪೮. ಬಾರ್ಕೂರು ಉದಯ, ಹೈದರಾಲಿ–ಟಿಪ್ಪು: ಇತಿಹಾಸ ಕಥನ, ಮಾನವತಾ ವೇದಿಕೆ, ಮಂಗಳೂರು, ೨೦೦೩

೪೯. ಬುರುನ್ ಡೇ., ಸಮ್ ಸೋಶಿಯೋ ಪೊಲಿಟಿಕಲ್ ಇಂಪ್ಲಿಕೇಷನ್ಸ್ ಆಫ್ ದಿ ಕೂಗ್ ನೊಮೆಂಟ್ ಟಿಪ್ಪು ಸುಲ್ತಾನ್, ಪ್ರೊಸೀಡಿಂಗ್ಸ್ ಆಫ್ ದಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ೫೨ ಸೆಶನ್ಸ್, ದೆಹಲಿ, ೧೯೯೭

೫೦. ಜೀರೇಂದ್ರವರ್ಮ, ಟಿಪ್ಪು ಸುಲ್ತಾನ್, ಎಂಬೆಸ್ಸೀಸ್ ಟು ಕಾನ್‌ಸ್ಟಾಂಟಿನೋಪಲ್ ಆ್ಯಂಡ್ ಕಾಬೂಲ್, ಜರ್ನಲ್ ಆಫ್ ಹಿಸ್ಟಾರಿಕಲ್ ರಿಸರ್ಚ್ ಸಂಪುಟ ೧೬

೫೧. ಬ್ರಿಗ್ಸ್ ಎಚ್.ಜಿ., ದಿ ನಿಜಾಂ ಡೀಫ್ ಹಿಸ್ಟರಿ ಆ್ಯಂಡ್ ರಿಲೇಶನ್ಸ್ ವಿಥ್ ದಿ ಬ್ರಿಟಿಷ್ ಗೌರ್ನ್‌ಮೆಂಟ್, ೨ ಸಂಪುಟಗಳು, ಲಂಡನ್ ೧೮೬೧

೫೨. ಬಸವರಾಜ ಮಲಶೆಟ್ಟಿ, ಸ್ವಾತಂತ್ರ್ಯ ಹೋರಾಟ ಮತ್ತು ಲಾವಣಿ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮

೫೩. ಮಲಬಾರ್ ಕಮಿಷನ್, ಫಸ್ಟ್ ಕಮಿಷನರ್ ಡೈರೀಸ್, ಸಂಪುಟ ೩

೫೪. ಮಹಮದ್, ದಿ ಹಿಸ್ಟರಿ ಆಫ್ ಹೈದರಾಲಿ ಅಂಡ್ ಟಿಪ್ಪು ಸುಲ್ತಾನ್, ಕಾಸ್ಮೋ ಪಬ್ಲಿಕೇಷನ್ಸ್, ದೆಹಲಿ, ೧೯೭೬

೫೫. ಮಹಮೂದ್‌ಖಾನ್, ತಾರೀಖ್–ಸುಲ್ತಾನತ್–ಎ–ಖುದಾದ್, ಲಾಹೋರ್, ೧೯೪೯

೫೬. ಮಾರ್ಕ್‌ವಿಲ್ಕ್ಸ್, ಹಿಸ್ಟಾರಿಕಲ್ ಸ್ಕೆಚಸ್ ಆಫ್ ದಿ ಇಂಡಿಯನ್ ಇನ್ ಆ್ಯನ್ ಅಂಟೆಮ್ಪ್ಟ್ ಟು ಟ್ರೇಸ್ ದಿ ಹಿಸ್ಟರಿ ಆಫ್ ಮೈಸೂರ್, ಸಂಪುಟ ೩, ಕಾಸ್ಮೋ ಪಬ್ಲಿಕೇಶನ್ಸ್, ನ್ಯೂ ಡೆಲ್ಲಿ, ೧೯೮೦

೫೭. ಮಾರ್ಕ್‌ವಿಲ್ಕ್ಸ್, ಹಿಸ್ಟಾರಿಕಲ್ ಸ್ಕೆಚಸ್ ಆಫ್ ಸೌತ್ ಇಂಡಿಯಾ, ಸಂಪುಟ ೧, ಮೈಸೂರು, ೧೯೩೦

೫೮. ಮಾರ್ಟಿನ್ ಆರ್.ಎಂ., ಡಿಸ್ಪಾಚಸ್, ಮಿನಿಟ್ಸ್ ಆ್ಯಂಡ್ ಕರೆಸ್ಪಾಂಡೆನ್ಸ್ ಆಫ್ ದ ಮಾರ್ಕ್ವಿಸ್ ಆಫ್ ವೆಲ್ಲಸ್ಲಿ, ಸಂಪುಟ ೧, ಲಂಡನ್, ೧೮೩೬–೩೭

೫೯. ಮುತ್ತಣ್ಣ ಐ.ಎಂ., ಟಿಪ್ಪು ಸುಲ್ತಾನ್ ಎಕ್ಸ್‌ರಾಯ್ಡ್, ಉಷಾ ಪ್ರೆಸ್, ಮೈಸೂರು, ೧೯೮೦

೬೦. ಮೆಕೆನ್ಸಿಡ್ ರೋಡ್ರಿಕ್, ಸ್ಕೆಚ್ ಆಫ್ ದಿ ವಾರ್ ವಿಥ್ ಟಿಪ್ಪು ಸುಲ್ತಾನ, ಸಂಪುಟ ೧

೬೧. ಮೈಸೂರಿಯನ್ ರೆವೆನ್ಯೂ ರೆಗುಲೇಶನ್ಸ್

೬೨. ಮೊಹಿಬುಲ್ ಹಸನ್, ಟಿಪ್ಪು ಸುಲ್ತಾನನ ಇತಿಹಾಸ(ಕನ್ನಡ ಆವೃತ್ತಿ), ಮೈಸೂರು, ೧೯೮೮

೬೩. ಮೊಹಿಬುಲ್ ಹಸನ್ ಖಾನ್, ಹಿಸ್ಟರಿ ಆಫ್ ಟಿಪ್ಪು ಸುಲ್ತಾನ್, ದಿ ಬಿಬ್ಲಿಯೊಫಿಕಲ್ ಲಿಮಿಟೆಡ್, ಕಲ್ಕತ್ತ, ೧೯೫೧

೬೪. ಮೋಹಿಬುಲ್ ಹಸನ್, ಹಿಸ್ಟರಿ ಆಫ್ ಟಿಪ್ಪು ಸುಲ್ತಾನ್, ಆಕಾರ್ ಬುಕ್ಸ್, ದೆಹಲಿ, ೧೯೫೧
೬೫. ಮೋಹನ್‌ಕೃಷ್ಣ ರೈ ಕೆ.(ಸಂ), ಚರಿತ್ರೆ ಅಧ್ಯಯನ ಸಂಪುಟ ೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭
೬೬. ಮೋಹನ್‌ಕೃಷ್ಣ ರೈ ಕೆ.(ಸಂ), ವಸಂತ ಮಾಧವ(ಲೆ), ಚರಿತ್ರೆ ಅಧ್ಯಯನ ಸಂಪುಟ ೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭
೬೭. ಮೋಹನ್‌ಕೃಷ್ಣ ರೈ ಕೆ., ಕೆನರಾದ ವಿಭಜನೆ(ಹತ್ತಿ ರಾಜಕೀಯ ವಿಶ್ಲೇಷಣೆ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦
೬೮. ಮೋಹನ್‌ಕೃಷ್ಣ ರೈ ಕೆ., ತುಳುನಾಡು ಕನ್ನಡ ನುಡಿ(ತುಳು ಕರ್ನಾಟಕದ ನಾಡು ನುಡಿ ಚಿಂತನೆ). ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨
೬೯. ರಂಗನಾಥ್ ಎಸ್.ಬಿ.(ಅನು), ಭಗವಾನ್ ಎಸ್ ಗಿದ್ವಾನಿ*ಮೂಲ), ಟಿಪ್ಪು ಸುಲ್ತಾನನ ಖಡ್ಗ, ಸಪ್ನ ಬುಕ್‌ಹೌಸ್, ಬೆಂಗಳೂರು ೨೦೧೨.
೭೦. ರೈಸ್ ಬಿ.ಎಲ್., ಎಪಿಗ್ರಾಫಿಯಾ ಕರ್ನಾಟಕ, ಶ್ರೀರಂಗಪಟ್ಟಣ, ಸಂಪುಟ ೩, ೧೮೭೬
೭೧. ರೋಡ್ರಿಕ್ ಮೆಂಕೆಜೆ, ಎ ಸ್ಕೆಚ್ ಆಫ್ ದಿ ವಾರ್ ವಿಥ್ ಟಿಪ್ಪು ಸುಲ್ತಾನ್, ಕಲ್ಕತ್ತ, ೧೭೯೩
೭೨. ಲಿಂಗದೇವರು ಹಳೆಮನೆ, ಧೀರ ಟಿಪ್ಪುವಿನ ಲಾವಣಿಗಳು, ವಿಸ್ಮಯ ಪ್ರಕಾಶನ, ಮೈಸೂರು, ೨೦೦೯
೭೩. ವಿಜಯ್ ಪೂಣಚ್ಚ ತಂಬಂಡ, ಚರಿತ್ರೆ ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦
೭೪. ವಿಲಿಯಂ ಇರ್ವಿನ್, ದಿ ಆರ್ಮಿ ಆಫ್ ದಿ ಇಂಡಿಯನ್ ಮೊಗಲ್ಸ್, ಲಂಡನ್, ೧೯೦೩
೭೫. ಶರ್ಮ ಎಚ್.ಡಿ., ಟಿಪ್ಪು ನಿಜ ಸ್ವರೂಪ, ಸಾಹಿತ್ಯ ಸಿಂಧೂ ಪ್ರಕಾಶನ, ಬೆಂಗಳೂರು, ೨೦೧೨
೭೬. ಶಿವರಾಮಯ್ಯ, ಟಿಪ್ಪುಸುಲ್ತಾನ್, ಧಾತ್ರಿ ಪ್ರಕಾಶನ, ಬೆಂಗಳೂರು, ೨೦೧೧
೭೭. ಶಿವಗಜ್ರಾನಿ ಮತ್ತು ರಾಮ್ ಎಸ್., ಟಿಪ್ಪುಸುಲ್ತಾನ, ೧೭೫೦-೧೭೯೯, ಕಾಮನ್‌ವೆಲ್ತ್ ಪಬ್ಲಿಷರ್ಸ್, ಪ್ರೈ.ಲಿ. ನವದೆಹಲಿ, ೨೦೧೧
೭೮. ಶ್ರೀಕಂಠ ಕೂಡಿಗೆ, ಕನ್ನಡ ಲಾವಣಿ ಸಾಹಿತ್ಯ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೯

೭೯. ಷೇಕ್ ಅಲಿ ಬಿ., ಟಿಪ್ಪು ಸುಲ್ತಾನ್, ನ್ಯಾಷನಲ್ ಬುಕ್ ಹೌಸ್ ಟ್ರಸ್ಟ್ ಆಫ್ ಇಂಡಿಯಾ, ನವದೆಹಲಿ, ೧೯೭೯

೮೦. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ, ಸಂಪುಟ ೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೧೯೯೭

೮೧. ಷೇಕ್ ಅಲಿ ಬಿ., ಟಿಪ್ಪು ಸುಲ್ತಾನ್ ಎ ಗ್ರೇಟ್ ಮಾರ್ಟಿಯರ್, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೯೩

೮೨. ಷೇಕ್ ಅಲಿ ಬಿ., ಬ್ರಿಟಿಷ್ ರಿಲೇಶನ್ ವಿಥ್ ಹೈದರ್ ಅಲಿ ೧೭೬೦–೮೨, ರಾವ್ ಆ್ಯಂಡ್ ರಾಘವನ್, ಮೈಸೂರು, ೧೯೬೩

೮೩. ಸಾಲ್ಮಂಡ್ ಜೆ., ರಿವ್ಯೂ ಆಫ್ ದಿ ಆರಿಜನ್ ಪ್ರೋಗ್ರೆಸ್ ಆ್ಯಂಡ್ ರಿಸಲ್ಟ್ ಆಫ್ ದಿ ಡಿಸಿಸಿಲ್ ವಾರ್ ವಿಥ್ ಟಿಪ್ಪು, ಲಂಡನ್, ೧೮೦೦

೮೪. ಸುರೇಂದ್ರನಾಥ್ ಸೇನ್, ಸ್ಟಡೀಸ್ ಇನ್ ಇಂಡಿಯನ್ ಹಿಸ್ಟರಿ, ಕಲ್ಕತ್ತ, ೧೯೩೦

೮೫. ಸಿಲ್ವಾ ಎಸ್., ಹಿಸ್ಟರಿ ಆಫ್ ಕ್ರಿಶ್ಚಿಯಾನಿಟಿ ಇನ್ ಕೆನರಾ, ಕಾರವಾರ, ಸಂಪುಟ ೧, ೧೯೫೮

೮೬. ಸ್ಟೀಫನ್ ಜೆ ಲೀ., ಆ್ಯಸ್ಪೆಕ್ಟ್ಸ್ ಆಫ್ ಯುರೋಪಿಯನ್ ಹಿಸ್ಟರಿ ೧೪೯೪–೧೭೮೯, ರೂಟ್ಲೆಜ್ ಪ್ರೆಸ್, ನ್ಯೂಯಾರ್ಕ್, ೧೭೮೨

೮೭. ಸುಧಾಕರ್, ಕರ್ನಾಟಕ ಇತಿಹಾಸ ಸಮೀಕ್ಷೆ, ಪ್ರಜ್ವಲ ಪ್ರಕಾಶನ, ಬೆಂಗಳೂರು, ೨೦೦೮

೮೮. ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ಥರ್ಟಿಯತ್ ಆನ್ಯೂಯಲ್ ಸೆಶನ್, ಪ್ರೊಸಿಡಿಂಗ್ಸ್ ರಜತ್ ಪ್ರೆಸ್, ಕನೂರ್, ಮಧುರೈ, ೨೦೧೦

೮೯. ಹಯವದನರಾವ್ ಸಿ., ಹಿಸ್ಟರಿ ಆಫ್ ಮೈಸೂರ್, ಸಂಪುಟ ೩, ಸರ್ಕಾರಿ ಮುದ್ರಣಾಲಯ, ಬೆಂಗಳೂರು, ೧೯೪೬.

೯೦. ಹತಲ್‌ಕರ್ ವಿ.ಜಿ., ರಿಲೇಷನ್ಸ್ ಬಿಟ್ವೀನ್ ದಿ ಫ್ರೆಂಚ್ ಎಂಡ್ ಮರಾಠಾಸ್, ಬಾಂಬೆ, ೧೯೫೮

೯೧. ಹಿಸ್ಟಾರಿಕಲ್ ರೆಕಾರ್ಡ್ಸ್ ಆಫ್ ದಿ ಹಾನರೇಬಲ್ ಈಸ್ಟ್ ಇಂಡಿಯಾ ಕಂಪನಿ ಆಫ್ ದಿ ಮದರಾಸ್, ಯುರೋಪಿಯನ್ ರೆಜಿಮೆಂಟ್ ಬೈ ಎ ಸ್ಟಾಫ್ ಅಫೀಸರ್, ಲಂಡನ್, ೧೮೪೩

೯೨. ಹುಸೇನ್ ಆಲಿಖಾನ್ ಕಿರ್ಮಾನಿ, ಹಿಸ್ಟರಿ ಆಫ್ ದಿ ರಿಜನ್ ಆಫ್ ಟಿಪ್ಪು ಸುಲ್ತಾನ್, ಲಂಡನ್, ೧೮೪೪

೯೩. ಹುಸೇನ್ ಆಲಿಖಾನ್ ಕಿರ್ಮಾನಿ, ಹಿಸ್ಟರಿ ಆಫ್ ಟಿಪ್ಪು ಸುಲ್ತಾನ್, ಏಷಿಯನ್ ಎಜುಕೇಷನಲ್ ಸರ್ವೀಸ್, ನ್ಯೂಡೆಲ್ಲಿ, ಮದ್ರಾಸ್, ೧೯೯೭

೯೪. ಹೆಂಡರ್‌ಸನ್ ಆರ್., ದಿ ಕಾಯಿನ್ಸ್ ಆಫ್ ಹೈದರ್ ಅಲಿ ಎಂಡ್ ಟಿಪ್ಪು ಸುಲ್ತಾನ್ ಮದರಾಸು, ೧೯೨೧

೩. ಗ್ಯಾಸೆಟಿಯರಗಳು

೧. ಎಡ್ವರ್ಡ್ ಥಾಮ್‌ಸನ್, ಎ ಗೆಜೆಟಿಯರ್ ಆಫ್ ದಿ ಟೆರಿಟೋರಿಸ್ ಆ್ಯಂಡರ್ ದಿ ಗೌರ್ನಮೆಂಟ್ ಆಫ್ ಈಸ್ಟ್ ಇಂಡಿಯಾ ಕಂಪನಿ ಆ್ಯಂಡ್ ದಿ ನೇಟಿವ್ ಸ್ಟೇಟಸ್ ಕನ್‌ಟೆಂಟ್ ಆಫ್ ಇಂಡಿಯಾ, ಅಲನ್ ಆ್ಯಂಡ್ ಕೋ, ಲಂಡನ್, ೧೮೫೮

೨. ಫ್ರಾನ್ಸಿಸ್ ಡಬ್ಲ್ಯೂ, ಗ್ಯಾಸೆಟಿಯರ್ ಆಫ್ ಸೌತ್ ಇಂಡಿಯಾ, ಎರಡು ಸಂಪುಟಗಳು, ಮಿತ್ತಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, ೧೯೮೯

೩. ಮ್ಯಾಕ್‌ಲೆನ್ ಸಿ.ಡಿ.(ಸಂ), ಮ್ಯಾನುಯಲ್ ಆಫ್ ದಿ ಆಡ್ಮಿನಿಸ್ಟ್ರೇಶನ್ ಆಫ್ ದಿ ಮದ್ರಾಸ್, ಪಾಂಡಿಚೇರಿ, ಸಂಪುಟ ೩, ಏಷ್ಯನ್ ಎಜುಕೇಶನಲ್ ಸರ್ವೀಸಸ್, ನ್ಯೂಡೆಲ್ಲಿ, ೧೯೮೭

೪. ವಿಲಿಯಂ ಲೋಗಾನ್, ಮಲಬಾರ್, ಎರಡು ಸಂಪುಟಗಳು, ಚರಿತ್ರಂ ಪಬ್ಲಿಕೇಷನ್ಸ್, ತಿರುವನಂತಪುರಮ್, ೧೯೮೧

೫. ರೈಸ್ ಬಿ.ಎಲ್., ಮೈಸೂರ್ ಗ್ಯಾಸೆಟಿಯರ್, ಏಷ್ಯನ್ ಪಬ್ಲಿಕೇಷನ್ಸ್ ಸರ್ವೀಸಸ್, ನ್ಯೂಡೆಲ್ಲಿ, ೨೦೦೧

೬. ರಿಕ್ತರ್ ಜಿ., ಮ್ಯಾನುಯಲ್ ಆಫ್ ಕೂರ್ಗ್, ಬ್ಯಾಸೆಲ್ ಮಿಷನ್, ಬುಕ್ ಡಿಪೋ, ಮಂಗಳೂರು, ೧೮೭೦

೭. ಹಯವದನರಾವ್ ಸಿ., ಮೈಸೂರ್ ಗ್ಯಾಸೆಟಿಯರ್, ಐದು ಸಂಪುಟಗಳು, ಗೌರ್ನಮೆಂಟ್ ಪ್ರೆಸ್, ಬೆಂಗಳೂರು, ೧೯೩೦

೮. ಉಷಾ ಜೈನ್(ಸಂ), ಇಂಪೀರಿಯಲ್ ಗ್ಯಾಸೆಟಿಯರ್ ಆಫ್ ಇಂಡಿಯಾ, ಮೈಸೂರು ಆ್ಯಂಡ್ ಕೂರ್ಗ್, ಉಷಾ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, ೧೯೮೫

೪. ಪಿಎಚ್.ಡಿ.ಮಹಾಪ್ರಬಂಧಗಳು

೧. ಅಚ್ಯುತ ರಾವ್ ಡಿ. ಎಸ್., ಅಡ್‌ಮಿನಿಸ್ಟ್ರೇಟಿವ್ ಆ್ಯಂಡ್ ಸೋಷಿಯಲ್ ಹಿಸ್ಟರಿ ಆಫ್ ಮೈಸೂರು ಅಂಡರ್ ದಿ ಒಡೆಯರ್ಸ್ (೧೬೦೦–೧೮೦೦), ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು, ೧೯೬೪

೨. ಕೇಶವಮೂರ್ತಿ ಸಿ., ಸೌತ್ ಇಂಡಿಯಾ ಆ್ಯಂಡ್ ದಿ ಪರ್ಶಿಯನ್ ಗಲ್ಫ್ ಡ್ಯೂರಿಂಗ್ ದಿ ಎಂಟೀನ್ತ್ ಸೆಂಚುರಿ ವಿಥ್ ರೆಫರೆನ್ಸ್ ಟು ಹೈದರ್ ಅಲಿ ಆ್ಯಂಡ್ ಟಿಪ್ಪು ಸುಲ್ತಾನ್ ಎ ಸ್ಟಡಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೧

೩. ಗುರುಸಿದ್ದಯ್ಯ ಸಿ., ಸೌತ್ ಇಂಡಿಯಾ ಆಂಡ್ ದಿ ಪರ್ಷಿಯನ್ ಗಲ್ಫ್ ಡ್ಯೂರಿಂಗ್ ದಿ ಎಯಿಂಟೀನ್ತ್ ಸೆಂಚುರಿ ವಿತ್ ರೆಫರೆನ್ಸ್ ಟು ಹೈದರ್ ಅಲಿ ಆಂಡ್ ಟಿಪ್ಪು ಸುಲ್ತಾನ್ ಎ ಸ್ಟಡಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೧

೪. ಮೀರಾ ಸೆಬಾಸ್ಟಿಯನ್, ಬ್ರಿಟಿಷ್ ಕಲೋನಿಯಲ್ ಪಾಲಿಸೀಸ್ ಇನ್ ಪ್ರಿನ್ಸ್ಲಿ ಮೈಸೂರ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೨

೫. ಮಾಸ್ಕರೇನಸ್ ವಿಲಿಯಂ, ಹೈದರಾಲಿ ಆ್ಯಂಡ್ ಟಿಪ್ಪು ಸುಲ್ತಾನ್ ಇನ್ ಕೆನರಾ(ಅಪ್ರಕಟಿತ ಮಹಾಪ್ರಬಂಧ) ಸೈಂಟ್ ಜೇವಿಯರ್ಸ್ ಸಂಸ್ಥೆ, ಮುಂಬೈ, ೧೯೩೧

೬. ಮುಜೀದ್ ಖಾನ್ ಎಸ್., ಆ್ಯನ್ ಆಡ್ಮಿನಿಸ್ಟೇಟಿವ್ ಹಿಸ್ಟರಿ ಆಫ್ ಮೈಸೂರ್ ಅಂಡರ್ ಹೈದರಾಲಿ ಆ್ಯಂಡ್ ಟಿಪ್ಪು ಸುಲ್ತಾನ್ ಫ್ರಂ ೧೭೬೧ ಟು ೧೭೯೯ ಎ.ಡಿ.(ವಿತ್ ಸ್ಪೇಷಲ್ ಎಂಪಾಸಿಸ್ ಆ್ಯನ್ ಮಿಲಿಟರಿ ಅಡ್ಮಿನಿಸ್ಟ್ರೇಷನ್ಸ್), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೭

೭. ಮೋಹನ್‌ಕೃಷ್ಣ ರೈ ಕೆ., ಅರ್ಬನೈಜೇಶನ್ ಆಫ್ ಮಂಗಳೂರ್: ಎ ಕಲೋನ್ಯಲ್ ಎಕ್ಸ್‌ಪೀರಿಯನ್ಸ್(೧೭೯೯–೧೯೪೭), ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ೨೦೦೩

೮. ರಮೇಶ ವಿ.ಎಂ., ಟ್ರೇಡ್ ಆ್ಯಂಡ್ ಅರ್ಬನೈಜೇಷನ್ ಇನ್ ಮೈಸೂರು(೧೬೭೩–೧೭೯೯ ಎ ಡಿ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೭

೯. ಶ್ಯಾಮ ಎನ್. ಭಟ್, ಸೌತ್ ಕರ್ನಾಟಕ ೧೭೯೯–೧೮೬೦ ಎ ಸ್ಟಡಿ ಇನ್ ಕಲೋನ್ಯುಯಲ್ ಅಡ್ಮಿನಿಸ್ಟ್ರೇಷನ್ ಆ್ಯಂಡ್ ರೀಜನಲ್ ರೆಸ್ಪಾನ್ಸ್, ಮಿತ್ತಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, ೧೯೯೮

೫. ಪ್ರೊಸಿಡಿಂಗ್ಸ್

೧. ಇಂಡಿಯನ್ ಹಿಸ್ಟರಿ ಕಾಂಗ್ರೆಸ್

೨. ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್

೩. ಕರ್ನಾಟಕ ಹಿಸ್ಟರಿ ಕಾಂಗ್ರೆಸ್

೪. ಕರ್ನಾಟಕ ಇತಿಹಾಸ ಅಕಾದೆಮಿ

೬. ಪತ್ರಿಕೆಗಳು

ಪ್ರಜಾವಾಣಿ

ಕನ್ನಡಪ್ರಭ

ವಿಜಯ ಕರ್ನಾಟಕ

ವಿಜಯವಾಣಿ

ಸಂಯುಕ್ತ ಕರ್ನಾಟಕ

ದಿ ಹಿಂದೂ

ಡೆಕ್ಕನ್ ಹೆರಾಲ್ಡ್

ವಾರಪತ್ರಿಕೆಗಳು

ಲಂಕೇಶ

ಅಗ್ನಿ

ಶೂದ್ರ

ಮಾಸಿಕ ಪತ್ರಿಕೆಗಳು

ಪ್ರಜಾಮತ

ಕರ್ಮವೀರ

ಸುಧಾ

ಹೊಸತು

ವಾರ್ತಾಭಾರತಿ ಮಂಗಳೂರು

ಪ್ರಬುದ್ಧ ಕರ್ನಾಟಕ

ಮಂಗಳೂರು ಸಮಾಚಾರ

ನಿಯತಕಾಲಿಕೆಗಳು

ಸಂಕ್ರಮಣ

ಸಾಧನೆ


ಚರಿತ್ರೆ ಅಧ್ಯಯನ

ಇತಿಹಾಸ ದರ್ಪಣ


ಜರ್ನಲ್ ಆಫ್ ಹಿಸ್ಟಾರಿಕ್ ರಿಸರ್ಚ್

ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ


ನಕ್ಷೆಗಳು



ಕೃಪೆ: ಕರ್ನಾಟಕ ಚರಿತ್ರೆ ಸಂಪುಟ ೫



ಕೃಪೆ: ಕರ್ನಾಟಕ ಚರಿತ್ರೆ ಸಂಪುಟ ೫



ಕೃಪೆ: ಕರ್ನಾಟಕ ಚರಿತ್ರೆ ಸಂಪುಟ ೫



ಟಿಪ್ಪುವಿನ ರಾಜಧಾನಿ ಶ್ರೀರಂಗಪಟ್ಟಣದ ರೇಖಾಚಿತ್ರ

ಛಾಯಾಚಿತ್ರಗಳು



ಟಿಪ್ಪು ಸುಲ್ತಾನ್

ಟಿಪ್ಪು ಹುಟ್ಟಿದ ಸ್ಥಳ,
ದೇವನಹಳ್ಳಿ



ದರಿಯದೌಲತ್, ಶ್ರೀರಂಗಪಟ್ಟಣದ
ಅರಮನೆ





ಬೇಸಿಗೆ ಅರಮನೆ,
ಬೆಂಗಳೂರು



ಬೆಂಗಳೂರು
ಕೋಟೆ



ಬೆಂಗಳೂರು
ಅರಮನೆಯ
ಒಳನೋಟ



ಫಲಕಾಡು ಕೋಟೆ, ಕೇರಳ



ನಂದಿದುರ್ಗ ಕೋಟೆ, ನಂದಿಬೆಟ್ಟ



ಗಜಶಾಲೆ, ಶ್ರೀರಂಗಪಟ್ಟಣ



ಧ್ವಜಸ್ತಂಭ,
ಶ್ರೀರಂಗಪಟ್ಟಣ



ಜುಮ್ಮಾಮಸೀದಿ,
ಶ್ರೀರಂಗಪಟ್ಟಣ



ಹೈದರ್ ಟಿಪ್ಪುವಿನ
ಸಮಾಧಿ ಸ್ಥಳ,
ಶ್ರೀರಂಗಪಟ್ಟಣ



ಟಿಪ್ಪುವಿನ ಕಾಲದ ಮಂಜಿರಬಾದ್ ಕೋಟೆ, ಸಕಲೇಶಪುರ



ಕಬ್ಬಾಳದುರ್ಗ ಬೆಟ್ಟದಿಂದ-ಶ್ರೀರಂಗಪಟ್ಟಣಕ್ಕೆ ಸುರಂಗಮಾರ್ಗ



ಕಬ್ಬಾಳದುರ್ಗ ಬೆಟ್ಟದಲ್ಲಿರುವ ಶಸ್ತ್ರಾಸ್ತ್ರಗಳನ್ನಿಡುವ ಉಗ್ರಾಣ



ಬ್ರಿಟಿಷ್ ಕೈದಿಗಳನ್ನು ಬಂಧನದಲ್ಲಿಡುತ್ತಿದ್ದ
ಬಂಧಿಖಾನೆ, ಬೆಂಗಳೂರು

ಮಂಜೇರಬಾದ್
ಕೋಟೆ,
ಸಕಲೇಶಪುರ





ರಾಕೆಟ್ ಉಡಾವಣ
ಸ್ಥಳ, ಶ್ರೀರಂಗಪಟ್ಟಣ



ಪಲ್ಲಲೂರು ಕದನ



ಆಂಗ್ಲೋ ಮೈಸೂರು
ಯುದ್ಧದಲ್ಲಿ ಟಿಪ್ಪು ಮತ್ತು
ಅವನ ಸೈನಿಕರು



ನಾಲ್ಕನೇ ಆಂಗ್ಲೋ
ಮೈಸೂರು ಯುದ್ಧದಲ್ಲಿ ಟಿಪ್ಪು



ಫಿರಂಗಿ



ಟಿಪ್ಪು ಮಡಿದ ಸ್ಥಳ,
ಶ್ರೀರಂಗಪಟ್ಟಣ



ಸುಲ್ತಾನ್ ಬತ್ತೇರಿ, ಮಂಗಳೂರು



ಟಿಪ್ಪುವಿನ ಇಬ್ಬರು ಮಕ್ಕಳನ್ನು ಬ್ರಿಟಿಷರಿಗೆ ಒತ್ತೆಯಿಟ್ಟಿರುವ ದೃಶ್ಯ



ಟಿಪ್ಪುವಿನ ನಾಣ್ಯಗಳು



ಟಿಪ್ಪುವಿನ ನಾಣ್ಯಗಳು



ಟಿಪ್ಪುವಿನ ಕೋಟೆ ಪಲಕ್ಕಾಡು, ಕೇರಳ



ಟಿಪ್ಪುವಿನ ಅರಮನೆ, ಬೆಂಗಳೂರು



ಟಿಪ್ಪುವಿನ ಬಂದೂಕು



ಟಿಪ್ಪುವಿನ ಯುದ್ಧಾಸ್ತ್ರಗಳು



ನೆಪೋಲಿಯನ್ ಬೋನಾಪಾರ್ಟೆ



ಜಾಕೋಬಿನ್ ಲಾಂಛನ



ಫ್ರೆಂಚ್ ಜಾಕೋಬಿನ್ ಕ್ಲಬ್

ಚರಿತ್ರೆ ವಿಭಾಗ